ಕನಕದಾಸ ಅಧ್ಯಯನ ಕೇಂದ್ರ ಸಾಹಿತ್ಯ ಸರಣಿ-೧೧
ಪ್ರಧಾನ ಸಂಪಾದಕ: ಕಾ ತ ಚಿಕ್ಕಣ್ಣ

# ಬಯಲು ಆಲಯದೊಳಗೊ

(ಪ್ರಬಂಧಗಳ ಸಂಕಲನ)



ಸಂಪಾದಕರು
ಡಾ. ರಾಜಶೇಖರ ಮಠಪತಿ (ರಾಗಂ)

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ
ಬೆಂಗಳೂರು

ಕನಕದಾಸ ಅಧ್ಯಯನ ಕೇಂದ್ರ ಸಾಹಿತ್ಯ ಸರಣಿ–೧೧
ಪ್ರಧಾನ ಸಂಪಾದಕ: ಕಾ ತ ಚಿಕ್ಕಣ್ಣ

# ಬಯಲು ಆಲಯದೊಳಗೊ

## ಪ್ರಬಂಧಗಳ ಸಂಕಲನ

ಸಂಪಾದಕ
ಡಾ. ರಾಜಶೇಖರ ಮಠಪತಿ (ರಾಗಂ)

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ
ಬೆಂಗಳೂರು

# ಬಯಲು ಆಲಯದೊಳಗೊ

# BAYALU ALAYADOLAGO


| | | |
|---|---|---|
| ಸಂಪಾದಕರು | : | ಡಾ. ರಾಜಶೇಖರ ಮಠಪತಿ (ರಾಗಂ)<br>ಮೊ:. 9242121461 |
| ಪ್ರಧಾನ ಸಂಪಾದಕರು | : | ಕಾ ತ ಚಿಕ್ಕಣ್ಣ |
| ಪ್ರಕಾಶಕರು | : | ವಿ ಎನ್ ಮಲ್ಲಿಕಾರ್ಜುನ ಸ್ವಾಮಿ<br>ಸದಸ್ಯ-ಕಾರ್ಯದರ್ಶಿ |
| ಮೊದಲ ಮುದ್ರಣ | : | 2016 |
| ಪುಟಗಳು | : | 308 |
| ಪ್ರತಿಗಳು | : | 500 |
| ಈ ಆವೃತ್ತಿಯ ಹಕ್ಕುಗಳು | : | ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು |
| ಆಕಾರ | : | 1/8 ಡೆಮ್ಮಿ |
| ಬೆಲೆ | : | ರೂ. 80/- |
| ಒಳಪುಟ ಕಾಗದ | : | 70 ಜಿ.ಎಸ್.ಎಂ. ಎನ್.ಎಸ್.ಮ್ಯಾಪ್ಲಿತೊ |
| ರಕ್ಷಾಪುಟದ ಕಲಾವಿದರು | : | ಮಲ್ಲಿಕಾರ್ಜುನ |
| ಪ್ರಕಾಶಕರು | : | ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು<br>ಸಂಶೋಧನಾ ಕೇಂದ್ರ, ಕನ್ನಡ ಭವನ ಜೆ.ಸಿ. ರಸ್ತೆ ಬೆಂಗಳೂರು<br>ದೂ: 080-22113147<br>Web-Site : www.saintpoetkanaka.in<br>Email:kanakaresearchcentre@gmail.com |
| ಮುದ್ರಕರು | : | ಸಿರಿವರ ಪ್ರಕಾಶನ<br>ಎಂ. 37/ಬಿ, 8ನೇ ಅಡ್ಡರಸ್ತೆ, ಲಕ್ಷ್ಮಿನಾರಾಯಣಪುರ,<br>ಬೆಂಗಳೂರು -560 023<br>ಮೊ: 9844101906 |

## ಅಧ್ಯಕ್ಷರ ನುಡಿ

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು ಕನಕದಾಸರ ಜೀವನ ದರ್ಶನ ಮತ್ತು ಅವರ ಕಾವ್ಯ-ಕೀರ್ತನೆಗಳ ಕುರಿತು ಅಧ್ಯಯನ, ಸಂಶೋಧನೆ, ಪ್ರಕಟಣೆ ಮತ್ತು ಪ್ರಸಾರ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ. ಈ ಬಗೆಯ ಕಾರ್ಯಾಧ್ಯಯನಗಳಿಗೆ ಯುವ ಸಮುದಾಯವನ್ನು ತೊಡಗಿಸಿಕೊಳ್ಳುವುದು ಇದರ ಆಶಯವಾಗಿದೆ. ಈ ನೆಲೆಯಲ್ಲಿ ಹೊಸ ಹೊಸ ದೃಷ್ಟಿಕೋನದಿಂದ ಅಧ್ಯಯನಶೀಲ ವಿದ್ವಾಂಸ, ಸಂಶೋಧನಾರ್ಥಿಗಳಿಗೆ ಫೆಲೋಶಿಪ್ ನೀಡಿಕೆ, ಅಧ್ಯಯನಗಳಿಗೆ ಅನುದಾನ, ರಾಜ್ಯ-ರಾಷ್ಟ್ರಮಟ್ಟದಲ್ಲಿ ವಿಚಾರ ಸಂಕಿರಣ-ಸಂವಾದಗೋಷ್ಠಿಗಳ ಏರ್ಪಾಟು, ವಿವಿಧ ಮಾಧ್ಯಮಗಳಲ್ಲಿ ಕನಕದಾಸರ ತತ್ವಾದರ್ಶಗಳ ಪ್ರದರ್ಶನ-ಪ್ರಸಾರ ಕಾರ್ಯ, ವಿವಿಧ ಭಾಷೆಗಳಿಗೆ ಕನಕದಾಸರ ಸಮಗ್ರ ಸಾಹಿತ್ಯ ಅನುವಾದ, ತೌಲನಿಕ ಅಧ್ಯಯನದ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳು, ಕರ್ನಾಟಕ ತತ್ವಪದಕಾರರ ಸಮಗ್ರ ಸಾಹಿತ್ಯ ಪ್ರಕಟಣೆ, ಯುವ ಜನ-ವಿದ್ಯಾರ್ಥಿ ಸಮುದಾಯಕ್ಕಾಗಿ ಕನಕ ಸಂಸ್ಕೃತಿ ಕಮ್ಮಟ-ರಸಗ್ರಹಣ ಶಿಬಿರಗಳ ಸಂಘಟನೆ, ವಿಚಾರ ಸಂಕಿರಣಗಳು, ಹಿರಿಯ ಹಾಗೂ ಯುವ ವಿದ್ವಾಂಸರಿಗೆ ಪುರಸ್ಕಾರ ಮುಂತಾದ ಹಲವಾರು ರಚನಾತ್ಮಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೊಳಿಸುತ್ತಿದೆ.

ಸಂತಕವಿ ಕನಕದಾಸ ಅಧ್ಯಯನ ಕೇಂದ್ರವು ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಆಯೋಜಿಸಿದ್ದ ಬಯಲು ಆಲಯದೊಳಗೊ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧಗಳು ಹಾಗೂ ಈ ಪ್ರಬಂಧಗಳಿಗೆ ನೀಡಲಾದ ಪ್ರತಿಕ್ರಿಯೆಗಳನ್ನು ವಿದ್ವಾಂಸರಾದ ಡಾ. ರಾಜಶೇಖರ ಮಠಪತಿ ಅವರು ಸಂಕಲಿಸಿ ಕೊಟ್ಟಿರುತ್ತಾರೆ. ಈ ಪ್ರಬಂಧ ಸಂಕಲನ ಕನಕ ಸಾಹಿತ್ಯವನ್ನು ವಿಭಿನ್ನ ನೆಲೆಯಲ್ಲಿ ಅರ್ಥೈಸುವಲ್ಲಿ ಹಾಗೂ ಕನಕ

ಸಾಹಿತ್ಯವನ್ನು ಹೊಸ ರೀತಿಯಲ್ಲಿ ಆಲೋಚಿಸಲು ಪ್ರೇರಣೆ ನೀಡುತ್ತದೆಂದು ನಂಬಲಾಗಿದೆ. ಹಾಗಾಗಿ ಈ ಕೃತಿಯ ಸಂಪಾದಕರಿಗೆ, ವಿಷಯಗಳನ್ನು ಮಂಡಿಸಿ ಹಾಗೂ ಪ್ರತಿಕ್ರಿಯೆಗಳನ್ನು ನೀಡಿ ಸಂವಾದದಲ್ಲಿ ಭಾಗವಹಿಸಿದ ವಿದ್ವಾಂಸರುಗಳು, ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲರು, ಡಾ. ಮೇಟಿಮಲ್ಲಿಕಾರ್ಜುನ ಅವರಿಗೆ ಹಾಗೂ ಸಕ್ರಿಯವಾಗಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಹಾಗೂ ಮುಖಪುಟ ರಚಿಸಿಕೊಟ್ಟ ಶ್ರೀ ಮಲ್ಲಿಕಾರ್ಜುನ ಅವರಿಗೆ, ಮುದ್ರಕರಾದ ಸಿರಿವರ ಪ್ರಕಾಶನದವರಿಗೂ ಅಧ್ಯಯನ ಕೇಂದ್ರದ ಸಮನ್ವಯಾಧಿಕಾರಿಗಳಾದ ಶ್ರೀ ಕಾ ತ ಚಿಕ್ಕಣ್ಣ, ಸದಸ್ಯ ಕಾರ್ಯದರ್ಶಿಗಳಾದ ಶ್ರೀ ವಿ ಎನ್ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಕಾರ್ಯಾನುಷ್ಠಾನ ಮಂಡಳಿ ಸದಸ್ಯರು, ಕಾರ್ಯಾಲಯ ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಗಳು.

ಕೆ.ಎ. ದಯಾನಂದ
ಅಧ್ಯಕ್ಷರು

# ಮುನ್ನುಡಿ

ಸಂಸ್ಕೃತಿ ಎನ್ನುವುದು ಮೂರ್ತ ಅಮೂರ್ತಗಳ ನಡುವಿನ ಭಾವಕೋಶ. ಅಮೂರ್ತ ಒಂದು ಮನೋಧರ್ಮ. ಮೂರ್ತ ಮನೋಧರ್ಮದ ಅಭಿವ್ಯಕ್ತಿಯ ಕ್ರಿಯೆಗಳು. ಈ ಎರಡರ ನಡುವೆ ಕನಕದಾಸರನ್ನು ಇಟ್ಟು ನೋಡುವ ಬಗೆಯೇ ಅನನ್ಯವಾದದ್ದು. ಕನಕದಾಸರ ಕಾವ್ಯ ಈ ದಿಕ್ಕಿನಲ್ಲಿ ನಮ್ಮನ್ನು ಪ್ರೇರೇಪಿಸಬಲ್ಲದು. ಏಕೆಂದರೆ ಯಾವುದು ದಿಟವಾದ ಕಾವ್ಯವೋ ಅದು ಅಪ್ಪಟವಾದ ಮಾನವೀಯತೆಯ ಪ್ರಜ್ಞೆ. ಯಾವ ಕಾವ್ಯವು ಸಮಾಜದ ಮಾನವೀಯ ಮೌಲ್ಯಗಳನ್ನು ಕಟ್ಟುವ ತಲ್ಲಣಗಳನ್ನು ಇರಿಸಿಕೊಂಡಿರಲಾರದೋ ಅದು ಮನುಷ್ಯ ಸಮಾಜದ ಜೊತೆ ಅನಂತಕಾಲ ಉಳಿದುಬರಲಾರದು. ಈ ಅಂಶವನ್ನು ಗಮನದಲ್ಲಿಟ್ಟು ಕನಕದಾಸರ ಕಾವ್ಯಗಳನ್ನು ಪರಿಭಾವಿಸಬೇಕು. ಯಾವಾಗ ತಿಮ್ಮಪ್ಪ ನಾಯಕ ಕನಕದಾಸನಾಗಿ ಬಯಲಿಗೆ ಇಳಿದನೋ ಅಲ್ಲಿ ಅವನಿಗೆ ಎದುರಾದುದ್ದೇ ಅಸಹಿಷ್ಣುತೆಯ ಹವಾಮಾನ. ಕನಕದಾಸರು ಈ ಹವಾಮಾನಕ್ಕೆ ಬೆನ್ನು ತಿರುಗಿಸಿ ಉಸಿರಾಡಲು ಕಷ್ಟವೆಂದು ಮೂಗಿಡಿದು ಓಡಲಿಲ್ಲ ಬದಲಿಗೆ ಮನುಷ್ಯನಲ್ಲಿ ಮೂಲಭೂತವಾಗಿ ತಳವೂರಬೇಕಾದ ಸಹಿಷ್ಣುತೆಯ ಅಗತ್ಯವನ್ನು ಅವರು ಕಂಡರು; ಉದ್ದಕ್ಕೂ ಅದನ್ನೇ ಪ್ರತಿಪಾದಿಸಿದರು.

ಇಪ್ಪತ್ತೊಂದನೆಯ ಶತಮಾನದ ಸಹಿಷ್ಣುತೆ, ಅಸಹಿಷ್ಣುತೆಯ ಎರಡು ವಲಯಗಳನ್ನು ಪ್ರವೇಶಿಸಿ ಕನಕದಾಸರ ಕಾವ್ಯವನ್ನು ಓದ ತೊಡಗಿದರೆ ಭಕ್ತನೆಂದು ನಿರ್ಧರಿಸಲ್ಪಟ್ಟ ಕನಕದಾಸರ ಹಲವು ಭಿನ್ನ ನೆಲೆಗಳು ಒಡೆದೊಡೆದು ನಮಗೆ ಗೋಚರಿಸುತ್ತವೆ. ದಾಸ, ಸಂತ, ಕವಿ, ಸಂಗೀತಗಾರ, ಜನಪದ ಕವಿ, ಬಂಡಾಯ ಮನೋಧರ್ಮಿ, ಕೀರ್ತನಕಾರ, ಸಮಾಜಸುಧಾರಕ ಹೀಗೆ ಮುಂತಾಗಿ ಹಲವು ವ್ಯಕ್ತಿತ್ವಗಳ ಕನಕದಾಸರನ್ನು ಅರ್ಥಮಾಡಿಕೊಳ್ಳಬೇಕಾಗಿರುವ ಅನಿವಾರ್ಯತೆಯನ್ನು ನಾವು

ಗಮನಿಸಬೇಕಾಗಿದೆ. ಇನ್ನೊಂದು ಮಾತಿನಲ್ಲಿ ಹೇಳಬೇಕೆಂದರೆ ಕನಕದಾಸರು ಅವರ ಕಾವ್ಯತತ್ತ್ವ ನಿರಂತರ ಶೋಧದ ದಾರಿಯನ್ನು ಅಪೇಕ್ಷಿಸುವಂತದ್ದು. ಶೋಧ ಎಂಬುವುದು ಜೀವಂತಿಕೆಯ ಲಕ್ಷಣ. ಇದಕ್ಕೆ ಇದೇ ಕೊನೆಯೆಂಬ ಅಂಕಿತವಿಲ್ಲ. ಈ ಹಿನ್ನೆಲೆಯಲ್ಲಿಯೇ ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಸಂತಕವಿಯ ನೆಪವಾಗಿಸಿಕೊಂಡು ಅವನೊಳಗಿನ ಪರಿಸರವನ್ನು ಅನ್ವೇಷಿಸಲು ಅಧ್ಯಯನ ಮಾಡಲು ತೊಡಗಿದೆ.

ಪ್ರಸ್ತುತ "ಬಯಲು ಆಲಯದೊಳಗೆ" ಕನಕದಾಸರ ಸಾಹಿತ್ಯವನ್ನು ಆಧರಿಸಿದ ಒಂದು ಸಾವಯವ ಚಿಂತನೆ. ಇಲ್ಲಿ ನಾಡಿನ ಮೂರು ತಲೆಮಾರುಗಳ ಚಿಂತಕರನ್ನು ಕನಕದಾಸರ ನಾಲ್ಕು ವಿಭಿನ್ನ ಸಾಹಿತ್ಯದ ಓದಿನ ಸಾಧ್ಯತೆಗಳಿಗೆ ಮುಖಾಮುಖಿಯಾಗಿಸಲಾಗಿದೆ. ಕನಕರ ಸಾಹಿತ್ಯ, ಅಭಿಜಾತ ನೆಲೆಯದ್ದು. ಈ ಕಾರಣಕ್ಕಾಗಿಯೇ ಬದಲಾದ ಕಾಲ ಮತ್ತು ಸಂದರ್ಭಗಳಿಗೆ ಅನುಸಾರವಾಗಿ ಅವರ ಸಾಹಿತ್ಯ ಮರು ಓದಿಗೆ, ಆ ಮೂಲಕ ಹೊಸ ಗ್ರಹಿಸುವಿಕೆಗೆ ಆಕರವಾಗುತ್ತಿದೆ. ನಿತ್ಯ ಚಿತ್ತ ಬದಲಿಸುವ ನಮ್ಮ ಸುತ್ತಲಿನ ವರ್ತಮಾನ ಅವರ ಚಿಂತನೆಗಳಿಗೆ ಓದಿನ ಹೊಸ ವಿಸ್ತಾರವನ್ನು ಒದಗಿಸುತ್ತದೆಯೊ? ಅಥವಾ ಅವರ ರಚನೆಗಳೇ ನಮ್ಮ ಸಾಮಾಜಿಕ–ನಿರ್ವಚನೆಗೆ ದಾರಿಯಾಗುತ್ತಿವೆಯೊ? ಇದೆ ನಮ್ಮ ಮುಂದಿರುವ ವಿಚಾರಾರ್ಹ ಮಾತುಕತೆ.

ಇಂಥ ಒಂದು ಪ್ರಯತ್ನ ಶಿವಮೊಗ್ಗದಲ್ಲಿ ನಡೆದ ಸಂವಾದ ಆಧಾರಿತ ಎರಡು ದಿನಗಳ ವಿಚಾರ ಸಂಕಿರಣ. ಈ ಸಂಕಿರಣವನ್ನು ಕ್ರಿಯಾಶೀಲವಾಗಿ ವಿನ್ಯಾಸಗೊಳಿಸಲಾಗಿತ್ತು. ಅಂದರೆ ಒಟ್ಟು ನಾಲ್ಕು ಗೋಷ್ಠಿಗಳಲ್ಲಿ 8 ಪ್ರಬಂಧಗಳನ್ನು ಲಿಖಿತರೂಪದಲ್ಲಿ ಪೂರ್ವಭಾವಿಯಾಗಿ ಪಡೆದು, ಪ್ರತಿ ಪ್ರಬಂಧ ವಿಷಯಕ್ಕೆ ಮೂರು ಮೂರು ಜನ ವಿದ್ವಾಂಸರನ್ನು ಆಯ್ಕೆ ಮಾಡಿ ಅವರಿಗೆ ಆ ಪ್ರಬಂಧಗಳನ್ನು ಕಳುಹಿಸಿ, ಆ ವಿದ್ವಾಂಸರಿಂದ ಅವರವರ ಪ್ರತಿಕ್ರಿಯೆಗಳನ್ನು ಲಿಖಿತರೂಪದಲ್ಲಿ ಪಡೆದು ವಿಸ್ತೃತ ವಿಚಾರ ವಿನಿಮಯಕ್ಕೆ ಅವಕಾಶ ಕಲ್ಪಿಸಿಕೊಡಲಾಗಿತ್ತು. ಗೋಷ್ಠಿಯಲ್ಲಿ ಅಳವಡಿಸಿದ ಪ್ರತಿ ವಿಷಯಕ್ಕೆ ಭಿನ್ನ ಭಿನ್ನ ನೆಲೆಯಲ್ಲಿ ಚಿಂತಿಸಿ ವಸ್ತು ಆಶಯವನ್ನು ವಿಸ್ತರಿಸುವ ಬಗೆಯನ್ನು ಇಲ್ಲಿ ನಿರೀಕ್ಷಿಸಲಾಗಿತ್ತು. ಕನಕದಾಸರನ್ನು ಮತ್ತೆ ಮತ್ತೆ ಓದಿಗೆ; ಅವರ ಕಾವ್ಯದರ್ಶನದ ಪುನರ್‌ವ್ಯಾಖ್ಯಾನಕ್ಕೆ ತೆರೆದುಕೊಳ್ಳಬೇಕಿರುವ ಈ ಹೊತ್ತಿನ ಸಂದರ್ಭಕ್ಕೆ ಇಂತಹ ಸಂವಾದ–ಸಂಕಿರಣಗಳು ಪ್ರಸ್ತುತ ಹಾಗೂ ಅಪೇಕ್ಷಣೀಯ ಎಂಬುದು ನಮ್ಮ ನಂಬುಗೆಯಾಗಿತ್ತು.

ಗೋಷ್ಠಿಗಳಲ್ಲಿ ಮಂಡಿಸಿದ ಪ್ರಬಂಧ ಅದಕ್ಕೆ ಮೂಡಿಬಂದ ಪ್ರತಿಕ್ರಿಯೆಗಳು ಹಾಗೂ ವಿದ್ಯಾರ್ಥಿ ಸಮುದಾಯದಿಂದ ಬಂದ ಪ್ರಶ್ನೆಗಳಿಗೆ ಉತ್ತರಗಳು ಈ ಎಲ್ಲವುಗಳನ್ನು ದಾಖಲಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಬೇಕೆಂಬ ಉದ್ದೇಶದಿಂದ ಡಾ. ರಾಜಶೇಖರ ಮಠಪತಿ ಅವರಿಗೆ ಮುಂಚಿತವಾಗಿಯೇ ಕೇಳಿಕೊಳ್ಳಲಾಗಿತ್ತು.

ಅದರಂತೆ ಡಾ. ರಾಜಶೇಖರ ಮಠಪತಿ ಅವರು "ಬಯಲು ಆಲಯದೊಳಗೊ" ಸಂಕಿರಣದ ಹೂರಣವನ್ನು ಸಂಕಲಿಸಿ ಸಂಪಾದಿಸಿ ಕೊಟ್ಟಿದ್ದಾರೆ. ಅವರಿಗೆ ನಮ್ಮ ಅಧ್ಯಯನ ಕೇಂದ್ರದ ನೆನಕೆಗಳು ಸಲ್ಲುತ್ತವೆ. ವಿವಿಧ ಗೋಷ್ಠಿಗಳಲ್ಲಿ ಭಾಗವಹಿಸಿದ ವಿದ್ವಾಂಸರು, ಸಂವಾದಕರು ಹಾಗೂ ವಿದ್ಯಾರ್ಥಿಗಳ ಸಹಕಾರವನ್ನು ನೆನೆಯುತ್ತೇನೆ.

ಈ ಸಂಕಿರಣದ ಸಂಘಟನೆಗೆ ಸಹಕಾರ ನೀಡಿದ ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜಿನ ಪ್ರಾಂಶುಪಾಲರು ಮತ್ತು ನಿಂತು ನಿರ್ವಹಿಸಿದ ಮಿತ್ರರಾದ ಕಾ. ಮೇಟಿಮಲ್ಲಿಕಾರ್ಜುನ ಅವರಿಗೆ ವಂದನೆಗಳು. ಗೋಷ್ಠಿಗಳನ್ನು ಆಯೋಜಿಸಲು ಅವಕಾಶ ನೀಡಿ ಪುಸ್ತಕ ಪ್ರಕಟಣೆಗೆ ಅನುಮತಿ ನೀಡಿದ ಅಧ್ಯಕ್ಷರು, ಸದಸ್ಯಕಾರ್ಯದರ್ಶಿ ಹಾಗೂ ಸದಸ್ಯರಿಗೆ, ಪುಸ್ತಕ ಮುಖಪುಟದ ವಿನ್ಯಾಸ ಮಾಡಿಕೊಟ್ಟ ಶ್ರೀ ಮಲ್ಲಿಕಾರ್ಜುನ ಅವರಿಗೆ, ಮುದ್ರಕರಾದ ಸಿರಿವರ ಪ್ರಕಾಶನದವರಿಗೂ ಹಾಗೂ ನನ್ನೊಂದಿಗೆ ಸಹಕರಿಸಿದ ಅಧ್ಯಯನ ಕೇಂದ್ರ ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಗಳು.

ಕಾ ತ ಚಿಕ್ಕಣ್ಣ

## ಬರಿದೆ ಮಾತೇಕಿನ್ನು

ಕನಕದಾಸರನ್ನು ನಾನು ಅರ್ಥೈಸಿಕೊಳ್ಳುವ ರೀತಿಯೆ ಈ ತೆರನಾದುದು. ಇಂದು ನೂರಾರು ಚಿಂತನೆಗಳಿಗೆ ಇಂಬುಗೊಟ್ಟ ಕನಕರೂ ಮೂಲದಲ್ಲಿ ಒಂದು ದೇಹದಿಂದ ಆಯಾಮ ಪಡೆದ ಚಿಂತನೆಯೆ. ಇದು ಕೇವಲ ಎರಡು ದಿನಗಳ, ಒಂದು ತಿಂಗಳಿನ, ಒಂದು ವರ್ಷದ ಅಥವಾ ಒಂದು ಜೀವಮಾನದ ಸಾಧನೆಯ ಪ್ರಶ್ನೆಯಲ್ಲ. ಹೀಗೆ ಹೇಳಿದಾಗ ನಾನೆಲ್ಲೊ ಕನಕರನ್ನು ಬುದ್ಧನ ಜನ್ಮಾಂತರಗಳ ಪರಿಕಲ್ಪನೆಗೆ ಜಾರಿಸಿದೆನೆಂದು ಯಾರೂ ಭಯಪಡಬೇಕಿಲ್ಲ. ಎಂಥ ಜಾರುವಿಕೆಯ ಸಂದರ್ಭದಲ್ಲೂ ಜಾಗೃತಿ ಇದ್ದರೆ ಸಾಕು ಅದು ಜೀವನವನ್ನು ಸುದೀರ್ಘ ಅವಲೋಕನದ ಪ್ರತಿಫಲವಾಗಿಸಿಬಿಡುತ್ತದೆ.

ಕನಕದಾಸರ ಬದುಕು ಮತ್ತು ಬರಹ ಅಂಥ ಪ್ರತಿಫಲ. ಅದು ತನ್ನೊಳಗಿನ ಅಡೆತಡೆಗಳನ್ನು ನಿವಾರಿಸಿಕೊಳ್ಳುತ್ತ ಸಮಷ್ಟಿಯನ್ನು ತನ್ನೊಳಗೆ ಶಕ್ತಿಯಾಗಿಸಿದ ಪ್ರಕ್ರಿಯೆ.

ಪ್ರಪಂಚದ ಮಹತ್ವದ ದಾರ್ಶನಿಕರಲ್ಲಿ ಒಬ್ಬರಾದ ಔಸ್‌ಪೆನ್‌ಸ್ಕಿ ಹೇಳುತ್ತಾರೆ, "ಕನಿಷ್ಠ ನೀವು ನಿಮ್ಮ ಬಗ್ಗೆ ಯೋಚಿಸುವುದರಲ್ಲಿಯೂ ಕೂಡಾ ಒಂದು ಪ್ರಯೋಜನವಿದೆ. ಇಡೀ ಪ್ರಪಂಚದಲ್ಲಿ ಎಲ್ಲರಿಗೂ ಸ್ವಾತಂತ್ರ್ಯ ಒಮ್ಮೆಗೆ ಸಾಧ್ಯವಿಲ್ಲ ಎಂದು ಎಲ್ಲರೂ ಸುಮ್ಮನಾದರೆ ಎಂದೆಂದಿಗೂ ಯಾರೊಬ್ಬರೂ ಇಲ್ಲಿ ಸ್ವತಂತ್ರರಾಗಲಾರರು. ಅದರ ಬದಲಿಗೆ, ಒಮ್ಮೆಗೆ ಒಂದು ಗುಂಪಿನಂತೆ ಸ್ವತಂತ್ರರಾಗುತ್ತ, ಉಳಿದವರಿಗೆ ಅವರು ಮಾರ್ಗದರ್ಶಕರಾದರೆ ಆಗ ಎಲ್ಲರೂ ಒಂದು ದಿವಸ ಸ್ವತಂತ್ರರಾಗಬಹುದು. ಇದರ ಹೊರತು ಸ್ವತಂತ್ರರಾಗುವಂತಹ ಬೇರೆ ಯಾವ ಸಾಧ್ಯತೆಯೂ ನಮಗೆ ಇಲ್ಲಿ ಇಲ್ಲ." ಈ ಆಲೋಚನೆ ರಷಿಯಾದ ಚಿಂತಕನಿಂದ ನಡೆದಿದೆ. ಆದರೆ ಇದು ನಿಜಕ್ಕೂ ಶತಮಾನಗಳಿಂದ ಆಧ್ಯಾತ್ಮಿಕ ನೆಲೆಯಲ್ಲಿ ಭಾರತದಲ್ಲಿ ಆಚರಣೆಯಲ್ಲಿದೆ. ಇದಕ್ಕೊಂದು ನಿದರ್ಶನ ಕನಕದಾಸ, ದಾಸ ಪರಂಪರೆ ಹಾಗೂ ಅವರ ಸಾಹಿತ್ಯ.

ಪ್ರಸ್ತುತ 'ಬಯಲು ಆಲಯದೊಳಗೊ' ಕೃತಿಯು, ಕನಕದಾಸರನ್ನೇ ಈ ಸಮಾಜಕ್ಕೆ ತೆರೆದುಕೊಂಡ ಬೆಳಕಿಂಡಿಯಾಗಿಸಿಕೊಂಡು, ಓದಿನ ಹಿನ್ನೆಲೆಯ ಒಂದು ದೊಡ್ಡ ಗುಂಪು ಹೊಸ ಆಶಯಗಳನ್ನು ರೂಪಿಸಲು ತಮ್ಮನ್ನೇ ತಾವು ತೊಡಗಿಸಿಕೊಂಡಿರುವುದಕ್ಕೊಂದು ಸಾಕ್ಷಿ. ಇಂಥ ಚಿಂತನೆಗೆ ತೊಡಗಿಸಿಕೊಂಡವರ್‍ಯಾರೂ ಇಲ್ಲಿ ಬರೀ ಜ್ಞಾನವನ್ನು ನಂಬಿಕೊಂಡವರಲ್ಲ. ಹಾಗೊಂದು ವೇಳೆ ಮಾಡಿದ್ದರೆ ಕನಕದಾಸರ ಸಾಹಿತ್ಯ ಅಂಥವರಿಗೆ ದಕ್ಕಲು ಸಾಧ್ಯವಿಲ್ಲ. ಯಾಕೆಂದರೆ ಭಾರತ ಶತಮಾನಗಳಿಂದಲೂ ಇದನ್ನು ನಂಬಿದೆ. ಕಾಲಕಾಲಕ್ಕೆ ಅದು ತನ್ನ ಸಾಧು, ಸಂತ ಹಾಗೂ ದಾರ್ಶನಿಕರ ಮೂಲಕ ಇದನ್ನು ಸಾಬೀತು ಪಡಿಸಿದೆ. ಕೇವಲ ಜ್ಞಾನ ಹಾಗೂ ಸ್ಥಾನ ಮಾತ್ರದಿಂದ ಸಮಾಜದೊಳಗಿನ ಮತ್ತು ತನ್ನೊಳಗಿನ ದ್ವಂದ್ವಗಳನ್ನು ವ್ಯಕ್ತಿ ಗೆಲ್ಲಲಾಗದು. ಕಾಲದ ಹೆಡಮುರಿಗೆಯನ್ನು ಕಟ್ಟುವ ಪ್ರಶ್ನೆಗಳನ್ನು ಬಗೆಹರಿಸಿಕೊಳ್ಳಲಾಗದು ಎಂದು ಹೇಳಿದೆ. ಇದೇ ವಿಚಾರವನ್ನು ಸಾರಿದ ಪ್ರಪಂಚದ ಮಹತ್ವದ ಮುಂಚೂಣಿಯ ಚಿಂತಕರಲ್ಲಿ ಕರ್ನಾಟಕದ ನಮ್ಮ ಸಂತಪರಂಪರೆಯೂ ಬರುತ್ತದೆ.

ಜ್ಞಾನ, ಇಚ್ಛೆಗಳನ್ನು ಮೀರುವ ದಾರಿಯನ್ನು ತೋರಿಸುವುದಿಲ್ಲ. ದೇಹವೆಂಬ ಮದ ಮಡಿಕೆಯ ಕಾಯಿಸಲು, 'ಕತ್ತರಿ ಮನವೆಂಬ ಹೊಟ್ಟನು ಎತ್ತಿ ಒಲೆಗೆ ಹಾಕಬೇಕು' ಎಂದು ಹೇಳುವ ಕನಕದಾಸ ಈ ಪರಂಪರೆಯ ಮಹತ್ವದ ಕೊಂಡಿಯಾಗಿ ಕಾಣುತ್ತಾರೆ. ಮನುಷ್ಯನೆಂಬ ಕ್ಲಿಷ್ಟಕರ ಯಂತ್ರಕ್ಕೆ ಕೀರ್ತನೆ–ಪ್ರಾರ್ಥನೆಗಳ ಕೀಲೆಣ್ಣೆ ಸುರಿದು ದುರಸ್ತಿಗೊಳಿಸಿದ ಕನಕದಾಸರು ಸಮಾಜದ ದುರವಸ್ಥೆಯನ್ನು ನೋಡಿ ಬರೀ ಲೇವಡಿ ಆಡುತ್ತ ಹೋಗಿದ್ದರೆ ಖಂಡಿತ ಮತ್ತೆ ಅವರ ಓದು ಇಂದು ಅನಿವಾರ್ಯವೂ ಆಗುತ್ತಿರಲಿಲ್ಲ, ಅವಶ್ಯಕತೆಯೂ ಆಗುತ್ತಿರಲಿಲ್ಲ. ಒಬ್ಬ ಚಿಂತಕನ ವಿಚಾರದಲ್ಲಿ ಈ ಎರಡೂ ಅವಕಾಶಗಳು ಹುಟ್ಟುವುದು ಬರೀ ಆತನ ಪಾಂಡಿತ್ಯದಿಂದಲ್ಲ ಬದಲಾಗಿ ಜೀವನ ಕಾಳಜಿಗಳಿಂದ. ಕನಕದಾಸ ಜೀವ–ಜೀವ್ಹೆಯ ಕವಿ. ಅದಕ್ಕೊಂದು ಸಾಕ್ಷಿ ಅವರ ಈ ಪದ್ಯ –

ತೊರೆದು ಜೀವಿಸಬಹುದೆ ಹರಿ ನಿನ್ನ ಚರಣಗಳ
ಬರಿದೆ ಮಾತೇಕಿನ್ನು ಅರಿತು ಪೇಳುವೆನಯ್ಯ

ಒಡಲು ಹಸಿಯಲು ಅನ್ನವಿಲ್ಲದಲೇ ಇರಬಹುದು
ಪಡೆದ ಕ್ಷೇತ್ರವ ಬಿಟ್ಟು ಹೊರಡಬಹುದು
ಮಡದಿ ಮಕ್ಕಳನೆಲ್ಲಾ ತೊಲಗಿಸಿ ಬಿಡಬಹುದು
ಕಡಲೊಡೆಯ ನಿನ್ನ ಅರೆಘಳಿಗೆ ಬಿಡಲಾಗದು

ತಾಯಿ ತಂದೆಯ ಬಿಟ್ಟು ತಪವ ಮಾಡಲೂಬಹುದು
ದಾಯಾದಿ ಬಂಧುಗಳ ಬಿಡಲೂಬಹುದು

ರಾಯ ತಾ ಮುನಿದರೆ ರಾಜ್ಯವನೇ ಬಿಡಬಹುದು
ಕಾಯಜ ಪಿತ ನಿನ್ನ ಅರೆಘಳಿಗೆ ಬಿಡಲಾಗದು

ಪ್ರಾಣವ ಪರರು ಬೇಡಿದರೆತ್ತಿಕೊಡಬಹುದು
ಮಾನದಲಿ ಮನವ ತಗ್ಗಿಸಬಹುದು

ಜಾಣ ನಾಯಕನಾದ ಆದಿಕೇಶವರಾಯ
ಜಾಣ ಶ್ರೀಕೃಷ್ಣಾ ನಿನ್ನ ಅರೆಘಳಿಗೆ ಬಿಡಲಾಗದು

ಇದು ಲೋಕ ವ್ಯಾಪಿಸಿದ ಕನಕದಾಸರ ಪದ್ಯ. ಇದೊಂದು ಅಮಾಯಕ ಹೃದಯಜನ್ಯ ವ್ಯಾಪಿಸುವಿಕೆ. ಜನಾಂಗಗಳು ಅಂದಿನಿಂದ ಇಂದಿನವರೆಗೂ ತಮ್ಮ ಬುದ್ಧಿ, ಹೃದಯ ಹಾಗೂ ಕಾಯಗಳನ್ನು ಏಕಕಾಲಕ್ಕೆ ತಿದ್ದಿಕೊಳ್ಳಲು ಸರ್ವಾಂಗ ಸುಂದರ ವ್ಯಾಯಾಮದಂತೆ ಇದನ್ನು ಅನುಸರಿಸುತ್ತ ಬಂದಿದ್ದಾರೆ. ನನ್ನ ಓದಿಗೆ ನಿಲುಕಿದಂತೆ ಈ ಪದ್ಯದಲ್ಲಿಯ 'ಬರಿದೆ ಮಾತೇಕಿನ್ನು', 'ಅರೆಘಳಿಗೆ ಬಿಡಲಾಗದು', ಹಾಗೂ 'ಜಾಣ ನಾಯಕನಾದ' ಎನ್ನುವ ಪದಪುಂಜಗಳು ಕಾಯಾ-ವಾಚಾ ಹಾಗೂ ಮನಸಾ ಶುದ್ಧಿಯ, ಜಾಗೃತಿಯ ನೆಲೆಗಳಂತೆ ತೋರಿ, ಭಕ್ತಿ ಎಂಬ ಮಹಾಮಂಟಪದ ಬುನಾದಿಯ ಬೆರಗನ್ನು ಬಿಚ್ಚಿಡುತ್ತವೆ.

ಪದ್ಯವೊಂದು ಹಾಡಾಗಿ ಕಾಡುವ ಭಾಗ್ಯ ಎಲ್ಲ ಪದ್ಯಗಳಿಗೂ ಇರುವುದಿಲ್ಲ. ಮತ್ತೆ ಗೆದ್ದಲು ಹುಳುಗಳಂತೆ ನಮ್ಮ ನೆಮ್ಮದಿ ಕದಡುವ ಜನಪ್ರಿಯ ಪದ್ಯಗಳಿಗೆ ಕಾಲಾತೀತವಾದ ಮೌಲ್ಯವಿರುವುದಿಲ್ಲ. ಪದಕಾರನ ಬದುಕಿನ ಪುಣ್ಯದ ಮೇಲೆ, ಆತನ ಲೌಕಿಕ ಹಾಗೂ ಪಾರಮಾರ್ಥಿಕ ಮೌಲ್ಯಗಳ ಹುಡುಕಾಟದ ರೀತಿಯ ಮೇಲೆ ಪದ್ಯದ ಸಾರ್ವತ್ರಿಕತೆಯ ವಿಸ್ತಾರ ನಿಗದಿಯಾಗುತ್ತದೆ. ಅಂಥ ವಿಸ್ತೃತಿಯ ಬಾಳು ಕನಕದಾಸರದ್ದಾದುದರಿಂದಲೇ ಅವರ ಸಾಹಿತ್ಯ ಮತ್ತು ಜೀವನಗಳೆರಡೂ ವಿಸ್ಮೃತಿಗೆ ಒಳಗಾಗಲಿಲ್ಲ. "ದಾಸ ದಾಸರ ಮನೆಯ ದಾಸಾನು ದಾಸ ನಾನು, ಆಳುದಾಸ, ಕಿರಿಯದಾಸ, ಆಳಿನಡಿದಾಸ, ಮಂಕುದಾಸ, ಕುರುಡದಾಸ, ಬಡದಾಸ, ಕುರುಬದಾಸ, ಹೊಲೆದಾಸ, ರಂಗ ನಿನ್ನ ಮನೆಯ ಮಾದಿಗದಾಸ ನಾನೆಂದು" ವಿನಮ್ರವಾಗಿ ಹೇಳುತ್ತಲೆ ಸಮಾಜಕ್ಕಂಟಿದ ಹಲವು ಕೊಳೆಗಳನ್ನು ತೊಳೆಯಲೆತ್ನಿಸಿದವರು ಕನಕದಾಸರು.

ಕನಕದಾಸರ ಸಾಹಿತ್ಯ ಕುರಿತಾಗಿ ನಾವು ವರ್ತಮಾನದಲ್ಲಿ ನಡೆಸುತ್ತಿರುವ ಕೆಲವು ವಾದ-ಸಂವಾದಗಳು ಎಲ್ಲೋ ಕೆಲವೊಮ್ಮೆ ಅವರ ಸಾಹಿತ್ಯದ ಮೂಲ ಆಶಯವನ್ನೇ ಎರ್ರಾಬಿರ್ರಿಗೊಳಿಸುತ್ತಿದೆ ಏನೋ ಎಂಬ ಗುಮಾನಿ ಬರುವಂತೆ ಮಾಡುತ್ತದೆ. ಜಾಸ್ ವೀಡಾನ್ ಒಂದೆಡೆ ಬರೆಯುತ್ತಾನೆ, 'ಐ ಆ್ಯಮ್ ಎ ವೇರಿ ಹಾರ್ಡ್ ಲೈನ್. ಆ್ಯಂಗ್ರಿ ಏತಿಸ್ಟ್, ಯಟ್ ಐ ಆ್ಯಮ್ ಫ್ಯಾಸಿನೇಟೆಡ್ ಬೈ ದ ಕಾನ್ಸೆಪ್ಟ್ ಆಫ್ ಡಿವೋಷನ್'. ಡಿವೋಷನ್ ಅಂದರೆ ಭಕ್ತಿ. ಇದು ಕನಕದಾಸರ ಸಾಹಿತ್ಯದ ಅಡಿಪಾಯ. ಹಾಗೆ ನೋಡಿದರೆ ಇದುವೇ ಎಲ್ಲವೂ. ಭಾರತದ

ಒಂದು ನಿರ್ದಿಷ್ಟ ಘಟ್ಟದ ಒಟ್ಟು ಸೃಜನ ಕ್ರಿಯೆಯ ಬುನಾದಿಯೇ ಭಕ್ತಿ. ಅದು ಇಲ್ಲಿಯ ನಾಗರಿಕತೆಯ ದಿನಗಳಿಂದ ವರ್ತಮಾನದವರೆಗೂ ಅಖಂಡವಾಗಿದೆ. ಕನಕದಾಸರಂತೂ 'ದಾಸನಾಗಬೇಕು, ಸದಾಶಿವನ ದಾಸನಾಗಬೇಕು', ಎಂದು ಹಾಡುತ್ತ, 'ಬಿರುದುಳ್ಳ ದೊರೆ ನೀನು ಮೊರೆ ಹೊಕ್ಕೆನಯ್ಯ ನಾನು' ಎಂದು ಆದಿಕೇಶವನೆಂಬ ಪ್ರಜ್ಞೆಯಲ್ಲಿ ಮಾಗಿದ ಭಕ್ತಿಯ ಮಹಾ ಮನಸ್ಸು.

ಕನಕದಾಸರ ಭಕ್ತಿ ಒಂದು ಮಹಾಪೂರ. ಅದರೊಳಗೆ ಹರಿದು ಬಂದ ಲೋಕ, ಪಾರಮಾರ್ಥಗಳ ಚಿಂತನೆಗಳನ್ನು ಗಮನಿಸಿದಾಗ, "ದ ಹೋಲ್ ಹೌಸ್ ಕೇಮ ಅಪ್ ಆ್ಯಂಡ್ ಐ ಕೇಮ್ ಅಪ್ ವಿಥ್ ಇಟ್. ಐ ವಾಜ್ ಜಸ್ಟ್ ಪ್ರೇಯಿಂಗ್ ಟು ದ ಲಾರ್ಡ್ ಟು ಟೇಕ್ ಕೇರ್ ಆಫ್ ಮಿ" ಎಂಬ ಅಮೇರಿಕಾದ ಜನಪದ ಗಾಯಕ ವಿಲಿ ನೆಲ್ಸನ್‌ರ ಮಾತು ನೆನಪಾಗುತ್ತದೆ. ಬದುಕಿನ ಅಥವಾ ಸಾಹಿತ್ಯದ ಸಾತತ್ಯವಿರುವುದೇ ಸಮಗ್ರತೆಯಲ್ಲಿ. ಅಂಥ ಸಮಗ್ರತೆ ಕನಕರ ಸಾಹಿತ್ಯ ಮತ್ತು ಬದುಕುಗಳೆರಡರಲ್ಲೂ ನಾವು ಕಾಣಬಹುದಾಗಿದೆ.

ಭಕ್ತಿಯಲ್ಲಿ ಹೇಗೋ ಹಾಗೆಯೆ ಸಾಹಿತ್ಯ ರಚನೆಯಲ್ಲೂ ಸಂಖ್ಯೆಯಿಂದ ದೊಡ್ಡ ಸಂತರಾದವರಲ್ಲ ಕನಕದಾಸರು. ಮುನ್ನೂರಕ್ಕೂ ಮಿಕ್ಕಿದ ಕೀರ್ತನೆಗಳು, ನಾಲ್ಕು ದೊಡ್ಡ ಕಾವ್ಯಕೃತಿಗಳು, ಅವುಗಳಲ್ಲಿ ಅಭಿವ್ಯಕ್ತಿಗೊಂಡ ಸಂಸಾರ, ಜ್ಞಾನ, ವೈರಾಗ್ಯ, ವೈಚಾರಿಕತೆ, ಊರುಗಾರಿಕೆ, ಅರಸೊತ್ತಿಗೆಯ ಪ್ರಶ್ನೆ, ಜೀವನ ಚಿಂತನೆಗಳು ಬರೀ ಕಾಲ್ಪನಿಕವಾಗಿ ಕಾಯಪಡೆದವುಗಳಲ್ಲ. ಬದಲಾಗಿ ಲೋಕ ಸಂಚಾರದ ಮಹಾ ಯಾತ್ರೆಯಿಂದ ಮೈದಾಳಿದ ವಾಸ್ತವಗಳು. ಅಂತೆಯೆ ಕುಲದ ನೆಲೆ, ಭಕ್ತಿ ಮತ್ತು ಡಾಂಭಿಕತೆ, ಧರ್ಮ ಮತ್ತು ಸಮಕಾಲೀನ ರಾಜಕಾರಣದ ಪ್ರಶ್ನೆಗಳು ಅವರ ಇಡೀ ಸಾಹಿತ್ಯದಲ್ಲಿ ಮತ್ತೆ ಮತ್ತೆ ಪ್ರಸ್ತಾಪಗೊಳ್ಳುತ್ತವೆ. ಲೋಕವಿಮುಖಿ ಸಾಹಿತ್ಯ ಹಾಗೂ ಸಾಹಿತಿಗಳಿಬ್ಬರಲ್ಲೂ ಈ ಪ್ರಶ್ನೆಗಳು ಅಪ್ರಸ್ತುತ. ಪ್ರಶ್ನೆಗಳಿಲ್ಲದ ಸಾಹಿತ್ಯವೂ ಅಷ್ಟೇ, ಅದು ಅಲ್ಪಾಯು. ಆದರೆ ಕನಕ ಸಾಹಿತ್ಯ ಕಾಲ ಪ್ರವಾಹದಲ್ಲಿ ಕೊಚ್ಚಿಹೋಗಿ ಮರೆವಿಗೆ ಒಳಗಾಗುವ ಬದಲು ಜನಪದ, ಕರ್ನಾಟಕ, ಹಿಂದೂಸ್ತಾನಿ, ರವೀಂದ್ರ ಸಂಗೀತಗಳ ಮೂಲಕ, ಸಿನಿಮಾ, ಪ್ರವಚನ ಹಾಗೂ ಗಣಕಯಂತ್ರಗಳಂಥ ಆಧುನಿಕ ಮಾಧ್ಯಮಗಳ ಮೂಲಕ ಹರಿದು ಬಂದು ಅಖಂಡವಾಗಿ ನಮ್ಮನ್ನು ವ್ಯಾಪಿಸಿದೆ, ವ್ಯಾಪಿಸುತ್ತಲೇ ಇದೆ.

ಪ್ರಸ್ತುತ 'ಬಯಲು ಆಲಯದೊಳಗೊ' ಕೃತಿ ಶಿವಮೊಗ್ಗೆಯ ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ನಡೆದ, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಬೆಂಗಳೂರು ಪ್ರಾಯೋಜಿತ ಎರಡು ದಿನಗಳ ಸಂವಾದ ಸಂಕಿರಣದ ಫಲಶೃತಿ. ಇದು ಕನಕದಾಸರ ಕೃತಿಗಳೊಂದಿಗೆ ಜರುಗಿದ ಹೊಸ ತಲೆಮಾರಿನ ಆಲೋಚನೆಗಳ ಅನುಸಂಧಾನ. ಕನಕ ಸಾಹಿತ್ಯವನ್ನು ಓದುವ ಹೊಸ ಸಾಧ್ಯತೆಗಳನ್ನು ಹಾಗೂ ಅದರಿಂದ ಪರಸ್ಪರ ಆಲೋಚನೆಗಳು

ವಿಸ್ತಾರಗೊಳ್ಳುವ, ಜಂಗಮವಾಗುವ ಪರಿಯನ್ನು ವಿವರಿಸುವ ಒಂದು ಪ್ರಯತ್ನ. ಭಕ್ತಿಯ ನೆಲೆಯಲ್ಲಿ ಒಂದೊಮ್ಮೆ ಹೊರಟು ಸಮಕಾಲೀನ ಹಾಗೂ ಆಧುನಿಕ ಸಾಂಸ್ಕೃತಿಕ–ಧಾರ್ಮಿಕ ರಾಜಕಾರಣವನ್ನು ನಿರಚನಗೊಳಿಸುವ ಕನಕರ ಸಾಹಿತ್ಯ ಈ ಕೃತಿಯಲ್ಲಿ ಅನಾವರಣಗೊಳ್ಳುವ ರೀತಿಯೇ ಬೆರಗುಗೊಳ್ಳುವಂಥದು. ಎಷ್ಟಾದರೂ ಬಯಲ ಬೆರಗೇ ಅಂಥದಲ್ಲವೆ?

ಈ ಬೆರಗನ್ನು ಬಾಚುವ ಸುವರ್ಣಾವಕಾಶ ನನಗೆ ದೊರೆತದ್ದು ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಕೇಂದ್ರ ಸಮನ್ವಯಾಧಿಕಾರಿಗಳಾದ ಶ್ರೀ ಕಾ.ತ. ಚಿಕ್ಕಣ್ಣರವರಿಂದ. ಅಂದಹಾಗೆ, ಈ ಸೇವಾವಕಾಶಕ್ಕೆ ನನ್ನನ್ನು ಚಿಕ್ಕಣ್ಣನವರು ಆಯ್ಕೆ ಮಾಡಿಕೊಂಡದ್ದೂ ಕೂಡ ಭಾರತದ ರಾಜಕೀಯ ಸಂತನೆಂದೇ ಖ್ಯಾತರಾದ ಗಾಂಧಿಯ ಮೂಲಕ. ಅವರ ಕುರಿತ ನನ್ನ ಕೃತಿಗಳಲ್ಲಿ ಉಲ್ಲೇಖಿಗೊಂಡ ಗುಜರಾತಿ ಸಂತರ ಪದ್ಯಗಳ ಮೂಲಕ. ಸಂತ ಕರ್ನಾಟಕದವನೊ ಗುಜರಾತಿನವನೊ, ರಾಜಕಾರಣ ಭಾರತದ್ದೊ ಅಮೇರಿಕಾದ್ದೊ ಅವುಗಳೊಳಗಿನ ಧರ್ಮ ಒಂದೇ ಎನ್ನುವುದು ಇಂಥ ಅನುಸಂಧಾನಗಳಿಗೆ ಕಾರಣವಾಗುತ್ತದೆ. ಇದು ಮನೆಯ ಬೆಳಕನ್ನು ಮಹಾ ಬೆಳಕಿನೊಂದಿಗೆ ಸೇರಿಸಿದಂತೆ. ನಿರ್ದೇಶಕ ಶ್ರೀ ಕಾ ತ ಚಿಕ್ಕಣ್ಣ ಈ ಕೆಲಸವನ್ನು ಕೃತಿಯ ಸಂಪಾದನೆಯ ಜವಾಬ್ದಾರಿಯನ್ನು ನನಗೆ ನೀಡುವುದರ ಮೂಲಕ ಸಾಧ್ಯವಾಗಿಸಿದ್ದರಿಂದ ಅವರಿಗೆ ನನ್ನ ಅನಂತ ಧನ್ಯವಾದಗಳು.

ಜೊತೆಗೆ, ಎರಡು ದಿನಗಳ ಸಂವಾದ–ಸಂಕಿರಣದಲ್ಲಿ ಪಾಲ್ಗೊಂಡು ಪ್ರಬಂಧಗಳನ್ನು ಮಂಡಿಸಿ, ಪ್ರಶ್ನಿಸಿ, ಕನಕ ಸಾಹಿತ್ಯದ ಅರ್ಥ ಹಾಗೂ ಭಾವ ವಿಸ್ತಾರಗಳಿಗೆ ಕಾರಣರಾದ ಡಾ. ಮಲ್ಲಿಕಾ ಘಂಟಿ, ಡಾ. ಮಲ್ಲಿಕಾರ್ಜುನ ಮೇಟಿ, ಡಾ. ಮೋಹನ ಚಂದ್ರಗುತ್ತಿ, ಡಾ. ರಂಗನಾಥ ಕುಂಟನಕುಂಟೆ, ಡಾ. ಗೀತಾ, ಡಾ. ಕುಂಸಿ ಉಮೇಶ, ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ, ಡಾ. ರಾಮಲಿಂಗಪ್ಪ ಟಿ ಬೇಗೂರು, ಪ್ರೊ. ಮೂಡಲ ಗಿರಿಯಯ್ಯ, ಡಾ. ಎನ್.ಆರ್. ಲಲಿತಾಂಬಾ, ಡಾ. ಕವಿತಾ ಕುಸುಗಲ್, ಪ್ರೊ. ಶಾಶ್ವತಯ್ಯ ಸ್ವಾಮಿ, ಪ್ರೊ. ಸುಮಾ ಎಸ್, ಶ್ರೀ ಪ್ರದೀಪ ಮಾಲ್ಗುಡಿ, ಬಿ. ಪೀರ ಭಾಷಾ, ಶ್ರೀ ದೇವು ಪತ್ತಾರ, ಎಚ್. ದಂಡಪ್ಪ, ಡಾ. ಅರುಣ್ ಜೋಳದ ಕೂಡ್ಲಿಗಿ, ಡಾ. ಕೆ ಷರೀಫಾ, ಡಾ. ಸುಬ್ರಮಣ್ಯಂ ಸ್ವಾಮಿ, ಡಾ. ಶ್ರೀಧರ ಪಿಸ್ಸೆ, ಡಾ. ಸಬಿತಾ ಬನ್ನಾಡಿ, ಡಾ. ಪ್ರಕಾಶ್, ಡಾ. ನಿಕೇತನ ಅವರುಗಳಿಗೆ ಹಾಗೂ ನನ್ನೊಂದಿಗೆ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ಸನ್ಮಿತ್ರ ಪ್ರೊ. ಹರೀಶ್ ಹಾಗೂ ಕೃತಿ ರಚನೆಯಲ್ಲಿ ಸಹಕರಿಸಿದ ಗೌರಿ, ಶ್ರೀಮತಿ ಪದ್ದು ಮತ್ತು ಶ್ರೀ ಗಂಗಯ್ಯನವರಿಗೆ, ಅಧ್ಯಯನ ಸಂಸ್ಥೆಯ ಹಾಗೂ ಮುದ್ರಣ ಸಂಸ್ಥೆಯ ಸಮಗ್ರ ಸಿಬ್ಬಂದಿಗೆ, ಕಾಲಕಾಲಕ್ಕೆ ಹಲವು ಸೂಚನೆಗಳ ಮೂಲಕ ಮಾರ್ಗದರ್ಶನ ಮಾಡಿದ ಎಲ್ಲ ವಿದ್ವಾಂಸರುಗಳಿಗೆ ಹಾಗೂ ನಿಮಗೆ ಅನಂತ ಧನ್ಯವಾದಗಳು.

ದಿನಾಂಕ: **23.12.2015** ಡಾ. ರಾಜಶೇಖರ ಮಠಪತಿ (ರಾಗಂ)

# ಪರಿವಿಡಿ


ಭಾಗ – 1 : ಕನಕರ ನಿರೂಪಣೆಗಳಲ್ಲಿ ಜನಪದ ಲೋಕದೃಷ್ಟಿ

ಪ್ರಬಂಧ: ಕನಕನ ಸಾಹಿತ್ಯದ ಲೋಕದೃಷ್ಟಿ ಮತ್ತು ಬದಲಿ ಸಾಂಸ್ಕೃತಿಕ ರಾಜಕಾರಣದ ಸಾಧ್ಯತೆಗಳು 3
– ಡಾ. ರಂಗನಾಥ್ ಕಂಟನಕುಂಟೆ

ಪ್ರತಿಕ್ರಿಯೆ:

1) ಕನಕನ ಸಾಹಿತ್ಯದ ಲೋಕದೃಷ್ಟಿ ಮತ್ತು ಬದಲಿ ಸಾಂಸ್ಕೃತಿಕ ರಾಜಕಾರಣದ ಸಾಧ್ಯತೆಗಳು 13
– ಡಾ. ಎಚ್.ಪಿ. ಗೀತಾ, ಮೈಸೂರು

2) ಕನಕನ ಸಾಹಿತ್ಯದ ಲೋಕದೃಷ್ಟಿ ಮತ್ತು ಬದಲಿ ಸಾಂಸ್ಕೃತಿಕ ರಾಜಕಾರಣದ ಸಾಧ್ಯತೆಗಳು 17
– ಪ್ರೊ. ಮೂಡಲ ಗಿರಿಯಯ್ಯ

3) ಅಹಂ, ಕುಲಂ ನಿರಸನದ ಹಾದಿ 20
– ಡಾ. ಕುಂಸಿ ಉಮೇಶ್

ಪ್ರಬಂಧ: ಕೇಶವಾಂಕಿತ ರಚನೆಗಳು – ತತ್ವರಾಜಕಾರಣ 26
– ಡಾ. ರಾಮಲಿಂಗಪ್ಪ ಟಿ ಬೇಗೂರು

ಪ್ರತಿಕ್ರಿಯೆ:

1) ಕನಕದಾಸರು ಮತ್ತು ತಳಸಮುದಾಯದ ಅನನ್ಯತೆ 65
– ಡಾ. ನದಾಫ ಎಚ್.ಎಸ್

2) ಕಂಬಳಿ ಕುಲವಲ್ಲ – ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ 70

3) ತತ್ವರಾಜಕಾರಣ ಮತ್ತು ಅರಿವಿನ ದ್ವಂದ್ವ 73
– ಡಾ. ಗೀತಾ ವಂಸತ

ಭಾಗ – 2 : ಕನಕ ಕೃತಿಗಳ ಸಾಂಸ್ಕೃತಿಕ ಅನುಸಂಧಾನ

ಪ್ರಬಂಧ: ನಳಚರಿತ್ರೆ : ಚರಿತ್ರೆಯ ಸ್ತ್ರೀ ವ್ಯಾಖ್ಯಾನ 81
– ಡಾ. ಎನ್ ಆರ್ ಲಲಿತಾಂಬ

ಪ್ರತಿಕ್ರಿಯೆ:

1) ನಳಚರಿತ್ರೆಯ ಸ್ತ್ರೀ ವ್ಯಾಖ್ಯಾನಕ್ಕೊಂದು ವ್ಯಾಖ್ಯಾನ 103
– ಡಾ. ಕವಿತಾ ಕುಸಗಲ್

2) ನಳಚರಿತ್ರೆ : ಚರಿತ್ರೆಯ ಸ್ತ್ರೀ ವ್ಯಾಖ್ಯಾನ 107
– ಶ್ರೀಮತಿ ಕವಿತಾ

3) ಮಹಿಳಾ ಪರವಾದ ಮೇಲು ದನಿ 110
– ಚಂದ್ರಶೇಖರ ತಾಳ್ಯ

4) ಕನಕ ಸಾಹಿತ್ಯ ಮಹಿಳಾ ಪಾತ್ರಗಳು ಹೆಣ್ಣಿನದ ಕಣ್ಣಲ್ಲಿ 115
– ಡಾ. ಎಚ್.ಎಸ್. ಅನುಪಮಾ

ಪ್ರಬಂಧ: ರಾಮಧಾನ್ಯ, ಮಾರುಕಟ್ಟೆ ಮತ್ತು ಆಹಾರ ರಾಜಕಾರಣದ
ಹೊಸ ಸವಾಲು – ಡಾ. ರಂಗನಾಥ್ ಕಂಟನಕುಂಟೆ 126

ಪ್ರತಿಕ್ರಿಯೆ:

1) ರಾಮಧಾನ್ಯ ಚರಿತ್ರೆಯ ಹೊಳವುಗಳು 139
– ಶ್ರೀ ಪ್ರದೀಪ್ ಮಾಲ್ಗುಡಿ

2) ರಾಮಧಾನ್ಯ ಚರಿತೆ : ಮೇಲ್ಗಲನೆಯ ಹಂಬಲದ
ಅನುಸಂಧಾನ – ಬಿ. ಪೀರ್‌ಭಾಷಾ 145

3) ಒಂದು ಪ್ರತಿಕ್ರಿಯೆ – ಶ್ರೀ ದೇವು ಪತ್ತಾರ್ 151

ಭಾಗ – 3 : ಭಕ್ತಿಯೆಂಬ ಲೋಕದೃಷ್ಟಿಯಾಗಿ ಕನಕರ ಚಿಂತನೆಗಳು

ಪ್ರಬಂಧ: ಸಾಮಾಜಿಕ, ರಾಜಕೀಯ ಯಜಮಾನಿಕೆಯ
ನಿರಸನ ಸಾಧನವಾಗಿ ಭಕ್ತಿ– ಡಾ. ಸುಬ್ರಮಣ್ಯ ಸ್ವಾಮಿ 157

ಪ್ರತಿಕ್ರಿಯೆ:

1) ಸಾಮಾಜಿಕ, ರಾಜಕೀಯ ಯಜಮಾನಿಕೆಯ
ನಿರಸನ ಸಾಧನವಾಗಿ ಭಕ್ತಿ– ಡಾ. ಬಸವರಾಜ ಸಾದರ 163

2) ಸಾಮಾಜಿಕ – ರಾಜಕೀಯ ಯಜಮಾನಿಕೆ ನಿರಸನ
ಸಾಧನವಾಗಿ ಭಕ್ತಿ – ಡಾ. ಹೆಚ್ ಎಲ್ ಪುಷ್ಪ 170

3) ನೀರ ಸಂಗವ ಬಿಟ್ಟು ಆಣಿಮುತ್ತಾದ ಕ್ರಿಯೆ – ಡಾ. ಶ್ರೀಧರ ಪಿಸ್ಸೆ 173

ಪ್ರಬಂಧ: ಆತ್ಮ ಸಾಂಗತ್ಯದ ಮೂಲಕ ಸಮುದಾಯದತ್ತ 188
–ಡಾ. ಸಬಿತಾ ಬನ್ನಾಡಿ

ಪ್ರತಿಕ್ರಿಯೆ:

1) ಆತ್ಮ ಸಾಂಗತ್ಯದ ಮೂಲಕ ಸಮುದಾಯದತ್ತ 199
– ಪ್ರೊ. ಶಾಶ್ವತ ಸ್ವಾಮಿ ಮುಕ್ಕುಂದಿಮಠ

2) ಕನಕ ಆತ್ಮಸಾಂಗತ್ಯದಿಂದ ಸಮುದಾಯದೆಡೆಗೆ – ಶ್ರೀ ಪ್ರಕಾಶ್ 201

3) ಭಕ್ತಿಯೆಂಬ ಲೋಕದೃಷ್ಟಿಯಾಗಿ ಕನಕರ ಚಿಂತನೆಗಳು – ಡಾ. ನಿಕೇತನ 206

## ಭಾಗ – 4: ಚಾರಿತ್ರಿಕ ಆಕರವಾಗಿ ಕನಕರ ಕೃತಿಗಳು


ಪ್ರಬಂಧ: ಕನಕದಾಸರ ಕೀರ್ತನೆಗಳಲ್ಲಿ ಜಾತಿ ತಾರತಮ್ಯದ ಆಯಾಮಗಳು 211
– ಶ್ರೀ ಹೆಚ್ ದಂಡಪ್ಪ

ಪ್ರತಿಕ್ರಿಯೆ:

1) ಒಳಬಂಡಾಯಗಾರನ ಜಾತಿಭಂಜನ ಕ್ರಿಯೆ; ಪ್ರತಿಕ್ರಿಯೆ 228
– ಡಾ. ಅರುಣ್ ಜೋಳದಕೂಡ್ಲಿಗಿ

2) ಕನಕದಾಸರ ಕೀರ್ತನೆಗಳಲ್ಲಿ ಜಾತಿ ತಾರತಮ್ಯದ ಆಯಾಮಗಳು 233
– ಡಾ. ಕೆ ಷರೀಫಾ

3) ಕನಕದಾಸರ ಕೀರ್ತನೆಗಳಲ್ಲಿ ಜಾತಿ ತಾರತಮ್ಯದ ಆಯಾಮಗಳು 236
– ಪ್ರೊ. ಸುಮಾ ಎಸ್

ವಿಷಯ: ಸಾಂಸ್ಕೃತಿಕ ರಾಜಕಾರಣವನ್ನು ನಿರಚನಗೊಳಿಸುವ ಗುರಿ ಹಾಗೂ ದಾರಿಗಳು (ಕನಕರ ಕೃತಿಗಳಲ್ಲಿ ಬಳಕೆಯಾದ ವೃತ್ತಿಸೂಚಕ ಪದಗಳು– ಸಾಮಾಜಿಕ ಸ್ವರೂಪ)

ಪ್ರಬಂಧ: ಕನಕನ ಪರಿಭಾಷೆ: ಸಾಂಸ್ಕೃತಿಕ ರಾಜಕಾಣವನ್ನು ನಿರಚನಗೊಳಿಸುವ ಗುರಿ ಹಾಗೂ ದಾರಿಗಳು –ಡಾ. ಮಲ್ಲಿಕಾರ್ಜುನ ಮೇಟಿ 253

ಪ್ರತಿಕ್ರಿಯೆ:

1) ವಿಷಯ ಸ್ಪಷ್ಟತೆಯನ್ನು ಅಪೇಕ್ಷಿಸುವ ಲೇಖನ 269
–ಶ್ರೀ ಹೊರೆಯಾಲ ದೊರೆಸ್ವಾಮಿ

2) ಕನಕ ಪರಿಭಾಷೆ: ನಿರ್ಮಲ ಇಲ್ಲದ ಮನಸು ಅದು ಕಜ್ಜಿ ತಿನಿಸು 274
– ಡಾ. ಹೆಚ್.ಟಿ.ಕೃಷ್ಣಮೂರ್ತಿ

3) ಕಾವ್ಯದೊಳಗೆ ಮೈದುಂಬುವ ಇತಿಹಾಸ 272
– ಡಾ. ರಾಜಶೇಖರ್ ಮಠಪತಿ

4) ಚಿಕಿತ್ಸಕ ಬುದ್ಧಿಯ ಬರಹಗಾರರಿಗೆ ದಕ್ಕದ ಅನುಭಾವಿಯ ನುಡಿಗಳು 277
–ಬಸವರಾಜಸ್ವಾಮಿ ರಾಯಚೂರು

# ಭಾಗ–1

# ಕನಕರ ನಿರೂಪಣೆಗಳಲ್ಲಿ ಜನಪದ ಲೋಕದೃಷ್ಟಿ

# ಕನಕನ ಸಾಹಿತ್ಯದ ಲೋಕದೃಷ್ಟಿ ಮತ್ತು ಬದಲಿ ಸಾಂಸ್ಕೃತಿಕ ರಾಜಕಾರಣದ ಸಾಧ್ಯತೆಗಳು

– ರಂಗನಾಥ್ ಕಂಟನಕುಂಟೆ

ಕನಕನನ್ನೇ ಬದಲಿಯಾದ ಪರಿಪೂರ್ಣ ಸಾಂಸ್ಕೃತಿಕ ನಾಯಕನನ್ನಾಗಿ, ಅಖಂಡವಾಗಿ, ಪ್ರಶ್ನಾತೀತವಾಗಿ ಒಪ್ಪಿಕೊಳ್ಳಲಾಗದು. ಸಾರಾಸಗಟಾಗಿ ಆತನ ವಿಚಾರಗಳನ್ನು ಸ್ವೀಕರಿಸಲೂಬಾರದು. ಎಲ್ಲ ಬರಹಗಾರರಿಗೂ ದಾರ್ಶನಿಕರಿಗೂ ಅವರದೇ ಆದಂತಹ ವ್ಯಕ್ತಿಗತ ಮಿತಿಗಳಿದ್ದಂತೆ ಕನಕನಿಗೂ ಇವೆ ಎಂಬುದನ್ನು ಮೊದಲು ನಾವು ಒಪ್ಪಿಕೊಳ್ಳಬೇಕು. ಅದನ್ನು ಒಪ್ಪಿಕೊಳ್ಳದೇ ಹೋದರೆ ಏಕಪಕ್ಷೀಯವಾದ ಮೊಂಡುವಾದಕ್ಕೆ ಇಳಿಯಬೇಕಾದ ಅನಿವಾರ್ಯತೆ ಹುಟ್ಟಿಕೊಳ್ಳುತ್ತದೆ. ಗುಣ ಪಕ್ಷಪಾತ ಸರಿ. ದೋಷ ಪಕ್ಷಪಾತ ಮಾತ್ರ ಎಂದಿಗೂ ಸರಿಯಲ್ಲ. ಕನಕನ ವಿಚಾರದಲ್ಲಿಯೂ ಇದು ನಿಜವೇ. ಕರ್ನಾಟಕದ ಇಂದಿನ ಸಾಂಸ್ಕೃತಿಕ ಸನ್ನಿವೇಶದಲ್ಲಿ ವಿಸ್ತಾರವಾದ ನೆಲೆಯಲ್ಲಿ ಕಟ್ಟಿಕೊಳ್ಳಬಹುದಾದ ಸಾಂಸ್ಕೃತಿಕ ರಾಜಕಾರಣದ ತಾತ್ವಿಕತೆಗೆ ಪೂರಕವಾಗಿ ಒದಗಿ ಬರುವ ಹಲವರಲ್ಲಿ ಕನಕನನ್ನೂ ಒಬ್ಬನನ್ನಾಗಿ ಒಪ್ಪಿಕೊಳ್ಳಬಹುದು. ಅದೂ ಕೂಡ ಸಕಾರಣವಾದ ತೀವ್ರ ವಿಮರ್ಶೆಗಳಿಂದ ಮಾತ್ರ. ಅಂತಹ ವಿಮರ್ಶೆಗಳಿಲ್ಲದೆ ಕನಕನನ್ನು ಒಪ್ಪಿಕೊಂಡರೆ ಬದಲಿ ಮತ್ತು ಜನಪರ ರಾಜಕಾರಣ ಮಾಡುವ ಆಶಯವುಳ್ಳ ಜನರು ತಪ್ಪು ತಾತ್ವಿಕ ನೆಲೆಗಳ ಬಲೆಯಲ್ಲಿ ಸಿಕ್ಕಿಕೊಳ್ಳುವ ಅಪಾಯವಿರುವ ಕಾರಣ ಕನಕನನ್ನು ವಿಮರ್ಶೆಗೆ ಒಡ್ಡಿಯೇ ಆತನಲ್ಲಿರುವ ತಾತ್ವಿಕ ಸಮಸ್ಯೆಗಳನ್ನು ಬಿಡಿಸಿಕೊಂಡು ಇಲ್ಲವೇ ಒಪ್ಪಿಕೊಂಡೇ ಆತನನ್ನು ಜನಪರ ರಾಜಕಾರಣಕ್ಕೆ ಹೊಂದಿಸಿಕೊಳ್ಳಬೇಕು. ಅಂತಹ ಪ್ರಯತ್ನವನ್ನು ಈಗಾಗಲೇ ಮಾಡಲಾಗುತ್ತಿದೆ ಎಂಬುದು ಗಮನಿಸಬೇಕಾಗಿದೆ.

ಯಾಕೆಂದರೆ ಆತ ತುಳಿದ ಮಾಧ್ವ ಮತದ ವೈದಿಕ ಭಕ್ತಿಪಂಥದ ಹಾದಿಯೇ ಇಂದಿಗೆ ಸಮಸ್ಯಾತ್ಮಕವಾದುದು. ಇದೂ ಕೂಡ ಇಂದು ನಮ್ಮ ತಾತ್ವಿಕ ನೆಲೆಗಳಲ್ಲಿ ನಿಂತು ನೋಡುವ ಎದುರುಗೊಳ್ಳುವ ಆಶಯದಿಂದಲೇ ಎತ್ತುವ ಪ್ರಶ್ನೆ. ಹಾಗೆ ಇದು ಭಿನ್ನ ಕಾಲಘಟ್ಟದಲ್ಲಿ ನಿಂತು ಯೋಚಿಸುವಾಗಲೂ ಅದು ಸಮಸ್ಯೆಯೇ. ಯಾಕೆಂದರೆ ಕನಕನನ್ನು ನಾವು ಇಂದು ಎದುರುಗೊಂಡು ಒಗ್ಗಿಸಿಕೊಳ್ಳುತ್ತಿರುವುದು ಆತನ ಕಾಲಕ್ಕಲ್ಲ. ನಮ್ಮ ಕಾಲಕ್ಕೆ. ನಮ್ಮ ಸಮಾಜದ ಇಂದಿನ ಅಗತ್ಯಕ್ಕೆ. ಮತ್ತು ಮುಂದೆ ನಮ್ಮ ಸಮಾಜ ತುಳಿಯಬೇಕಾಗಿರುವ ಅಗತ್ಯಕ್ಕೆ ತಕ್ಕಂತೆ ನಮ್ಮ ಸಾಮಾಜಿಕ ಮೌಲ್ಯಗಳನ್ನು ರೂಪಿಸಬೇಕಾಗಿರುವ ಕಾರಣಕ್ಕೆ. ಆದ್ದರಿಂದ ಇಂದಿನ ಅಗತ್ಯದ ದೃಷ್ಟಿಯಿಂದಲೇ ಪ್ರಶ್ನೆಗಳನ್ನು ಎತ್ತುತ್ತ ಕನಕನನ್ನು ಇಂದಿಗೆ ಒಗ್ಗಿಸಿಕೊಳ್ಳಬೇಕಾಗಿದೆ. ಎಷ್ಟು ಒದಗಿ ಬರುತ್ತಾನೋ ಅಷ್ಟನ್ನು ಮಾತ್ರವೇ ಒಗ್ಗಿಸಿಕೊಳ್ಳಬೇಕಿದೆ. ಅತಿಯಾದ ನಿರೀಕ್ಷೆಯಿಂದ ಜಗ್ಗಿದರೂ ಅದು ಸರಿಯಲ್ಲ. ಒಮ್ಮೊಮ್ಮೆ ಆತನಿಂದ ಅತಿಯಾಗಿ ನಿರೀಕ್ಷಿಸಲಾಗುತ್ತಿದೆ ಎನ್ನಿಸುತ್ತದೆ. ಇಲ್ಲದ್ದನ್ನು ಬಯಸಿ ಅತಿ ಅರ್ಥಗಳಿಗೂ ಕಾರಣವಾಗಬಹುದು. ಮತ್ತು ಅವನಲ್ಲಿರುವ ತಾತ್ವಿಕ ಭಿನ್ನತೆಗಳ ಕಾರಣಕ್ಕಾಗಿ ಭಿನ್ನಮತ ತೋರಿ ಹೊರಗುಳಿಸಲೂಬಹುದು.

ಆದರೆ ಅದು ನಮಗೇ ನಷ್ಟವಾಗುವ ಸಂಗತಿ. ನಾವು ಇಂದು ಯಾವುದೇ ಬದಲಿ ಚಿಂತನೆಗಳನ್ನು ರೂಪಿಸಿಕೊಳ್ಳುವಾಗಲೂ ಕೂಡ ನಾವು ಪರಂಪರೆಯ ಜೊತೆಗೆ ಮುಖಾಮುಖಿಯಾಗುತ್ತಲೇ ಅದರಿಂದ ಕಲಿಯುತ್ತಲೇ ಮುಂದುವರಿಯಬೇಕು. ಯಾಕೆಂದರೆ ನಮ್ಮ ಪೂರ್ವ ಸೂರಿಗಳು ಈಗಾಗಲೇ ಬದಲಿ ಸಾಂಸ್ಕೃತಿಕ ಚಿಂತನೆಗಳ ಸಾಧ್ಯತೆಗಳ ಬಗೆಗೆ ಯೋಚಿಸಿ ಕ್ರಿಯಾಶೀಲರಾಗಿ ಕೆಲಸ ಮಾಡಿರುವ ಕಾರಣ ಅವರಲ್ಲಿರುವ ಒಳ್ಳೆಯ ಸಂಗತಿಗಳನ್ನು ಕಲಿತೇ ಮುಂದೆ ಸಾಗಬೇಕು. ಹಾಗೆಂದು ಅವರನ್ನು ಯಾವುದೋ ಅಭಿಮಾನಕ್ಕಾಗಿ ಪ್ರಶ್ನಾತೀತವಾಗಿ ಒಪ್ಪಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಯಾವುದೇ ಬರೆಹಗಾರರಲ್ಲಿಯಾದರೂ ವ್ಯಕ್ತಿಗತ ಕಾರಣಕ್ಕೆ ಮತ್ತು ಕಾಲಧರ್ಮದ ಕಾರಣಕ್ಕೆ ಅವರದೇ ಆದ ತಾತ್ವಿಕ ಸಮಸ್ಯೆಗಳು ಬಿಕ್ಕಟ್ಟುಗಳು ಇದ್ದೇ ಇರುತ್ತವೆ. ಕಾಲದ ಕೊನೆಯ ತುದಿಯಲ್ಲಿ ನಿಂತು ಹಿಂದಿನದನ್ನು ಎದುರುಗೊಳ್ಳುವಾಗ ಇಂತಹ ಬಿಕ್ಕಟ್ಟುಗಳು ಕಾಣುವುದು ಸಹಜವೇ ಆಗಿರುತ್ತದೆ. ಇಪ್ಪತ್ತೊಂದನೆಯ ಶತಮಾನದ ಎರಡನೆಯ ದಶಕದಲ್ಲಿ ನಿಂತು ಹದಿನೈದು ಹದಿನಾರನೆಯ ಶತಮಾನದ ಕನಕನನ್ನು ಆತನ ಸಾಹಿತ್ಯ ಚಿಂತನೆಗಳನ್ನು ಎದುರುಗೊಳ್ಳುವಾಗ ಸಹಜವಾಗಿಯೇ ಪ್ರಶ್ನೆಗಳು ಏಳುತ್ತವೆ. ಕನಕ ಮತ್ತು ನಮ್ಮ ಕಾಲದ ನಡುವೆ ಸುಮಾರು ಐದುನೂರು ವರುಶಗಳ ಅಂತರವಿದ್ದು ಈ ನಡುವೆ ಸಾಮಾಜಿಕ ಮೌಲ್ಯಗಳಲ್ಲಿ ಸಾಕಷ್ಟು ಪಲ್ಲಟಗಳಾಗಿವೆ. ಊಳಿಗಮಾನ್ಯ ಸಮಾಜ ವ್ಯವಸ್ಥೆ ತನ್ನ ಮೂಲರಚನೆಯಲ್ಲಿ ಛಿದ್ರವಾಗಿ ಪ್ರಜಾತಂತ್ರ ವ್ಯವಸ್ಥೆಯೊಂದು ತೋರಿಕೆಗಾದರೂ ರೂಪುಗೊಂಡಿದೆ. ನೈಜ ಪ್ರಜಾತಂತ್ರದ ಸಮಾಜ ಇನ್ನೂ ಪೂರ್ಣವಾಗಿ ನಮ್ಮ ಸಮಾಜದಲ್ಲಿ ರೂಪುಗೊಳ್ಳದೇ ಇದ್ದರೂ

ಅಂತಹದೊಂದು ಸಮಾಜ ರೂಪುಗೊಳ್ಳಬೇಕೆಂಬ ಆಶಯವಿದೆ. ಕನಸಿದೆ. ಆ ದಿಕ್ಕಿನಲ್ಲಿ ಸಮಾಜದ ಒಂದು ಚಿಕ್ಕ ಗುಂಪಾದರೂ ಯೋಚಿಸುತ್ತಿದೆ. ಅದು ನಮ್ಮ ಸಾಹಿತ್ಯದ ಸಾಮಾಜಿಕ ರಾಜಕೀಯ ಚರ್ಚೆಯ ಮೂಲಕವಾದರೂ ವ್ಯಕ್ತವಾಗುತ್ತಿದೆ. ಅಂತಹ ಚರ್ಚೆಗಳು ಪ್ರಜಾತಂತ್ರದ ಮೌಲ್ಯಗಳನ್ನು ಕುರಿತ ಚರ್ಚೆಗಳನ್ನು ಬೆಳೆಸುತ್ತ ಜಡ ಸಮಾಜದ ಮೌಲ್ಯಗಳನ್ನು ಪಲ್ಲಟಿಸುವ ಕೆಲಸ ಮಾಡುತ್ತಿದೆ. ಅನೇಕ ಸಂದರ್ಭದಲ್ಲಿ ಅವು ರಾಜಕೀಯ ಪಕ್ಷಗಳ ಪ್ರಣಾಳಿಕೆಗಳ ಕಾರ್ಯಕ್ರಮಗಳೂ ಆಗುತ್ತಿವೆ. ದಲಿತ, ಶೋಷಿತ ಜಾತಿಗಳಿಗೆ ಮಹಿಳೆಗೆ ದೊರೆಯುವ ಮೀಸಲಾತಿ ಯೋಜನೆಗಳು, ವಿಶೇಷ ಆರ್ಥಿಕ ಯೋಜನೆಗಳು ಮತ್ತು ಮೂಲಭೂತ ಹಕ್ಕುಗಳ ರಕ್ಷಣೆಯ ಕಾಯ್ದೆಗಳ ಅಸ್ತಿತ್ವಕ್ಕೆ ಬಂದಿರುವುದು ಇಂತಹ ಚರ್ಚೆಗಳ ಫಲಿತವೇ ಆಗಿವೆ.

ಹೀಗಿರುವಾಗ ಈ ಕಾಲದ ಸಾಮಾಜಿಕ ಸಾಹಿತ್ಯಕ ಮೌಲ್ಯಗಳಿಗೂ ಕನಕನ ಕಾಲದ ಸಾಮಾಜಿಕ ಮೌಲ್ಯಗಳಿಗೂ ಸಹಜವಾಗಿಯೇ ಭಿನ್ನತೆಗಳಿರಲು ಸಾಧ್ಯ. ಹಾಗೆಂದು ಸಂಪೂರ್ಣವಾದ ಭಿನ್ನತೆಯೂ ಅಲ್ಲದ ಸಂಪೂರ್ಣವಾಗಿ ಸಹಮತ ವ್ಯಕ್ತಗೊಳಿಸಲು ಸಾಧ್ಯವಿರುವಂತಹದೂ ಅಲ್ಲದ ಸಂಗತಿಗಳಿವೆ. ಅಂದು ಕನಕ ಎತ್ತಿದ ಕೆಲವು ಪ್ರಶ್ನೆಗಳು ಇಂದಿಗೂ ಬಗೆ ಹರಿಯದೆ ನಮ್ಮ ಸಮಾಜದ ಮೂಲಭೂತ ಸಮಸ್ಯೆಗಳಿಗೆ ಸಂಬಂಧಿಸಿದ ಕೆಲವು ವಿಚಾರಗಳು ಮಾತ್ರ ಪ್ರಸ್ತುತವಾಗಿದ್ದು ಅಂತಹ ವಿಚಾರಗಳಲ್ಲಿ ಮಾತ್ರ ನಾವು ಕನಕನನ್ನು ಆಧರಿಸಿ ಆತನ ಬೆನ್ನುಹತ್ತಿ ಹೋಗಬಹುದಾಗಿದೆ. ಉದಾಹರಣೆಗೆ ಕನಕ ಜಾತಿ-ಕುಲಗಳ ಬಗೆಗೆ ಎತ್ತಿದ ಪ್ರಶ್ನೆಗಳು ಮತ್ತು ಬಡವ-ಬಲ್ಲಿದರ ಬಗೆಗೆ ಎತ್ತಿದ ಪ್ರಶ್ನೆಗಳು ಇಂದಿಗೂ ಬಹಳ ಮಹತ್ವದವು. ಜಾತಿ ಮತ್ತು ವರ್ಗಗಳ ಅಸಮಾನತೆಗಳು ಅಸ್ತಿತ್ವದಲ್ಲಿ ಇರುವ ಅಷ್ಟು ಕಾಲವೂ ಕನಕನ ಈ ಕುರಿತ ರಚನೆಗಳಿಗೆ ಮಹತ್ವ ಇದ್ದೇ ಇರುತ್ತದೆ. ಈ ಕಾರಣಕ್ಕಾಗಿಯೇ ಇಂದಿಗೂ ಕನಕನ ಜಾತ್ಯತೀತ ವಿಚಾರಗಳಿಗೆ ಮಹತ್ವವಿದ್ದು ಜಾತಿ-ವರ್ಗಗಳನ್ನು ಮೀರಿದ ಸಮಾಜವನ್ನು ಕಟ್ಟಿಕೊಳ್ಳುವ ಪ್ರಯತ್ನಗಳ ಭಾಗವಾಗಿ ನಡೆಯುವ ಬದಲಿ ಜನಪರ ರಾಜಕಾರಣ ಮಾಡುವಾಗ ಕನಕನ ಜನರ ನೆರವಿಗೆ ಬರುತ್ತಾನೆ. ಅಲ್ಲದೆ ಜಾತಿ-ಕುಲ, ಬಡತನದ ಸಮಸ್ಯೆಗಳು ನಮ್ಮ ಸಮಾಜದ ಮೂಲಭೂತ ರಚನೆಯನ್ನು ಆಧರಿಸಿದ್ದು ಅಂತಹ ರಚನೆಯನ್ನು ನಾವು ಸಂಪೂರ್ಣವಾಗಿ ಬದಲಿಸಿಕೊಳ್ಳಲಾಗಿಲ್ಲ. ಅವು ಇಂದಿಗೂ ಸಮಾಜವನ್ನು ಬಾಧಿಸುತ್ತಲೇ ಇವೆ. ಸಮಾಜದ ಕಟ್ಟಕಡೆಯಲ್ಲಿರುವ ದಲಿತ ಸಮಾಜವನ್ನು ತುಳಿಯಲಾಗುತ್ತಿದೆ. ದಲಿತರು ಮಾತ್ರವಲ್ಲ ನಮ್ಮ ಶ್ರೇಣೀಕೃತ ಜಾತಿವ್ಯವಸ್ಥೆಯಲ್ಲಿ ಯಾವ ಜಾತಿ ಮೇಲುಸ್ತರದಲ್ಲಿರುತ್ತದೆಯೋ ಅದು ತನಗಿಂತ ಕೆಳಸ್ತರದಲ್ಲಿರುವ ಜಾತಿಯನ್ನು ತುಳಿಯುತ್ತದೆ. ದಲಿತರಲ್ಲಿಯೇ ತಮಗಿಂತ ಕೆಳಸ್ತರದಲ್ಲಿರುವ ಜಾತಿಯನ್ನು ತುಳಿಯುವ ಪದ್ಧತಿಯಿದೆ. ಅಂದರೆ ವಚನಕಾರರು ಕೀರ್ತನಕಾರರು ಇತ್ಯಾದಿಗಳು ಒಂಬೈನೂರು ವರುಶಗಳಿಂದಲೂ ಜಾತಿ ವ್ಯವಸ್ಥೆಯ ವಿರುದ್ಧ ದನಿಯೆತ್ತುತ್ತ ಹೋರಾಡುತ್ತ ಬರುತ್ತಿದ್ದರೂ ಆ ವ್ಯವಸ್ಥೆಯ ಬೇರುಗಳನ್ನು

ಪೂರ್ಣವಾಗಿ ನಾಶಮಾಡಲಾಗಿಲ್ಲ. ಬದಲಿಗೆ ಜಾತಿಯ ವಿರುದ್ಧ ಧ್ವನಿಯೆತ್ತಿದ್ದ ಬಸವಣ್ಣನ ಅನುಯಾಯಿಗಳೇ ಜಾತಿಯನ್ನು ಆಚರಿಸುವ ಜಾತಿ-ಕುಲಗಳನ್ನು ಪ್ರಶ್ನಿಸಿದ ಕನಕನ ಅಭಿಮಾನಿಗಳೇ ಜಾತಿಯತೆ ಆಚರಿಸುವ ಪದ್ಧತಿಗಳು ಬೆಳೆದಿವೆ. ಮತ್ತು ಅವು ಪ್ರಜಾಪ್ರಭುತ್ವದ ಚುನಾವಣೆಯ ರಾಜಕಾರಣದ ಆಯುಧಗಳೂ ಆಗಿ ಬಳಕೆಯಾಗುತ್ತಿವೆ. ಇದು ಆತಂಕಕಾರಿ ವಿಚಾರ. ಇದು ಕನಕನ ಪರವಾದ ಕಾಳಜಿಯುಳ್ಳವರು ಹೆಚ್ಚು ಯೋಚಿಸಬೇಕಾದ ಸಂಗತಿ.

ಇಂತಹ ಸಂದರ್ಭದಲ್ಲಿ ನಾವು ಬಸವಣ್ಣನ್ನೋ, ಕನಕನನ್ನೋ ಕುರಿತು ಆಲೋಚಿಸುವ ಇಂತಹ ಅಪಾಯಗಳನ್ನು ಗಮನಿಸುತ್ತಲೇ ಅವರು ಸಮಾಜಕ್ಕೆ ನೀಡಿದ ಚಿಂತನೆಗಳನ್ನು ನಿಕಶಕ್ಕೆ ಒಡ್ಡಿ ನಮ್ಮ ಪ್ರಜಾತಾಂತ್ರಿಕ ಮೌಲ್ಯಗಳ ಬೆಳವಣಿಗೆಗೆ ಪೂರಕವಾಗಿ ಬಳಸಿಕೊಳ್ಳಬೇಕಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಜಾತಿ, ಮತ, ಧರ್ಮ, ಭಾಷೆ, ಲಿಂಗ, ವರ್ಗ ಇತ್ಯಾದಿಗಳ ನೆಲೆಯಲ್ಲಿ ಆಚರಣೆಯಾಗುತ್ತಿರುವ ಅಸಮಾನತೆಯನ್ನು ಒಪ್ಪದೆ ತಾತ್ವಿಕವಾಗಿ ಸಂವಿಧಾನದ ರೂಪದಲ್ಲಿ ಅವುಗಳನ್ನು ನಿಷೇಧಿಸಲಾಗಿದೆ. ಆದರೆ ವಾಸ್ತದಲ್ಲಿ ಬಸವಣ್ಣ, ಕನಕ ಮುಂತಾದವರು ಬದುಕಿ ಬಾಳಿದ ಊಳಿಗಮಾನ್ಯಶಾಹಿ ಸಮಾಜದ ಮೌಲ್ಯಗಳಾದ ಜಾತಿಯತೆ, ಅಸ್ಪೃಶ್ಯತೆ ಮತ್ತು ಪುರುಷಾಧಿಪತ್ಯಗಳು ಇಂದಿಗೂ ಸಮಾಜದಲ್ಲಿ ಉಳಿದಿವೆ. ಅಂದರೆ ಜಾತಿವಾದಿಗಳ ಜಾತಿಮೂಲಭೂತವಾದ ಮತ್ತು ಗಂಡಾಳ್ವಿಕೆಯ ಗಂಡು ಮೂಲಭೂತವಾದಗಳು ಮತ್ತೂ ಗಟ್ಟಿಯಾಗಿ ಮೂಲಭೂತವಾದಿಯಾದ ಆಕ್ರಮಣಕಾರಿ ಗುಣವನ್ನು ಪಡೆದುಕೊಳ್ಳುತ್ತಿವೆ. ಮತ್ತು ಅವು ಆಕ್ರಮಣಕಾರಿ ಗುಣವನ್ನು ಪಡೆದುಕೊಂಡು ಸಮಾಜದಲ್ಲಿ ಜಾತಿಕಲಹಗಳು, ಹತ್ಯೆಗಳು, ಸಾಮಾಜಿಕ ಬಹಿಷ್ಕಾರಗಳು ನಡೆಯುತ್ತಿವೆ. ಇದಕ್ಕೆ ಹಿಂದೂ ಕೋಮುವಾದ ಮತ್ತಷ್ಟು ಎಣ್ಣೆತುಪ್ಪ ಸುರಿಯುತ್ತಿದೆ. ಇಂತಹ ಹೊತ್ತಿನಲ್ಲಿ ನಮಗೆ ಅಂಥವರನ್ನು ವಿರೋಧಿಸಲು ಸಮುದಾಯಗಳ ಒಳಗಿನ ಕನಕನಂತಹ ತೋರುದೀಪಗಳು ಹೆಚ್ಚು ಸಹಾಯ ಮಾಡಬಲ್ಲ ಸಾಧ್ಯತೆಗಳಿರುತ್ತವೆ. ಅಂತಹ ತೋರುದೀಪಗಳಲ್ಲಿ ಒಬ್ಬನಾಗಿ ಕನಕನೂ ಒದಗಿ ಬರುತ್ತಾನೆ. ಕನಕನ ಅಭಿಮಾನಿಗಳು ನಡೆಸುವ ಜಾತಿಯತೆಯನ್ನು ಕನಕನ ವಿಚಾರಗಳಿಂದ ತೋರಿಸಿಕೊಡುವ ಸಾಧ್ಯತೆಯಿರುವ ಕಾರಣ ಇಂದಿನ ಜನಪರ ರಾಜಕಾರಣಕ್ಕೆ ಜಾತಿ ವಿರೋಧದ ಹೋರಾಟಗಳಲ್ಲಿ ಕನಕ ಹೆಚ್ಚು ಮಹತ್ವದವನಾಗಿ ಕಾಣುತ್ತಾನೆ. ಜಾತ್ಯತೀತ ಸಮಾಜವನ್ನು ಕಟ್ಟಬೇಕೆನ್ನುವ ಎಲ್ಲ ಜನರಿಗೂ ಕನಕ ಬೇಕಾಗುತ್ತಾನೆ.

ಅಂತಹ ಮಹತ್ವವನ್ನು ಅರಿತ ಕನ್ನಡಿಗರು ಈಗಾಗಲೇ ಕನಕನ್ನು ಸಾರ್ವಜನಿಕ ಚರ್ಚೆಗಳಲ್ಲಿ ಇಪ್ಪತ್ತನೆಯ ಶತಮಾನದಲ್ಲಿ ಬಳಸಿಕೊಂಡಿದ್ದಾರೆ. ಇತರೆ ಕೀರ್ತನಕಾರರಿಗಿಂತ ಕನಕನನ್ನು ಹೆಚ್ಚು ಉಲ್ಲೇಖಿಸಿ ಸಾಮಾಜಿಕ ವಿಚಾರಗಳನ್ನು ಚರ್ಚಿಸಿದ್ದಾರೆ. ಅದರಲ್ಲಿಯೂ ಕೀರ್ತನಕಾರರ ಸಾಮಾಜಿಕ ನಿಲುವನ್ನು ಚರ್ಚಿಸುವಾಗಲಂತೂ ಕನಕನನ್ನು ಬಿಟ್ಟು ಚರ್ಚಿಸಲು ಸಾಧ್ಯವೇ ಇಲ್ಲ ಎನ್ನುವಷ್ಟು

ಆತನನ್ನು ಬಳಸಲಾಗಿದೆ. ಈಗ ಮತ್ತಷ್ಟು ಕನಕನ್ನು ಜನಪ್ರಿಯಗೊಳಿಸುವ ಕೆಲಸ ನಡೆಯುತ್ತಿದೆ. ಕನಕ ಅಧ್ಯಯನ ಕೇಂದ್ರದ ಕಾರ್ಯಕ್ರಮಗಳು; ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿರುವ ಕನಕ ಪೀಠಗಳು ಈ ವಿಚಾರದಲ್ಲಿ ಹೆಚ್ಚು ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿವೆ. ಕನಕನ ಜನಪರ ಕಾಳಜಿಯನ್ನು ವಿಚಾರಗಳನ್ನು ಆತನ ಜೀವನವನ್ನು ತೋರಿಸಿಕೊಡುವ ಕೆಲಸಗಳು ಸಾಕಷ್ಟು ನಡೆಯುತ್ತಿವೆ. ಇತರೆ ಕೀರ್ತನಕಾರರಿಗಿಂತ ಹಾಗೂ ಇತರೆ ಸಂತರಿಗಿಂತಲೂ ಹೆಚ್ಚು ಕನಕನು ಕರ್ನಾಟಕದ ಸಾಂಸ್ಕೃತಿಕ ನಾಯಕನಾಗಿ ಇತ್ತೀಚಿನ ದಿನಗಳಲ್ಲಿ ಚರ್ಚೆಯಲ್ಲಿದ್ದಾನೆ. ಇದರ ನಡುವೆಯೇ ಆತನ ಜಾತಿಯ ಕಾರಣಕ್ಕಾಗಿ ಚುನಾವಣೆಯ ರಾಜಕಾರಣದ ಕಬಂಧ ಬಾಹುಗಳು ಆತನನ್ನು ಅಪ್ಪಿಕೊಂಡಿದ್ದು ಜಾತಿ ಮೀರಿದವನನ್ನು ಜಾತಿಗೆ ಮಿತಿಗೊಳಿಸುವ ಕೆಲಸವನ್ನು ಮಾಡುತ್ತಿವೆ. ಬಸವಣ್ಣ ಲಿಂಗಾಯಿತರ ಸ್ವತ್ತಾದಂತೆ ಕನಕ ಕುರುಬರ ಸ್ವತ್ತು ಎಂದು ದೂರುವ ಅಪಾಯವಿದೆ. ಇಂತಹ ಅಪಾಯದಿಂದ ಕನಕ, ಬಸವಣ್ಣನಂತಹವರನ್ನು ಮೊದಲು ಬಿಡುಗಡೆಗೊಳಿಸಬೇಕು. ಆಗ ಮಾತ್ರ ಅವರು ಜನಪದರ ಲೋಕದೃಷ್ಟಿಗೆ ದಕ್ಕುತ್ತಾರೆ. ಜನರ ನಾಯಕರಾಗಿ ಉಳಿಯುತ್ತಾರೆ. ಅವರು ರಾಜಕೀಯ ಪಕ್ಷಗಳ ಐಕಾನ್‌ಗಳಾಗಿ ಬಳಕೆಗೊಳ್ಳುವ ಬದಲು ಜನರ ವೈಚಾರಿಕ ಪ್ರಜ್ಞೆಯ ತೋರುದೀಪಗಳಾಗಿ ಉಳಿಯಬೇಕು. ಇಲ್ಲವಾದರೆ ಬಲಿಷ್ಠ ವರ್ಗದ ರಾಜಕೀಯ ಹುನ್ನಾರಕ್ಕೆ ಸಿಕ್ಕಿ ಅವರ ಬಗೆಗೆ ಸಮಾಜದಲ್ಲಿ ಪೂರ್ವಗ್ರಹ ಬೆಳೆದು ಜನರ ಲೋಕದೃಷ್ಟಿಯಿಂದ ದೂರ ಸರಿಯುವ ಸಾಧ್ಯತೆಗಳಿರುತ್ತವೆ. ಇಲ್ಲವೇ ಮೌಢ್ಯದಿಂದ ಅವರನ್ನು ದೇವರಂತೆ ಆರಾಧಿಸುವ ಭಾವನೆ ಬೆಳೆಯುತ್ತದೆ. ಹಣ್ಣು ಕಾಯಿ ಬಡಿದು ಪೂಜೆ ಮಾಡಲಾಗುತ್ತದೆ. ಇರಲಿ. ಇದು ಬೇರೆಯದೇ ಚರ್ಚೆಯ ಸಂಗತಿ.

ಮುಖ್ಯವಾಗಿ ಕನಕ ತನ್ನ ಕೀರ್ತನೆಗಳು ಮತ್ತು ಸಾಹಿತ್ಯ ಕೃತಿಗಳ ಮೂಲಕ ಮಂಡಿಸಿದ ವಿಚಾರಗಳು ಈಗಾಗಲೇ ಜನಪ್ರಿಯವಾಗಿರುವುದು ಎಲ್ಲರಿಗೂ ತಿಳಿದ ವಿಚಾರವೇ. ಆತನು ಕನ್ನಡಕ್ಕೆ, ಭಾರತೀಯ ಸಾಹಿತ್ಯಕ್ಕೆ ಮತ್ತು ವಿಶ್ವಸಾಹಿತ್ಯಕ್ಕೆ ಕೊಟ್ಟ ವಿಶಿಷ್ಟ ರೂಪಕ 'ರಾಮಧಾನ್ಯ'ದ ರೂಪಕ. ಅದು ರಾಮನ ಮಹಿಮೆಯನ್ನು, ಆತನ ನ್ಯಾಯಪರಿಕಲ್ಪನೆಯನ್ನು ಮತ್ತು ರಾಗಿಯ ಅಂದರೆ ದುಡಿವ ಬಡಜನರ ಕಸುವನ್ನು ಏಕಕಾಲಕ್ಕೆ ಮಂಡಿಸಿದ ಜನಪದರ ಜನಪರ ಲೋಕದೃಷ್ಟಿಯುಳ್ಳ ರಚನೆ. ಈ ಬಗೆಗೂ ಸಾಕಷ್ಟು ಚರ್ಚೆಯಾಗಿದೆ. ಅನೇಕರು ವ್ಯಾಪಕವಾಗಿ ಬರೆದಿದ್ದಾರೆ. ಬಹುಶಹ ಇಲ್ಲಿ ಹೊಸದಾಗಿ ಹೇಳಬೇಕಾದ ವಿಚಾರವೇನೂ ಉಳಿದಿಲ್ಲ ಎನ್ನುವಷ್ಟು ಆ ಬಗೆಗೆ ಚರ್ಚೆಯಾಗಿದೆ. ಆದರೆ ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ರಾಮಧಾನ್ಯ ಚರಿತೆಯಲ್ಲಿ ವ್ಯಕ್ತವಾಗಿರುವಂತೆ ಆರೋಗ್ಯವಂತರ ಆಹಾರವಾಗಿ ರಾಗಿ ಇಂದು ಉಳಿದಿಲ್ಲ. ರಾಗಿಯೇ ಭತ್ತವನ್ನು ಕುರಿತು ಲೇವಡಿ ಮಾಡಿದಂತೆ ರಾಗಿಯೂ ಇಂದು ರೋಗಿಗಳ ಆಹಾರವಾಗಿ ಬದಲಾಗಿದೆ. ರಾಗಿಯ ಜಾಗವನ್ನು ಅಕ್ಕಿ ಆಕ್ರಮಿಸಿಕೊಂಡಿದೆ. ಅಕ್ಕಿ ಆರೋಗ್ಯವಂತರಿಗೂ ರಾಗಿ ರೋಗಿಗಳು

ಬಳಸುವ ಆಹಾರ ಎಂಬಂತೆಯೂ ಇಂದಿನ ಸನ್ನಿವೇಶ ಬದಲಾಗಿದೆ. ಅಂದರೆ ಕನಕ ಕೊಟ್ಟಿದ್ದ ರೂಪಕದ ಅರ್ಥ ಇಂದು ಪಲ್ಲಟಗೊಳ್ಳುವ ಹಾದಿಯಲ್ಲಿ ಸಾಗಿದೆ. ಅಕ್ಕಿಯ ಮಾರುಕಟ್ಟೆಯ ರಾಜಕಾರಣ ರಾಗಿಯ ಜಾಗವನ್ನು ಕಸಿದುಕೊಂಡಿದೆ.

ಹಾಗೆಯೇ ಕನಕ ಮಂಡಿಸಿದ ಜಾತಿ-ಕುಲಗಳನ್ನು ಕುರಿತಾದ ವಿಚಾರಗಳೂ ಅಷ್ಟೇ. ಈ ಕುರಿತಾದ ಕೀರ್ತನೆಗಳು ಸಾಕಷ್ಟು ಚರ್ಚೆಯಾಗಿವೆ. ಈಗ ನಮ್ಮ ಮುಂದೆ ಇರುವುದು ಇಷ್ಟು ಹುಲುಸಾದ ಕನಕನ ಮತ್ತು ಅವನ ಕುರಿತಾದ ಬರೆಹಗಳಲ್ಲಿ ಇರುವ ವಿಚಾರಗಳು ನಮ್ಮ ಇಂದಿನ ಅಗತ್ಯಕ್ಕೆ ಎಷ್ಟು ಪ್ರಸ್ತುತ ಎಂಬುದನ್ನು ತೀವ್ರವಾದ, ತಾತ್ವಿಕವಾದ ಚರ್ಚೆಗೆ ಒಳಪಡಿಸುವ ಅಗತ್ಯವಿದೆ ಎನ್ನಿಸುತ್ತದೆ. ಯಾಕೆಂದರೆ ಕನಕನ ಕುರಿತಾದ ಎಷ್ಟೋ ಬರೆಹಗಳು ವಿವರಣೆಯ ಮಾದರಿಯವು. ಅವನ ಬರೆಹಗಳಲ್ಲಿನ ವಿವರಗಳನ್ನು ಮತ್ತೆ ವಿವರಿಸಿಕೊಡುವ ಕೆಲಸ ಮಾಡಲಾಗಿದೆ. ಇಲ್ಲವೆ ಅಭಿಮಾನದಿಂದ ಬರೆಹ ಮಾಡಿರುವಂತಹವು. ಇನ್ನು ಎಷ್ಟೋ ಬರೆಹಗಳು ಒಂದರ ಪುನರುತ್ಪತ್ತಿಯಾಗಿವೆ. ಇಂತಹ ಪುನರುತ್ಪಾದನೆಯ ಸಮಸ್ಯೆಯನ್ನು ನಿವಾರಿಸಬೇಕಿದೆ. ಇಲ್ಲವೇ ಪೂರ್ಣವಾಗಿ ನಿಲ್ಲಿಸಬೇಕಿದೆ. ಬದಲಿಗೆ ಕನಕನು ಮಂಡಿಸಿದ ವಿಚಾರಗಳ ಇಡಿಯಾದ ತಾತ್ವಿಕ ನೆಲೆಗಟ್ಟು ಯಾವುದು? ಅದರಲ್ಲಿ ಕನಕನ ವಿಚಾರಗಳು ನಮಗೆಷ್ಟು ಪ್ರಸ್ತುತ? ಎಂಬ ಪ್ರಶ್ನೆಗಳನ್ನು ಕೇಳಿಕೊಂಡು ವಿವರಣೆ ಮತ್ತು ಪುನರುತ್ಪಾದನೆಯ ಬಿಕ್ಕಟ್ಟಿನಿಂದ ಬಿಡುಗಡೆಗೊಂಡು ತಾತ್ವಿಕ ವಾಗ್ವಾದಕ್ಕೆ ತೊಡಗಬೇಕು. ಬದಲಿಗೆ ಕನಕನ ಅಪಾರವಾದ ಸಾಹಿತ್ಯದಲ್ಲಿ 'ನಮಗೆ ಬೇಕಾದ ಭಾಗಗಳನ್ನು' ಮಾತ್ರ ಆರಿಸಿಕೊಂಡು ನಮಗೆ ಬೇಕಾದಂತೆ ಆತನನ್ನು ಚಿತ್ರಿಸುವ ಕೆಲಸವನ್ನು ಮಾಡಬಾರದು. ಯಾವುದೇ ದಾರ್ಶನಿಕನ ಚಿಂತನೆ ಪಾರ್ಶ್ವಿಕವಾದ ಅಧ್ಯಯನ ಪರಿಪೂರ್ಣವಾಗುವುದಿಲ್ಲ. ಅಂತಹ ವ್ಯಕ್ತಿತ್ವದ ಪೂರ್ಣ ಚಿತ್ರಣವೂ ಸಿಗುವುದಿಲ್ಲ. ಅಲ್ಲದೆ ಯಾವುದೇ ದಾರ್ಶನಿಕರು ನಿರ್ದಿಷ್ಟ ಕಾಲದಲ್ಲಿ ಬದುಕಿ ಬಾಳಿ ಅದನ್ನು ತಮ್ಮ ಸಾಹಿತ್ಯದ ರೂಪದಲ್ಲಿ ಮರುಕಟ್ಟಿದವರೇ ಆದ್ದರಿಂದ ಅದರಿಂದ ಪ್ರಭಾವಿತರೂ ಆಗಿರುತ್ತಾರೆ. ಆಯ್ಕೆ ಮಾಡಿ ಬೇಕಾದ ಹಾಗೆ ದಾರ್ಶನಿಕರೊಬ್ಬರನ್ನು ಅಧ್ಯಯನ ಮಾಡುವುದರಿಂದ ನಮ್ಮ ಸಾಂಸ್ಕೃತಿಕ ಅಧ್ಯಯನಗಳಿಗೆ ಹಾನಿಯಾಗುವುದು. ಯಾಕೆಂದರೆ ಒಬ್ಬರ ಅಧ್ಯಯನ ಕೇವಲ ಅವರ ಬರೆಹದ ಅಧ್ಯಯನವಾಗಿರುವುದಿಲ್ಲ. ಅದು ಒಂದು ಕಾಲಮಾನದ ಸಾಮಾಜಿಕ ಸೈದ್ಧಾಂತಿಕ ಚಿಂತನೆಗಳ ಅಧ್ಯಯನವೂ ಆಗಿರುತ್ತದೆ. ಹಾಗಾಗಿ ನಾವು ಆರಿಸಿಕೊಂಡು ಬೇಕಾದ್ದನ್ನು ಮಾತ್ರ ಬಳಸಿದರೆ ಯಾವುದೇ ಲೇಖಕರ, ದಾರ್ಶನಿಕರ ದ್ವಂದ್ವಗಳು, ಮಾನಸಿಕ ತೊಳಲಾಟಗಳು, ವ್ಯಕ್ತಿತ್ವದ ವಿಕಾಸ ಮತ್ತು ಸಾಂಸ್ಕೃತಿಕ ಸನ್ನಿವೇಶಗಳನ್ನು ಮರುರಚಿಸಲು ಸಾಧ್ಯವಿಲ್ಲ. ಹಾಗಾಗಿ ಯಾವುದೇ ಲೇಖಕರ ಒಟ್ಟು ಬರೆಹಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಮಾತ್ರ ಅವರ ಪೂರ್ಣ ಚಿತ್ರಣ ಸಿಗುವುದು. ಇದು ಕನಕನಿಗೂ ಅನ್ವಯವಾಗುತ್ತದೆ. ಈಗ ಪ್ರಸಿದ್ಧವಾಗಿರುವ ಕನಕನ ಹತ್ತಿಪ್ಪತ್ತು ಕೀರ್ತನೆಗಳು(ಎಲ್ಲಾರು ಮಾಡುವುದು

ಹೊಟ್ಟೆಗಾಗಿ, ಕುಲಕುಲವೆನ್ನುತಿಹರು, ನೀ ಮಾಯೆಯೊಳಗೋ ನಿನ್ನೊಳು ಮಾಯೇಯೋ, ತಲ್ಲಣಿಸದಿರು.. ಇತ್ಯಾದಿ) ಮತ್ತು ರಾಮಧಾನ್ಯ ಚರಿತೆಯಿಂದ ಮಾತ್ರ ಕನಕನ ಇಡಿಯಾದ ವ್ಯಕ್ತಿತ್ವ ನಮಗೆ ಪರಿಚಯವಾಗುವುದಿಲ್ಲ. ಇದುವರೆಗೂ ಈ ಭಾಗಗಳನ್ನು ಮಾತ್ರ ಹೆಚ್ಚು ಚರ್ಚೆಗೆ ಒಡ್ಡಿ ಆತನ ಜನಪರ ಲೋಕದೃಷ್ಟಿಯನ್ನು ಚರ್ಚಿಸಲಾಗಿದೆ. ಇದು ಆತನ ಒಂದು ಆಯಾಮ ಮಾತ್ರ, ಅದಕ್ಕೂ ಮಿಗಿಲಾದ ಕಾಳಜಿ ಆತನಲ್ಲಿ ವ್ಯಕ್ತವಾಗಿರುವ ಭಕ್ತಿ–ಜ್ಞಾನ–ವೈರಾಗ್ಯ–ಆದಿಕೇಶವರ ಬಗೆಗೆ ನೂರಾರು ಕೀರ್ತನೆಗಳಲ್ಲಿ ಹರಡಿಕೊಂಡಿರುವುದನ್ನು ಗಮನಿಸಬೇಕಿದೆ. ಇವುಗಳ ಜನಪರ ಆಯಾಮ ಎಂತಹದು ಎಂಬುದನ್ನು ಅಷ್ಟಾಗಿ ಚರ್ಚೆಗೆ ಒಡ್ಡಿಲ್ಲ. ಅಂದರೆ ಕನಕನಲ್ಲಿ ವ್ಯಕ್ತವಾಗಿರುವ ಭಕ್ತಿಯ ವಿಚಾರವು ಸಮಸ್ಯಾತ್ಮಕವೆಂದೇ ಅನ್ನಿಸುತ್ತದೆ.

ಇದು ಒಂದು ನೆಲೆಯಲ್ಲಿ ಅಕಾಡೆಮಿಕ್ ಆದ ಬೌದ್ಧಿಕ ಚಟುವಟಿಕೆಯೇ ಸರಿ. ಇಂತಹ ಚಟುವಟಿಕೆಗಳ ಫಲಿತವನ್ನು ಕೇವಲ ಅಕಡೆಮಿಕ್ ವಲಯಕ್ಕೆ ಮಾತ್ರ ಸೀಮಿತಗೊಳಿಸದೆ ಅದನ್ನು ಜನಪದರ ಬಳಿಗೆ ಕೊಂಡೊಯ್ಯುವ ದಾರಿಗಳೇನು? ಎಂಬುದರ ಬಗೆಗೂ ಯೋಚಿಸಬೇಕಿದೆ. ಆ ಮೂಲಕ ಕನಕನ ಆರೋಗ್ಯಪೂರ್ಣ ಚಿಂತನೆಗಳನ್ನು ಪರ್ಯಾಯ ರಾಜಕಾರಣದ ಇಂದಿನ ನೆಲೆಗಳಿಗೆ ಪೂರಕವಾಗಿ ಹುಡುಕಿಕೊಳ್ಳಬೇಕಿದೆ. ಇಲ್ಲವಾದರೆ ಬೌದ್ಧಿಕ ಚರ್ಚೆಗಳು ಕೇವಲ ಚರ್ಚೆಯಲ್ಲಿ ಉಳಿದರೆ ಆಗ ಅಂತಹ ಚರ್ಚೆಗಳಿಂದಲೂ ಹೆಚ್ಚು ಜನರಿಗೆ ಪ್ರಯೋಜನವಿಲ್ಲದಂತೆಯೇ ಆಗುತ್ತದೆ. ಕನಕನ ಜನಪರ ವಿಚಾರಗಳು ಜನರಿಗೆ ತಲುಪದೆ ಅವು ಗ್ರಂಥಗಳಿಗೆ ಸೀಮಿತಗೊಳ್ಳುವ ಸಾಧ್ಯತೆಗಳೂ ಇವೆ. ಹಾಗಾಗಿ ವಿಮರ್ಶಾತೀತವಾಗಿ ಕನಕನನ್ನು ಇಂದು ಜನರ ಮುಂದೆ ಮಂಡಿಸುವುದು ಮತ್ತು ಗ್ರಂಥಗಳಿಗೆ ಸೀಮಿತಗೊಳಿಸುವುದು ಸಮಸ್ಯೆಯೇ ಸರಿ. ಕನಕ ಮಂಡಿಸಿದ ಜಾತ್ಯತೀತ ಮೌಲ್ಯಗಳು ಮರೆವಿಗೆ ಸರಿದು ಆತನನ್ನು ದೇವರಾಗಿ ಪೂಜಿಸುವ ಜನರೂ ಹುಟ್ಟಿಕೊಳ್ಳಬಹುದು. ಇದನ್ನು ತಪ್ಪಿಸಬೇಕಾದ ಮತ್ತು ಜನಪರವಾದ ವೈಚಾರಿಕ ಕನಕನನ್ನು ಮಾತ್ರ ಜನರ ಮುಂದೆ ಮಂಡಿಸಬೇಕಿದೆ.

ಈ ಎಲ್ಲ ವಿಚಾರಗಳ ಹಿನ್ನೆಲೆಯಲ್ಲಿ ಕನಕನನ್ನು ಎದುರುಗೊಳ್ಳುವಾಗ ಕೆಲವು ಮೂಲಭೂತ ಪ್ರಶ್ನೆಗಳನ್ನು ಇಟ್ಟುಕೊಂಡೇ ಆತನನ್ನು ಮುಖಾಮುಖಿಯಾಗಬೇಕಿದೆ. ಅಂತಹ ಕೆಲವೇ ಕೆಲವು ಪ್ರಶ್ನೆಗಳನ್ನು ಇಲ್ಲಿ ಗಮನಿಸಬಹುದಾಗಿದೆ. ಒಂದು. ಮುಖ್ಯವಾಗಿ ಭಕ್ತಿಯನ್ನು ಕುರಿತಾದುದು. ಕನಕ ತನ್ನ ಕೀರ್ತನೆಗಳ ಮೂಲಕ ಮಂಡಿಸಿರುವ ಆದಿಕೇಶವ ಮತ್ತು ಆತನ ಬಗೆಗೆ ವ್ಯಕ್ತಪಡಿಸಿರುವ ಭಕ್ತಿಯ ಪರಿಕಲ್ಪನೆಯನ್ನು ಇಂದು ವಿಮರ್ಶೆಗೆ ಒಡ್ಡಬೇಕಿದೆ. ಮುಖ್ಯವಾಗಿ ಇಲ್ಲಿ ಮಂಡಿತವಾಗಿರುವುದು ದ್ವೈತ ತತ್ವ.. ಈತನ ಈ ದ್ವೈತ ತತ್ವ ಮಾಧ್ವ ಮತದ ದ್ವೈತ ತತ್ವಕ್ಕಿಂತ ಹೇಗೆ ಭಿನ್ನ ಎಂಬುದನ್ನು ಗುರುತಿಸಿಕೊಳ್ಳಬೇಕು. ಇದು ಭಿನ್ನ ಎಂದು ಎನ್ನಿಸಿದಾಗಲೂ ಆದಿಕೇಶವನ ಸ್ತುತಿ ವೈಷ್ಣವ ಭಾಗವತ ಸಂಪ್ರದಾಯದ

ವಿಸ್ತರಣೆಯಾಗಿಯೇ ಕಾಣುತ್ತದೆ; ಇದು ನಮ್ಮ ಜನಪದ ದೈವದ ಕಲ್ಪನೆಯನ್ನು ಹೆಚ್ಚು ಮಂಡಿಸುವುದಿಲ್ಲ. ಕನಕನ ಕಾಲದ ದುಡಿವ ವರ್ಗಗಳ ದೈವದ ಮತ್ತು ಭಕ್ತಿಯ ಕಲ್ಪನೆ ಬೇರೆಯದೇ ಇದ್ದುದನ್ನು ನಮ್ಮ ಜನಪದ ಸಾಹಿತ್ಯದ ಅಧ್ಯಯನದಿಂದ ತಿಳಿಯಬಹುದಾಗಿದೆ. ಕೆಲವು ಆಂಶಿಕವಾದ ವಿಚಾರಗಳ ಜನಪದರ ವಿಚಾರಗಳು ವ್ಯಕ್ತವಾಗಿದ್ದರೂ ಅದರ ಪ್ರಧಾನ ಕಾಳಜಿ ಮತ್ತು ಭಿತ್ತಿ ವೈದಿಕದ್ದೇ. ಭಾಗವತ ಮತ್ತು ಪುರಾಣ ಲೋಕದ ವೈಭವೀಕರಣವೇ ಆಗಿದೆ. ಮಾಧ್ವ ಇಲ್ಲವೇ ರಾಮಾನುಜ ಪರಂಪರೆಯದೇ ಆಗಿದೆ. ಈ ಪಂಥ ಕನಕನಿಗೆ ಅಂದು ಬಹಳ ಮಹತ್ವದ್ದು ಎಂದು ತೋರಿರಬಹುದು. ಆದರೆ ಇಂದು ಅದು ಕನಕನ ಜಾತ್ಯತೀತ ನಿಲುವುಗಳಷ್ಟು ನಮಗೆ ಮಹತ್ವದ್ದು ಎಂದು ಅನ್ನಿಸಬೇಕಾಗಿಲ್ಲ. ಇಂದಿನ ನಮ್ಮ ಕಲ್ಪನೆ ಮಾತ್ರವಲ್ಲ. ಕನಕನ ಭಕ್ತಿ ಮತ್ತು ದೈವದ ಕಲ್ಪನೆಯನ್ನು ಆತನಿಗಿಂತ ಪೂರ್ವದವನಾದ ಅಲ್ಲಮನ ವಿಚಾರಗಳ ಜೊತೆಗೆ ಹೋಲಿಕೆ ಮಾಡಿ ಚರ್ಚಿಸಿದಾಗ ಕನಕ ಹೇಗೆ ಕಾಣುತ್ತಾನೆ ಎಂಬುದೂ ಮುಖ್ಯವಾದ ಸಂಗತಿ ಎನ್ನಿಸುತ್ತದೆ. ಅಲ್ಲಮನ ಜೊತೆಗೆ ಹೋಲಿಸಿ ನೋಡಿದಾಗ ಅಲ್ಲಮ ಕನಕನಿಗಿಂತಲೂ ಮೇಲೆ ನಿಲ್ಲಬಹುದು. ಅಲ್ಲಮನ ಭಕ್ತಿ, ಜ್ಞಾನ ವೈರಾಗ್ಯ ಮತ್ತು ದೈವದ ಕಲ್ಪನೆ ಕನಕನಿಗಿಂತಲೂ ಹೆಚ್ಚು ಆರೋಗ್ಯ ಪೂರ್ಣವಾದುದಾಗಿಯೂ ಕಾಣಬಹುದು. ಇಲ್ಲವೇ ಮೇಲಿನದಾಗಿ ಕಾಣಬಹುದು. ಅಂತಹ ಓದನ್ನು ನಾವು ಇಂದು ಮಾಡಬೇಕಾಗಿದೆ. ನಮ್ಮ ಇಂದಿನ ವೈಚಾರಿಕ ಕನ್ನಡಿಗಳಲ್ಲಿ ಅಲ್ಲವಾದರೂ ಅಲ್ಲಮನ ವಿಚಾರಗಳ ಕನ್ನಡಿಯ ಮೂಲಕ ನೋಡುವ ಕೆಲಸವನ್ನಾದರೂ ಮಾಡಬೇಕಿದೆ. ಈವರೆಗೂ ಅಲ್ಲಮನ ವಿಚಾರಗಳ ಜೊತೆಗೆ ಕನಕನ್ನು ಹೋಲಿಕೆ ಮಾಡಿ ಅಧ್ಯಯನ ನಡೆಸಿದಂತಿಲ್ಲ. ಅಂತಹ ಅಧ್ಯಯನವನ್ನು ನಾವಿಂದು ಕೈಗೊಳ್ಳಬೇಕಾಗಿದೆ.

ಎರಡು. ಕನಕನ ಸಾಹಿತ್ಯದಲ್ಲಿ ಚಿತ್ರಿತವಾಗಿರುವ ಹೆಣ್ಣು ಮತ್ತು ಆ ಬಗೆಗಿನ ವಿಚಾರಗಳು ನಾವು ಯಾವ ದಿಕ್ಕಿನಿಂದ ಚರ್ಚಿಸಿದರೂ ಪ್ರಶ್ನಾರ್ಹವಾದುವುಗಳೇ. ಅದರಲ್ಲಿಯೂ ಹೆಚ್ಚು ನೈತಿಕತೆಯನ್ನು ಬೋಧಿಸುವ ಕೀರ್ತನೆಗಳಲ್ಲಿ ಮಂಡಿತವಾಗಿರುವ ವಿಚಾರಗಳು ಪ್ರತಿಗಾಮಿಯಾದವು ಎನ್ನಿಸುವಂತಿವೆ. ಬಹುಶಹ ಇವು ಕನಕನ ಕಾಲಧರ್ಮದ ಮೌಲ್ಯಗಳಿಗೆ ಅನುಗುಣವಾಗಿ ಆತನಲ್ಲಿ ವ್ಯಕ್ತವಾಗಿವೆ. ಅವು ಅಂದಿನ ಸಮಾಜದ ಸಾಮಾಜಿಕ ಆರೋಗ್ಯಕ್ಕೆ ಸರಿಯಾದವು ಎಂದು ವಾದಿಸಬಹುದು. ಆದರೆ ಇಂದು ಹೆಣ್ಣು ತನ್ನ ಅಸ್ಮಿತೆಯನ್ನು ಸ್ವತಂತ್ರವಾಗಿ ಮಂಡಿಸುತ್ತಿರುವ ಈ ಕಾಲಘಟ್ಟದಲ್ಲಿ ಮಹಿಳಾ ಚಿಂತನೆಗೆ ಕನಕ ಒಬ್ಬ ಸಾಂಸ್ಕೃತಿಕ ನಾಯಕನಾಗಿ ದಾರ್ಶನಿಕನಾಗಿ ಹೆಚ್ಚು ನೆರವಿಗೆ ಬರುವುದಿಲ್ಲ. ಬದಲಿಗೆ ಆತನನ್ನು ಹೊರಗಿಟ್ಟೇ ಚರ್ಚೆಗೆ ತೊಡಗುತ್ತಾರೆ. ಇದು ಕನಕನಿಗೆ ಮಾತ್ರ ಇರುವ ಸಮಸ್ಯೆಯಲ್ಲ; ಎಲ್ಲ ಪುರುಷ ದಾರ್ಶನಿಕರಿಗೂ ಸಂತರಿಗೂ ಎದುರಾಗಿರುವ ಸಮಸ್ಯೆಯೇ ಆಗಿದೆ. ಯಾಕೆಂದರೆ ರೂಢಿಗತವಾದ ಪುರುಷಾಧಿಪತ್ಯದ ಮೌಲ್ಯಗಳು ಬಹುತೇಕ ಪುರುಷರಲ್ಲಿ ವ್ಯಕ್ತವಾಗುತ್ತವೆ. ಎಷ್ಟೇ ಎಚ್ಚರವಾಗಿದ್ದರೂ ಲಿಂಗ ತಾರತಮ್ಯದ

ಮೌಲ್ಯಗಳು ನುಗ್ಗಿ ಬರುತ್ತಿರುತ್ತವೆ. ಇನ್ನು ಇಂತಹ ಯಾವುದೇ ಕಲ್ಪನೆಗಳೇ ಇಲ್ಲದ ಕಾಲದಲ್ಲಿ ಕನಕನಂತಹ ದಾರ್ಶನಿಕ, ಸಂತನಲ್ಲಿಯೂ ಪುರುಷಾಧಿಪತ್ಯದ ಊಳಿಗಮಾನ್ಯಶಾಹಿ ಸಮಾಜ ವ್ಯವಸ್ಥೆಯ ಮೌಲ್ಯಗಳು ಢಾಳಾಗಿ ಕಾಣಿಸಿಕೊಳ್ಳುತ್ತವೆ. ಹಾಗಾಗಿ ಹೆಣ್ಣುನೋಟದಿಂದ ಕನಕನನ್ನು ಇಂದು ಹೆಚ್ಚು ತೀವ್ರವಾಗಿ ತಾತ್ವಿಕ ಚರ್ಚೆಗೆ ಒಡ್ಡಬೇಕಾದ ಅಗತ್ಯವಿದೆ. ಹಾಗೆ ಒಡ್ಡಿದಾಗಲಂತೂ ಕನಕ ತನ್ನ ನಿಜವಾದ ವ್ಯಕ್ತಿವನ್ನು ತೋರುತ್ತಾನೆ.

ಮೂರು. ಕನಕ ತಾನು ವೈದಿಕ ಪುರಾಣ ಲೋಕದಲ್ಲಿ ಮುಳುಗೇಳುವಾಗಲೇ ಅದಕ್ಕಿಂತ ಹೆಚ್ಚು ಆಳವಾದ ಜನಪದ ಪುರಾಣ, ಸಾಹಿತ್ಯ ಲೋಕದೃಷ್ಟಿಗಳು ಇದ್ದವು. ಅವನ್ನೆಲ್ಲ ಬಿಟ್ಟುಕೊಟ್ಟು ಯಾಕೆ ಮಾಧ್ವ ಮತ್ತು ರಾಮಾನುಜ ಪಂಥಾನುಯಾಯಿ ಆಗಿ ಶೈವ ಕೇಂದ್ರಿತವಾಗಿದ್ದ ಸಮುದಾಯಗಳನ್ನು ವೈದಿಕ ಆಚರಣೆಯ ಸಮೀಪಕ್ಕೆ ಎಳೆದು ತಂದ ಎಂಬುದನ್ನು ಚರ್ಚೆಗೆ ಒಡ್ಡಬೇಕು. ಕನಕ ಶೈವ ಮತ್ತು ವೈಷ್ಣವ ಪಂಥಗಳ ಸಮನ್ವಯಕ್ಕೆ ಪ್ರಯತ್ನಿಸಿದ್ದಾನೆ ಎನ್ನಿಸಿದಾಗಲೂ ಆತನದೂ ಕೂಡ ವೈಷ್ಣವ ನೆಲೆಗೆ ಮೊದಲ ಆದ್ಯತೆ. ಹಾಗೆ ನೋಡಿದರೆ ಜನಪದರಿಂದ ದೂರವೇ ಉಳಿದಿದ್ದ ವೈದಿಕ ಪುರಾಣ ಲೋಕವನ್ನು ಜನರ ಬಳಿಗೆ ತಂದವನು ಕನಕ ಕಾಣಿಕೆಯೂ ಇದೆ. ಅದು ಇಂದು ತಿರುಗಿ ನೋಡಿದರೆ ಜನರಿಗೆ ಆದ ಅನುಕೂಲಕ್ಕಿಂತ ವೈದಿಕ ವಿಚಾರಧಾರೆಯ ವಿಕಾಸಕ್ಕೆ ಹೆಚ್ಚು ನೆರವಾದಂತೆ ಕಾಣುತ್ತಿದೆ. ಇಂತಹ ಸಂದರ್ಭದಲ್ಲಿ ಕನಕನಿಂದ ಜನರು ಪಡೆದದ್ದು ಎಷ್ಟು? ಕಳೆದುಕೊಂಡದ್ದು ಎಷ್ಟು ಎಂಬುದನ್ನೂ ಚರ್ಚೆಗೆ ಒಳಪಡಿಸಬೇಕಿದೆ.

ಇಂತಹ ಹಲವು ವಿಚಾರಗಳ ವಿವಿಧ ಕೋನಗಳಿಂದ ಕನಕನನ್ನು ಮರು ಓದಿಗೆ ಚರ್ಚೆಗೆ ಒಳಪಡಿಸಿ ಆತನಲ್ಲಿನ ಜನಪರ ವಿಚಾರಗಳನ್ನು ಇಂದು ಮತ್ತು ಮುಂದಿನ ಸಮಾಜಕ್ಕೆ ಅನುಕೂಲಕ್ಕೆ ತಕ್ಕಂತೆ ಹೆಕ್ಕಿ ತೆಗೆಯಬೇಕಿದೆ. ಆತನನ್ನು ಈಗಿರುವಂತೆ ಯಥಾವತ್ತಾಗಿ ಅನುಕರಿಸುವುದರಲ್ಲಿ ಯಾವ ಅರ್ಥವೂ ಇಲ್ಲ. ವರ್ಜಿಸಬೇಕಾದ ವಿಚಾರಗಳನ್ನು ವರ್ಜಿಸಿ ಅಗತ್ಯಕ್ಕೆ ಒದಗಿ ಬರುವ ವಿಚಾರಗಳನ್ನು ಹೆಕ್ಕಿಕೊಂಡು ಇಂದಿನ ಸಮಾಜಕ್ಕೆ ಬೇಕಾದ ಹಲವು ತೊರೆಗಳಿಂದ ವಿಚಾರ ಧಾರೆಯನ್ನು ಸಂಗ್ರಹಿಸಿ ಅದನ್ನು ಬಳಸಿ ಹಲವು ತೊರೆಗಳು ಕೂಡಿದ ಬದಲಿ ಲೋಕದರ್ಶನವನ್ನು ಕಟ್ಟಿಕೊಳ್ಳಬೇಕಿದೆ. ಹಾಗೆ ಕಟ್ಟಿಕೊಳ್ಳುವ ಸಂದರ್ಭದಲ್ಲಿ ಕನಕ ನಮ್ಮ ನೆರವಿಗೆ ಬರುತ್ತಾನೆ ಎಂಬುದೇ ಆತನ ಹೆಚ್ಚುಗಾರಿಕೆ. ಆತನ ಬಗೆಗೆ ನಮಗೆ ಯಾವತ್ತೂ ಇರಬೇಕಾದ ಒಲವು ಮತ್ತು ಕಾಳಜಿ.

ಮತ್ತು ಕೆಲವು ಪ್ರಶ್ನೆಗಳನ್ನು ಕನಕನಿಗೆ ಕೇಳಿದ ಕಾರಣಕ್ಕೆ ಆತ ಚಿಕ್ಕವನೂ ಆಗುವುದಿಲ್ಲ. ಆತನ ಮೌಲ್ಯ ಕುಸಿಯುವುದೂ ಇಲ್ಲ. ಪ್ರಶ್ನೆ ಎತ್ತಿದವರೂ ಅವನಿಗಿಂತ ದೊಡ್ಡವರೂ ಆಗುವುದಿಲ್ಲ. ಬದಲಿಗೆ ನಮ್ಮ ಪರಂಪರೆಯೊಂದಿಗಿನ ನಮ್ಮ ಮುಖಾಮುಖಿ ಆರೋಗ್ಯಕರವಾಗಿ ನಡೆದು ಕನ್ನಡದ ಚಿಂತನೆಯ ಪರಂಪರೆ

ವಿಕಾಸಗೊಳ್ಳುತ್ತದೆ. ಅಂತಹ ಕೆಲಸಕ್ಕೆ ನಾವಿಂದು ಮುಂದಾಗಬೇಕಷ್ಟೆ. ಅದರಿಂದ ನಮ್ಮ ಇಂದಿನ ಸಮಾಜದಲ್ಲಿ ನೆಲೆಸಿರಲೇಬೇಕಾದ ನೈಜ ಪ್ರಜಾತಾಂತ್ರಿಕ ಮೌಲ್ಯಗಳನ್ನು ಪೋಷಿಸಿ ಬೆಳೆಸಲು ಸಾಧ್ಯವಾಗುತ್ತದೆ. ಮತ್ತು ನಾವು ಮತ್ತೊಂದು ಗಮನಿಸಬೇಕಾದ ಸಂಗತಿಯೆಂದರೆ ನಾವು ಇಂದು ಕನಕನಿಂದ ಅತಿಯಾಗಿ ನಿರೀಕ್ಷೆ ಮಾಡುತ್ತಿದ್ದೇವೆ ಎನ್ನಿಸುತ್ತದೆ. ಅಂತಹ ಅತಿಯಾದ ನಿರೀಕ್ಷೆ ಅಗತ್ಯವಿಲ್ಲ ಎನ್ನಿಸುತ್ತದೆ. ಹಾಗೇ ಅತಿಯಾಗಿ ನಿರೀಕ್ಷಿಸಿ ಆತನನ್ನು ಎದುರಾದ ಮೇಲೆ ಕೆಲವರಿಗೆ ಅತೃಪ್ತಿ ಕಾಡುವ ಸಾಧ್ಯತೆಗಳೂ ಇರುತ್ತವೆ. ಹೆಚ್ಚು ಜಗ್ಗಾಡಿ ತುಂಡುಗಡಿವ ಸಾಧ್ಯತೆಯೂ ಇರಬಹುದು. ಈಗಾಗಲೇ ಕನಕನ ಕುರಿತಾದ ಮಾತುಗಳು ಹೆಚ್ಚಾದಂತೆ ಎನ್ನಿಸಿರುವ ಉದಾಹರಣೆಗಳೂ ಇವೆ. ಹಾಗಾಗಿ ಆತನನ್ನು ನಮ್ಮ ಕಾಲದ ಜೊತೆಗೆ ಅನ್ವಯಿಸಿ ನೋಡುವುದು ಎಷ್ಟು ಮುಖ್ಯವೋ ಅಷ್ಟೇ ಸಹಜ ಮತ್ತು ಮುಖ್ಯವಾಗಿ ಆತನ ಕಾಲದ ಧರ್ಮದ ಜೊತೆಗೂ ಹೋಲಿಸಿ ಅನ್ವಯಿಸಿ ಅಧ್ಯಯನ ಮಾಡಬೇಕಿದೆ. ಆಗ ಮಾತ್ರ ಕನಕನ ಇತ್ಯಾತ್ಮಕ ಮತ್ತು ನೇತ್ಯಾತ್ಮಕ ವಿಚಾರಗಳೆರಡೂ ನಮ್ಮ ಅನುಭವಕ್ಕೆ ಬರುತ್ತವೆ. ಕನಕ ಸಾಂಸ್ಕೃತಿಕ ಮಹತ್ವ ಎಷ್ಟೆಂಬುದು ಅರ್ಥವಾಗುತ್ತದೆ. ಆಗ ಆಸ್ತಿಕರ ಕನಕ ಮತ್ತು ನಾಸ್ತಿಕರ ಕನಕರಿಬ್ಬರೂ ಉದಯಿಸಿ ಬರುತ್ತಾರೆ.

*** ** ***

## ಪ್ರತಿಕ್ರಿಯೆ :

### 1. ಕನಕನ ಸಾಹಿತ್ಯದ ಲೋಕದೃಷ್ಟಿ ಮತ್ತು ಬದಲಿ ಸಾಂಸ್ಕೃತಿಕ ರಾಜಕಾರಣದ ಸಾಧ್ಯತೆಗಳು

– ಡಾ. ಎಚ್.ಪಿ. ಗೀತಾ

ಬರಹವೆಂಬುದೇ ಲೋಕಕ್ಕೆ ತೋರುವ ಪ್ರತಿಕ್ರಿಯೆ. ಇದು ಪ್ರತಿಭಟನೆಯ ಅಸ್ತ್ರವಾಗಿರುವಂತೆಯೇ ಪರ್ಯಾಯದ ಬೆಳಕಾಗಿಯೂ ಸಮಾಜವನ್ನು ಬೆಳಗುತ್ತದೆ. ಈ ಗುಣದ ಕಾರಣಕ್ಕಾಗಿಯೆ ಸಾಹಿತ್ಯ ನಿತ್ಯ ಪ್ರಸ್ತುತತೆಯನ್ನು ಕಾಪಾಡಿಕೊಂಡಿದೆ. ಈ ಗುಣಗಳಿಂದ ಹೊರತಾದ ಸಾಹಿತಿ ಮತ್ತು ಅವನ ಕೃತಿಗಳು ಉಲ್ಕೆಗಳಂತೆ ಬೆಳಗಿ ಕ್ಷಣಮಾತ್ರದಲ್ಲಿ ಉರಿದು ಬಿದ್ದು ಹೋಗುತ್ತವೆ.

ಕನ್ನಡದ ಮಟ್ಟಿಗೆ ಹೇಳುವುದಾದರೆ ಆದಿಕವಿ ಪಂಪ, 12ನೇ ಶತಮಾನದ ಬಹುತೇಕ ವಚನಕಾರರು, ರಾಘವಾಂಕ, ದಾಸ ಶ್ರೇಷ್ಠರಾದ ಪುರಂದರ ಮತ್ತು ಕನಕದಾಸರು, ಕುಮಾರವ್ಯಾಸ, ಸರ್ವಜ್ಞ ಮತ್ತು ಇವರ ಕೃತಿಗಳು ಸಾಹಿತ್ಯ, ಸಂಸ್ಕೃತಿ, ಸಮಾಜ, ಮನುಷ್ಯ ಈ ಮೊದಲಾದ ನೆಲೆಗಳಲ್ಲಿ ಕಾಲಿಕವೂ ಸಾರ್ವಕಾಲಿಕವೂ ಆಗಿ ಮುಖ್ಯರಾಗುತ್ತಾರೆ. ಕನ್ನಡದ ಉಳಿದ ಕವಿಗಳಿಗಿಂತ ಇವರು ಹೆಚ್ಚು ಮುಖ್ಯರಾಗಲು ಕಾರಣ, ಎಲ್ಲರಂತೆ ಇವರಲ್ಲೂ ಧಾರ್ಮಿಕ ಪ್ರಜ್ಞೆ, ಆಧ್ಯಾತ್ಮಿಕ ಪ್ರಜ್ಞೆ, ರಾಜಕೀಯ ಪ್ರಜ್ಞೆಗಳು ಹೇರಳವಾಗಿರುವಂತೆಯೇ ಬೇರೆಯವರಲ್ಲಿ ಕಾಣಲು ಕಷ್ಟವಾಗುವ ಸಾಮಾಜಿಕ ಪ್ರಜ್ಞೆ ವ್ಯಕ್ತಿ ಪ್ರಜ್ಞೆಗಳು ಮಡುಗಟ್ಟಿ ನಿಂತಿವೆ. ಅಸ್ತಿತ್ವದಲ್ಲಿರುವ ಸಮಾಜದ ನ್ಯೂನ್ಯತೆಗಳನ್ನು ಅರಿತು ಪ್ರತಿಭಟಿಸುತ್ತಲೇ ಅದರ ಜಾಗದಲ್ಲಿ ಪರ್ಯಾಯಗಳನ್ನು ಸೃಷ್ಟಿಸುವ, ಪ್ರತಿಪಾದಿಸುವ ಸೃಜನಶೀಲ ಕರ್ತೃತ್ವವೊಂದು ರೂಪುಗೊಳ್ಳುತ್ತದೆ. ಪಂಪನಂತಹವರು ಪುರಾಣದ ಘಟನೆ ಮತ್ತು ವ್ಯಕ್ತಿ ಸಂಘರ್ಷಗಳನ್ನು ಪ್ರತಿಮಾತ್ಮಕ ವಿಧಾನದಲ್ಲಿ ಈ ತೆರನಾದ ಸೃಜನಶೀಲ ಪರ್ಯಾಯಗಳನ್ನು ಸೃಷ್ಟಿಸುತ್ತಾರೆ. "ಓಲಗಿಸಿ ಬಾಳುವುದೆ ಕಷ್ಟಂ ಇಳಾಧಿನಾಥರಂ", "ಮನುಷ್ಯ ಜಾತಿ ತಾನೊಂದೆ ವಲಂ ಎಂಬ" ಮಾತುಗಳಲ್ಲಿ ಸಾಮೂಹಿಕ ಪ್ರಜ್ಞೆ, ವ್ಯಕ್ತಿ ಪ್ರಜ್ಞೆಯಾಗಿ ಹರಿದು ಅರ್ಥಪೂರ್ಣ ಸಂವಾದಕ್ಕಾಗಿ ಕಾಲ ಮತ್ತು ಕಾಲದ ಮಕ್ಕಳನ್ನು ಆಹ್ವಾನಿಸುತ್ತದೆ.

ಆದರೆ 12ನೇ ಶತಮಾನದ ಬಸವಣ್ಣ, ಅಲ್ಲಮ, ಸಿದ್ಧರಾಮ, ಅಕ್ಕಮಹಾದೇವಿ ಮೊದಲಾದವರು ಹಾಗೂ 16ನೇ ಶತಮಾನದ ಕನಕದಾಸ ಮತ್ತು ಪುರಂದರದಾಸರು ಪುರಾಣ ಪ್ರತಿಮೆಗಳನ್ನು ತೊರೆದು ನೇರವಾಗಿ ಸಮಾಜದೊಂದಿಗೆ ವಾಗ್ವಾದ ನಡೆಸಿದವರು. ಅನೇಕ ವಾಗ್ವಾದಗಳನ್ನು ಹುಟ್ಟು ಹಾಕಿದವರು.

ಕನಕದಾಸರ ಸಾಹಿತ್ಯದಲ್ಲಿ ಪ್ರತಿಪಾದಿತವಾಗಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ರಾಜಕಾರಣದ ಪರ್ಯಾಯಗಳನ್ನು ಹುಡುಕುವ ಪ್ರಯತ್ನದಲ್ಲಿ ಕೆಲವು ಅತಂಕ ಮತ್ತು

ಪ್ರಶ್ನೆಗಳನ್ನು ರಂಗನಾಥ ಕಂಟನಕುಂಟೆಯವರು ಎತ್ತಿದ್ದಾರೆ. ವಿಶೇಷವಾಗಿ ಕನ್ನಡ ಸಾಹಿತ್ಯವನ್ನು ಗ್ರಹಿಸುವ ಮನಸ್ಸುಗಳ ಹಿಂದಿನ ಸೀಮಿತ ದೃಷ್ಟಿಯನ್ನು ವಿರೋಧಿಸಿದ್ದಾರೆ.

ಕನಕರನ್ನು ಕುರಿತ ಚರ್ಚೆ ಕೆಲವು ಸಾಮಾಜಿಕ ಮೋಹ ಮತ್ತು ಪುನರುತ್ಪಾದನೆಯ ಮಟ್ಟಕ್ಕಿಳಿದಿರುವುದರಿಂದ ನಿರ್ಲಿಪ್ತವಾಗಿ ಹಾಗೂ ವೈಚಾರಿಕವಾಗಿ ಕನಕ ಸಾಹಿತ್ಯದಲ್ಲಿ ನೋಡುವ ಪ್ರಯತ್ನಗಳು ಆಗಬೇಕು. ಅಕ್ಯಾಡೆಮಿಕ್ ವಲಯ ಕನಕ ಸಾಹಿತ್ಯವನ್ನು ಕೇವಲ ಬೌದ್ಧಿಕ ವಿಷಯಕ್ಕಾಗಿ ಚರ್ಚಿಸಿದೆಯೆ ಹೊರತು ಜನಪರ ಹಾಗೊ ಪರ್ಯಾಯ ನೆಲೆಯಲ್ಲಿ ಅಧ್ಯಯನ ಮಾಡಿಲ್ಲ. ಕನಕರ ಭಕ್ತಿ ಮತ್ತು ದೇವರ ಸ್ವರೂಪ ವೈದಿಕ ಧರ್ಮದ ಅಂಗವಾದ ದ್ವೈತ ಮತ್ತು ಮಾಧ್ವ ಪಂಥದ ಅನುಸರಣೆಯಾಗಿರುವುದರಿಂದ ಎಷ್ಟು ಜನಪರವಾಗಿರಲು ಸಾಧ್ಯ? ಇದಕ್ಕೆ ಬದಲಾಗಿ ಅಲ್ಲಮನ ಭಕ್ತಿ ಮತ್ತು ದೇವರ ಕಲ್ಪನೆ ಹೆಚ್ಚು ಮಹತ್ವದ್ದಾಗಿ ಕಾಣುತ್ತದೆ. ಕನಕದಾಸರ ಸ್ತ್ರೀ ಪ್ರಜ್ಞೆ ಪ್ರಶ್ನಾರ್ಹವಾದುದು. ಪ್ರತಿಗಾಮಿಯಾದುದು. ಈ ಹಿನ್ನಲೆಯಲ್ಲಿ ಕನಕ ಸಾಹಿತ್ಯವನ್ನು ಚರ್ಚಿಸಿದಾಗ ಇದರ ಬೆಲೆ ಕಡಿಮೆಯಾಗುತ್ತದೆ. ಕನಕ ಸಾಹಿತ್ಯ ಶೈವ ದೃಷ್ಟಿ, ಜನಪದ ದೃಷ್ಟಿ, ಮತ್ತು ಲೋಕ ದೃಷ್ಟಿಗಳನ್ನು ನಿರ್ಲಕ್ಷಿಸಿ ವೈದಿಕ ದೃಷ್ಟಿಯನ್ನು ವಿಸ್ತರಿಸುವ ಮೂಲಕ ಮಂದಗಾಮಿಯಾಯಿತು. "ಕೆಲವು ಪ್ರಶ್ನೆಗಳನ್ನು ಕನಕನಿಗೆ ಕೇಳಿದ ಕಾರಣಕ್ಕೆ ಕನಕ ಚಿಕ್ಕವನೂ ಆಗುವುದಿಲ್ಲ, ಆತನ ಮಟ್ಟ ಕುಸಿಯುವುದೂ ಇಲ್ಲ—ಇವು ರಂಗನಾಥ ಕಂಟನಕುಂಟೆ ಇವರ ಪ್ರಬಂಧದ ಸಾರ. ಕನಕದಾಸರು ಎತ್ತಿರುವ ಕುಲದ ಪ್ರಶ್ನೆಗಳನ್ನು ಇತ್ಯಾತ್ಮಕವಾಗಿ ಗುರುತಿಸಿದ ರಂಗನಾಥರು ಉಳಿದಂತೆ ಪ್ರಶ್ನೆಗಳನ್ನು ಕೇಳಿದ್ದೇ ಹೆಚ್ಚು.

ಕನಕದಾಸರ ಸಾಮಾಜಿಕ, ಸಾಂಸ್ಕೃತಿಕ ಚಿಂತನೆಗಳು ಎಂದೆಂದಿಗೂ ಪ್ರಸ್ತುತವಾಗಿಯೇ ಇದ್ದವು. ಆದರೆ ಸ್ವಾತಂತ್ರ್ಯ ಪೂರ್ವದ ಊಳಿಗಮಾನ್ಯ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳು ಕನಕದಾಸರಂತಹ ತಳಸಮುದಾಯದವರ ಚಿಂತನೆಗಳನ್ನು ಸ್ವೀಕರಿಸುವ ಮನಸ್ಥಿತಿಯನ್ನು ಹೊಂದಿರಲಿಲ್ಲ. ಸ್ವಾತಂತ್ರ್ಯೋತ್ತರದಲ್ಲಿ ಪ್ರಜಾತಾಂತ್ರಿಕ ವ್ಯವಸ್ಥೆ ಏರ್ಪಟ್ಟಾಗ ಬುದ್ಧ, ಬಸವಣ್ಣ, ಕನಕರಂತಹವರ ಸಾಮಾಜಿಕ ಚಿಂತನೆಗಳು ಪ್ರಜಾತಾಂತ್ರಿಕ ಮಾರ್ಗವಾಗಿಯೇ ಸ್ವೀಕರಿಸಲ್ಪಟ್ಟವು. ಈ ಸ್ವೀಕರಣೆ ಕಾಲದ ಅಗತ್ಯವೂ ಹೌದು. ನೂರಾರು ವರ್ಷ ಅಸಮಾನತೆಯ ನೆಲೆಯಲ್ಲಿ ನಿಂತ ಒಂದು ಬೃಹತ್ ವ್ಯವಸ್ಥೆಯ ಬೇರುಗಳ ಹಿಡಿತ ಸಡಿಲಗೊಳ್ಳತೊಡಗಿದಾಗ ತಾರತಮ್ಯ ರಹಿತವಾದ ಸಮಾಜ ಕಟ್ಟುವ ಆಶಯವುಳ್ಳ ವ್ಯವಸ್ಥೆ ತನ್ನ ಹೊಸ ಬೇರುಗಳಲ್ಲಿ ನೆಲೆಯೂರಲು ಬಸವಣ್ಣ ಕನಕದಾಸರಂತಹ ಸಾಮಾಜಿಕ ದಾರ್ಶನಿಕರ ಚಿಂತನೆಗಳು ನಮಗೆ ತೋರುದೀಪಗಳಾಗಿ ಒದಗಿ ಬರುತ್ತವೆ.

ನೂರಾರು ಜಾತಿಗಳಿಂದ ಕಿಕ್ಕಿರಿದು ತುಂಬಿರುವ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಗೆ ಪರ್ಯಾಯವಾಗಿ ಸಮಾನತೆ ಮತ್ತು ಮಾನವೀಯ ನೆಲೆಯಲ್ಲಿ ಕಟ್ಟಬೇಕಾದ ಸಾಮಾಜಿಕ ವ್ಯವಸ್ಥೆಗೆ ಕನಕದಾಸರ ಚಿಂತನೆಗಳು ಒದಗಿ ಬರುತ್ತವೆ.

ರಾಗಿ ರೋಗಿಗಳ ಆಹಾರವಾಗುತ್ತಿರುವುದು, ಸರ್ವಜನರ ಆಹಾರವಾಗಿದ್ದ ರಾಗಿಯ ಜಾಗದಲ್ಲಿ ರಾಜಕೀಯ ಮತ್ತು ಮಾರುಕಟ್ಟೆ ತಂತ್ರಗಳಿಂದಾಗಿ ಅಕ್ಕಿ ಆಕ್ರಮಿಸಿಕೊಳ್ಳುತ್ತಿರುವ ಪರಿಣಾಮದ ಬಗೆಗೆ ರಂಗನಾಥ ಕಂಟನಕುಂಟೆಯವರು ಆತಂಕಗೊಂಡುರುವುದು ಸಹಜವೇ ಆಗಿದ್ದರೂ 'ರಾಮಧಾನ್ಯ ಚರಿತೆ'ಯಲ್ಲಿ ಈ ಎರಡೂ ಧಾನ್ಯಗಳು ಭಿನ್ನ ಸಾಮಾಜಿಕ ಮತ್ತು ಶ್ರಮಿಕ ಜನಾಂಗದ ರೂಪಕಗಳಾಗಿ ಬಳಕೆಯಾಗಿರುವುದರಿಂದ ಕೃತಿ ಮತ್ತು ಪಾತ್ರಗಳು ನಮ್ಮನ್ನು ಸದಾ ಪ್ರಭಾವಿಸುವುದಕ್ಕೆ ಶಕ್ತಿಗುಂದುವುದಿಲ್ಲ. ಈ ಕಾವ್ಯ ಪಾತ್ರಗಳನ್ನು ಪ್ರತಿಕೃತಿಗೆ ಬದಲಾಗಿ ಪ್ರತಿಮಾ ವಿಧಾನದಲ್ಲಿ ಗ್ರಹಿಸುವ ದೊಡ್ಡ ಪ್ರಮಾಣದ ಪ್ರಯತ್ನಗಳು ಈಗಾಗಲೇ ಸಾಕಷ್ಟು ನಡೆದಿವೆ.

ಕನಕದಾಸರನ್ನು ಇಂದು ನಾವು ಗ್ರಹಿಸುವುದು ಅವರ ಸಮೃದ್ಧ ಸಾಹಿತ್ಯದ ಮೂಲಕವೇ. ಸಾಮಾಜಿಕ, ರಾಜಕೀಯ, ಧಾರ್ಮಿಕ ಚಿಂತನೆ ಮತ್ತು ದೃಷ್ಟಿಗಳು ಇವರ ಸಾಹಿತ್ಯದಲ್ಲಿ ಅಡಕಗೊಂಡಿವೆ. ಆದರೆ ಜನಪ್ರಿಯವಾದ ಕೇವಲ ಹತ್ತಿಪ್ಪತ್ತು ಕೀರ್ತನೆ ಮತ್ತು 'ರಾಮಧಾನ್ಯ ಚರಿತ'ಯನ್ನಷ್ಟೇ ಇಟ್ಟುಕೊಂಡು ಕನಕರ ಪ್ರಸ್ತುತತೆಯನ್ನು ಕಟ್ಟಿಕೊಳ್ಳುವುದು ಅಷ್ಟು ಸಮಂಜಸವಲ್ಲವೆಂದು ನನಗನ್ನಿಸುತ್ತದೆ. ಭಕ್ತಿ – ವೈರಾಗ್ಯ – ಜ್ಞಾನ – ಬಿಡುಗಡೆಗೆ ಸಂಬಂಧಿಸಿ ಇರುವ ಅವರ ಸಮೃದ್ಧ ಸಾಹಿತ್ಯ ಚರ್ಚೆಗೆ ಒಳಗಾಗುತ್ತಿಲ್ಲ. ಈ ಬಗೆಯ ಸಾಹಿತ್ಯವನ್ನು ಅಧ್ಯಯನಕ್ಕೆ ಒಳಪಡಿಸಬೇಕೆಂಬ ಇರಾದೆ ರಂಗನಾಥ ಕಂಟನಕುಂಟೆಯವರದು. ಇದು ಅಪೇಕ್ಷಿತವೂ ಹೌದು. ಬಹಳ ಧಾರಾಳವಾಗಿ ಬಳಕೆಯಾಗುತ್ತಿರುವ ಭಕ್ತಿ, ಮುಕ್ತಿ, ದೇವರ ಪರಿಕಲ್ಪನೆಗಳು ಸಾಮಾಜಿಕ ಬದುಕನ್ನು ಸೂಕ್ಷ್ಮವಾಗಿ ಆಳವಾಗಿ ಅರಿಯಲು ಬಿಡುತ್ತಿಲ್ಲ. ಜೊತೆಗೆ ಅಧ್ಯಾತ್ಮದಂತಹ ಸತ್ಯಶೋಧಕ ಮಾರ್ಗವನ್ನು ನಿರ್ಲಕ್ಷಿಸಿ ಕಟ್ಟಿಕೊಳ್ಳುವ ಸಾಮಾಜಿಕ ವ್ಯವಸ್ಥೆ ಭದ್ರವಾದ ಸಮ ಅಡಿಪಾಯವಿಲ್ಲದೆ ಬೃಹತ್ ಸೌಧವನ್ನು ಕಟ್ಟಿದಂತೆ. ಇದನ್ನು ಅರಿತೇ ಬಸವಣ್ಣ ಮೊದಲಾದ ವಚನಕಾರರು, ದಾಸರು ಮತ್ತು ನವೋದಯ ಕವಿಗಳು ನಮ್ಮ ಸಾಮಾಜಿಕ ಮತ್ತು ವಾಸ್ತವ ಬದುಕಿನ ಜೊತೆಜೊತೆಗೆಯೇ ಮನುಷ್ಯ ಮತ್ತು ಸಾಮಾಜಿಕ ಬದುಕಿನ ನಿತ್ಯ ಸತ್ಯಗಳ ಶೋಧನೆಗೆ ಆಧ್ಯಾತ್ಮಿಕವಾದಿಗಳಾಗಿರುವುದು. ಈ ಕಾರಣಕ್ಕಾಗಿಯೇ ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಕ ಪರಂಪರೆಯಲ್ಲಿ ಅವರು ಮುಖ್ಯರಾಗಿ ಪರಿಗಣಿಸಲ್ಪಟ್ಟಿರುವುದು. ಆದ್ದರಿಂದ ಕನಕದಾಸರ ಭಕ್ತಿ, ಜ್ಞಾನ, ವೈರಾಗ್ಯ, ಬಿಡುಗಡೆಗೆ ಸಂಬಂಧಿಸಿದ ಚಿಂತನೆಗಳೂ ಅಸಮಾನತೆ ಮತ್ತು ಮೌಢ್ಯಗಳನ್ನು ಬಿತ್ತಿ ಬೆಳೆಯುತ್ತಿರುವ ವೈದಿಕ ವ್ಯವಸ್ಥೆಗೆ ಸಮರ್ಥ ಪರ್ಯಾಯಗಳನ್ನು ಒದಗಿಸಬಲ್ಲವು. ಈ ಪರ್ಯಾಯಗಳು ದೀರ್ಘಕಾಲ ಸಾಮಾಜಿಕ ವ್ಯವಸ್ಥೆಯನ್ನು ಪ್ರಭಾವಿಸಬಲ್ಲವು.

ಭಕ್ತಿ, ಜ್ಞಾನ, ವೈರಾಗ್ಯ ಭಾವಗಳು ಆದಿಕೇಶವನನ್ನು ಕುರಿತ ಕೀರ್ತನೆಗಳಲ್ಲಿ ವ್ಯಕ್ತವಾಗಿರುವ "ಭಕ್ತಿಯ ವಿಚಾರವು ಸಮಸ್ಯಾತ್ಮಕವೆಂದೇ ಅನ್ನಿಸುತ್ತದೆ" ಎಂಬ ಪ್ರಶ್ನೆಯನ್ನೆತ್ತಿದ್ದಾರೆ. ವೈದಿಕ ಧರ್ಮಕ್ಕೆ ಶರಣ ಧರ್ಮವನ್ನು ಬಸವಣ್ಣ ಪರ್ಯಾಯವಾಗಿ ರೂಪಿಸಿದಂತೆ ಕನಕದಾಸರೂ ಹದಿನಾರನೇ ಶತಮಾನದಲ್ಲಿ ಪ್ರಬಲವಾಗಿದ್ದ ಮಾಧ್ವ ಮತಕ್ಕೆ ಪರ್ಯಾಯವನ್ನು ರೂಪಿಸಲಿಲ್ಲ. ಬದಲಾಗಿ ಮಾಧ್ವ ಪಂಥದ ಗುರುಪರಂಪರೆಯೊಳಗೆ ಪ್ರವೇಶಿಸಿ ಒಳಗಿನಿಂದ ಅದರ ಹುಳುಕುಗಳನ್ನು ತೋರಿಸುವ ಪ್ರಯತ್ನ ಮಾಡಿದ್ದಾರೆ. ಜೊತೆಗೆ ಭಕ್ತಿಯೆಂಬುದು ವ್ಯಕ್ತಿ ತನ್ನ ಜೀವನದಲ್ಲಿ ಉನ್ನತೀಕರಿಸಿಕೊಳ್ಳಲು ಒದಗಿಬರುವ ಒಂದು ಮನಸ್ಥಿತಿ. 'ದೇವರು' ಈ ಮನಸ್ಥಿತಿಯನ್ನು ಸಮಸ್ಥಿತಿಗೆ ನಿಲ್ಲಿಸಿಕೊಳ್ಳಲು ಒದಗಿ ಬರುವ ಒಂದು ಸ್ವಯಂ ನಿಯಂತ್ರಕ ಸ್ಥಂಭ. ಆದ್ದರಿಂದ ಶಿವ, ಹರಿ ಮೊದಲಾದ ದೇವರ ಸ್ವರೂಪವನ್ನು ಈ ಪರಿಕಲ್ಪನೆಯಡಿಯಲ್ಲಿ ಗ್ರಹಿಸಿದರೆ ಯಾರಿಗೆ ಯಾವ ದೇವರಾದರೂ ಆಗಬಹುದು. ಆದರೆ ಆತನ ಆತ್ಮ ಮತ್ತು ವ್ಯಕ್ತಿತ್ವ ಶುದ್ಧವೋ, ಮಲಿನವೋ ಎಂಬುದೇ ಮುಖ್ಯ. ಆದ್ದರಿಂದ ಹರಿಭಕ್ತಿಯಲ್ಲಿ ಮಿಂದ ಕನಕರ ಆತ್ಮ ಶುದ್ಧವಾಗಿ ಆ ಶುದ್ಧಾತ್ಮ ಕಂಡ ಪ್ರಾಪಂಚಿಕ ಅನುಭಾವಗಳು ಕೀರ್ತನೆಗಳಾಗಿವೆ.

ಯಾವುದೇ ಕಾಲಘಟ್ಟದ ಕವಿ ಕೃತಿಗಳಿಂದ ನಾವು ಸಂಪೂರ್ಣವಾಗಿ ಇಂದಿನ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಹೊರಡುವುದೇ ಅತ್ಯಂತ ಅಪಾಯಕಾರಿ. ಈ ನಿಲುವು ಮತ್ತೊಂದು ಸಂಘರ್ಷಕ್ಕೆ ನಾಂದಿ ಹಾಡುತ್ತದೆ. ಕಂಟನಕುಂಟೆಯವರು ಹೇಳುವಂತೆ ನಾವು ಕನಕರನ್ನು ಇಂದು ಅನುಸಂಧಾನ ಮಾಡಿಕೊಳ್ಳುವಾಗ ಇಂದಿನ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಪ್ರಯತ್ನ ಮಾಡದೆ ಎಷ್ಟಕ್ಕೆ ಬೇಕೋ ಅಷ್ಟಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳಬೇಕು. ಏಕೆಂದರೆ ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಸಾಮಾಜಿಕ ಸಮಸ್ಯೆಗಳ ವಿಡಂಬನೆ ಮಾಡಿದ್ದರೂ ಸ್ತ್ರೀಯರ ಬಗೆಗಿನ ಅವರ ಪೂರ್ವಾಗ್ರಹ ನಿಲುವು ಯಾಕೆ ಬದಲಾವಣೆ ಹೊಂದಲಿಲ್ಲ. ಹೆಣ್ಣು ಕೇವಲ ಭೋಗದ ಸರಕು, ಗಂಡಿನ ಧಾರ್ಮಿಕ ಕಾರ್ಯಗಳಲ್ಲಿ ಸಹಾಯಕಳು ಎಂಬುದರ ಆಚೆಗೆ ಕನಕರ ದೃಷ್ಟಿ ಯಾಕೆ ಹರಿಯುವುದಿಲ್ಲ. ಹೀಗಾಗಿ ಕನಕದಾಸರು ವಚನ ಸಾಹಿತ್ಯದ ನಂತರದ ಕಾಲಘಟ್ಟದಲ್ಲಿ ಬಂದಿದ್ದರೂ, ತಳಸಮುದಾಯದವರಾಗಿದ್ದರೂ ಯಾಕೆ ಹೆಣ್ಣಿನ ಬಗ್ಗೆ ಪ್ರತಿಗಾಮಿ ಧೋರಣೆ ಹೊಂದಿದರು ಎಂಬುದು ಚರ್ಚಾರ್ಹವಾದ ವಿಷಯ. ಈ ಪ್ರಶ್ನೆಗೆ ಉತ್ತರ ಕೀರ್ತನೆಗಳಲ್ಲಿಯೆ ದೊರೆಯುತ್ತದೆ. ಇವರು ತಮ್ಮನ್ನು ಮಾಧ್ವಮತದ ಭಕ್ತಿ ಪಂಥದಲ್ಲಿ ಗುರುತಿಸಿಕೊಂಡಿದ್ದೇ ಕಾರಣ. ಕನಕರ ಈ ಲಿಂಗ ತಾರತಮ್ಯ ಅವರಿಗಾದ ಹಿನ್ನಡೆಯೂ ಹೌದು.

ಕನಕದಾಸರನ್ನು ನಾವು ವರ್ತಮಾನಕ್ಕೆ ಮುಖಾಮುಖಿಯಾಗಿಸುವಾಗ ಕನಕ ಮಂಡಿಸಿದ ಜಾತ್ಯಾತೀತ ಮೌಲ್ಯಗಳನ್ನು ಮಾತ್ರ ನಾವು ಪರಿಗಣಿಸಿ ಇಂದಿನ ಸಮಸ್ಯೆಗಳಿಗೆ ಪರಿಹಾರ ಹುಡುಕಬೇಕು. ಆಯಾ ಕಾಲಘಟ್ಟದಲ್ಲಿ

ಯುಗಧರ್ಮಗಳನ್ನು ಪ್ರಭಾವಿಸಿದ ಶಕ್ತಿಗಳಾದ ಈ ಸಾಂಸ್ಕೃತಿಕ ನಾಯಕರನ್ನು ಒಂದೊಂದು ಜಾತಿಯ ಪ್ರತಿನಿಧಿ ದೇವರನ್ನಾಗಿಸಿ ಪೂಜಿಸುವ ಪರಂಪರೆಯನ್ನು ಪ್ರತಿಭಟಿಸಬೇಕು. ಕನಕ, ಬಸವಣ್ಣ ಮೊದಲಾದ ದಾರ್ಶನಿಕರ ಚಿಂತನೆಗಳ ಫಲಿತಗಳನ್ನು ಬಳಸಿಕೊಂಡು ಜಾತ್ಯಾತೀತ ಮೌಲ್ಯಗಳನ್ನೊಳಗೊಂಡಂತಹ ನವ ಸಮಾಜದ ನಿರ್ಮಾಣಕ್ಕಿಳಿಯುವ ಅಗತ್ಯತೆ ಇಂದಿದೆ. ಇಂಥ ಸಾಧ್ಯತೆಗಳು ಈ ರೀತಿಯ ವಿಚಾರ ಸಂಕಿರಣಗಳಲ್ಲಿ ಗಂಭೀರವಾಗಿ ಚರ್ಚೆಯಾಗಿ ಕಾರ್ಯರೂಪಕ್ಕಿಳಿಯಬೇಕಾದ ಜರೂರಿದೆ.

## 2. ಕನಕ ಸಾಹಿತ್ಯದಲ್ಲಿ ಲೋಕದೃಷ್ಟಿ ಮತ್ತು ಬದಲಿ ಸಾಂಸ್ಕೃತಿಕ ರಾಜಕಾರಣದ ಸಾಧ್ಯತೆಗಳು

**– ಡಾ. ಮೂಡಲಗಿರಿಯಯ್ಯ**

ಶ್ರೀಯುತ ರಂಗನಾಥ ಕಂಟನಕುಂಟೆಯವರ ಈ ಲೇಖನವನ್ನು ಓದಿದಾಗ ಅರ್ಥವಾದ ಪ್ರಮುಖ ಅಂಶಗಳನ್ನು ಮಾತ್ರ ಚರ್ಚೆಗೆ ತೆಗೆದು ಕೊಂಡಿರುತ್ತೇನೆ. ಇವರು ಎತ್ತಿರುವ ಪ್ರಶ್ನೆಗಳು ಇಪ್ಪತ್ತೊಂದನೆ ಶತಮಾನದಲ್ಲಿ ಕನಕದಾಸರನ್ನು ಹೇಗೆ ಅರ್ಥಮಾಡಿಕೊಳ್ಳಬೇಕು ಎನ್ನುವ ಬಗೆಗಳನ್ನು ಅರ್ಥೈಸುವ ಪ್ರಯತ್ನ ಮಾಡಿದ್ದಾರೆ. ಮೂಲಭೂತವಾಗಿ ಕನಕ ವೈದಿಕ ಪರಂಪರೆಯ ಮೂಲ ಪರಿಭಾಷೆಗಳಿಗೆ ಪ್ರತಿಕ್ರಿಯೆ ಮಾಡಿರುವುದು ಕನ್ನಡ ಸಾಹಿತ್ಯದ ಪರಂಪರೆಯಲ್ಲಿ ಬಹುಮುಖ್ಯವಾದ ಪರಿಭಾಷೆಗಳಾಗಿ ಕಾಣುತ್ತವೆ. ಕನಕನ ಭಕ್ತಿಯ ಪರಿಕಲ್ಪನೆ ಸಾಮಾಜಿಕ ನೆಲೆಯಲ್ಲಿ ಮೂಡಿಸಿದ ಹೊಸ ಅರ್ಥಗಳ ಸಾಧ್ಯತೆಗಳು ಮಾತ್ರ ಸಾಂಸ್ಕೃತಿಕ ಪರಿಕಲ್ಪನೆಗಳನ್ನು ಸಮೂಹ ನಿಷ್ಠ ಮಾರ್ಗದಲ್ಲಿ ಅರ್ಥಮಾಡಿಕೊಂಡಾಗ ಮಾತ್ರ ಕನಕ ನಮ್ಮ ಅಲೋಚನೆಗಳಿಗೆ ಸ್ಪಂದಿಸುತ್ತಾನೆ.

ಕನಕನನ್ನು ಈ ಸಂದರ್ಭಕ್ಕೆ ಅನ್ವಯಿಸಿ ಕೊಳ್ಳುವುದು ಮತ್ತು ಚರ್ಚೆಗೆ ಅನುವು ಮಾಡಿಕೊಡುವುದು ಬಹುಮುಖ್ಯವಾದ ವಿಚಾರವಾಗಿ ಕಾಣುತ್ತದೆ. ಕರ್ನಾಟಕ ಇತಿಹಾಸದ ಪರಂಪರೆಯಲ್ಲಿ ಹದಿನೈದು ಮತ್ತು ಹದಿನಾರನೆಯ ಶತಮಾನದ ಚರಿತ್ರೆಯನ್ನು ಗಮನಿಸಿದಾಗ, ವಿಜಯನಗರ ಸಾಮ್ರಾಜ್ಯವು ಆ ಕಾಲದಲ್ಲಿ ರಾಜಕೀಯವಾಗಿ ವೈಭವ, ಸುಖ ಸೌಭಾಗ್ಯಗಳ ಬೀಡಾಗಿರವುದನ್ನು ಚರಿತ್ರಕಾರರು ಮತ್ತು ಕವಿಚರಿತ್ರಕಾರರು ದಾಖಲಿಸಿರುವುದು ಸರಿಯಷ್ಟೆ ಆ ಕಾಲದಲ್ಲೇ ಭೋಗಜೀವನದ ನಶ್ವರತೆಯನ್ನೂ, ಸಂಸಾರದ ನಿಸ್ಸಾರತೆಯನ್ನು ಸಾರುವ ವೈರಾಗ್ಯ ಪ್ರಧಾನವಾದ ಸಾಹಿತ್ಯವನ್ನು ಸೃಷ್ಟಿಸಿರುವುದು ಆ ಕಾಲದ ವಿರೋಧಭಾಸ ಮತ್ತು ವಿಪರ್ಯಾಸ. ಇದು ಆ ಕಾಲದ ಸಾಮ್ರಾಜ್ಯದ ವಿಸ್ತರಣೆಗಾಗಿ ನಡೆದ ಯುದ್ಧ ಮತ್ತು ಸುಖ ಲೋಲುಪ್ತರಾದ ಜನತೆಯ ಅಧಃಪತನದ ಅರಿವು, ವಿಚಾರವಂತರ ಹೊಸ ಎಚ್ಚರಿಕೆಗೆ ಕಾರಣವಾಗಿದೆ. ಇದು ಆ ಕಾಲದ ಜನಸಾಮಾನ್ಯರಿಗೆ ವ್ಯಾಪಕವಾಗಿ ನಿರಾತಂಕವಾಗಿ ಮತ್ತು ಸುರಕ್ಷಿತೆ ಇರಲಿಲ್ಲದ ಕಾಲ. ಕ್ರಿ.ಶ.1346

ರಿಂದ 1646ರವರಗೆ ವಿಜಯನಗರ ಸಾಮ್ರಾಜ್ಯದ ಮೂರು ಶತಮಾನಗಳ ಅವಧಿಯಲ್ಲಿ ವಿವಿಧ ರೀತಿಯ ಇಪ್ಪತ್ತು- ಮೂವತ್ತು ಯುದ್ಧಗಳು ನಡೆದಿರುವುದನ್ನು ಕನ್ನಡ ನಾಡಿನ ಚರಿತ್ರಕಾರರು ನಿರೂಪಿಸಿದ್ದಾರೆ. ಈ ರೀತಿಯ ಯುದ್ಧ ಪರಂಪರೆಗಳಿಂದಾಗಿ ದೇಶದಲ್ಲಿ ಜನರಿಗೆ ನೆಮ್ಮದಿ ಮತ್ತು ಭದ್ರತೆಗಳು ಇರದ ಕಾಲದಲ್ಲಿ ದಾಸರು ಭಕ್ತಿ ಮಾರ್ಗವನ್ನು ಕಂಡುಕೊಂಡರು. ದಾಸ ಸಾಹಿತ್ಯದಲ್ಲಿ ವೈಚಾರಿಕ ಪ್ರಜ್ಞೆ ಉಂಟಾಗಲು ಆ ಕಾಲದ ರಾಜಕಾರಣ ಪ್ರಮುಖ ಪಾತ್ರವಹಿಸಿತ್ತು ಅನ್ನುವುದು ಗಮನಾರ್ಹವಾದ ಅಂಶ.

1. **ಕನಕನನ್ನು ಸಾಂಸ್ಕೃತಿಕ ನಾಯಕನಾಗಿ ನೋಡುವ ಬಗೆ:** ಕನಕ ಸಾತ್ವಿಕ ರಾಜಕಾರಣ ಮಾಡಿದವನು. ಆ ಕಾಲದಲ್ಲಿ ವಿಜಯನಗರದ ರಾಜರಿಗೆ ವಿನಯವಾಗಿ ಇದ್ದುಕೊಂಡು ಸಾಮಾಜಿಕ ಬದುಕಿನ ಅರ್ಥಗಳನ್ನು ಗ್ರಹಿಸಿದವನು. ಜಾತಿ, ಮತ, ಧರ್ಮ, ಪಂಥಗಳು ಕನಕನ ಮೇಲೆ ಉಂಟುಮಾಡಿದ ಪರಿಣಾಮಗಳು ಹೆಚ್ಚು, ಅವು ಜಾತಿಯಿಂದಾದ ಅವಮಾನ, ಮತದಿಂದಾದ ಜಿಗುಪ್ಸೆ, ಧರ್ಮದಿಂದಾದ ನಿರರ್ಲಕ್ಷತೆ ಮತ್ತು ಹಲವು ಪಂಥಗಳು ಸಾಮಾಜಿಕ ನೆಲೆಗಳನ್ನು ಒಡೆದಾಳುವ ಪ್ರಭುತ್ವದ ನೆಲೆಯ ಕ್ರೌರ್ಯವನ್ನು ನಿರಕಾರಿಸಿ ಮತ್ತು ತನ್ನ ಸಾವು ಬದುಕಿನ ಹೋರಾಟದಲ್ಲಿ ಹೊರಗೆ ಬಂದು ಭಕ್ತಿಯ ಕಡೆ ಮುಖ ಮಾಡಿರುವುದು ರಾಜಕೀಯಪ್ರಜ್ಞೆ ಎಂದು ಅಂದು ಕೊಳ್ಳಬಹುದು. ಈ ರಾಜಕೀಯ ಪ್ರಜ್ಞೆಯೇ ಕನಕನನ್ನು ಸಾಮಾಜಿಕ ನಾಯಕನಾಗಿ ರೂಪಿಸಿದ್ದು. ಇದು ಮುಂದೆ ಯಾವ ಮತವನ್ನು ಬಿಡದೆ, ಯಾವ ಮತಕ್ಕೂ ಅಂಟಿಕೊಳ್ಳದೆ ಸಕಲ ತತ್ವಗಳನ್ನು ಮೀರಿ ನಿರ್ದಿಗಂತವಾಗಿ ಬೆಳೆದು ವಿಶ್ವಮಾನವತ್ವವನ್ನು ಸಂಪಾದಿಸಿಕೊಳ್ಳುತ್ತಾನೆ. ಕನಕನ ತಾತ್ವಿಕ ನೆಲೆಗಳು ವಾಸ್ತವದ ರಾಜಕಾರಣದ ಮೇಲೆ ಪ್ರಭಾವವನ್ನು ಬೀರುತ್ತವೆ. ಕನಕನನ್ನು ನೋಡುವ ರಾಜಕಾರಣಿಗಳು ಕನಕನ ಪ್ರಮುಖ ಕಾಳಜಿಗಳನ್ನು ಗ್ರಹಿಸಿಕೊಂಡಾಗ ಮಾತ್ರ, ಜಾತಿ, ಮತ, ಧರ್ಮ, ಮೇಲು ಕೀಳು, ಬಡವ ಬಲ್ಲಿದ ಮತ್ತು ಅಸಮಾನತೆಗಳನ್ನು ರಾಜಕೀಯ ಲಾಭಕ್ಕೆ ಬಳಸಿಕೊಳ್ಳಬಾರದು ಎನ್ನುವ ಸಾಮಾಜಿಕ ಕಾಳಜಿ ಬರಬೇಕಾದರೆ, ಕನಕನ ರಾಜಕೀಯ ಪ್ರಜ್ಞೆ ಒಂದು ವೈಚಾರಿಕ ಪ್ರಜ್ಞೆಯಾಗಿ ರೂಪಿಸುವ ಕೆಲಸಗಳು ಆಗ ಬೇಕು ಆಗ ಕನಕ ಒಬ್ಬ ಸಾಂಸ್ಕೃತಿಕ ನಾಯಕನಾಗುತ್ತಾನೆ. ಜಾತಿಯ ಚರ್ಚೆಯನ್ನು ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಗಾಂಧಿ ಅಸ್ಪೃಶ್ಯರನ್ನು ಹರಿಜನ ಎಂದು ಕರೆದಂತೆ ಹದಿನೈದನೆ ಶತಮಾನದಲ್ಲಿ ರಚನೆಯಾದ ಕನಕನ 'ರಾಮಧಾನ್ಯ ಚರಿತೆ'ಯಲ್ಲಿ ನಡೆಯುವ ಜಾತಿ ಮತ್ತು ವರ್ಗ ಸಂಘರ್ಷದ ಚರ್ಚೆಯಲ್ಲಿ ರಾಗಿ ಮತ್ತು ಭತ್ತ ದ ಶ್ರೇಷ್ಟತೆಯ ಪ್ರಶ್ನೆಗಳನ್ನು ಎತ್ತಿದ ಕನಕರು ಸ್ವಕಲ್ಪಿತ ಕಥಾವಸ್ತುವಿನಲ್ಲಿ 'ದೇವರು ಬಡವರ ಕೈವಾರಿ, ಭಕ್ತರ ಪಕ್ಷಪಾತಿ ಎಂಬುದನ್ನು ರಾಗಿ ಮತ್ತು ಭತ್ತಗಳ ನಡುವೆ ವಾದ ನಡೆಸಿ ಅದರಲ್ಲಿ ರಾಗಿ ಗೆದ್ದಿತೆಂದು ಅದಕ್ಕೆ ರಾಮ "ರಾಘವ" ಎಂಬ ಹೆಸರನಿತ್ತು ಕರೆದಿರುವುದು ಕಾಲಘಟ್ಟಗಳಲ್ಲಿ ಸಾಮಾಜಿಕ ಮೌಲ್ಯಗಳು ಕಾಲದ

ಜೊತೆಯಲ್ಲಿ ಸಾಗಿ ಅವು ಸಾಂಸ್ಥಿಕ  ನೆಲೆಯನ್ನು ಪಡೆದು ಕೊಳ್ಳುತ್ತವೆ ಅನ್ನುವುದು ಚರಿತ್ರಾರ್ಹ.

**2. ವೈದಿಕ ಪರಂಪರೆಯ ಮಾಧ್ವಮತವನ್ನು ಅನುಸರಿಸದ ನೆಲೆ:** ಕನಕನ ತಂದೆ ವಿಜಯನಗರ ಸಾಮ್ರಾಜ್ಯದ ಮಂಡಳಿಕ, ವಂಶೋದ್ಧಾರಕ್ಕಾಗಿ ತಿರುಪತಿ ತಿಮ್ಮಪ್ಪನಿಗೆ ಹರಕೆ, ಹುಟ್ಟಿದ ಮಗನಿಗೆ ತಿಮ್ಮಪ್ಪನೆಂದು ಹೆಸರಿಸುವುದು. ಕ್ಷತ್ರೀಯ ವಿದ್ಯೆಗಳ ಕಲಿಕೆ, ಮಂಡಲಿಕ ಪದವಿ, ಕರ್ತವ್ಯ ಪರಿಪಾಲನೆಯ ನಿಷ್ಠೆ, ಪ್ರಾಣವನ್ನು ಪಣವಾಗಿಟ್ಟು ಹೋರಾಡುವ ಛಲ, ಕೆಲವು ಸಾರಿ ಆದ ಸೋಲುಗಳು ಪದೇ ಪದೇ ತಿರುಪತಿಗೆ ಹೋಗಿಬರುತ್ತಾ ರಾಮಾನುಜರ ಪರಿಚಯ, ಭಕ್ತಿಯಕಡೆ ಸೆಳೆತ, ವ್ಯಾಸರಾಯರ ಅಚ್ಚುಮೆಚ್ಚಿನ ಶಿಷ್ಯರಾಗುವುದು ಅಧಿಕಾರ, ಯುದ್ಧ ಮತ್ತು ಸಂಸಾರದ ಬಗ್ಗೆ ಸಹನೆ ಕಳೆದುಕೊಂಡು ಭಕ್ತನಾದನೆಂದು ತೋರುತ್ತದೆ. ಮಾಧ್ವಪರಂಪರೆಯ ಭಕ್ತನಾದರೂ ದೀಕ್ಷೆಯನ್ನು ಸ್ವೀಕರಿಸಿದ ದಾಖಲೆಗಳನ್ನು ಚರಿತ್ರಕಾರರು ದಾಖಲಿಸಿರುವುದಿಲ್ಲ. ವೈಷ್ಣವ ಮತವನ್ನು ಅಷ್ಟೇ ಯಾವ ಮತ ಧರ್ಮವನ್ನು ಅಧಿಕೃತವಾಗಿ ಸ್ವೀಕರಿಸಿರುವುದು ಕಾಣದು. ಕನಕರು ಬೆಳೆದಂತೆ ಎಲ್ಲಾ ಮತಗಳ ಪ್ರಭಾವಕ್ಕೆ ಒಳಗಾಗಿ ಭಕ್ತನಾದಂತೆ ಕಾಣುತ್ತದೆ. ಮಧ್ಯಕಾಲೀನಯುಗದ ಭಕ್ತಿ ಪಂಥವು ಹೊಸ ಧರ್ಮಗಳಿಗೆ ಜನ್ಮವನ್ನು ಕೊಟ್ಟು, ಸಾಮಾನ್ಯ ಜನತೆಗೆ ದೇವರ ಸಾನಿಧ್ಯ ಪಡೆಯಲು ಇರುವ ಎಲ್ಲ ತೊಡಕುಗಳನ್ನು ನಿವಾರಿಸಿರುವುದು ಮತ್ತು ಭಕ್ತಿ ಚಳುವಳಿಯ ಕೇಂದ್ರ ಲಕ್ಷಣವೆಂದರೆ ಅದರ ಮುಕ್ತ ವಾತಾವರಣ. ಜಾತಿ ಭೇದವಿಲ್ಲದೆ ಎಲ್ಲರನ್ನು ತಲುಪಿದ್ದು ಕನಕನ ಭಕ್ತಿಯ ಆಶಯಗಳು ಮಾತ್ರ. ಆ ಕಾಲದ ಚರಿತ್ರೆಯನ್ನು ಅಧ್ಯಯನ ಮಾಡಿದರೆ ಒಳಹುಗಳು ಸಿಗುತ್ತವೆ. ಈ ಕಾರಣದಿಂದ ಕನಕದಾಸರ ಸಾಹಿತ್ಯವನ್ನು ಅಭ್ಯಾಸ ಮಾಡಿದಷ್ಟು ಚರಿತ್ರೆಯ ರಾಜಕಾರಣ ಮತ್ತು ಸಾಮಾಜಿಕಕಾರಣ ಜೊತೆಗೆ ಸಾಂಸ್ಕೃತಿಕ ಕಾರಣಗಳು ಕಾಣುತ್ತವೆ. ಕನಕರು ರಚಿಸಿದ  'ಹರಿಭಕ್ತಿಸಾರ'  'ರಾಮಧಾನ್ಯ ಚರಿತೆ' 'ನಳಚರಿತೆ' 'ಮೋಹನತರಂಗಿಣಿ' ಮತ್ತು  ನೃಸಿಂಹಸ್ತವ' ಕಾವ್ಯಗಳ ಮೂಲಕ ಮಾಧ್ವಮತತತ್ವಗಳನ್ನು ಪ್ರಚುರ ಪಡಿಸಿದರು. ಆ ಕಾವ್ಯಗಳ ಮೂಲಕ ಎತ್ತುವ ಪ್ರಶ್ನೆಗಳು ಕೆಳಸಮುದಾಯಗಳ ಬಗ್ಗೆಯೇ ಅನ್ನುವುದು ರಾಮಧಾನ್ಯ ಚರಿತೆಯಲ್ಲಿ ಕಾಣಸಿಗುತ್ತದೆ. ಕನಕ ಶೂದ್ರಪ್ರಜ್ಞೆಯ ಮೂಲಕ ಪ್ರಶ್ನೆಯನ್ನು ಎತ್ತಿದ್ದಾನೊ ಅನ್ನುವಷ್ಟರ ಮಟ್ಟಿಗೆ ಅಧಿಕೃತವಾಗಿ ಕಾಣುತ್ತವೆ. ಮೋಹನತರಂಗಿಣಿಯಲ್ಲಿ  ಕೃಷ್ಣ-ಬಾಣಾಸುರರ ಯುದ್ಧದ ಪರ್ಯವಸಾನವನ್ನು ಭಾಗವತ ಧರ್ಮದ ಪ್ರಚಾರಕ್ಕಾಗಿ ಬಳಸಿಕೊಂಡರು  ಇದನ್ನು ಕೃಷ್ಣ ಚರಿತೆ ಎಂದು ಕರೆದಿರುವುದು ಕೃಷ್ಣದೇವರಾಯನ ಚರಿತ್ರೆಯನ್ನೇ ಅನ್ನುವುದು ಸಹ ಕನಕನ ರಾಜಕೀಯ ಉದ್ಧೇಶದಿಂದಲೇ ಕಾವ್ಯ ರಚನೆ ಮಾಡಿರುವಂತೆ ಕಾಣುತ್ತದೆ ಅಲ್ಲವೆ.

**3. ಕನಕ ಎತ್ತಿದ ಪ್ರಶ್ನೆಗಳು ಮತ್ತು ಅನುಸರಿಸಿದ ಮಾರ್ಗಗಳು:** ಜಾತಿ ಮತ್ತು ಅಸಮಾನತೆಗಳ ಪ್ರಶ್ನೆಗಳು ಕನಕನ ಕಾಲಕ್ಕೆ ಮಾತ್ರ ಸೀಮಿತವಾಗಿಲ್ಲ, ಅವು ಈ

ಶತಮಾನದಲ್ಲಿ ಬೇರೆ ಬೇರೆ ರೂಪಗಳನ್ನು ಮತ್ತು ರಾಜಕೀಯ ಪರಿಭಾಷೆಗಳಾಗಿ ಅರ್ಥಪಡೆದುಕೊಳ್ಳುತ್ತಿವೆ. ಜಾತಿ ಮತ್ತು ಅಸಮಾನತೆ ಬಗ್ಗೆ ಕನಕನು ಎತ್ತಿದ ಪ್ರಶ್ನೆಗಳಿಗೆ ಆತನೇ ಉತ್ತರಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಿದ್ದಾನೆ. ಇಪ್ಪತ್ತೊಂದನೆ ಶತಮಾನದಲ್ಲಿ ನಿಂತುಕೊಂಡು ಕನಕನ ಸಾಮಾಜಿಕ ಮತ್ತು ರಾಜಕೀಯ ಆಶಯಗಳನ್ನು ಈ ಕಾಲಕ್ಕೆ ಅನ್ವಯಿಸಿಕೊಳ್ಳುವುದು ಮಾತ್ರ ಕಷ್ಟವಾದರೂ, ವಿಜ್ಞಾನ ಮತ್ತು ತಂತ್ರಜ್ಞಾನದ ಯುಗದಲ್ಲಿಯೂ ಆತನು ಎತ್ತಿದ ಪ್ರಶ್ನೆಗಳು ಮಾತ್ರ ಹಾಗೆಯೇ ಬೇರೆ ಪರಿಭಾಷೆಗಳ ಮೂಲಕ ಸಮಾಜದ ಕೆಳ ಸಮುದಾಯಗಳನ್ನು ರಾಜಕೀಯವಾಗಿ ಮತ್ತು ಸಾಂಸ್ಥಿಕ ನೆಲೆಯಲ್ಲಿ ಇನ್ನೂ ಕಬಂದ ಬಾಹುಗಳಲ್ಲಿ ಕಟ್ಟಿಹಾಕಿರುವುದು, ಪ್ರಭುತ್ವಶಾಹಿಯ ಮೂಲ ಪರಿಕಲ್ಪನೆಗಳಲ್ಲಿ ಅನ್ನುವುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಅದ್ದರಿಂದಲೇ ಕನಕ ಕಂಡುಕೊಂಡ ಮಾರ್ಗ ಭಕ್ತಿಮಾರ್ಗ ಮತ್ತು ಸಮಾಜ ಪರಿವರ್ತನ ಮಾರ್ಗ. ಕೀರ್ತನೆಗಳ ಮೂಲಕ ಕೆಳಸಮುದಾಯದ ಪ್ರಭುತ್ವದ ನಂಬಿಕೆ ಮತ್ತು ಆಶಯಗಳನ್ನು ವೈಚಾರಿಕ ನೆಲೆಯಲ್ಲಿ ಅರಿವಿನ ರೂಪಕಗಳನ್ನು ತನ್ನ ಸಾಹಿತ್ಯದ ಅಥವಾ ಕಾವ್ಯಗಳ ಮೂಲಕ ಸಮುದಾಯವನ್ನು ಎಚ್ಚರಿಸುವ ಮತ್ತು ತಿದ್ದುವ ಪ್ರಯತ್ನ ಮಾಡಿದನು. ಆದರೆ ಪ್ರಭುತ್ವವನ್ನು ಹಿಡಿದ ಎಲ್ಲಾ ಸಮುದಾಯಗಳು ಕನಕ ಎತ್ತಿದ ಪ್ರಶ್ನೆಗಳನ್ನು ಬಂಡವಾಳ ಮಾಡಿಕೊಳ್ಳುವುದರೊಂದಿಗೆ ಶೋಷಿತ ಸಮುದಾಯಗಳನ್ನು ಇನ್ನೂ ಅದೇ ಮಾದರಿಯಲ್ಲಿಯೇ ಇರಿಸಿರುವುದು ಮಾತ್ರ ದುರಂತವಾಗಿ ಕಾಣುತ್ತದೆ. ಈ ಕಾರಣದಿಂದಲೇ ಕನಕ ಈ ದಿನಕ್ಕೂ ಪ್ರಸ್ತುತವಾಗುತ್ತಿರುವುದು. ಜೊತೆಗೆ ಸಾಂಸ್ಕೃತಿಕ ನಾಯಕನಾಗಿ ಕಾಣುವುದು. ಜಾತಿ–ವರ್ಗಗಳನ್ನು ಮೀರಿದ ಸಮಾಜವನ್ನು ಕಟ್ಟಿಕೊಳ್ಳುವ ಪ್ರಯತ್ನಗಳು ಎಷ್ಟೇ ಚಳುವಳಿಗಳು ನಡೆದರೂ ಜಾತಿ ಮತ್ತು ಅಸಮಾನತೆಯ ಪರಿಕಲ್ಪನೆಗಳು ಪ್ರಭುತ್ವದ ರಾಜಕಾರಣದಲ್ಲಿ ಜೀವಂತವಾಗಿರಿಸಿ ಕೊಂಡು ಅಸ್ತಿತ್ವದ ಹುಡುಕಾಟದಲ್ಲಿ ಎಲ್ಲಾ ಸಮುದಾಯಗಳು ತೊಡಗಿರುವುದು ಸಮಾಜದ ಹೊಸಆಶಯಗಳ ಹುಟ್ಟಿಗೆ ತಡೆಗೋಡೆಯಾಗಿವೆ.

### 3. ಅಹಂ, ಕುಲಂ ನಿರಸನದ ಹಾದಿ

– ಡಾ. ಕುಂಸಿ ಉಮೇಶ್

ಅನನ್ಯ ಸಾಂಸ್ಕೃತಿಕ ಪ್ರಜ್ಞೆ ಮತ್ತು ನಿಸರ್ಗ ವಿವೇಕದಕನಕನನ್ನು, ಕನ್ನಡ ಸಂಸ್ಕೃತಿಯ ತಿಳುವಳಿಕೆಯ ಭಾಗವಾಗಿ ಈವರೆಗೂ ಅಧ್ಯಯನ ಮಾಡಲಾಗಿಲ್ಲ. ಕರ್ನಾಟಕ ನೆಲದಲ್ಲಿ ಮತ್ತೆ ಮತ್ತೆ ಎದುರಾಗುವ ಜಾತಿ ಕುಲಸಂಬಂಧಿ ನೆಲೆಯಲ್ಲಿಯೇ ನಡೆಕಾರರು, ವಚನಕಾರರು ಮತ್ತು ದಾಸಪರಂಪರೆಯನ್ನು ಪರಿಭಾವಿಸಲಾಗಿದೆ. ಮುಖ್ಯವಾಗಿ ಕನಕರನ್ನು ಕನ್ನಡ ಸಾಹಿತ್ಯದ ಮುಖ್ಯ ಸ್ಥಾನದಿಂದ ಹಿಂತಳ್ಳಿದ ಪರಂಪರೆಯೊಡನೆ ಈಗ ಮುಖಾಮುಖಿಯಾಗುವ ಕಾಲ ಒದಗಿದೆ. ಐದುನೂರು ವರ್ಷಗಳ ಹಿಂದೆ ಈ ನೆಲದಲ್ಲಿ ನಡೆದಾಡಿದ ನಡೆಕಾರ, ಕನಕನನ್ನು

ಹೊಸಕಾಲದ ಈ ಶತಮಾನದ ಎರಡನೇ ದಶಕದಲ್ಲಿ ನಿಂತು ಸಮಾಜೋ-ರಾಜಕೀಯ ಸಂಕಥನಕ್ಕಾಗಿ ಅಧ್ಯಯನ ಮಾಡುವಲ್ಲಿ ಕಾಲಕಾಲಕ್ಕೆ ಏರು-ಪೇರುಗಳು ಸಂಭವಿಸಬಹುದು. ಅದು ಅಧುನಿಕ ಶಿಕ್ಷಣ ಮತ್ತು ದಾರ್ಮಿಕ ಸಂಸ್ಥೆಗಳ ಗೋಜಲುಗಳಿಂದಲೂ ನಡೆಯತ್ತದೆ. ಆದರೆ ನಿಖರವಾಗಿ ಕನ್ನಡದ ಜ್ಞಾನ ಪರಂಪರೆಯನ್ನು ಕಟ್ಟಿಕೊಳ್ಳಬೇಕಾದ ಈ ಸಂದರ್ಭದಲ್ಲಿ ಬಹು ಎಚ್ಚರದಿಂದ ಎಲ್ಲ ಮಗ್ಗಲುಗಳಿಂದಲೂ, ಕಾಲದಿವ್ಯದಲ್ಲಿ ಹಾದು ಉಳಿದಿರುವ ಮಾಹಿತಿಗಳಲ್ಲಿಯೇ ಮರು ಜೋಡಿಸಿಕೊಂಡು, ಬದಲಿ ರಾಜಕಾರಣದ ಸಾದ್ಯತೆಯನ್ನು ಸಾಂಸ್ಕೃತಿಕವಾಗಿ ನಿರೂಪಿಸಿಕೊಳ್ಳಬೇಕಾಗಿದೆ.

ಏಕೆಂದರೆ ಕನಕದಾಸನನ್ನು ದಾಸಕೂಟದ ಸದಸ್ಯನಾಗಿ ಉಳಿಸಿಕೊಂಡು, ಉಡುಪಿಯ ಕನಕನ ಕಿಂಡಿಯ ಮೂಲಕವೇ ನೋಡುವ ಕನ್ನಡದ ವೈದಿಕ ಓದುಗಳು, ಸಾಂಪ್ರದಾಯಕ ಅಸತ್ಯದ ದಾರಿಗಳಾಗಿವೆ. ಇಂತಹ ದುರಂತದ ಕುರುಡು ಓದು, ಚರಿತ್ರೆಯ ಅವಮಾನಗಳಿಗೆ ಉತ್ತರ ಹುಡುಕಲು ಸೋಲುತ್ತವೆ. ಅಲ್ಲದೇ ಕನಕನ ನಿಜವಾದ ಲೋಕ ದೃಷ್ಠಿಯ ಸಾಂಸ್ಕೃತಿಕ ಪ್ರತಿನಿಧಿತ್ವವನ್ನು ಅಲ್ಲಗಳೆಯುತ್ತವೆ. ಅದ್ದರಿಂದಲೇ ದೈವೀಕರಣದ ಔನತ್ಯದಿಂದ ಹೊರಗಿಟ್ಟು, ಕನ್ನಡದ ತಿಳುವಳಿಕೆಯ ದಾರಿಯಾಗಿ ಹೆಚ್ಚು ಹಕ್ಕೊತ್ತಾಯದಿಂದ ಸಾಂಸ್ಕೃತಿಕ ಚಹರೆಗಾಗಿ ಮತ್ತು ಕನಕ ಸಾಹಿತ್ಯದ ಹೊರಚಾಚುಗಳ ಹಂಬಲಕ್ಕಾಗಿಯಾದರೂ ನಿಜದ ಓದಿನಲ್ಲಿ ಮರುಕಟ್ಟಿಕೊಳ್ಳಬೇಕಾಗಿದೆ.

ಮಧ್ಯಯುಗೀನ ವೈದಿಕ ಕವಿಗಳು ಪ್ರಚುರಗೊಳಿಸಿದ ಹರಿಕೀರ್ತನೆ ಮತ್ತು ಹರಿಕಥಾ ವಸ್ತುವುಳ್ಳ ಹಾಡುಗಬ್ಬಗಳಿಗೂ ನೇರ ಸಂಬಂಧವಿದೆ. ಇದಕ್ಕಿಂತ ಹಿಂದಿನ ವಚನ ಚಳುವಳಿಯ ತಿಳುವಳಿಕೆಗೂ, ದುಡಿಯುವ ವರ್ಗದ ಶಿವಸಂಸ್ಕೃತಿಯ ಹಿನ್ನಲೆಯಿಂದ ಕೂಡಿದ್ದಾಗಿದೆ. ಈ ಎರಡು ನೆಲೆಗಳಲ್ಲಿ ವ್ಯಾಸಕೂಟವು ನಿಲ್ಲದೆ, ತನ್ನದೇ ಆದ ವಿಶ್ರಮ-ತರ-ತಮ, ಅಲ್ಪ-ಶ್ರೇಷ್ಟ ಎಂಬ ಜಾಡಿನಲ್ಲಿ ಸಾಗುತ್ತದೆ. ಅದಕ್ಕಾಗಿಯೇ ದುಡಿಯುವ ವರ್ಗದ ಅನನ್ಯತೆಯನ್ನು ತನ್ನೊಳಗೆ ಲೀನ ಮಾಡಿಕೊಳ್ಳಲು ಸಾಧ್ಯವಾಗದೆ, ಈ ಪರಂಪರೆಯು ದಾಸಕೂಟ-ವ್ಯಾಸಕೂಟದಂತಹ ಯಜಮಾನ್ಯ ನೆಲೆಯಲ್ಲಿಯೇ ಉಳಿದು, ಕನಕನ ಸಾಹಿತ್ಯದಲ್ಲಿನ ಬಹುತ್ವದ ತಿಳಿವಳಿಕೆ ಕಟ್ಟಲಾರದೇ ಸೋತಿದೆ.

ಈ ದಾರಿಯ ದೃಷ್ಠಿಯಿಂದ ಕನಕನನ್ನು ಕನ್ನಡ ಸಂಸ್ಕೃತಿ ಮತ್ತು ತಿಳುವಳಿಕೆಯ ಆಕರವಾಗಿ ನಮ್ಮ ಓದಿನ-ಓದಿಸಿದ-ಕಣ್ಣಪರೆಗಳನ್ನು ಹರಿದೊಗೆದು ಹೊಸದಾಗಿ ಕಟ್ಟಿಕೊಳ್ಳಬೇಕು. ಇದು ಕನಕನನ್ನು ವರ್ತಮಾನಕ್ಕೆ ತರುವ ಕೆಲಸವಾಗಿದೆ. ಇಲ್ಲದಿದ್ದರೆ. ಈವರೆಗಿನ ಓದುಗಳು ಕನಕನ ಯಾವ ಸಾಂಸ್ಕೃತಿಕ ಹೊರಚಾಚುಗಳನ್ನು ಹೇಳಲಾರದೆ ಸೋತಿದೆಯೋ ಅಲ್ಲಿಯೇ ನಿಂತು ಬಿಡುತ್ತದೆ. ಇಲ್ಲವೇ ಮೀಮಾಂಸೆಯ ಓದಿನಲ್ಲಿ ಪಳಗಿ ಪ್ರವೀಣರಾದವರು ಹೇಳುವಂತೆ "ಕನಕನ

ರಾಮಧಾನ್ಯ ಚರಿತೆ ಕಾವ್ಯವೇ ಅಲ್ಲ" ಎಂಬುದೇ ಶಾಶ್ವತಗೊಳ್ಳುವ ಅಪಾಯ ಇರುತ್ತದೆ. ಈ ಹೊತ್ತಿಗೆ ವಿಸ್ತಾರದ ನೆಲೆಯಲ್ಲಿ ಕನಕ ಕನ್ನಡದ ಸಾಂಸ್ಕೃತಿಕ ರಾಜಕಾರಣದ ತಾತ್ವಿಕತೆಗೆ ಬೇಕಾಗುವ ಮಾದರಿಯಾಗಿದ್ದಾನೆ. ಏಕೆಂದರೆ ಮಧ್ಯಕಾಲಿನ ಭಕ್ತಿ ಚಳುವಳಿಯನ್ನು "ಪ್ರಗತಿಪರ-ಪ್ರಭುತ್ವ ವಿರೋಧಿ ಎಂತಲೊ ದಾರ್ಶನಿಕ-ಅಧ್ಯಾತ್ಮ" ಎಂತಲೊ, ಹೀಗೆ ಏಕಾಕಾರದಲ್ಲಿ ನೋಡಲು ಸಾಧ್ಯವಿಲ್ಲ. ವಚನ ಚಳುವಳಿಯನ್ನು ಒಳಕೊಂಡಂತೆ ದಾಸ ಪರಂಪರೆ ಕೂಡ ದುಡಿಯುವ ವರ್ಗದ ಅನೇಕ ಬಹುತ್ವದ ಸಾಂಸ್ಕೃತಿಕ ಚಹರೆಗಳನ್ನು ನುಂಗಿ, ಶಿವಪಾರಮ್ಯದ ಲಿಂಗದಾರಣೆ, ಹರಿ ಸರ್ವೋತ್ತಮತೆಯ ಕಥನದ ವಿಜೃಂಭಣೆಗೆ ಇಡೀ ಅಹಿಂದ ಸಮುದಾಯವನ್ನು ದೂಡಿದೆ. ಆ ಕಾಲ ಘಟ್ಟದ ಕನಕನನ್ನು ಚಾರಿತ್ರಿಕ ಸಂದರ್ಭದೊಳಗಿಂದಲೇ ಕಟ್ಟಿಕೊಂಡರೂ ಕೂಡ, ಆತನ ಪ್ರಖರವಾದ ಚಿಂತನೆಗಳ ನಡುವೆಯೇ ಮಾಧ್ವ ಪಂಥದ ಭಕ್ತಿಯ ನೆಲೆಗಳು ಸಮಸ್ಯಾತ್ಮಕವೇನೊ ನಿಜ. ಆದರೆ ಕನಕ ಒಪ್ಪಿಕೊಂಡುದು ಶುದ್ಧ ವೈಷ್ಣವ ಮಾರ್ಗವಲ್ಲ, ಬದಲಿಗೆ ಒಂದು ವಿಸ್ತೃತವಾದ ಭಕ್ತಿಯ ಆವರಣ. ಅದ್ದರಿಂದಲೇ ಮಾಧ್ವ ದರ್ಶನದ ದಾಸರಿಗಿಂತ ಭಿನ್ನವಾಗಿ ಕನಕರು 'ಮೋಹನತರಂಗಿಣಿ' ಮತ್ತು 'ನಳಚರಿತೆ'ಯಲ್ಲಿ ಕೃಷ್ಣನನ್ನು, ರಾಮಧಾನ್ಯಚರಿತೆಯಲ್ಲಿ ರಾಮನ ವ್ಯಕ್ತಿತ್ವವನ್ನು ಕಟ್ಟಲು ಸಾಧ್ಯವಾಗಿದೆ. ಇದು ಕನಕರು ದಂಡನಾಯಕರಾಗಿದ್ದಾಗ ಹೊಂದಿದ್ದ 'ಅಹಂ'ಗೂ, ನಂತರ ದಾಸಕೂಟದ ಸದಸ್ಯರಾದಾಗ ಎದುರಿಸಿದ 'ಕುಲಂ' ಅವಮಾನಕ್ಕೂ ಮೀರಿದ, ತಾನೇ ನಿರೂಪಿಸಿಕೊಂಡ ಒಂದು ಮಾರ್ಗ. ಅದು ಆತನ ಒಟ್ಟು ಪಯಣದ ಸಂಕಥನವೂ ಆಗಿದೆ. ಆದ್ದರಿಂದಲೇ ನಮ್ಮ ಸಾಂಸ್ಕೃತಿಕ ಚಹರೆಯಲ್ಲಿ ಕನಕನ ದಾರಿಯನ್ನು 'ಅಹಂ-ಕುಲಂ' ನಿರಸನದ ದಾರಿಯಾಗಿಯೂ ನೋಡಬೇಕಾಗುತ್ತದೆ. ಈ ಮಾದರಿಯಲ್ಲಿ ಕನಕನ ಲೋಕದೃಷ್ಟಿ ಮತ್ತು ಸಾಂಸ್ಕೃತಿಕ ರಾಜಕರಣದ ಗುರುತುಗಳನ್ನು ಅರ್ಥೈಸಲು ಸಾಧ್ಯವಾಗುತ್ತದೆ.

ಗೆಳೆಯ ರಂಗನಾಥ್ ತಮ್ಮ ಪ್ರಬಂಧದಲ್ಲಿ ಗುರುತಿಸಿದಂತೆ ಯಾವುದೇ ಬರೆಹಗಾರನಿಗೆ ಕಾಲಧರ್ಮದ ಕಾರಣಕ್ಕೆ ತಾತ್ವಿಕ ಸಮಸ್ಯೆಗಳು, ಬಿಕ್ಕಟ್ಟುಗಳು ಸಹಜ. ಕನಕ ಕೂಡ ಇದಕ್ಕೆ ಹೊರತಲ್ಲ ನಿಜ. ಆದರೆ ಕನಕ ಐದು ಶತಮಾನದ ಹಿಂದೆ ಎತ್ತಿದ ಪ್ರಶ್ನೆಗಳಿಗೂ, ಈ ಹೊತ್ತಿನ ಅಹಿಂದ ಯೋಜನೆಗಳ ಹಿಂದಿರುವ ಸಮಾನತೆಯ ಸಾಕಾರತತ್ವ ರಾಜಕಾರಣಕ್ಕೂ ಅಂತಹ ವ್ಯತ್ಯಸವಿಲ್ಲ. ಆದರೆ ಜಾತಿ-ಕುಲ ಮತ್ತು ಬಡತನದ ಸಮಸ್ಯೆಗಳು ನಮ್ಮ ಸಮಾಜದ ಮೂಲಭೂತ ರಚನೆಯಾಗಿರುವುದರಿಂದ, ಬದಲಿ ಸಾಂಸ್ಕೃತಿಕ ರಾಜಕಾರಣದ ಸಾಧ್ಯತೆಗಳನ್ನು ಈ ನೆಲೆಗಳಲ್ಲಿಯೇ ಪಡೆದುಕೊಳ್ಳಬೇಕಿದೆ. ಅದಕ್ಕೆ ಕನಕನ ನಿರ್ವಚನಗಳು ಹೇಗೆ ಪೂರಕ ಎಂಬುದನ್ನು ಚಾಲ್ತಿಯಲ್ಲಿರುವ ಕನಕ, ಮತ್ತು ನಮಗೆ ಬೇಕಾದ ಕನಕ, ಎಂಬ ನೆಲೆಯಲ್ಲಿ ವಿಭಜಿಸಿ ವಿವರಿಸಿಕೊಳ್ಳಬೇಕಾಗುತ್ತದೆ. ಓದು ಮತ್ತು ಓದುವ

ಕ್ರಮದ ಮೂಲಕ ಮೂಡುವ ರಾಜಕಾರಣವನ್ನು ಅರ್ಥೈಸುವ ನಿಟ್ಟಿನಲ್ಲಿ ಈ ವಿಶ್ಲೇಷಣೆ ಅನಿವಾರ್ಯವೂ ಆಗಿದೆ.

ಕನಕನ ಕನ್ನಡ ತಿಳುವಳಿಕೆ ಒಂದು ಅಚ್ಚಿಗೆ ಸಿಗುವ ಆಕಾರವಲ್ಲ ಕೆ.ವಿ.ಎನ್.ರವರು ಕನಕನನ್ನು ಎರಡು ಮಾದರಿಯಲ್ಲಿ– ಕಥನ(ಕಾವ್ಯ)ದ ಕನಕ, ಕೀರ್ತನೆಯ ಕನಕನನ್ನಾಗಿ ನೋಡಿ, ಆತನ ಭಾಷಿಕರಚನೆಯಲ್ಲಿ ಬಳಸುವ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸಿದ್ದಾರೆ. ಇನ್ನುಳಿದಂತೆ ಕನ್ನಡದಲ್ಲಿನ ಕನಕನ ಓದುಗಳು, ಒಂದೋ ಕುರುಬ ನೆಲೆಯದು. ಇನ್ನೊಂದು ವೈದಿಕ ಮತದ್ದು. ಈ ಎರಡು ಓದುಗಳಿಂದ ಕನಕನ ಅಬ್ರಾಹ್ಮಣ ಲೋಕದರ್ಶನವಾಗಲಿ, ಸಾಂಸ್ಕೃತಿಕ ರಾಜಕಾರಣದ ಸಾಧ್ಯತೆಗಳಾಗಲಿ ಕೈಗೂಡುವುದಿಲ್ಲ. ಜಾತಿ ಮೂಲಭೂತವಾದ ಮತ್ತು ಪುರುಷಾಡಳಿತ ಮೂಲಭೂತವಾದ ಆಕ್ರಮಣದ ಎದುರು ನಾವೀಗ ಕಟ್ಟಬೇಕಾದ ಹೊಸ ಸಮಾಜದ ಸವಾಲುಗಳೇನು? ಮತ್ತು ಕನಕನ ಜಾತಿಭಂಜನೆ–ಬಯಲ ಅಚ್ಯುತನ ನೆಲೆ (ಉಡುಪಿಯ ಕೃಷ್ಣ)ಗಳು ಆತನು ಪಯಣಿಸಿದ ಕುಲಂ ನಾಶದ ದಾರಿಯೇ ಆಗಿದೆ. ಈ ದಾರಿಯನ್ನು ಇನ್ನಷ್ಟು ಹತ್ತಿರದಿಂದ ಕಂಡಾಗ, ಇಂದು ಕನಕನ ಅಭಿಮಾನಿಗಳು ನಡೆಸುವ ಜಾತಿಯತೆಯ ಕುರುಹುಗಳನ್ನು ಕನಕನ ವಿಚಾರಗಳಿಂದ ದೂರ ಮಾಡುವುದರಿಂದ ಆರಂಭಗೂಂಡು, ಕನಕನನ್ನು ಕೇವಲ ಕುರುಬನನ್ನಾಗಿ ನೋಡುವ ವೈದಿಕ ಭಕ್ತಿಪಂಥದ ನಿರ್ವಚನಗಳಿಂದಲೂ ಮಧ್ಯಯುಗೀನ ಕನಕನನ್ನು ಪಾರುಮಾಡಿ ವರ್ತಮಾನಕ್ಕೆ ತರುವುದಾಗಿದೆ. ಇದು ಜಾತ್ಯತೀಯ ಸಮಾಜ ಕಟ್ಟುವಲ್ಲಿ ಕನಕನ ರಚನೆಗಳ ಆಳದ ನೋವನ್ನು ಹುಡುಕುವ ಅರ್ಥೈಸುವ ಹಾದಿಯೂ ಆಗುತ್ತದೆ.

ಕರ್ನಾಟಕದ ವರ್ತಮಾನದ ಕಾಲದಲ್ಲಿ ರಾಜಕೀಯ ದಾಳವಾಗಿ ಬಳಕೆಯಾಗುತ್ತಿರುವ ಬಸವಣ್ಣ–ಕನಕರು ಸಾಂಸ್ಕೃತಿಕ ನಾಯಕರಾಗಿ ಮಾತ್ರ ಉಳಿಯಬಲ್ಲ ಹಂತದಲ್ಲಿದ್ದಾರೆ. ಇದು ಕನ್ನಡ ಜ್ಞಾನ ಪರಂಪರೆಯನ್ನು ಅಲ್ಲಾಡಿಸಿ ಬಿಡುವ ಅಥವಾ ನಾಶಮಾಡುವ ವೈದಿಕ ರೂಪವಾಗಿದೆ. ಅದೇ ರೀತಿ ಹೊತ್ತು ಮೆರೆಯುವ ಶೂದ್ರಾದಿ ದುಡಿಯುವ ವರ್ಗದ ಜೀತವಾಗಿಯೂ ಕಾಣುತ್ತದೆ. ಲೋಕದೃಷ್ಠಿಯನ್ನು ಕುರುಡಾಗಿಸುವ ಇಂತಹ ಮೆರವಣಿಗೆಗಳಿಂದ ಯಾವ ಸಂತನೂ, ನಡೆಕಾರನೂ ವೈಚಾರಿಕ ಕ್ರಾಂತಿಗೆ ಕಾರಣರಾದ ಬುದ್ಧ, ಅಂಬೇಡ್ಕರರ ಸೈದ್ಧಾಂತಿಕತೆಯೂ ಉಳಿಯಲಾರದು.

ಈವರೆಗೆ ಎತ್ತಿದ ಚರ್ಚೆಗಳಲ್ಲಿಯೇ ಕನಕನ ಓದಿನ ಹೊಸ ನಿರೂಪಣೆಗಳ ಸಾಧ್ಯತೆಗಳಿವೆ. ಅಲ್ಲದೇ ಅದನ್ನು ಕನಕನ ಕೀರ್ತನೆ ಮತ್ತು ಕಾವ್ಯಗಳಲ್ಲಿನ ಒಳನೋಟಕ್ಕೆ ಕೊಂಡೊಯ್ದರೆ, ಕನಕನು ಸಾಹಿತ್ಯದ ದೀರ್ಘ ಪ್ರಯಾಣದಲ್ಲಿ ಜಂಗಮನೇ ಹೊರೆತು ಜಡನಲ್ಲವೆಂದು ತಿಳಿಯುತ್ತದೆ. ಆತ ಬರೆದ ರಾಮಧಾನ್ಯಚರಿತೆ, ಹರಿಭಕ್ತಿಸಾರ, ಮೋಹನತರಂಗಿಣಿ, ನಳಚರಿತೆ, ಎಂಬ ನಾಲ್ಕು ಕಾವ್ಯಗಳಲ್ಲಿ

ಸ್ಥಾಪಿತ ರಾಮಾಯಣ ಮತ್ತು ಮಹಾಭಾರತದ ವೈದಿಕ ಪ್ರಣೀತ ಕಥನ ಮಾದರಿಗಿಂತ ವಿಭಿನ್ನವಾದ ಅಥವಾ ಜನಪದೀಯ ಕನ್ನಡದ ವಿವೇಕಕ್ಕೆ ಒತ್ತು ನೀಡಿರುವುದು ಸ್ಪಷ್ಟವಾಗಿದೆ. ನಳಚರಿತೆ ಕನ್ನಡ ಮನಸ್ಸಿನ ತಿಳುವಳಿಕೆ ಮತ್ತು ಜನಪದ ಚಹರೆಯ ಅತ್ಯುತ್ತಮ ಮಾದರಿಯಾಗಿದೆ. ರಾಮಧಾನ್ಯ ಚರಿತೆ ಕನಕನ ಮೇರು ವ್ಯಕ್ತಿತ್ವ ಹಾಗೂ ಆತನ ಆತ್ಮಚರಿತೆಯ ತುಣಿಕಿನಂತಿದೆ. ಆಹಾರ ರಾಜಕಾರಣವನ್ನು ಅಷ್ಟು ಸ್ಪಷ್ಟವಾಗಿ ನಿರೂಪಿಸಿದ ಕಾವ್ಯ ಕನ್ನಡದಲ್ಲಿ ಮತ್ತೊಂದುಂಟೆ? ಇನ್ನು ಕೀರ್ತನೆ ಮತ್ತು ಮುಂಡಿಗೆಗಳಲ್ಲಿ ಕನಕ ಕೇವಲ ವೈಷ್ಣವ ಚಹರೆಯನ್ನು ಮಾತ್ರ ಭಜಿಸಿಲ್ಲ. ಬದಲಿಗೆ ನಡೆಕಾರನಾಗಿ ಸಂಚರಿಸುತ್ತ, ಕರ್ನಾಟಕದ ಆ ಹೊತ್ತಿನ ಸಾಮಾಜಿಕ ಸಂಕಥನವನ್ನು, ಅದರೆಲ್ಲಾ ಮಗ್ಗಲುಗಳಿಂದಲೂ ಕಟ್ಟಿಕೊಟ್ಟಿದ್ದಾನೆ. ಇದನ್ನು ಬುದ್ಧ, ಚಾರ್ವಾಕ ಮತ್ತು ವಚನ ಪರಂಪರೆ ಯಥಾರ್ಥವಾಗಿ ಕಂಡರೂ, ಕನಕನಲ್ಲಿ ಅದಷ್ಟಕ್ಕೆ ನಿಲ್ಲದೇ ಭಕ್ತಿಯೊಂದಿಗೆ ಶಕ್ತಿಯಾಗಿ ಉಳಿದಿರುವುದು ಆತನ ತೀವ್ರ ಸಾಮಾಜಿಕ ತಿಳುವಳಿಕೆಯಾಗಿದೆ.

ಕಾಲಮಾನದ ಸಾಮಾಜಿಕ ಚಿಂತನೆಯೊಂದಿಗೆ ದಾರ್ಶನಿಕ ದ್ವಂದ್ವಗಳನ್ನು ಗಮನಿಸಿಕೊಂಡೇ ಕನಕನ ಓದು ಸಾಗಿದರೆ, ಕನ್ನಡ ಲೋಕದ ಸಾಂಸ್ಕೃತಿಕ ರಾಜಕಾರಣದ ಕರಾಳ ಮುಖ ಮತ್ತು ಅವ್ಯಕ್ತ ಸತ್ಯಗಳು ಹೆಚ್ಚು ತೆರೆದುಕೊಳ್ಳುತ್ತವೆ. ಮಠಗಳಲ್ಲಿ ಹಾಡುವ ವಚನಗಳಲ್ಲಿ ವಚನಕಾರರ ಹೊಸಲೋಕದ ಆಶಯವು ಕಣ್ಮರೆಯಾಗಿರುವಂತೆ, ಭಾಗವತರು, ಕೀರ್ತನೆಕಾರರು ಸ್ತುತಿಸುವ ಕನಕನ ಮಟ್ಟುಗಳಲ್ಲಿ ಸಮಗ್ರವಾಗಿ ಪರ್ಯಾಯ ನೆಲೆಯಲ್ಲಿ ಕನಕನನ್ನು ಕಟ್ಟಿಕೊಳ್ಳಲಾಗುವುದಿಲ್ಲ. 'ಭಕ್ತಿ-ಆಲಯ-ಮುಕ್ತಿ-ಐಕ್ಯ' ಮುಂತಾದ ಕ್ಲೀಷೆಗಳ ಆಚೆಗೆ ಬಯಲಿನಲ್ಲಿ ಇವುಗಳನ್ನು ಚರ್ಚಿಸಬೇಕು. ಆಗ ಬದಲಿ ಸಾಂಸ್ಕೃತಿಕ ರಾಜಕಾರಣದ ಹೊಳಹುಗಳನ್ನು ಪಡೆಯಬಹುದೇನೊ. ಅದಕ್ಕೆ ರಂಗನಾಥ್ ಮೂರು ಮುಖ್ಯ ಕಿಂಡಿಗಳನ್ನು ತೆರೆದಿದಾರೆ. ಅದು ಕನಕನನ್ನು ಉಡುಪಿಯ ಕನಕನ ಕಿಂಡಿಯ ಆಚೆಗೆ ಹೊರ ತರಬಲ್ಲ ಪ್ರಯತ್ನವಾಗಿದೆ.

ಒಂದು, ದಾರ್ಶನಿಕ ದ್ವಂದ್ವ ಮತ್ತು ಭಕ್ತಿಯ ನೆಲೆಯದ್ದು-ಇದು ಕಾಲಧರ್ಮದ ತುರ್ತಾಗಿ ಮಾತ್ರ ನೋಡಿಕೊಂಡರೆ, ಆ ಹೊತ್ತಿಗೆ ಜನಪದ ದೈವದ ಕಲ್ಪನೆಯೊಳಗಿಟ್ಟುಕೊಂಡು ಕನಕನ ಗೈರು ಹಾಜರಿಯನ್ನು ನೆನಪು ಮಾಡಿಕೊಳ್ಳಬಹುದಾಗಿದೆ. ಇದಕ್ಕೆ ಕನಕದಾಸ ಸಿನಿಮಾ ಮಾಡಿದ ಪ್ರಭಾವ ಮತ್ತು ಒಂದು ಬಗೆಯ ನೈಸರ್ಗಿಕ ಪ್ರಭಾವಳಿಯನ್ನು ನುಂಗಿ ಮೇಲ್ಸ್ತರಕ್ಕೆ ಕನಕನನ್ನು ಕಟ್ಟಿದ ಪಾರಂಪರಿಕ ನೆಲೆಯೂ ಕಾರಣವಾಗಿದೆ.

ಎರಡು, ಕನಕ ಸಾಹಿತ್ಯದ ಹೆಣ್ಣು; ಎಲ್ಲಾ ನಡೆಕಾರರಿಗೆ, ದಾರ್ಶನಿಕರಂತೆ ಸಂತರಿಗೆ ಎಡಬಿಡದೇ ಕಾಡಿದ್ದು ಇಡೀ ಜೀವಿತದಲ್ಲಿ ಅದನ್ನು ಹೇಗೆ ನೀಗಿಕೊಳ್ಳಬೇಕೆಂದು. ಇದು ಕನಕನನ್ನು ಬಿಟ್ಟಿಲ್ಲ. ಆದರೆ ಅಧುನಿಕ ಓದುಗಳು

ಕನಕನೊಂದಿಗೆ ಕಾಲಕಳೆದ ಶ್ರೀವದು ಅಥವಾ ವಧುಟಿಯಂತಹ ಹೆಣ್ಣನ್ನು ನೆಲದ ಸಂಸ್ಕೃತಿಯಂತೆ ನೀರದೇವಿಯಂತೆ ಗುರುತಿಸುತ್ತಾರೆ.(ಕಾ.ತ.ಚಿಕ್ಕಣ್ಣರವರ ಅದೇ ಹೆಸರಿನ ನಾಟಕದಲ್ಲಿ ಕನಕ ನಿರ್ವಹಿಸಿದ ಹೆಣ್ಣನ್ನ ಹೊಸರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ)

ಮೂರು, ವೈದಿಕ ಪುರಾಣ ಲೋಕದಲ್ಲಿ ಮುಳುಗೇಳುವ ಕನಕ ಜನಪದ ಪುರಾಣಗಳನ್ನು ಲಕ್ಷಿಸಿಲ್ಲ. ಇದ್ದಲ್ಲದೇ ವಿಷ್ಣು ನೆಲೆಗೆ ಆದ್ಯತೆ ನೀಡಿ ಕನಕ ಕಳೆದುಕೊಂಡಿದ್ದು ಹೆಚ್ಚು...ಈಗ ನಾವು ಈ ಕಳೆದುಕೊಂಡ ಲೋಕದಿಂದಲೇ ಅನೇಕ ಪ್ರಶ್ನೆಗಳನ್ನು ಎತ್ತಲು ಕನಕ ಅನುವು ಮಾಡಿರುವುದನ್ನು ನೋಡಬೇಕು.

ಹೀಗೆ ಎದುರುಗೊಂಡಾಗ ಕನಕನ ನೈಜ ಒಲವು ಜಾತ್ಯಾತೀತವಾದದ್ದು ಎಂದು ತಿಳಿಯುತ್ತದೆ. ಆತನ ಒಲವು, ಕಾಳಜಿಗಳ ಕಾರಣಕ್ಕೆ ಮತ್ತೆ ಮತ್ತೆ ಮರು ಓದಿಗೆ ಕನಕನನ್ನು ಈಡು ಮಾಡಲೇಬೇಕು. ಹಾಗೆಯೇ ಕನಕನ ಗೈರುಹಾಜರಿಗಳನ್ನು ಹೊಸ ಸಂಕಥನಗಳಲ್ಲಿ (ಕೀ.ರಂ.ನಾಗರಾಜ್‌ರ ಕಾಲಜ್ಞಾನಿ ಕನಕ) ಮರುಕಟ್ಟುವುದರಿಂದ ನಮಗೆ ಬದಲಿ ಅಬ್ರಾಹ್ಮಣ ಲೋಕದರ್ಶನಕ್ಕೆ ಕನಕ ಹೆಚ್ಚು ಒದಗಿ ಬರುತ್ತಾನೆ.

*** ** ***

## ಕೇಶವಾಂಕಿತ ರಚನೆಗಳು – ತತ್ವರಾಜಕಾರಣ

-ಡಾ. ರಾಮಲಿಂಗಪ್ಪ ಟಿ. ಬೇಗೂರು

ಕನಕದಾಸರ ಕೀರ್ತನೆಗಳಲ್ಲಿ ಇಂಗಳಗೊಂದಿಯ ಚನ್ನಕೇಶವ (218), ಬಾಡದಾದಿಕೇಶವ (220), ಸೊಂಡೆಕೊಪ್ಪದಾದಿಕೇಶವ (185), ವೇಲಾಪುರದ ಆದಿಕೇಶವ (137), ಕದರ ಮಂಡಲಗಿ ಹನುಮಯ್ಯನೊಡೆಯ ಚೆಂದಾದಿಕೇಶವ (31), ವೇಲಾಪುರದ ಪತಿ ವೈಕುಂಠಕೇಶವ (29), ಉಡುಪಿಯಾದಿಕೇಶವ (64), ಮದ್ದೂರು ನರಸಿಂಹಯ್ಯ ಕೂಡಿದ ಕನಕನಾದಿಕೇಶವ (221), ತಿರುವ ಕೋವಲೂರಿನ ಆದಿಕೇಶವ (24) – ಹೀಗೆ ಬೇರೆ ಬೇರೆ ಊರುಗಳ ಹರಿಯನ್ನೆ ಸಂಬೋಧಿಸಿ ಅಂಕಿತ ಮಾಡಿಕೊಂಡು ಬರೆದಿದ್ದರೂ ಎಲ್ಲ ಕಡೆಯೂ ಕೇಶವ-ಆದಿಕೇಶವ ಎಂಬುದೇ ಅಂಕಿತವಾಗಿದೆ. ಅಲ್ಲದೆ ಹರಿಭಕ್ತಿಸಾರ, ರಾಮಧಾನ್ಯ ಚರಿತೆ, ಮೋಹನ ತರಂಗಿಣಿ ಕಾವ್ಯಗಳ ಅಂತ್ಯದಲ್ಲಿಯೂ ಕೇಶವಾಂಕಿತವನ್ನು ಇಟ್ಟುಕೊಂಡೇ ಕಾವ್ಯ ಬರೆಯಲಾಗಿದೆ. ಹೀಗಾಗಿ ಈ ರಚನೆಗಳೆಲ್ಲವನ್ನೂ ಕೇಶವಾಂಕಿತ ರಚನೆಗಳು ಎಂದೇ ಕರೆಯಲಾಗಿದೆ. ಕೆಲವು ಕೀರ್ತನೆಗಳು ಪುರಂದರ ವಿಠಲ ಅಂಕಿತದಲ್ಲೂ ದೊರೆಯುವುವಾದ್ದರಿಂದ; ಕೆಲವು ಕೀರ್ತನೆಗಳನ್ನು ಆದಿಕೇಶವ ಎಂಬ ಅಂಕಿತದಲ್ಲಿ ಭಿನ್ನ ಭಿನ್ನ ಕಾಲಗಳಲ್ಲಿ ಅನ್ಯರೂ ಬರೆದಿರುವ ಸಾಧ್ಯತೆಗಳು ಇರುವುದರಿಂದ; ಹಾಗೆಯೇ ಪ್ರತಿಕಾರರು ತಮ್ಮದೇ ಪ್ರಕ್ಷಿಪ್ತಗಳನ್ನು ಒಳನುಗ್ಗಿಸಿರುವ ಸಾಧ್ಯತೆಗಳೂ ಇರುವುದರಿಂದ ಈ ಅಂಕಿತವುಳ್ಳ ರಚನೆಗಳು ಓದುಗನಿಗೆ ಕಾಣಿಸುವ (ಅವುಗಳಲ್ಲಿ ಓದುಗನು ಕಾಣುವ) ತತ್ವರಾಜಕಾರಣಕ್ಕೆ ಕನಕ ಒಬ್ಬನನ್ನೆ ಹೊಣೆಗಾರನನ್ನಾಗಿ ಮಾಡಲು ಸಾಧ್ಯವಿಲ್ಲ ಎಂಬ ಕಾರಣದಿಂದಲು; ನುಡಿರಚನೆಗಳಿಗೆ 500-600 ವರ್ಷಗಳಿಗೂ ಹೆಚ್ಚು ಕಾಲದ ಯಾನದಲ್ಲಿ ಯಾವ ಯಾವ ರೂಪ-ಗತಿಗಳು ಒದಗಿರಬಹುದೋ ನಮಗೆ ತಿಳಿಯದಾದ ಕಾರಣದಿಂದಲೂ;

ಅಂಕಿತವುಳ್ಳ ನುಡಿರಚನೆಗಳನ್ನು ಒಬ್ಬನೇ ಲೇಖಕನು ಬರೆದಿದ್ದಾನೆ ಎಂಬುದು ಒಂದು ತಪ್ಪುಗ್ರಹಿಕೆ ಎಂಬ ತಿಳುವಳಿಕೆಯಿಂದಲೂ; ಒಂದು ಅಂಕಿತವುಳ್ಳ ನುಡಿರಚನೆಗಳನ್ನು ಲೇಖಕನಿಂದ ಬಿಡುಗಡೆಗೊಳಿಸಿ, ಆ ಮೂಲಕ ಕಾಲ, ಸ್ಥಳ, ಜಾತಿ–ಪಂಥ–ವಾದ–ಸಿದ್ಧಾಂತಗಳಿಂದ ಬಿಡುಗಡೆಗೊಳಿಸಿ, ಸಾರಾಂಶವಾದಿ ಅಥವಾ ಏಕಮುಖಿ ಅರ್ಥದ ಬಂಧನದಿಂದ ಬಿಡುಗಡೆಗೊಳಿಸಿ ಸಾಂಸ್ಕೃತಿಕ ಪಠ್ಯಗಳಾಗಿ ಅವುಗಳನ್ನು ಓದಬೇಕು ಎಂಬ ಕಾರಣದಿಂದಲು; ಕನಕದಾಸನು ಬರೆದಿರುವ ರಚನೆಗಳನ್ನು ಕೇಶವಾಂಕಿತ ರಚನೆಗಳು ಎಂದು ಇಲ್ಲಿ ಕರೆಯಲಾಗಿದೆ.

ತನ್ನ ದಂಡನಾಯಕತ್ವ, ಶಿಷ್ಟಕವಿತ್ವ, ಎಲ್ಲವನ್ನು ತೊರೆದು ಕನಕ ಸ್ವತಃ ದಾಸನಾದವನು. ಆತ ತನ್ನ ಕುಲಚಹರೆಯಾದ ಕಂಬಳಿಯನ್ನೂ ಕಳಚಿ ಬಿಸಾಡಿದವನು. ಆದರೆ ಅವನಿಗೆ ಇತ್ತೀಚೆಗೆ ಕಂಬಳಿ ತೊಡಿಸಲಾಗುತ್ತಿದೆ. ಅವನ ಪ್ರತಿಮೆಗೆ ಮಾತ್ರವಲ್ಲ ಅವನ ರಚನೆಗಳಿಗೂ, ವಿಚಾರಗಳಿಗೂ ಕಂಬಳಿ ತೊಡಿಸಲಾಗುತ್ತಿದೆ. ಆತನ ವಿಚಾರಗಳಿಗೆ ಈಗಾಗಲೇ ಬಳಿದಿರುವ ತಿರುನಾಮವನ್ನು ಮರೆಮಾಚಲಾಗುತ್ತಿದೆ. (ಕಂಬಳಿ ಒಂದು ಜಾತಿಯ ಸ್ವತ್ತೇನೂ ಅಲ್ಲ, ಅದು ಅಲಕ್ಷಿತ ಕುಲಗಳಾದ ಕುರುಬ, ನಾಯಕ, ಬೇಡ, ಗೊಲ್ಲ, ಸ್ವಲ್ಪ ಮಟ್ಟಿಗೆ ಒಕ್ಕಲಿಗ ಹೀಗೆ ಹಲವು ಸಮುದಾಯಗಳಿಗೆ ಲಾಂಛನ ಎಂಬುದು ಬೇರೆ ಮಾತು) ಜ್ಞಾನ ಹೇಗೆ ಶಕ್ತಿಯೋ, ಪ್ರಭುತ್ವ ಹೇಗೆ ಶಕ್ತಿಯೋ, ಸಾಹಿತ್ಯ ಹೇಗೆ ಶಕ್ತಿಯೋ ಹಾಗೆಯೇ ದೇಗುಲ–ಮಠಗಳೂ ಶಕ್ತಿಗಳೇ. ಹಾಗೇ ಅನಿಷ್ಟಗಳೆ ಹಾಗೆಯೇ ಹುಟ್ಟಿನ ಜಾತಿಗಳು ಕೂಡ ಕೆಲವರಿಗೆ ಶಕ್ತಿ ಮತ್ತು ಕೆಲವರಿಗೆ ಅನಿಷ್ಟ. ಈ ಎಲ್ಲ ಪಂಚಮುಖಿ ಶಕ್ತಿ ಮತ್ತು ಅನಿಷ್ಟಗಳನ್ನು ಕನಕ ಬಲ್ಲವನಾಗಿದ್ದ ಮತ್ತು ಒಂದರಿಂದ ಇನ್ನೊಂದಕ್ಕೆ ಎಡತಾಕಿದ ಮತ್ತು ಎಲ್ಲದರೊಂದಿಗೂ ಗೇರು ಹಣ್ಣಿನ ಬೀಜದಂತೆ (115) ಇದ್ದ. ಹೀಗಿದ್ದವನಿಗೆ ಇಂದು ನಾವೇಕೆ ತಿರುನಾಮ ಬಳಿಯಬೇಕು? ಅಥವಾ ಕಂಬಳಿ ಹೊದೆಸಬೇಕು? ಆದರೆ ಕೇಶವಾಂಕಿತ ಕೀರ್ತನೆಗಳನ್ನು ಅನುಸಂಧಾನಕ್ಕೆ ಭಿನ್ನ ಭಿನ್ನ ಕಾಲಘಟ್ಟಗಳಲ್ಲಿ ಎತ್ತಿಕೊಂಡ ಭಕ್ತ–ಸಹೃದಯರು ಅವುಗಳಿಗೆ ತಿರುನಾಮ ಬಳಿಯುವ, ಇಲ್ಲವೆ ಕಂಬಳಿ ಹೊದೆಸುವ ಕೆಲಸವನ್ನಂತೂ ನಿರಂತರ ಮಾಡುತ್ತ ಬಂದಿದ್ದಾರೆ. ಇದನ್ನೇ ಹಿಂಚಾಗಿ ತಾತಾಚಾರ್ಯ, ರಾಮಾನುಜಾಚಾರ್ಯ, ವ್ಯಾಸರಾಯ, ವಾದಿರಾಜ, ವೈಕುಂಠದಾಸ ಮೊದಲಾದವರನ್ನು ಒಳಗೊಂಡ ವೈಷ್ಣವ ಚಿಂತನಾ ಶಾಲೆಯಲ್ಲಿ ಕಲಿತ ಕನಕನ ಮಿದುಳು ಮತ್ತು ಸಂವೇದನೆಗಳು ಕೂಡ ತಿರುನಾಮ ಬಳಿದುಕೊಂಡಿರಬಹುದೇ? ಎಂದು ಕೂಡ ನೋಡಲು ಸಾಧ್ಯವಿದೆ.

ವಿದ್ಯೆ ಎನ್ನವುದು ಕೆಲವೊಮ್ಮೆ ವ್ಯಕ್ತಿಯ ಸಹಜ ವೈಚಾರಿಕತೆಯನ್ನು ನಿರ್ನಾಮ ಮಾಡಿಬಿಡುತ್ತದೆ. ಯಾವ ಶಾಲೆಯಲ್ಲಿ ಕಲಿತ ಮತ್ತು ಏನನ್ನು ಕಲಿತ ಎನ್ನುವುದು ಕಲಿತವನ ಮೆದುಳನ್ನೆ ತಯಾರಿಸುವ ಕೆಲಸ ಮಾಡುವ ಸಂಗತಿ. ಎಲ್ಲಿ ವೇದ–ವೇದಾಂತ–ವೇದಾಂಗ, ಶಾಸ್ತ್ರ, ತರ್ಕ–ವ್ಯಾಕರಣ–ಗೀತೆಗಳ ಪಾಂಡಿತ್ಯ ಮಾತ್ರವೆ ವಿದ್ಯೆ ಎಂದು ಭಾವಿಸಲ್ಪಟ್ಟಿದೆಯೋ; ಅನ್ಯಮತ–ಸ್ವಮತ ಎಂಬ ಅವಳಿ ವೈರುಧ್ಯದಲ್ಲಿ

ಕಲಿತು ಅನ್ಯರನ್ನು ವಾದದಲ್ಲಿ ಸೋಲಿಸುವುದು ಮಾತ್ರ ಜ್ಞಾನ ಎಂದು ಭಾವಿಸಲ್ಪಟ್ಟಿದೆಯೋ; ಎಲ್ಲಿ ಭಕ್ತಿ, ಮುಕ್ತಿ, ವಿಧಿ, ಕರ್ಮ, ಪುನರ್ಜನ್ಮ ಸಿದ್ಧಾಂತಾದಿ ತತ್ವಜ್ಞಾನವೇ–ಪರಿಭಾಷಾ ಲೋಕವೇ ಜ್ಞಾನ ಎಂದು ಭಾವಿಸಲ್ಪಟ್ಟಿದೆಯೋ; ವರ್ಣಾಶ್ರಮ ಧರ್ಮ ರಕ್ಷಣೆ, ಅಸಮಾನ ಆಚರಣೆಗಳನ್ನು ಎಲ್ಲಿ ಜ್ಞಾನದ ಮತ್ತು ಆಚಾರದ ಭಾಗವಾಗಿ ಕಲಿಸಲಾಗುತ್ತದೋ; ಎಲ್ಲಿ ವೈದಿಕ ಪುರಾಣಗಳ ಅಧ್ಯಯನ ಮತ್ತು ಪುನರ್ ನಿರೂಪಣೆಗೇ ತಮ್ಮ ಜೀವನದ ಬಹುಪಾಲನ್ನು ವ್ಯಯಿಸಬೇಕು ಎನ್ನಲಾಗುತ್ತದೋ ಅಂತಹ ಶಾಲೆಯಲ್ಲಿ ಈತ ವಿದ್ಯೆ ಕಲಿತವನೊ? ಶಬ್ದಪ್ರಮಾಣವನ್ನೆ, ಅದರಲ್ಲೂ ವೈದಿಕ ವೇದಾಂತ ಮತ್ತು ಪುರಾಣಗಳ ಶಬ್ದಪ್ರಮಾಣಗಳನ್ನೆ ಲೋಕಸೃಷ್ಟಿ–ಸ್ಥಿತಿ–ಲಯದ ಆತ್ಯಂತಿಕ ಪ್ರಮಾಣಗಳೆಂದು ನಂಬಿ ಬದುಕಿದವನೋ? ನಿಜ ಏನಾದರೂ ಇರಲಿ ಈ ಶಬ್ದ ಪ್ರಮಾಣಗಳಲ್ಲಿ ಮತ್ತು ಇವುಗಳ ವ್ಯಾಖ್ಯಾನ ಪರಂಪರೆ ಮತ್ತು ಮರುನಿರೂಪಣೆಯ ಪರಂಪರೆಗಳಲ್ಲಿ ಇರುವ ಬಿಕ್ಕಟ್ಟುಗಳು–ಸಾಂಸ್ಕೃತಿಕ ರಾಜಕಾರಣಗಳು ಕೇಶವಾಂಕಿತ ನಿರೂಪಣೆಗಳಲ್ಲಂತೂ ಇವೆ.

ಇಂತಹ ಕೇಶವಾಂಕಿತ ನಿರೂಪಣೆಗಳು ಇಂದಿನ 'ಸಹೃದಯ'ರ ಓದಿನಲ್ಲಿ ಉಂಟುಮಾಡುವ ತತ್ವರಾಜಕಾರಣ ಎಂಥದ್ದು? ಮೌಲ್ಯರಾಜಕಾರಣ ಎಂಥದ್ದು? ಎಂತಹ ತತ್ವ–ಮೌಲ್ಯ–ನಂಬುಗೆ–ಜೀವನ ಪದ್ಧತಿ–ಆಚಾರಗಳನ್ನು ಕೇಶವಾಂಕಿತ ರಚನೆಗಳು ಮುಂದೊಡ್ಡುತ್ತವೆ? ಇದರಿಂದ ತಯಾರಾದ ವ್ಯಕ್ತಿತ್ವಗಳು ಪ್ರಗತಿಗಾಮಿಯೋ–ಯಥಾಸ್ಥಿತಿವಾದಿಯೋ–ಆಧ್ಯಾತ್ಮವಾದಿಯೊ ಏನಾಗುತ್ತವೆ? ಇತ್ಯಾದಿ ಸಂಗತಿಗಳನ್ನು ಓದಿನ ಮೂಲಕ ಒದಗುವ ತತ್ವ–ಮೌಲ್ಯ–ನಂಬಿಕೆ–ಆಚಾರಗಳ ಕಲ್ಪನೆಗಳ ಮೂಲಕವೇ ಇಲ್ಲಿನ ಚದುರಿದ ಟಿಪ್ಪಣಿಗಳಲ್ಲಿ ಚರ್ಚಿಸಲು ಉದ್ದೇಶಿಸಲಾಗಿದೆ. ನಮಗೆ ಯಾರೂ ಆರಾಧ್ಯ ದೈವ ಅಲ್ಲ; ಯಾವುದೂ ಆರಾಧ್ಯ ಸಂಗತಿ ಅಲ್ಲ; ಹಾಗೆಯೇ ಯಾವ ರಚನೆಯೂ ವೈರದ್ದಲ್ಲ. ನುಡಿರಚನೆಗಳು ಮಾಡುವ ರಾಜಕಾರಣವನ್ನು ತಿಳಿಯುವ ವಿವೇಕವನ್ನು ಓದು ಒದಗಿಸಬೇಕಷ್ಟೆ.

ಕೇಶವಾಂಕಿತ ಕೀರ್ತನೆಗಳ ಮತ್ತು ಛಾಂದಸಿಕ ಕೃತಿಗಳ ರಚನೆ ಕನಕನ ಅನುಸಂಧಾನದಲ್ಲಿ ಒಂದು ತೂಕವಾದರೆ ಆತನ ಬದುಕು ಇನ್ನೊಂದು ತೂಕ. ಎರಡನ್ನೂ ಪ್ರತ್ಯೇಕವಾಗಿ ನೋಡುವ ಅಗತ್ಯವಿದೆ. ಆದರೆ ಇಲ್ಲಿ ಕೇಶವಾಂಕಿತ ರಚನೆಗಳನ್ನು ಮಾತ್ರ ಗಮನಿಸಲು ಉದ್ದೇಶಿಸಲಾಗಿದೆ. ಅಲ್ಲದೆ ಸ್ವತಃ ಒಬ್ಬ ಪ್ರಾಂತ ನಾಯಕ ಆಗಿದ್ದು 'ಅಲ್ಪ ದೊರೆಗಳ ಜೀತ ಎಷ್ಟು ಮಾಡಿದರು ಅಷ್ಟೆ' ಎಂಬ ನಿಲುವಿನಿಂದ ಕನಕ ದಾಸತ್ವವನ್ನು ತನ್ನ ಬದುಕಿನ ಕ್ರಮವನ್ನಾಗಿ ಸ್ವೀಕರಿಸಿದುದು ಮಾತ್ರ ಇಂದಿಗೆ ಬಹು ದೊಡ್ಡ ಸವಾಲಿನ ಮಾರ್ಗವಾಗಿದೆ. ಕನಕ ಬಾಳಿ ಬದುಕಿದ ದಾಸತ್ವ ಎಂಬ ಮಾರ್ಗ, ಎಲ್ಲರಿಗೂ ಪ್ರತಿಪಾದಿಸಿದ ಕೇಶವಭಕ್ತಿ ಎಂಬ ಮಾರ್ಗ ಒಂದು ತಿಳುವಳಿಕೆ ಆಗಿ, ನಂಬಿಕೆ ಆಗಿ, ಲೋಕನಡಾವಳಿ ಆಗಿ, ಲೋಕಗ್ರಹಿಕೆ ಆಗಿ, ಜೀವನಪದ್ಧತಿ ಆಗಿ ಇಂದಿಗು

ಎಷ್ಟರಮಟ್ಟಿಗೆ ಪ್ರಸ್ತುತ, ಸ್ವೀಕಾರಯೋಗ್ಯ ಎಂಬುದು ಮಾತ್ರ ಚರ್ಚಾರ್ಹ ವಿಚಾರ. ಈ ಜೀವನ ಪದ್ಧತಿಯು, ಲೋಕಗ್ರಹಿಕೆಯು ಹಲವು ಬಗೆಯ ನಂಬಿಕೆಗಳನ್ನು, ಲೋಕಗ್ರಹಿಕೆಗಳನ್ನು, ಮೌಲ್ಯಗಳನ್ನು, ತತ್ವಸಿದ್ಧಾಂತಗಳನ್ನು ಪ್ರತಿಪಾದಿಸುತ್ತದೆ. ಇವುಗಳನ್ನೆಲ್ಲ ನಾವು ಇಂದಿಗೆ ಹೇಗೆ ಸ್ವೀಕರಿಸಬೇಕು ಎಂಬ ಚರ್ಚೆಯನ್ನು ಇಲ್ಲಿ ಬೆಳೆಸಲು ಉದ್ದೇಶಿಸಲಾಗಿದೆ.

### ಲೀಲೆ ಎಂಬ ನಂಬುಗೆ

ಚರಿತೆ, ವಿಲಾಸ, ವೈಭವ ಮತ್ತು ಲೀಲೆಗಳಲ್ಲಿ ವ್ಯತ್ಯಾಸ ಕಾಣದೆ ; ಸಾಹಿತ್ಯಕ ವಾಸ್ತವಗಳು ಮಾಡುವ ರಾಜಕಾರಣಗಳನ್ನು ತಿಳಿಯದೆ ಅವುಗಳನ್ನು ಹಾಡಿ ಹೊಗಳಿ ಕೀರ್ತಿಸುವ ಕೆಲಸ ಮಾತ್ರ ಮಾಡಿದರೆ ಅವು ಕೆಲವರಿಗೆ ಮಾತ್ರ ಅನುಕೂಲ ಮಾಡಿಕೊಡುವ ಸಂಗತಿಗಳನ್ನು ಪ್ರಶ್ನಿಸದೆ ಒಪ್ಪಿಬಿಡುವ ಸಾಧ್ಯತೆ ಇರುತ್ತದೆ. ಇದರಿಂದ ಶಬ್ದಪ್ರಮಾಣಗಳನ್ನು ಚಿಕಿತ್ಸಕ ವಿವೇಕದಿಂದ, ಆತ್ಮವಿಮರ್ಶಾತ್ಮಕ ದೃಷ್ಟಿಯಿಂದ ನೋಡುವ, ಮಾನಸಿಕ ದೂರದಿಂದ ಓದುವ ವಿವೇಕವನ್ನು ಕಳೆದುಕೊಳ್ಳುತ್ತೇವೆ. ಅದು ಪ್ರಭುಲಿಂಗಲೀಲೆ ಆಗಿರಬಹುದು, ಭರತೇಶ ವೈಭವ ಆಗಿರಬಹುದು, ವೀರೇಶ ಚರಿತೆ ಆಗಿರಬಹುದು, ಲಿಂಗಲೀಲಾವಿಲಾಸ ಚಾರಿತ್ರ್ಯ ಆಗಿರಬಹುದು, ಇಲ್ಲವೆ ಕೃಷ್ಣರಾಯ ಚರಿತೆ ಆಗಿರಬಹುದು, ಇಲ್ಲವೆ ಯಾವುದೆ ಕೀರ್ತನೆ ಆಗಿರಬಹುದು ಅಥವಾ ಯಾವುದೆ ಪುರಾಣ ಆಗಿರಬಹುದು ಇವುಗಳು ಪ್ರತಿಪಾದಿಸುವ ಸಂಗತಿಗಳನ್ನು (ಪ್ರಮಾಣಗಳನ್ನು) ಓದುಗರಾದ ನಾವಾದರೂ ಒಡೆದು ನೋಡಬೇಕಲ್ಲವೆ?

ಪಠ್ಯವು ವ್ಯಕ್ತಿ ಅಥವಾ ಸಮುದಾಯ ನಿರ್ಮಿತ ಎಂದು ನೋಡದೆ ಅದು ಅಪೌರುಷೇಯ, ಪೂಜ್ಯಾರ್ಹ, ಪ್ರಶ್ನಾತೀತ ಎಂದು ನಂಬಿದರೆ ಅದನ್ನು ಪವಿತ್ರ ಎಂದು ನಂಬಿ ಅರಾಧಿಸುವ ಕೆಲಸ ಮಾಡುತ್ತೇವೆ. ನಮ್ಮ ಮತ್ತು ಅನ್ಯ ಎಂಬ ವೈರಿನೆಲೆಯಲ್ಲಿ ಬೀಳುತ್ತೇವೆ. ರೂಪಕಗಳನ್ನು ರೂಪಕಗಳೆಂದು ಓದದೆ ಬೆರಳಿನ ತುದಿಯಲ್ಲಿ ಬೆಟ್ಟವನ್ನು ಎತ್ತಿಹಿಡಿದ, ಹಾವಿನ ಹೆಡೆಯ ಮೇಲೆ ನರ್ತಿಸಿದ, ಗೋಪಿಯರ ಸೀರೆಗಳನ್ನು ಕದ್ದು ಮರವೇರಿದ, ಬೆಣ್ಣೆಯ ಗಡಿಗೆಗಳನ್ನು ಒಡೆದ ಇತ್ಯಾದಿ ಲೀಲೆಗಳನ್ನು ಕೀರ್ತಿಸುವುದನ್ನೆ ಪಾವನ ಕಾರ್ಯ ಎಂದು ತಿಳಿದುಬಿಡುತ್ತೇವೆ. ಇಲ್ಲೆಲ್ಲ ಆತ್ಮವಿಮರ್ಶೆ, ಪರಂಪರೆಯ ಕುರಿತ ವಿವೇಕ ಇಲ್ಲವಾಗುತ್ತದೆ. ಆಗ ನಮ್ಮ ಭಾಷಣ, ಲೇಖನ, ವಿಚಾರಸಂಕಿರಣಗಳು ಕೂಡ ಆಧುನಿಕ ಕೀರ್ತನೆಗಳೋ, ಸ್ತುತಿಪಾಠಗಳೋ ಆಗಿಬಿಡುತ್ತವೆ. ಇಷ್ಟಕ್ಕು ಲೀಲೆಗಳು ಪವಾಡಗಳು ಇರುವವರನ್ನು ಕೀರ್ತಿಸಬಹುದು; ಲೀಲೆಗಳೇ ಇಲ್ಲದವರ, ಚರಿತೆ–ಪವಾಡಗಳೆ ಇಲ್ಲದವರ ಪಾಡೇನು? ಶಾರದೆ, ಸರಸ್ವತಿ, ರುಕ್ಮಿಣಿ, ಸತ್ಯಭಾಮೆಯರಿಗೆ, ಉಷೆ, ದಮಯಂತಿ ಇಂಥವರಿಗೆ ಲೀಲೆಗಳೇ ಇಲ್ಲವಲ್ಲ! ಇದ್ದರೂ ನಾವು ಅವುಗಳನ್ನು ಹಾಗೆ ಕರೆಯುವುದಿಲ್ಲವಲ್ಲ. ಇವರಿಗೆ ಕುಂಭಕುಚಗಳೂ, ಮೀನ ಕಣ್ಣುಗಳೂ, ಸಿಂಹನಡುಗಳೂ, ಕಮಲಮುಖಿಗಳೂ ಇವೆ. ಆಹಾ ಇವೇ ಇವರ ಲೀಲೆಗಳು!

ಇನ್ನು ಹನುಮಾನ ಚಾಲೀಸ, ವಿಷ್ಣು ಸಹಸ್ರನಾಮಗಳು ಇರುವ ಹಾಗೆ ಕರ್ಣಸಹಸ್ರನಾಮ, ಏಕಲವ್ಯ ಸಹಸ್ರನಾಮ, ಶಂಭೂಕ ಚಾಲೀಸಗಳು ಇಲ್ಲವಲ್ಲ! (ಕನಕರಿಗೋ ಲೀಲೆಗಳಿವೆ–ಪವಾಡಗಳಿವೆ) ನಾವು ನಂಬಿ ಮಾಡುವ ಆಚಾರ ಕೂಡ ಇನ್ನೊಬ್ಬರ ಹೇರಿಕೆ ಎಂದು ನಮಗೆ ಎಷ್ಟೋ ವೇಳೆ ತಿಳಿಯುವುದೆ ಇಲ್ಲ.

ಪುರಾಣದ ಘಟನೆ, ಕಥನಗಳನ್ನು ಲೀಲೆಗಳಾಗಿ ಭಾವಿಸುವುದು; ಲೀಲೆ ಕಲ್ಪನೆಯ ಒಂದು ನೆಲೆಯಾದರೆ; ಇಡೀ ಲೋಕವ್ಯಾಪಾರವನ್ನೆ ಶ್ರೀಹರಿಯ ಲೀಲೆ ಎಂದು ಭಾವಿಸುವುದು ಇದರ ಇನ್ನೊಂದು ನೆಲೆ. ಕೊಡಲು ನೀನಾರು ಬಿಡಲು ನೀನಾರು ಪೊಡವಿಯೊಡೆಯ ಶ್ರೀಹರಿಯ ಲೀಲೆಯದು (107) ಎಂಬ ಈ ತಿಳುವಳಿಕೆ ಲೋಕದ ಪ್ರತಿಯೊಂದೂ ದೈವದ ಲೀಲೆ ಎಂದೇ ಭಾವಿಸುತ್ತದೆ. ಲೋಕಾಕಾರ, ಲೋಕದ ತಾರತಮ್ಯ, ಶೋಷಣೆಗಳು ಕೆಲವರ ಹುನ್ನಾರ, ಯೋಜಿತ ಕಾರ್ಯಸೂಚಿಗಳು ಎಂದು ತಿಳಿಯದೆ ಎಲ್ಲವೂ ಪರಮಾತ್ಮನ ಲೀಲೆ ಎಂದು ತಿಳಿದಾಗ ಅನ್ಯಾಯಕ್ಕೆ ಯಾರನ್ನೂ ಹೊಣೆ ಮಾಡಲು ಆಗುವುದೆ ಇಲ್ಲ. ಭಕ್ತಿ ಮಾರ್ಗದ 'ಎಲ್ಲಾ ಆ ಭಗವಂತನ ಲೀಲೆ' ಕಲ್ಪನೆಯ ಮುಖ್ಯವಾದ ತೊಡಕು ಇದು. ಇಂತಹ ತೊಡಕು ಕೇಶವಾಂಕಿತ ರಚನೆಗಳಲ್ಲು ಇದೆ.

ಸಾಮಾಜಿಕ ಅಪರಾಧಗಳನ್ನು ದೈವಲೀಲೆಯ ಭಾಗವಾಗಿ ನೋಡುವ ಮತ್ತು ತಾನೆ ಎಲ್ಲವನ್ನೂ ಮಾಡಿದೆ ಎಂದು ಬೀಗುವವರ ಅಹಂ ನಿರಸನ ಮಾಡುವ ಎರಡೂ ನೆಲೆಯಲ್ಲಿ ಈ ತೊಡಕು ಕೆಲಸ ಮಾಡಿದೆ. ಪಾಡುವ ಪದ್ಯಗಳ ಭಾವವಾಗಿರುವವನು ಆದಿಕೇಶವ, ನುಡಿವ ನುಡಿಯ ತಾತ್ಪರ್ಯ ನಿರ್ಣಯಿಸುವವನು ಆದಿಕೇಶವ ಎಂದು ಭಾವಿಸಿದ ಕೂಡಲೆ (107) ಸಾಮಾಜಿಕ ತಾರತಮ್ಯದ ಬೇರುಗಳನ್ನೆ ಆದಿಕೇಶವನ ಲೀಲೆಗಳು ಎಂದು ಒಪ್ಪಿಬಿಡುವ ಅಪಾಯ ಇರುತ್ತದೆ. ವ್ಯಕ್ತಿಯ ಅಹಂ ನಿರಸನವೆ ಸಿನಿಕತನ ಮತ್ತು ಅಸಹಾಯಕತೆ ಕೂಡ ಆಗುವ ಸಾಧ್ಯತೆ ಇರುತ್ತದೆ. ವಾಮನನಾಗಿ ಬಲಿಯನ್ನು ಹರಿಯು ಪಾತಾಳಕ್ಕೆ ತುಳಿದ ಪ್ರಸಂಗವು ಶ್ರೀಹರಿಯ ಲೀಲೆಯೊ ಅಥವಾ ವೈಷ್ಣವ ಯಾಜಮಾನ್ಯವು ಶಿವಸಂಸ್ಕೃತಿಯನ್ನು ದಮನ ಮಾಡಿದ ರಾಜಕೀಯವೊ ಎಂದು ತಿಳಿಯುವ ವಿವೇಕ ಇಲ್ಲದಿದ್ದರೆ, ನಡತೆ ಹೀನನಾದರೇನು ಜಗದೊಡೆಯನ ಭಕುತಿಯಿದ್ದರೆ ಸಾಕು ಎಂದು (121) ತಿಳಿದರೆ, ಪ್ರಹ್ಲಾದನು ತಂದೆಯನ್ನು ಕೊಲ್ಲಿಸಿದುದು, ದಾಸಿಯ ಮಗನಾಗಿಯೂ ವಿದುರ ಋಷಿಯಾದುದು ಎಲ್ಲವೂ ಕೇಶವನ ದಯೆ ಎಂದು ತಿಳಿದರೆ ನಮ್ಮೆಲ್ಲ ಸ್ಥಿತಿಗೆ ದೇವರೇ ಕಾರಣವೆಂದು, ಇಲ್ಲವೆ ಪೂರ್ವಜನ್ಮ ಕರ್ಮವೇ ಕಾರಣವೆಂದು ಕೈಕಟ್ಟಿ ಕೂರಬೇಕಾಗುತ್ತದೆ. ಆಗ ನಾವು ಪುರಾಣ ಪಾಠ ಒಪ್ಪಿಸುವ ಗಿಳಿಗಳು ಮಾತ್ರ ಆಗುತ್ತೇವೆ.

ಇಂದು ನಾವು ಲೀಲೆಗಳನ್ನು ಕೇಶವಭಕ್ತರಂತೆ (ಅಥವಾ ಶಿವಭಕ್ತರಂತೆ ಕೂಡ) ಗಿಳಿಪಾಠ ಒಪ್ಪಿಸುವ, ಇಲ್ಲವೆ ಕೀರ್ತಿಸುವ ಕೆಲಸ ಮಾಡಿದರೆ ಯಾವ

ಪ್ರಯೋಜನವೂ ಇಲ್ಲ, ಅವುಗಳ ಹಿಂದಿನ ಯಾಜಮಾನೀಯ ತತ್ವರಾಜಕಾರಣವನ್ನು ಒಡೆದು ತಿಳಿಯಬೇಕಿದೆ. ಕನಕರ ಗುರಿ ಯಾಜಮಾನ್ಯದ ರಾಜಕಾರಣ– ದಮನದ ರಾಜಕಾರಣವನ್ನು ಪ್ರತಿಪಾದಿಸುವುದಲ್ಲ. ಆದರೆ ಭಕ್ತಿಯ ದಾರಿಯ ಮೂಲಕ ಸಮಾನತೆಯ ಕಡೆಗೆ ನಡೆಯುವ ನಡೆ. ಕನಕನ ಗುರಿ ಸರಿಯಾದುದು. ಆದರೆ ಈ ಲೀಲಾ ಸಂಕೀರ್ತನೆಯ ದಾರಿ ಮಾತ್ರ ಇಂದಿಗೆ ಒಪ್ಪಿತವಲ್ಲ. ತನು ನಿನ್ನದು ಜೀವನ ನಿನ್ನದು, ರಂಗ ಅನುದಿನದಲ್ಲಿ ಬಾರೋ ಸುಖ ದುಖ ನಿನ್ನದಯ್ಯ (113), ತಲ್ಲಣಿಸದಿರು ಕಂಡ್ಯ ತಾಳು ಮನವೆ, ಎಲ್ಲರನು ಸಲಹುವನು ಇದಕೆ ಸಂಶಯ ಬೇಡ ಇಂತಹ ದೈವ ಶರಣಾಗತಿಯ ಕಾಲ ಇದಲ್ಲ. ಈ ಎಲ್ಲಾ ಭಗವಂತನ ಲೀಲೆ ಎಂಬ ಅನಾದಿ ಬೌದ್ಧಿಕ ರಚನೆ ಏನಿದೆ ಇದು ತುಂಬಾ ಅಪಾಯಕಾರಿಯಾದ ಕಲ್ಪನೆ. ಈ ಪರಿಕಲ್ಪನೆ (ನಂಬುಗೆ) ನಿರಾಕರಣಯೋಗ್ಯ.

**ಹಣೆಬರಹ, ವಿಧಿ, ಕರ್ಮಫಲ, ಪುನರ್ಜನ್ಮ, ಮಾಯೆ, ಮುಕ್ತಿ, ಆತ್ಮವಾದ, ಬ್ರಹ್ಮವಾದ ಇತ್ಯಾದಿ ತತ್ವ–ಸಿದ್ಧಾಂತಗಳು**

ನಾವು ಒಪ್ಪದ ಅಥವಾ ನಂಬದಿರುವ ತಾತ್ವಿಕತೆಗಳನ್ನು ಪ್ರತಿಪಾದಿಸುವ ನುಡಿರಚನೆಗಳನ್ನು ಹೇಗೆ ಪರಿಶೀಲಿಸುವುದು? ನಾವು ನಂಬದಿರುವ ಸಂಗತಿಗಳನ್ನೂ ನಂಬುವ ಮತ್ತು ಬಾಳುವ ಬಹು ದೊಡ್ಡ ಸಮುದಾಯ ನಮ್ಮ ಕಣ್ಣೆದುರೇ ಇರುವಾಗ ಆ ಸಮುದಾಯದ ನಿರೂಪಣೆಗಳನ್ನು ಹೇಗೆ ಪರಿಶೀಲಿಸುವುದು? ದಾರಿ ತಪ್ಪಿದ ಮತ್ತು ದಾರಿ ತಪ್ಪಿಸುವ ತತ್ವರಾಜಕಾರಣವನ್ನು ನಿರಾಕರಿಸದೆ ಹೋದರೆ ನಮ್ಮ ಓದು ಪಲಾಯನವಾದವೋ–ಭಜನೆಯೋ ಆಗಿಬಿಡುತ್ತದೆ. ಭಂಜನೆ ಎಲ್ಲಿ ಅಗತ್ಯವೋ ಅಲ್ಲಿ ಭಂಜನೆಯೇ ಮಾರ್ಗ. ವಿಸರ್ಜನೆ ಎಲ್ಲಿ ಅಗತ್ಯವೋ ಅಲ್ಲಿ ವಿಸರ್ಜನೆಯೇ ಯುಕ್ತ.

ಪೂರ್ವಜನ್ಮದಲಿ ನಾ ಮಾಡಿದ ಕರ್ಮದಿಂದ ಉರ್ವಿಯೊಳು ಜನಿಸಿದೆನೋ ಕೃಷ್ಣಾ (64), ಎಂಬತ್ತನಾಲ್ಕು ಲಕ್ಷ ಜೀವರಾಶಿಯೊಳು ಹಂಬಲಿಸಿ ನಾ ಬಂದೆ ವರದಾ, ಅಂಬುಜೋದ್ಭವನ ಬರೆಹವ ಮೀರಲಾರದೆ ನರಬೊಂಬೆ ಗರ್ಭದೊಳಿದ್ದೆ ವರದಾ (147), ಯಾರಿಗಾರು ಬಹರು ಸಂಗಡ, ಬರೆದ ಬರೆಹ ತೊಡೆದ ಮೇಲೆ ಕರೆದರಾಗ ಹೋಗಬೇಕು (151), ಹಲವು ಮಾಯೆಗಳಿಂದ ಹಂಬಲಿಸಿ ಕೆಡಬೇಡ ಬಲವಂತರೊಡನೆ ಹಗೆಬೇಡ (105), ಭಕ್ತಿ ಜ್ಞಾನಗಳಿರಲಿ ಮರ್ತ್ಯಪಥದಿಂ ಮರಳಿ ಮುಕ್ತಿ ಮಾರ್ಗದಲ್ಲಿನ್ನು ತೆರಳಿ (108), ಹೆತ್ತ ತಾಯಿಗಿಂತ ಅತ್ಯಧಿಕ ಮಾಯವುಂಟೆ ಉತ್ತಮ ಅಶ್ವವ ಕತ್ತೆ ಹೋಲುವುದುಂಟೆ (161) ಹೀಗೆ ಹತ್ತಾರು ಕೀರ್ತನೆಗಳು ಹಣೆಬರಹ, ವಿಧಿ, ಪುನರ್ಜನ್ಮ, ಕರ್ಮ, ಮಾಯೆ ಇತ್ಯಾದಿ ನಂಬುಗೆಗಳನ್ನು ಸತ್ಯಗಳೆಂದು ಪ್ರತಿಪಾದಿಸುತ್ತವೆ. ನಿಜಕ್ಕು ವೈಚಾರಿಕ ವಿಕಲ್ಪಗಳಾದ ಇವುಗಳನ್ನೆಲ್ಲ ಸತ್ಯಗಳೆಂದು ನಂಬಿದವರೆಲ್ಲ ನಿರಂತರ ಭಂಗಪಡುತ್ತ ಬಂದಿದ್ದಾರೆ. ಹೆತ್ತ ತಾಯಿಯೂ ಮಾಯೆ ಎಂದಾಗ ಬದುಕುವುದಾದರೂ ಹೇಗೆ?

ಜಾತಿ ವೈರದಿಂದ, ಅಸಮಾನತೆಯಿಂದ, ಅವಮಾನಗಳಿಂದ ಬಿಡುಗಡೆ ಬಯಸುವ ಮನಸ್ಸು ಅಂತಹ ಬಿಡುಗಡೆ ಪಡೆಯಬೇಕಾದರೆ ಮೊದಲು ಈ ಜಾತಿ ಕುಲ ವರ್ಣ ತಾರತಮ್ಯವನ್ನೆ ಧರಿಸಿರುವ ಮನಸ್ಸುಗಳು ಸೃಷ್ಟಿಸಿರುವ ಕರ್ಮಫಲ, ಪೂರ್ವಜನ್ಮ, ಪುನರ್ಜನ್ಮ, ಹಣೆಬರಹ, ವಿಧಿ, ಜೀವಾತ್ಮ–ಪರಮಾತ್ಮ, ಮರ್ತ್ಯ–ದೇವಲೋಕ, ನರಕ–ಸ್ವರ್ಗ, ಮಾಯೆ, ಮುಕ್ತಿ ಇತ್ಯಾದಿ ವಿಕಲ್ಪಗಳಿಂದ ಬಿಡುಗಡೆ ಪಡೆಯಬೇಕಾಗುತ್ತದೆ. ಇವುಗಳಿಂದ ಬಿಡುಗಡೆ ಪಡೆಯದಿದ್ದರೆ; ತಾನು ಮೇಲು ಎಂದು ತನ್ನನ್ನು ತಾನು ಪ್ರತಿಷ್ಠಾಪಿಸಿಕೊಳ್ಳುವ ವರ್ಗಗಳ ವೈಚಾರಿಕ ಆಕೃತಿ, ಆಚಾರಗಳನ್ನೆ ಒಪ್ಪಿತ ಮತ್ತು ಶ್ರೇಷ್ಠ ಎಂದು ಭಾವಿಸಿ ಅವುಗಳನ್ನು ಬೌದ್ಧಿಕವಾಗಿ ಮತ್ತು ಆಚಾರದ ನೆಲೆಯಲ್ಲಿ ಧರಿಸುವ ಮೂಲಕ ಅಲಕ್ಷಿತ ಕುಲವು ತಾನು ಕೂಡ 'ಮೇಲು' ಎಂಬ ಭಾವವನ್ನು ಹೊಂದುತ್ತದೆ. ಇಲ್ಲವೆ ಅಸಮಾನತೆಯಿಂದ ಬಿಡುಗಡೆ ಪಡೆಯುವ ಬಯಕೆ ಮತ್ತು ಅಸಮಾನ ವ್ಯವಸ್ಥೆಯ ಯಥಾಸ್ಥಿತಿಗೆ ಸೃಷ್ಟಿಸಿರುವ ವೈಚಾರಿಕ ಆಕೃತಿಗಳನ್ನು ಧರಿಸುವ ತವಕ ಇವುಗಳ ಸಂಘರ್ಷದಲ್ಲಿ ಸಿಲುಕುತ್ತದೆ. ಇಂತಹ ಸಂಘರ್ಷ ಕೇಶವಾಂಕಿತ ರಚನೆಗಳಲ್ಲಿ ಇದೆ. ಈ ಸಂಘರ್ಷ ಹರಿಹರ ಮತ್ತು ಆನಂತರದ ಎಲ್ಲ ವೀರಶೈವ ಪುರಾಣ ಕವಿಗಳಲ್ಲು ಇತ್ತು. ಬಹುಮಟ್ಟಿಗೆ ಕುವೆಂಪುರಲ್ಲು ಇದೆ.

ಮಾಯೆಯ ಕಲ್ಪನೆ, ಸದ್ಗತಿಯ ಕಲ್ಪನೆ, ಮುಕ್ತಿಯ ಕಲ್ಪನೆಗಳು ನಮ್ಮ ಭಕ್ತಿ ಪರಂಪರೆಗಳನ್ನು ನಿರಂತರ ಆಳುತ್ತ ಬಂದಿವೆ. ಹೆಣ್ಣು–ಹೊನ್ನು–ಮಣ್ಣು ಮಾಯೆ, ಲೋಕದ ಸುಖ ಮಾಯೆ, ಸ್ವತಃ ದೇಹ ಮಾಯೆ, ಸಂಸಾರ (ಕುಟುಂಬವೆಂಬ ಸಂಸ್ಥೆ ಮತ್ತು ಲೋಕವೆಂಬ ರಚನೆ) ಎಂಬುದು ಮಾಯೆ, ಈ ಮಾಯೆಯನ್ನು ನಾವು ಮೀರಬೇಕು ಎಂಬ ಕಲ್ಪನೆ ನರಜನ್ಮವನ್ನೆ ಹೊಲಸು, ಜೈಲು, ಪಂಜರ, ಪಾತಕ ಎಂದು ಕರೆಯುತ್ತದೆ. ಇದು ಸೌಂದರ್ಯ, ಸಿರಿ, ಸುಖ, ಅಧಿಕಾರಗಳ ಬೆನ್ನು ಹತ್ತಿ ಅವುಗಳಲ್ಲೆ ಲೋಲುಪರಾದವರಿಗೆ ಹೆಚ್ಚು ಅನ್ವಯಿಸುವ ಮಾತೇನೋ ಸರಿ. ನೆಚ್ಚದಿರು ಸಂಸಾರ, ಸ್ಥಿರವಲ್ಲವೀ ದೇಹ (132), ಸಿರಿಯ ನಂಬಬೇಡ, ಅಧಿಕಾರ ನಚ್ಚಬೇಡ, ಬಲವ ನಚ್ಚಬೇಡ (134) ಈ ಎಲ್ಲ ಮಾತುಗಳೇನೋ ಸರಿ; ಆದರೆ ಈ ಅಶಾಶ್ವತ ತತ್ವವು ಅತಿಗೆ ಹೋದಾಗ ವಿರಾಗಿ–ಯೋಗಿ–ಭಕ್ತ ಬದುಕು ಮಾತ್ರವೆ ಶ್ರೇಷ್ಠ ಮಿಕ್ಕ ಬದುಕುಗಳೆಲ್ಲ ಅಸಂಬದ್ಧ ಎಂಬ ವಾದ ಹುಟ್ಟುತ್ತದೆ. ಈ ವಾದವು ಸದ್ಗತಿ ಮತ್ತು ಮುಕ್ತಿಯ ಕಲ್ಪನೆಗಳಿಗೆ ತಳಕು ಹಾಕಿಕೊಳ್ಳುವುದಂತೂ ಹಾಸ್ಯಾಸ್ಪದ. ಬ್ರಹ್ಮಾಂಡದ ರಚನೆಯನ್ನು ಡಾರ್ವಿನ್ನನ ವಿಕಾಸವಾದ, ಡಾರ್ವಿನೋತ್ತರ ಚಿಂತನೆಗಳು, ಕ್ವಾಂಟಂ ಫಿಸಿಕ್ಸ್, ದೇವಕಣವಾದಗಳೇ ಇನ್ನೂ ಸರಿಯಾಗಿ ವಿವರಿಸಿರದ ಈ ಸಂದರ್ಭದಲ್ಲಿ ಸದ್ಗತಿ–ಮುಕ್ತಿ, ಜೀವನ್ಮುಕ್ತಿ, ಜೀವಾತ್ಮ–ಪರಮಾತ್ಮ ಎಂಬ ಕಲ್ಪನೆಗಳು ನಿಜಕ್ಕೂ ಚಲಾವಣೆ ಇಲ್ಲದ ತಿಳುವಳಿಕೆಗಳೇ ಹೌದು. ತತ್ವಜ್ಞಾನವನ್ನೆ ಲೋಕಜ್ಞಾನ ಅಥವಾ ಆತ್ಯಂತಿಕ ಅರಿವು ಎಂದು ತಿಳಿದಾಗ ಹುಟ್ಟುವ ಭ್ರಮೆಗಳಿವು. ಪುನರ್ಜನ್ಮ, ಸ್ವರ್ಗ, ಸದ್ಗತಿಗಳು ಒಂದು ಕಾಲದ ಜನಕ್ಕೆ

ಮತ್ತು ಶತಶತಮಾನಗಳಷ್ಟು ಹಿಂದಿನ ಕಾಲದಲ್ಲೆ ಬದುಕುತ್ತಿರುವ ಇಂದಿನ ಕೆಲವರಿಗೆ ರುಚಿಸಬಹುದು. ಆದರೆ ಹೊಸ ತಿಳುವಳಿಕೆಗಳು ಬೆಳೆದಂತೆ ಹಳೆಯವನ್ನು ಕಳಚಿಕೊಳ್ಳದೆ ಹೋದರೆ; ಕನಿಷ್ಟ ಮಾರ್ಪಡಿಸಿಕೊಳ್ಳದೇ ಇದ್ದರೆ ಹೇಗೆ? ಜನರನ್ನು ಇಂತಹ ಸುಳ್ಳು ಮತ್ತು ಭ್ರಮೆಗಳಲ್ಲಿ ಇರಿಸುವುದರಿಂದ ಚೆನ್ನಾಗಿ ಆಳಬಹುದು ಎಂಬ ವೈದಿಕಶಾಹಿಯ ಹುನ್ನಾರ ಇದು.

**ನಿರಾಕರಣೆಯ ತತ್ವಗಳು:**

ನಾವು ಏನನ್ನು ಸ್ವೀಕರಿಸಬೇಕು? ಏನನ್ನು ಮಾನ್ಯ ಮಾಡಬೇಕು? ಏನನ್ನು ರೂಪಾಂತರಿಸಿಕೊಳ್ಳಬೇಕು? ಏನನ್ನು ನಿರಾಕರಿಸಬೇಕು ಎಂಬುದು ನಮ್ಮ ನಂಬಿಕೆ ಮತ್ತು ತಿಳುವಳಿಕೆಯನ್ನು ಅವಲಂಬಿಸಿರುತ್ತದೆ. ಈ ನಂಬಿಕೆ ಮತ್ತು ತಿಳುವಳಿಕೆಗಳನ್ನು ರೂಪಿಸುವ ಸಂಗತಿಗಳು ಯಾವುವು ಎಂಬುದೇ ನಮ್ಮ ನಿರಾಕರಣೆ ಮತ್ತು ಸ್ವೀಕರಣೆ (ವಿಸರ್ಜನೆ ಮತ್ತು ಆಹ್ವಾನ)ಗಳನ್ನು ನಿರ್ಧರಿಸುತ್ತಿರುತ್ತದೆ. ಕೇಶವಾಂಕಿತ ರಚನೆಗಳಲ್ಲಿ ಕೆಲವನ್ನು ಆಪ್ತವಾಗಿ ಅಂಗೀಕರಿಸಿ ಸ್ಥಾಪಿಸುವ ಮತ್ತು ಕೆಲವನ್ನು ಬಲವಾಗಿ ನಿರಾಕರಿಸುವ ಕೆಲಸ ನಿರಂತರ ಜರುಗಿದೆ. ಆ ಸಂಗತಿಗಳು ಯಾವವು ಎಂಬುದು ಕುತೂಹಲಕರ. ಈಗಾಗಲೇ ಚರ್ಚಿಸಿರುವಂತೆ ಮುಕ್ತಿ, ಕಲ್ಪನೆ, ಹಣೆಬರಹ, ಕರ್ಮಸಿದ್ಧಾಂತಗಳನ್ನು ಅಂಗೀಕರಿಸಿ ಸ್ಥಾಪಿಸುವ ಕೆಲಸವನ್ನೂ ಕೇಶವಾಂಕಿತ ರಚನೆಗಳು ಬಹುಚೆನ್ನಾಗಿ ಮಾಡುತ್ತವೆ. ಹಾಗೆಯೆ ಇವುಗಳ ಉತ್ಪನ್ನವಾದ ಕುಲಜಾತಿಯ ಅಸಮಾನತೆಗಳನ್ನು ನಿರಾಕರಿಸುತ್ತವೆ.

ಆತ್ಮವಾದ; ಬ್ರಹ್ಮವಾದಗಳು ಆತ್ಮ, ಬ್ರಹ್ಮಗಳನ್ನು (ಜೀವಾತ್ಮ–ಪರಮಾತ್ಮ) ಶಾಶ್ವತ ಸತ್ಯಗಳೆಂದೂ, ಅಂತಿಮ ಸತ್ಯಗಳೆಂದೂ ಭಾವಿಸುತ್ತವೆ. ಲೌಕಿಕ ವಸ್ತು ಸಾಮಗ್ರಿ, ದೇಹ, ಸಿರಿ, ಭಾವ ಇತ್ಯಾದಿಗಳನ್ನೆಲ್ಲ ಈ ವಾದಗಳು ಅಶಾಶ್ವತ ಮತ್ತು ಮಾಯೆ ಎನ್ನುತ್ತವೆ. ಈ ಹಿನ್ನೆಲೆಯಲ್ಲಿ ಶಾಶ್ವತ ಆದುದು ಒಂದು ಇದೆ; ಅಶಾಶ್ವತ ಆದುದು ಮತ್ತೊಂದು ಇದೆ. ಇವೆರಡರ ನಡುವೆ ನಾವು ಅಶಾಶ್ವತ ಆದುದನ್ನು ನಿರಾಕರಿಸಬೇಕು ಮತ್ತು ಶಾಶ್ವತ ಆದುದನ್ನು ಆಹ್ವಾನಿಸಿ–ಆರಾಧಿಸಬೇಕು ಎನ್ನುವುದು ಕೇಶವಾಂಕಿತ ರಚನೆಗಳ ಪ್ರತಿಪಾದನೆ. ಈ ಆತ್ಮ, ಬ್ರಹ್ಮಗಳನ್ನೆ ನಾವು ಪೊಳ್ಳು ಎನ್ನುವುದಾದರೆ ಇಲ್ಲದ್ದನ್ನು ಇದೆ ಎಂದು ನಂಬಿಸುವ ವೈದಿಕಶಾಹಿ ಯೋಜನೆ ಅನ್ನುವುದಾದರೆ ಖಂಡಿತವಾಗಿಯೂ ಕುರುಬಕುಲದಲ್ಲಿ ಹುಟ್ಟಿದ ಕನಕ ಇದನ್ನು ಹೇಳುವುದಾದರೂ ನಿರಾಕರಣೀಯ; ಅಂಬೇಡ್ಕರ್ ಹೇಳಿದರೂ, ರಾಮಾನುಜಾಚಾರ್ಯ ಹೇಳಿದರೂ ನಿರಾಕರಣೀಯ. ಈ ನೆಲೆಯಲ್ಲಿ ಕೇಶವಾಂಕಿತ ಬರವಣಿಗೆಯ ಹಿಂದಿನ ಮಿದುಳು ವೈದಿಕ ತತ್ವರಾಜಕಾರಣದ ಬ್ರೈನ್ ಟ್ಯಾಪಿಂಗಿಗೆ ಒಳಗಾಗಿದೆ ಎನ್ನದೆ ವಿಧಿಯಿಲ್ಲ.

ಯಜಮಾನಿಕೆಯ ನಿರಾಕರಣೆ, ಸಿರಿವಂತಿಕೆಯ ನಿರಾಕರಣೆ (134), ಜರ್ಬಿನ ಅಲಂಕಾರ–ವಸ್ತ್ರಭೂಷಣ–ಆಭರಣಗಳ ನಿರಾಕರಣೆ (74), ನಾನು ನನ್ನದು

ಎಂಬ ಮೋಹ-ಖಾಸಗಿ ಆಸ್ತಿಯ ಕಲ್ಪನೆಯ ನಿರಾಕರಣೆ (125), ಆಸೆಯ ನಿರಾಕರಣೆ (103), ಸ್ತ್ರೀ ವ್ಯಾಮೋಹ ನಿರಾಕರಣೆ (99), (133), ಡಂಬಾಚಾರದ ತೀರ್ಥಯಾತ್ರೆಯ ನಿರಾಕರಣೆ (105), ದೇಹ ನಿರಾಕರಣೆ (132), ಸಂಸಾರ ನಿರಾಕರಣೆ (123) ಲೋಕಬಾಂಧವ್ಯಗಳ-ರಕ್ತ ಸಂಬಂಧಗಳ ನಿರಾಕರಣೆ, ಕುಲನಿರಾಕರಣೆ, ಮೇಲು ಕೀಳಿನ ನಿರಾಕರಣೆ, ಪಾಂಥಿಕತೆಯ ನಿರಾಕರಣೆ ಹೀಗೆ ಕೇಶವಾಂಕಿತ ರಚನೆಗಳಲ್ಲಿ ಹಲವು ರೀತಿಯ ನಿರಾಕರಣೆಯ (ವಿಸರ್ಜನೆಯ) ತತ್ವಗಳಿವೆ. ಇವೆಲ್ಲವೂ ಈ ದೇಹ, ಈ ಜನ್ಮಗಳು ಅಶಾಶ್ವತ; ಜೀವನ-ಮರಣಗಳ ನಾಟಕದಿಂದ ಮುಕ್ತಿ ಪಡೆಯುವುದೇ ಚಿರ ಎಂಬ ನಂಬಿಕೆಯಿಂದ ಹುಟ್ಟಿರುವ ತತ್ವಗಳು. ಲೋಕದಲ್ಲಿನ ವಸ್ತುಸಾಮಗ್ರಿಗಳಿಂದ-ಜೀವಾಜೀವಗಳಿಂದ ಮಾನವನು ದೊರಕಿಸಿಕೊಳ್ಳುವ ಸುಖದ ಆಸೆಯೇ ದುಃಖದ ಮೂಲವಾಗಿದೆ ಎಂಬ ತಿಳುವಳಿಕೆಯಿಂದ ಹುಟ್ಟಿರುವ ತತ್ವಗಳು. ಈ ತತ್ವರಾಜಕಾರಣವು ಒಂದು ಬಲವಾದ ನೀತಿಸಂಹಿತೆ/ ಆಚಾರಸಂಹಿತೆಯನ್ನು ಜನಮಾನಸದಲ್ಲಿ ಬಿತ್ತಲು ಪ್ರಯತ್ನಿಸುತ್ತದೆ. ಆದರೆ ಅಂತಿಮವಾಗಿ ಇದು ವಿರಮಿಸುವುದು ಮುಕ್ತಿಸಿದ್ಧಾಂತದಲ್ಲಿ ಎಂಬುದು ಗಮನಾರ್ಹ.

**ಕುಲನಿರಾಕರಣೆ : ಪಾಂಥಿಕತೆಯ ನಿರಾಕರಣೆ, ಮೇಲು ಕೀಳಿನ ಬಿಕ್ಕಟ್ಟು**

ಕೇಶವಾಂಕಿತ ರಚನೆಗಳಲ್ಲಿ ಬಹು ಬಲವಾದ ಕುಲನಿರಾಕರಣೆಯ – ಜಾತಿ ತರತಮ ನಿರಾಕರಣೆಯ – ಪಾಂಥಿಕ ವೈರಗಳ ನಿರಾಕರಣೆಯ ತತ್ವ ಪ್ರತಿಪಾದಿತವಾಗಿದೆ. ಆದರೆ ಇದರ ಜೊತೆಯಲ್ಲೆ ಹಲವು ಬಿಕ್ಕಟ್ಟುಗಳು ಇವೆ. ವರ್ಣಾಶ್ರಮ ಧರ್ಮದ ಬಗೆಗೆ, ಬ್ರಾಹ್ಮಣ್ಯವೇ ಶ್ರೇಷ್ಠವೆಂಬ ಬಗೆಗೆ, ಹರಿಸರ್ವೋತ್ತಮ ಎಂಬ ತತ್ವದ ಬಗೆಗೆ ಯಾವ ವಿರೋಧವೂ ಇಲ್ಲದಿರುವುದು ಇಲ್ಲಿನ ಒಂದು ಮುಖ್ಯ ಬಿಕ್ಕಟ್ಟು. ತೀರ್ಥ ಪಿಡಿದವರೆಲ್ಲ ತಿರುನಾಮಧಾರಿಗಳೇ? ಯೋಗ ಭ್ರಷ್ಟರೆಲ್ಲ ದೇವಬ್ರಾಹ್ಮಣರೆ? ಪೊಟ್ಟೆಗುಡುಮಗಳೆಲ್ಲ ಪರಮ ವೈಷ್ಣವರೆ, ಭಂಗಿ ಮುಕ್ಕಗಳೆಲ್ಲ ನಿಜಲಿಂಗವಂತರೆ? ಎಂಬ ಹಲವು ಪ್ರಶ್ನೆಗಳನ್ನು (204) ಇಲ್ಲಿ ಕೇಳಲಾಗಿದೆ. ಹಾಗೆಯೇ ಕೆಸರೊಳು ತಾವರೆ ಪುಟ್ಟಲು ಅದ ತಂದು ಬಿಸಜನಾಭನಿಗರ್ಪಿಸಲಿಲ್ಲವೆ? ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವ ವಸುಧೆಯೊಳಗೆ ಭೂಸುರರುಣಲಿಲ್ಲವೆ? (201) ಇಂತಹ ಪ್ರಶ್ನೆಗಳನ್ನು ಇಲ್ಲಿ ಕೇಳಲಾಗಿದೆ. ಈ ಪ್ರಶ್ನೆಗಳಲ್ಲಿ 'ಕೀಳು' ಎಂಬುದನ್ನು ನಿರಾಕರಿಸುವ ಇರಾದೆ ಇದ್ದರೂ 'ಮೇಲು' ಎಂಬ ಕಲ್ಪನೆಯ ನಿರಾಕರಣೆ ಇಲ್ಲ. ನಿಜವಾದ ದೇವಬ್ರಾಹ್ಮಣ, ನಿಜವಾದ ಪರಮವೈಷ್ಣರು, ನಿಜವಾದ ಲಿಂಗವಂತರು ಇದ್ದಾರೆ ಎಂದಾದರೆ ಮೇಲು ಎಂಬುದೊಂದುಂಟು ಎಂದಾಯಿತಲ್ಲ!

ಕುಲವನ್ನು ಮೀರುವವರದ್ದೆ ಒಂದು ಕುಲವಾಗಿ ಪರಿಣಮಿಸುವುದು ನಮ್ಮ ಭಕ್ತಿ ಪರಂಪರೆಯ ವ್ಯಂಗ್ಯ. ನಾನು ವೈಕುಂಠದಾಸರ ಮನೆಯ ಬಾಗಿಲನ್ನು ಕಾಯಬೇಕು; ಆತ ನನ್ನನ್ನು ಗುರುತಿಸಬೇಕು, ಮಾನ್ಯ ಮಾಡಬೇಕು. ನಾನು

ಅವನಂಥವರಲ್ಲಿ ಒಬ್ಬನಾಗಬೇಕು ಎಂಬ ಬಯಕೆಯು ಕೇಶವಾಂಕಿತ ವ್ಯಕ್ತಿತ್ವದ ಹೆಬ್ಬಯಕೆ, ವ್ಯಾಸರಾಯರು ಕನಕನಿಗೆ ಕೋಣಮಂತ್ರ ಉಪದೇಶಿಸಿದರು; ಅವನಿಗೇ ಮೊದಲ ತೀರ್ಥ ಕೊಡುತ್ತಿದ್ದರು ಎಂಬೆಲ್ಲ ಪವಾಡ-ದಂತಕತೆಗಳಲ್ಲಿ ಅಸಮಾನ ಸಂಬಂಧಗಳಲ್ಲಿ ಕೀಳು ಎಂಬುದು ಮೇಲಿನ ಕಡೆಗೆ ಚಲಿಸುವ ಮತ್ತು ಮಾನ್ಯತೆಗಾಗಿ ಹಂಬಲಿಸುವ ಯತ್ನಗಳೇ ಕಾಣುತ್ತವೆ. (ಈ ಕಥೆಗಳು ಬಹುಶಃ ತಿರುನಾಮಿಗಳು ಆನಂತರ ಹೆಣೆದ ಕಥೆಗಳೆ ಇರಬಹುದು) ಇದು ಏಕಕಾಲಕ್ಕೆ ತನ್ನ 'ಕೀಳು' ಗುರುತಿನ ಕುರುಬ ಕುಲದಿಂದ ಪಡೆಯುವ ಬಿಡುಗಡೆಯೂ ಹೌದು ದಾಸಕುಲವೆಂಬ ತನ್ನದೇ ಹೊಸ ಕುಲಪರಿವಾರವನ್ನು ಕಟ್ಟಿಕೊಳ್ಳುವ ಪ್ರಯತ್ನವೂ ಹೌದು. ಒಂದು ಕಡೆ ಈ ವರ್ತನೆ ವಿಸರ್ಜನೆಯೂ ಹೌದು, ಇನ್ನೊಂದು ಕಡೆ ನವಕುಲ ನಿರ್ಮಾಣವೂ ಹೌದು. ಕುಲನಿರಾಕರಣೆಯು ನವಕುಲ ನಿರ್ಮಾಣದ ತತ್ವರಾಜಕಾರಣ ಆಗಿ ಪರಿಣಮಿಸುವುದು ನಮ್ಮ ಜಾತಿವ್ಯವಸ್ಥೆಯ ಬೇರುಗಳು ಎಷ್ಟು ಗಟ್ಟಿ ಎಂಬುದರ ಗುರುತಾಗಿದೆ.

'ಹರಿತೀರ್ಥ ಪ್ರಸಾದ ಎನ್ನ ಜಿಹ್ವೆಗೊದಗಿತು ಹರಿಯ ನಾಮಾಮೃತ ಕಿವಿಗೊದಗಿತು, ಹರಿಯದಾಸರು ಎನ್ನ ಬಂಧುಬಳಗವಾದರು, ಹರಿಯ ಶ್ರೀಮುದ್ರೆ ಆಭರಣವಾಯ್ತು' (65) ಎಂಬ ಮಾತುಗಳೆಲ್ಲ ಹುಟ್ಟು ಮೂಲದ ಕುಲ ಲಾಂಛನಗಳನ್ನು ಬಿಟ್ಟುಕೊಡುವ ಮತ್ತು ತಾನು ಹಂಬಲಿಸುವ ಪರಿವಾರ, ಲಾಂಛನಗಳನ್ನು ಧರಿಸುವ ಇಚ್ಛೆಗಳೇ ಹೌದು. ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು ಪದುಮನಾಭನ ಪಾದದೊಲುಮೆ ಎನಗಾಯಿತು. ಮುಕುತಿ ಮಾರ್ಗಕ್ಕೆ ಯೋಗ್ಯ ನಾನಾದೆನೋ, ಮುಕುತರಾದರು ಎನ್ನ ನೂರೊಂದು ಕುಲದವರು ಎಂದು ಇಂದು ಈ ಕೀರ್ತನೆಯನ್ನು ನಾವು ಹೇಗೆ ಹಾಡಲು ಸಾಧ್ಯ? ಕೇಶವ ಭಕ್ತರ ಮುಕ್ತಿಯನ್ನು ನಾವು ನಂಬುವವರಲ್ಲ; ನಮ್ಮ ಮುಕ್ತಿಯೇ ಬೇರೆ. ಪದುಮನಾಭನಲ್ಲ, ಇಂಗ್ಲಿಷ್ ದೇವಿಯು ನಮ್ಮ ಕೈವಶವಾದರೂ, ಭಾರತ ಸಂವಿಧಾನ, ಐ.ಎ.ಎಸ್., ಐ.ಎಫ್.ಎಸ್., ಮಂತ್ರಿಗಿರಿ, ಇತ್ಯಾದಿ ಯಾವ ಆಧುನಿಕ ದೇವತೆಗಳು ನಮ್ಮ ಕೈವಶವಾದರೂ ನಮಗೆ ಮತ್ತು ನಮ್ಮ ನೂರೊಂದು ಕುಲದವರಿಗೆ ಜೀವನ್ಮುಕ್ತಿ ಸಿಕ್ಕುವುದಿರಲಿ ಹುಟ್ಟು ಕುಲದಿಂದಲೆ ಮುಕ್ತಿ ಸಿಕ್ಕಲಾರದು. ತಳಸಮುದಾಯಗಳು ಬದುಕಿದೆನು ಬದುಕಿದೆನು ಎಂದು ಹೇಳಿಕೊಳ್ಳುವ ಭಾಗ್ಯಗಳು ಇಂದು ಯಾವುವಾದರೂ ಇವೆಯೇ? ಅಪ್ಪ ಬದುಕೊಂಣಪ್ಪ ಎಂದು ನಿಟ್ಟುಸಿರು ಬಿಡಬಹುದಾದ ದಡಗಳು ಇಂದು ತಳಸಮುದಾಯಗಳಿಗೆ ಯಾವಾದರೂ ಇವೆಯೇ? ಇದ್ದರೆ ಅವು ಯಾವುವು?

11 ರಿಂದ 18ನೆ ಶತಮಾನಗಳವರೆಗೆ ಏಕದೇವೋಪಾಸನೆ, ಅಖಂಡಭಕ್ತಿ, ಅಂತಹ ಒಂದು ದಡವಾಗಿತ್ತು ಎಂದು ಸಾಹಿತ್ಯದ ಓದಿನಿಂದ ನಾವಿಂದು ತಿಳಿಯುತ್ತಿರುವುದೂ ಕೂಡ ಒಬ್ಬ ಕನಕನಿಗೆ, ಒಬ್ಬ ಕಡಕೋಳ ಮಡಿವಾಳಪ್ಪನಿಗೆ, ಒಬ್ಬ ಷರೀಫಜ್ಜನಿಗೆ, ಒಬ್ಬ ಕೈವಾರ ತಾತನಿಗೆ ಮಾತ್ರ ಸೀಮಿತವೋ ಅಥವಾ

ಇವರು ಪ್ರತಿನಿಧಿಸುವ ನೂರೊಂದು ಕುಲದವರಿಗೂ ಅದು ನಿಲುಕಿತ್ತೊ? ಬ್ರಹ್ಮಾಂಡ ತತ್ವರಾಜಕಾರಣಗಳ ಜಾತ್ರೆಯಲ್ಲಿ ಕೇಶವಾಂಕಿತ ಸಾಹಿತ್ಯದ ತತ್ವಸಮೂಹ ಎಲ್ಲಿ ನಿಲ್ಲುತ್ತದೆ? ತಾತಾಚಾರ್ಯ, ವ್ಯಾಸರಾಯ, ಉಡುಪಿಯ ವೈಕುಂಠದಾಸ, ರಾಮಾನುಜಾಚಾರ್ಯರನ್ನು ಕೀರ್ತಿಸುವ ಕೇಶವಾಂಕಿತ ರಚನೆಗಳು ಯಾವ 'ಕೆಳ'ವರ್ಗದ ತತ್ವ ರಾಜಕಾರಣವನ್ನು ಪ್ರತಿನಿಧಿಸುತ್ತವೆ? ಕನಕನಂಥ ಸಂತನಿಗೆ ಉಡುಪಿಯ ಶ್ರೀಕೃಷ್ಣನ ದರ್ಶನ ಏಕೆ ಬೇಕಿತ್ತು? ತಳಸಮುದಾಯದಲ್ಲಿ ಹುಟ್ಟಿದ ಒಬ್ಬನು ಅದಾಗಲೇ ಅನ್ಯರಿಗೆ ಪ್ರವೇಶ ಇಲ್ಲದೇ ಇದ್ದ ವೈಷ್ಣವ ಪಂಥ ಎಂಬ ಭದ್ರ ಕೋಟೆಯ ಒಳಕ್ಕೆ ಪ್ರವೇಶ ಕೇಳಿದ. ಅವರು ಪ್ರವೇಶ ನಿರಾಕರಿಸಿದರು. ಈತ ಅವರು ಹೇಳುವ ಹಾಗೆ ತನ್ನ ಮಿದುಳನ್ನು ಕತ್ತರಿಸಿಕೊಂಡ; ಲಾಂಛನಗಳನ್ನು ಧರಿಸಿದ. ಉಡುಪಿಯ ವೈಕುಂಠದಾಸರ ಮನೆ ಬಾಗಿಲು ಕಾಯ್ದು-ಊಳಿಗ ಮಾಡಿದ. ಕನಕ ಊಳಿಗ ಮಾಡಿದನೋ ಇಲ್ಲವೋ ಆದರೆ ಆನಂತರ ಆತ ಊಳಿಗ ಮಾಡಿದಂತೆ ಚರಿತ್ರೆ ಸೃಷ್ಟಿಸಲಾಗಿದೆ. ಅದಕ್ಕೆ ಕೇಶವಾಂಕಿತ ಇರುವ ಕೀರ್ತನೆಯನ್ನೂ ರಚಿಸಲಾಗಿದೆ. ಇವನು ತನ್ನ ಮಿದುಳು ಕತ್ತರಿಸಿಕೊಂಡನೊ ಇಲ್ಲವೊ ಆದರೆ ಆ ರೀತಿ ಕತೆ ಕಟ್ಟಲಾಗಿದೆ. ಆಗ ಶ್ರೀಕೃಷ್ಣ ಇವನಿಗೆ ಕಿಂಡಿಯ ಮೂಲಕ ದರ್ಶನ ನೀಡಿದ. ಅಂದರೆ ಈಗಾಗಲೇ ವೈಷ್ಣವದಾಸರ ಮನೆಯ ಊಳಿಗ ಮಾಡದೆ ಅಲ್ಲಿ ಕುರುಬದಾಸರಿಗೆ, ಮಾದಿಗ ದಾಸರಿಗೆ ಪ್ರವೇಶವಿಲ್ಲ ಎಂದೇ ಈ ಪ್ರತೀಕ ಸೂಚಿಸುತ್ತದೆ. ಅಷ್ಟೆ ಅಲ್ಲ ಹೀಗೆ ಕನಕನ ಕಿಂಡಿ ಸೃಷ್ಟಿ ಆಗಿರುವುದೂ ಕೂಡ ವೈಷ್ಣವರಿಗೆ ದೊಡ್ಡ ಆದಾಯದ ಮೂಲವೇ ವಿನಾಃ ಅದರಿಂದ ಕುರುಬದಾಸ, ಮಾದಿಗ ದಾಸರಿಗೆ ಯಾವ ಲಾಭವೂ ಇಲ್ಲ. ಅವರು ದರ್ಶನ ಮಾಡಲಿ ಬಿಡಲಿ ಒಳಗಂತೂ ಇಲ್ಲ. ಹೊರಗೇ.

ಕುಲವಿಲ್ಲದ ದಾಸ ಕುರುಬದಾಸರಿಗೆ, ಮಾದಿಗದಾಸರಿಗೆ (65) (201, 202) ಹಲವು ದಾಸರ ಮನೆಯ ಹೊಲೆಯ ದಾಸರಿಗೆ ಹರಿತೀರ್ಥ ಪ್ರಸಾದವು ನಾಲಗೆಗೂ, ಹರಿನಾಮಾಮೃತವು ಕಿವಿಗೂ ಒದಗಿದಾಗ ಮಾತ್ರ, ಶ್ರೀಮುದ್ರೆಯೇ ಆಭರಣವಾದಾಗ ಮಾತ್ರ ಬದುಕಿದೆನು ಬದುಕಿದೆನು ಎಂದು ಅನ್ನಿಸುವ ಸ್ಥಿತಿ ಇಂದಿಗೂ ಇದೆ ಎನ್ನುವುದಾದರೆ ಅದು ದುರಂತವೇ! ಅಂದರೆ ಜಾತಿಯಿಂದ ಬಿಡುಗಡೆ ಎಂದರೆ ಒಂದು ಜಾತಿಯಿಂದ ಇನ್ನೊಂದು ಜಾತಿಗೆ ಜಿಗಿಯುವುದೇ? ಹರಿದಾಸ ಸರ್ವೇಶತೆಗೆ ನಿಮ್ಮ ವೇಶ ತೊರೆಯಿರಿ (67) ಎಂಬ ಕರೆ ಕೊಟ್ಟಾಗ, ಯತಿ ರಾಮಾನುಜ ಎಂಬ ಮತವೆ ಒಳ್ಳೆಯದು ಎಂಬ ಹೇಳಿಕೆ ಕೊಟ್ಟಾಗ, ಕುಲಹೀನರ ಕೂಡೆ ಸ್ನೇಹ ಬೆಳೆಪನ ಸಂಗ ಮಾಡಬೇಕೆ (183) ಎಂಬ ಮಾತಾಡಿದಾಗ ಮೇಲ್ನೋಟಕ್ಕೆ ಹಾಗೆಯೇ ಅನ್ನಿಸುತ್ತದೆ. (ಈ ರಚನೆಗಳನ್ನು ಅನ್ಯರು ತಿರುಚಿರಬಹುದು ಎಂಬ ಗುಮಾನಿಯೂ ಹುಟ್ಟುತ್ತದೆ) ಆದರೆ ಕೆಲವು ಕೇಶವಾಂಕಿತ ರಚನೆಗಳ ಆಶಯ ಇದಲ್ಲ. ಎಲ್ಲ ಮತ-ಜಾತಿಗಳನ್ನು ಒಂದೇ ಮತ-ಕುಲವನ್ನಾಗಿ ಮಾಡುವುದು ಅವುಗಳ ಆಶಯ.

ಕನಕನ ಕಿಂಡಿಯ ಸಂಗತಿಯನ್ನು ಇನ್ನೊಂದು ದಿಕ್ಕಿನಿಂದ ನೋಡಿದಾಗ ಅದು ದೇವಸ್ಥಾನದ ಪ್ರವೇಶ ಬಯಸಿದ ವ್ಯಕ್ತಿಗೆ ಅದರ 'ಗುತ್ತಿಗೆದಾರ'ರು ಪ್ರವೇಶ ನಿರಾಕರಿಸಿದ ಸಂಗತಿಯಾಗಿ ಮಾತ್ರ ಕಾಣದೆ, ದೇವಸ್ಥಾದ ಪ್ರವೇಶವನ್ನು ತಾನಾಗಿ ಭಕ್ತನೊಬ್ಬ ನಿರಾಕರಿಸಿದ ಸಂಗತಿಯಾಗಿ ಕೂಡ ಕಾಣುತ್ತದೆ. ಈ ದಂತಕತೆಯು ಕೃಷ್ಣ ಬೇಕು ಆದರೆ ಆ ಕೃಷ್ಣನನ್ನು ಬಂಧಿಸಿ ಇಟ್ಟುಕೊಂಡಿರುವ ದೇಗುಲ ಬೇಡ, ಕೇಶವನ ಮಠೀಕರಣ, ಖಾಸಗೀಕರಣ, ವೈಷ್ಣವೀಕರಣ ಬೇಡ ಅವನ ಸಾರ್ವಜನೀಕರಣ ಆಗಬೇಕು; ಅವನು ಕೆಲವರ ಸೊತ್ತಾಗದೆ ಎಲ್ಲರ ಕೃಷ್ಣ ಆಗಬೇಕು ಎಂಬ ಪ್ರಯತ್ನವಾಗಿ ಕಾಣುತ್ತದೆ. ತಿಮ್ಮಪ್ಪನಾಯಕ ವಿಜಯನಗರ ಸಾಮ್ರಾಜ್ಯದ ಊಳಿಗ ಮಾಡಿದವನು. ಅಂದರೆ ('ಅಲ್ಪ ದೊರೆಗಳ ಜೀತ' ಮಾಡಿದವನು) ಇವನೇ ಒಬ್ಬ ತುಂಡರಸ ಆಗಿದ್ದು ಅದನ್ನು ನಿರಾಕರಿಸಿ ಆ ಮೂಲಕ ಪ್ರಭುತ್ವವನ್ನು ನಿರಾಕರಿಸಿ ದೈವದ ಪ್ರಭುತ್ವವನ್ನು ಸ್ವೀಕರಿಸಿದವನು. ಇಂಥವನು ಪಾಂಥಿಕ ಪ್ರಭುತ್ವವನ್ನು (ಪುರೋಹಿತಶಾಹಿಯನ್ನು) ಹೇಗೆ ಒಪ್ಪುತ್ತಾನೆ? ಅದರಿಂದಲೆ ಕನಕನ ಕಿಂಡಿಯ ಸಂಗತಿಯನ್ನು ಖಂಡಿತವಾಗಿಯೂ ದೇಗುಲವನ್ನು ಫ್ಯೂಡಲ್ ಕೇಂದ್ರವನ್ನಾಗಿ ಬೆಳೆಸಿಕೊಂಡ ಪಾಂಥಿಕ ಪ್ರಭುತ್ವಕ್ಕೆ ಕನಕ ತೋರಿದ ಪ್ರತಿಭಟನೆಯ ರೂಪಕ ಆಗಿಯೆ ನೋಡಲು ಸಾಧ್ಯವಿದೆ. ಇದು ಎಲ್ಲ ಅಲಕ್ಷಿತರನ್ನೂ ಕೃಷ್ಣನ ಕೈಕೆಳಗೆ ತಂದು ಒಂದು ಸಮ ಸಮಾಜವನ್ನು ಕಟ್ಟುವ ಕನಸೂ ಹೌದು. ಹಾಗೆಯೆ ಕರ್ಮಠ ವೈಷ್ಣವರಿಂದ ಕೃಷ್ಣನನ್ನು ಬಿಡುಗಡೆ ಮಾಡುವ ಕೆಲಸವೂ ಹೌದು. (ಅದು ಆಯಿತೆ ಅಥವಾ ಇಲ್ಲವೆ ಎಂಬುದು ಬೇರೆ ಮಾತು)

**'ಕೀಳು' ದೈವ-ಬಹುದೈವ ನಿರಾಕರಣೆ : ವಿಶ್ವಕುಟುಂಬಿ ಕಲ್ಪನೆ:**

ರಂಗನಾಥನು ಇರಲಿಕ್ಕೆ ಜಂಗುಳಿ ದೈವಗಳೇಕೆ, ತುಂಗಭದ್ರೆ ಇರಲಿಕ್ಕೆ ಕೆರೆ ಭಾವಿ ಏಕೆ? (30), ಎಕ್ಕನಾತಿ ಎಲ್ಲಮ್ಮ ಮಾರಿ ದುರ್ಗಿ ಚೌಡಿಯ ಅಕ್ಕರಿಂದಲಿ ಪೂಜೆ ಮಾಡಲೇಕೆ? (182), ಬೆಲ್ಲವು ಕರದೊಳಗಿರುತಿರೆ ಕಾಡ ಕಲ್ಲನು ಕಡಿಯಲಿನ್ಯಾಕಯ್ಯಾ, ಬಲ್ಲಿದ ನೆಲೆಯಾದಿ ಕೇಶವನಿರುತಿರೆ ಚಿಲ್ಲರೆ ದೈವದ ಹಂಬಲ್ಯಾಕಯ್ಯಾ (17) ಎಂಬ ಮಾತುಗಳು ಮೇಲ್ನೋಟಕ್ಕೆ ತಳಸಮುದಾಯದ ಪೂಜೆ-ದೇಗುಲ ಕಲ್ಪನೆಗಳ ನಿರಾಕರಣೆ ಎಂಬಂತೆ ಅನ್ನಿಸಿದರೂ ಇದರ ಹಿಂದೆ ಹಲವು ಸಂಗತಿಗಳಿವೆ. ಇದು ಕೀಳು ದೈವಗಳನ್ನು ನಿರಾಕರಿಸುವ ಸಂಗತಿ ಅಲ್ಲ, ಕೀಳನ್ನು ನಿರಾಕರಿಸುವ ಸಂಗತಿ. ಯಾವ ದೈವ-ಯಾವ ಕುರುಹು ನಮಗೆ ಕೀಳನ್ನು-ಅವಮಾನವನ್ನು ತಂದುಕೊಡುತ್ತದೋ ಅದರಿಂದ ಬಿಡುಗಡೆ ಬಯಸುವ ಬಯಕೆಯಿದು. ಅಲ್ಲದೆ; ಇದು ಪೂಜೆ-ಭಕ್ತಿಗಳು ನಮ್ಮಲ್ಲಿ ಅಸಮಾನತೆಯನ್ನು ಉಂಟುಮಾಡುತ್ತವೆ ಎನ್ನುವುದಾದರೆ ಆ ಅಸಮಾನ ದೈವಗಳನ್ನೆಲ್ಲ ತೊರೆದು ಒಂದೇ ದೈವದ ಮಡಿಲಿಗೆ ಎಲ್ಲರನ್ನೂ ತರುವ ಬಯಕೆ ಕೂಡ. ಇದು ಬಹುದೇವತಾರಾಧನೆಯ ನಿರಾಕರಣೆ-ಏಕದೇವೋಪಾಸನೆಯ ಪ್ರತಿಪಾದನೆ ಹೌದು. ಆದರೆ ಇದರ ಹಿಂದೆ ಅಸಮಾನತೆ-ಅವಮಾನಗಳನ್ನು ಮೀರುವ ಹಂಬಲ ಇದೆ.

ಹರಿಯ ದಾಸರು ಎನ್ನ ಬಂಧು ಬಳಗವಾದರು ಎಂಬ ಮಾತಿನ ಹಿಂದೆ ನನ್ನ ನೂರೊಂದು ಕುಲದವರಿಗೆ ಮುಕ್ತಿ ಸಿಕ್ಕಿತು ಎಂಬ ಮಾತಿನ ಹಿಂದೆ ತಮ್ಮ ಕುಲದ ಚಹರೆಗಳಿಂದ ಬಿಡುಗಡೆ ಪಡೆಯುವ ಬಯಕೆಯೇ ಇದೆ. ನಮ್ಮಲ್ಲಿ ದೇವರು ಎಲ್ಲರಿಗೂ ಬೇಕಾಗಿದ್ದಾನೆ. ಬಡವರಿಗೆ, ಅನಾಥರಿಗೆ ಅವರ ದುಃಖ ಹೇಳಿಕೊಳ್ಳಲು ಬೇಕಾಗಿದ್ದಾನೆ. ಸಿರಿವಂತರಿಗೆ ಅವರ ಸುಖ-ಸಿರಿ ಹೆಚ್ಚಿಸಿಕೊಳ್ಳಲು ಬೇಕಾಗಿದ್ದಾನೆ. ಶಕ್ತಿಕೇಂದ್ರಗಳಿಗೆ ತಮ್ಮ ಬೇಳೆ ಬೇಯಿಸಿಕೊಳ್ಳಲು ಮತ್ತು ಅವರಿವರ ನಡುವೆ ಜಗಳ ತಂದಿಕ್ಕಲು ಬೇಕಾಗಿದ್ದಾನೆ. ಆದರೆ ಕೇಶವಾಂಕಿತ ರಚನೆಗಳಿಗೆ ಅಸಮಾನತೆ-ಅನಾಚಾರ-ಅಸತ್ಯಗಳ ಈ ಲೋಕದಿಂದ ಆಚೆ ಹೋಗಲು; ಇವುಗಳಿಲ್ಲದ ಲೋಕವನ್ನು ಈ ಲೋಕದಲ್ಲೆ ಸೃಷ್ಟಿಸಲು ಬೇಕಾಗಿದ್ದಾನೆ. ಇವನು ವಿಶ್ವಕುಟುಂಬಿಯಾದ ವಿಷ್ಣು. ಈತ ಜಗತ್ತಿನ ಎಲ್ಲ ವೈವಿಧ್ಯತೆಗಳನ್ನೂ ತಾನೇ ಆಗುಮಾಡುವ ಮತ್ತು ತಾನೇ ಎಲ್ಲವೂ ಆಗುವ ಮೂಲಕ ಏಕರೂಪೀಕರಣ ಮತ್ತು ಐಕ್ಯತೆಗಳೆರಡನ್ನೂ ಹೊತ್ತು ಸಾಗುವ ನಿತ್ಯದೈವ.

ಸಕಲ ಲೋಕವೂ ವೈವಿಧ್ಯಮಯವಾಗಿ ಇರುತ್ತಲೇ 'ಏಕವರ್ಣ'ವಾಗುವ, ದಶ-ಶತ-ಸಹಸ್ರ ಸಹಸ್ರ ಅವತಾರವಾದರೂ ಒಬ್ಬನದೇ ಅವತಾರವಾಗುವ ವಿಶ್ವದ ಕಲ್ಪನೆ ಕೇಶವಾಂಕಿತ ರಚನೆಗಳಲ್ಲಿದೆ. ಏಕವರ್ಣವಾಗಿಯೆ ಸಕಲಲೋಕವು ಆಕಾರವಳಿಯೆ, ಏಕಮೇವಾದ್ವಿತೀಯನೆಂಬಾಗಮಕೆ ಸರಿಯಾಗಿ (29) ಎಂದು ಹೇಳುವ ಕೀರ್ತನೆಯು ಎಲ್ಲ ವರ್ಣಗಳೂ ಅಳಿದು ಏಕವರ್ಣ ಆಗುವ; ಎಲ್ಲ ಆಕಾರಗಳೂ ಅಳಿದು ಏಕಾಕಾರ ಆಗುವ ಲೋಕರಚನೆಗಾಗಿ ಹಂಬಲಿಸುವಂಥದ್ದು. ಹಾಗೆ ಹಂಬಲಿಸುತ್ತಲೇ ವಾದಿರಾಜನು (ಹರಿಯು) ಅತ್ಯತಿಷ್ಠದ್ದಶಾಂಗುಲ ಎಂದು ಹೇಳುವಂಥದ್ದು. ವಿಷ್ಣುವಿಶ್ವಕುಟುಂಬದ ಕಲ್ಪನೆ ಕೂಡ ಇಂಥದ್ದೆ. (ಮೇಲ್ನೋಟಕ್ಕೆ ಇದು ತುಂಬ ಧನಾತ್ಮಕವಾಗಿ ಕಾಣುತ್ತದೆಯಾದರೂ ಆಳದಲ್ಲಿ ಇದು ಸರ್ವಾಧಿಕಾರಿ ಮನೋಭಾವನೆಯ ಪ್ರತಿರೂಪವೆ ಆಗಿದೆ ಎಂಬುದು ಬೇರೆ ಮಾತು. ಎಲ್ಲರಿಗಿಂತಲೂ ವಿಷ್ಣುವೇ ದೊಡ್ಡವನು. ಅವನ ಅನುಗ್ರಹವಿಲ್ಲದೆ ಮುಕ್ತಿಯಿಲ್ಲ!!!)

ರಕ್ತ ಸಂಬಂಧದ ನಿರಾಕರಣೆ-ಮಾನವ ಕುಟುಂಬ ಕಲ್ಪನೆಯ ನಿರಾಕರಣೆಗಳು ಎಲ್ಲ ದೈವ ಸಂಬಂಧಗಳನ್ನೂ ವಿಷ್ಣುವಿನೊಂದಿಗೇ ಜೋಡಿಸುತ್ತವೆ. ಭೂದೇವಿಯು ಇಲ್ಲಿ ಹರಿಯ ಕಿರಿಹೆಂಡತಿ, ಸಂಪತ್ತಿನ ಪ್ರತೀಕವಾದ ಲಕ್ಷ್ಮಿ (ಶ್ರೀದೇವಿ) ಈತನ ಹಿರಿಯ ಹೆಂಡತಿ (15), ಎಂಭತ್ತನಾಲ್ಕು ಲಕ್ಷಜೀವರಾಶಿಗಳ ಹಣೆಬರಹವನ್ನು ಬರೆಯುವ ಬ್ರಹ್ಮ ಈತನ ಹಿರಿಯ ಮಗ, ಪಿಂಡೋತ್ಪತ್ತಿ ಕಾರಣನಾದ ಮನ್ಮಥ ಕಿರಿಯ ಮಗ, ವೈಷ್ಣವನಾದ ಶಿವನು ಈತನ ಮೊಮ್ಮಗ, ಗಂಗೆ ಮಗಳು ಹೀಗೆ ಈ ಲೋಕದ ಎಲ್ಲರೂ ಹರಿಯ ಸಂಬಂಧಿಗಳೇ. ಹರಿಯೋ ಲೋಕವೆಂಬ ಈ ಯಂತ್ರವನ್ನು ಚಲಾಯಿಸುವ ಯಂತ್ರವಾಹಕ ಹೀಗೆ ಈತ ವಿಶ್ವಕುಟುಂಬಿ. ಇವನು ನಾಗಶಯನನೂ ಹೌದು, ನಾಗವೈರಿವಾಹನನೂ ಹೌದು. ಇವನ ವಿಶ್ವಕುಟುಂಬ

ಕಲ್ಪನೆಯನ್ನು ಸಮರ್ಥಿಸುವ ಇನ್ನೊಂದು ಪದ್ಯ ಹರಿಭಕ್ತಿಸಾರದಲ್ಲಿದೆ (ಪದ್ಯ 25) ಇದರ ಪ್ರಕಾರ ವಿಷ್ಣುವು ಸ್ಥಾವರ ಕುಟುಂಬಿಗನೂ ಹೌದು, ಜಂಗಮ ಕುಟುಂಬಿಗನೂ ಹೌದು. ಅವನಿಗೆ ಶಾಶ್ವತವಾದ ಒಂದು ಕುಟುಂಬ ಇದೆ. ಹಾಗೆಯೇ ಅವನ ಕುಟುಂಬ ಸದಾ ವಿಸ್ತರಣೆ ಆಗುತ್ತಲೇ ಇರುತ್ತದೆ. ಅವನ ರಾಣಿ ಲಕ್ಷ್ಮಿ, ಮಗ ಬ್ರಹ್ಮ, ಶಾರದೆ ಸೊಸೆ, ಗಿರಿಜೆ ಸೋದರಿ, ಶಂಕರ ಮೈದುನ, ಎಲ್ಲ ದೇವತೆಗಳೂ ಇವನ ಸೇವಕರು, ಮಾಯೆಯು ಈತನ ದಾಸಿ. ಬ್ರಹ್ಮಾಂಡವೇ ಇವನ ಮನೆ. ಲೌಕಿಕವಾದ ಅನುಭವಗಳ ಮೂಲಕವೆ ಪಾರಲೌಕಿಕ ಸಂಗತಿಗಳನ್ನು ಕಟ್ಟಿಕೊಡಲು ಹೋದಾಗ ಕೆಲವೊಮ್ಮೆ ಲೌಕಿಕಕ್ಕೆ ಇರುವ ಮಿತಿಗಳು ಅದಕ್ಕೂ ಅಂಟಿಕೊಳ್ಳುತ್ತವೆ. ಈ ವಿಶ್ವಕುಟುಂಬ ಕಲ್ಪನೆಯ ಹಿಂದೆ ಲೌಕಿಕ ಸಂಬಂಧಗಳ ಮತ್ತು ಅವುಗಳಿಂದ ಹುಟ್ಟುವ ದುಃಖ ಅವಮಾನಗಳ ನಿರಾಕರಣೆ ಇದೆ. ಶಿವಪಂಥ, ವಿಷ್ಣುಪಂಥ, ಇತ್ಯಾದಿ ಪಾಂಥಿಕ/ಪಾರಿವಾರಿಕ ಒಳಜಗಳಗಳ ನಿರಾರಕಣೆ ಇದೆ. ಆದಾಗ್ಯೂ ಇದು ಕೊನೆಗೆ ಹರಿಸರ್ವೋತ್ತಮ ಎಂಬ ತತ್ವರಾಜಕಾರಣದ ಕಡೆಗೇ ಚಲಿಸುತ್ತದೆ.

ಬಹುಪಾಲು ಕೇಶವಾಂಕಿತದ ದಾವೆ ವರಸೆಯ ಮುಂಡಿಗೆಗಳು ಕೂಡ ಇದೇ ರಾಜಕಾರಣವನ್ನು ಮಂಡಿಸುತ್ತವೆ. ಇವೆಲ್ಲವೂ ಶ್ರೀಹರಿಯು ತನ್ನ ದಶಾವತಾರಗಳಲ್ಲಿ ಮತ್ತು ಇತರ (ಪುರಾಣ, ಕಾವ್ಯ, ವೇದಾಂತಗಳ) ಲೀಲೆಗಳಲ್ಲಿ ಮಗಳಿಗೆ ಗಂಡನಾಗುವ, ಸೊಸೆಗೂ ಗಂಡನಾಗುವ, ಮಗಳಿಗೆ ಅಳಿಯನಾಗುವ, ಅಳಿಯನಿಗೂ ಅಳಿಯನಾಗುವ, ಅತ್ತೆಗೆ ಗಂಡನಾಗುವ, ಅತ್ತೆಯ ಮಗಳಿಗೂ ಗಂಡನಾಗುವ ಹೀಗೆ ಅಸಾಮಾನ್ಯ ಸಂಬಂಧಗಳನ್ನು ತನ್ನ ಹಲವು ಅವತಾರಗಳಲ್ಲಿ ಪಡೆಯುವ ವರಸೆಗಳನ್ನು ಗೇಲಿ ರೂಪದಲ್ಲಿ ನಿರೂಪಿಸುತ್ತವೆ. (ನೋಡಿ: ಅತ್ತಿಗೆ ಮೈದುನ ಬಾರೋ ಅತ್ತೆಯ ಮಗಳ ಗಂಡ ಅತ್ತಿಗೆ ಮೇಲತ್ತಿಗೆ ನಾದಿನಿ ಸೊಸೆಯ ಗಂಡ (275), ಮಗಗೆ ಮೈದುನನಾದ ಮಗಳಿಗೆ ಪತಿಯಾದ, ಮಗಳಿಗಳಿಯನಾದ ಅಳಿಯಗಳಿಯನಾದ (258) ಮೊದಲಾದ ಮುಂಡಿಗೆಗಳು–ಕನಕದಾಸರ ಕೀರ್ತನೆಗಳು ಭಾಗ–2 ಸಂ. ಸುಧಾಕರ) ಒಗಟಿನ ರೂಪದ ಮುಂಡಿಗೆಗಳಾದ ಇವು ಪರೋಕ್ಷವಾಗಿ ವೈಷ್ಣವ ಪಾಂಥಿಕರು ನೂರಾರು–ಸಾವಿರಾರು ವರ್ಷಗಳ ಉದ್ದಕ್ಕು ವೈವಿಧ್ಯಮಯವಾದ ತತ್ವಚಿಂತನೆ–ಬದುಕಿನ ಕ್ರಮಗಳನ್ನೆಲ್ಲ ಏಕರೂಪೀಕರಣಗೊಳಿಸುತ್ತಾ ವೈಷ್ಣವ ಪಾಂಥಿಕ ಚೌಕಟ್ಟಿನೊಳಕ್ಕೆ ಎತ್ತಿ ಹಾಕಿಕೊಂಡ ಇತಿಹಾಸವನ್ನೇ–ಪುರಾಣವನ್ನೇ ಹೇಳುತ್ತವೆ. ದಶಾವತಾರದ ಕಲ್ಪನೆಯೇ ಈ ಥರದ್ದು. ಕಾಲಕಾಲದ ಎಲ್ಲ ಭಿನ್ನತೆ–ಸಾರೂಪ್ಯಗಳನ್ನು ನುಂಗಿ ಜೀರ್ಣಿಸಿಕೊಂಡು ತನ್ನದನ್ನಾಗಿ ಮಾಡಿಕೊಳ್ಳುವ ವೈಷ್ಣವ ಪಾಂಥಿಕ ರಾಜಕಾರಣವನ್ನು ಒಳಗೊಂಡಿರುವಂಥದ್ದು. (ಕನಕನಾಯಕನ ಜೀವನ ಕಥನವೂ–ಬರಹಗಳು ಕೂಡ ಈ ರಾಜಕಾರಣಕ್ಕೆ ಗುರಿಯಾಗಿವೆ.)

## ಕುಲನಿರಾಕರಣೆ: ಚತುರ್‌ವರ್ಣ ಸ್ಥಾಪನೆ

ಸರ್ವೋತ್ತಮನಾದ ಹರಿಯೇ ಇಡೀ ಬ್ರಹ್ಮಾಂಡವನ್ನು ರಚಿಸಿದ್ದಾನೆ ಮತ್ತು ಲೋಕ ಲೋಕಗಳನ್ನು ಧರಿಸಿದ್ದಾನೆ. ಹಾಗಾಗಿ ಅವನ ದೇಹವೇ ಲೋಕ ಸಮಸ್ತದ ಜನ್ಮಸ್ಥಾನ ಎಂದು ಕೇಶವಾಂಕಿತ ರಚನೆಗಳು ಭಾವಿಸುತ್ತವೆ. ಆದುದರಿಂದಲೇ ಇವನ ತಲೆಯಲ್ಲಿ ಧ್ರುವಲೋಕ ಭುವನಾವಳಿಯೇ ಇದೆ. ಎದೆಯಲ್ಲಿ ನಕ್ಷತ್ರಗಳೂ, ಕಣ್ಣುಗಳಲ್ಲಿ ರವಿಶಶಿಗಳೂ, ಕಿವಿಯಲ್ಲಿ ಅಶ್ವಿನಿದೇವತೆಗಳೂ ಜನಿಸಿವೆ. ಹೊಟ್ಟೆಯಲ್ಲಿ ವಿಷ್ಣು ಶಿವ ಬ್ರಹ್ಮರು, ಲಿಂಗದಲ್ಲಿ ಮನ್ಮಥನೂ, ನಾಭಿಯಲ್ಲಿ ಭೂಮಿಯೂ ಹುಟ್ಟಿದೆ (36). ಹೀಗೆ ಹೇಳುವ ಈ ಕೀರ್ತನೆ ಮುಖದಲ್ಲಿ ಬ್ರಾಹ್ಮಣರೂ, ಭುಜದಲ್ಲಿ ಕ್ಷತ್ರಿಯರೂ, ಕೈಯಲ್ಲಿ ವೈಶ್ಯರೂ, ಪಾದದಲ್ಲಿ ಶೂದ್ರರೂ ಜನಿಸಿದ್ದಾರೆಂದು ಹೇಳುತ್ತದೆ. ಕುಲಕುಲ ಕುಲವೆಂದು ಬಡಿದಾಡದಿರಿ ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರಾ, ಆತ್ಮ ಯಾವ ಕುಲ (ಆತ್ಮ ಎನ್ನುವದೊಂದು ಇದ್ದರೆ) ಜೀವ ಯಾವ ಕುಲ ಎಂಬ ಕೀರ್ತನೆ ಮತ್ತು ವಿಶ್ವಲೋಕೇಶ ವಿಮಲೈಕಮೂರ್ತಿ ಎಂಬ ಕೀರ್ತನೆ ಎರಡನ್ನೂ ಒಬ್ಬನೇ ಬರೆದಿದ್ದಾನೆಂದರೆ ಅಚ್ಚರಿಯಲ್ಲ. ಕುಲವಿರೋಧವು ವರ್ಣಾಶ್ರಮ ವಿರೋಧವೂ ಆಗಿ ಬೆಳೆಯದಿರುವುದು ಮಾತ್ರ ಅಚ್ಚರಿ. (ಕುಲವಿರೋಧವನ್ನು ವರ್ಣಾಶ್ರಮವಿರೋಧ ಆಗದಂತೆ ಕನಕರ ರಚನೆಗಳ ಅನುಸಂಧಾನಕಾರರು ಕಾಲಕಾಲಕ್ಕೆ ಮಾಡುತ್ತ ಬಂದಿರುವ ಹುನ್ನಾರ ಈ ರಚನೆಗಳನ್ನು ನೋಡಿದರೆ ತಿಳಿಯುತ್ತದೆ)

ಯಾವುದಾದರೂ ಯುದ್ಧ ಆದಾಗ ದೇವತೆಗಳು ಆಕಾಶದಲ್ಲಿ ನೆರೆಯುವುದು; ವಿಜಯಿಗೆ ದೇವತೆಗಳು ಹೂಮಳೆ ಕರೆಯುವುದು; ಪವಾಡ ಪುರುಷರು ಸಂಕಷ್ಟದಲ್ಲಿದ್ದಾಗ ಅಶರೀರವಾಣಿ ಆಗುವುದು ಇವೆಲ್ಲವೂ ನಮ್ಮ ಕಾವ್ಯಗಳ ಸಾಮಾನ್ಯ ಕವಿಸಮಯ ಆಗಿರುವಂತೆ ಕೇಶವಾಂಕಿತ ರಚನೆಗಳಲ್ಲಿ ಭೂಸುರರು (ಭೂಮಿಯ ಮೇಲಿನ ದೇವತೆಗಳಾದ ಬ್ರಾಹ್ಮಣರು!) ಹರಸುವುದು ಮತ್ತು ಚತುರ್ವರ್ಣದ ಜನ ರಾಜಸಭೆಗಳಲ್ಲಿ ಉಪಸ್ಥಿತರಿರುವುದು ಸಾಮಾನ್ಯ ಕವಿಸಮಯಗಳಾಗಿವೆ. ಧರಾಮರ, ಭೂಸುರ ಎಂಬ ಪದ ಪ್ರಯೋಗವಂತೂ ಕೇಶವಾಂಕಿತ ರಚನೆಗಳಲ್ಲಿ ನಿರಂತರ ಎಗ್ಗಿಲ್ಲದೆ ಆಗಿದೆ. ಇದು ಒಂದು ರೀತಿ ಬ್ರಾಹ್ಮಣ್ಯದ 'ಮೇಲುತನ'ವನ್ನು ಆಂತರ್ಯದಲ್ಲಿ ಒಪ್ಪಿದ ಮನಸ್ಸಿನ ಪಾರಿಭಾಷಿಕ ಅಭಿವ್ಯಕ್ತಿ.

ಕುಲ ಕುಲವೆಂದು ಹೊಡೆದಾಡದಿರಿ, ಜಲವೆ ಸಕಲ ಕುಲಕ್ಕೆ ತಾಯಿ ಎಂದು ಹೇಳುವ ಕೀರ್ತನೆಯೆ ಹರಿಯೆ ಸರ್ವೋತ್ತಮ, ಹರಿಯೆ ಸರ್ವೇಶ್ವರ, ಎಲ್ಲವೂ ಹರಿಮಯ ಎಂದೇ ತೀರ್ಪು ನೀಡುತ್ತದೆ (202); ಹಾಗಾದರೆ ಹರಿಕುಲದ–ವೈಷ್ಣವರು ದೊಡ್ಡವರು ಎಂದು ನಾವು ಒಪ್ಪಬೇಕು ಎಂದಾಯಿತು. ಆತ್ಮ ಯಾವ ಕುಲ ಜೀವ ಯಾವ ಕುಲ ತತ್ವಗಳ ಕುಲ ಯಾವುದು, ಇಂದ್ರಿಯಗಳ ಕುಲ ಯಾವುದು ಎಂದು ಪ್ರಶ್ನೆ ಕೇಳುವ ಕೀರ್ತನೆಯೇ ಮೃಗದ ಮೈಯಲ್ಲಿ ಹುಟ್ಟಿದ ಕಸ್ತೂರಿಯನ್ನು ದ್ವಿಜರು ಪೂಸಿಕೊಳ್ಳಲಿಲ್ಲವೆ? ಹಸುವಿನೊಳು ಉತ್ಪತ್ತಿಯಾದ

ಕ್ಷೀರವನ್ನು ಭೂಸುರರು ಉಣಲಿಲ್ಲವೇ? ಎಂದು ಕೇಳುತ್ತದೆ. ಅಂದರೆ ಹಸುವಿನ ಮಾಂಸದಲ್ಲಿ ಹುಟ್ಟಿದ ಕ್ಷೀರ ಕೀಳು–ಭೂಸುರ ಮೇಲು ಎಂದಾಯಿತಲ್ಲ! ಸತ್ಯಸುಖಿವುಳ್ಳ ಜನರಿಗೆ ಕುಲವೇ ಇಲ್ಲ ಎಂದು ಹೇಳುವ ಕೀರ್ತನೆಯೇ ಭೂಸುರ–ದ್ವಿಜ ಎಂಬ ಪ್ರಯೋಗವನ್ನು ಶ್ರೇಷ್ಠ ಕುಲ ಎಂಬ ನೆಲೆಯಲ್ಲಿಯೇ ಪ್ರಯೋಗಿಸುತ್ತದೆ!

**ರಾಮಧಾನ್ಯದ ತಲೆ ಮೇಲೆ ಮಂತ್ರಾಕ್ಷತೆ : ವಿಚಾರದ ತಲೆ ಮೇಲೆ ಆಚಾರ**

ರಾಮಧಾನ್ಯ ಚರಿತೆ ಹೇಳಿಕೇಳಿ ಜಾತಿ ಅಸಮಾನತೆಯನ್ನು ಪ್ರತಿರೋಧಿಸುವ ರೂಪಕ ಕಾವ್ಯ. ರಾಗಿಯನ್ನು ರಾಮಧಾನ್ಯ ಎಂದು ನಾಮಕರಣ ಮಾಡುವ ಮೂಲಕ ಮತ್ತು ನೆಲ್ಲಿನ ಎದುರು ಗೆಲ್ಲಿಸುವ ಮೂಲಕ ತಳಸಮುದಾಯದ–ಶೂದ್ರ ಸಮುದಾಯದ ಮನ್ನಣೆಯನ್ನು ಈ ಕಾವ್ಯ ಎತ್ತಿ ಹಿಡಿಯುವುದಂತೂ ನಿಜ. ರಾಗಿ–ನೆಲ್ಲುಗಳನ್ನು ಶೂದ್ರ–ಬ್ರಾಹ್ಮಣ; ಬಡವ–ಬಲ್ಲಿದ ಎಂಬ ಸಮೀಕರಣದಿಂದ ನೋಡುವಾಗೆಲ್ಲ ಈ ಕಾವ್ಯದ ಆಳದಲ್ಲಿ ಶ್ರೇಷ್ಠತೆಯ ಕಲ್ಪನೆಗಳು ಹೇಗೆ ಬೇರುಬಿಟ್ಟಿವೆ ಎಂಬುದನ್ನು ಮರೆಯುವಂತಿಲ್ಲ. ಸ್ಥಾಪಿತ ಆಚಾರವನ್ನು ವಿಚಾರದ ಬಡಿಗೆಯಿಂದ ಒಡೆದು ಹೊಸ ಆಚಾರಗಳನ್ನು ಸ್ಥಾಪಿಸಬೇಕು ನಿಜ. ಆದರೆ ಮಾತಾಡುವ ವಿಚಾರವೇ ಬೇರೆ ಮಾಡುವ ಆಚಾರವೇ ಬೇರೆ ಎಂದಾದರೆ! ರಾಮಧಾನ್ಯ ಚರಿತೆಯಲ್ಲಿ ಬಹುಕಡೆ ಹಾಗೇ ಆಗಿದೆ. ಚತುವರ್ಣದ ನಿರೂಪಣೆ, ಭೂಸುರರು ಎಂದು ಬ್ರಾಹ್ಮಣರನ್ನು ಸಂಬೋಧಿಸುವ ನಿರೂಪಣೆ, 'ಮಂಗಳ' ಎಂಬ ಕಾರ್ಯಗಳಲ್ಲಿ ಮತ್ತು ನಿತ್ಯದ ಆಚಾರದಲ್ಲಿ ಮಂತ್ರಾಕ್ಷತೆ ಹಾಕುವ ಆಚಾರಗಳನ್ನು ಪವಿತ್ರ–ಶ್ರೇಷ್ಠ–ಪ್ರಶ್ನಾತೀತ ಆಚಾರಗಳೆಂದು ಕರೆಯುವ ನಿರೂಪಣೆಗಳೇ ಈ ಕಾವ್ಯದ ಉದ್ದಕ್ಕು ತುಂಬಿವೆ. ಈ ಸಂಗತಿ ಈ ಕಾವ್ಯಕ್ಕೆ ಮಾತ್ರ ಸೀಮಿತವಲ್ಲ; ಮೋಹನ ತರಂಗಿಣಿ–ಹರಿಭಕ್ತಿಸಾರ–ಕೀರ್ತನೆಗಳಲ್ಲೂ ಈ ರೀತಿಯ ನಿರೂಪಣೆಗಳಿವೆ.

ವ್ಯಾಜ್ಯ ಪರಿಹರಿಸಲು ನೆಲ್ಲು ರಾಗಿಗಳನ್ನು ಆರು ತಿಂಗಳು ಸೆರೆಗೆ ತಳ್ಳಿ ಎಂದು ಹೇಳಿದ ರಾಘವನು ಅರಮನೆಗೆ ಬರುತ್ತಾನೆ. ಮಾರನೆ ದಿನ ಬೆಳಗ್ಗೆ ಎದ್ದಕೂಡಲೆ ಆತ ಸೂರ್ಯನಿಗೆ ಅರ್ಘ್ಯವನ್ನು ಕೊಡುತ್ತಾನೆ. ಕೊಟ್ಟ ನಂತರ ಭೂಸುರರು ಅವನನ್ನು ಮಂತ್ರಾಕ್ಷತೆಗಳನ್ನು ಹಾಕಿ ಹರಸುತ್ತಾರೆ. (ಪದ್ಯ 61) ಮುಂದೆ ಶ್ರೀರಾಮನು ಭಾರದ್ವಾಜನ ಆಶ್ರಮಕ್ಕೆ ಬಂದ ಸುದ್ದಿಯನ್ನು ಆಂಜನೇಯನಿಂದ ತಿಳಿದ ಭರತ ಅಣ್ಣನನ್ನು ಸ್ವಾಗತಿಸಲು ಹೊರಡುತ್ತಾನೆ. (ಪದ್ಯ 85) ಹಾಗೆ ಹೊರಡುವ ಮುನ್ನ ಭೂಸುರವರರ ಮಂತ್ರಾಕ್ಷತೆ ಕೈಕೊಂಡು ಹೊರಡುತ್ತಾನೆ. ಮುಂದೆ ಶ್ರೀರಾಮನಿಗೆ ಅಯೋಧ್ಯೆಯಲ್ಲಿ ಪಟ್ಟಾಭಿಷೇಕ ಆಗುವಾಗಲು ಗುರು ವಶಿಷ್ಠರು ಭೂಸುರರ ಜೊತೆಯಲ್ಲಿ ಬಂದು ಮಂತ್ರಾಕ್ಷತೆ ಹಾಕಿ ಹರಸುತ್ತಾರೆ (ಪದ್ಯ–118) ಭೂಸುರರು, ಧರೆಯಮರರು, ಭೂಸುರವರರು ಎಂಬ ಪರಿಭಾಷೆಯ ಪ್ರಯೋಗ ಮತ್ತೆ ಮತ್ತೆ ನಮ್ಮ ಕಿವಿ ಮೇಲೆ ಬೀಳುತ್ತ

ನಮ್ಮನ್ನು ಅವರೆಲ್ಲ ಭೂಮಿಗಿಳಿದ 'ದೇವತೆ'ಗಳು ಎಂದು ನಂಬಲು ಒತ್ತಡ ಹೇರುತ್ತವೆ. (ದೇವತೆಗಳೂ ಕೂಡ ಮಾನವರ ಪ್ರತಿಬಿಂಬಗಳೇ; ಲಂಪಟತನ ಉಳ್ಳವರೇ ಎಂಬುದು ಬೇರೆ ಮಾತು.) ಯಾವ ತಾತ್ವಿಕತೆಯನ್ನು ನಾವು ಎಚ್ಚರದಲ್ಲಿ ಪ್ರತಿಪಾದಿಸುತ್ತೇವೊ ಅದಕ್ಕೆ ತದ್ವಿರುದ್ಧವಾದ ಸಂಗತಿಯನ್ನು ನಾವು ಬಳಸುವ ಪರಿಭಾಷೆ ಪ್ರತಿಪಾದಿಸುತ್ತಿದ್ದರೆ!

ಮುಂದೆ ಶ್ರೀರಾಮನ ಒಡ್ಡೋಲಗವೆ ನ್ಯಾಯಾಸ್ಥಾನವಾಗಿ ಪರಿವರ್ತನೆ ಆಗುತ್ತದೆ. ಹನುಮ ಹೋಗಿ ಗೌತಮನ ಮೂಲಕ ರಾಗಿ ನೆಲ್ಲುಗಳನ್ನು ಕರೆತರುತ್ತಾನೆ. ಆ ನ್ಯಾಯ ಸಭೆಯಲ್ಲಿ ನೆರೆದವರು ಯಾರು ಯಾರೆಂದರೆ ಅಮರ, ಭುಜಂಗಾಮರ, ಅಸುರ, ಕಿನ್ನರ, ಯಕ್ಷ, ರಾಕ್ಷಸ, ಶಶಿ, ರವಿ, ವಿದ್ಯಾಧರ, ಗುಹ್ಯಕ, ಜೋಯಿಸ ಮೊದಲಾದವರು ಇವರ ಜೊತೆಯಲ್ಲಿ ವಸುಧೆಯಮರರು, ಕ್ಷತ್ರಿಯರು, ವೈಶ್ಯರು ಮತ್ತು ಚತುರ್ಥರು (ಶೂದ್ರರು) ಕೂಡಾ ನೆರೆಯುತ್ತಾರೆ. ಅಂದರೆ ರಾಮನ ಸಭೆಗೆ ಯಾರು ಬಂದರೋ ಬಿಟ್ಟರೋ ರಾಮಧಾನ್ಯ ಚರಿತೆಯಲ್ಲಿ ಚತುರ್ವರ್ಣೀಯರೆಲ್ಲ ಬರುತ್ತಾರೆ.

ನಳಚರಿತೆಯಲ್ಲಿ ನಳನ ರಾಜ್ಯ ಸುಭಿಕ್ಷವಾಗಿತ್ತು ಎಂಬ ವರ್ಣನೆ ಬರುತ್ತದೆ. ಅವನ ರಾಜ್ಯ ಹೇಗೆ ಸುಭಿಕ್ಷವಾಗಿತ್ತೆಂದರೆ ಅಲ್ಲಿ ಪತಿಯರನ್ನು ಸತಿಯರು ವಂಚಿಸುತ್ತಿರಲಿಲ್ಲ. ಮಕ್ಕಳು ಪಿತೃಗಳ ನುಡಿಯನ್ನು ಮೀರುತ್ತಿರಲಿಲ್ಲ. ಎಲ್ಲ ಮತಿವಂತರೂ ವರ್ಣಾಶ್ರಮ ಧರ್ಮದ ಆಚಾರವನ್ನು ಪಾಲಿಸುತ್ತಿದ್ದರು. (17–4) ಹೀಗೆ ನಳನ ನಿಷಧಪುರ ಸುಭಿಕ್ಷವಾಗಿತ್ತು. ಅಂದರೆ ವರ್ಣಾಶ್ರಮ ಧರ್ಮವನ್ನು ಪಾಲಿಸುವುದು ಸುಭಿಕ್ಷತೆಯ ಸದಾಚಾರದ ಲಕ್ಷಣವೋ? ಮುಂದೆ ಋತುಪರ್ಣ ರಾಜನ ಅಯೋಧ್ಯಾಪುರವರ್ಣನೆ ಬರುತ್ತದೆ. ಅಲ್ಲಿ ಯಾರೆಲ್ಲ ಇದ್ದರು ಎಂದು ಹೇಳುವಾಗ ಅರಸುಗಳು, ಭೂಸುರರು, ಮಿಗೆ ವೈಶ್ಯರು, ಚತುರ್ಥರು, ಕರಿ ತುರಗ ರಥ ಪಾಯದಳ ಇದ್ದಂತೆ ಹೇಳಲಾಗಿದೆ. ಅಂದರೆ ಚತುರ್ವರ್ಣಗಳ ಉಪಸ್ಥಿತಿಯನ್ನು ನಗರ ವರ್ಣನೆಯ ಭಾಗವಾಗಿ ಹೇಳಲಾಗುತ್ತಿದೆ (27–6) ಹಾಗೆಯೇ ಆರಂಭದ ನಿಷಧಪುರ ವರ್ಣನೆಯಲ್ಲಿ (23–1) ಚತುರ್ವರ್ಣದ ಜನರ ಪ್ರಸ್ತಾಪ ಬರುತ್ತದೆ. ಹೀಗೆ ಯಾವುದೇ ಪಠ್ಯದಲ್ಲು ವರ್ಣಾಶ್ರಮಗಳ ಇರುವಿಕೆಯಿಂದ ಬಿಡುಗಡೆ ಇಲ್ಲ. ವರ್ಣಪದ್ಧತಿಯನ್ನೇ ಪ್ರತಿರೋಧಿಸದೆ ಒಪ್ಪುವ ಈ ಕಾವ್ಯ ಜಾತಿಮಾತ್ರವನ್ನು ಹೇಗೆ ಪ್ರತಿರೋಧಿಸಬಲ್ಲುದು?

ಒಂದು ಕಡೆ ರಾಗಿಯ ಮಾನ್ಯತೆಯನ್ನು ಪ್ರತಿಪಾದಿಸುವ ಈ ಪಠ್ಯ ಅಕ್ಷತೆ–ಮಂತ್ರಾಕ್ಷತೆಯನ್ನು ಹಾಕಿ ಹರಸುವುದನ್ನೆ ಒಂದು ನೀತಿ–ಆಚಾರ ಎಂಬಂತೆ ಹೇಳುತ್ತದೆ. ಇನ್ನೊಂದು ಕಡೆ ಕುಲನಿರಾಕರಣೆ–ಅಸಮಾನತೆಯ ನಿರಾಕರಣೆಯನ್ನು ಮಾಡುವ ಈ ಪಠ್ಯ ವಸುಧೆಯಮರರು, ಭೂಸುರರು ಎಂಬ ಪರಿಭಾಷೆಯನ್ನು ಮತ್ತೆ ಮತ್ತೆ ಬಳಸುತ್ತದೆ. ಹಾಗೆಯೇ ಚತುರ್ವರ್ಣವನ್ನು ಕನಿಷ್ಟ ಅಲಕ್ಷ್ಯ ಕೂಡ

ಮಾಡದೆ ಮತ್ತೆ ಮತ್ತೆ ಬೇರೆ ಬೇರೆ ಪದ್ಯ ಮತ್ತು ಪತ್ಯಗಳಲ್ಲಿ ನಿರೂಪಣೆ ಮಾಡುತ್ತದೆ! ಅಂತರ್ಯದಲ್ಲಿ ಲೇಖಕ ಸ್ಥಾಪಿತ ಶ್ರೇಷ್ಠತೆಯ ಕಲ್ಪನೆಗಳನ್ನು ಎಚ್ಚರದಿಂದ ಮೀರಲಾಗದೆ ಇರುವುದೆ ಇದಕ್ಕೆಲ್ಲ ಕಾರಣವೊ? ಅಸಮಾನತೆಯ ನಡುವೆಯೂ ಅತಿಹಿತದಲ್ಲಿ ಇರುವ ಸಮನ್ವಯ ತತ್ವದ ಪ್ರತಿಪಾದನೆಯೆ ಇದಕ್ಕೆಲ್ಲ ಕಾರಣವೊ? ಅಥವಾ ತಿರುನಾಮಧಾರಿಗಳು ಕೇಶವಾಂಕಿತ ರಚನೆಗಳಲ್ಲಿ ನಿರಂತರ ಕೈಯಾಡಿಸುತ್ತ ಬಂದಿದ್ದಾರೊ?

ವಿಚಿತ್ರವೆಂದರೆ ನಾರದ, ಕಪಿಲಮುನಿ, ಇಂದ್ರ ಇವರು ರಾಗಿಯನ್ನು ಶ್ರೇಷ್ಠವೆಂದು ಪ್ರಮಾಣಪತ್ರ ನೀಡುವವರು. ನ್ಯಾಯಾಸ್ಥಾನದಲ್ಲಿ ಕೊನೆಗೆ ಶ್ರೀರಾಮ ತನ್ನ ಹೆಸರನ್ನೆ ನಿನಗೆ ಇರಿಸಿದ್ದೇನೆ. ರಾಘವ (ರಾಗಿ) ಎಂಬ ಹೆಸರಿನಿಂದಲೆ ನೀನು ಪ್ರಸಿದ್ಧನಾಗು ಎಂದು ಹೇಳಿದಾಗ ನೆಲ್ಲು ತಲೆ ತಗ್ಗಿಸುತ್ತದೆ. ಆದರೆ ಮುಂದಿನ ಪದ್ಯದಲ್ಲಿಯೆ (137) ರಾಗಿಯನ್ನು ದೇವಾಸುರರೆಲ್ಲ ಕೊಂಡಾಡುತ್ತಾರೆ. ಆನಂತರ ಭೂಸುರರು (ಭೂಮಿಯ ಮೇಲಿನ ದೇವತೆಗಳಾದ ಬ್ರಾಹ್ಮಣರು!) ಮುತ್ತಿನ ಸೇಸೆ, ಮಂತ್ರಾಕ್ಷತೆಗಳನ್ನು ಹಾಕಿ ಉಪಚರಿಸುತ್ತಾರೆ. ಅಂದರೆ ಹರಸುತ್ತಾರೆ. ಅಕ್ಕಿ ಕಾಳನ್ನೆ ಹಾಕಿ ಬ್ರಾಹ್ಮಣರೆ ರಾಗಿಯನ್ನು ಆಶೀರ್ವದಿಸುವ ಈ ಪ್ರಸಂಗ ತುಂಬಾ ವ್ಯಂಗ್ಯವಾಗಿದೆ. ರಾಗಿಯು ಯಾವ ವರ್ಗವನ್ನು ಪ್ರತಿನಿಧಿಸುತ್ತದೋ ಅದನ್ನು ತಾನು ಶ್ರೇಷ್ಠ ಎಂದು ಬೀಗುವ ಯಾವ ವರ್ಗವಿದೆಯೋ ಆ ವರ್ಗವು ಹರಸಿ, ಆಶೀರ್ವದಿಸಿ ಮಾನ್ಯತೆ ನೀಡಬೇಕು. ಇದು ಈ ಪತ್ಯದ ವ್ಯಂಗ್ಯ. ಶ್ರೇಷ್ಠತೆ-ಕನಿಷ್ಠತೆ, ಮೇಲು-ಕೀಳಿನ ನಂಬಿಕೆಗಳು, ತಾರತಮ್ಯದ ಆಚರಣೆಗಳು ಹೇಗೆ ನಮ್ಮ ಮನಸ್ಸುಗಳಿಗೆ / ರಕ್ತಗಳಿಗೆ ಬೇರೂರಿವೆ ಎಂಬುದಕ್ಕೆ ಇದೊಂದು ನಿದರ್ಶನ. ಗುಣ ಮತ್ತು ಬಲ ಇವುಗಳಲ್ಲಿ ಅಭೇದ ಕಲ್ಪಿಸುವ ಈ ಕಾವ್ಯವು ರಾಗಿಯ ಬಲಗುಂದದ ತಾಳಿಕೆಯ ಗುಣಕ್ಕಾಗಿ ಅದನ್ನು ಪುರಸ್ಕರಿಸುತ್ತದೆ. ಅಂದರೆ ಕುಲದ ತಾರತಮ್ಯವನ್ನು ಬಲ ಮತ್ತು ಗುಣಗಳ ಮಾನ್ಯತೆಯ ಮೂಲಕ ಪ್ರಶ್ನಿಸಲು ಹೊರಟಿರುವ ಈ ಕಾವ್ಯವು ಸ್ಥಾಪಿತ ಅಸಮಾನ ನಂಬಿಕೆಗಳಿಂದ ಬಿಡುಗಡೆ ಪಡೆದಿದೆಯೇ? ಹೇಳುವ ತತ್ವವೆ ಬೇರೆ ಮಾಡುವ ಆಚಾರವೆ ಬೇರೆ ಎನ್ನುವುದಾದರೆ ನಮ್ಮ ಸಮಾಜದಲ್ಲಿ ಇಂದಿಗೂ ನುಡಿ ನಡೆಗಳ ನಡುವೆ ಇರುವ ದ್ವೈಕಾಟಮಿಯನ್ನೆ ಈ ಕಾವ್ಯವು ನಿರೂಪಿಸುತ್ತಿದೆಯೆ?

ಮೋಹನ ತರಂಗಿಣಿಯಲ್ಲಿ ಬರುವ ಬಾಣಾಸುರನ ಶಿವಪೂಜೆಯ ಪ್ರಸಂಗ ಬಹಳ ವೈವಿಧ್ಯಮಯವಾಗಿದೆ. ಇಲ್ಲಿ ಬಾಣಾಸುರ ಶಿವನಿಗೆ ಇಡುವ ನೈವೇದ್ಯದಲ್ಲಿ ಕಳವೆಯೋದನ ಸೂಪ, ತುಪ್ಪ, ಮೊಸರು, ಪತ್ರ, ಫಲ, ಶಾಕಸೀಕರಣೆ, ಸಾರು, ಹಲವಿಧದ ಪರಮಾನ್ನ ಇತ್ಯಾದಿಗಳನ್ನೆಲ್ಲ ಇಡುತ್ತಾನೆ. (7-20) ಅಂದರೆ ಈ ನೈವೇದ್ಯದಲ್ಲಿ ರಾಮಧಾನ್ಯ ಇಲ್ಲ. ಯಾಕೆಂದರೆ ಇದು ರಾಜ ನೈವೇದ್ಯದಲ್ಲಿ ಇರಲು ರಾಜಾನ್ನ ಅಲ್ಲ! ಅಂದರೆ ವಿಚಾರವೆ ಬೇರೆ ಆಚಾರವೆ ಬೇರೆ! (ಒಂದು ಕಡೆ ಇರುವ ತಾತ್ವಿಕತೆ ಇನ್ನೊಂದು ಕಡೆ ಇರಬೇಕಿಲ್ಲ ಎಂಬುದು ಬೇರೆ ಮಾತು)

ರಾಗಿನೆಲ್ಲುಗಳ ಜಗಳ ಮುಗಿದ ನಂತರ ರಾಮ ಮತ್ತು ಹನುಮರಿಗೆ ಒಂದು ಸಂಭಾಷಣೆ ನಡೆಯುತ್ತದೆ. (142–143) ಹನುಮ ಇಲ್ಲಿ ಬೇಸರದಿಂದ ರಾಗಿಗೆ ನೀವು ನಿಮ್ಮ ಹೆಸರನ್ನೆ ಇಟ್ಟಿರಿ. ಆದರೆ ನಾನು ನಿಮಗೆ ಬೇಡವಾದೆನೆ? ನಿಮ್ಮನ್ನು ಅಗಲಿ ನಾನು ಹೇಗಿರಲಿ? ಎನ್ನುತ್ತಾನೆ. ಆಗ ಶ್ರೀರಾಮ ನಿನ್ನ ಅಭಿದಾನ ನಿನಗೆ ಸರಿಯಾಗಿಯೇ ಇದೆ. ಅದೇ ಇರಲಿ ಎನ್ನುತ್ತಾನೆ. ಮುಂದೆ ನಿಮ್ಮನ್ನು ನಂಬಿ ಬಂದ ಸೇವಕರನ್ನು ಹೀಗೆ ಅಲಕ್ಷಿಸಿ ನೀವು ನಡೆಯಬಹುದೋ? ನಿಮ್ಮದು ಯಾವ ಗುಣ ಎಂದಾಗ ನಾವು ಜನನದಿ ಮುಂದು ಕಲಹದ ಠಾವಿನಲಿ ನಾವು ಮುಂದೆ ಇರುವವರಲ್ಲ ಎನ್ನುತ್ತಾನೆ. ಇಲ್ಲಿ ಹನುಮ ಮತ್ತು ರಾಮರ ಇರುವಿಕೆಯೇ ಅಸಮಾನತೆಯ ಇರುವಿಕೆ. ರಾಗಿ ನೆಲ್ಲಿನ ಸ್ಥಿತಿ ಕೂಡ ಹಾಗೆಯೇ ಯಾರೂ ಮೇಲು ಕೀಳೆಂದು ಜಗಳವಾಡಬಾರದು. ಅತಿಹಿತದಲ್ಲಿ ಇರಬೇಕು ದೇವರಿಗೆ ಪರಮಾನ್ನ ನೀ ಮನುಜಾವಳಿಗೆ ಪಕ್ವಾನ್ನಮೀತನು ನೀವು ಧರೆಯೊಳಗಿಬ್ಬರತಿಹಿತದಲಿ ನೀವಿಹುದು (149) ಎಂದು ರಾಮನೇ ಹೇಳುವಾಗ ದೇವರ ಅನ್ನ ಮತ್ತು ಮನುಷ್ಯರ ಅನ್ನ; ಸಿರಿವಂತರ ಅನ್ನ ಮತ್ತು ದರಿದ್ರರ ಅನ್ನ ಎಂಬ ಭೇದಭಾವವೇ ಎದ್ದು ಕಾಣುತ್ತದೆ. ಭೇದಭಾವದಲ್ಲಿಯೆ ಅತಿಹಿತದಲ್ಲಿ ಇರುವುದು ಈ ಕಾವ್ಯದ ಧರ್ಮ.

**ವಾಯುಜೀವೋತ್ತಮ, ಮುಖ್ಯ ಪ್ರಾಣ ಹನುಮ (ಗರುಡ ಪದ್ಧತಿಯ ಪ್ರತಿರೂಪ)**

ಪುರಾಣದ ಆಕೃತಿಗಳನ್ನು ಒಪ್ಪಿಕೊಂಡಾಗ ಅವುಗಳು ಧರಿಸಿದ ಮೌಲ್ಯರಾಜಕಾರಣಗಳನ್ನು ನಾವು ಅರಿವಿಲ್ಲದೆ ಒಪ್ಪಿ ಪ್ರಸಾರ ಮಾಡುತ್ತ ಇರುತ್ತೇವೆ. ರಾಮ ಹನುಮರ ಸಂಬಂಧದ ಸಂಗತಿ ನಮ್ಮ ಮನಸ್ಸಿನಲ್ಲಿ ಅಸೀಮ ಭಕ್ತ ಮತ್ತು ದೈವ ಸಂಬಂಧವನ್ನು ಮಾತ್ರ ಒಪ್ಪಿಸುತ್ತದೊ ಅಥವಾ ಜೊತೆಗೆ ಅದು ಅಸೀಮ ಜೀತಪದ್ಧತಿಯನ್ನೂ ಬಿತ್ತುತ್ತದೊ? ನಮ್ಮಲ್ಲಿ 'ಅಲ್ಪ ದೊರೆಗಳ' ಜೀತಗಾರರ ಪಡೆಯನ್ನು ಉತ್ಪಾದಿಸಲು ಪ್ರತೀಕ ಆಗಿ ಇವನು ಬಳಕೆ ಆಗಿರುವುದೆ ಹೆಚ್ಚು. ಹಳೆಯ ಕಾಲದಲ್ಲಿ ರಾಜರಿಗೆ ಇದ್ದ ಗರುಡ ಪದ್ಧತಿಯಲ್ಲು ಹೀಗೆಯೆ ಅಸೀಮ ಗುಲಾಮ ನಡವಳಿಕೆಯನ್ನೆ ಹೇರಲಾಗಿತ್ತು. ಹನುಮ ಕೂಡ ಈ ರೀತಿಯ ಗರುಡ ಪದ್ಧತಿಯ ಪ್ರತೀಕವೆ ಆಗಿದ್ದಾನೆ.

ಲಕ್ಷ್ಮಿಯ ಪಾದ ಒತ್ತುವ ಚಿತ್ರವನ್ನು ಸಾವಿರಾರು ವರ್ಷಗಳಿಂದಲು ನಾವು ಪೂಜಿಸುತ್ತ ಬಂದಿದ್ದೇವೆ. ಸಮಾಜದಲ್ಲಿ ಗಂಡನನ್ನು ಹೆಂಡತಿ ಅಧೀನಳಾಗಿ ಸೇವಿಸಬೇಕು ಎಂಬ ಮೌಲ್ಯವನ್ನು ದೈವದ ಹೆಸರಿನಲ್ಲಿ ಬಿತ್ತುವುದಕ್ಕೆ ಗಂಡಸರು ಇದನ್ನು ನಿತ್ಯ ಬಳಸುತ್ತ ಬಂದಿದ್ದಾರೆ. ಹಾಗೆಯೆ ರಾಮ ಮತ್ತು ಹನುಮ ಸಂಬಂಧವನ್ನು ಆಳು ಒಡೆಯ ಕಲ್ಪನೆಯನ್ನು ಸಹಜವೆಂದು ಮಾನ್ಯ ಮಾಡುವ ರಾಜಕಾರಣಕ್ಕೆ ವಿಷ್ಣುಭಕ್ತ ಮೇಲ್ವರ್ಗ ಬಳಸುತ್ತ ಬಂದಿದೆ. ಇಂದಿಗೂ ನಮ್ಮ ಹಳ್ಳಿಗಳ ಅನೇಕರ ಮನೆಯಲ್ಲಿ ರಾಮ, ಸೀತೆ ಮತ್ತು ಲಕ್ಷ್ಮಣರ ಜೊತೆ ಮಂಡಿಯೂರಿ

ಕುಳಿತ ಹನುಮನ ಪಟ ಪೂಜ್ಯಾರ್ಹ ಪಟವಾಗಿ ಬಳಕೆ ಆಗುತ್ತಿದೆ. (ಇಂಥದ್ದೊಂದು ಪಟ ಬಹು ಕಾಲ ನಮ್ಮ ಮನೆಯಲ್ಲು ಇತ್ತು) ಊಳಿಗಮಾನ್ಯ ಮತ್ತು ಪುರೋಹಿತಶಾಹಿ ವ್ಯವಸ್ಥೆ ಇಂತಹ ದೈವಪ್ರತೀಕಗಳನ್ನು ಬಹಳ ಚೆನ್ನಾಗಿ ಪೋಷಿಸುತ್ತದೆ ಮತ್ತು ಬಳಸಿಕೊಳ್ಳುತ್ತದೆ. ಪ್ರತಿ ಊರುಗಳಲ್ಲು ರಾಮ ಮತ್ತು ಹನುಮರ ಗುಡಿಗಳು ಇದ್ದೇ ಇವೆ. ಇದರಿಂದ ಹನುಮ ದೊಡ್ಡ ದೇವರಾದನೋ ಇಲ್ಲವೋ ಕೆಲವರು ಮಾತ್ರ ತಮ್ಮ ಬಂಟರನ್ನು ತಯಾರು ಮಾಡಿದರು ಎಂಬುದು ನಿರ್ವಿವಾದ. ಹನುಮ ಹಿಂದಿನಿಂದಲು ನಮ್ಮಲ್ಲಿ ಗರಡಿ ಆಳುಗಳ ಗುರು ಮತ್ತು ದೈವ. ಆದರೆ ಆತ ಉತ್ಪಾದಿಸುವುದು ಆಳುಗಳನ್ನು, ಸ್ವತಂತ್ರರನ್ನಲ್ಲ. ಆಶ್ಚರ್ಯವೆಂದರೆ ಕೇಶವಾಂಕಿತ ರಚನೆಗಳಲ್ಲಿ ಹನುಮನನ್ನು ವೈಭವಿಸುವ ರಚನೆಗಳು ಹಲವಾರಿವೆ. (ಕೀರ್ತನೆ 40 ರಿಂದ 50)

ಹನುಮನನ್ನು ಕೇಶವಾಂಕಿತ ರಚನೆಗಳು ಮುಖ್ಯ ಪ್ರಾಣ ಎಂದು ಕರೆಯುತ್ತವೆ. (ಮಿಕ್ಕವರೆಲ್ಲ ಅಮುಖ್ಯರು) ದೈವ ಮಾನವ ಭಕ್ತಿ ಸಂಬಂಧದ ಪ್ರತೀಕ ಆಗಿ ರಾಮ ಹನುಮ ಸಂಬಂಧವನ್ನು ಕೀರ್ತನೆಗಳಲ್ಲಿ ಹೇಳುವುದಕ್ಕಿಂತ ಮಧ್ವನನ್ನು ಅಟ್ಟಕ್ಕೇರಿಸಲು ಹನುಮ ಪ್ರತೀಕವನ್ನು ಬಳಸಲಾಗಿದೆ. ಒಂದು ಕಡೆ ಹನುಮನನ್ನು ಬೌದ್ಧ, ಚಾರ್ವಾಕ ಮತಗಳನ್ನು ಸೋಲಿಸಿ ಮಧ್ವಶಾಸ್ತ್ರವನ್ನು 'ಸಜ್ಜನ'ರಿಗೆ ತಿಳಿಸಿದವನು (45) ಎಂದರೆ ಇನ್ನೊಂದೆಡೆ ಇವನನ್ನು ಭೂಸುರ ಶ್ರೇಷ್ಠ (47) ಎನ್ನಲಾಗಿದೆ. ತ್ರೇತಾಯುಗದ ಹನುಮನೆ ದ್ವಾಪರದಲ್ಲಿ ಭೀಮನೂ ಕಲಿಯುಗದಲ್ಲಿ ಮಧ್ವನೂ ಆಗಿ (42, 46) ಜನಿಸಿದನಂತೆ. ಈ ಅವತಾರ ಕಲ್ಪನೆಯನ್ನು ನಾವು ನಂಬಬೇಕು! ನಂಬಿದರೆ ಮಧ್ವತತ್ವ ದೇವಮುಖಿ ಆಗುತ್ತದೆ. ಪ್ರಶ್ನಾತೀತ ಆಗುತ್ತದೆ. ಈ ದೈವಾಂಶ, ಅವತಾರ ಕಲ್ಪನೆಯೆಲ್ಲ ತಮಗೆ ಬೇಕಾದವರ ತತ್ವಕ್ಕೆ ಜನರ ಪ್ರಶ್ನಾತೀತ ಒಪ್ಪಿಗೆಯನ್ನು ಉತ್ಪಾದಿಸುವ ರಾಜಕಾರಣ ಅಲ್ಲದೆ ಬೇರೆಯಲ್ಲ.

**ಕಲಿಪುರುಷನ ಕೋಲಾಹಲ**

ನಳಚರಿತೆ ಕಥನವು ತನ್ನ ಒಡಲಲ್ಲಿ ಹಲವು ಧ್ವನಿಛಾಯೆಗಳನ್ನು ಹೊಂದಿದ್ದರೂ ಇಲ್ಲಿ ವಿಧಿ ಕರ್ಮಫಲಗಳೇ ಮೇಲುಗೈ ಸಾಧಿಸಿವೆ. ಕಲಿಪುರುಷನ ಕೋಲಾಹಲವೇ ಮೇಲುಗೈ ಸಾಧಿಸಿದೆ. ಇಲ್ಲಿ ನಳ ಜೂಜಾಡುವುದೇ ಕಲಿಪುರುಷನ ಸಂಚಿನ ಭಾಗವಾಗಿ; ಪುಷ್ಕರ ಜೂಜಿಗೆ ನಳನನ್ನು ಕರೆಯುವುದೇ ಕಲಿಪುರುಷನ ಪ್ರೇರಣೆಯಿಂದ! ನಳ ಎಲ್ಲವನ್ನೂ ಸೋತು ಹೆಂಡತಿ ಸಮೇತ ಕಾಡಿಗೆ ಬಂದಾಗ ದಮಯಂತಿ 'ಮರುಗಲಿನ್ನೇಕರಸ ಬಿಡು, ವಿಧಿ ಬರೆದ ಬರೆಹವ ತಪ್ಪಿಸಲು ಹರಿಹರ ವಿರಿಂಚಾದಿಗಳಿಗಳವೇ? ನಮ್ಮ ಪಾಡೇನು' ಎನ್ನುತ್ತಾಳೆ. ಅಂದರೆ ನಳನದೇನೂ ಇಲ್ಲಿ ತಪ್ಪಿಲ್ಲ! ವ್ಯಕ್ತಿಗಿಂತ ವಿಧಿಯೇ ಇಲ್ಲಿ ಮುಖ್ಯ. ಕಥೆಯ ಕೊನೆಯಲ್ಲು ನಳ ರಾಜ್ಯವನ್ನು ಮರುಪಡೆದಾಗ ಕಲಿಪುರುಷನ ಕೈವಾಡದಿಂದ ಇದೆಲ್ಲ ಆಯಿತೆಂದು ಸೋತ ಪುಷ್ಕರನನ್ನು ಮನ್ನಿಸಿ ಉಡುಗೊರೆಯಿತ್ತು ಸಾಮಂತನಾಗಿ ರಾಜ್ಯವನ್ನು

ಆಳು ಎಂದು ಹೇಳುತ್ತಾನೆ! ಅಂದರೆ ಈ ಪತ್ಯ ಪ್ರತಿಪಾದಿಸುತ್ತಿರುವುದು ಯಾವ ಮೌಲ್ಯಗಳನ್ನು? ಒಂದು ಕಡೆ ಪೂರ್ವಜನ್ಮದ ಕರ್ಮಫಲ! ಇನ್ನೊಂದು ಕಡೆ ಕಲಿಪುರುಷನ ಕೋಲಾಹಲ! (ಇತ್ತೀಚೆಗೆ ನಮ್ಮ ಕಡೆಯ ಹಳ್ಳಿಗಳಲ್ಲಿ ನಳಕತೆ ಶನಿಪ್ರಭಾವದ ಕತೆಯಾಗಿ ಬದಲಾಗಿದೆ)

ಆರನೆ ಸಂಧಿಯಲ್ಲಿ ನಳನು ಕಾಳ್ಗಿಚ್ಚಿನಿಂದ ಸರ್ಪವನ್ನು ರಕ್ಷಿಸಿದಾಗ; ಅದು ಕಚ್ಚಿ ಕುರೂಪವಾಗುತ್ತಾನೆ. ಹಾವು ಕಚ್ಚಿದಾಗ ಸಾಯದೆ ಕುರೂಪವಾಗುವುದು ಒಂದು ಕವಿಸಮಯವೇ ಸರಿ. ಇಲ್ಲಿ ನಾಲ್ಕಾರು ಬಾರಿ 6ನೇ ಸಂಧಿ 12 ರಿಂದ 16ನೇ ಪದ್ಯದವರೆಗೆ ಪುರಾಕೃತ ಕರ್ಮ, ಕರ್ಮಫಲಗಳ ಪ್ರಯೋಗ ಇದೆ. ಪೂರ್ವಜನ್ಮದ ಕರ್ಮವೇ ನಳನಿಂದ ಏನೆಲ್ಲವನ್ನೂ ಮಾಡಿಸುತ್ತದೆ! ಅವನ ತಪ್ಪುಗಳಿಗೆ ವೈಯಕ್ತಿಕವಾಗಿ ಆಗ ಅವನು ಹೊಣೆಯೇ ಅಲ್ಲ! ದಮಯಂತಿಯ ವರ್ಣನೆ ಮಾಡುವಾಗ ಆಕೆಯ ವಿದ್ಯೆಯಾಗಲಿ, ಗುಣಗಳಾಗಲಿ ಲೆಕ್ಕಕ್ಕೆ ಬರುವುದಿಲ್ಲ. ಆಕೆಯ ಸೌಂದರ್ಯದಿಂದಲೇ–ದೇಹಾಕಾರದಿಂದಲೇ ಆಕೆ ಶ್ರೇಷ್ಠಳು. ಹಾಗೆಯೇ ನಳನ ಕುರೂಪ ಸಂದರ್ಭದಲ್ಲಿ ಋತುಪರ್ಣನಿಗೆ ತನ್ನನ್ನು ತಾನು ಪರಿಚಯಿಸಿಕೊಳ್ಳುವಾಗ ನಳನು ನಾನು ಕುರೂಪಿ ಆಗಿದ್ದೇನೆ; ಆದರೆ ಅಷ್ಟು ಮಾತ್ರಕ್ಕೆ ನನ್ನನ್ನು ನೀಚವ್ಯಕ್ತಿ ಅಥವಾ ಕಳಪೆ ವ್ಯಕ್ತಿ ಎಂದು ಭಾವಿಸಬೇಡಿ ಎನ್ನುತ್ತಾನೆ. ದೇಹದ ರೂಪ–ಆಕಾರಕ್ಕು ವ್ಯಕ್ತಿತ್ವದ ಉನ್ನತಿಕೆ, ಕುಲದ ಮೇಲುತನಕ್ಕು ಸಂಬಂಧ ಇದೆ ಎಂಬ ಇಂಗಿತ ಇಲ್ಲಿದೆ. ದೇಹದ ರೂಪ ಮತ್ತು ಸೌಂದರ್ಯದ ಶ್ರೇಷ್ಠತೆ ಮತ್ತು ಅದನ್ನು ದಾಟಿದ ವ್ಯಕ್ತಿತ್ವ–ಗುಣವಿಶೇಷಗಳ ಸಂಘರ್ಷ ನಳಚರಿತ್ರೆಯ ಆಳದಲ್ಲಿ ಇದೆ. ಆದರೆ ಕಾವ್ಯದ ನಿರೂಪಣೆಯಲ್ಲಿ ಇದಕ್ಕೆ ಹೆಚ್ಚು ಪ್ರಾಶಸ್ತ್ಯ ಇಲ್ಲ. ಕಲಿಪುರುಷನ ಅವಕೃಪೆ ಇವನ್ನೆಲ್ಲ ನುಂಗಿಹಾಕಿದೆ. ರಾಮಧಾನ್ಯದ ಕಾವ್ಯದಂತೆಯೆ ಕುರೂಪ ಮತ್ತು ಕೀಳುತನ ಊಳಿಗ ಮತ್ತು ಕೀಳುತನ ಅಥವಾ ವೃತ್ತಿ ಮತ್ತು ಅದಕ್ಕಂಟಿದ ಕೀಳುತನಗಳನ್ನು ಪ್ರತಿರೋಧಿಸುವ ಕಾವ್ಯ ಇದು. ಇಲ್ಲಿನ ಬಾಹುಕನ ಪಾತ್ರದಲ್ಲಿ ಇದು ಎದ್ದು ಕಾಣುತ್ತದೆ. ಆದರೆ ಇದಕ್ಕೆ ಇಲ್ಲಿ ಅಷ್ಟಾಗಿ ಪ್ರಾಶಸ್ತ್ಯ ಸಿಕ್ಕಿಲ್ಲ.

ಋತುಪರ್ಣನ ಸಾರಥಿಯಾದ ನಳನು ಎರಡನೆ ಬಾರಿಗೆ ದಮಯಂತಿಯ ಸ್ವಯಂವರಕ್ಕೆ ಹೋಗುವಾಗ ದಾರಿಯಲ್ಲಿ ತಾಳೆಯ ಮರದ ಎಲೆ ಮತ್ತು ಹಣ್ಣುಗಳನ್ನು ದೂರದಿಂದಲೆ ನೋಡಿ ಋತುಪರ್ಣ ಅವುಗಳ ಲೆಕ್ಕ ಹೇಳುತ್ತಾನೆ. ನಳ ಈ ವೃಕ್ಷವಿದ್ಯೆಯನ್ನು ಅವನಿಂದ ಕಲಿತುಕೊಳ್ಳುತ್ತಾನೆ. ಹಾಗೆಯೇ ತನಗೆ ಗೊತ್ತಿರುವ ಅಶ್ವವಿದ್ಯೆಯನ್ನು ಅವನಿಗೆ ಕಲಿಸಿಕೊಡುತ್ತಾನೆ. ಋತುಪರ್ಣನಿಂದ ವೃಕ್ಷವಿದ್ಯೆ ಕಲಿಯುವ, ಸರ್ಪವನ್ನು ಕಾಳ್ಗಿಚ್ಚಿನಿಂದ ಪಾರುಮಾಡಿ ಅದರಿಂದ ತನ್ನ ರೂಪವನ್ನೇ ಬದಲಿಸಿಕೊಳ್ಳುವ ವಿದ್ಯೆಯನ್ನು ಕಲಿಯುವ, ಇಂದ್ರ–ಯಮ–ವಾಯುಗಳಿಂದ ಸ್ವಯಂವರ ಸಮಯದಲ್ಲಿ ಮಾಯವಾಗುವ ವರ/ವಿದ್ಯೆಯನ್ನು ಪಡೆಯುವ, ಅಲ್ಲದೆ ಪಾಕಶಾಕ ವಿದ್ಯೆಯನ್ನು ಪಡೆಯುವ ಹೀಗೆ ನಳನ ಬದುಕೇ ಒಂದು

ನಾಡು ಮತ್ತು ಕಾಡಿನ ಅನುಭವಯಾನ. ಇಂತಹ ಅನುಭವಯಾನವನ್ನು ಕಾಲಾನಂತರದಲ್ಲಿ ಕಲಿಪುರುಷನ ಕೋಲಾಹಲ ಎಂಬಂತೆ ನಿರೂಪಿಸಲಾಗಿದೆ.

**ಪಾತಿವ್ರತ್ಯ-ಲೈಂಗಿಕ ನಿಷ್ಠೆಯ ತತ್ವ:**

ರಾಜ ಪ್ರಭುತ್ವವನ್ನು ಅದರ ಅಪರಾಧಿ ವರ್ತನೆಯಿಂದ ಮುಕ್ತಗೊಳಿಸುವ ವಿಧಿ-ಕಲಿಪುರುಷರ ಕೋಲಾಹಲಗಳನ್ನು ಒಳಸೇರಿಸುವ ಮೂಲಕ ಪ್ರಭುತ್ವವನ್ನು ಓಲೈಸುವ; ಹೆಣ್ಣಿನ ಪಾತಿವ್ರತ್ಯಕ್ಕೆ, ಲೈಂಗಿಕ ನಿಷ್ಠೆಗೆ ಹೆಚ್ಚು ಒತ್ತು ಕೊಡುವ ಮೂಲಕ ಪುರುಷವರ್ಗವನ್ನು ಓಲೈಸುವ ಕೆಲಸಕ್ಕೆ ನಳಚರಿತ್ರೆಯನ್ನು ಬಳಸಲಾಗಿದೆ. 'ನಡೆಯುತೆಡಹಿದ ಪಟ್ಟದಾನೆಯ ಪಿಡಿದು ಕೊಲ್ಲುವರುಂಟೆ?' (58-8) ಎಂಬ ಮಾತು ಈ ಕಾವ್ಯದಲ್ಲಿ ಬರುತ್ತದೆ. ಅಂದರೆ ನಳ ನಡೆಯುವಾಗ ಎಡವಿದ್ದಾನೆ ಅಷ್ಟೆ. ಅದಕ್ಕೂ ಅವನೇನೂ ನೇರವಾಗಿ ಹೊಣೆ ಅಲ್ಲ! ಜೂಜಾಡಿ ರಾಜ್ಯ-ಕೋಶ ಸೋತು, ಕಾಡಿಗೆ ಬಂದು, ಹೆಂಡತಿಯನ್ನು ತೊರೆದು, ಊಳಿಗಕ್ಕೆ ನಿಲ್ಲುವ ಕ್ಷತ್ರಿಯ ಪುರುಷನೊಬ್ಬನ ಬೇಜವಾಬ್ದಾರಿತನವನ್ನು ರಕ್ತಸಂಬಂಧವು ಹೇಗೆ ಮತ್ತೆ ಕ್ಷತ್ರಿಯಾಧಿಕಾರಕ್ಕೆ ತರುತ್ತದೆ ಎಂಬ ವಿಚಾರ ಇಲ್ಲಿದೆ. ಹಾಗೆಯೇ ಸ್ವಯಂವರ, ಮರುಸ್ವಯಂವರಗಳ ಮೂಲಕ ಪ್ರೇಮ-ದಾಂಪತ್ಯನಿಷ್ಠೆಗಳನ್ನು ಇಲ್ಲಿ ಹೇಳಲಾಗಿದೆ. ಆದರೆ ಇದು ಆನಂತರದಲ್ಲಿ ಸತಿನಿಷ್ಠೆ, ಪಾತಿವ್ರತ್ಯ, ವಿಧಿಲಿಖಿತ, ಪೂರ್ವಜನ್ಮದ ಕರ್ಮಫಲ ಇಂತಹ ಮೌಲ್ಯಗಳ ಪ್ರತಿಪಾದನೆಯಾಗಿ ಬದಲಾಗಿದೆ. ರಾಮಧಾನ್ಯಚರಿತೆಯನ್ನು ಕಲ್ಪಿಸಬಲ್ಲ ಪ್ರತಿಭೆ ಹೀಗೆ ರೂಪಾಂತರಗೊಂಡ ಮತ್ತು ಸ್ಥಾಪಿತ ಸಾಮಾಜಿಕ ಮೌಲ್ಯಗಳಿಗಾಗಿ ದುಡಿಯುವ ಕಥನವನ್ನು ಜನಪದದಿಂದ ಎತ್ತಿ ಯಥಾವತ್ ನಿರೂಪಿಸಿತೇ ಎಂದು ಅಚ್ಚರಿಯಾಗುತ್ತದೆ.

'ಜನನುತ ಕೇಳಾದಿಯಲಿ ಯೌವನವ ನಿನಗೊಪ್ಪಿಸಿದೆನಲ್ಲದೆ ತನುಮನ ವಾಕ್ ಕಾಯ ಕರ್ಮಂಗಳಲಿ ತಾನೆರಡ ನಿನಗೆ ನೆನೆದವಳಲ್ಲ ನೀನೇ ನನಗೆ ಗತಿ, ಜನಪ ರಕ್ಷಿಸು, ಕೈಪಿಡಿದು ಸಲಹು' (61-8) ಎಂದು ಪುನರ್ ಸಮಾಗಮದ ಸಂದರ್ಭದಲ್ಲಿ ದಮಯಂತಿ ನಳನನ್ನು ಪ್ರಾರ್ಥಿಸುತ್ತಾಳೆ. ಅವನನ್ನು ನಿಜವಾಗಿ ರಕ್ಷಿಸಿ ಪಡೆದವಳು ಈಕೆಯೆ. ಇವಳು ಮನಸ್ಸು ಮಾಡಿರದೆ ಇದ್ದರೆ ಇವರ ಸಮಾಗಮ ಆಗುತ್ತಲೇ ಇರಲಿಲ್ಲ. ಆದರೂ ನನ್ನನ್ನು ಕೈಹಿಡಿದು ಸಲಹು, ರಕ್ಷಿಸು ಎಂದು ಈಕೆಯೇ ಕೇಳುತ್ತಾಳೆ. ಪುರುಷರಿಗೆ ರಕ್ತಗತವಾದ ಸ್ವಭಾವದಂತೆ ನಳ ಆಕೆಯನ್ನು ಸಂಶಯಿಸುತ್ತಾನೆ. ಆಗ ವಾಯುವು ಮೇಘಮುಖದಿಂದ ಆಕೆ ಲೋಕಪಾವನೆ ಸಂಶಯಪಡಬೇಡ ಎಂದು ಹೇಳುತ್ತದೆ. ಆಗ ನಳ ಆಕೆಯ ಕೈಹಿಡಿಯುತ್ತಾನೆ. ಅಂದರೆ ಪಾತಿವ್ರತ್ಯವನ್ನು ಸಾಬೀತು ಮಾಡದೆ ಹೆಣ್ಣು ಸ್ವೀಕಾರಯೋಗ್ಯಳಲ್ಲ!

ದಮಯಂತಿಯು ಕಾಡಿನಲ್ಲಿ ಏಕಾಕಿಯಾಗಿದ್ದಾಗ ಆಕೆಯ ಪಾತಿವ್ರತ್ಯ ಮಹಿಮೆಯ ಕಾರಣಕ್ಕೆ ಭೂತ ಪ್ರೇತಾದಿಗಳು, ಹುಲಿ ಸಿಂಹಾದಿಗಳು ಅವಳ ಹತ್ತಿರ

ಸುಳಿಯಲಿಲ್ಲವಂತೆ! (33–5) ಆದರೆ ಅದೇ ಸತಿಯ ಪಾತಿವ್ರತ್ಯ ಪರೀಕ್ಷೆಗೆ ಸರ್ಪ ಅವಳನ್ನು ಹಿಡಿದಾಗ ಶಬರನೊಬ್ಬ ಬಂದು ಅದನ್ನು ಕೊಂದು ಆಕೆಯನ್ನು ಬಿಡಿಸುತ್ತಾನೆ. ಆಮೇಲೆ ಆತ ನೀನು ನನಗೆ ಸತಿಯಾಗು ಎಂದಾಗ ನೀನು ನನ್ನನ್ನು ಕಾಪಾಡಿದ ತಂದೆ. ತಂದೆ ಸಮಾನನಾದ ನಿನ್ನನ್ನು ಹೇಗೆ ವಿವಾಹವಾಗಲಿ ಎಂದು ಹೇಳಿ ಆಕೆ ಅವನನ್ನು ಶಪಿಸುವೆನೆಂದು ಹೆದರಿಸಿ ಕಳಿಸುತ್ತಾಳೆ. (31–5) ಇಲ್ಲೂ ಆಕೆಯ ಪಾತಿವ್ರತ್ಯ ಸಾಬೀತಾಗುತ್ತದೆ. ಹೆಣ್ಣು–ಹೆಂಡತಿಯ ಪಾತ್ರ ಇರುವುದೇ ಪರಿವ್ರತಾಧರ್ಮ ಪಾಲಿಸಲು. ಆಕೆ ವೈಷ್ಣವ ಧರ್ಮ–ಶೈವಧರ್ಮ ಇತ್ಯಾದಿ ಧರ್ಮಗಳನ್ನಲ್ಲ. ಪತಿವ್ರತಾಧರ್ಮವನ್ನು ಪಾಲಿಸಬೇಕು. ಅಂತಹ ಧರ್ಮಿಯಾಗಿ ಇಲ್ಲಿ ದಮಯಂತಿಯನ್ನು ಚಿತ್ರಿಸಲಾಗಿದೆ.

ಅಶ್ವವಿದ್ಯೆ, ಗಜವಿದ್ಯೆ, ಪಾಕವಿದ್ಯೆಗಳೆಲ್ಲ ರಾಜವಿದ್ಯೆಗಳೇನಲ್ಲ. ಇವು ಮೊದಲಿಗೆ ಪಶುಪಾಲಕ ಸಂಸ್ಕೃತಿಯಲ್ಲೆ ಇದ್ದ ವಿದ್ಯೆಗಳು. ಆನಂತರ ಇವು ರಾಜಪರಿವಾರ–ಅರಮನೆಗಳನ್ನೂ ಪ್ರವೇಶಿಸಿವೆ. ಹಾಗೆಂದ ಮಾತ್ರಕ್ಕೆ ತಳಸಮುದಾಯದಿಂದ ಇವು ದೂರವಾದುವು ಎನ್ನಲು ಬರುವುದಿಲ್ಲ. ಇವು ವೃತ್ತಿಗಳಾಗಿ ಬೆಳೆದುವೇ ವಿನಾ ಕ್ಷತ್ರಿಯರ ಸ್ವತ್ತುಗಳಾಗಿ ಏನೂ ಮಾರ್ಪಾಡಾಗಲಿಲ್ಲ. ನಳ ಹೇಳಿ ಕೇಳಿ ಅಶ್ವವಿದ್ಯಾ ಪ್ರವೀಣ ಮತ್ತು ಪಾಕವಿದ್ಯಾ ಪ್ರವೀಣ. ಅಶ್ವವಿದ್ಯೆ ಪಾಕವಿದ್ಯೆಗಳನ್ನು ಬಲ್ಲವನೊಬ್ಬ ಕ್ಷತ್ರಿಯನಾಗಿ ಬೆಳೆದಿದ್ದಾನೆ. ಇವನೊಬ್ಬ ಮಹಾ ಯೋಧ, ಯುದ್ಧ ಮಾಡುವುದೂ ಇವನಿಗೆ ಗೊತ್ತು. ಆದರೆ ಈ ಮೂರ್ಖನಿಗೆ ಜೂಜಾಡುವ ವಿದ್ಯೆ ಗೊತ್ತಿಲ್ಲವಷ್ಟೆ. ಇನ್ನು ದಮಯಂತಿಯಾದರೋ ಗಜವಿದ್ಯಾ ಪ್ರವೀಣೆಯೇ ಆಗಿರಬೇಕು. ಪ್ರಹ್ಲಾದನ ರೀತಿ ಆಕೆ ವಿಷ್ಣುವಿನ ಮಹಾಭಕ್ತೆ ಏನೂ ಅಲ್ಲ. ಆಕೆಯ ಒಂದೇ ಒಂದು ಪ್ರಾರ್ಥನೆಗೆ ವ್ಯಾಪಾರಿಗಳ ಬೀಡಿನ ಮೇಲೆ ದಾಳಿ ಮಾಡಿದ ಆನೆಗಳೆಲ್ಲ ಓಡಿಹೋಗಲು ಕಾರಣ ಆಕೆ ಭಕ್ತಿಯಿಂದ ಹರಿಯನ್ನು ಸ್ತುತಿಸಿದಳು ಎನ್ನುವುದಕ್ಕಿಂತ ಗಜವಿದ್ಯೆ ಬಲ್ಲವಳು ಎನ್ನುವುದೇ ತರ್ಕಕ್ಕೆ ಹೆಚ್ಚು ಹತ್ತಿರವಾದದ್ದು. ಮಧ್ಯಕಾಲೀನ ಭಕ್ತಿ ಮನಸ್ಥಿತಿ ಆಕೆಯನ್ನು ಹಾಗೆ ಭಾವಿಸಲು ತಯಾರಿಲ್ಲ. ಕನ್ನಡಿಗರಿಗೆ ಯಾರಿಗೂ ಅರ್ಥವಾಗದ ಕ್ಲಿಷ್ಟ ಸಂಸ್ಕೃತ ಶ್ಲೋಕಗಳ ಮೂಲಕ ದೇವತೆಯರ ಕುಚ, ನಿತಂಬಗಳನ್ನು ವರ್ಣಿಸುವುದರಲ್ಲಿ ಸಿದ್ಧ ಹಸ್ತರಾದವರ ಪರಂಪರೆಯಲ್ಲಿ ಪಳಗಿದ ಕೇಶವಾಂಕಿತರು ದಮಯಂತಿಯನ್ನೂ ಹಾಗೆಯೇ ವರ್ಣಿಸಿದ್ದಾರೆ. ಆಕೆ ಗಜವಿದ್ಯಾ ಪಾರಂಗತೆ ಅಲ್ಲ; ಸಣ್ಣ ಬಳುಕುವ ಸೊಂಟ ಇರುವ, ದಪ್ಪ ಮೊಲೆಗಳಿರುವ, ದುಂಡು ಮುಖದ ಪತಿವ್ರತೆ! ತಳಸಂಸ್ಕೃತಿಗಳನ್ನೆಲ್ಲ ನೆಲದ ತಳಕ್ಕೆ ಹೂಳುವ ಕೆಲಸವನ್ನು ನಮ್ಮ ಪ್ರತಿಷ್ಠಿತ ಸಾಹಿತ್ಯ ಪರಂಪರೆ ಮಾಡುತ್ತ ಬಂದಿರುವುದಕ್ಕೆ ಈ ನಳಚರಿತ್ರೆಯೂ ಸಾಕ್ಷಿ. (ಸ್ತ್ರೀ ಸಮುದಾಯ ಕೂಡ ತಳಸಮುದಾಯವೇ ಅಲ್ಲವೆ)

## ಕಾಯನಿರಾಕರಣೆ-ಕಾಯಕೇಂದ್ರಿತ ಹೆಣ್ಣಿನ ಕಲ್ಪನೆ:

ತನುವು ಅಸ್ಥಿರ (117), ದೇಹವೆಂಬುದು ರಕ್ತ, ಮಲ, ಮೂತ್ರ, ಕೀವಿನ ಪ್ರಳಯದೊಡಲು (115) ದೇಹವೆಂಬುದು ಗಾಳಿದೀಪ, ದೇಹವೆಂಬುದು ನರಕ, ದೇಹವು ಒಂದು ಸೆರೆಮನೆ (108) ಹೀಗೆ ದೇಹವನ್ನು ಮತ್ತು ಅದರ ಮೂಲಕ ನಾವು ಪಡೆಯಬಹುದಾದ ಇಂದ್ರಿಯ ಸುಖಗಳನ್ನು ಕೇಶವಾಂಕಿತ ರಚನೆಗಳು ನಿರಾಕರಿಸುತ್ತವೆ. ಸಂಸಾರದಲ್ಲಿ ಗೇರು ಹಣ್ಣಿನ ಬೀಜದಂತೆ ಹೊರಗೇ ಇರಬೇಕು ಎಂದು ಹೇಳುವ ತತ್ವಜ್ಞಾನ (115) ನಿಜಕ್ಕು ಉಂಡವರು ಮತ್ತು ಅಜೀರ್ಣಗೊಂಡವರಿಗೆ ಹೇಳಲೇಬೇಕಾದ ತತ್ವಜ್ಞಾನ. ಆದರೆ ಅವರು ಇದನ್ನು ಕೇಳಿಸಿಕೊಳ್ಳುವುದಿಲ್ಲ ಮಾತ್ರ. ಆಸೆಯ ನಿರಾಕರಣೆ ಕೂಡ ಹಸಿದವರಿಗೆ ಮತ್ತು ದರಿದ್ರರಿಗೆ ಅನ್ವಯಿಸುವ ತತ್ವ ಅಲ್ಲ; ಹಣ-ಅಧಿಕಾರ-ಪದವಿ-ಸುಖಗಳ ದಾಹ ಇರುವ ದಾಹಿಗಳಿಗೆ ಅನ್ವಯಿಸುವ ತತ್ವ. ಆಸೆಯ ನಿರಾಕರಣೆ ಎಂದರೆ ಎಲ್ಲ ಸಂಸಾರದ ತಾಪತ್ರಯಗಳಿಂದ ಬಿಡುಗಡೆ ಪಡೆಯುವುದು. ಸಂಸಾರದ (ಕುಟುಂಬದ) ಒಳಗಿದ್ದೆ ಅದರಿಂದ ಬಿಡುಗಡೆ ಪಡೆಯುವುದು ಎಂದಿಗೂ ಸಾಧ್ಯವಿಲ್ಲ. ಹಾಗಾಗಿ ಸಂಸಾರದಿಂದಲೆ ಬಿಡುಗಡೆ ಪಡೆಯಬೇಕು. ಆಸೆಯ ನಿರಾಕರಣೆ ಎಂದರೆ ಎಂದಿಗೂ ಇಂಗದ ಸುಖಸಂಪತ್ತಿನ ಆಸೆಯ ನಿರಾಕರಣೆಯೇ ಹೌದು. ಸುಖದ ಬೆನ್ನು ಹತ್ತಿ ಹೋಗುವುದೂ ಕೂಡ ಒಂದು ದುಃಖವೇ. ಈ ದುಃಖದಿಂದಲೂ ಬಿಡುಗಡೆ ಪಡೆಯಬೇಕೆಂದರೆ; ಅತಿಯಾದ ಸಂಬಂಧಗಳನ್ನೂ, ಸಂಸಾರವನ್ನೂ, ಇಂದ್ರಿಯ ಬಯಕೆಗಳನ್ನೂ ತ್ಯಜಿಸಿ ವಿರಾಗವನ್ನು ಹೊಂದಬೇಕು. ಅದು ಸುಖದುಃಖಗಳ ತಾಕಲಾಟವಿಲ್ಲದ ಬದುಕು. ಇದೇ ದಾಸತ್ವ. ಇಂತಹ ಭಕ್ತ-ವಿರಾಗಿ ಬದುಕಿನ ಕ್ರಮವೊಂದನ್ನು ಕೇಶವಾಂಕಿತ ರಚನೆಗಳು ಪ್ರತಿಪಾದಿಸುತ್ತವೆ. ಆದರೆ ಹೆಣ್ಣನ್ನು ಇವು ಕಲ್ಪಿಸಿಕೊಳ್ಳುವುದು ಒಂದೋ ಮಾಯೆ-ಅದು ವ್ಯಾಮೋಹಕಾರಕ ಆದ್ದರಿಂದ ನಿರಾಕರಣೀಯ ಎಂಬ ನೆಲೆಯಲ್ಲಿ; ಇಲ್ಲವೇ ಕಾಯದ ಸೌಂದರ್ಯವನ್ನು ವರ್ಣಿಸುವ ಮೂಲಕ - ಮನಸ್ಸು ಆತ್ಮಗಳಿಲ್ಲದ ದೇಹಪ್ರೇಮದ ನೆಲೆಯಲ್ಲಿ. ಶರೀರ ಸೌಖ್ಯಶಮನಕ್ಕಾಗದ ಹೆಣ್ಣು ಊರಲಿದ್ದರೇನು ತೌರೂರಲಿದ್ದರೇನು (170), ಗಂಡಗಂಜದ ನಾರಿ ಅವಳೆ ಹೆಮ್ಮಾರಿ (171) ಇಂತಹ ಕೀರ್ತನೆಗಳು ಪುರುಷ ಪ್ರಧಾನ ಸಮಾಜದ ಮೌಲ್ಯಗಳನ್ನೆ ಇಲ್ಲಿ ಎತ್ತಿ ಹಿಡಿಯುತ್ತವೆ.

ಪೋಗದೋ ಚಳಿ ಪೋಗದೋ (188) ಎಂಬ ಕೀರ್ತನೆಯಂತೂ ಹರಿಹರ ಇಬ್ಬರೂ ಹೆಣ್ಣನ್ನು ಹೇಗೆ ಬಳಸಿದರು ಎಂದೇ (ಪೌರಾಣಿಕ ಮರುನಿರೂಪಣೆ ಮೂಲಕ) ವರ್ಣಿಸುತ್ತದೆ. ದೇಹವೇ ಇಲ್ಲಿ ಮುಖ್ಯ. ಇದು ಸ್ತುತಿಯೂ ಹೌದು. ನಿಂದಾಸ್ತುತಿಯೂ ಹೌದು. ಹೆಣ್ಣಿನ ಸೌಂದರ್ಯದ ಕಲ್ಪನೆ ಬೆವರಿನ ಮೂಲದಿಂದ ಆಗಲೀ, ಗುಣ-ಪ್ರತಿಭೆಗಳ ಮೂಲಕ ಆಗಲೀ, ನೋಟಕ್ರಮದ ರಾಜಕೀಯ ಉತ್ಪನ್ನವಾಗಿ ಆಗಲೀ ಕೇಶವಾಂಕಿತ ರಚನೆಗಳಲ್ಲಿ ಮಂಡಿತವಾಗಿಲ್ಲ. ಬದಲಾಗಿ

ಹೆಣ್ಣಿನ ಸೌಂದರ್ಯವು ದೇಹದ ಮೂಲಕವೆ ಮಂಡಿತವಾಗಿದೆ. ಸ್ಥಾಪಿತ ವೈದಿಕ ಶ್ಲೋಕ-ಕಥನಗಳಲ್ಲಿ ದೇವತೆಯರನ್ನು ದೇಹಕೇಂದ್ರಿತವಾಗಿ ಸ್ತುತಿಸುವ ಪರಂಪರೆಯನ್ನು ಈ ರಚನೆಗಳು ಒಪ್ಪಿ ಗಿಳಿಪಾಠ ಒಪ್ಪಿಸಿವೆ. ಕೀರ್ತಿಸಿವೆ.

ನಿನಗಿಂತ ಕುಂದೇನೋ ನಮ್ಮಮ್ಮ ಜಯಲಕ್ಷ್ಮಿ (39) ಈ ಕೀರ್ತನೆ ಪಲ್ಲವಿಯಲ್ಲಿ ಮಾತ್ರ ಜೋರಾಗಿದೆ. ದೇವ-ದೇವಿಯ ಹೋಲಿಕೆಯಿಂದ ಸ್ತ್ರೀ-ಪುರುಷ ಸಮಾನತೆಯನ್ನೂ ಹೇಳ ಹೊರಟಂತೆ ಕಾಣುತ್ತದೆ. ಆದರೆ ಹೆಣ್ಣನ್ನು ಇದು ದೇಹಕೇಂದ್ರಿತವಾಗಿ ಮಾತ್ರ ನೋಡುತ್ತದೆ. ಶ್ರೀಕೃಷ್ಣನ ಲೀಲೆಗಳಿಗೆ ಸಮನಾದ ಲೀಲೆಗಳನ್ನು ಆಕೆ ಮಾಡಿಲ್ಲ. ಆದರೆ ಆಕೆಯ ದೇಹವೇ ಒಂದು ಲೀಲೆ. ಆದಿಕೇಶವ ಮತ್ಸ್ಯಾವತಾರ ಎತ್ತಿದವನಾದರೆ ಈಕೆಯ ಕಣ್ಣುಗಳೇ ಮೀನಿನ ಕಣ್ಣುಗಳು, ಇವನು ಕೈಯಲ್ಲಿ ಶಂಖ ಹಿಡಿದರೆ ಆಕೆಯ ಕಂಠವೇ ಶಂಖ ಕಂಠ, ಇವನು ಲೋಲ ಕಮಲನಾಭ ಆಕೆ ಬಾಲ ಕಮಲಮುಖಿ, ಇವನೋ ಬೆರಳ ತುದಿಯಲ್ಲಿ ಒಂದು ಗೋವರ್ಧನಗಿರಿ ಎತ್ತಿ ಹಿಡಿದವ ಆಕೆ ಎದೆ ಮೇಲೆ ಗೋವರ್ಧನಗಿರಿಯಂತಹ ಎರಡು ಬೆಟ್ಟಗಳನ್ನು ಹೊತ್ತಿದ್ದಾಳೆ. ಇವನು ಗಜರಾಜ ವರದನಾದರೆ ಆಕೆ ಗಜಗಮನೆ, ಇವನು ನರಸಿಂಹನಾದರೆ ಆಕೆ ಸಿಂಹದಂತಹ ನಡುವುಳ್ಳವಳು ಹೀಗೆ ಆಕೆ ಹರಿಗಿಂತ ಕಡಿಮೆಯವಳಲ್ಲ! ಹೆಣ್ಣನ್ನು ದೇಹಕ್ಕೆ ಸಂಪೂರ್ಣ ಸೀಮಿತಗೊಳಿಸಿ ನೋಡುವ ದೃಷ್ಟಿಯನ್ನೇ ಈ ಕೀರ್ತನೆ ಆರಾಧಿಸುತ್ತದೆ. ಬ್ರಹ್ಮನ ರಾಣಿ ಸರಸ್ವತಿಯನ್ನು ಭಜಿಸುವ (52) ಕೀರ್ತನೆಯಲ್ಲು ಇದೇ ದೃಷ್ಟಿ ಇದೆ. ಹೆಣ್ಣನ್ನು ಮಾಯೆ ಎಂದು ನಿರಾಕರಿಸುವ ತತ್ವ ಪ್ರತಿಪಾದನೆಯ ಕೇಶವಾಂಕಿತ ರಚನೆಗಳು ಹರಿಯ ರಸಿಕತೆಗಳನ್ನು ಮಾತ್ರ ಚಪ್ಪರಿಸಿದಂತೆ ಕೀರ್ತಿಸುವುದು ಎಷ್ಟು ಸರಿ? ದೇವ ಕಥನಗಳು ಲೋಕ ಕಥನಕ್ಕಿಂತ ಭಿನ್ನವೋ? ಇದು ದೇವರ ಬಗೆಗಿನ ಭಕ್ತಿಯ ಕುರುಡಲ್ಲದೆ ಬೇರೆಯಲ್ಲ. (ಹೆಣ್ಣಿನ ವಿಚಾರಕ್ಕಷ್ಟೆ ಅಲ್ಲ : ಭಕ್ತಿಯಲ್ಲಿ ಈ ಕುರುಡು ಯಾವ ದೈವಲೀಲೆಗಳನ್ನೂ ಪ್ರಶ್ನಿಸುವುದಿಲ್ಲ. ನೋಡಿ: ಲೀಲೆ ಎಂಬ ನಂಬುಗೆ) ಕೀರ್ತನೆಗಳಲ್ಲದೆ ಬೇರೆ ಪಠ್ಯಗಳಲ್ಲು ಹೆಣ್ಣಿನ ಬಗೆಗೆ ಇದೇ ದೃಷ್ಟಿಕೋನ ಇದೆ. ನಳಚರಿತ್ರೆಯ ಆರಂಭದಲ್ಲಿ (16) ರೋಮಶ ಮುನಿಯ ಆಶ್ರಮದಲ್ಲಿ ಧರ್ಮರಾಯ ಇದ್ದಾಗ ಆತನಿಗೆ ಹೆಂಡತಿಯನ್ನು ಜೂಜಿನಲ್ಲಿ ಪಣವಿಟ್ಟು ಸೋತ ಧರ್ಮರಾಯನಿಗೆ ನಿನ್ನಂತೆಯೇ ಹೆಂಡತಿಯನ್ನು ಜೂಜಿನಲ್ಲಿ ಸೋತ ಪುಣ್ಯಾತ್ಮರು ಹಿಂದೆಯೂ ಇದ್ದರಪ್ಪ ಎಂದು ನಳನ ಕತೆಯನ್ನು ಹೇಳುತ್ತಾನೆ. ಅಲ್ಲದೆ ಅವನ ಅರಣ್ಯ ಸ್ಥಿತಿಯನ್ನೇ ರಾಜಸ್ಥಿತಿಯೆಂದು ವರ್ಣಿಸುತ್ತಾನೆ. 'ಪರಮ ಋಷಿಗಳ ನೆರವಿಯೇ ಸಭೆ, ಹರಿಯ ಕಾರುಣ್ಯಾಂಬುಧಿಯೆ ಸಿರಿ, ನರವೃಕೋದರ ಮಾದ್ರಿ ತನಯರು ನಿನಗೆ ಬಾಹುಬಲ, ತರುಣಿಯೇ ಭೋಗ್ಯೈಕ ಸಂಪತ್ತು' ಎಂದು ಹೇಳುವ ಮೂಲಕ ಹೆಣ್ಣು ಭೋಗದ ಸಂಪತ್ತು ಎನ್ನುತ್ತಾನೆ. ಹೆಣ್ಣನ್ನು ಕುರಿತ ದೃಷ್ಟಿಕೋನ ಇಲ್ಲಿ ಛಳಿಮೋಗದೋ ಕೀರ್ತನೆಗಿಂತ ಭಿನ್ನವೇನೂ ಅಲ್ಲ.

ಮೋಹನ ತರಂಗಿಣಿಯಲ್ಲಿಯೂ ಕಥನದಲ್ಲಿ ಪತಿವ್ರತಾಧರ್ಮವನ್ನು ಪ್ರತಿಪಾದಿಸಲು ಯತ್ನಿಸಲಾಗಿದೆ! ವಿಷ್ಣುಪುರಾಣ, ಭಾಗವತ, ಹರಿವಂಶ-ಸ್ಕಂದಪುರಾಣ ಈ ಎಲ್ಲ ಕಡೆ ಇರುವ ಶಂಬರಾಸುರ ವಧೆಯ ಪ್ರಸಂಗವನ್ನೆ ಮೋಹನ ತರಂಗಿಣಿಯಲ್ಲಿ ಬಳಸಲಾಗಿದೆ. ಆದರೆ ಯಥಾವತ್ತಾಗಿ ಅಲ್ಲ; ಬದಲಿಸಿ ಬಳಸಲಾಗಿದೆ. ವಿಷ್ಣುಪುರಾಣ, ಭಾಗವತ, ಹರಿವಂಶಗಳಲ್ಲಿ ಹರಿಯ ಮಗನಾದ ಮನ್ಮಥನು ತನ್ನ ಮುಂದಿನ ಜನ್ಮದಲ್ಲಿ ಶ್ರೀಕೃಷ್ಣನ ಮಗನಾದ ಪ್ರದ್ಯುಮ್ನನಾಗಿ ಜನಿಸುತ್ತಾನೆ. ಈತನ ಹೆಂಡತಿ ರತಿಯೇ ಈ ಜನ್ಮದಲ್ಲಿ ಮಾಯಾವತಿ ಆಗಿರುತ್ತಾಳೆ. ನಾರದನ ಮೂಲಕ ಪ್ರದ್ಯುಮ್ನನನ್ನು ತನ್ನ ವೈರಿಯೆಂದು ತಿಳಿದ ಶಂಬರಾಸುರನು ಪ್ರದ್ಯುಮ್ನನು ಹತ್ತು ದಿನಗಳ ಮಗುವಾಗಿದ್ದಾಗಲೇ ಅಪಹರಿಸಿ ಸಮುದ್ರಕ್ಕೆ ಎಸೆಯುತ್ತಾನೆ. ಗಂಡನನ್ನು ಹುಡುಕುತ್ತ ಶಂಬರಾಸುರನ ಮನೆಗೆ ಬಂದ ರತಿಯನ್ನೆ (ಮಾಯಾವತಿ) ಶಂಬರ ತನ್ನ ಎರಡನೆ ಹೆಂಡತಿಯನ್ನಾಗಿ ಮಾಡಿಕೊಳ್ಳುತ್ತಾನೆ. ಪ್ರದ್ಯುಮ್ನನು ಶಂಬರಾಸುರನ ಮನೆಯಲ್ಲಿಯೆ ಮಾಯಾವತಿಯ ಆರೈಕೆಯಲ್ಲಿಯೆ ಬೆಳೆಯುತ್ತಾನೆ. ಅವನನ್ನು ಸಾಕಿ ಸಲಹಿದ ಮಾಯಾವತಿಯೇ ಅವನಿಗೆ ತನ್ನೆಲ್ಲ ವಿದ್ಯೆಗಳನ್ನು ಹೇಳಿಕೊಡುತ್ತಾಳೆ. ಸಾಕಿಯೂ ತಾಯಿಯ ರೀತಿಯಲ್ಲಿ ವರ್ತಿಸದೆ ಇರುವ ಆಕೆಯನ್ನು ಯಾರೆಂದು ತಿಳಿದು ಪ್ರದ್ಯುಮ್ನನು ವರಿಸಿ ಶಂಬರಾಸುರನನ್ನು ತಂದೆಯ ಸೈನ್ಯ ಸಹಾಯದಿಂದ ಕೊಂದು ಹಾಕುತ್ತಾನೆ. ಇಲ್ಲಿ ಪ್ರದ್ಯುಮ್ನ ಮತ್ತು ಶಂಬರ ಇವರ ವೈರಕ್ಕೆ ಒಂದು ಕಾರಣ ಇದೆ. ಆದರೆ ಮೋಹನ ತರಂಗಿಣಿಯಲ್ಲಿ ಕಥಾ ವ್ಯತ್ಯಾಸ ಮಾಡಿಕೊಳ್ಳಲಾಗಿದೆ. ಇಲ್ಲಿ ಶಂಬರಾಸುರನ ಮನೆಗೆ ಬಂದ ರತಿ ಆತನ ಪತ್ನಿಯಾಗದೆ ರಾಣಿಯ ಊಳಿಗದವಳಾಗಿ ಸೇರಿಕೊಳ್ಳುತ್ತಾಳೆ. ರಾಣಿಯು ಅವಳಿಗೆ ಅಡಿಗೆ ಮನೆಯ ಊಳಿಗವನ್ನು ವಹಿಸುತ್ತಾಳೆ. ಶಂಬರ ರತಿಯರ ಸಂಬಂಧವನ್ನೆ ಇಲ್ಲಿ ಇಲ್ಲವಾಗಿಸುವ ಮೂಲಕ ಜನ್ಮಾಂತರ ಪತಿವ್ರತಾಧರ್ಮವನ್ನು ಪ್ರತಿಪಾದಿಸಲು ಹೋಗಿ ಕತೆಯ ತಾರ್ಕಿಕತೆಯನ್ನೆ ಕತ್ತರಿಸಿ ಹಾಕಲಾಗಿದೆ. ಅಷ್ಟೆ ಅಲ್ಲ ಆಕರ ಪಠ್ಯಗಳಲ್ಲಿ ಪ್ರದ್ಯುಮ್ನನು ಮಾಯಾದೇವಿಯಿಂದ ವಿದ್ಯೆಗಳನ್ನೆಲ್ಲ ಕಲಿಯುತ್ತಾನೆ. ಆದರೆ ಮೋಹನ ತರಂಗಿಣಿಯಲ್ಲಿ ಪ್ರದ್ಯುಮ್ನನು (ಶುಕ್ರಾಚಾರ್ಯರಿಂದ ಶಂಬರಾಸುರನು ಕಲಿತುಕೊಂಡಿರುವ ವಿದ್ಯೆಗಳನ್ನೆಲ್ಲ) ಶಂಬರಾಸುರನಿಂದಲೆ ಕಲಿತು ಅವನನ್ನು ಸಂಹರಿಸುತ್ತಾನೆ. ಅಂದರೆ ಹೆಣ್ಣಿನಿಂದ ವಿದ್ಯೆ ಕಲಿಯಲಾಗದೋ?

**ಹರಿಹರ ಸಮನ್ವಯ ತತ್ವ : ಮೇಲುಕೀಳುಗಳ 'ಅತಿಹಿತ' ತತ್ವ:**

ಶೈವ ವೈಷ್ಣವ ಕಾಳಗವನ್ನು ಕೊನೆಗಾಣಿಸುವ ಆಶಯ ಮೋಹನ ತರಂಗಿಣಿಯಲ್ಲಿ ಪ್ರಧಾನವಾಗಿ ಇದ್ದರೆ; ಶೂದ್ರ ಬ್ರಾಹ್ಮಣ ಕಾಳಗವನ್ನು ಕೊನೆಗಾಣಿಸುವ ಆಶಯ ರಾಮಧಾನ್ಯ ಚರಿತೆಯಲ್ಲಿ ಇದೆ. ಇವೆರಡೂ ಆಶಯಗಳು ಹರಿಭಕ್ತಿಸಾರದಲ್ಲೂ, ಕೀರ್ತನೆಗಳಲ್ಲೂ ಇವೆ. ಆದರೆ ಹರಿಸರ್ವೋತ್ತಮ, ಹರಿಸರ್ವಾಂತರ್ಯಾಮಿ, ಹರಿವಿಶ್ವಕುಟುಂಬಿ, ಹರಿಯೇ ಬ್ರಹ್ಮಾಂಡ ಯಂತ್ರವಾಹಕ, ಹರಿಯೇ ಜಗನ್ನಾಟಕ ಸೂತ್ರಧಾರಿ, ಮುಕ್ತಿದಾಯಕ (ವಾಯು ಜೀವೋತ್ತಮ, ವಾಯುವೇ ಮಧ್ವಾಚಾರ್ಯ)

ಎಂದು ಬಲವಾಗಿ ನಂಬಿ ಪ್ರತಿಪಾದಿಸುವಾಗ ಹರಿಹರ ಸಮನ್ವಯ ತತ್ವವು ಹರಿಹರರ ಸಮಾನತೆಯ ತತ್ವ ಆಗುವುದೇ ಇಲ್ಲ. ಹರಿಯು ಸರ್ವೋತ್ತಮ ಮಿಕ್ಕೆಲ್ಲವೂ ಆತನ ಅಧೀನ ಆದರೆ ಯಾರೂ ಜಗಳ ಆಡಬೇಡಿ; ಸಮರಸದಿಂದ ಅತಿಹಿತವಾಗಿ ಇರಿ ಎಂಬ ತತ್ವರಾಜಕಾರಣವೆ ಎಲ್ಲ ಕೇಶವಾಂಕಿತ ರಚನೆಗಳಲ್ಲು ತುಂಬಿದೆ. ಯಾರೂ ಮೇಲಲ್ಲ, ಯಾರೂ ಕೀಳಲ್ಲ; ಯಾರೂ ಮೊದಲಲ್ಲ ಯಾರೂ ಆಮೇಲಲ್ಲ ಎಂಬ ತತ್ವವು ಕೆಲವೆಡೆ ಸಮಾನತೆ ಮತ್ತು ಹರಿಸರ್ವೋತ್ತಮತೆಗಳ ಸಂಘರ್ಷದಂತೆಯೂ – ಹರಿಹರ ಸಮನ್ವಯ ತತ್ವದಂತೆಯೂ ಕಾಣುತ್ತದೆ. 6, 51, 286 ಮತ್ತು 306 ಈ ನಾಲ್ಕು ರಚನೆಗಳನ್ನು ಒಟ್ಟಿಗೇ ಇಟ್ಟುಕೊಂಡು ನೋಡಿದರೆ ಇದು ತಿಳಿಯುತ್ತದೆ.

ಆರುಬಲ್ಲರು ಹರಿಹರಾದಿಗಳ ಮಹಿಮೆಯನು ಎಂಬ ಕೀರ್ತನೆಯಲ್ಲಿ ಹರಿ ಮತ್ತು ಹರರನ್ನು ಒಂದೆ ಎಂದು ವಾದಿಸುವ ಆಧಾರ ಸಾಮಗ್ರಿ ಆಗಿ ಪುರಾಣದ ಸಂಗತಿಗಳನ್ನೆ ಹೇಳಲಾಗಿದೆ. ಹರನು ಹರಿಯನ್ನು ಕೋರಿ ನಾರಾಯಣಾಸ್ತ್ರವನ್ನು ಪಡೆದ ವಿವರ, ಹರಿಯು ತಪಸ್ಸು ಮಾಡಿ ಹರನನ್ನು ಒಲಿಸಿಕೊಂಡು ಚಕ್ರವನ್ನು ಪಡೆದ ವಿವರ, ಬಲಿ ಚಕ್ರವರ್ತಿಯ ಮನೆ ಬಾಗಿಲನ್ನು ಹರಿ ಕಾಯುವುದು ಮತ್ತು ಬಾಣಾಸುರನ ಮನೆಯ ಬಾಗಿಲನ್ನು ಹರ ಕಾಯುವುದು ಇತ್ಯಾದಿ ವಿವರಗಳನ್ನು ಈ ಕೀರ್ತನೆಯಲ್ಲಿ ಹೇಳಲಾಗಿದೆ. (6) ಆದರೆ ಕೊನೆಯಲ್ಲಿ ಸೃಷ್ಟಿ, ಸ್ಥಿತಿ, ಲಯ, ಕಾರ್ಯಕಾರಣ ಕರ್ಮ ಇವೆಲ್ಲಕ್ಕು ಭೋಗಿಶಯನ ಮತ್ತು ಭೋಗಿಭೂಷಣ ಈರ್ವರೂ ಕಾರಣರಲ್ಲ. ಭೋಗಿಶಯನ, ಭೋಗಿಭೂಷಣ, ವಾಗೀಶ ಈ ಮೂವರೂ ತಾನೇ ಆಗಿರುವ ಹರಿಯೇ ಕಾರಣ ಎಂದು ಹೇಳಲಾಗಿದೆ! ಮೇಲುನೋಟಕ್ಕೆ ಇದು ಹರಿಹರರನ್ನು ಸಮಾನವೆಂದು ಕಾಣುವ ಕೀರ್ತನೆ ಎನ್ನಿಸುತ್ತದೆ. ಆದರೆ ಇದು ಕೊನೆಯಲ್ಲಿ ಶಿವನೂ, ಬ್ರಹ್ಮನೂ, ವಿಷ್ಣುವೂ ಎಲ್ಲವೂ ಹರಿಯೇ ಎನ್ನುತ್ತದೆ. ಹಾಗೆ ಹೇಳುವ ಮೂಲಕ ಹರಿಸರ್ವೋತ್ತಮತೆಯನ್ನೆ ಸಾರುತ್ತದೆ.

ಜವನ ಬಾಧೆಯ ಜಯಿಸಬೇಕಾದರೆ, ಭುವನಕೆ ಬಲ್ಲಿದರಾಗಬೇಕಾದರೆ, ಗುರುಲಿಂಗ ಜಂಗಮವ ಅರಿಯಬೇಕಾದರೆ ಪೃಥ್ವಿಗೆ ಸದ್ಗುರು ಆಗಬೇಕಾದರೆ ಶಿವ ಶಿವ ಶಿವ ಎನ್ನಿರೋ ಎಂದು ಹೇಳುವ ತತ್ವಪದ ಕೂಡ ಶಿವ ಎನ್ನುವುದು ಹರಿಯ ಇನ್ನೊಂದೇ ಹೆಸರು ಎಂದೇ ಹೇಳುತ್ತದೆ. (51) ಮೇಲ್ನೋಟಕ್ಕೆ ಇದು ಪಾಂಥಿಕ ಸೌಹಾರ್ದ, ಕೋಮುಸೌಹಾರ್ದದ ರಚನೆಯಂತೆ, ವೀರಶೈವ–ವೈಷ್ಣವ ಸಂಘರ್ಷವನ್ನು ತಪ್ಪಿಸುವ ಸಮನ್ವಯ ತತ್ವದ ರಚನೆಯಂತೆ ಕಂಡರೂ ತತ್ವಪತಿ ಆದಿಕೇಶವನನ್ನು ಕೂಡಲು ಶಿವಶಿವ ಎನ್ನಬೇಕು ಎಂದೇ ವಾದಿಸುತ್ತದೆ. ಯಾವ ದೇವರನಾಮವನ್ನು ಜಪಿಸಿದರೂ, ಭಜಿಸಿದರೂ ಅದರ ಅಂತಿಮ ಉದ್ದೇಶ ಆದಿಕೇಶವನನ್ನು (ಹರಿಯನ್ನು) ಕೂಡುವುದೇ ಆಗಿದೆ. ಹಾಗಾದಾಗ ಸಮಾನತೆ

ಎಲ್ಲಿ ಬರುತ್ತದೆ! ಜಗಳವಾಡದೆ ಹರಿಯೆ ಸರ್ವೋತ್ತಮ ಎಂದು ಒಪ್ಪಿ ಸುಖವಾಗಿ ಬಾಳಿ ಎಂಬುದು ಈ ರಚನೆಗಳ ತತ್ವರಾಜಕಾರಣ ಆಗಿದೆ.

306ನೆ ಉದಯರಾಗವು 37 ಷಟ್ಪದಿಗಳ ಒಂದು ಕಿರುಕಾವ್ಯ. ಇಲ್ಲಿ ಪ್ರಹ್ಲಾದನನ್ನು ರಕ್ಷಿಸಿದ ನರಸಿಂಹನ ಕತೆಯಿದೆ. ಹಿರಣ್ಯಕಶ್ಯಪ ಶಿವನನ್ನು ಆರಾಧಿಸುವ ಶಿವಭಕ್ತನಾಗಿದ್ದರೂ ಅವನು ಶಿವನನ್ನು ದೈವವೆಂದು ಒಪ್ಪದ; ನಾನೇ ಈ ಲೋಕದ ದೇವರೆಂದು ಘೋಷಿಸಿಕೊಂಡ; ವೈರಮಾರ್ಗದಿಂದ ಹರಿಯನ್ನು ಸೇರಲು ತವಕಿಸುವ ಹರಿಭಕ್ತ ಎಂದೇ ಚಿತ್ರಿಸಲಾಗಿದೆ. ಹಿರಣ್ಯಕಶ್ಯಪನ ಈ ಚಿತ್ರ ವೈಷ್ಣವ ಭಕ್ತರು ಕಟ್ಟಿ ನಿಲ್ಲಿಸಿರುವ ಚಿತ್ರ. ಹಿರಣ್ಯಾಕ್ಷ ನಿಜವಾಗಿಯೂ ನಾನೇ ದೇವರು ಎಂದು ಮೆರೆದನೋ ಇಲ್ಲವೋ ಆದರೆ ವೈಷ್ಣವರು ಅವನನ್ನು ಹಾಗೆ ಸೃಷ್ಟಿಸಿದ್ದಾರೆ. ಈ ಉದಯರಾಗದಲ್ಲಂತು ಕೊನೆಯಲ್ಲಿ ಹಿರಣ್ಯಕಶ್ಯಪನನ್ನು ಕೊಂದ ನರಸಿಂಹನಿಗೆ ಶಿವನೇ ವಂದಿಸುತ್ತಾನೆ. ಈ ಉದಯರಾಗವು ಘಂಟಾಪುರಿಯ ನಾರಾಯಣ ಎಂಬ ಅಂಕಿತದಲ್ಲಿದೆ. ಬಹುಶಃ ಇದನ್ನು ಕನಕದಾಸ ಬರೆದಿರಲಾರ. ಆದರೆ ಕೇಶವಾಂಕಿತ ರಚನೆಗಳ ಹರಿಸರ್ವೋತ್ತಮ ದೃಷ್ಟಿಕೋನವೇ ಇಲ್ಲೂ ಇದೆ.

286ನೆ ಮುಂಡಿಗೆಯಲ್ಲಿ ನಾಮ ಮುಂದೋ ಸ್ವಾಮಿ ವಿಭೂತಿ ಮುಂದೋ ಎಂದು ನೇರವಾಗಿ ಶೈವ–ವೈಷ್ಣವ ಲಾಂಛನಗಳನ್ನೆ ಚರ್ಚೆಗೆ ಎತ್ತಿಕೊಳ್ಳಲಾಗಿದೆ. ಈ ಮುಂಡಿಗೆಯು ಬೆಡಗಿನ ತತ್ವಪದದ ಧಾಟಿಯಲ್ಲೆ ರಚನೆಯಾಗಿದೆ. ಇಲ್ಲಿ ಭೂಮಿ ಮೊದಲೋ ಆಕಾಶ ಮೊದಲೋ, ಕೋಳಿ ಮೊದಲೋ ಮೊಟ್ಟೆ ಮೊದಲೋ, ಬೀಜ ಮೊದಲೋ ವೃಕ್ಷ ಮೊದಲೋ, ಗಂಡ ಮೊದಲೋ ಹೆಂಡತಿ ಮೊದಲೋ ಎಂಬ ಪ್ರಶ್ನೆಗಳನ್ನು ದೃಷ್ಟಾಂತಗಳನ್ನಾಗಿ ಇರಿಸಿಕೊಂಡು ನಾಮ ಮೊದಲೋ–ವಿಭೂತಿ ಮೊದಲೋ–ನಾಮವು ಶ್ರೇಷ್ಠವೋ ವಿಭೂತಿ ಶ್ರೇಷ್ಠವೋ ಇವುಗಳಲ್ಲಿ ಯಾವುದು ಸರ್ವೋತ್ತಮ ಎಂಬ ಚರ್ಚೆಯನ್ನು ಬೆಳೆಸಲಾಗಿದೆ. ಕೊನೆಗೆ ಈ ಮುಂಡಿಗೆಯು "ಕನಕನು ಹೇಳಿದ ಬೆಡಗಿದು ಕಂಡವರೆಲ್ಲರು ಮನದಲಿ ಚಿಂತಿಸಿ ಮಥಿಸಿ ನವನೀತ ಕಾಣಿರಿ ಎಂದು ಮುಕ್ತಾಯವಾಗುತ್ತದೆ. ತನ್ನ ತತ್ವವನ್ನು ತೀರ್ಮಾನವನ್ನು ಹೇರದೆ ಇರುವ – ಓದುಗರಿಗೆ ಮುಕ್ತವಾಗಿ ಆಯ್ಕೆಯನ್ನು ಬಿಟ್ಟುಬಿಡುವ–ಮುಕ್ತ ಮುಕ್ತವಾದ ರಚನೆ ಇದು. ಮೇಲು–ಕೀಳು, ಸಮಾನತೆ–ಅಸಮಾನತೆ, ಹರಿಸರ್ವೋತ್ತಮ ಅನ್ಯ ಅಧೀನ ಕಲ್ಪನೆಗಳೆಲ್ಲವು ಅರ್ಥವಿಲ್ಲದ ಕಲ್ಪನೆಗಳು ಯಾರೂ ಮೊದಲಲ್ಲ, ಯಾರೂ ನಂತರವಲ್ಲ ಎಂಬ ತತ್ವ ಸಾರುವ ರಚನೆಯಿದು. ಇಲ್ಲಿ ಕನಕನ ಹೆಸರು ಇದೆಯಾದರೂ ಇದು ಕೇಶವ ಎಂಬ ಅಂಕಿತದಲ್ಲಿ ರಚನೆಯಾಗಿಲ್ಲ ಎಂಬುದು ಗಮನಾರ್ಹ. ಆನಂತರ ಕೇಶವಭಕ್ತರ ಕಣ್ಣಿಗೆ ಇದು ಸರಿಯಾಗಿ ಬಿದ್ದಿಲ್ಲವೆಂದು ಕಾಣುತ್ತದೆ. ಬಿದ್ದಿದ್ದರೆ ತಿದ್ದಿ ಮಾರ್ಪಡಿಸುತ್ತಿದ್ದರೇನೋ

ಹರಿಭಕ್ತಿಸಾರದಲ್ಲಿ ಒಂದು ಕಡೆ ಬ್ರಹ್ಮನ 5ನೆ ತಲೆಯನ್ನು ಕಡಿದ ಶಿವನೂ ರುದ್ರಭೂಮಿಯಲ್ಲಿ ಅಂಡಲೆಯುವವನೂ ಎಲ್ಲವೂ ನೀನೇ ಹರಿಯೇ ಆಗಿದ್ದೀಯೆ ನೀನು ದೇವರ ದೇವ ಎಂದು ಪ್ರಾರ್ಥಿಸಲಾಗಿದೆ. (72) ಶಿವನು ತಪಸ್ಸಿಗೆ ಕುಳಿತಿದ್ದಾಗ ರಾಮನಾಮವನ್ನೆ ಜಪಿಸುತ್ತಿದ್ದ ಎಂದು ಮೋಹನ ತರಂಗಿಣಿಯಲ್ಲೂ ಹೇಳಲಾಗಿದೆ. ಇಷ್ಟಕ್ಕು ಮೋಹನ ತರಂಗಿಣಿ ಕಾವ್ಯವನ್ನು ವಿಷ್ಣುಪುರಾಣ, ಭಾಗವತ, ಹರಿವಂಶ, ಮಹಾಭಾರತ ಇತ್ಯಾದಿ ಆಕರಗಳಿಂದ ಆರಿಸಿ ಹೊಸಬಗೆಯಲ್ಲಿ ನೇಯುವ ಉದ್ದೇಶವಾದರೂ ಏನು? ಮೋಹನ ತರಂಗಿಣಿಯಲ್ಲಿ ಶ್ರೀಕೃಷ್ಣನನ್ನು ಶ್ರೀಕೃಷ್ಣದೇವರಾಯನಿಗೆ ಸಮೀಕರಿಸಿ ಚಿತ್ರಿಸಲಾಗಿದೆ ಎಂಬ ಓದು ಕೂಡ ನಮ್ಮಲ್ಲಿ ಈಗಾಗಲೇ ಮಂಡಿತವಾಗಿದೆ. (ನೋಡಿ:ಕರ್ನಾಟಕ ಜನಜೀವನ; ಸಿದ್ಧವನಹಳ್ಳಿ ಕೃಷ್ಣಶರ್ಮ ; ಸಮಾಜ ಪುಸ್ತಕಾಲಯ, ಧಾರವಾಡ : 1939, ಪುಟ 77 ರಿಂದ 95) ಹಾಗೆಯೇ ಇದೊಂದು ಹರಿ ಮತ್ತು ಹರರ ಸಮನ್ವಯವನ್ನು ಸಾಧಿಸುವ ಕಾವ್ಯ ಎಂಬ ಓದನ್ನೂ ಮಂಡಿಸಲಾಗಿದೆ. (ನೋಡಿ: ಸಮಗ್ರ ದಾಸ ಸಾಹಿತ್ಯ ಭಾಗ-1ರ ಪ್ರಸ್ತಾವನೆ; ಪ್ರೊ. ಸುಧಾಕರ ಪುಟ 42-43) ಮೇಲ್ನೋಟಕ್ಕೆ ಹಾಗೆಯೇ ಅನ್ನಿಸುತ್ತದೆ. ಆದರೆ ಕಾವ್ಯವನ್ನು ನಿಕಟ ಓದಿಗೆ ಗುರಿಪಡಿಸಿದರೆ ಇದು ಅಂತಿಮವಾಗಿ ಹರಿಸರ್ವೋತ್ತಮತೆಯ ತತ್ವವನ್ನು ಸಾರುವ ಕೃತಿಯೇ ಆಗಿರುವುದು ಕಾಣುತ್ತದೆ.

ಹಿರಣ್ಯಕಶ್ಯಪ ಶಿವಭಕ್ತ, ಇವನ ಮಗ ಪ್ರಹ್ಲಾದ ಹರಿಭಕ್ತ, ಪ್ರಹ್ಲಾದನ ಮಗ ವಿರೋಚನನೂ ಹರಿಭಕ್ತ; ಆದರೆ ವಿರೋಚನನ ಮಗ ಬಲಿ ಚಕ್ರವರ್ತಿ ಶಿವಭಕ್ತ. ಇವನ ಶಿವಭಕ್ತಿಯನ್ನು ಕಂಡ ಇವನ ತಾತ ಪ್ರಹ್ಲಾದ ಇವನಿಗೆ ಅದಕ್ಕಾಗಿ ಅಕಾಲ ಮೃತ್ಯು ಒದಗಲಿ ಎಂದು ಶಾಪ ಕೊಡುತ್ತಾನೆ. ಕೃಷ್ಣ ರುಕ್ಮಿಣಿಯರ ಮಗಳಾದ ಚಾರುಮತಿಯನ್ನೆ ಬಲಿ ಚಕ್ರವರ್ತಿ ಮದುವೆ ಆಗಿದ್ದರೂ ಆತ ಶಿವಭಕ್ತ. ಬಲಿಯ ಮಗನೇ ಬಾಣಾಸುರ. ಇವನೂ ಅಪ್ರತಿಮ ಶಿವಭಕ್ತ. ಬಾಣಾಸುರನ ಭಕ್ತಿಗೆ ಮೆಚ್ಚಿ ಸಾಕ್ಷಾತ್ ಶಿವನೇ ಇವನ ಮನೆಯ ಬಾಗಿಲು ಕಾಯುತ್ತಿರುತ್ತಾನೆ. ಕೃಷ್ಣ ರುಕ್ಮಿಣಿಯರ ಮಗ ಪ್ರದ್ಯುಮ್ನನ ಹೆಂಡತಿ ಮಾಯಾವತಿಯನ್ನೆ ಬಾಣಾಸುರ ತನ್ನ ಎರಡನೆ ಹೆಂಡತಿಯನ್ನಾಗಿ ಮಾಡಿಕೊಂಡಿರುತ್ತಾನೆ. ಬಲಿಯನ್ನು ವಾಮನರೂಪಿ-ತ್ರಿವಿಕ್ರಮನಾಗಿ ಪಾತಾಳಕ್ಕೆ ತುಳಿದ ಹರಿಯೇ ಮುಂದೆ ಕೃಷ್ಣಜನ್ಮದಲ್ಲಿ ಮಗನಾದ ಪ್ರದ್ಯುಮ್ನ, ಪರಿವಾರದವರಾದ ಸಾತ್ಯಕಿ, ಉದ್ಧವ, ಕೃತವರ್ಮ ಮತ್ತು ಬಲರಾಮರ ಜೊತೆಗೂಡಿ ಯುದ್ಧಮಾಡಿ ಬಲಿಯ ಮಗ ಬಾಣಾಸುರನನ್ನು ಸೋಲಿಸುತ್ತಾನೆ. ಶಿವನೂ ಇಲ್ಲಿ ಸೋಲುತ್ತಾನೆ. ಈ ಯುದ್ಧಕ್ಕೆ ಇನ್ನೊಂದು ಕಾರಣವೆಂದರೆ ಪ್ರದ್ಯುಮ್ನನ ಮಗನಾದ ಅನಿರುದ್ಧನು ಬಾಣಾಸುರನ ಮಗಳಾದ ಉಷೆಯಲ್ಲಿ ಅನುರಕ್ತಗೊಂಡಿರುತ್ತಾನೆ. ಯುದ್ಧದ ಕೊನೆಯಲ್ಲಿ ಸೋತ ಶಿವನೇ ಅನಿರುದ್ಧ ಉಷೆಯರ ವಿವಾಹ ಮಾಡಲು ಬಾಣಾಸುರನಿಗೆ ಮಂತ್ರಿಯ ಮೂಲಕ ಹೇಳಿಸುತ್ತಾನೆ.

ಶೈವ ಮತ್ತು ವೈಷ್ಣವರ ನಡುವಿನ ಕಾಳಗ ಶತಶತಮಾನಗಳ – ತಲೆತಲೆಮಾರುಗಳ ನಿರಂತರವಾದ ಕಾಳಗ. ಈ ಕಾಳಗಕ್ಕೆ ಕೊನೆಯಿಲ್ಲ. ಮೋಹನ ತರಂಗಿಣಿಯಲ್ಲಿ ಈ ಕಾಳಗ ಕೊನೆಯಾಗಲಿ ಎಂಬ ಆಶಯವಿದೆ. ಆದರೂ ಹರಪರಿವಾರದ ಎದುರು ಹರಿಪರಿವಾರ ಶಕ್ತಿಯುತವಾದದ್ದು ಎಂದೇ ಈ ಕಾವ್ಯ ಹೇಳುತ್ತದೆ. ಕುಂಭಾಂಡ, ಬಾಣಾಸುರ, ವಿಘ್ನೇಶ್ವರ, ಕಾಲಭೈರವ, ಶಿವ ಎಲ್ಲರೂ ಕೃಷ್ಣನ ಎದುರು ಪಕ್ಷವಾಗಿ ಕದನಕ್ಕೆ ಇಳಿದರೂ ಗೆಲ್ಲಲಾಗುವುದಿಲ್ಲ. ಇಲ್ಲಿ ಗೆಲ್ಲುವುದು ಕೃಷ್ಣಬಲ ಮಾತ್ರವಲ್ಲ ಅನಿರುದ್ಧ–ಉಷೆಯರ ಅಂತರ್‌ಪಂಥೀಯ ಪ್ರೇಮಬಲ. ಆದರೂ ಇದಕ್ಕಿಲ್ಲಿ ಅಷ್ಟು ಪ್ರಾಶಸ್ತ್ಯವಿಲ್ಲ. ಕನ್ನಡದಲ್ಲಂತು ವೀರಶೈವರು ಶಿವಸರ್ವೋತ್ತಮತೆಯ ಅತಿಯನ್ನೂ; ಹರಿದಾಸರು ಹರಿಸರ್ವೋತ್ತಮತೆಯ ಅತಿಯನ್ನೂ ಪ್ರತಿಪಾದಿಸುತ್ತ ನಿರಂತರ ಶಬ್ದಕಾಳಗವನ್ನೇ ನಡೆಸಿದ್ದಾರೆ. ಸಹಿಷ್ಣುತೆ–ಸಹಬಾಳ್ವೆ–ಅತಿಹಿತದ ಬಾಳು ಇವರೆಲ್ಲರಲ್ಲಿ ಇದ್ದರೂ ಸ್ವಯಂ ಶ್ರೇಷ್ಠತೆಯನ್ನಂತು ಇವರಾರೂ ಬಿಟ್ಟಿಲ್ಲ. ಒಂದು ಕಡೆ ಶೈವಕವಿಗಳು ಲೋಕದ ಎಲ್ಲ ದೈವಗಳೂ ಶಿವಾಧೀನ ಮತ್ತು ಶಿವಾಂಶ ಎಂದು ಹೇಳುತ್ತಲೂ ಇನ್ನೊಂದು ಕಡೆ ವೈಷ್ಣವ ಕವಿಗಳು ಇದನ್ನೆ ವಿಷ್ಣುವಿಗೆ ಆರೋಪಿಸುತ್ತಲೂ ಮತ್ತೊಂದು ಕಡೆ ದೇವೀಪುರಾಣ–ದೇವಿಮಹಾತ್ಮೆಯಂತಹ ಗ್ರಂಥಕರ್ತರು (ಚಿದಾನಂದಾವಧೂತ) ದೇವಿಯಿಂದಲೇ ಲೋಕರಚನೆ–ದೇವಿಯ ಅಂಶದಿಂದಲೇ ಸಕಲವೂ ಆಯಿತೆಂದು ಹೇಳುತ್ತಲೂ ಬಂದಿದ್ದಾರೆ. ಎಲ್ಲರೂ ಜಗಳವಾಡದೆ ಬದುಕೋಣ ಆದರೆ ನಾವು ಮಾತ್ರ ಎಲ್ಲರಿಗಿಂತ ಶ್ರೇಷ್ಠರು ಎಂಬ ಮಾತನ್ನೆ ಎಲ್ಲರೂ ಆಡುತ್ತ ಬಂದಿದ್ದಾರೆ.

**ದೇವ–ದಾನವ ಕಲ್ಪನೆ:**

ಪ್ರಹ್ಲಾದನ ತಂದೆ ಹಿರಣ್ಯಕಶ್ಯಪ ಒಬ್ಬ ರಾಕ್ಷಸ; ಪ್ರಹ್ಲಾದನ ಮಕ್ಕಳಾದ ಕುಂಭ, ನಿಕುಂಭ, ಮೊಮ್ಮಕ್ಕಳಾದ ಸುಂದ, ಉಪಸುಂದ ಎಲ್ಲರೂ ರಾಕ್ಷಸರು. ಆದರೆ ಪ್ರಹ್ಲಾದ ಮಾತ್ರ ರಾಕ್ಷಸ ಅಲ್ಲ. ಏಕೆಂದರೆ ಆತ ಹರಿಭಕ್ತ. ವಿಚಿತ್ರವೆಂದರೆ ವೈಷ್ಣವ ಕಾವ್ಯ ಪುರಾಣಗಳೆಲ್ಲವೂ ಶಿವಭಕ್ತರನ್ನು ರಾಕ್ಷಸರೆಂದೇ ಚಿತ್ರಿಸಿವೆ. ದಾನವರೊಂದಿಗೆ ಕಾದುವ ವಿಷ್ಣುವಿನ ಅವತಾರಗಳೆಲ್ಲ ದೇವತೆಗಳೇ. ವಿಷ್ಣುವಿನ ಭಕ್ತರೂ ವಿಷ್ಣುವಿನ ಅಂಶಗಳೇ ಆಗಿರುವುದರಿಂದ ವಿಷ್ಣುಭಕ್ತರಾದವರೂ ದೇವತೆಗಳೇ. ಈ ದೇವರು ಮತ್ತು ದಾನವ ಕಲ್ಪನೆ ಜಗತ್ತನ್ನು ಒಳ್ಳೆಯ ಮತ್ತು ಕೆಟ್ಟವ ಎಂದೇ ಒಡೆದು ಭಾವಿಸುತ್ತದೆ. ಮುಸಲ್ಮಾನರಲ್ಲಿ ಕಾಫಿರರೂ, ಜೈನರಲ್ಲಿ ಅಭವ್ಯರೂ, ವೀರಶೈವರಲ್ಲಿ ಭವಿಗಳೂ ಇರುವಂತೆ ವೈಷ್ಣವರಲ್ಲಿ ದಾನವ ಕಲ್ಪನೆ ಇದೆ. ಈ ದೇವರು ಮತ್ತು ದಾನವ ಎಂಬ ಪರಿಕಲ್ಪನೆಗಳನ್ನೂ ಒಳ್ಳೆಯ ಮತ್ತು ಕೆಟ್ಟ ಎಂದು ತೆಗೆದುಕೊಳ್ಳದೆ ಎರಡು ಪರಸ್ಪರ ವೈರತ್ವದ ಸಮುದಾಯಗಳು ಎಂದಷ್ಟೆ ನಾವು ತೆಗೆದುಕೊಳ್ಳಬೇಕಾಗಿದೆ. ನಾವು ಮತ್ತು ಅನ್ಯ ಎಂಬ ಪರಿಕಲ್ಪನೆಯಾಗಿಯೆ ತೆಗೆದುಕೊಳ್ಳಬೇಕಾಗುತ್ತದೆ. ನೂರಾರು ಸಾವಿರಾರು ವರ್ಷಗಳ ಕಾಲ ನಮ್ಮ ಕಾವ್ಯಗಳು ಕೆಲವು ನಿರ್ದಿಷ್ಟ ಅರ್ಥಗಳನ್ನು ಕೆಲವು ಪದಗಳಿಗೆ (ಪರಿಕಲ್ಪನೆಗಳಿಗೆ)

ಕೊಡುತ್ತ ಬಂದಿವೆ. ಹಾಗಾಗಿ ನಮ್ಮ ತಿಳುವಳಿಕೆಯಲ್ಲಿ ದಾನವರು ಎಂದರೆ ಕೆಟ್ಟವರು, ದೇವತೆಗಳು ಎಂದರೆ ಒಳ್ಳೆಯವರು ಎಂಬ ನಂಬಿಕೆ ಬಲವಾಗಿ ಕೂತುಬಿಟ್ಟಿದೆ. ಅದಕ್ಕಾಗಿಯೇ ಜನರು ರಾವಣನು ಪರರ ಹೆಂಡತಿಯನ್ನು ಹೊತ್ತುಕೊಂಡು ಹೋದರೆ ಅನಾಚಾರಿ ಎಂದೂ ಶ್ರೀಕೃಷ್ಣ ಪರರ ಹೆಂಡತಿಯನ್ನು ಮೋಹಿಸಿದರೆ ರಸಿಕ ಎಂದೂ ಭಾವಿಸುತ್ತಾರೆ. ಯಾಕೆಂದರೆ ರಾವಣ ರಾಕ್ಷಸ, ಶ್ರೀಕೃಷ್ಣ ದೇವರು. ದೇವರು ಮಾಡುವ ಕೆಲಸ ಲೀಲೆ. ರಾಕ್ಷಸ ಮಾಡುವ ಕೆಲಸ ಅನಾಚಾರ! ಇದು ನಮ್ಮ ಕಾವ್ಯ ಪುರಾಣಗಳು ಶತಶತಮಾನಗಳಿಂದ ಮಾಡಿಕೊಂಡು ಬಂದಿರುವ ಅರ್ಥರಾಜಕಾರಣ, ತತ್ವರಾಜಕಾರಣ, ಪರಿವಾರ ರಾಜಕಾರಣ.

### ಭಕ್ತಿ, ಮುಕ್ತಿ: ಆಚಾರಸಂಹಿತೆಯ (ಪ್ರತಿ) ರಾಜಕಾರಣ

ಭಕ್ತಿ–ವಿರಾಗ–ದಾಸತ್ವ–ಪಾರಮಾರ್ಥಿಕತೆಯನ್ನು ಹೇಳಿರುವ ಕೇಶವಾಂಕಿತ ಕೀರ್ತನೆಗಳು ಲೌಕಿಕತೆ–ಐಂದ್ರಿಯಿಕತೆಗಳನ್ನು ಸಂಪೂರ್ಣವಾಗಿ ನಿರಾಕರಿಸಿವೆ ಎಂದೇನೂ ಅಲ್ಲ. ಕೆಲವೆಡೆ ಲೌಕಿಕತೆ–ಐಂದ್ರಿಯಿಕತೆಗಳನ್ನು ಉಪಮೆ–ದೃಷ್ಟಾಂತಗಳಾಗಿ (ಕಾವ್ಯ ಪರಿಕರಗಳಾಗಿ) ಹೇಳಲಾಗಿದೆ. ಹಾಗೆ ಹೇಳುವಾಗ ಹರಿಭಕ್ತಿಯ ಪ್ರಾಮುಖ್ಯತೆಯನ್ನು ಹೇಳುವ ಪೂರ್ವ ಸಾಮಗ್ರಿಯಾಗಿ; ಸಮರ್ಥನಾ ಸಾಮಗ್ರಿಯಾಗಿ ಇವುಗಳನ್ನು ಬಳಸಲಾಗುತ್ತದೆ. ಅಟ್ಟು ಇಕ್ಕದ ಮನೆಯ ಪಾಯಸ ಕಜ್ಜಾಯವ ಅಟ್ಟರೇನು ಅಡದಿದ್ದರೇನು, ನಿಚ್ಚಣಿಗೆ ದೋಟಿಗೆ ನಿಲುಕದ ಹಣ್ಣಿನ ವೃಕ್ಷ ನಿಚ್ಚ ನಿಚ್ಚವು ಬಾಗಿ ಫಲವಾದರೇನು ಎಂಬ ಮಾತುಗಳು (170) ಮೇಲ್ನೋಟಕ್ಕೆ ಅಪ್ಪಟ ಲೌಕಿಕತೆ ಮತ್ತು ಐಂದ್ರಿಯಿಕತೆಯ ಮಾತುಗಳಾಗಿ ಕಾಣುತ್ತವೆ. ಆದರೆ ಇವು ಆದಿಕೇಶವನ ಚರಣಕಮಲವನು ಸೇರಿಕೊಳ್ಳದೆ ಬಣಗು ದೈವಗಳಿಗೆ ಶರಣೆಂದರೇನು ಶರಣೆನದಿದ್ದರೇನು ಎಂಬ ಹೇಳಿಕೆಯ ಪೂರ್ವ ಪೀಠಿಕೆಗಳಾಗಿ ದುಡಿಯುತ್ತವೆ. ಹಾಗೆಯೇ ಮಕ್ಕಳಿಲ್ಲದ ಸಿರಿಯು ಕೊಳೆತ ತೆಂಗಿನ ತುರಿಯು....... ಉಂಡು ನಗದಿಹ ಮೋರೆ ಅದು ಕಹಿಯ ಸೋರೆ (172) ಇಂತಹ ಮಾತುಗಳು ಕೂಡ ಆದಿಕೇಶವನ ಪಾದ ಭಜಿಸದ ನರನು ಅವನೆ ವಾನರನು ಎಂದು ಹೇಳುವುದಕ್ಕೆ ಪೂರ್ವಪೀಠಿಕೆಯಾಗಿ ಬಳಕೆಯಾಗಿವೆ.

ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ, ವೇದಶಾಸ್ತ್ರ ಪಂಚಾಂಗ ಓದಿಕೊಂಡು ಬೋಧನೆಯ ಮಾಡುವುದು, ಅಂಗಡಿ ಮುಂಗಟ್ಟನೂಡಿ ಭಂಗಬಿದ್ದು ಗಳಿಸುವುದು ಎಲ್ಲವೂ ಹೊಟ್ಟೆ ಬಟ್ಟೆಗಾಗಿ ಎಂದು ಹೇಳುವಾಗ ಈ ಮಾತುಗಳು ಪ್ರಖರ ಲೌಕಿಕತೆಯ ಮಾತುಗಳಂತೆಯೇ ಕೇಳಿಸುತ್ತವೆ. ಆದರೆ ಉನ್ನತ ಕಾಗಿನೆಲೆಯಾದಿಕೇಶವನ ಧ್ಯಾನವನ್ನು ಮನಮುಟ್ಟಿ ಮಾಡುವುದು ಮುಕ್ತಿಗಾಗಿ ಆನಂದಕ್ಕಾಗಿ ಎಂಬ ಹೇಳಿಕೆಯನ್ನು ಕೇಳಿದ ಕೂಡಲೆ ಹೊಟ್ಟೆಗಾಗಿ ಬಟ್ಟೆಗಾಗಿ ಮಾಡುವ ಎಲ್ಲ ಕಾಯಕಗಳೂ ಅರ್ಥವಿಲ್ಲದವು–ಮೋಕ್ಷ ಮತ್ತು ಅದರಿಂದ ಒದಗುವ ಚಿರ ಆನಂದವೇ ಉನ್ನತವಾದುದು ಎಂಬ ತೀರ್ಪು ಮನಸ್ಸಿಗೆ ರಾಚುತ್ತದೆ.

ಅಂದರೆ ಲೌಕಿಕತೆ-ಐಂದ್ರಿಯಕತೆಗಳ ನಿರೂಪಣೆಗಳೆಲ್ಲವೂ ಭಕ್ತಿ ಎಂಬ ಸ್ಥಿತಿಯನ್ನು ಮುಟ್ಟಿದ ಸಾಧನವಾಗಿ ಕೇಶವಾಂಕಿತ ಕೀರ್ತನೆಗಳಲ್ಲಿ ಪ್ರತಿಪಾದಿತವಾಗಿದೆ. ಅಂದರೆ ಲೌಕಿಕ ಕಾಯಕಗಳ, ಐಂದ್ರಿಯಿಕ ಕಾಯಕಗಳ ಮೂಲಕವೆ ಭಕ್ತಿ ಮಾಡಲು ಸಾಧ್ಯವಿಲ್ಲ; ಹೊಟ್ಟೆ ಬಟ್ಟೆಗಳನ್ನೂ ಮೀರಿದ ಹರಿಸೇವೆಯೇ ಉನ್ನತವಾದ ಕಾಯಕ ಎಂದು ಈ ರಚನೆಗಳು ಪ್ರತಿಪಾದಿಸುತ್ತವೆ. ಹಾಗೆ ಅಟ್ಟ ಹತ್ತಲಾದರೂ ಮೆಟ್ಟಿಲು ಬೇಕಲ್ಲವೆ?

ಪ್ರಖರ ವೈಚಾರಿಕತೆಯನ್ನು ಪ್ರದರ್ಶಿಸುವ ಮಾತುಗಳು ಕೀರ್ತನೆ-ಹರಿಭಕ್ತಿಸಾರಗಳಲ್ಲಿ ಅಲ್ಲಲ್ಲಿ ಬಂದು ಹೋಗುತ್ತವೆ. ಆದರೂ ಅವೆಲ್ಲವೂ ಸಮಷ್ಟಿಯಾಗಿ ಲೋಕದ ಆಚಾರ ಸಂಹಿತೆಯನ್ನು ಕಟ್ಟುವ ಕೆಲಸ ಮಾಡದೆ ಲೋಕವನ್ನು ಮಾಯೆ ಎಂದು ಭಾವಿಸುತ್ತವೆ. ತಾತ್ಕಾಲಿಕ ನೀತಿಗೆ ಮಾತ್ರ ಸೀಮಿತವಾಗಿ ಭಕ್ತಿ ಮಾರ್ಗಕ್ಕೇ ಮಾನವರನ್ನು ಒಯ್ಯುವ ಕೆಲಸ ಮಾಡುತ್ತವೆ. ಒಟ್ಟು ಮಾನವ ಬದುಕಿನ ಉದ್ದೇಶವಾದರೂ ಏನು? ಎಂಬ ತೀವ್ರ ಜಿಜ್ಞಾಸೆ ನಡೆಸುವ ಹಲವು ಕೀರ್ತನೆಗಳು (92, 112, 118) ಕೊನೆಗೆ ಮಾಯೆಯಿಂದ ಮುಕ್ತಿಗೆ ಬಂದು ನಿಲ್ಲುತ್ತವೆ. ತಲ್ಲಣಿಸದಿರು ಕಂಡ್ಯ ತಾಳು ಮನವೆ ಬಲ್ಲಿದನು ಕಾಗಿನೆಲೆಯಾದಿ ಕೇಶವರಾಯ ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ ಎಂಬ ಮಾತುಗಳು ನಿಜವಾಗಿಯೂ ಮೇಲ್ನೋಟಕ್ಕೆ ಸುಂದರವಾಗಿ ಕಂಡರೂ ಅಂತಿಮವಾಗಿ ಇವು ಜೀವವಿರೋಧಿಯೂ, ನಿಷ್ಕ್ರಿಯವಾದಿಯೂ, ಯಥಾಸ್ಥಿತಿವಾದಿಯೂ ಆಗಿವೆ.

ಕಲಿಕಾಲ ಬಂದು ಎಲ್ಲ ಜನ ಕೆಟ್ಟು ಹೋಗಿದ್ದಾರೆ; ಹೀಗಾದರೆ ಈ ಲೋಕದ ಗತಿ ಏನು? ಎಂದು ತಲ್ಲಣಿಸುವ ಮನಸ್ಸು ಈ ಕೀರ್ತನೆಗಳಲ್ಲಿದೆ. ಆದರೆ ಅದೂ ಕೂಡ ಯಾಜಮಾನೀಯ ಮೌಲ್ಯಗಳತ್ತಲೇ ಎಳೆದುಕೊಂಡು ಹೋಗುತ್ತದೆ! ಈ ತಲ್ಲಣದಲ್ಲಿ ಭಕ್ತಿಯಿಂದ ವೇದಶಾಸ್ತ್ರ ಓದುವುದು ಒಂದು ಮೌಲ್ಯವಾಗಿದೆ (176) ಸತ್ಯಧರ್ಮಗಳೆಲ್ಲ ಎತ್ತ ಪೋದವೋ ಕಾಣೆ ಉತ್ತಮರ ಜೀವನಕೆ ದಾರಿಯಿಲ್ಲ (178) ಎಂಬ ಆತಂಕವು ವೇದವಿಪ್ರರು ತಿರಿದು ತಿನ್ನುವ ಕಾಲ ಬಂತಲ್ಲ ಎಂದು ಚಿಂತೆ ಮಾಡುತ್ತದೆ! ಭೂಸುರತ್ವವ ಹ್ರಾಸ ಮಾಡಿದ ಫಲ ಏಸೇಸು ಜನುಮವ ಬಿಟ್ಟೀತೇ (180) ಎಂಬ ಎಚ್ಚರಿಕೆಯನ್ನೂ ಈ ಕಲಿಕಾಲದ ಆತಂಕ ನೀಡುತ್ತದೆ. ಗಂಡಸರೆಲ್ಲ ವೇಳೆಗೆ ಬರುವ ಹೆಂಡತಿಯನ್ನು ನೆಚ್ಚಿಕೊಳ್ಳದೆ ಸೂಳೆಯರ ಹತ್ತಿರ ಕಾಲ ಕಳೆಯುವ, ಪತಿವ್ರತೆಯರೇ ಅಪರೂಪ ಆಗುತ್ತಿರುವ, ಅತ್ತೆಯೇ ಸೊಸೆಯಾಗಿ, ಸೊಸೆಯೇ ಅತ್ತೆಯಾಗಿ, ಹೆಂಡತಿಯೇ ಗಂಡನಾಗಿ ವರ್ತಿಸುವ ಕಲಿಕಾಲ ಬಂತಲ್ಲಾ ಎಂಬ ಆತಂಕವೂ ಇಲ್ಲಿದೆ. ತನ್ನ ಕಾಂತನ ಬಿಟ್ಟು ಸ್ತ್ರೀಯರು ಅನ್ಯರಿಗೆ ಮನವೆರಗಿ ಮೋಹಿಪರು ಎನ್ನುವವರೆಗೆ ಆತಂಕಕ್ಕೆ ಅರ್ಥವಿದೆ ಎನ್ನಿಸುತ್ತದೆ. ಬಣ್ಣಗೆಟ್ಟಿತು. ವರ್ಣತಪ್ಪಿತು ಎನ್ನುವಾಗ ಈ ಮಾತಿನ ಮೌಲ್ಯರಾಜಕಾರಣ ಯಥಾಸ್ಥಿತಿವಾದಿ ಆಗುತ್ತಿದೆ ಎನ್ನಿಸುತ್ತದೆ (189). ವೇದವಿಪ್ರರು ವೃತ್ತಿಸುಖವನ್ನು ಕಳೆದುಕೊಳ್ಳದೆ

ಇರುವ; ವರ್ಣತಪ್ಪದೇ ಇರುವ ಹಾಗೆ ಸಮಾಜವನ್ನು ಕಾಯ್ದುಕೊಳ್ಳುವ ಕಾಳಜಿ ಮತ್ತು ತಲ್ಲಣಗಳು ಇಂದಿಗೆ ಪ್ರಸ್ತುತವೇ ಅಲ್ಲ. ಇದೆಲ್ಲವೂ ಭಕ್ತಿಯ ಹೆಸರಿನ ಪರಿವಾರ ರಾಜಕಾರಣವೆ.

ನಿಜಗುಣ ಕವಿಯ ಅನುಭವಸಾರ, ಅನುಭವಭೋದೆ, ಕೃಷ್ಣಪ್ರಭುವಿನ ಅನುಭವ ರಸಾಯನ, ಮಹಲಿಂಗರಂಗನ ಅನುಭವಾಮೃತ, ಮುಪ್ಪಿನ ಷಡಕ್ಷರಿಯ ತಿರುಕನ ಕನಸು, ಸೋಮೇಶ್ವರ ಕವಿಯ ಸೋಮೇಶ್ವರ ಶತಕ ಹೀಗೆ ನೀತಿಬೋಧನೆಯನ್ನೆ ಪ್ರಧಾನ ಉದ್ದೇಶ ಆಗಿಸಿಕೊಂಡ ಕೃತಿಗಳ ಒಂದು ದೊಡ್ಡ ಪರಂಪರೆಯೆ ನಮ್ಮಲ್ಲಿದೆ. ಕನಕದಾಸರ ಹರಿಭಕ್ತಿ ಸಾರ ಇವುಗಳಿಗೆಲ್ಲ ಆದ್ಯ ಕೃತಿ. ನೀತಿಯನ್ನು ಭೋದಿಸುವುದರ ಜೊತೆಗೆ ಹರಿಭಕ್ತಿಯನ್ನೂ ಪ್ರಸಾರ ಮಾಡುವುದು ಇದರ ಉದ್ದೇಶ. ಇದೊಂದೆ ಅಲ್ಲದೆ ತತ್ವಪದಗಳ ಧಾಟಿಯ ಹಲವು ರಚನೆಗಳೂ ಕೇಶವಾಂಕಿತದಲ್ಲಿ ಇವೆ. ಇವೆಲ್ಲವೂ ಭಕ್ತಿಯ ಮೂಲಕ ವ್ಯಕ್ತಿ–ಸಮುದಾಯಗಳ ನಡಾವಳಿ, ಸದಾಚಾರಗಳನ್ನು ಕುರಿತು ತಮ್ಮದೆ ಆಚಾರ ಜಿಜ್ಞಾಸೆಯನ್ನು ಮಂಡಿಸಿವೆ.

ಸತ್ಯಭಕ್ತಿ ಮತ್ತು ಡಂಭಾಚಾರಗಳ ಚರ್ಚೆಯ ಮೂಲಕ ಕೆಲವು ಸ್ಥಾಪಿತ ಕಂದಾಚಾರಗಳನ್ನೂ, ಕುರುಡು ನಂಬಿಕೆಗಳನ್ನು ಕೇಶವಾಂಕಿತ ರಚನೆಗಳು ನಿರಾಕರಿಸುತ್ತವೆ. ಪ್ರಾಣಿ ಬಲಿ, ಬೆತ್ತಲೆ ಪೂಜೆ, ಸಿಡಿಯಾಡುವುದು, ಕೊಂಡ ಹಾಯುವುದು ಮೊದಲಾದ (203), ತಳಸಮುದಾಯಗಳ ಕಂದಾಚಾರಗಳನ್ನು ನಿರಾಕರಿಸುವ ಜೊತೆಗೆ ತೀರ್ಥಯಾತ್ರೆ, ತೀರ್ಥಸ್ನಾನ (118), ಪಿಂಡದಾನ, ಮಂತ್ರಾಕ್ಷತೆ ಹಾಕಿ ಹರಸುವುದು ಮೊದಲಾದ (198–199) ವೈದಿಕ ಕಂದಾಚಾರಗಳನ್ನು ಇವು ನಿರಾಕರಿಸುತ್ತವೆ. ತನ್ನ ತಾನರಿತುಕೊಂಬುದೆ ಒಂದು ಸ್ನಾನ, ಭೇದಾಭೇದವಳಿದರೆ ಒಂದು ಸ್ನಾನ (198) ಎಂಬ ಮಾತುಗಳ ಜೊತೆಗೆ ಇಲ್ಲಿ (208) ಭುವನಕ್ಕೆ ಹರಿಹರರು ಏಕಸ್ಥರು (192) ಸುತರಿಲ್ಲದೆ ಸದ್ಗತಿ ಇಲ್ಲವೆಂಬುದು ಕೃತಕಶಾಸ್ತ್ರ ಎಂಬ ಮಾತುಗಳೂ ಇವೆ. ಪ್ರಖರ ವೈಚಾರಿಕತೆಯನ್ನು ಪ್ರದರ್ಶಿಸುವ ಮಾತುಗಳಿವು. ಆದರೆ ಇಂತಹ ಕೀರ್ತನೆಗಳ ಸಂಖ್ಯೆ ಬಹಳ ವಿರಳ. ಇವೆಲ್ಲವೂ ಇಂದಿಗು ನಮಗೆ ನಿಜಕ್ಕು ಆದರಣೀಯ. ಇವು ಪ್ರತಿಪಾದಿಸುವ ತತ್ವಗಳ ಕಾರಣಕ್ಕೆ.

ಭಕ್ತಿಯ ನೆಪದಲ್ಲಿ ನೀತಿಯನ್ನು ಹೇಳಲು, ಆಚಾರಸಂಹಿತೆಯನ್ನು ಹೇಳಲು ಮತ್ತು ಆ ಮೂಲಕ ತತ್ವಜ್ಞಾನವೊಂದನ್ನೆ ಮಂಡಿಸಲು ಹಲವು ಪದಗಳಲ್ಲಿ ಯತ್ನಿಸಲಾಗಿದೆ. (190) ದಾನ ಧರ್ಮವ ಮಾಡು, ಪರೋಪಕಾರ ಮರೆಯಬೇಡ, ನಂಬಿದವರಿಗೆ ಕೇಡು ಬಯಸಬೇಡ, ಹಾಳು ಸಂಸಾರಕ್ಕಾಗಿ ಹಲವರ ಬಾಯಿ ಬಡಿಯಬೇಡ, ಮೂಢರ ಒಡನಾಟ ಮಾಡಬೇಡ, ಚೆನ್ನಾಗಿ ಗಳಿಸಿದೆಯೆಂದು ಗರ್ವ ಪಡಬೇಡ, ಒಬ್ಬರಂತೆ ಎಲ್ಲರನ್ನು ನೋಡು, ಸತ್ಕರ್ಮ ಮಾಡಿದೆನೆಂದು ಉಬ್ಬಿ ಮೆರೆಯಬೇಡ, ಹೆಣ್ಣು, ಹೊನ್ನು, ಮಣ್ಣು ಎಲ್ಲವೂ ನಮ್ಮನ್ನು ಆಗಲಿ

ಹೋಗುತ್ತವೆ. ಸಾವು ಯಾವಾಗ ಬರುತ್ತದೆಯೋ ಗೊತ್ತಿಲ್ಲ; ಪೂರ್ವದ ಪುಣ್ಯ ಮಾತ್ರವೇ ನಮ್ಮೊಂದಿಗೆ ಬರುವುದು ಆದ್ದರಿಂದ ನೀನು ಆದಿಕೇಶವನ ಭಕ್ತನಾಗು (190) ಹೀಗೆ ಪುಣ್ಯವನ್ನು ಗಳಿಸುವುದೇ ಜೀವನದ ಗುರಿ ಎಂಬ ತತ್ವವನ್ನು ಇಲ್ಲಿ ಹೇಳಲಾಗುತ್ತಿದೆ. ಈ ಪುಣ್ಯ ಅನ್ನುವುದಾದರು ಏನು? ನೀತಿಯಿಂದ ಬಾಳುವ ಮೂಲಕ ಸಂಪಾದಿಸಬಹುದಾದ ಸತ್ಕರ್ಮವೇ, ಸತ್ಫಲವೇ ಪುಣ್ಯ. ಇಂತಹ ಒಳ್ಳೆಯ ಆಚಾರ ಸಂಹಿತೆಗಳನ್ನು ರೂಪಿಸುವುದು ಕೇಶವಾಂಕಿತ ರಚನೆಗಳ ಒಂದು ಗುರಿ. ಈ ಪದಗಳು ಆಚಾರಸಂಹಿತೆಯನ್ನು ಕಟ್ಟಿಕೊಡುವಾಗ ಕೆಲವು ನಂಬಿಕೆಗಳನ್ನು ಪೋಷಿಸುತ್ತವೆ ಮತ್ತು ಕೆಲವನ್ನು ಪಶ್ನಿಸುತ್ತವೆ. ರಾಜ್ಯದ ಅಧಿಕಾರವನ್ನು, ಪ್ರಭುತ್ವವನ್ನು ಪ್ರಶ್ನಿಸುವುದು ಮತ್ತು ಅದು ಅಲ್ಪವಾದದ್ದು ಎಂಬ ನಂಬಿಕೆಯನ್ನು ಮೂಡಿಸುವುದು ಇವುಗಳ ತತ್ವರಾಜಕಾರಣದ ಒಂದು ಉದ್ದೇಶ.

ಕೇಶವಾಂಕಿತದಲ್ಲಿ ಇರುವ ರಚನೆಗಳೆಲ್ಲ ಬರಿ ಹರಿನಾಮ ಸಂಕೀರ್ತನೆ, ಸ್ತುತಿಗಳಲ್ಲ. ನಿಂದಾಸ್ತುತಿಗಳಲ್ಲ. ಇವುಗಳಲ್ಲಿ ಹಲವಾರು ತತ್ವಪದಗಳಿವೆ. ನೆಪಮಾತ್ರಕ್ಕೆ ಕೊನೆ ಸಾಲಿನ ಅಂಕಿತದಲ್ಲಿ ಮಾತ್ರ ಭಕ್ತಿಲೇಪ ಇರುವ ಅಪ್ಪಟ ಲೌಕಿಕ ಹಾಡುಗಳೂ ಇವೆ. ಪೋಗದೊ ಛಳಿ ಪೋಗದೋ ಎಂಬುದು ಅಂತಹ ಒಂದು ಪದ. ಇದು ಸಂಸಾರ ನಿರಾಕರಣೆ ತತ್ವಕ್ಕೆ ತದ್ವಿರುದ್ಧವಾಗಿದೆ. ಹಳೆಯ ಹಚ್ಚಡ ಬಿಳಿಯ ಕಂಬಳಿ ಹೊದ್ದ ಮಾತ್ರಕ್ಕೆ ಛಳಿ ಹೋಗುವುದಿಲ್ಲ, ನಳಿನಾಕ್ಷಿಯನ್ನು ತೊಡೆಯ ಮೇಲೆ ಕೂರಿಸಿಕೊಂಡು ಕಳಸ ಕುಚದ ಮೇಲೆ ಕೈಯಿಟ್ಟರೆ ಮಾತ್ರ ಛಳಿ ಹೋಗುತ್ತದೆ. ಬಡನಡುವಿನ ಬಟ್ಟಕುಚದ ಕಾಮಿನಿ ನಲ್ಲನ ಬಳಿಗೆ ನಗುತ್ತ ಬಂದಾಗ ಅವಳನ್ನು ಮೋಹದಿಂದ ಹಿಡಿದು ಎತ್ತಿ ನಡುಮಂಚದ ಮೆಲೆ ಕೆಡವಿಕೊಂಡಲ್ಲದೆ ಛಳಿ ಹೋಗುವುದಿಲ್ಲ. (188) ಇಂತಹ ರಚನೆ ಕೇಶವನ ನಿಂದಾಸ್ತುತಿಯೆ ಹೌದಾದರೂ ಇದರ ಸತ್ವ, ತಿರುಳು ಭಕ್ತಿ ಮಾತ್ರ ಎನ್ನಲು ಬರುವುದಿಲ್ಲ. ಇಲ್ಲಿ ಹರಿಹರ ಇಬ್ಬರ ಪ್ರಸ್ತಾಪವೂ ಬರುತ್ತದೆ. ಗಂಗೆಯನ್ನು ದಡಕ್ಕನೆ ಬಿಸಾಡಿದ ಪ್ರಸ್ತಾಪವೂ ಬರುತ್ತದೆ. ಕೇಶವನನ್ನೆ ಈ ಕಳಿಯ ಆಂತರ್ಯ ಏನು ಸ್ವಲ್ಪ ನೀನೆ ತಿಳಿದು ಹೇಳಯ್ಯ ಎಂದೂ ಇಲ್ಲಿ ಪ್ರಶ್ನಿಸಲಾಗಿದೆ. ಕಳಿ ಎಂದರೆ 'ಕಲೆ' ಅಥವಾ ಲೀಲೆ. ದೈವಲೀಲೆಯನ್ನೆ ಇಲ್ಲಿ ಪ್ರಶ್ನಿಸಲಾಗುತ್ತಿದೆ. ಅಪರೂಪದ ಇಂತಹ ಒಂದೆರಡು ರಚನೆಗಳೂ ಕೇಶವಾಂಕಿತದಲ್ಲಿ ಇವೆ.

ನೀ ಮಾಯೆಯೊಳಗೊ ನಿನ್ನೊಳು ಮಾಯವೊ ಎಂಬ ರಚನೆ ಇರಬಹುದು, ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ ಎಂಬ ರಚನೆ ಇರಬಹುದು, ತನ್ನ ತಾನರಿತುಕೊಂಬುದೆ ಒಂದು ಸ್ನಾನ ಎಂಬ ರಚನೆ ಇರಬಹುದು, ಕುಲಕುಲವೆಂದು ಹೊಡೆದಾಡದಿರಿ, ತೀರ್ಥ ಪಿಡಿದವರೆಲ್ಲ ತಿರುನಾಮಧಾರಿಗಳೆ ಭಂಗಿಮುಕ್ಕಗಳೆಲ್ಲ ಲಿಂಗವಂತರೆ; ಊರಿಗೆ ಬಂದರೆ ದಾಸಯ್ಯ ನಮ್ಮ ಕೇರಿಗೆ ಬಾ ಕಂಡ್ರ ದಾಸಯ್ಯ; ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ; ನಿಚ್ಚಣಿಗೆ ದೋಟಿಗೆ ನಿಲುಕದ ವೃಕ್ಷ ನಿಚ್ಚನಿಚ್ಚವು ಬಾಗಿ ಫಲವಾದರೇನು; ಆರು ಬದುಕಿದರಯ್ಯ ಹರಿ

ನಿನ್ನ ನಂಬಿ? ಆದಿಕೇಶವನ ಭಜಿಸಿದರೆ ತಿರಿವೆನೆಂದರೂ ತಿರುಪೆ ಕೂಳ್ ಪುಟ್ಟದೋ ಕೃಷ್ಣಾ; ನಾಮ ಮುಂದೋ ಸ್ವಾಮಿ ವಿಭೂತಿ ಮುಂದೋ?; ನೊಂದೆ ನಾ ಹರಿಯೆನ್ನದೆ ಇಂತಹ ಅನೇಕ ರಚನೆಗಳು ಮೇಲ್ನೋಟಕ್ಕೆ ಕೀರ್ತನೆಗಳಂತೆ ಕಾಣುತ್ತವೆ. ಆದರೆ ಇವು ಬರಿ ಹರಿನಾಮ ಸಂಕೀರ್ತನೆಗಳಲ್ಲ. ಮಾನವ ಬದುಕಿನ ಕ್ರಮಗಳು ಹೇಗಿರಬೇಕು ಎಂದು ಸೂಚಿಸುವ ಭಿನ್ನ ಸಾಂದರ್ಭಿಕ ತತ್ವಮಂಡನೆಯ ರಚನೆಗಳಿವು. ವ್ಯಕ್ತಿ ಮತ್ತು ಸಮುದಾಯ ನೆಲೆಯ ಚಾರಿತ್ರ್ಯವನ್ನು ನಿರೂಪಿಸುವ ನಿರೂಪಣೆಗಳಿವು. ಇವುಗಳು ಮಾಡುವ ತತ್ವರಾಜಕಾರಣ ಮತೀಯ ಅಲ್ಲ. ಪಾಂಥಿಕ ಅಲ್ಲ, ನೈತಿಕ ಆದುದು.

ಅಂದರೆ ಕೇಶವಾಂಕಿತ ರಚನೆಗಳ ತತ್ವರಾಜಕಾರಣ ಮಾಧ್ವ ತತ್ವವನ್ನಾಗಲೀ, ಶಂಕರ ತತ್ವವನ್ನಾಗಲೀ, ರಾಮಾನುಜರ ಮತವನ್ನಾಗಲೀ, ಅಥವಾ ಕನಕತತ್ವವನ್ನಾಗಲೀ ಹೀಗೆ ಒಂದು ತತ್ವವನ್ನು ಪ್ರತಿಪಾದಿಸುವುದಲ್ಲ. ಇವುಗಳ ತತ್ವರಾಜಕಾರಣ ಬಹುರೂಪಿಯಾದುದು. ಚಲನಶೀಲ ಆದುದು. ಆದರೆ ಇಂತಹ ಬಹುರೂಪತೆಯನ್ನು ಧರಿಸಿರುವ ರಚನೆಗಳ ಪ್ರಮಾಣ ಇಲ್ಲಿ ಕಡಿಮೆ ಅಷ್ಟೆ.

ಭೋಗಿಸದೆ ಸುಮ್ಮನೆ ಇಹಕ್ಕಾಗಲೀ, ಪರಕ್ಕಾಗಲಿ ಗಳಿಸಿದ ಸಂಪತ್ತು, ನಿಜಕ್ಕು ವ್ಯರ್ಥ–ಅಪಾರ್ಥ (174), ಉಣ್ಣುವುದಕ್ಕೆ ಉಡುವುದಕ್ಕೆ ಇಲ್ಲದೆ ಅರಸನ ಓಲಗದಲ್ಲಿ ಇರುವುದಕ್ಕಿಂತ ತುಂಬಿದ ಊರೊಳಗೆ ತಿರಿದು ಉಣ್ಣುವುದೆ ಲೇಸು (169), ಧರ್ಮದಿಂದ ಬಾಳದೆ ಇರುವ ಅರಸ ಕಿತ್ತು ಹೋದ ಕೆರಕ್ಕೆ ಸಮಾನ (171), ಒಕ್ಕಲ ಮಕ್ಕಳಿಗೆ ಸಹಾಯ ಮಾಡದೆ ಇರುವ ಗೌಡ ಮೇಲೆರಗಿ ಕುಕ್ಕುವ ರಣಹದ್ದಿನ ಹಾಗೆ (192), ಅಲ್ಪ ದೊರೆಗಳ ಜೀತ ಎಷ್ಟು ಮಾಡಿದರೇನು (173), ಮಹಡಿ ಮೇಲೆ ಮಹಡಿ ಕಟ್ಟಿ ಪಲ್ಲಕ್ಕಿಯಲ್ಲಿ ಸಾಗಿ ಮಂದಿ ಮಾರ್ಬಲ ಕೂಡಿ ಮೆರೆಯುವ ದೊರೆತನದ ಜನ ಕೂಡ ಮಾಡುವುದು ಹೊಟ್ಟೆ ಬಟ್ಟೆಗಾಗಿಯೆ (175), ದಾನ ಧರ್ಮ ಪರೋಪಕಾರ ಮಾಡು ಹೀನವಾಗಿ ಕೆಡಬೇಡ, ಜ್ಞಾನವಿಲ್ಲದೆ ಹೀನ ದೈವವ ಭಜಿಸಬೇಡ (182) ಇಂತಹ ಹಲವು ಆಚಾರ ಸಂಹಿತೆಗಳು ಖಂಡಿತವಾಗಿಯೂ ಅಲೌಕಿಕವನ್ನು/ ಆಗಮಿಕವನ್ನು ವೈಭವಿಸುವುದಿಲ್ಲ. ಲೌಕಿಕವನ್ನೆ ಹಸನು ಮಾಡುವ ಉದ್ದೇಶ ಹೊಂದಿವೆ. ಅಷ್ಟೆ ಅಲ್ಲ ದಾನ, ಅಪರಿಗ್ರಹ ತತ್ವಗಳನ್ನು ಪ್ರತಿಪಾದಿಸುತ್ತವೆ. ಜೊತೆಗೆ ಅಲ್ಪ ದೊರೆಗಳ ಜೀತ ಮತ್ತು ಹೀನದೈವಗಳ ಭಜನೆ ಎರಡನ್ನೂ ಇವು ವಿರೋಧಿಸುತ್ತವೆ. ದೊರೆತನವನ್ನು ಇಷ್ಟು ನೇರ ಮತ್ತು ಕಟುವಾದ ಮಾತುಗಳಲ್ಲಿ ನಿಂದಿಸಿರುವ ರಚನೆಗಳು ವಚನಗಳನ್ನು ಬಿಟ್ಟರೆ ಕೀರ್ತನೆಗಳೆ. ಪ್ರಭುತ್ವವನ್ನು ಅಲ್ಪವೆಂದು ಕರೆಯುವ, ಅಧರ್ಮಿ ರಾಜನನ್ನು ಕಿತ್ತುಹೋದ ಕೆರಕ್ಕೆ ಹೋಲಿಸುವ ಧೈರ್ಯ ಬಹಳ ದೊಡ್ಡದು. ದೈವ ಭಕ್ತಿಯನ್ನು ಅಸ್ತ್ರವಾಗಿ ಇಟ್ಟುಕೊಂಡು ದೊರೆತನವನ್ನು ಹಣಿಯುವ ಪ್ರತಿರಾಜಕಾರಣ ಇದು. ಇಂತಹ ಪ್ರತಿರಾಜಕಾರಣವನ್ನು ಕೆಲವು ಕೇಶವಾಂಕಿತ ರಚನೆಗಳು ಜೋರಾಗಿ ಮಾಡಿವೆ.

ತತ್ವಕ್ಕಾಗಿ ಹೇಳುವ ತತ್ವಗಳನ್ನು ಇವು ಪ್ರತಿಪಾದಿಸುವುದಿಲ್ಲ. ನಿಜವಾದ ಆಚಾರವನ್ನು ಪ್ರತಿಪಾದಿಸುತ್ತವೆ.

ಧರ್ಮಮಾರ್ಗ ಮತ್ತು ದುರ್ಮಾರ್ಗಗಳ ಚರ್ಚೆ ಕೆಲ ರಚನೆಗಳಲ್ಲಿ ಪ್ರಧಾನವಾಗಿದೆ. ಕೆಲವೊಮ್ಮೆ ಸಮಾಜ ದುರ್ಮಾರ್ಗಗಳನ್ನೆ ಹಿಡಿದಾಗ ಜೋರು ದನಿಯಲ್ಲಿ ಗದರಿಸಲೂಬೇಕಾಗುತ್ತದೆ. ಕೆಲವೊಮ್ಮೆ ಎಚ್ಚರಿಕೆಗಳನ್ನೂ ನೀಡಬೇಕಾಗುತ್ತದೆ. ಇಂತಹ ಎಚ್ಚರಿಕೆ ನೀಡುವ ತತ್ವಪದಗಳ ಉದ್ದೇಶ ಭಕ್ತಿಯ ಹೆಸರಿನಲ್ಲಿ ವೈರಾಗ್ಯವನ್ನು ಬದುಕಿನಿಂದ ನಿವೃತ್ತ ಆಗುವುದನ್ನು ಹೇಳುವುದಲ್ಲ. ಸರಿಯಾದ ಬದುಕಿನ ದಾರಿಗಳನ್ನು ಕಟ್ಟಿಕೊಡುವುದು. ಯಾವ ಯಾವ ತಪ್ಪು ಮಾಡಿದವನಿಗೆ ಏನೇನು ರೋಗ ಬರುತ್ತವೆ ಎಂದು ಹೇಳುವ ಒಂದು ಹಾಡಿದೆ. ಅಲ್ಲಿ ಕೆರೆಗಳನ್ನು ಒಡೆಸಿದವನಿಗೆ ಶೀತಜ್ವರ, ಹಸಿದವರಿಗೆ ಅನ್ನವಿಕ್ಕದೆ ಹೋಗುವವನಿಗೆ ಆಮ್ಲಪಿತ್ತ, ಮದುವೆಗಳನ್ನು ಕೆಡಿಸಿದವನಿಗೆ ಕುಷ್ಠರೋಗ, ಮತಭೇದ ಮಾಡಿದವನಿಗೆ ಮೂಲವ್ಯಾಧಿ, ಹರಿಹರ ಭೇದ ಮಾಡಿದವನಿಗೆ ದಂತಚ್ಯುತಿ ಹೀಗೆ ಹಲವು ತಪ್ಪುಗಳಿಗೆ ಹಲವು ರೋಗ ಬರುತ್ತವೆ ಎಂದು ಹೆದರಿಸಲಾಗಿದೆ. (185) ಇವೆಲ್ಲವೂ ಬಲು ಜೋರಾದ ಆಚಾರ ಸಂಹಿತೆಯನ್ನು ಸ್ಥಾಪಿಸುವ ನೀತಿಪದಗಳು. ಮನುಷ್ಯ ಹೇಗೆ ಬಾಳಬೇಕು ಎಂದು ಹೇಳುವಾಗ ಕನಕನು ಬಾಳಿದ ಬಾಳು ಒಂದನ್ನೆ ಅತ್ಯುತ್ತಮ ಬಾಳಿನ ಕ್ರಮ ಎಂದೇನೂ ಈ ರಚನೆಗಳು ಪ್ರತಿಪಾದಿಸುತ್ತಿಲ್ಲ. ಎಲ್ಲರ ಬಾಳಿನಲ್ಲು ಇರಬೇಕಾದ ಕೆಲವು ಸಾಮಾನ್ಯ ನೀತಿ ತತ್ವಗಳು ಯಾವುವು ಎಂಬ ಆಚಾರ ಸಂಹಿತೆಯನ್ನು ಈ ರಚನೆಗಳು ಮುಂದೆ ಒಡ್ಡುತ್ತಿವೆ. ಅದೂ ಹೆದರಿಸುವ ಮೂಲಕ.

ಆದರೆ ಈ 'ತಪ್ಪುಗಳು' ಎಂಬ ಕಲ್ಪನೆ ಇದೆಯಲ್ಲ ಇದರ ಒಳಕ್ಕೆ ಕೆಲವೊಮ್ಮೆ ಸಾಮಾಜಿಕ ನ್ಯಾಯದ ಪ್ರಶ್ನೆಯೇ ಇಲ್ಲದ ಸಂಗತಿಗಳು ಬಂದು ಸೇರಿಕೊಂಡಿರಬಹುದು. ಆಗ ಅವುಗಳನ್ನು ನಾವು ಕೇರಿ ತೂರಿಕೊಳ್ಳಬೇಕಾಗುತ್ತದೆ. ಕೆಲವು ಸಾಲುಗಳನ್ನು ಓದಿಯೂ ಓದದಂತೆ, ಕೆಲವು ಸಾಲುಗಳನ್ನು ಚೆನ್ನಾಗಿ ಓದಿದಂತೆ ಓದಬೇಕಾಗುತ್ತದೆ. ಪುರ, ಅಗ್ರಹಾರ ಕೆಡಿಸಿದವರಿಗೆ ರಾಜರೋಗ ಬರುತ್ತದಂತೆ; ಹಾಗಾದರೆ ಇದನ್ನು ಗಂಭೀರವಾಗಿ ತೆಗೆದುಕೊಂಡರೆ ನಾವು ಬಿ.ಡಿ.ಎ. ಲೇಔಟುಗಳನ್ನು ಮಾಡುವಂತಿಲ್ಲ. ಸ್ವಾಮಿದ್ರೋಹಿಗೆ ಬಹುಮೂತ್ರ ರೋಗವಂತೆ. ಹಾಗಾದರೆ ನಾವು ಯಾರೂ ಆಳಾಗಬಲ್ಲವನು ಅರಸಾಗಬಲ್ಲ ಎಂಬ ಪ್ರಜಾಪ್ರಭುತ್ವ ಮಂತ್ರ ನಂಬುವಂತೆಯೆ ಇಲ್ಲ. ಇಂತಹ ಕೆಲವು ಸಾಲುಗಳನ್ನು ಹಾಡಿನ ಓಟದಲ್ಲಿ ತೇಲಿಸಿ ಓದಿಕೊಳ್ಳಬೇಕಾಗುತ್ತದೆ. ಇಂತಹ ಒಂದೆರಡು ಸಾಲುಗಳನ್ನೆ ಮುಂದು ಮಾಡಿ ಇಡಿ ಹಾಡು ಪರಂಪರೆಯನ್ನೆ ಜರಿಯುವುದು ಸಲ್ಲದು.

ಪುರ, ಅಗ್ರಹಾರ ಕೆಡಿಸಿದವರಿಗೆ ರಾಜರೋಗ, ಸ್ವಾಮಿದ್ರೋಹಿಗಳಿಗೆ ಬಹುಮೂತ್ರರೋಗ ಬರುತ್ತವೆ ಎಂಬ ಬೆದರಿಕೆಯ ಸಾಲುಗಳನ್ನು ಅಲ್ಪದೊರೆಗಳ

ಜೀತ ಎಷ್ಟು ಮಾಡಿದರು ಅಷ್ಟೆ ಎಂಬ ಸಾಲುಗಳನ್ನೆ ಬರೆದ ಕನಕನೆ ಬರೆದಿರಲು ಸಾಧ್ಯವಿಲ್ಲ. ಸ್ವಾಮಿಭಕ್ತಿ ಮತ್ತು ಅಗ್ರಹಾರ ಭಕ್ತಿಗಳು ಹರಿಭಕ್ತಿಯಲ್ಲಿ ಬರುವುದೆ ಇಲ್ಲ. ಎಷ್ಟು ಪ್ರೀತಿಯೊ ಮನಕೆ ಎಷ್ಟು ಪ್ರೀತಿಯೊ ಎಂಬ ಕೀರ್ತನೆಯಲ್ಲಿ (92) 'ಗುರು ಹಿರಿಯರ ಮಾತನ್ನು ಮಾನ್ಯ ಮಾಡಿ ಕೇಳದೆ ಕಿವುಡುಗೆಟ್ಟು ಜೊನ್ನೆಯ ತುಪ್ಪ ಅನ್ನವನ್ನು ತಿನ್ನದೆ ಮಾಂಸವನ್ನು ತಿನ್ನುವ ನಾಯಿಯಾದೆ, ಕೃಷ್ಣಾ ನಿನ್ನ ಮಾಯದಲ್ಲಿ ಸಿಲುಕಿದೆ' ಎಂಬ ಹಳಹಳಿಕೆ ಬರುತ್ತದೆ. ಲೋಕ ಎಂಬುದು ಮಾಯೆ ಇಲ್ಲಿರುವುದು ನಶ್ವರ ಎಂಬ ತತ್ವ ಮಂಡಿಸುವಾಗ ಈ ಮಾತುಗಳು ಬರುತ್ತವೆ. ತಾವು ಬಂದ ಸಮುದಾಯದ ಆಹಾರ ಪದ್ಧತಿಯನ್ನು ಅವಮಾನಿಸುವ, ನಿರಾಕರಿಸುವ ಮತ್ತು ಅದನ್ನು ಹೇಯವೆಂದು ಭಾವಿಸುವ ಮನೋಭಾವ ಈ ರಚನೆಗೆ ಹೇಗೆ ಬಂದು ಸೇರಿತು? ಇಲ್ಲಿ ಬರುವ ಆ ಗುರು ಹಿರಿಯರಾದರೂ ಯಾರು? ಅಹಿಂಸೆಯ ತತ್ವವು ಸಸ್ಯಾಹಾರದ ರಾಜಕಾರಣಕ್ಕೆ ಬಂದು ತಗಲಿಕೊಳ್ಳಬೇಕೆ? ಇದೆಲ್ಲ ಕುರುಬದಾಸರನ್ನು ವೈಷ್ಣವದಾಸರನ್ನಾಗಿ ಮಾಡುವ ರಾಜಕಾರಣವಲ್ಲದೆ ಬೇರೆಯಲ್ಲ.

ಕೇಶವಾಂಕಿತ ರಚನೆಗಳನ್ನು ಹಾಡುವ ಕಾಯಕ ಮಾಡುತ್ತಿದ್ದ (ಮತ್ತು ಪ್ರತಿ ಮಾಡುತ್ತ ಬಂದ) ಯಾರೋ ಸ್ವಾಮಿಭಕ್ತರು ಅಥವಾ ಸ್ವಾಮಿಗಳ ಬಾಲಬಡುಕರು, ಸಸ್ಯಾಹಾರಿಗಳು ಇಂತಹ ಸಾಲುಗಳನ್ನು ಈ ರಚನೆಗಳ ಒಳಕ್ಕೆ ತುರುಕಿದ್ದಾರೆ. ದಾಸ ಆದವರಿಗೆ ಇಷ್ಟಾದರೂ ಅರ್ಹತೆ ಇರಬೇಕು ಎಂಬುದು ಅವರ ಅಭಿಪ್ರಾಯ ಇರಬಹುದು. ಕನಕದಾಸ ರಚಿಸಿದಾಗ ಅವು ಹೇಗೆ ಇದ್ದುವೊ ಹಾಗೆಯೆ ಅವು ಉಳಿದಿರಬೇಕು ಎಂದು ನಾವು ಭಾವಿಸುವುದು ವಾಸ್ತವವಾಗಿ ಸಾಧ್ಯವಿಲ್ಲ. ಆದರೆ ಅವು ಕಾಲಕ್ರಮದಲ್ಲಿ ವರ್ಣಪದ್ಧತಿ ಪರ, ಪ್ರಭುತ್ವಪರ, ಪಂಥಪರ ಮತ್ತು ವರ್ಗಪರ ರಾಜಕಾರಣಗಳಿಗೆ ಗುರಿಯಾಗಿವೆ ಎಂಬುದು ಮಾತ್ರ ನಿಜ. ಕನಕತ್ವವನ್ನೆ ಕಾಲಾನುಕಾಲದಲ್ಲಿ ಒಡೆಯುತ್ತ, ತಿರಿಚುತ್ತ, ಹೈಜಾಕು ಮಾಡುತ್ತ ಅದಕ್ಕೆ ತಿರುನಾಮ ಬಳಿಯುವ ಕೆಲಸ ಮಾಡುತ್ತ ಬಂದಿರುವುರಿಂದ ಕನಕತ್ವ ಎನ್ನುವುದು ಇಂದು ಅವನ ರಚನೆಗಳ ಮೂಲಕ ನಮಗೆ ಸಿಗದಂತೆ ಆಗಿದೆ. ಈಗ ಆ ತಿರುನಾಮವನ್ನು ತೊಡೆಯಲು ಸಾಧ್ಯವಿಲ್ಲದಂತೆ ಆಗಿದೆ. ಯಾಕೆಂದರೆ ಕೇಶವಾಂಕಿತ ರಚನೆಗಳು ಇಂದು ಜಂಗಮ ಪಠ್ಯಗಳಾಗಿ ಉಳಿದಿಲ್ಲ. ಸ್ಥಾವರ ಅಕ್ಷರ ಪಠ್ಯಗಳಾಗಿ ಮುದ್ರಿತ ಆಗಿವೆ. ಭಿನ್ನ ಓದುಗಳು ಮಾತ್ರ ಇಂತಹ ಮಧ್ಯಪ್ರವೇಶ ಒದಗಿಸಬಲ್ಲವು.

ಕನಕನ ರಚನೆಗಳಿಗೆ ಬಳಿದಿರುವ ತಿರುನಾಮಗಳನ್ನು ಅಳಿಸುವ ಓದನ್ನು ಕೈಗೊಳ್ಳುತ್ತ ಅವನ ಮೂರ್ತಿಗೆ ಕಂಬಳಿ ಹೊದೆಸುವ ಕೆಲಸ ಮಾಡಿದರೆ ಅದರಿಂದಲು ಏನೂ ಪ್ರಯೋಜನವಿಲ್ಲ. ಬಸವ ಲಿಂಗಾಯತರ ಐಕಾನು ಆದಂತೆ ಈತ ಕುರುಬರ ಐಕಾನು ಆದಾನು ಅಷ್ಟೆ. (ಆಗ ಕುರುಬರೆಲ್ಲ ವೈಷ್ಣವ ದಾಸಕುರುಬರೆ ಆಗಬೇಕಾದೀತು) ಈಗ ಕುರುಬ ಜಾತಿಗೆ ಸೇರಿದ ಸಿದ್ಧರಾಮಯ್ಯ ಕರ್ನಾಟಕದ ಮುಖ್ಯಮಂತ್ರಿ ಆಗಿರುವಾಗ ಅದೆ ಜಾತಿಗೆ ಸೇರಿದ ಚಿಕ್ಕಣ್ಣನವರು ಕನಕ ಅಧ್ಯಯನ

ಕೇಂದ್ರದ ನಿರ್ದೇಶಕರು ಆಗಿರುವಾಗ ವಿಚಾರಸಂಕಿರಣದಲ್ಲಿ ಕಂಬಳಿ ಹೊದೆಸುವ ಓದು ಮಾಡಿದಲ್ಲಿ ಅದು ಕೂಡ ರಾಜಕೀಯ ನಗದೀಕರಣ ಆದೀತು ಅಷ್ಟೆ. (ಅಂದರೆ ಇದು ಇವರಿಬ್ಬರ ಇಂಟಿಗ್ರಿಟಿ ಅಥವಾ ಜಾತ್ಯತೀತ ಧೋರಣೆಯನ್ನು ಪ್ರಶ್ನೆ ಮಾಡುವ ಮಾತೂ ಅಲ್ಲ) ಒಬ್ಬರಂತೆ ಎಲ್ಲರನ್ನು ಕಾಣು, ಅಲ್ಪ ದೊರೆಗಳ ಜೀತ ಎಷ್ಟು ಮಾಡಿದರು ಅಷ್ಟೆ ಎಂದು ಹೇಳಿದ ಕನಕನಿಗೆ ಇದರಿಂದ ಯಾವ ನ್ಯಾಯವೂ ಸಲ್ಲುವುದಿಲ್ಲ ಅಷ್ಟೆ. ಕನಕನನ್ನು ವೈಷ್ಣವ ಪಂಥಕ್ಕೆ ಕಟ್ಟಿಹಾಕದೆ; ಕುರುಬ ಕುಲಕ್ಕು ಕಟ್ಟಿ ಹಾಕದೆ ಇಡಿ ದಕ್ಷಿಣ ಭಾರತ ಅಲಕ್ಷಿತ ಸಮುದಾಯದ ಆಚಾರಸಂಹಿತೆಯನ್ನು ರೂಪಿಸಲು ಹೆಣಗಿದ ನೇತಾರನನ್ನಾಗಿ ಕಟ್ಟಿಕೊಳ್ಳುವ ಓದುಗಳ ಅವಶ್ಯಕತೆ ಇಂದು ಹೆಚ್ಚು ಅಗತ್ಯವಾಗಿದೆ. ಆದರೆ ಅವನ ರಚನೆ ಮತ್ತು ಜೀವನಚರಿತ್ರೆಗಳಿಗೆ ಬಳಿದಿರುವ ತಿರುನಾಮವನ್ನು ತೊಡೆಯದೆ ಅವನನ್ನು ಇಂದಿನ ಕರ್ನಾಟಕದ ಅಲಕ್ಷಿತ ಸಮುದಾಯದ ಸಾಂಸ್ಕೃತಿಕ ನಾಯಕನನ್ನಾಗಿ ರೂಪಿಸಲು ಸಾಧ್ಯವಿಲ್ಲ. ಅದಕ್ಕಾಗಿ ಅವನ ರಚನೆಗಳು ಬಾಯ್ದೆರೆಯಲ್ಲಿ ಸಂಚಾರ ಮಾಡಿರುವ ಮತ್ತು ಲಿಪಿಕಾರರ, ಪ್ರತಿಕಾರರ, ಅನುಸಂಧಾನಿಗಳೆಲ್ಲರ ಜಾಡುಗಳನ್ನು ಇಂದು ಸಂಶೋಧಿಸಬೇಕಾಗಿದೆ. ಇದು ಇತಿಹಾಸವನ್ನು ಮರುಕಟ್ಟುವ ಕೆಲಸ ಆದಾಗ್ಯೂ ಇದರ ಅಗತ್ಯ ಇದೆ. ಇದು 'ನಿಜ'ವಾದ ಇತಿಹಾಸವನ್ನು ಕಟ್ಟಿಕೊಳ್ಳುವ ಕೆಲಸವೊ, ನಮಗೆ ಬೇಕಾದ ಇತಿಹಾಸವನ್ನು ಕಟ್ಟಿಕೊಳ್ಳುವ ಕೆಲಸವೋ ಏನಾದರೂ ಕರೆಯಿರಿ; ಆ ಕೆಲಸ ಆಗಬೇಕಿದೆ. ಆತನ ರಚನೆಗಳು ಕಾಲಕಾಲಕ್ಕೆ ಎತ್ತಿರಬಹುದಾದ ದಶಾವತಾರಗಳು, ಶತಾವತಾರಗಳು ಮತ್ತು ಅವುಗಳ ಹಿಂದಿನ ರಾಜಕಾರಣಗಳನ್ನು ಸಂಶೋಧನೆ ಮಾಡಬೇಕಿದೆ. ಇದು 'ವಸ್ತುನಿಷ್ಠ'ವಾಗಿ ವಾಸ್ತವವಾಗಿ ಸಾಧ್ಯವೇ? ಹಾಗೆ ಹೇಳಿರುವುದನ್ನು ಮತ್ತು ಬಾಳಿರುವುದನ್ನು ಎರಡನ್ನೂ 'ಘರ್‌ವಾಪಸಿ' ಮಾಡಲು ಸಾಧ್ಯವೇ? ಎಂಬ ಪ್ರಶ್ನೆಗಳನ್ನು ಬಲವಾಗಿ ಕೇಳಿಕೊಳ್ಳುತ್ತಲೆ ಈ ಕೆಲಸವನ್ನು ಮಾಡಬೇಕಿದೆ.

ಆಧುನಿಕ ಸಂಪಾದನೆಯ ರಾಜಕಾರಣದ ಅಧ್ಯಯನ ಆಗಿದೆ. (ನೋಡಿ; ಕನಕನ ಕೃತಿಗಳ ಸಂಪಾದನೆಯ ರಾಜಕಾರಣ–ಡಾ.ಆರ್.ಚಲಪತಿ–ಕನಕದಾಸ ಅಧ್ಯಯನ ಕೇಂದ್ರದ ಪ್ರಕಟಣೆ, 2013) ಆದರೆ ಕನಕ ಬರೆದ ಕಾಲದಿಂದ ಆಧುನಿಕ ಕಾಲದವರೆಗಿನ ಆತನ ಪಠ್ಯಗಳ ಯಾನವನ್ನು ನಾವು ಮರು ಕಟಿಕೊಳ್ಳಬೇಕಿದೆ. ಮೋಹನ ತರಂಗಿಣಿಯಲ್ಲಿ 'ಗುಬ್ಬಿಯ ಕೊರಲ್ಗೆ ಗೋಧಿಯ ಕಲ್ಲ ಕಟ್ಟಿದೊಡೆ ಉಬ್ಬಿ ಆಗಸಕೆ ಪಾರುವುದೆ? ಕಬ್ಬಿಗರು ಆನು ಉಸಿರಿದ ಕಾವ್ಯವ ತಿದ್ದಿ ಪರ್ಬಿಸುವುದು ಭೂತಳದಿ' (1–16) ಎಂಬ ಮಾತೊಂದಿದೆ. ನಮ್ಮ ಬಹುಪಾಲು ಪ್ರಾಚೀನ ಕಾವ್ಯಗಳ ಪೀಠಿಕಾ ಸಂಧಿಗಳಲ್ಲಿ ಸಹೃದಯರಿಗೆ ಈ ರೀತಿಯ ಮಾತುಗಳನ್ನು ಹೇಳಲಾಗುತ್ತದೆ. ಪಠ್ಯಗಳು ಪ್ರತಿಕಾರರ, ಹಾಡುಗಾರರ, ವಾಚಕರ, ಪಾರಾಯಣಕಾರರ, ಗಮಕಿಗಳ, ವಾದಿವಾಗ್ಮಿಗಳ, ಟೀಕಾಕಾರರ, ಅಂಕಿತಚೋರರ, (ಪ್ರಕ್ಷಿಪ್ತ) ಪ್ರಾಕ್ಷಿಕವಿಗಳ ಅನುಸಂಧಾನಗಳಲ್ಲಿ ನೂರಾರು ವರ್ಷಗಳ

ಕಾಲ ಭಿನ್ನ ಭಿನ್ನ ರೂಪಾಂತರ–ತಿದ್ದುಪಡಿಗಳನ್ನು ಕಾಣುವುದು ಸಹಜ. ಹೀಗಿರುವಾಗ ಕೇಶವಾಂಕಿತ ರಚನೆಗಳೂ ಇದರಿಂದ ಹೊರತಲ್ಲ. ಹೀಗಾಗಿ ಈ ರಚನೆಗಳನ್ನೂ ಕೇಶವ ಭಕ್ತ ಸಮುದಾಯದ ತತ್ವರಾಜಕಾರಣ ಎಂಬ ನೆಲೆಯಲ್ಲಿ ಓದುವುದು ಹಲವು ಉಪಯುಕ್ತ ಓದುಗಳಲ್ಲಿ ಒಂದು ಮುಖ್ಯವಾದ ಓದು ಎಂಬುದರಲ್ಲಿ ಸಂಶಯವಿಲ್ಲ. ಅಂತಹ ಒಂದು ಓದನ್ನೆ ಇಲ್ಲಿ ಮಂಡಿಸಲಾಗಿದೆ.

*** ** ***

## ಪ್ರತಿಕ್ರಿಯೆ :

### 1. ಕನಕದಾಸರು ಮತ್ತು ತಳಸಮುದಾಯದ ಅನನ್ಯತೆ

– ಡಾ. ನದಾಫ.ಎಚ್.ಎಚ್.

ತಳಸಮುದಾಯದ ಅನನ್ಯತೆಯ ಪ್ರತಿಪಾದನೆ ಎಂಬ ವಿಷಯದ ಹಿನ್ನೆಲೆಯಲ್ಲಿ ಪ್ರೊ. ರಾಮಲಿಂಗಪ್ಪ ಟಿ ಬೇಗೂರು ಅವರು 'ಕೇಶವಾಂಕಿತ ರಚನೆಗಳು–ತತ್ವರಾಜಕಾರಣ' ಎಂಬ ಪ್ರಬಂಧವನ್ನು ತಾತ್ವಿಕ ಚಿಂತನೆಯ ಹಿನ್ನೆಲೆಯಲ್ಲಿ ಚರ್ಚಿಸುವದರೊಂದಿಗೆ ತಮ್ಮ ಆಲೋಚನೆ ಮತ್ತು ಸಂದೇಹವನ್ನು ಹೊರಹಾಕಿದ್ದಾರೆ. ಆರಂಭದಲ್ಲಿಯೇ ಕನಕದಾಸರ ರಚನೆಗಳು ಲಿಪ್ಯಂತರವಾಗಿರುವುದನ್ನು ಬಲವಾಗಿ ಪ್ರತಿಪಾದಿಸಿ, ತಳಸಮುದಾಯದಿಂದ ಬಂದ ಕನಕನಿಗೆ ಜನಿವಾರವನ್ನು ತೊಡಿಸಲು ಪ್ರಯತ್ನಿಸಿದ್ದಾರೆ ಎಂದಿದ್ದಾರೆ.

ಜ್ಞಾನ, ಪ್ರಭುತ್ವ, ಸಾಹಿತ್ಯ, ಮಠ–ದೇಗುಲ, ಜಾತಿಗಳನ್ನು ಪಂಚಮುಖಿ ಶಕ್ತಿಗಳೆಂದು ಕರೆಯುವರು. ಇವುಗಳು ಕೆಲವರಿಗೆ ಶಕ್ತಿಯಾಗಿದ್ದರೆ ಕೆಲವರಿಗೆ ಅನಿಷ್ಟಗಳಾಗಿವೆ. ತಳಸಮುದಾಯದವರಿಗೆ ಇವು ಅನಿಷ್ಟಗಳಾಗಿದ್ದು ನಿಜ. ಇವುಗಳನ್ನು ಅರಿತುಕೊಂಡಂತಹ ಕನಕದಾಸರು ಅವುಗಳತ್ತ ವಾಲಿದ್ದು ಯಾಕೇ? ವಿದ್ಯೆಕಲಿಯುವ ಸಂದರ್ಭದಲ್ಲಿ ಪಂಡಿತೋತ್ತಮರ ಪ್ರಭಾವಕ್ಕೆ ಒಳಗಾಗಿ, ಮತಾಂಧತೆಯ ತತ್ವಜ್ಞಾನಕ್ಕೆ ಬಲಿಯಾಗಿ ತನ್ನ ವೈಚಾರಿಕತೆಯನ್ನು ಕಳೆದುಕೊಂಡು ದಾಸರಾದರೇ? ಅಥವಾ ಕಾಲಾಂತರದಲ್ಲಿ ಯಾರಾದರು ಅವರ ವಿಚಾರಗಳಿಗೆ ನಾಮವನ್ನು ಬಳೆದಿರಬಹುದೆ? ಈಗಲೂ ಕನಕದಾಸರನ್ನು ಕುರಿತು ಈ ರೀತಿಯ ನಾಮ ಬಳೆಯುವ ವಿಮರ್ಶಾ ಚಿಂತನೆಗಳು ನಡೆಯುತ್ತಲೇ ಇವೆಯೇ ಎಂದು ಪ್ರಶ್ನಿಸಿಕೊಂಡರೆ, ನಮ್ಮಲ್ಲಿ ಅನೇಕ ವಿಚಾರಗಳು ಮೂಡುತ್ತವೆ. ಪ್ರೊ. ರಾಮಲಿಂಗಪ್ಪ ಟಿ ಬೇಗೂರ ಅವರು ತಮ್ಮ ಪ್ರಬಂಧದ ಹನ್ನೆರಡು ಉಪಶೀರ್ಷಿಕೆಗಳಲ್ಲಿ ಚರ್ಚಿಸಿರುವಂತೆ ಕನಕದಾಸರ ಕೇಶವಾಂಕಿತ ರಚನೆಗಳಲ್ಲಿ ವೈಷ್ಣವ ತತ್ವದ ಅಂದರೆ ಯಜಮಾನಿ ಸಮುದಾಯದ ಒಪ್ಪಿತ ವಿಚಾರಗಳನ್ನೇ ಕೊಂಡಾಡಿ ಅವುಗಳನ್ನು ಒಪ್ಪಿ ತಮ್ಮದನ್ನು ಕೀಳಾಗಿ ಕಂಡಿದ್ದಾರೆ. ಹಾಗಾಗಿ ಕನಕದಾಸರ ಸಾಹಿತ್ಯದಲ್ಲಿ ತಳಸಮುದಾಯದ ಆಚಾರ, ವಿಚಾರ, ಸಂಪ್ರದಾಯಗಳ ವಿರೋಧತ್ವ ಕಂಡು ಬರುತ್ತದೆಯೇ ಹೊರತು ಅನನ್ಯತೆ ಕಂಡುಬರುವುದಿಲ್ಲ. ಇದಕ್ಕೆಲ್ಲಾ ಆ ಯಜಮಾನಿ ಸಂಸ್ಕೃತಿಯವರು ಮಾಡಿದ ಕಾರಬಾರು ಎಂದಿದ್ದಾರೆ. ಈ ಕಾರಬಾರವನ್ನು ಅರಿಯಬೇಕಾದರೆ ಲಿಪಿಕಾರರು, ಪ್ರತಿಕಾರರು, ಅನುಸಂಧಾನಿಗಳೆಲ್ಲರೂ ಮಾಡಿರುವ ಜಾಡನ್ನು ಸಂಶೋಧಿಸಿ ನಿಜವಾದ ಇತಿಹಾಸವನ್ನು ಕಂಡುಕೊಂಡು, ಕನಕರನ್ನು ತಳಸಮುದಾಯದ ಸಾಂಸ್ಕೃತಿಕ ನಾಯಕರನ್ನಾಗಿ ರೂಪಿಸಲು ಸಾಧ್ಯವೇ? ಎಂದು ಹೇಳಿ ತಮ್ಮ ಪ್ರಬಂಧವನ್ನು ಅಂತ್ಯಗೊಳಿಸಿದ್ದಾರೆ.

ಕನಕದಾಸರ ಸಾಹಿತ್ಯ ಕಾಲಾಂತರದಲ್ಲಿ ಹರಿದುಕೊಂಡು ಬರುವಾಗ ಧರ್ಮಪರ, ಮೇಲ್ಜಾತಿಪರ, ಪ್ರಭುತ್ವಪರ, ವರ್ಗಪರಗಳ ರಾಜಕಾರಣಕ್ಕೆ ಗುರಿಯಾಗಿ ಅಲ್ಲಲ್ಲಿ ಲಿಪ್ಯಂತರವಾಗಿರಬಹುದು. ಇದನ್ನು ಪೂರ್ಣವಾಗಿ ಅಲ್ಲಗಳೆಯಲು ಸಾಧ್ಯವಿಲ್ಲ. ಹೀಗೆ ಬಂದಿರುವದರಿಂದಲೇ ನಮಗೆ ಕನಕರ ಚಿಂತನೆಗಳು ಇಂದು ಲಭ್ಯವಾಗಿವೆ ಎಂಬ ಮಾತನ್ನು ಸಹ ಮರೆಯುವಂತಿಲ್ಲ. ಈ ನಿಲುವಿಗಿಂತ ನನಗೆ ಪ್ರಸ್ತುತ ಲಭ್ಯವಿರುವ ಅವರ ಸಾಹಿತ್ಯ ತಳಸಮುದಾಯವನ್ನು ಹೇಗೆ ಪ್ರತಿನಿಧಿಸುತ್ತದೆ ಮತ್ತು ಅವರ ಅನನ್ಯತೆಯ ಬಗ್ಗೆ ಹೇಗೆ ಪ್ರತಿಕ್ರಿಯೆ ನಿಡುತ್ತದೆ ಎನ್ನುವುದು ಮುಖ್ಯವಾಗುತ್ತದೆ. ಇದನ್ನು ಅರಿಯಬೇಕಾದರೆ ನಾವು ಕನಕದಾಸರ ಕಾಲದ ಧಾರ್ಮಿಕ, ಸಾಮಾಜಿಕ, ರಾಜಕೀಯ ಪರಿಸ್ಥಿತಿಗಳನ್ನು ಅವಲೋಕನ ಮಾಡಿಕೊಂಡು ಅವರ ತಳಸಮುದಾಯದ ಪರ ಮನಸ್ಥಿತಿ ಅರಿಯಬೇಕಾಗುತ್ತದೆ.

ಕನಕದಾಸರು ಬದುಕಿದಂತಹ ಕಾಲದಲ್ಲಿಯ ಧಾರ್ಮಿಕ ಪರಿಸ್ಥಿತಿ ಬಿಗುಡಾಯಿಸಿದ್ದು, ಧರ್ಮಧರ್ಮಗಳ ನಡುವೆ ತಿಕ್ಕಾಟವಿದ್ದಿದ್ದನ್ನು ಕಾಣುತ್ತೇವೆ. ಇಂತಹ ಸಂದರ್ಭದಲ್ಲಿ ಎಲ್ಲವೂ ತಳ ಸಮುದಾಯವನ್ನು ಸೆಳೆಯುವ ತಂತ್ರಗಳನ್ನು ರೂಪಿಸಿಕೊಂಡಿರುತ್ತವೆ. ಅಂತಹ ಸಂದರ್ಭದಲ್ಲಿ ತಳಸಮುದಾಯ ಬದುಕಬೇಕಾಗಿದೆ, ಅಭಿವೃದ್ಧಿ ಹೊಂದಬೇಕಾಗಿದೆ. ಕನಕದಾಸರು ತಳಸಮುದಾಯಕ್ಕೆ ಯಾವ ಸಂದೇಶವನ್ನು ಕೊಡಬೇಕು ಎಂಬುದು ಮುಖ್ಯ ಪ್ರಶ್ನೆಯಾಗುತ್ತದೆ. ಈ ಪ್ರಶ್ನೆಯನ್ನು ನಾವು ಪ್ರಸಕ್ತ ವಿದ್ಯಮಾನದ ಆಲೋಚನೆಗೆ ಹೊಂದಿಸಿಕೊಂಡು ಚಿಂತಿಸಿದರೆ ಆ ಧರ್ಮಗಳು ಕನ್ನಡ ಇಂಗ್ಲೀಷ ಇದ್ದ ಹಾಗೆ. ತಳಸಮುದಾಯ ಅಭಿವೃದ್ಧಿ ಹೊಂದಬೇಕಾದರೆ ಯಾವುದನ್ನು ಓದಬೇಕು?

ಭಾರತ ಸ್ವಾತಂತ್ರ ಪಡೆಯುವ ಕಾಲಘಟ್ಟದಲ್ಲಿ ಡಾ. ಅಂಬೇಡ್ಕರವರ ಪರಿಸ್ಥಿತಿ(ಶೈಕ್ಷಣಿಕ, ಸಾಮಾಜಿಕ ಹಿನ್ನೆಲೆಯಲ್ಲಿ) ಹೇಗಿತ್ತೋ ಹಾಗೆಯೇ ಕನಕದಾಸರ ಕಾಲಘಟ್ಟದಲ್ಲಿ ಕನಕದಾಸರ ಬದುಕು ಅಂಬೇಡ್ಕರ ಪರಿಸ್ಥತಿಯೆ ಆಗಿತ್ತು ಎಂದು ನನಗನಿಸುತ್ತದೆ. ಸ್ವಾತಂತ್ರ್ಯಗಳಿಸಿ ಪ್ರಜೆಗಳ ಆಡಳಿತವಿರುವ ಸಂದರ್ಭದಲ್ಲಿ ಅಂಬೇಡ್ಕರ ಸಂವಿಧಾನ ಬರೆಯುವದರ ಮುಖಾಂತರ ತಳಸಮುದಾಯವನ್ನು ಉದ್ಧರಿಸಲು ಕಾರಣಿಭೂತರಾದರು. ಹಾಗೆ ಕನಕದಾಸರು ರಾಜಪ್ರಭುತ್ವದ ಆಡಳಿತವಿರುವ ಸಂದರ್ಭದಲ್ಲಿ ರಾಮಧಾನ್ಯ ಚರಿತೆ ಮತ್ತು ಕೀರ್ತನೆ ರಚಿಸುವ ಮುಖಾಂತರ ತಳಸಮುದಾಯದವರ ಧ್ವನಿಯಾಗಿ ಅವರನ್ನು ಮೇಲಕ್ಕೆತ್ತುವ ಪ್ರಯತ್ನ ಮಾಡಿದರು.

ಪ್ರಸಕ್ತ ಸಂದರ್ಭದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಳಸಮುದಾಯಗಳು ಅಭಿವೃದ್ಧಿಯನ್ನು ಹೊಂದಬೇಕಾದರೆ ಶಿಕ್ಷಣವನ್ನು ಪಡೆಯಬೇಕು ಮತ್ತು ಆ ಮುಖಾಂತರ ತಮ್ಮ ಬುದ್ಧಿಮಟ್ಟವನ್ನು ಸುಧಾರಿಸಿಕೊಳ್ಳಬೇಕು ಎಂದು ತಳಸಮುದಾಯದ ನೇತಾರರು ಮತ್ತು ನಾವುಗಳು ಪ್ರತಿಪಾದನೆ ಮಾಡುತ್ತೇವೆ.

ಹಾಗೆ ಪ್ರಜಾಪ್ರಭುತ್ವ ಮತ್ತು ಶಾಲಾ ಕಾಲೇಜುಗಳು ಇಲ್ಲದಂತಹ ಸಂದರ್ಭದಲ್ಲಿ ಧರ್ಮವೇ ಶಿಕ್ಷಣ, ಧರ್ಮದ ಮತಮಾನ್ಯಗಳೇ ಶಾಲಾಕಾಲೇಜುಗಳಾಗಿದ್ದವು. ಹಾಗಾಗಿ ತಳಸಮುದಾಯಗಳು ಅಭಿವೃದ್ಧಿ ಹೊಂದಬೇಕಾದರೆ ಏನು ಮಾಡಬೇಕು.? ಕನಕರಿಗೆ ಮತ ಮುಖ್ಯವಾಗಿರಲಿಲ್ಲ ಮೌಲ್ಯ ಮುಖ್ಯವಾಗಿತ್ತು. ಹಾಗಾಗಿಯೇ ಅವರು ಹರಿ-ಹರರನ್ನು ಒಂದುಗೂಡಿಸುವಂತಹ ನೀತಿಯುತ ಮಾತಗಳನ್ನು ಆಡಿರುವುದನ್ನು ಕಾಣುತ್ತೇವೆ.

ಕನಕದಾಸರು ಬದುಕಿದ ಕಾಲಘಟ್ಟದ ಸಾಮಾಜಿಕ ವ್ಯವಸ್ಥೆಯಲ್ಲಿ ಮೇಲು ಕೀಳಿನ ತಾರತಮ್ಯ ದಟ್ಟವಾಗಿದ್ದು, ತಳಸಮುದಾಯದವರ ಆಚಾರ, ವಿಚಾರ, ಸಂಪ್ರದಾಯಗಳು ಕೀಳು ಎಂಬ ಮನೋಧೋರಣೆ ಹುಟ್ಟಿಕೊಂಡು ಇವುಗಳನ್ನು ಅನುಸರಿಸುವವರು ಹೀನರು ಎಂಬ ಭಾವನೆಯಿತ್ತು. ಇದನ್ನು ಎದುರಿಸಿದ ಕನಕದಾಸರು ತಮ್ಮವರ ಕೀಳನ್ನು ಹೊಡೆದೋಡಿಸಲು ಮತ್ತು ತಳಸಮುದಾಯವನ್ನು ಉನ್ನತೀಕರಿಸಲು ತಳಸಮುದಾಯದ ಸಾಂಸ್ಕೃತಿಕ ನಾಯಕರಾಗಿ ಅವರು ಏನು ಮಾಡಬೇಕಾಗಿತ್ತೋ, ಅದನ್ನೇ ಮಾಡಿದ್ದಾರೆ ಎಂದು ನನಗನಿಸುತ್ತಿದೆ. ಏಕೆಂದರೆ ಈಗಲೂ ಹಳ್ಳಿಯವರ ಆಚಾರ ವಿಚಾರಗಳು ಪಟ್ಟಣದವರಿಗೆ ಕೀಳು ಎನಿಸುತ್ತಿವೆ. ಹಳ್ಳಿಯವನು ಸುಧಾರಿಸಿದ್ದಾನೆಂದರೆ, ಪಟ್ಟಣದವರ ಆಚಾರ-ವಿಚಾರಗಳನ್ನು ಮೈಗೂಡಿಸಿಕೊಂಡಿದ್ದಾನೆ ಎಂದರ್ಥ. ಆಧುನಿಕರಣಕ್ಕೆ ಒಡ್ಡಿಕೊಂಡಂತಹ ವ್ಯಕ್ತಿ ತನ್ನ ಪುರಾತನ ಸಂಪ್ರದಾಯಗಳನ್ನು ಅಲ್ಲಗಳೆಯುತ್ತಾನೆ. ಅಂದರೆ ಕಾಲಕಾಲಕ್ಕೆ ಬದಲಾಗುವ ಆಚಾರ ವಿಚಾರಕ್ಕೆ ನಾವು ಬದಲಾಗಬೇಕು ಅಂದಾಗ ಮಾತ್ರ ನಮಗೂ ಸಮಾನ ಗೌರವ. ಈ ಹಿನ್ನೆಲೆಯಲ್ಲಿ ಕನಕದಾಸರು ತಳಸಮುದಾಯವನ್ನು ಪ್ರತಿನಿಧಿಸಿ ಅವರ ಆಚಾರ, ವಿಚಾರಗಳನ್ನು ಅಲ್ಲಗಳಿದಿದ್ದಾರೆ. ಹಾಗಂತ ಅವರು ಮೇಲಿನವರ ಎಲ್ಲ ಆಚಾರ ವಿಚಾರಗಳನ್ನು ಒಪ್ಪಿಲ್ಲ, ಪ್ರಶ್ನಿಸಿರುವುದು ಕಂಡುಬರುತ್ತಿದ್ದು, ಮೌಲ್ಯವಾದ ವಿಚಾರಗಳನ್ನು ಮಾತ್ರ ಅನುಸರಿಸಿರುವುದನ್ನು ಕಾಣುತ್ತೇವೆ.

ಕನಕದಾಸರು ಇಡೀ ತಳಸಮುದಾಯಗಳನ್ನು ಒಟ್ಟುಗೂಡಿಸಿ ಅವರೆಲ್ಲರನ್ನು ಏಕದೇವೋಪಾಸನೆಗೆ ತೊಡಗಿಸಲು ಪ್ರಯತ್ನಿಸಿದವರು. ಇದು ಅವರ ದೃಷ್ಟಿಯಲ್ಲಿ ಎಲ್ಲರೂ ಒಂದೇ ಎನ್ನುವ ಮನೋಭಾವನೆ ಸಾರಲಿಕ್ಕೆ ಸಾಧ್ಯ ಎನ್ನುವ ಕಳಕಳಿಯ ಹಿನ್ನೆಲೆಯಲ್ಲಿ ಮಾತ್ರ, ಆ ಸಂದರ್ಭಕ್ಕೆ ಇದು ಅನಿವಾರ್ಯವೂ ಆಗಿರಬಹುದು. ಹೇಗೆ ಕುವೆಂಪುರವರು 'ಮನುಜಮತ'ವನ್ನು ಸಾರಿ ಎಲ್ಲರೂ ಒಂದೇ ಎಂಬ ಅಭಿಪ್ರಾಯವನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವ್ಯಕ್ತಪಡಿಸಿದರೋ ಹಾಗೆ ಕನಕದಾಸರು ಆ ಸಂದರ್ಭದಲ್ಲಿ ಮತವನ್ನು ತೊರೆದು ಏಕತೆಯನ್ನು ಸಾರಲಿಕ್ಕೆ ಸಾಧ್ಯವಾಗಿರಲಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ಆ ಕಾಲಕ್ಕೆ ಅದು ಅನಿವಾರ್ಯವಾಗಿದ್ದರಿಂದ ಅದರ ಮುಖಾಂತರ ಏಕತೆಯನ್ನು ಸಾರಲಿಕ್ಕೆ ಪ್ರಯತ್ನಸಿದ್ದಾರೆ.

ಹಣೆಬರಹ, ವಿಧಿ, ಕರ್ಮಫಲ, ಪುನರ್ಜನ್ಮ, ಮುಕ್ತಿ, ಎಂಬಂತ ವಿಚಾರಗಳು ಪುರೋಹಿತಶಾಹಿಗಳ ಸೃಷ್ಟಿಯಾದರೂ ಸಹ ಕನಕದಾಸರಲ್ಲಿಯೂ ಇವುಗಳ ಬಗ್ಗೆ ನಂಬುಗೆ ಇರುವುದನ್ನು ಕಾಣುತ್ತೇವೆ. ಆದರೆ ಕುರುಡರಾಗಿ ಇವುಗಳನ್ನು ನಂಬಿಲ್ಲ ಮತ್ತು ಅನುಸರಿಸಿಲ್ಲ, ಮೌಢ್ಯ ಬಿತ್ತುವಂತವರನ್ನು ಹಾಗೂ ಡೊಂಗಿಗಳನ್ನು ಜಾಲಾಡಿ ಅವರ ಬಣ್ಣ ಬಯಲು ಮಾಡಿ ವಿವಿಧ ಬಗೆಗಳಲ್ಲಿ ಪ್ರಶ್ನಿಸಿ ತಮಗೆ ಮೌಲ್ಯವೆನಿಸಿದ ತತ್ತ್ವಗಳನ್ನು ಮಾತ್ರ ಒಳಿತು-ಕೆಡಕುಗಳ ಹಿನ್ನೆಲೆಯಲ್ಲಿ ಪ್ರತಿಪಾದಿಸಿದ್ದಾರೆ. ವ್ಯಕ್ತಿಗಳನ್ನು ಮಾನಸಿಕವಾಗಿ ಸಬಲರನ್ನಾಗಿ ಮಾಡಲು ಮತ್ತು ಅವರ ಗುಣ-ಕಾರ್ಯಗಳನ್ನು ತಿದ್ದಲು ಹಾಗೂ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಇಂತಹ ಕೆಲವು ವಿಚಾರಗಳನ್ನು ಒಪ್ಪಲೆಬೇಕಾಗುತ್ತದೆ. ಆ ಕಾರಣದ ಹಿನ್ನೆಲೆಯಲ್ಲಿ ಕನಕದಾಸರು ಇವುಗಳನ್ನು ಒಪ್ಪಿ ಪ್ರತಿಪಾದಿಸಿರುವರು.

ಕನಕನ ಕಿಂಡಿಯ ವಿಚಾರ ಬೇಕಂತಲೇ ಸೃಷ್ಟಿಮಾಡಿದ್ದೋ ಅಥವಾ ಕನಕದಾಸರ ಪವಾಡವೊ ಎನ್ನುವ ಸತ್ಯಾಸತ್ಯತೆಯ ವಿಚಾರ ಒಂದು ಕಡೆಯಾದರೆ. ನನಗೆ ಇದು ತಳಸಮುದಾಯದವರಿಗೆ ಪ್ರತಿಭಟನೆಯ ಸಂಕೇತವೆನಿಸುತ್ತದೆ. ಹೇಗೆ ಇಗಲೂ ತಳಸಮುದಾಯದವರು(ದಲಿತರು) ಸಮಾನತೆಗಾಗಿ ಗುಡಿ ಪ್ರವೇಶ ಆಂದೋಲನ, ಕೆರೆ ಪ್ರವೇಶ ಆಂದೋಲನ, ಹೊಟೆಲ ಪ್ರವೇಶ ಆದೋಲಗಳನ್ನು ಮಾಡುತ್ತಾರೆಯೊ ಹಾಗೆಯೇ ಕನಕದಾಸರು ಅಂದು ಸಮಾನತೆಗಾಗಿ ಗುಡಿಪ್ರವೇಶ ಮಾಡಲು ಹೋರಾಡಿದರು.

ಕನಕದಾಸರು ಆ ಕಾಲಘಟ್ಟಕ್ಕೆ ತಳಸಮುದಾಯವನ್ನು ಇಟ್ಟುಕೊಂಡು ಪ್ರತ್ತೇಕತೆಯ ಐಡೆಂಟಿಟಿಯನ್ನು ಕಟ್ಟಿಕೊಳ್ಳುವುದು ಅಷ್ಟು ಸುಲಭವೆನಿಸರಲಿಕ್ಕಿಲ್ಲ. ಹಾಗಾಗಿಯೇ ಅವರು ಹೊಂದಾಣಿಕೆಯ ಮನೋಭಾವನೆಯನ್ನು ಬೆಳೆಸಿಕೊಂಡಿದ್ದಾರೆ. ಮೇಲ್ವರ್ಗದವನು/ರು ಪ್ರತ್ಯೇಕತೆಯ ಐಡೆಂಟಿಯನ್ನು ಕಟ್ಟಲು ಸಾಧ್ಯವಾಗುತ್ತದೆ. ಅವನಿಗೆ ಎಲ್ಲರೂ ಸಹಮತವನ್ನು ವ್ಯಕ್ತಪಡಿಸಿ ಕೈಜೋಡಿಸುತ್ತಾರೆ. ಅದೇ ಒಬ್ಬ ತಳಸಮುದಾಯದವನು ಪ್ರತ್ಯೇಕ ಐಡೆಂಟಿಟಿಯನ್ನು ಕಟ್ಟಲಿಕ್ಕೆ ಪ್ರಾರಂಭಿಸಿದರೆ ತಳಸಮುದಾಯವೇ ಅವನಿಗೆ ಕೈಜೋಡಿಸುವದಿಲ್ಲ, ಇವರಲ್ಲಿ ಮತ್ತೆ ಅವರು ಕೀಳು, ಅವರಕ್ಕಿಂತ ಮತ್ತೆ ಇವರು ಕೀಳು ಎಂಬ ತಾರತಮ್ಯ ಮೂಡುತ್ತದೆ. ಇದನ್ನೇ ನಾವು ಈಗ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು ಪಾರ್ಟಿ ಕಟ್ಟುವ ಕೆಲಸಕ್ಕೆ ಹೊಲಿಸಿಕೊಳ್ಳಬಹುದು(ಎಸ್.ಬಂಗಾರಪ್ಪನವರು ಕಟ್ಟಿದ ಪಾರ್ಟಿ ಏನಾಯಿತು). ಹಾಗಾಗಿ ಕನಕರು ಈ ರೀತಿಯ ಕಾರ್ಯಕ್ಕೆ ಕೈಹಾಕದೇ ಪ್ರಸ್ತುತ ಸಂದರ್ಭದಲ್ಲಿ ರಾಜಪ್ರಭುತ್ವ ಒಪ್ಪಿಕೊಂಡಿರುವ ಮತ್ತು ಮೇಲ್‌ಸ್ತರದ ಸಿದ್ಧಾಂತ ಎಂದು ಒಪ್ಪಿತವಾಗಿರುವ ಮತಕ್ಕೆ ಎಲ್ಲರನ್ನು ಕರೆದೊಯ್ದು ಸಾಮಾನತೆ ಸಾರಲು ಪ್ರಯತ್ನಿಸಿದ್ದಾರೆ. ಒಂದು ವೇಳೆ ಕನಕದಾಸರು ಪ್ರತ್ತೇಕತೆಯ ಸಿದ್ಧಾಂತವನ್ನು ರಚಿಸಿಕೊಂಡು ಕಾರ್ಯಮಗ್ನರಾಗಿದ್ದರೆ ಅವರು ರಚಿಸಿದ ಸಾಹಿತ್ಯ ಇಂದು ನಮಗೆ ದೊರೆಯುತ್ತಿರಲಿಲ್ಲ.

ಕನಕದಾಸರು ನಳಚರಿತ್ರೆಯಲ್ಲಿಯ ನಳನ ಸಾಮ್ರಾಜ್ಯ ಸುಭಿಕ್ಷೆಯಿಂದ ಕೂಡಿತ್ತು ಎಂದು ಹೇಳುವಲ್ಲಿ ಎಲ್ಲರೂ ವರ್ಣಾಶ್ರಮ ಧರ್ಮವನ್ನು ಪಾಲಿಸುತ್ತಿದ್ದರು(17-4) ಎಂದು ಹೇಳಿ ಮುಂದೆ ಅಯೋಧ್ಯಾಪುರ ವರ್ಣನೆ ಮಾಡುವಲ್ಲಿ ಭೂಸುರರು, ವೈಶ್ಯರು, ಚತುರ್ಥರು(27-6) ಎಂದು ವರ್ಣನೆಮಾಡಿರುವುದನ್ನು ಹಾಗೂ ರಾಮಧಾನ್ಯ ಚರಿತ್ರೆಯಲ್ಲಿ ಪುರೋಹಿತರು, ಭೂಸುರರು, ಪಂಡಿತರು, ಋಷಿಮುನಿಗಳನ್ನು ಪ್ರಸ್ತಾಪಿಸಿ, ಭತ್ತ ರಾಗಿಗಳ ಗುಣಾವಗುಣಗಳನ್ನು ವಿವರಿಸುವಾಗ ಶುಭಮಂಗಳ, ಮಂತ್ರಾಕ್ಷತೆ, ಶೂದ್ರಾನ್ನ ಎಂದು ಹೀಗೆ ಹೇಳಿರುವುದನ್ನು ನೋಡಿದರೆ ಕನಕದಾಸರು ಶ್ರೇಷ್ಠ ಕನಿಷ್ಠತವನ್ನು ಒಪ್ಪಿದಂತಾಗುತ್ತದೆ ಎಂದಿರುವರು. ಆದರೆ ಅವರು ಅಂದಿನ ಸಾಮಾಜಿಕ ಜೀವನವನ್ನು ತಿಳಿಸಲು ಮತ್ತು ಸಾಮಾಜಿಕ ವ್ಯವಸ್ಥೆಯು ರೂಪಿಸಿದ ನೀತಿ ನಿಯಮಗಳನ್ನು ತಿಳಿಸಲು ಹಾಗೂ ರಾಜ ಮಹಾರಾಜರು ಮಾಡಿಕೊಂಡಂತಹ ಆಡಳಿತದ ವ್ಯವಸ್ಥೆಯನ್ನು ತಿಳಿಸಲು ಇವುಗಳನ್ನು ವಿವರಿಸಿದ್ದಾರೆಯೇ, ಹೊರತು ಅವುಗಳನ್ನು ಒಪ್ಪಿ ನಡೆದಿಲ್ಲ. ಒಂದು ವೇಳೆ ಅವುಗಳನ್ನು ಒಪ್ಪಿ ನಡೆದಿದ್ದರೆ ಅವರಲ್ಲಿ ಪ್ರತಿಭಟನೆಯ ಧೋರಣೆ ಬರುತ್ತಿರಲಿಲ್ಲ. ಹಾಗಾಗಿ ಅವರು ಆ ರೀತಿ ಹೇಳಿದ್ದನ್ನು ಒಪ್ಪಿದ್ದರು ಎಂದು ತೀರ್ಮಾನಿಸುವುದು ಸೂಕ್ತವೆನಿಸುವದಿಲ್ಲ.

ಕನಕದಾಸರು ಕಾವ್ಯಗಳನ್ನು ರಚಿಸಿ ತಮ್ಮ ವಿದ್ವತ್ ಪ್ರೌಢಿಮೆಯನ್ನು ಸಾಬೀತು ಪಡಿಸುವಾಗ ಅವರು ತಮ್ಮ ವೈಯಕ್ತಿಕ ಶೀಲತನದತ್ತ ಗಮನ ಹರಿಸಿಲ್ಲ. ದಾಸನಾದವನು ಹೆಣ್ಣಿನ ವರ್ಣನೆ ಮಾಡಬೇಕೋ ಬೇಡವೋ ಎಂಬುದು ಆಗ ಅವನಿಗೆ ಮುಖ್ಯವಾಗಿಲ್ಲ. ಪಂಡಿತೋತ್ತಮರಿಗೆ ಸವಾಲು ಎನ್ನುವ ರೀತಿಯಲ್ಲಿ ತಳಸಮುದಾಯದವನಾದ ನಾನು ನಿಮ್ಮ ಪಾಂಡಿತ್ಯಕ್ಕಿಂತ ನನ್ನ ಪಾಂಡಿತ್ಯ ಏನು ಕಮ್ಮಿಯಿಲ್ಲ ಎನ್ನುವುದನ್ನು ಸಾಬೀತು ಮಾಡುವುದೇ ಅವರ ಮುಖ್ಯ ಗುರಿಯಾಗಿರಬೇಕು. ಹಾಗಾಗಿ ಅದರ ಭರಾಟೆಯಲ್ಲಿ ಒಬ್ಬ ಕವಿಯಾದವನು ತನ್ನ ಕಾವ್ಯವನ್ನು ಹೇಗೆ ರಸವತ್ತಾಗಿ ರಚಿಸಬೇಕೋ ಹಾಗೆ ರಚಿಸಲು ತೊಡಗಿದ್ದಾರೆ.

ಕನಕದಾಸರು ಅಂದು ಮಾಡಿದ ಕಾರ್ಯ ನಮಗೆ ಮಾರ್ಗದರ್ಶಕವಾಗಿದೆ. ಈಗ ಪ್ರಜಾಪ್ರಭುತ್ವ ರಾಷ್ಟ್ರ ನಿರ್ಮಾಣವಾಗಿದೆ. ಎಲ್ಲರಿಗೂ ತಮ್ಮದೇಯಾದಂತಹ ಸ್ವಾತಂತ್ರ್ಯವಿದೆ. ಇಂತಹ ಸಂದರ್ಭದಲ್ಲಿ ಕನಕರನ್ನು ಮುಂದೆ ಮಾಡಿಕೊಂಡು ಅಥವಾ ಕನಕರಂತಹ ಚಿಂತನೆಯುಳ್ಳ ಸಾಂಸ್ಕೃತಿಕ ನಾಯಕರನ್ನು ಇಟ್ಟುಕೊಂಡು ನಮ್ಮದೇ(ತಳಸಮುದಾಯ)ಯಾದಂತಹ ಐಡೆಂಟಿಟಿಯನ್ನು ಕಟ್ಟಿಕೊಳ್ಳಲು ಸನ್ನದ್ಧರಾಗೋಣ.

## 2. ಕಂಬಳಿ ಕುಲವಲ್ಲ ......

–ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ

ಬಹುಸಂಸ್ಕೃತಿಯ ನೆಲೆವಿಡಾದ ಭಾರತದ ನೆಲದಲ್ಲಿ ಚಾರಿತ್ರಿಕವಾಗಿ ಮಧ್ಯಕಾಲೀನ ಸಮಾಜೋ ಸಾಂಸ್ಕೃತಿಕ ಚರಿತ್ರೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಇಸ್ಲಾಂಧರ್ಮನೆಲೆಗಟ್ಟಿನ ಪ್ರಭುತ್ವ ತೀವ್ರತರ ಪ್ರಾಭಲ್ಯವನ್ನು ಹೊಂದಿತ್ತು. ಇದೇ ಸಂದರ್ಭದಲ್ಲಿ ಒಂಬತ್ತು ಮತ್ತು 12 ನೇ ಶತಮಾನದ ಜೈನ ಹಾಗೂ ವೀರಶೈವಧರ್ಮದ ಜನಾಂದೋಲನ ವೈದಿಕ ಆವರಣದೊಳಗೆ ಪ್ರವೇಶಿಸಿ ವೈದಿಕ ಬೇರುಗಳನ್ನು ಅಲುಗಾಡಿಸಿತ್ತು. ಇಂಥ ಸಂದಿಗ್ಧ ಸಂದರ್ಭದೊಳಗೆ ಹಿಂದೂ ಪರಿಕಲ್ಪನೆಯ ವೈದಿಕತ್ವವು ಪುರನ್ ಸ್ಥಾಪಿಸಲ್ಪಡುವ ಜರೂರತ್ತು ಇದ್ದುದರಿಂದ ಇದಕ್ಕೆ ಪ್ರಭುತ್ವದ ಆಸರೆ ಅತ್ಯವಶ್ಯವಾಗಿತ್ತು. ಇದನ್ನು ಸಾಕಾರಗೊಳಿಸಿದ್ದು ವಿಜಯನಗರ ಸಾಮ್ರಾಜ್ಯ.

ಹಿಂದೂ ಧರ್ಮದ ಪುನರುಜ್ಜೀವನಕ್ಕಾಗಿ ವಿಜಯನಗರದ ಪ್ರಭುಗಳಿಂದ ವಾದಿರಾಜ, ವ್ಯಾಸರಾಯ, ಪುರಂದರದಾಸ ಮುಂತಾದ ಮಾಧ್ವ ಮತ ಪ್ರಚಾರಕರಿಗೆ ಆಸ್ಥಾನ ಗೌರವ ಲಭ್ಯವಾಯಿತು. ಇವರೆಲ್ಲ ಒಟ್ಟುಗೂಡಿಕೊಂಡು ವೀರಶೈವಕ್ಕೆ ಪರ್ಯಾಯವಾದ ಪಾರಂಪರಿಕ ವೈದಿಕ ಆವರಣವನ್ನು ಕಟ್ಟಿಕೊಡಲು ಯತ್ನಿಸುತ್ತಾರೆ. ಇವರ ನಡುವೆ ತಳಸಮುದಾಯದ ಕನಕಮಾತ್ರ ವಿಭಿನ್ನ ಹೆಜ್ಜೆ ಇಡುತ್ತಾನೆ.

ರಾಮಲಿಂಗಪ್ಪ ಟಿ. ಬೇಗೂರು ಅವರು "ಕೇಶವಾಂಕಿತ ರಚನೆಗಳು ತತ್ವರಾಜಕಾರಣ" ಲೇಖನದಲ್ಲಿ ಕೀರ್ತನೆಗಳಲ್ಲಿ ಅಡಕವಾಗಿರುವ ಲೀಲೆ, ನಂಬುಗೆ, ಹಣೆಬರಹ, ವಿಧಿ, ಕರ್ಮಫಲ, ಪುನರ್‌ಜನ್ಮ, ಮುಕ್ತಿ ಇತ್ಯಾದಿ ಸಿದ್ಧಾಂತಗಳು, ನಿರಾಕರಣೆಯ ತತ್ವಗಳು, ಮೇಲು ಕೀಳಿನ ಬಿಕ್ಕಟ್ಟು, ವಿಶ್ವಕುಟುಂಬಿ ಕಲ್ಪನೆ, ರಾಮಧಾನ್ಯದ ಸೇಸೆ ಸಂಗತಿ, ಮೋಹನತರಂಗಿಣಿಯ ಶೈವ ವೈಷ್ಣವ ಕಾಳಗದ ಸಮನ್ವಯ ತತ್ವ, ಹರಿಭಕ್ತಿಸಾರದ ಹರಿಯ ಸರ್ವೋತ್ತಮತೆ ಹೀಗೆ ಕನಕದಾಸರ ಒಟ್ಟು ರಚನೆಗಳ ಒಳಸಾರವನ್ನು ತಮ್ಮ ಆಳ ಅಧ್ಯಯನ ಹಾಗೂ ಚಿಕಿತ್ಸಕ ನೋಟದಲ್ಲಿ ಅರ್ಥಪೂರ್ಣವಾಗಿ ಪ್ರತಿಪಾದಿಸಿದ್ದರೆ. ಇವರ ಚಿಂತನೆಗಳನ್ನು ಗೌರವಿಸುತ್ತಲೇ ಅಲ್ಲಲ್ಲಿ ಕೆಲವು ತಾರ್ಕಿಕ ಪ್ರಶ್ನೆಗಳನ್ನು ಇಲ್ಲಿ ಚರ್ಚೆಗೆ ಎತ್ತಿಕೊಳ್ಳಲಾಗಿದೆ.

ಮೇಲು ಜಾತಿಯಿಂದ ಬಸವನಿಗೆ ತನ್ನ ವೈಚಾರಿಕ ನೆಲೆಗಳನ್ನು ಭದ್ರಗೊಳಿಸಲು ತಳಸಮುದಾಯಗಳ ಬಹುದೊಡ್ಡ ಬೆಂಬಲ ಲಭ್ಯವಾಗಿತ್ತು. ಆದರೆ ಏಕಾಂಗಿ ಕನಕನಿಗೆ ಅಂತಹ ಸಮಾಜಿಕ ಸಹಭಾಗಿತ್ವದ ಸಹಯೋಗ ಲಭ್ಯವಾಗಲಿಲ್ಲ. ಆದಾಗ್ಯೂ ಕನಕ ಧೃತಿಗೆಡದೆ ತಿರುನಾಮೀ ದಾಸರ ನಡುವೆಯೇ ಇದ್ದು ವೈದಿಕ ಕಂದಾಚಾರಗಳಿಗೆ ಸೆಡ್ಡು ಹೊಡೆಯಲಿಲ್ಲವೆ? ಕೇವಲ ಆದಿಕೇಶವನ ನಾಮಾಂಕಿತವನ್ನು ಹಿಡಿದುಕೊಂಡು ಕನಕನನ್ನು ವೈದಿಕೀಕರಣ ಮಾಡುವುದು

ಎಷ್ಟು ಸಮಂಜಸ? ಕನಕ ಸಂಕೇತಿಸುವ ಆದಿಕೇಶವ ಯಾರು? ಬೇಗೂರರು ಪ್ರತಿಪಾದಿಸುತ್ತಿರುವ ಆದಿಕೇಶವ ಯಾರು? ಕನಕನ ಕಾಲಮಾನದಲ್ಲಿ 'ಬಾಡ' ಒಂದು ಪುಟ್ಟಗ್ರಾಮ. ಆದಿಕೇಶವ ವೈದಿಕರ ನೇಮನಿಯಮ ಮೀರಿದ ಗ್ರಾಮೀಣ ಜನಪದ ದೈವ. ಜೊತೆಗೆ ಕನಕನ ಕುಲದೈವ, ತಳಸುದಾಯಗಳ ಆರಾಧನಾ ಅನನ್ಯತೆಯ ಸಂಕೇತ. ಈ ಕಾರಣದಿಂದಲೇ ಆದಿಕೇಶವವನ್ನು ಕುರಿತು ಎಲ್ಲಿಲ್ಲದ ಕರುಳ ವ್ಯಾಮೂಹ. ಶ್ರೀ ಕೃಷ್ಣ ಹೇಳಿಕೇಳಿ ಬುಡಕಟ್ಟು ಕುಲದವನು, ದನಗಾಯಿ, ಅನಾಥ, ಕುಲಕೀಳರಿಮೆಯಲ್ಲಿ ಬೆಂದವನು. ಗೋವಳರ ಪ್ರಾಕೃತಿಕ ಜೀವಸತ್ವದಿಂದ ಉಂಡಾಡಿ ಬೆಳೆದು ತನ್ನ ಸ್ವಸಾಮರ್ಥ್ಯದಿಂದ ತಳಸಮುದಾಯಗಳ ನಾಯಕನಾಗಿ ಲೋಕಪ್ರಸಿದ್ಧಿ ಪಡೆದುಕೊಂಡವನು. ಹಾಗಾಗಿ ಕನಕ ಅಂಕಿತದಲ್ಲಿ ಕೃಷ್ಣ ಅರಾಧಕನಾಗುತ್ತಾನೆ. ಇತರೆ ದೈವಗಳಿಗಿಂತ ಮಿಗಿಲಾಗಿ ಲೋಕನಾಯಕನನ್ನಾಗಿ ಸ್ವೀಕೃತಗೊಂಡಿದ್ದಾನೆ. ಈ ಶ್ರೀಕೃಷ್ಣನನ್ನೆ ಪರಮ ದೈವವನ್ನಾಗಿ ಸ್ವೀಕರಿಸಿಕೊಳ್ಳುತ್ತಾನೆ. ಹಾಗೂ ವೈದಿಕ ಶಿಷ್ಟ ಸಂಸ್ಕೃತಿ ಇತರೆಲ್ಲ ದೈವಗಳನ್ನು ಕೃಷ್ಣನ ಅಧೀನಕ್ಕೆ ತಂದು ಆ ಮೂಲಕ ತಳಸಮುದಾಯಗಳ ಆತ್ಮಭಿಮಾನವನ್ನು ಹೆಚ್ಚಿಸುತ್ತಾನೆ. ಈ ಕಾರಣದಿಂದಾಗಿಯೇ ಕನಕ ಉಡುಪಿಯ ಶ್ರೀಕೃಷ್ಣನನ್ನು ತನ್ನವನೆಂದು ಪರಿಭಾವಿಸುತ್ತಾ ಅವನ ದರ್ಶನಕ್ಕೆ ಹೋಗುತ್ತಾನೆ. ಆದರೆ ಆ ವೇಳೆಗೆ ಉಡುಪಿಯ ಕೃಷ್ಣ ಮಾಧ್ವರಿಂದ ಹೈಜಾಕಾಗಿ ನೆಲೆಮೂಲದಿಂದ ದೂರವಾಗಿ ವೈದಿಕೀಕರಣಗೊಂಡಿದ್ದರ ಪರಿಣಾಮವಾಗಿ ದರ್ಶನಕ್ಕೆ ತಡೆ ಉಂಟಾಗುತ್ತದೆ. ಆಕಾರಣದಿಂದಲೇ ಕನಕ ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ......... ಎಂದು ಪರಿತಪಿಸುವ ಸ್ಥಿತಿಗೆ ತಲುಪುತ್ತಾನೆ.

ಬಾಗಿಲು ಪ್ರವೇಶ ಸಮಾನತೆಯ ಹಕ್ಕಿನ ಸಂಕೇತವೇ ಹೊರತು ಪಾವಿತ್ರ್ಯದ ಸಂಕೇತವಲ್ಲ. ಆದರೆ ಬೇಗೂರು ಅವರು ಪಾವಿತ್ರ್ಯತೆಯ ವೈದಿಕತೆಯ ಬಾಗಿಲ ಒಳಪ್ರವೇಶ ಎಂಬರ್ಥದಲ್ಲಿ ಚಿಂತಿಸಿರುವುದು ಪ್ರಶ್ನಾರ್ಹವಾಗಿದೆ. ತೆರೆಯಬೇಕಾದ್ದು ಕರ್ಮಠ ಮನಸ್ಸುಗಳ ಬಾಗಿಲು, ಇದರ ಜೊತೆಗೆ ಕೃಷ್ಣ ನನ್ನವನೆಂಬ ಗಾಢವಾದ ನಂಬಿಕೆಯೊಂದಿಗೆ ಕೃಷ್ಣನನ್ನು ತಳಸಮುದಾಯಗಳಿಗೆ ತಂದೊಪ್ಪಿಸುವ ಪ್ರಯತ್ನವಾಗಿದೆ.

ಎಕ್ಕನಾತಿ, ಎಲ್ಲಮ್ಮ, ಮಾರಿದುರ್ಗಿ, ಚೌಡಿ ಮೊದಲಾದ ತಳಸಮುದಾಯಗಳ ದೇಗುಲ ನಿರಾಕರಣೆ, ಅದು ಕೆಳದೈವಗಳನ್ನು ನಿರಾಕರಿಸುವ ಸಂಗತಿಯಾಗಿರದೆ ಕೀಳನ್ನು ನಿರಾಕರಿಸುವ ಸಂಗತಿಯಾಗಿದ್ದು ಇದರ ಹಿಂದೆ ಅಸಮಾನತೆ ಅನಮಾನಗಳನ್ನು ಮೀರುವ ಹಂಬಲವಿದೆ.

ಕುಲಕುಲ ವೆನ್ನುತಿಹರು ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ ಎನ್ನುವ ಕನಕನ ಮಾತಿನಲ್ಲಿ ತಾನು ಅನುಭವಿಸಿದ ವೈದಿಕರ ಕುಲಾವಮಾನದ ತುಡಿತವೇ ಹೊರತು ಅಸಮಾನ ಸಂಬಂಧಗಳಲ್ಲಿ ಕೀಳು ಎಂಬುದು ಮೇಲಿನ ಕಡೆಗೆ

ಚಲಿಸುವ ಮತ್ತು ಮಾನ್ಯತೆಗಾಗಿ ಹಂಬಲಿಸುವ ಯತ್ನಗಳಲ್ಲ, ಯಜಮಾನಿಕೆಯ ನಿರಾಕರಣೆ. ಹೊಸ ಕುಲದ ನಿರ್ಮಾರ್ಣವಲ್ಲ.

ಶ್ರೇಷ್ಠತೆಯ ವ್ಯಸನಕ್ಕೊಂದು ಕಾವ್ಯ ಕನ್ನಡಿಯಾಗಿಸಿದ ರಾಮಧಾನ್ಯ ಕಥನದಲ್ಲಿ ಬರುವ ರಾಗಿ, ಕೊರ್ಲೆ, ಹುರುಳಿ, ನವಣೆ, ಹಾರಕ, ಸಜ್ಜೆ, ಇವು ಶೂದ್ರ ಸಮುದಾಯವನ್ನು ಸಂಕೇತಿಸುತ್ತವೆ. ವರ್ತಮಾನದ ಪರಿಕಲ್ಪನೆಯಲ್ಲಿ ಅಹಿಂದ ಬಳಗ. ಅಹಿಂದ ಪ್ರಮುಖ ಹಾಗೂ ಮನುಜಾವಳಿಯ ಪಕ್ವಾನ್ನ ರಾಗಿಯ ಪರವಾಗಿ ರಾಮನ ತೀರ್ಪು ಹೊರಬಿದ್ದ ಕೊಡಲೇ ದೇವರ ಪರಮಾನ್ನ ಅಕ್ಕಿಗೆ ತೀವ್ರತರ ಅಸಮದಾನವಾಗುವುದು. ತಕ್ಷಣ ಜಾಗೃತಗೊಂಡ ರಾಮ ವೈದಿಕರನ್ನು ಓಲೈಸುವುದಕ್ಕಾಗಿ ನೀವಿಬ್ಬರೂ ಧರೆಯೊಳಗೆ ಅತಿಹಿತದಲಿ ಇರುವುದೆಂದು ಫಾರ್ಮಾನು ಹೊರಡಿಸುತ್ತಾನೆ. ಇದು ಸಹಜ ಸಾಮರಸ್ಯವಾಗಿರದೆ ಒತ್ತಡದ ಸಾಮರಸ್ಯ. ರಾಜಕೀಯ ಸಾಮರಸ್ಯ. ಕನಕನಿಗೆ ಪ್ರಭುತ್ವದ ಈ ಒಳಮರ್ಮ ಚೆನ್ನಾಗಿ ತಿಳಿದಿತ್ತು. ಈ ದಿಕ್ಕಿನಲ್ಲಿ ಬೇಗೂರರು ಕನಕನ್ನು ಪರಿಭಾವಿಸುವುದರ ಬದಲಾಗಿ ಅಕ್ಷತೆಯ ಮೂಲಕ ವೈದಿಕರ ಕಂಬಕ್ಕೆ ಕಟ್ಟಿಹಾಕುವ ಪ್ರಯತ್ನ ಮಾಡಿದ್ದಾರೆ.

ಮೋಹನ ತರಂಗಿಣಿಯಲ್ಲಿ ಬರುವ ಬಾಣಾಸುರನ ಶಿವಪೂಜೆಯ ಪ್ರಸಂಗ ಬಾಣಾಸುರ ಶಿವನಿಗೆ ಇಡುವ ನೈವೇದ್ಯದ ಬಗ್ಗೆ ಬೇಗೂರರು ಪ್ರಸ್ತಾಪಿಸುತ್ತ ರಾಮಧಾನ್ಯ(ರಾಗಿ)ಕ್ಕೆ ಮಾನ್ಯತೆಯಲ್ಲವೆಂದು ಆಕ್ಷೇಪಿಸುತ್ತಾರೆ. ಕನಕರ ವಿಚಾರವೇ ಬೇರೆ, ಆಚಾರ ಬೇರೆ ಎಂಬ ಆರೋಪವನ್ನು ಹೊರಿಸುತ್ತಾರೆ. ಗಾರಿಗೆ, ಚಕ್ಕುಲಿ, ಕೋಡುಬಳೆ, ಸಣ್ಣಕ್ಕಿಓಗರ, ತೊವ್ವೆ, ಸೀಕರಣೆ, ಗೊಜ್ಜು, ತೊಕ್ಕು, ಇವು ಶ್ರೀಕೃಷ್ಣ ಪರಿವಾರದ ಅರಮನೆಯೊಳಗಿನ ಉಣಿಸು–ತಿನಿಸುಗಳು. ಕನಕ ಜನಸಾಮಾನ್ಯರ ಆಹಾರ ಕ್ರಮಗಳಿಗೆ ಅರಮನೆಯ ಮಾನ್ಯತೆ ದೊರಕಿಸಿಕೊಡುತ್ತಾನೆ. ರುಕ್ಮಿಣಿಯ ಗರ್ಭಿಣಿ ಬಯಕೆಯ ರೀತಿನೀತಿಗಳು, ಅನಿರುದ್ಧನ ಜನನ ಸಂದರ್ಭದಲ್ಲಿ ಸೂಲಗಿತ್ತಿಯರ ಪ್ರವೇಶ, ಹೊಕ್ಕುಳ ಬಳ್ಳಿಕೊಯ್ಯುವುದು, ಮೊರದಲ್ಲಿ ಮಗುವನ್ನು ಹಾಕುವುದು. ರತಿದೇವಿ ಮಗುವಿಗೆ ಹಾಲುಣಿಸುವ ಕ್ರಮ, ಮುಂತಾದೆಡೆಯಲ್ಲಿ ಬರುವ ಜನಸಾಮಾನ್ಯರ ಜಾನಪದೀಯ ಬದುಕು 'ಭವನ'ದೊಳಗೆ ಬಿಂಬಿತವಾಗಿರುವುದನ್ನು ಗಮನಿಸಬಹುದು. ಕನಕ ಬೀದಿ ಬದುಕಿನ ತಳಸಮುದಾಯಗಳ ಜೀವನಾವರ್ತನ ಆಚಾರಣೆಗಳು, ಪದ್ಧತಿಗಳು ಅವನ ಗ್ರಹಿಕೆಯಲ್ಲಿ ಇದ್ದುದರಿಂದ ಇದು ಸಾಧ್ಯವಾಯಿತು.

ಕಲಿ. ಕವಿ, ದಾರ್ಶನಿಕ ಸಂಗೀತಗಾರ ಹೀಗೆ ಬಹುಮುಖ ಪ್ರತಿಭೆಯ ವ್ಯಕ್ತಿ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮತ್ತೊಬ್ಬನಿಲ್ಲ, ಕೇಶವಾಂಕಿತ ತತ್ವರಾಜಕಾರಣದಲ್ಲಿ ಕನಕನ ವೈಚಾರಿಕ ನಿಲುವುಗಳಿಗೆ ಪ್ರಾಧಾನ್ಯತೆ ನೀಡದೆ, ಜನಮುಖೀ ಜೀವನದರ್ಶನವನ್ನು ಬಿಂಬಿಸದೆ, ವರ್ತಮಾನದ ಕನ್ನಡಕದೊಳಗೆ ಪರಂಪರೆಯ

ಬೇರುಗಳನ್ನು ಕಂಡುಕೊಳ್ಳಲು ಯತ್ನಿಸಿರುವ ರಾಮಲಿಂಗಪ್ಪಟಿ. ಬೇಗೂರು ಅವರು ಕನಕನನ್ನು ಮನುವಾದಿ ಕತ್ತಲ ಕೋಣೆಯಲ್ಲಿ ಬಂಧಿಸಿಟ್ಟಿದ್ದಾರೆ. ಪ್ರಜಾ ಪ್ರಭುತ್ವದ ಇಂದಿನ ವಾಕ್ ಸ್ವಾತಂತ್ರ್ಯದ ಮೂಲಭೂತ ಹಕ್ಕುಗಳ ನಡುವೆಯೂ ಕಟು ಸತ್ಯವನ್ನು ಅಭಿವ್ಯಕ್ತಿ ಪಡಿಸಲು ಹಿಂದೆ ಮುಂದೆ ನೋಡುವಂಥ ಪರಿಸ್ಥಿತಿ ಇರುವಾಗ ಪಕ್ಕ ವೈದಿಕೆ ಪುನರುತ್ಥಾನಕ್ಕೆ ಫಣ ತೊಟ್ಟ ಪ್ರಭುತ್ವ ಮತ್ತು ದಾಸ ಸಂತರ ಭದ್ರ ಕಂಟಕಾವರಣದೊಳಗೆ ಇದ್ದುಕೊಂಡೇ ಶೂದ್ರ ಕನಕನೊಬ್ಬ ತೀರ್ಥಪಿಡಿದವರೆಲ್ಲ ತಿರುನಾಮಧಾರಿಗಳೆ ಭಂಗಿ ಮುಕ್ಕಗಳೆಲ್ಲ ಲಿಂಗವಂತರೆ ಯೋಗಭ್ರಷ್ಟರೆಲ್ಲ ದೇವಬ್ರಾಹ್ಮಣರೆ? ಎಂದು ದಿಟ್ಟವಾಗಿ ನುಡಿದಿರುವುದು ಸಮಾನ್ಯವಲ್ಲ. ಮಂತ್ರಾಕ್ಷತೆಯ ಕೈಗೆ ಕೊಟ್ಟು ಮೋಕ್ಷವನ್ನು ಹಾರೈಸುವಿರಿ ಮಂತ್ರವೆಲ್ಲೋ ಅಕ್ಷತೆಯಲ್ಲೋ ಮೋಕ್ಷವೆಲ್ಲೋ ಮರ್ತ್ಯವೆಲ್ಲೋ ಹೇಳುವವನು ಅವಿವೇಕಿ ಕೇಳುವವನು ಅಜ್ಞಾನಿ ಎಂದು ಕಡ್ಡಿಮುರಿದಂತೆ ಖಂಡಿಸುವುದು ಸಾಮಾನ್ಯ ಸಂಗತಿಯಲ್ಲ. ಕನಕ ದಾಸನಾದರೂ ವೈದಿಕ ಶಲ್ಯ ದೋತ್ರ ಧರಿಸದೆ ಕಂಬಳಿ ಹೊದ್ದು ಕಲ್ಪ ತೊರಿದ ಮಹಾದಾರ್ಶನಿಕ. ಕಂಬಳಿ ಕುಲವಲ್ಲ........ ಸಮುದಾಯಗಳ ನೆಲದೊಡಲ ಜೀವ ತಂತು.

### 3. ತತ್ವರಾಜಕಾರಣ ಮತ್ತು ಅರಿವಿನ ದ್ವಂದ್ವ

– ಡಾ. ಗೀತಾ ವಸಂತ

'ಕೇಶವಾಂಕಿತ ರಚನೆಗಳು – ತತ್ವರಾಜಕಾರಣ'ವೆಂಬ ಪ್ರಸ್ತುತ ಲೇಖನವು ಸಾಂಸ್ಕೃತಿಕ ರಾಜಕಾರಣದ ಒಳಸುಳಿಗಳನ್ನು ಭೇದಿಸುವ ಹೊಸ ನೋಟದ ಕ್ರಮವೊಂದನ್ನು ತೆರೆಯುವ ಮೂಲಕ ಮಹತ್ವದ್ದಾಗಿದೆ. ಕನಕರ ರಚನೆಗಳನ್ನು ಕೇಶವಾಂಕಿತ ರಚನೆಗಳು ಎಂದು ನಿರ್ವಚಿಸಿಕೊಳ್ಳುವಲ್ಲಿಯೇ ಕನಕನು 'ಕೇಶವಾಂಕಿತ'ದ ಪ್ರಭಾವಕ್ಕೊಳಗಾದ ಮರ್ಮವು ಸೂಚಿತವಾಗುತ್ತಿದೆ. ಅಂದರೆ, ಹರಿಯ ಸರ್ವೋತ್ತಮತೆಯನ್ನು ಪ್ರತಿಪಾದಿಸುವ ವೈಷ್ಣವ ಯಜಮಾನ್ಯವನ್ನು ಅಥವಾ ಭಕ್ತಿಪರಂಪರೆಯ ವೈಷ್ಣವೀಕರಣವನ್ನು ಇದು ಸೂಚಿಸುತ್ತಿದೆ.

ವೈಯಕ್ತಿಕವಾದುದೆಲ್ಲವೂ ರಾಜಕಾರಣವೇ ಎಂಬ ಮಾತು ಆಧುನಿಕ ಸಂದರ್ಭದ ಸತ್ಯವೂ ಹೌದು. ಸಮಾಜ–ಸಂಸ್ಕೃತಿ ಎಂಬ 'ರಚನೆ'ಗಳನ್ನು ಮೀರಿ ವೈಯಕ್ತಿಕತೆ ಎಂಬುದು ಇರಲಾರದು ಎಂಬ ನಿಲುವು ಅದು. ಎಲ್ಲ ಬೌದ್ಧಿಕ ರಚನೆಗಳ ಹಿಂದೆ ಒಂದು ತಾತ್ವಿಕತೆಯು ಅಡಗಿ ಕೆಲಸ ಮಾಡುತ್ತಿರುತ್ತದೆ. ಅದು ಮುಖ್ಯ–ಅಮುಖ್ಯ, ಮೇಲು–ಕೀಳು, ಶ್ರೇಷ್ಠ–ಕನಿಷ್ಠ ಮೊದಲಾದ ದ್ವಂದ್ವ, ವೈರುಧ್ಯಗಳ ಮೂಲಕ ವ್ಯವಸ್ಥೆಯೊಂದನ್ನು ರೂಪಿಸುತ್ತದೆ. ಶಾಸ್ತ್ರ, ಪುರಾಣ, ಕಲೆ, ನೀತಿಸಂಹಿತೆ, ಕಾನೂನು, ಮತ–ಧರ್ಮ, ಹೀಗೆ ಮೂರ್ತ ಅಮೂರ್ತ ರಚನೆಗಳ ಮೂಲಕ ಅವು ಸ್ಥಿರಗೊಳ್ಳುತ್ತವೆ. ಕುಲ–ಜಾತಿಯಂತಹ ಸಾಂಕೇತಿಕ ವ್ಯವಸ್ಥೆಯ ಮೂಲಕ ಅವು ಜೀವನಕ್ರಮವಾಗಿ, ವಿಚಾರಕ್ರಮವೂ ಆಗಿ ಬೇರೂರುತ್ತ ಗಟ್ಟಿಗೊಳ್ಳುತ್ತವೆ.

ಅವುಗಳನ್ನೇ 'ಸಹಜ'ವೆಂದು ಸ್ವೀಕರಿಸುವ ಮನೋಭಾವವು ಕಾಲಕ್ರಮದಲ್ಲಿ ರೂಢಿಸಿಕೊಳ್ಳುತ್ತ ನಡೆಯುತ್ತದೆ. ಇಂಥ ರೂಢಿಗತ ಚಿಂತನೆಯನ್ನು ಛಿದ್ರಗೊಳಿಸಿ, ನಿಜವೇನಿರಬಹುದು ಎಂಬ ಹುಡುಕಾಟಕ್ಕೆ ಈ ಲೇಖನವು ನಮ್ಮನ್ನು ಎಳೆಸುತ್ತದೆ.

ಆದರೆ ಈ ಅರಿವಿನಲ್ಲಿಯೂ ಒಂದು ತೊಡಕಿದೆ. ಒಂದು ಕಡೆ ಎಲ್ಲವನ್ನು ವಿಸರ್ಜಿಸಿ (ನಿರಚನೆ) ಮುನ್ನಡೆಯುವ ಕನಕ, ಮತ್ತೊಂದೆಡೆಯಿಂದ ಏನನ್ನೋ ಪುನರ್ ರಚಿಸುವ ರಾಜಕಾರಣಕ್ಕೆ ಈಡಾಗುವುದು ಕಾಲದ ವ್ಯಂಗ್ಯವೇ ಸರಿ. ಕನಕದಾಸ ಬಹುದೊಡ್ಡ ಅನುಭಾವಿ, ಅಂತೆಯೇ ತತ್ವಜ್ಞಾನಿ. ಅವನ 'ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ' ರೀತಿಯ ರಚನೆಗಳು ಪ್ರಜ್ಞೆ ಮೊದಲೋ, ಇಂದ್ರಿಯಾನುಭವ ಮೊದಲೋ ಎಂಬ ಜಿಜ್ಞಾಸೆಗಿಳಿಯುತ್ತ ಅವೆರಡೂ ಒಂದರೊಳಗೊಂದು ಬೆರೆತ ವಿಸ್ಮಯವನ್ನು ದರ್ಶನ ಮಾಡಿಸುತ್ತದೆ. ಅಲ್ಲಮನ ರಚನೆಗಳನ್ನು ನೆನಪಿಸುವ ಈ ರಚನೆ ಸ್ಥಾಪಿತ ನೋಟದ ಕ್ರಮವನ್ನೇ ಪಲ್ಲಟಿಸುವಂಥದು. ಇಂಥ ಅರಿವು ಆಂತರಿಕ ಉತ್ಕ್ರಾಂತಿಯ ಫಲ. ಇದನ್ನು ಇಲ್ಲಿ ಏಕೆ ಪ್ರಸ್ತಾಪಿಸುತ್ತಿದ್ದೇನೆಂದರೆ, ಇಂಥ ಅರಿವಿನ ಫಲವಾದ ಕನಕ ರೂಢಿಗತ ಗ್ರಹಿಕೆಗಳ ತೊಡಕಿನಲ್ಲಿ ಬಿದ್ದು ಒದ್ದಾಡುವುದು ಸಾಧ್ಯವೇ? ಎಂಬ ಪ್ರಶ್ನೆಯನ್ನು ಮುಂದಿಡುವುದಕ್ಕಾಗಿ.

ಯಾವುದೇ ಕಾಲದ ರಚನೆಯಾಗಿರಲಿ ಇವತ್ತಿನ ಓದಿಗೆ ಗುರಿಯಾಗುವ ನುಡಿರಚನೆ ಈ ಕಾಲದ ಗ್ರಹಿಕೆಗಳ ಮೂಲಕವೇ ಅರ್ಥೈಸಲ್ಪಡುತ್ತದೆ. ಇಂದು ಅದು ಹೇಗೆ ಪ್ರಸ್ತುತ? ಎಂಬ ಬಿಂದುವಿನಿಂದಲೇ ವಿಸ್ತಾರವಾಗುತ್ತ ಸಾಗಿದ ಈ ಲೇಖನ ಕನಕರ ರಚನೆಗಳಲ್ಲಿ ಈ ಕಾಲದ ತತ್ವರಾಜಕಾರಣದ ಸಮಸ್ಯೆಗಳನ್ನೇ ಹುಡುಕುತ್ತದೆ. ಎಲ್ಲವನ್ನೂ ಪೊಲಿಟಿಸೈಸ್ ಗೊಳಿಸುವುದು ಇಂದಿನ ಜ್ಞಾನನಿರ್ಮಾಣದ ಲಕ್ಷಣವೂ ಹೌದು. ಆಮೂಲಕ ಕನಕ ಎತ್ತುತ್ತಿರುವ ಕುಲ–ಜಾತಿಗಳ ಪ್ರಶ್ನೆ, ಪ್ರಭುತ್ವದ ಪ್ರಶ್ನೆಗಳನ್ನು ನಾವು ಸಮಕಾಲೀನವಾಗಿ ಎದುರಿಸುತ್ತಿರುವ ಜಾತಿರಾಜಕಾರಣ, ಲಿಂಗರಾಜಕಾರಣ, ಧರ್ಮರಾಜಕಾರಣ, ಸಾಂಸ್ಕೃತಿಕ ರಾಜಕಾರಣದ ಪ್ರಶ್ನೆಗಳಾಗಿ ಲೇಖಕರು ಸ್ವೀಕರಿಸಿದ್ದಾರೆ. ಅದಕ್ಕೆ ಅವರು ಕನಕನ ಕೀರ್ತನೆಗಳು, ತತ್ವ–ನೀತಿಕಾವ್ಯಗಳು, ಮೋಹನ ತರಂಗಿಣಿ, ನಳಚರಿತ್ರೆ, ಹರಿಭಕ್ತಿಸಾರಗಳಿಂದ ವಿಪುಲವಾದ ಉದಾಹರಣೆಗಳನ್ನು ಮುಂದಿರಿಸಿದ್ದಾರೆ. ಇಂದಿನ ಪ್ರಜಾಪ್ರಭುತ್ವದ ಸಂದರ್ಭದಲ್ಲಿ ಸಮಾನತೆ, ಸಮಾನ ಅವಕಾಶ, ಅಧಿಕಾರಗಳ ಪ್ರಶ್ನೆಗಳು ನಮಗೆ ಮುಖ್ಯ. ಅಂತೆಯೇ 'ಜಾತ್ಯತೀತ'ವಾದ ಗ್ರಹಿಕೆಯ ಕ್ರಮವೂ ಅಷ್ಟೇ ಮುಖ್ಯ. ಈ ಹಿನ್ನೆಲೆಯಲ್ಲಿ ನಮಗೆ ಕನಕ ಎತ್ತಿದ ಕುಲದ ಪ್ರಶ್ನೆಗಳು ಬಹು ಪ್ರಸ್ತುತವೆನಿಸುತ್ತವೆ. ಕುಲನಿರಾಕರಣೆಯ ನಿಲುವು ಕ್ರಾಂತಿಕಾರಕ ಧೋರಣೆಯಾಗಿ ತೋರುತ್ತದೆ. ಆದರೆ ಎಚ್ಚೆತ್ತ ರಾಜಕೀಯ ಪ್ರಜ್ಞೆಯಿಂದ ಈ ಸಮಸ್ಯೆಯನ್ನು ಅರಿಯುವುದಕ್ಕೂ, ಭಕ್ತಿಪ್ರಜ್ಞೆಯ 'ನಿರಸನ'ದ ನಿಲುವಿನಿಂದ ಅರಿಯುವುದಕ್ಕೂ ವ್ಯತ್ಯಾಸವಿದೆ. ಜಾತಿ, ಕುಲ, ವರ್ಣ, ವರ್ಗ, ಲಿಂಗ ಹೀಗೆ

ಎಲ್ಲ ಉಪಾಧಿಗಳಿಂದ ಬಿಡುಗಡೆ ಹೊಂದಿ ಅಥವಾ ಎಲ್ಲವನ್ನೂ ರೂಢಿಸಿಕೊಂಡು ತನ್ನ ಸಹಜ ನೆಲೆಯನ್ನೂ ಕಾಣುವ ಅರಿವಿನ ಒತ್ತಡವಿರುವಂತೆ, ಇಂಥ ಕೃತಕ ಚೌಕಟ್ಟುಗಳಲ್ಲಿ ಕುಬ್ಜಗೊಳ್ಳದೇ ಸದಾ ವಿಸ್ತಾರಗೊಳ್ಳುತ್ತ ಮಹತ್ತಿನೆಡೆ ಕೈಚಾಚುವ ಭಕ್ತಿಯ ವಿಕಸನಭಾವವೂ ಇದೆ. ಭಕ್ತಿಯೆಂಬುದು ಬರಿಯ ಮುಗ್ಧತೆ, ನಂಬುಗೆ, ದಾಸ್ಯ ಅಥವಾ ಮೌಢ್ಯವಲ್ಲ. ಅದು ಅಹಂ ನಿರಸನದ ಮೂಲಕ ಬಯಲ ಭಾವವನ್ನು ಆತುಕೊಳ್ಳುತ್ತ ವಿಸ್ತರಿಸುವ, ವಿಕಸಿಸುವ ಚಲನಶೀಲ ಪ್ರಕ್ರಿಯೆ. ಅದನ್ನು ವಿವರಿಸಲು ಜೀವಾತ್ಮ–ಪರಮಾತ್ಮ, ಭಕ್ತ–ಭಗವಂತ ಇತ್ಯಾದಿ ಇನ್ನೂ ಅನೇಕ ಸಂಕೇತಗಳನ್ನು ಬಳಸಿಕೊಳ್ಳುವ ಅಭಿವ್ಯಕ್ತಿಯ (ಭಾಷಿಕ) ಅನಿವಾರ್ಯತೆ ಇದೆ ಅಷ್ಟೇ. ಅರಿವು ಅನುಭವಗಳ ಮೂಲಕವೇ ಅಸ್ತಿತ್ವ ಪಡೆಯಬೇಕಾದದ್ದು ಅನಿವಾರ್ಯ. ಅಂತಹ ಅನಿವಾರ್ಯತೆ ಕನಕನನ್ನೂ ಕಾಡಿರಲು ಸಾಕು. ಕನಕನಿಗೆ ಕೇಶವ ಒಂದು 'ನೆಪ'ಮಾತ್ರ ವಾಗಿರಬಾರದೇಕೆ? ಕನಕ ಕನಸುವ ಬಿಡುಗಡೆ ಹಾಗೂ ಬದುಕಿನ ಸಂದರ್ಭದಲ್ಲಿ ಆತ ಅಪೇಕ್ಷಿಸುವ ನೀತಿಸಂಹಿತೆಗಳನ್ನು ಪ್ರಸ್ತಾಪಿಸಲು 'ಕೇಶವ' ಭೂಮಿಕೆಯಾಗುತ್ತಾನೆ. ಅನಂತವಾದ ಅಂತೆಯೇ ಪರಿಪೂರ್ಣವಾದ ತತ್ವವೊಂದಕ್ಕೆ ಶರಣುಹೋಗಿ, ಆ ತತ್ವವನ್ನು ಭಕ್ತಿಯ ನೆಲೆಯಲ್ಲಿ ವ್ಯಕ್ತೀಕರಿಸಿ ಅವನಲ್ಲಿ ತನ್ನ ಅಂತರಂಗದ ತಳಮಳಗಳನ್ನು ಹಂಚಿಕೊಳ್ಳಲು ಲಭ್ಯವಾದ ಕೇಶವನನ್ನು ಕನಕ ಸಖನಾಗಿಸಿಕೊಂಡಿದ್ದಾನೆ. ಈ ವೈಯಕ್ತಿಕ ಭಾವವನ್ನು ಆಕಾಲದ ಶೈವ–ವೈಷ್ಣವ ರಾಜಕಾರಣದ ಮೂಲಕ ಗ್ರಹಿಸುವುದು ವಿಮರ್ಶೆಯ ತೊಡಕು. ತಾನು ಬದುಕುತ್ತಿರುವ ಕಾಲ–ದೇಶ ಸಂದರ್ಭಗಳಲ್ಲಿ ಪ್ರಸ್ತುತಗೊಳ್ಳುವ ಅನಿವಾರ್ಯತೆಯೂ ಕನಕನಿಗಿದೆ. ಕನಕ ಬದುಕಿದ್ದ ಕಾಲದಲ್ಲಿ ಬಹುಜನರ ಧ್ವನಿಯಾಗಿ ಮಂಚೂಣಿಯಲ್ಲಿದ್ದ ಭಕ್ತಿ ಚಳುವಳಿ– ದಾಸ ಸಾಹಿತ್ಯದ ನೆಲೆಯನ್ನು ಆತ ತನ್ನನ್ನು ಅಭಿವ್ಯಕ್ತಿಗೊಳಿಸುವಲ್ಲಿ ಬಹು ಸಮರ್ಥವಾಗಿ ಬಳಸಿಕೊಂಡಿದ್ದಾನೆ.

'Knowledge is Power' ಎಂಬ ಮಿಶೆಲ್ ಫುಕೋನ ಮಾತಿನ ಜಾಡನ್ನೇ ಹಿಡಿದು ಮುನ್ನಡೆದರೆ, ಕೇಶವಾಂಕಿತ ರಚನೆಗಳು ಇನ್ನೊಂದು ಬಗೆಯಲ್ಲಿ ಕಾಣತೊಡಗುತ್ತವೆ. ಅದನ್ನೇ ಕಾಣಿಸುವ ಪ್ರಯತ್ನವನ್ನು ರಾಮಲಿಂಗಪ್ಪ ಬೇಗೂರು ಅವರು ಮಾಡಿದ್ದಾರೆ. ಕೇಶವನ ಮಠೀಕರಣ, ಖಾಸಗೀಕರಣ, ವೈಷ್ಣವೀಕರಣ ಬೇಡ, ಸಾರ್ವಜನೀಕರಣ ಆಗಬೇಕು. ಕೃಷ್ಣ ಬೇಕು ಆದರೆ ಅವನನ್ನು ಬಂಧಿಸಿದ ದೇಗುಲ ಸಂಸ್ಕೃತಿ ಬೇಡ ಎಂದು ಅವರು ಗುರುತಿಸುತ್ತಾರೆ. ಕನಕನ ಸುತ್ತಲಿನ ಪವಾಡ, ಐತಿಹ್ಯ, ಇತಿಹಾಸಗಳ ಮೂಲಕ ಅವರು ಈ ಚಿಂತನಾ ನೆಲೆಯನ್ನು ಸಮರ್ಥಿಸುತ್ತಾರೆ. ಆದರೆ, ಸಂಸ್ಕೃತಿ ರಾಜಕಾರಣವು ದೈವವನ್ನು ದೇವಸ್ಥಾನ, ಮಠ, ಪಂಥಗಳೊಳಗೆ ಪ್ರತಿಷ್ಠಾಪಿಸಿ ಅದನ್ನೇ ಸತ್ಯವೆಂದು ನಂಬಿಸಿದೆ. ಎಲ್ಲ ಜ್ಞಾನ ಪರಂಪರೆಗಳೂ ಹಾಗೆ ನಂಬಿಸುತ್ತಿವೆ. ಅದನ್ನು ನಿರಸನಗೊಳಿಸಿ ಹೊರಬರಲು ಶುದ್ಧ ಅರಿವಿನ ಅನುಸಂಧಾನವೇ ಸರಿಯಾದ ಮಾರ್ಗ. ಅದು ಕನಕನಿಗೆ ಗೊತ್ತಿದೆ ಎಂಬುದು ನನ್ನ ಖಂಡಿತ ಅಭಿಪ್ರಾಯ. 'ಜ್ಞಾನ'ದ ಹಿಂದಿರುವ ಹುನ್ನಾರಗಳನ್ನು

ನಿವಾರಿಸಿಕೊಂಡು ಮುನ್ನಡೆವ ಈ ಮಾರ್ಗ ಅಲ್ಲಮನ ಆದಿಯಾಗಿ ಇಂದಿನವರೆಗೂ ನಮ್ಮ ನಡುವೆ ಜೀವಂತವಾಗಿದೆ.

ಪುರಾಣ ಕಥೆಗಳನ್ನು ಕಾವ್ಯಕ್ಕೆ ವಸ್ತುವಾಗಿಸಿಕೊಳ್ಳುವಾಗ ಅಥವಾ ಅವುಗಳ ಮೂಲಕ ತನ್ನ ಸಮಕಾಲೀನ ತಲ್ಲಣಗಳನ್ನು ಅಭಿವ್ಯಕ್ತಿಸುವಾಗ ಕನಕ ತೋರಿದ ಸಾಂಪ್ರದಾಯಿಕ ನಿಲುವುಗಳನ್ನು ಲೇಖಕರು ವಿವರವಾಗಿ ವಿಮರ್ಶಿಸಿದ್ದಾರೆ. ವರ್ಣಾಶ್ರಮ ಧರ್ಮವನ್ನು ಸಮರ್ಥಿಸುವ, ಭೂಸುರರನ್ನು ವಿಜ್ರಂಭಿಸುವ, ಹನುಮನ ದಾಸ್ಯವನ್ನು ಸ್ತುತಿಸುವ, ಪಾತಿವ್ರತ್ಯ-ದೇಹಸೌಂದರ್ಯವೇ ಮೇಲಾದ ಸ್ತ್ರೀ ದೇವತೆಗಳ ಸ್ತುತಿಯನ್ನು ಪುನರುಚ್ಚರಿಸುವ ಕನಕನ ಬಗ್ಗೆ ಅಸಮ್ಮತಿಯನ್ನು ವ್ಯಕ್ತಪಡಿಸಿದ್ದಾರೆ. ಕನಕನ ಅರಿವಿನ ಎಚ್ಚರದಲ್ಲಿ ಹುಟ್ಟಿದ ರಚನೆಗಳ ಜೊತೆ ಇವನ್ನು ತುಲನೆ ಮಾಡುತ್ತಾ, ಪುರಾಣ ಭಂಜಕತೆಯನ್ನು ಅವನಿಂದ ಅಪೇಕ್ಷಿಸುವುದು ಸಹಜವೇ. ಪ್ರಾಚೀನ ಕವಿಸಮಯಗಳನ್ನು, ಪುರಾಣ ಪಾತ್ರಗಳನ್ನು ಪರಿವರ್ತಿಸುವ ಕೆಲಸವನ್ನು ಅಂದಿನ ಸಂದರ್ಭದಲ್ಲಿ ಮಾಡದಿರಲು ಕನಕನಿಗೆ ಅವನದೇ ಆದ ಕಾರಣಗಳು ಇದ್ದೇ ಇವೆ. ಆಧುನಿಕ ಸಂದರ್ಭಕ್ಕೆ ಅಪ್ರಸ್ತುತವಾದ ಸಂಗತಿಗಳನ್ನು ವಿಸರ್ಜಿಸಿ ಮುನ್ನಡೆಯುವ ನಡೆಯನ್ನು ಬಯಸುವ ನಾವು ಅಲ್ಲಿ ಆ ರೀತಿಯ ಕನಕ ರಚನೆಗಳನ್ನು ವಿಸರ್ಜಿಸಬೇಕಾಗುತ್ತದೆ.

ಸಾಂಪ್ರದಾಯಿಕ ನಿಲುವುಗಳನ್ನೇ ಪುನರುಚ್ಚರಿಸುತ್ತಿರುವ ಕನಕನ ರಚನೆಗಳಿಗೆ ಲೇಖಕರು ಎರಡು ಕಾರಣಗಳನ್ನು ಊಹಿಸುತ್ತಾರೆ. ಒಂದು ಕನಕ, ವೈದಿಕ ತತ್ವರಾಜಕಾರಣದ ಬ್ರೇನ್ ಟ್ಯಾಪಿಂಗ್‌ಗೆ ಒಳಗಾಗಿದ್ದನೆಂದು. ಇನ್ನೊಂದು ಕಾಲಕಾಲಕ್ಕೆ ಕನಕನ ರಚನೆಗಳನ್ನು ಪ್ರದರ್ಶನ ಪಠ್ಯವಾಗಿ ಬಳಸುವ, ಪ್ರತಿಮಾಡುವ, ಅನುಸಂಧಾನ ಮಾಡುವವರು ತಮ್ಮ ಅಭಿಪ್ರಾಯಗಳನ್ನು ಸೇರಿಸುತ್ತ ನಡೆದಿದ್ದಾರೆ ಎಂದು. ಜೊತೆಗೆ ಉದ್ದೇಶಪೂರ್ವಕವಾಗಿಯೇ ವರ್ಣಾಶ್ರಮ ಪರಿಕಲ್ಪನೆ, ಶ್ರೇಷ್ಠತೆಯ ಪರಿಕಲ್ಪನೆಗಳಿಗೆ ಧಕ್ಕೆ ಬಾರದಂತೆ ಕನಕನ ರಚನೆಗಳನ್ನು ತಿರುಚುತ್ತ ಬಂದಿದ್ದಾರೆ ಎಂದು. ಕವಿಯೊಬ್ಬನ/ಳ ರಚನೆಗಳು, ಸಂತರ ಉಕ್ತಿಗಳನ್ನು ಕಾಲಕ್ರಮೇಣ ನಮಗೆ ಬೇಕಾದಂತೆ ಅರ್ಥೈಸುವ ತತ್ವರಾಜಕಾರಣವು ಮನುಷ್ಯನಷ್ಟೇ ಹಳೆಯದು. ಕನಕನ ರಚನೆಗಳೂ ಅದಕ್ಕೆ ಒಳಗಾಗಿರುವುದು ಸಂಭವನೀಯವೇ. ನಮ್ಮ ಹಾಗೂ ಅನ್ಯ ಎಂಬ ದ್ವಂದ್ವಪೂರಿತ ನೆಲೆಯಲ್ಲಿ ಲೋಕದ ಸಮಸ್ತವನ್ನೂ ಅರ್ಥೈಸುವ ಪೂರ್ವಗ್ರಹದಿಂದ ಪೀಡಿತವಾದ ಮಾನವ ಜನಾಂಗ ದ್ವೇಷ-ಹಿಂಸೆಗಳಲ್ಲಿ ನರಳುತ್ತಲೇ ಇರುವುದು ಇತಿಹಾಸದಿಂದ ವಿಧಿತ. ಭಕ್ತಿಯ ಸಾಮರಸ್ಯಪೂರ್ಣ ನಡೆಯಿಂದ ಅರ್ಥದ ಪೂರ್ವಗ್ರಹಗಳನ್ನು ದಾಟಿ ನಡೆಯುವ ಸಂತರು ಸಹ ಮತ್ತೆಮತ್ತೆ ಅದೇ ನೆಲೆಗಳಲ್ಲಿ ಪ್ರತಿಷ್ಠಾಪಿಸಲ್ಪಡುವ ಕೇಡಿನ ರಾಜಕಾರಣ ಮಾನವೀಯತೆಯ ಮುಂದಿರುವ ಸವಾಲು. ಜನಿವಾರ, ಶಿವದಾರ, ತಿರುನಾಮ, ಭಸ್ಮಗಳಿಗೆ ಸೀಮಿತಗೊಳ್ಳದೇ ಬಯಲಾಗಬೇಕೆಂಬ ಅಂತರಂಗದ ಅಭೀಪ್ಸೆಯೆ

ಏಕಮುಖಿ ಅರ್ಥದ ಬಂಧನದಿಂದ ಬಿಡುಗಡೆಗೆ ದಾರಿ ತೋರಿಸಬಲ್ಲದು. ಕನಕನನ್ನು ತಿರುನಾಮದಿಂದ ರಕ್ಷಿಸಲು ಅವನಿಗೆ ಕಂಬಳಿ ಹೊದೆಸುವ ನಿಲುವು ಕೂಡ ಅಷ್ಟೇ ಸೀಮಿತವಾದದ್ದು. ಇವೆಲ್ಲ ಕನಕನನ್ನು ಹೊರಗಿಟ್ಟು ಮಾಡುವ ತತ್ವರಾಜಕಾರಣವೇ ಹೊರತು ಕನಕನೊಳಗೆ ಇಳಿದು ನೋಡುವ ಪ್ರಯತ್ನಗಳಲ್ಲ.

ನಯನ ಬುದ್ಧಿಯ ಒಳಗೋ ಬುದ್ಧಿ ನಯನದ ಒಳಗೋ
ನಯನ ಬುದ್ಧಿಗಳೆರಡು ನಿನ್ನೊಳಗೊ ಹರಿಯೇ!

# ಭಾಗ – 2

# ಕನಕ ಕೃತಿಗಳ ಸಾಂಸ್ಕೃತಿಕ ಅನುಸಂಧಾನ

# ನಳಚರಿತ್ರೆ : ಚರಿತ್ರೆಯ ಸ್ತ್ರೀ ವ್ಯಾಖ್ಯಾನ

– ಡಾ ಎನ್ ಆರ್ ಲಲಿತಾಂಬ

ಕನಕದಾಸರನ್ನು ಒಬ್ಬ ಸಂತನಾಗಿ, ಕವಿಯಾಗಿ ಸಾಮಾಜಿಕ ನ್ಯಾಯದ ಕುರಿತು ಚಿಂತಿಸಿದ ಒಂದು ವೈಚಾರಿಕ ಕಿಡಿಯಾಗಿ, ಸಾಮಾಜಿಕ ಪರಿವರ್ತನೆಯ ಹರಿಕಾರನಾಗಿ, ಭಕ್ತನಾಗಿ ಅನುಸಂದಾನ ನಡೆಸಿದ ನನಗೆ ಸ್ತ್ರೀವಾದಿ ಓದಿಗೆ ಅವರ ಕೀರ್ತನೆಗಳನ್ನು ಒಳಪಡಿಸಿದಾಗ ಅಲಕ್ಷಿತ ಸಮಾಜವನ್ನು ಮೇಲೆತ್ತಲು ಪ್ರಯತ್ನಿಸಿದ ಸೂಕ್ಷ್ಮಮತಿ ಹೆಣ್ಣನ್ನು ಹೀಗೆ ಚಿತ್ರಿಸಿಬಿಟ್ಟರಲ್ಲ, ಮತ್ತದೇ ಹಳೆಯ ರಾಗಕ್ಕೆ ದನಿಗೂಡಿಸಿಬಿಟ್ಟರಲ್ಲ ಎಂಬ ನಿರಾಸೆ ಕಾಡಿದ್ದುಂಟು.

ಕನಕರ ನಳಚರಿತ್ರೆಯನ್ನು ಕುರಿತು ವಿಮರ್ಶಿಸಲು ನನಗೆ ಭಯವಿದೆ ಏಕೆಂದರೆ "ಬಹುಪ್ರಾಚೀನವೂ, ಚಿರಜಾಜ್ವಲ್ಯಮಾನವೂ, ಸರಳಸುಂದರವೂ ಆದ ಈ ಉಪಾಖ್ಯಾನ ಯಾವ ಶೌನಕ ಸೌತಿಗಳ ಕೈವಾಡಕ್ಕೂ ಸಗ್ಗದೆ, ಕಾಲರಾಂತುನ ಧಾಳಿಯಿಂದ ಜರ್ಝರಿತವಾಗದೆ, ಸ್ವಸ್ವರೂಪವನ್ನು ತೊರೆಯದೆ ಪ್ರೇಮನಿಷ್ಠೆ, ಪಾತಿವ್ರತ್ಯ ಸಹನೆ ಕಷ್ಟಸಹಿಷ್ಣತೆ ಮೊದಲಾದ ಮಹೋಜ್ವಲ ಜೀವನ ಮೌಲ್ಯಗಳನ್ನು ಪ್ರತಿಪಾದಿಸುತ್ತಾ, ನೈತಿಕ ಶ್ರದ್ಧೆಯನ್ನು ಉದ್ಘೋಷಿಸುತ್ತಾ ನಿತ್ಯ ನೂತನವಾಗಿ ರಾರಾಜಿಸುತ್ತಿದೆಯೆಂದು ಪಾಶ್ಚಾತ್ಯ ಪೌರ್ವಾತ್ಯ ವಿದ್ವಾಂಸರೆಲ್ಲ ಒಕ್ಕೊರಲಿನಿಂದ ಸಾರಿ ಹೇಳಿದ್ದಾರೆ"1 ಎಂದಮೇಲೆ ಸ್ತ್ರೀವಾದಿ ನೆಲೆಯಿಂದ ಅದನ್ನು ನಿಕಷಕ್ಕೊಡ್ಡಲು ನನಗೆ ಎಂಟೆದೆಯ ಅವಶ್ಯಕತೆಯಿದೆ.

ಈಗಂತೂ ನನಗೆ ಬೇರೆ ವಿಧಿಯಿಲ್ಲ. ಇಂತಹ ಕಾವ್ಯದಲ್ಲಿ ಎಲ್ಲಾದರೂ ಸ್ತ್ರೀಪರವಾದ ಸಂವೇದನೆಗೆ ತುಡಿದಿರುವ ಕವಿಯ ಮಾತುಗಳು, ಸನ್ನಿವೇಶಗಳು ಸಿಗಬಹುದೇ ಎಂಬ ಆಸೆಯಲ್ಲಿ ನೋಡಿದಾಗ ಇಡೀ ಕಥೆಯಲ್ಲಿ ದಮಯಂತಿಯೇ

ತುಂಬಿಕೊಂಡಿದ್ದು, ಈ ಕಥೆಗೆ ನಳಚರಿತ್ರೆ ಎನ್ನುವುದಕ್ಕಿಂತಾ 'ದಮಯಂತಿ ಚರಿತ್ರೆ' ಎಂದು ಕರೆಯದೆ ಇದ್ದುದೇ ಕೊರತೆ ಎನಿಸಿತು. ಇದು ನಳನ ಪ್ರೇಮಕ್ಕಿಂತಲೂ ದಮಯಂತಿಯ ಪ್ರೇಮಪರೀಕ್ಷೆಯ ಕಥನವೇ ಆಗಿದೆ.

ಹೇಳೀಕೇಳಿ ಈ ಕಥೆ ರಾಮಾಯಣ ಮಹಾಭಾರತಕ್ಕಿಂತಲೂ ಹಳೆಯದು. ಬೃಹತ್ಕಥೆ, ಕಥಾಸರಿತ್ಸಾಗರ, ಪದ್ಮ, ಮತ್ಸ್ಯ, ವಾಯು, ಲಿಂಗ, ಬ್ರಹ್ಮಾಂಡಪುರಾಣ ಮುಂತಾದ ವೈದಿಕ ಪುರಾಣಗಳಲ್ಲದೆ ಜೈನ, ಬೌದ್ಧ, ಪುರಾಣ, ಆಖ್ಯಾಯಿಕೆಗಳಲ್ಲಿ ಕಾಣಿಸಿಕೊಂಡಿರುವಂತದ್ದು. ನಳೋಪಾಖ್ಯಾನದ ಭಾಷೆಯ ಶೈಲಿ, ಅಲ್ಲಲ್ಲಿ ಉಕ್ತವಾಗಿರುವ ದೇವತೆಗಳು ಮತ್ತು ಇತರ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಇದು ಇತಿಹಾಸ ಕಾವ್ಯಗಳಿಗಿಂತ ಹಿಂದಿನದೆಂದೂ, ಅದು ವೇದಗಳಷ್ಟೇ ಪ್ರಾಚೀನವಾಗಿರಬೇಕೆಂದು ವಿದ್ವಾಂಸ ಪೆಂಜೇರ್ ಹೇಳಿದ್ದಾನೆ.2 ಎಲ್ಲ ಯುಗಗಳಲ್ಲೂ ಮತ್ತೆ ಮತ್ತೆ ಹೇಳಲಾಗಿರುವ ಮತ್ತು ಕೇಳಲಾಗಿರುವ ಜನಜನಿತವಾದ ಈ ಕಥೆಯು ರಾಮನಿಗೆ, ಧರ್ಮರಾಯನಿಗೆ ಹೇಳಿದ ಕಥೆಯಷ್ಟೇ ಅಲ್ಲ, ಇದ್ದಕ್ಕಿದ್ದಂತೆ ಗಂಡ ಮರೆಯಾದ, ಹೆಂಡತಿಯನ್ನು ಬಿಟ್ಟುಹೋದ ಸಂದರ್ಭಗಳಲೆಲ್ಲಾ ತಾಳ್ಮೆಯಿಂದ ಕಾಯಬೇಕೆಂದು ಒಂಟಿಯಾದ ಹೆಣ್ಣಿಗೆ ಹೇಳಿರುವ ಕಥೆಯೂ ಆಗಿದೆ.3 ಗಂಡಂದಿರಿಂದ ದೂರವಾಗಿ ಬದುಕಬೇಕಾಗಿ ಬರುವ ಹೆಣ್ಣುಗಳು ಪುರುಷಾಪೇಕ್ಷೆಯಿಂದ ಚಂಚಲಗೊಳ್ಳದಂತೆ ಅವರನ್ನು ಪಾತಿವ್ರತ್ಯದ ಚೌಕಟ್ಟಿಗೆ ಕಟ್ಟುವ ಸಲುವಾಗಿಯೇ ದಮಯಂತಿಯ ಆದರ್ಶವನ್ನು ಮತ್ತೆ ಮತ್ತೆ ಹೇಳಲಾಗಿದೆ. ಬದಲಾದ ಹೆಸರಿನೊಂದಿಗೆ, ಸನ್ನಿವೇಶದೊಂದಿಗೆ ಇದೇ ಕಥೆ ಈಗಲೂ ಮತ್ತೆ ಮತ್ತೆ ಹೇಳಲ್ಪಡುತ್ತಿದೆ, ಹೇರಲ್ಪಡುತ್ತಿದೆ.

ಇಂತಹ ಪ್ರಸಿದ್ಧ ಕಥಾಚೌಕಟ್ಟನ್ನು ಕನಕದಾಸರು ಬದಲಾಯಿಸಲು ಹೇಗೆಸಾಧ್ಯ ಎಂದು ನೀವು ಕೇಳಬಹುದು. ಮಧ್ಯಕಾಲೀನ ಭಕ್ತಿ ಸಾಹಿತ್ಯದಲ್ಲೇ ವಿಭಿನ್ನ ಧ್ವನಿಯಾಗಿರುವ ಕನಕರಿಂದ ಆ ನಿರೀಕ್ಷೆ ಇರುವುದು ತಪ್ಪಲ್ಲ. ಜಾನಪದ, ಕ್ಷಾತ್ರ ಯುಗ, ಭಕ್ತಿಯುಗ ಹೆಣ್ಣನ್ನು ವಿಭಿನ್ನವಾಗಿ ಗ್ರಹಿಸಿರುವುದು ನಮಗೆ ತಿಳಿದಿದೆ. ಅದರಲ್ಲೂ ಕ್ಷಾತ್ರ ತೇಜದ ದಿಗ್ವಿಜಯದ ಕಾಲದಲ್ಲಿ, ಹೆಣ್ಣುಗಳು ಗೆದ್ದು ಅಧೀನಪಡಿಸಿ ಆಳಬಹುದಾದ ಕ್ಷೇತ್ರಗಳೆಂದೇ ಭೂಪತಿಗಳು ಭಾವಿಸಿದ್ದರು. ಇನ್ನು ಭಕ್ತಚರಿತ್ರೆಗಳಲ್ಲಿ, ವೈರಾಗ್ಯ ಬೋಧನೆಯ ಕಾವ್ಯಗಳಲ್ಲಿ ಅವಳು ಅಧೋಮುಖಿಯಾಗಿ, ಮಾಯೆಯಾಗಿ, ಪುರುಷನ ಮುಕುತಿಗೆ ಬಾಧಕಳಾಗಿರುವುದರಿಂದ ನಿವಾರಿಸಲೇಬೇಕಾದವಳಂತೆ ಚಿತ್ರಣಗೊಂಡಿರುವುದು ಒಂದು ಮಾದರಿಯಾದರೆ, ಪರಮ ಪತಿವ್ರತೆಯಾಗಿ ಗಂಡನ ಧ್ಯೇಯೋದ್ದೇಶಗಳನ್ನು ಸಾಕಾರಗೊಳಿಸುವುದಕ್ಕಾಗಿ ತನ್ನ ಸತೀತ್ವವನ್ನೇ ತೇಯುವ ಸಾಧ್ವಿಶಿರೋಮಣಿಯಾಗಿ ಚಿತ್ರಣಗೊಂಡಿರುವುದು ಮತ್ತೊಂದು ಮಾದರಿ.

ಇದೊಂದು ಪ್ರೇಮಕಾವ್ಯ. ವಿಜಯದ ಕಾವ್ಯವೂ ಅಲ್ಲ, ವೈರಾಗ್ಯದ ಕಾವ್ಯವೂ ಅಲ್ಲ. "ಪತಿವ್ರತಾ ಧರ್ಮ, ಏಕನಿಷ್ಠೆ ಮಿಳಿತವಾದ ಗಂಡುಹೆಣ್ಣುಗಳ ಆದರ್ಶ

ಜೀವನದ ಪ್ರೇಮಕಾವ್ಯ"ವೊಂದನ್ನು ಭಕ್ತಕವಿಯೊಬ್ಬ ಪುನಾರಚಿಸಿರುವುದು ಹೇಗಿದೆ ಎಂಬ ಕುತೂಹಲ ಸಹಜ. ಈ ಕಥೆಯಲ್ಲಿ ಕಾಲಧರ್ಮಕ್ಕೆ ತಕ್ಕಂತೆ ಬೇರೆ ಬೇರೆ ವಮೌಲ್ಯಗಳಿಗೆ ಒತ್ತನ್ನು ಕೊಡುತ್ತಾ ಬರಲಾಗಿದೆ. ವಿಧಿಗೆ ಎಲ್ಲರೂ ತಲೆಬಾಗಲೇಬೇಕೆಂಬ ಕರ್ಮಸಿದ್ಧಾಂತದ ಪ್ರತಿಪಾದನೆ ವ್ಯಾಸರಿಗೆ ಮುಖ್ಯವಾದರೆ, ಸಂಸ್ಕೃತ ಕವಿಗಳಿಗೆ ಇದು ಶೃಂಗಾರಭರಿತ ಪ್ರೇಮ ಕಥೆಯಾಗಿದೆ. ಶ್ರೀಹರ್ಷನಂತೂ ನಳ ದಮಯಂತಿಯರ ಪ್ರೇಮ–ವಿರಹ ಸ್ವಯಂವರ, ಸಮಾಗಮಗಳಿಗೆ ಸೀಮಿತ ಮಾಡಿಕೊಂಡಿದ್ದಾನೆ. ಕನಕದಾಸರಿಗೆ ಇದು ವಿಧಿ ವಿಪರೀತವನ್ನೂ ಗೆಲ್ಲುವ ಶಕ್ತಿಕೊಡುವ ಭಕ್ತರ ಭಕ್ತಿಯ ಗೆಲುವಾಗಿದೆ. ಆದರೂ ಪವಾಡ, ವರ, ಶಾಪ ಇತ್ಯಾದಿಗಳನ್ನೇ ವಿಜೃಂಭಿಸದೆ ಕನಕರು ಆದಷ್ಟೂ ನಳ ದಮಯಂತಿಯರನ್ನು ದೃಢಭಕ್ತಿಯನ್ನು ಹೊಂದಿರುವ ಸಹಜ ಮಾನವರಂತೆ ಚಿತ್ರಿಸಲು ಪ್ರಯತ್ನಿಸಿದ್ದಾರೆ. ಕನಕರ ವೈಚಾರಿಕ ಮನಸ್ಸನ್ನೂ, ಸಾಂಪ್ರದಾಯಿಕ ರೂಢಿಗತ ಮೌಲ್ಯಗಳು ಮೆತ್ತಿಕೊಂಡಿರುವುದು ಈ ಕಥೆಯಲ್ಲಿ ಕಂಡುಬರುತ್ತದೆ. ಗಂಡಿನ ಅಧಿಕಾರವನ್ನು ಹೆಣ್ಣಿನ ಅಧೀನತೆಯನ್ನೂ ಸ್ಪಷ್ಟವಾಗಿ ಸ್ಥಾಪಿಸುವ ಪತಿವ್ರತಾಧರ್ಮದ ಚೌಕಟ್ಟನ್ನು ಕನಕರು ಒಪ್ಪಿ, ಇಲ್ಲಿ ಪ್ರತಿಪಾದಿಸಿದ್ದಾರೆ. ಹೆಣ್ಣುಗಳು ಸುವ್ರತೆಯರಾಗಿರಬೇಕೆಂದೂ, ಚಂಚಲೆಯರೂ, ಕಪಟಿಗಳು ಧೂರ್ತೆಯರೂ ಆಗಿರಬಾರದೆಂಬ ಸನಾತನ ಕಾಲದ ನಿರೀಕ್ಷೆ ಮತ್ತೊಮ್ಮೆ ಇಲ್ಲಿ ಸ್ಥಾಪಿತವಾಗಿದೆ. "ದಮಯಂತಿ ಸತ್ಯಜ್ಞಾನಿ. ಸತಿಯರಿಗೆ ಗುರು ಪತಿವ್ರತಾಗುಣದಿ ಮೌನದಲಿ ಪತಿಯಂಘ್ರಿಕಮಲ ಧ್ಯಾನದಲಿ ಮನಸಂದು ಘನಕಾನನಕೆ ಗಮಿಸಿದಳು"(4–35)

### ಭಕ್ತಿ–ಪತಿಭಕ್ತಿ

ಇದು ಭಕ್ತಿ ಪ್ರತಿಪಾದನೆಗೆಂದು ಬರೆದಿರುವ ಕಥೆಯಲ್ಲ. ಇಲ್ಲಿ ನಳದಮಯಂತಿಯರು ಭಕ್ತರೆಂದು ಕಾವ್ಯದ ಉದ್ದಕ್ಕೂ ಹೇಳುತ್ತಾರಾದರೂ ಭಕ್ತಿ ಕಥೆಯ ಹಂದರದೊಳಗೆ ನೇಯ್ದುಕೊಂಡು ಪ್ರಖರವಾಗಿ ಬಂದಿಲ್ಲ. ಈ ಕಥೆಯಲ್ಲಿ ದೈವಭಕ್ತಿ ಪತಿಭಕ್ತಿಗಳು ಏಕೀಭವಿಸಿರುವುದರಿಂದ ಭಕ್ತಿಯ ಪರೀಕ್ಷೆ ಎಂದರೆ 'ಪತಿಭಕ್ತಿ'ಯ ಪರೀಕ್ಷೆಯೇ ಆಗಿದೆ. ಭಕ್ತನೂ ಸಜ್ಜನನೂ ಆಗಿದ್ದ ನಳನ ರಾಜ್ಯದಲ್ಲಿ ಸಜ್ಜನರು ಹರಿಭಕ್ತಿಭಾವ ವ್ರತನಿಯಮ ನಿಷ್ಠೆಯಲ್ಲಿದ್ದರಂತೆ! ದಮಯಂತಿಯು ಇಂದ್ರಾದಿ ದೇವತೆಗಳನ್ನು ಸರಸ್ವತಿಯ ಸೂಚನೆಯಂತೆ ಪ್ರಾರ್ಥಿಸಿ ಸ್ವಯಂವರದಲ್ಲಿ ಪ್ರೇಮಕ್ಕೆ ಒದಗಿದ ಕಷ್ಟದಿಂದ ಪಾರಾಗುತ್ತಾಳೆ. ನಳ ಜೂಜಿನಲ್ಲಿ ಸೋತಾಗ "ಕಮಲನಾಭನ ಕರುಣ ಕವಚವು ಸಮೆದರಾರೇಗುವರು" ಎಂದು ಮರುಗುತ್ತಾರಾದರೂ ಧೃತಿಗೆಡದೆ ವನವಾಸಕ್ಕೆ ತೆರಳುತ್ತಾರೆ. ಪತಿಯೇ ದೈವವಾಗಿ ಭಾವಿಸುವ ದಮಯಂತಿ "ಅನುದಿನವು ನಾ ನಿಮ್ಮ ಪದಯುಗ ವನಜವನು ಭಜಿಸುವುದ ತೊರೆದು ಈ ತನುವ ಸೈರಿಸಲಾರೆ"ಎನ್ನುವ ಪತಿಭಕ್ತಿಯನ್ನು ತೋರುತ್ತಾಳೆ. ಕಾಡಿನಲ್ಲಿ ಕರುಣೆಯಿಲ್ಲದೆ ಮಲಗಿದವಳನ್ನು ಪತಿ ಬಿಟ್ಟು ಹೋಗಿರುವನೆಂದು ತಿಳಿದಾಗ ದಮಯಂತಿಗಾದ ಆಘಾತ ದೊಡ್ಡದು. ಅದನ್ನು

ನಳನಿಂದ ಅವಳು ನಿರೀಕ್ಷಿಸಿರಲಿಲ್ಲ. ಆ ಸಮಯದಲ್ಲಿ "ಪೊಡವಿಗಿಳಿವೆನೋ, ಬೆಂಕಿಗೆ ಹಾಯಲೇ, ಕಾಳಕೂಟದ ಮಡುವಿನಲಿ ಮುಳುಗಲೋ, ಬೆಟ್ಟದಿಂದ ಹಾರಲೋ, ವಿಷಕುಡಿಯಲೋ ಏನುಮಾಡಲಿ" ಎಂದು ಸಾವು ಅವಳ ತಲೆಯಲ್ಲಿ ಸುಳಿದಾಡಿದ್ದು ನಿಜ, ಆದರೆ ಅಷ್ಟು ಸುಲಭವಾಗಿ ಬದುಕನ್ನು ಚೆಲ್ಲಿಬಿಡುವ ಹೇಡಿಯಲ್ಲ ಅವಳು. ಅಗಾಧವಾದ ಆತ್ಮವಿಶ್ವಾಸದ ಜೊತೆಗೆ ದೈವಭಕ್ತಿಯೂ ಇತ್ತು. ಹಾವೊಂದು ತನ್ನನ್ನು ನುಂಗಲು ತೊಡಗಿದ ಸನ್ನಿವೇಶದಲ್ಲಿ "ಜಗನ್ನಾಥ ಅರಿಗೊರಲುವೆನೆನ್ನ ಪ್ರಾಣವನಾರು ಕಾವವರಕಟ ಬಿಡಿಸೈ ವಾರಿಜಾಕ್ಷ ಮುಕುಂದ" ಎಂದು ಪ್ರಾರ್ಥಿಸುತ್ತಾಳೆ. ಇಲ್ಲಿ ಮುಕುಂದನ ಯಾವ ಪವಾಡವೂ ನಡೆಯದಿದ್ದರೂ ಬೇಡನಿಂದ ಬದುಕುಳಿಯುತ್ತಾಳೆ. ಕಾಡಾನೆಯ ಪ್ರಸಂಗದಲ್ಲಿ ಗಂಡತೊರೆದ 'ಅನಿಷ್ಟ'ಳಾದ ದಮಯಂತಿಯ ದೆಸೆಯಿಂದಲೇ ಕಾಡನೆಗಳ ದಂಡು ಅಕ್ರಮಿಸಿತೆಂದು ವರ್ತಕರು ಅವಳನ್ನು ಓಡಿಸಿಬಿಡುತ್ತಾರೆಂಬ ಚಿತ್ರಣವನ್ನು ಚೌಂಡರಸ ನೀಡಿದರೆ, ಕನಕರು ಆ ಪ್ರಸಂಗವನ್ನು ದಮಯಂತಿಯ ಭಕ್ತಿಯ ಪ್ರಾರ್ಥನೆಯಿಂದಾಗಿ ಅನೆಗಳು ಹಿಮ್ಮೆಟಿದವೆಂದು ಹೇಳುತ್ತಾ "ದೈವವ ನೆನೆವ ಭಕ್ತರಿಗುಂಟೆ ಭಯ" (5-42) ಎಂದು ಭಕ್ತಕವಿಗೆ ತಕ್ಕಂತೆ ಬದಲಾಯಿಸಿಕೊಂಡಿದ್ದಾರೆ.

**ನಿಜಸತಿಗೆ ತಪ್ಪಿದ ಬಾಹಿರ**

ಎಲ್ಲ ಕಾಲದಲ್ಲೂ ಪುರುಷಾರ್ಥವು ಎಲ್ಲ ದಿಕ್ಕಿನಿಂದಲೂ ಹೆಣ್ಣನ್ನು ತನ್ನ ಸಾಧನೆಯ ಸಲಕರಣೆಯಾಗಿ ನಿಮಿತ್ತವಾಗಿ ಬಳಸಿಕೊಂಡಿರುವುದು ಕಂಡುಬರುತ್ತದೆ. ನಳನ ಕಥೆಯಲ್ಲಿಯೂ ದಮಯಂತಿ ನಳಮಹಾರಾಜನ ಅಮರ ಪ್ರೇಮದ, ಸತ್ಯಸಾಧನೆಯ ನಿಮಿತ್ತವಾಗಿ ಬಂದಿದ್ದರೂ ನಾಯಕನನ್ನು ಮೀರಿ ಅವಳ ಪಾತ್ರ ಬೆಳೆದಿದೆ.

ನಳನ ಚರಿತ್ರೆಯಲ್ಲಿ ಅವನ ವಿಶೇಷತೆ ಏನು? ನಳ ಗುಣಶೀಲ ಸೌಂದರ್ಯಗಳಿಗೆ ಹೆಸರಾಗಿದ್ದನು. ಅವನಲ್ಲಿ ದೋಷ ಹುಡುಕಲು ಕಲಿಪುರುಷನು ಮೈಯೆಲ್ಲಾ ಕಣ್ಣಾಗಿ ಕಾಯಬೇಕಾದಂತಹ ಮಹಾನ್ ವ್ಯಕ್ತಿತ್ವ. ಹರಿಶ್ಚಂದ್ರ ಸತ್ಯಕ್ಕೆ ಸಂಕೇತವಾದಂತೆ ಇಲ್ಲಿ ನಳ ತ್ಯಾಗಮೂಲವೂ ನಿಸ್ವಾರ್ಥಪರವೂ ಆದ ಪ್ರೇಮಕ್ಕೆ ಸಂಕೇತ. ಅವನು ಕಷ್ಟಕೊಟ್ಟ ಕಲಿಪುರುಷನನ್ನು ಕ್ಷಮಿಸುವ ಉದಾರಿ, ಮಡದಿ ಮರುಮದುವೆಯಾಗುವಳೆಂದು ತಿಳಿದೂ ಅವಳ ಹಿತವನ್ನೇ ಬಯಸಿದ ಉತ್ಕಟ ಪ್ರೇಮಿ. ಮಕ್ಕಳನ್ನು ಕಂಡು ಕರಗಿ ಕಣ್ಣೀರು ಮಿಡಿಯುವ ಹೆಂಗರುಳು ಅವನದು. ಮಹಾಸಂಯಮಿ, ತ್ಯಾಗಮಯಿ ತಾನು ಕಷ್ಟಪಟ್ಟರೂ ಹೆಂಡತಿ ಸುಖವಾಗಿರಲಿ ಎಂದು ಯೋಚಿಸುವ ನಿಸ್ವಾರ್ಥಿ"[4] "ಪ್ರಪಂಚದಲ್ಲಿ ಬಿರುದು ಬಾವಲಿಗಳನ್ನು ತ್ಯಾಗಮಾಡಿದವರಿದ್ದಾರೆ, ರಾಜ್ಯ ತ್ಯಾಗಮಾಡಿದವರಿದ್ದಾರೆ ಆದರೆ ಪ್ರೇಮತ್ಯಾಗಕ್ಕೆ ಸಿದ್ಧರಾದ ಜನ ಹಲವರಿಲ್ಲ, ಪ್ರೇಮದೌತ್ಯದ ಪ್ರಸಂಗದಲ್ಲಿ, ಮರುಸ್ವಯಂವರದ ಪ್ರಕರಣದಲ್ಲಿ ಅವನು ನಡೆದುಕೊಂಡ ರೀತಿ, ಪ್ರಕಟಿಸಿದ

ಪ್ರಾಮಾಣಿಕತೆ, ತೋರಿಸಿದ ಧೈರ್ಯ ನಳನೊಬ್ಬನಿಗೆ ಮಾತ್ರ ಸಾಧ್ಯ, ಹೆಜ್ಜೆ ಹೆಜ್ಜೆಗೂ ವಿಧಿ ಅವನ ಸತ್ಯವನ್ನು, ತ್ಯಾಗಮನೋಭಾವವನ್ನು ಪರೀಕ್ಷಿಸಿ, ಸೋತಿದೆ" ಎಂದು ನಳನ ಪಾತ್ರವು ವಿದ್ವಾಂಸರಿಂದ ಮೆಚ್ಚುಗೆ ಪಡೆದಿದೆ.

ಅವನು ಅತ್ಯಂತ ಸುಂದರನೂ ಸಜ್ಜನನೂ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಈ ಅಮರ ಪ್ರೇಮಿ! ದಮಯಂತಿ ತನ್ನನ್ನು ಒಲಿದಿದ್ದಾಳೆಂದು ತಿಳಿದಿದ್ದರೂ ಲೋಕಪಾಲರಿಗೆ ಎದುರಾಡಲಾಗದ ಅಧೀನತೆ, ಅಥವಾ ಅವರ ಅಧಿಕಾರ, ಅಮರತ್ವ, ಸ್ಥಾನಮಾನಗಳ ಮುಂದೆ ನರನಾದ ತಾನು ಏನೂ ಅಲ್ಲವೆಂಬ ಕೀಳರಿಮೆಯಿಂದ ಬಳಲುತ್ತಾನೆ. ಲೋಕದಲ್ಲಿ ಅವನು ಅಸಾಮಾನ್ಯನೆನಿಸಿದ್ದರೂ ಲೋಕಪಾಲರ ಮುಂದೆ ಏನೇನೂ ಅಲ್ಲ. ಯಾರಿಗೆ ಗೊತ್ತು ದಮಯಂತಿ ಇಂದ್ರನನ್ನು ಒಲಿದರೂ ಒಲಿಯಬಹುದು ಎಂಬ ಶಂಕೆಯ ಕಾರಣದಿಂದ ತನ್ನ ಪ್ರೇಮವನ್ನೂ ಬಿಟ್ಟುಕೊಡಲು ಸಿದ್ಧನಾಗುತ್ತಾನೆ. ಇದು ಸಾಮಾನ್ಯನೊಬ್ಬನ ಪ್ರೇಮಕ್ಕೆ ಮಹತ್ವವಿಲ್ಲ ಎಂಬ ಸಂದೇಶವನ್ನೇ ಹೇಳುತ್ತಿದೆ. ಅಪಾಂಗನೂ, ಕುರೂಪಿಯೂ ಆದ ಬಾಹುಕನಾಗಿ ಊಳಿಗದಲ್ಲಿದ್ದ ನಳನ ಪ್ರೇಮ ಪ್ರಲಾಪವು ಅಪಹಾಸ್ಯಕ್ಕೆ ಗುರಿಯಾಗುವುದು ಕೂಡ ಪ್ರೇಮವನ್ನು ಸೌಂದರ್ಯ ಮತ್ತು ಅಧಿಕಾರಗಳೊಂದಿಗೆ ಬೆಸೆದು ನೋಡುವ ಧೋರಣೆಯನ್ನೇ ಬಿಂಬಿಸುತ್ತದೆ. ಮೂಲದಲ್ಲಿ ನಳ ತಾನೂ ಸ್ವಯಂವರಾರ್ಥಿಯಾಗಿರುವುದರಿಂದ ದೌತ್ಯವನ್ನು ಮಾಡಲಾರೆನೆನ್ನುವ ಧೈರ್ಯವನ್ನಾದರೂ ತೋರುತ್ತಾನೆ. ಇಲ್ಲಿ ಅದನ್ನು ಮುಚ್ಚಿಟ್ಟು, ಸ್ತ್ರೀಯರ ಚಂಚಲಗುಣಗಳ ಬಗೆಗೆ ನಂಬಲಾಗುವುದಿಲ್ಲವೆಂದು ಲೋಕಪಾಲರ ಮುಂದೆ ಗೋಣಗಾಟವನ್ನು ಮಾಡುತ್ತಾನೆ. ಕೊನೆಗೆ ವಿಧಿಯಿಲ್ಲದೆ ಅವರಿಂದಲೇ ಅದೃಶ್ಯವಾಗುವ ವಶವನ್ನು ಪಡೆದು ದಮಯಂತಿಯ ಅಂತಃಪುರ ಪ್ರವೇಶಿಸುತ್ತಾನೆ. ಇಂದ್ರನಾದರೋ ಪೂರ್ಣವಾಗಿ ನಳನನ್ನು ನಂಬದೇ ಆ ಮೊದಲೇ ತನ್ನನ್ನು ಒಲಿಯುವಂತೆ ದಮಯಂತಿಯ ಬಳಿಗೆ ರಂಭಾದಿ ಅಮರಿಯರ ನಿಯೋಗವನ್ನು ಅನೇಕ ಕಾಣಿಕೆಗಳೊಂದಿಗೆ ಅಟ್ಟಿರುತ್ತಾನೆ. 'ನಳನ ಮೇಲಿಟ್ಟಿರುವ ತನ್ನ ಪ್ರೇಮ ಬದಲಾಗದು' ಎಂದು ರಂಭೆಗೆ ದಮಯಂತಿಯು ಹೇಳಿದ ಉತ್ತರದಿಂದ ನಳ ಸಂತುಷ್ಟನಾದರೂ ಲೋಕಪಾಲರ ಮಾತುಮೀರಲಾಗದೇ ಇಂದ್ರನನ್ನು ಒಲಿಯುವಂತೆ ಬುದ್ಧಿವಾದ ಹೇಳುತ್ತಾನೆ. ಒಲಿದ ಹುಡುಗಿ ಒಲ್ಲದವರ ಪಾಲಾದರೂ ಪರವಾಗಿಲ್ಲ ತಾನುಮಾತ್ರ 'ದೊಡ್ಡವರ' ಮುಂದೆ ಪ್ರಾಮಾಣಿಕನೆನಿಸಿಕೊಳ್ಳಬೇಕು!

ಲೋಕಪಾಲರು ತನ್ನದೇ ವೇಷದಲ್ಲಿ ಸ್ವಯಂವರದಲ್ಲಿ ದಮಯಂತಿಯ ಮುಂದೆ ಕಪಟವನ್ನು ಹೂಡಿದರೂ ನಳ ಏನೂ ಮಾಡಲಾಗದ ಸ್ಥಿತಿಯಲ್ಲಿರುತ್ತಾನೆ. ನಳನು ಒಬ್ಬ ನಿಷಧರಾಜ. ನಿಷಧರು ಆರ್ಯೇತರ ಬುಡಕಟ್ಟಿಗೆ ಸೇರಿದ ಒಂದು ಪಂಗಡವಾಗಿದ್ದು, ಅವರಲ್ಲಿ ನಳ ಪ್ರಸಿದ್ಧನಾಗಿದ್ದ.[5] ಲೋಕಪಾಲರಾದರೋ 'ಆರ್ಯ ದೇವತೆ'ಗಳು ಹೀಗಾಗಿ ಲೋಕಪಾಲರನ್ನು ಎದುರಿಸಲಾಗದ ಅಧೀನಭಾವದಲ್ಲಿ ನಳ ಸಿಕ್ಕುವುದನ್ನು ನಾವು ಗಮನಿಸಬಹುದು. ನಿಷಧನೊಬ್ಬನನೊಲಿದು

ಲೋಕಪಾಲರನ್ನು ಧಿಕ್ಕರಿಸಿ ಅವಮಾನಿಸಿದಳೆಂಬ ಕಾರಣಕ್ಕೆ ಕಲಿಯ ಕೆಂಗಣ್ಣಿಗೆ ನಳದಮಯಂತಿಯರ ಬದುಕು ಸಿಕ್ಕುತ್ತದೆ. ಮೂಲ ಕಥೆಯಲ್ಲಿ ಕಲಿ ಹಾಗೂ ದ್ವಾಪರರೂ ಸ್ವಯಂವರಾರ್ಥಿಗಳಾಗಿದ್ದು, ಅವರು ಆಗಮಿಸುವ ಹೊತ್ತಿಗಾಗಲೇ ತಡವಾಗಿದ್ದು ಸ್ವಯಂವರ ಮುಗಿದಿರುತ್ತದೆ. ಇಂದ್ರನಿಂದ ದಮಯಂತಿ ನಳನಿಗೊಲಿದಳೆಂಬುದನ್ನು ಕೇಳಿ ಕನಲಿದ ಕಲಿ ಬುದ್ಧಿಮಾತಿಗೂ ಜಗ್ಗದೆ ಸೇಡಿಗಿಳಿಯುತ್ತಾನೆ. ಈ ಎರಡೂ ಕಾರಣಗಳು ಭೂಮಿ, ಸಂಪತ್ತು ಮತ್ತು ಹೆಣ್ಣುಗಳ ಮೇಲೆ ಹಕ್ಕು ಸ್ಥಾಪಿಸುವ ಅಧಿಕಾರಶಾಹಿಯ ಹಾಗೂ ಪುರುಷಾಹಂಕಾರದ ವರ್ತನೆಯನ್ನೇ ಬಿಂಬಿಸುತ್ತಿವೆ.

ಕಲಿಪುರುಷನ ಪ್ರಭಾವಕ್ಕೆ ಒಳಗಾದ ನಳನ ನಡವಳಿಕೆಗಳನ್ನು ಕನಕದಾಸರು ನಾಯಕನ ಪಾತ್ರ ಪೋಷಣೆಗೆ ದಕ್ಕೆಬರದಂತೆ ಚಿತ್ರಿಸಿರುವುದನ್ನು ಕಾಣುತ್ತೇವೆ ಶುದ್ಧಾಚಮನವಿಲ್ಲದೆ ನೀರು ಕುಡಿದು ಆಚಾರ ಭ್ರಷ್ಟನಾದನೆಂದಷ್ಟೇ ಹೇಳಿದ್ದಾರೆ. ಕಥಾ ಸರಿತ್ಸಾಗರದಲ್ಲಿ ಅವನು ಎಲ್ಲ ರೀತಿಯ ದುಶ್ಚಟಗಳಿಗೆ ಒಳಗಾಗುವುದರ ಪಟ್ಟಿಯನ್ನೇ ನೀಡಿದೆ. ಜೂಜು, ದಾಸಿಯರ ಸಂಗ, ಅಸತ್ಯ, ಸೋಮಾರಿ, ಕೋಪಿ, ಅನ್ಯಾಯದ ಮಾರ್ಗದಲ್ಲಿ ಧನ ಸ್ವೀಕಾರ, ದುರ್ಜನರಿಗೆ ಸನ್ಮಾನ ಮಾಡುವವನಾಗಿಬಿಡುತ್ತಾನೆ.

ಜೂಜಿನಲ್ಲಿ ರಾಜ್ಯವನ್ನು ಸೋತ ಮೇಲೆ ಪುಷ್ಕರ ದಮಯಂತಿಯನ್ನು ಪಣವಿಡಲು ಒತ್ತಾಯಿಸುತ್ತಾನಾದರೂ ಅದಕ್ಕವಕಾಶವಾಗದೆ ನಳ ಮಡದಿಯೊಂದಿಗೆ ಕಾಡುಪಾಲಾಗುತ್ತಾನೆ. ಅಗ್ಗಳದ ಮಹಿಪರನೇಕರನ್ನೊಲಿಯದೆ ನೂಕಿ ತನ್ನನೆ ಒಲಿದವಳನ್ನು ಅಗಲಿದ ಪಾಪಿ, ಒಲಿದ ಮಡದಿಯನ್ನು ಕಡು ಕಷ್ಟಕ್ಕೆ ಸಿಕ್ಕಿಸಿ ಕರ್ತವ್ಯ ಚ್ಯುತನಾಗಿದ್ದೇನೆ. ಮಕ್ಕಳನ್ನು ದೂರ ಮಾಡಿದೆನಲ್ಲಾ ಎಂದು ಮರುಗುವ, ಕಾಡಿನಲ್ಲಿ ಪತ್ನಿಯನ್ನು ಒಂಟಿಯಾಗಿ ಬಿಟ್ಟು ಹೋಗುತ್ತಿರುವೆನಲ್ಲಾ ತನ್ನಂತಹವರು ಯಾರಾದರೂ ಇದ್ದಾರೆಯೇ ಎಂಬ ಆತ್ಮನಿಂದನೆ ಮಾಡಿಕೊಳ್ಳುವ, ಕಾರ್ಕೋಟಕನಿಂದ ಕುರೂಪಿಯಾಗಿ ಋತುಪರ್ಣನ ಊಳಿಗಕ್ಕೆ ನಿಂತಾಗಲೂ ದಮಯಂತಿಯನ್ನು ನೆನೆದು ಕಣ್ಣೀರಿಡುವ ನಳನನ್ನು ಕನಕರು ಅಮರ ಪ್ರೇಮಿಯಂತೆ ಚಿತ್ರಿಸಿದ್ದಾರೆ. ಕಥಾ ಸರಿತ್ಸಾಗರದಲ್ಲಿ ಇಂತಹ ಸನ್ನಿವೇಶವಿಲ್ಲ. ನಳನು ಏಕಪತ್ನೀ ವ್ರತಸ್ಥನಂತೆ ಕನಕರು ಚಿತ್ರಿಸಿದ್ದಾರೆ. ಅಗಲಿಕೆಯುದ್ದಕ್ಕೂ ರಾಮನಂತೆ ದಮಯಂತಿಯನ್ನು ನೆನೆದು ಕಣ್ಣೀರು ಮಿಡಿಯುತ್ತಾನಾದ್ದರಿಂದ, ಏಕಪತ್ನಿತ್ವದ ಅಧಿಕಾರದ ನೆಲೆಯಲ್ಲಿ ತನ್ನವಳಾದ ದಮಯಂತಿಯ ಮರುಸ್ವಯಂವರದ ವಿಷಯ ಕೇಳಿ ವ್ಯಗ್ರನಾಗುತ್ತಾನೆ, ತಳಮಳಿಸುತ್ತಾನೆ. (ಬಹುಪತ್ನಿತ್ವವಿದ್ದಾಗಲೂ ಈ ಪತಿವ್ರತೆಯರ ವ್ರತಭಂಗವಾಗುವುದನ್ನು ಸಹಿಸುತ್ತಾರೆಂದೇನೂ ಅಲ್ಲ) ಅವನಿಗೆ "ದ್ರೋಹಿಯಾ ದಮಯಂತಿ" ಪಾತಕಿ ಎನಿಸಿದ್ದೂ ಉಂಟು, ಜೊತೆಗೆ ಇದೆಲ್ಲಾ ಯಾರಿಂದಾದ ಸನ್ನಾಹ, ಇದರ ಹಿಂದೆ ಏನೋ ಇರಬೇಕೆಂಬ ಅನುಮಾನವೂ ಅವನನ್ನು

ಕಾಡುತ್ತದೆ. ಋತುಪರ್ಣನ ಅರಮನೆಯ ಊಳಿಗದಲ್ಲಿ ಶೋಷಣೆಯಿಲ್ಲವಾದರೂ ಅಧೀನತೆಯ ಇಕ್ಕಟ್ಟು ಇದ್ದೇಯಿದೆ. ದಮಯಂತಿಯ ಮರುಮದುವೆಗೆ ಋತುಪರ್ಣ ಸಡಗರಿಸಿ ಹೊರಡುವಾಗ ನತದೃಷ್ಟನೂ, ತಪ್ಪಿತಸ್ಥನೂ, ಕುರೂಪಿಯೂ ಆಗಿರುವುದರಿಂದ ಏನೂ ಮಾಡಲಾಗದ ಅಸಹಾಯಕತೆಗೆ ಸಿಲುಕುತ್ತಾನೆ ನಳ. ಇಷ್ಟು ದಿನ ನಳನನ್ನು ಕಾಡಿದ ಕಲಿಯೇ ಅವನ ಗುಣವನ್ನು ಮೆಚ್ಚಿ ಪುನಃಸ್ವಯಂವರಕ್ಕೆ ತೆರಳುವಾಗ ಶುಭಕೋರಿಬಿಡುವುದರಿಂದ ಕಷ್ಟಗಳು ಕಳೆದವೆಂಬ ನಿರೂಪಣೆಯಿದೆ. ಇದರಿಂದ ದಮಯಂತಿಯ ಶ್ರಮ, ಸಂಯಮ, ಪ್ರಯತ್ನಗಳು ಮರೆಗೆ ಸರಿದು ಸುಖಾಂತದ ಕ್ರೆಡಿಟ್ ಮತ್ತೆ ನಳನಿಗೇ ಹೋಗುತ್ತದೆ. ಕೊನೆಯಲ್ಲಿ "ಕುಲಾಂಗನೆಯ ವ್ರತಫಲದ ಪುಣ್ಯೋದಯದಿಂದ ನಿಜಸಿರಿಫಲಿಸಿತು" ಎಂದು ಮುನಿಗಳು ಹೇಳುವರಾದರೂ ಆ ಮಾತು ಹೆಣ್ಣಾದ ದಮಯಂತಿಯ ಇಚ್ಛಾಶಕ್ತಿ ಕ್ರಿಯಾಶಕ್ತಿಗಿಂತ ಪಾತಿವ್ರತ್ಯದ ಮಹಿಮೆಯ ಕಡೆಗೆ ಒತ್ತು ನೀಡಿದೆ.

ನಳನು ಅಮಿತ ಪರಾಕ್ರಮಿ ಎಂಬುದನ್ನು ಮತ್ತೆ ಮತ್ತೆ ಕಥೆಯಲ್ಲಿ ಹೇಳಿದ್ದರೂ ಅದನ್ನು ಸಾಬೀತು ಪಡಿಸುವ ಯಾವ ಸನ್ನಿವೇಶಗಳೂ ಮೂಲ ಕಥೆಯಲ್ಲಿಲ್ಲ. ಚೌಂಡರಸ ನಳಚಂಪುವಿನಲ್ಲಿ ಸ್ವಯಂವರದಲ್ಲಿ ದಮಯಂತಿ ತಮಗೆ ಒಲಿಯಲಿಲ್ಲವೆಂಬ ಸಿಟ್ಟಿಗೆ ಅನೇಕ ರಾಜರು ನಳನ ಮೇಲೆ ಯುದ್ಧಕ್ಕೇ ನಿಲ್ಲುತ್ತಾರೆ. ಎಲ್ಲರನ್ನು ಸೋಲಿಸಿದ ನಂತರವೇ ಮದುವೆ ನಡೆಯುತ್ತದೆ. ಕನಕರು ಮಂಗಳ ಕಾರ್ಯದ ಮಧ್ಯದಲ್ಲಿ ಯುದ್ಧ ತಂದಿಲ್ಲ. ಅಧಿಕಾರವೆಂಬುದು ಆತ್ಯಂತಿಕ ಸತ್ಯವಾಗಿದ್ದು, ಪಳ್ಳೇಗಾರರ ಮೇಲಾಟಗಳು ನಡೆಯುತ್ತಿದ್ದ ಕಾಲ ಧರ್ಮದ ಹಿನ್ನೆಲೆಯಲ್ಲಿ ಸ್ವತ: ಯೋಧರಾಗಿದ್ದ ಕನಕರು ಯುದ್ಧವನ್ನು ಕೈಬಿಡಲೂ ಇಷ್ಟಪಡುವುದಿಲ್ಲ. ಪರಾಕ್ರಮಿ ನಳನ ಪಾತ್ರ ಪೋಷಣೆಗಾಗಿ ಕೊನೆಯಲ್ಲಿ ಯುದ್ಧವನ್ನು ತಂದಿದ್ದಾರೆ.

ಅಂತಿಮವಾಗಿ ರಾಜ್ಯವನ್ನು ಪುಷ್ಕರನಿಂದ ಪಡೆಯಲು ನಡೆದ ಹೋರಾಟ ನಿರ್ಣಾಯಕವಾಗದೇ ಕೊನೆಯಲ್ಲಿ ಪುಷ್ಕರನ ಮಾತಿನಂತೆ ದಮಯಂತಿಯನ್ನು ಪಣವಾಗಿಟ್ಟು ಆಟದಲ್ಲಿ ಗೆದ್ದು, ರಾಜ್ಯವನ್ನು ಮರಳಿ ಪಡೆಯುತ್ತಾನೆನ್ನುವುದು ನಿಜವಾದರೂ ಇಷ್ಟೆಲ್ಲ ಸಂಕಷ್ಟ ಪರಂಪರೆಯನ್ನೆದುರಿಸಿದಮೇಲೂ ಆ ಮಡದಿಯನ್ನೇ ದ್ಯೂತಕ್ಕಿಡುವ ನಳನನ್ನು ಕ್ಷಮಿಸುವುದು ಹೇಗೆ? ತನ್ನ ಜೂಜಿನ ವ್ಯಸನದಿಂದ ಮಡದಿಗೆ ಹೀನ ಸ್ಥಿತಿ ತಂದೆನಲ್ಲಾ ಎಂದು ಗೋಳಾಡಿದ್ದಕ್ಕೆ ಅರ್ಥವಿದೆಯೆ? ಈಬಾರಿ ಅಕ್ಷಹೃದಯವನ್ನು ತಿಳಿದಿರುವುದರಿಂದ ಗೆದ್ದೇ ಗೆಲ್ಲುತ್ತೇನೆಂಬ ಧೈರ್ಯವಿತ್ತು ಎನ್ನಬಹುದಾದರೂ ಹೆಂಡತಿಯನ್ನು ಪಣಕ್ಕಿಡಲಾರೆನೆನ್ನುವ ಯಾವ ಮೌಲ್ಯ ಆದರ್ಶಗಳೂ ಅವನಲ್ಲಿರಲಿಲ್ಲವೆಂಬುದೇ ಸತ್ಯ. ಎರಡನೆಯ ದ್ಯೂತದ ಸಂದರ್ಭದಲ್ಲಿ ಜೀವ ಕೈಯಲ್ಲಿ ಹಿಡಿದು ದುರಂತಕ್ಕೆ ತಳಮಳಿಸುವ ದಮಯಂತಿಯ ಸ್ಥಿತಿ ಎಷ್ಟು ದಾರುಣವಲ್ಲವೆ? ಕೊನೆಗೂ ಪುರುಷನ ಭೂಮಿ ಮತ್ತು ಅಧಿಕಾರಗಳ ದಾಹಕ್ಕಾಗಿ ಹೆಣ್ಣು ದಾಳಕ್ಕೆ ಹೂಡಲ್ಪಡುತ್ತಾಳೆಂಬುದನ್ನೇ ಇದು ಸಾಬೀತು ಮಾಡುತ್ತದೆಯಲ್ಲವೇ.

ವೇದಗಳ ಕಾಲದಲ್ಲಿಯೇ ಪುರುಷರ ಜೂಜಿನ ದುಷ್ಪರಿಣಾಮಗಳನ್ನು ಹೆಣ್ಣು ಅನುಭವಿಸಿರುವುದು ಸ್ಪಷ್ಟವಿದೆ. ನಳೋಪಾಖ್ಯಾನ ದ್ಯೂತ ಕ್ರೀಡೆಯ ಅನಿಷ್ಟಕ್ಕೆ ಅತ್ಯಂತ ಪ್ರಾಚೀನ ಉದಾಹರಣೆಯಂತಿದೆ. ಪ್ರಾಚೀನ ಕಾಲದಿಂದಲೂ ಜೂಜುಕೋರರು ತಮ್ಮ ಹೆಂಡತಿಯರನ್ನೇ ಪಣವಾಗಿ ಒಡ್ಡಿ ಜೂಜಾಡುತ್ತಿದ್ದರು. ಅಂಥ ಸಂದರ್ಭದಲ್ಲಿ ಸೋತವನು ಹೆಂಡತಿಯನ್ನು ಗೆದ್ದವನ ವಶಕ್ಕೆ ನೀಡಬೇಕಾಗಿತ್ತು. ಆಗ ಆಕೆ ಇತರರಿಂದ ಅಂಗೀಕೃತಳು, ಚುಂಬಿತಳೂ ಆಗುತ್ತಿದ್ದಳು. ಸಮಾಜದಲ್ಲಿ ಈ ಬಗೆಯ ಸ್ತ್ರೀಯರು ಜಾರಿಣಿಯರೆನಿಸಿದರು ಎಂದು ತಿಳಿದುಬರುತ್ತದೆ. ಸೂರ್ಯ ಸೂಕ್ತದಲ್ಲಿ "ಅವಳು ನನ್ನೊಂದಿಗೆ ಜಗಳವಾಡಲಿಲ್ಲ, ನನ್ನ ಮೇಲೆ ಕೋಪಮಾಡಲಿಲ್ಲ, ನನ್ನನ್ನು ಕಂಡರೂ, ನನ್ನ ಸ್ನೇಹಿತರನ್ನು ಕಂಡರೂ ಚೆನ್ನಾಗಿಯೇ ಇದ್ದಳು. ಜೂಜಿನಲ್ಲಿ ಸೋತು ನಾನು ನನ್ನ ಒಲಿದ ಹೆಂಡತಿಯನ್ನು ಹೊರಕ್ಕೆ ದೂಡಿದೆನಲ್ಲ" ಎಂದು ಗೋಳಾಡುವ ಜೂಜುಗಾರನ ಪಶ್ಚಾತ್ತಾಪದ ಸನ್ನಿವೇಶವಿದೆ. ಋಗ್ವೇದದಲ್ಲಿ "ಜೂಜಾಡಬೇಡ, ಕೃಷಿಮಾಡು ಇರುವ ಆಸ್ತಿಯನ್ನೇ ಬೇಕಾದಷ್ಟೆಂದು ತಿಳಿದು ಸುಖವಾಗಿರು, ಅಯ್ಯೋ ಜೂಜುಕೋರ ಇಗೋ ನಿನ್ನ ದನಕರುಗಳು, ನಿನ್ನ ಹೆಂಡತಿ" ಎಂಬ ನೀತಿವಾಕ್ಯವಿದೆ.8

ವಿಧಿಯನ್ನು, ಕಲಿಯನ್ನು ಮುಂದೆಮಾಡಿ ಈ ಕಥೆಯಲ್ಲಿ ನಳನ ದೌರ್ಬಲ್ಯಗಳನ್ನು ಮುಚ್ಚುವ ಪ್ರಯತ್ನವನ್ನು ಉದ್ದಕ್ಕೂ ಮಾಡಲಾಗಿದೆ. ದಮಯಂತಿ ಆದ ಅನ್ಯಾಯವನ್ನು ಏಕಾಂಗಿಯಾಗಿ ಎದುರಿಸಬೇಕಾಯಿತು. ಅದಕ್ಕಾಗಿ ಅವಳು ಉದ್ದಕ್ಕೂ ವಿಧಿಯನ್ನು ಮಾತ್ರ ದೂರಬಲ್ಲವಳಾಗಿದ್ದಳು. ಭಗವಂತನ ಕರುಣೆ ತಪ್ಪಿದಮೇಲೆ ಯಾರು ತಾನೇ ಕಾಪಾಡಲು ಸಾಧ್ಯವೆಂಬ ಫಿಲಾಸಫಿಯನ್ನು ಒಪ್ಪಿಕೊಂಡು ಗಂಡನ ಸರ್ವಾಪರಾಧಗಳನ್ನು ಮರೆಯಬೇಕಾಗಿತ್ತು. ನಳನಾದರೋ ಗಂಡನ ಕರ್ತವ್ಯ, ತಂದೆಯ ಕರ್ತವ್ಯಗಳೆರಡನ್ನೂ ಬಿಟ್ಟು ಪಲಾಯನ ಮಾಡಿಯೂ ತ್ಯಾಗಿಯೂ, ಅನನ್ಯ ಪ್ರೇಮಿಯಾಗಿಯೂ ಗುರುತಿಸಲ್ಪಡುತ್ತಾನೆ. "ದಮಯಂತಿ ಗಂಡನಿಂದ ದೂರಾಗಿ ದಿಕ್ಕುಕಾಣದೇ ಗೋಳಾಡುತ್ತಾ ಪರ್ವತ, ಕಾಡು, ಮೇಡುಗಳನ್ನು ದಾಟಿದಳಾದರೂ ಪತಿಯ ವಿಷಯದಲ್ಲಿನ ಭಕ್ತಿಯನ್ನು ಮಾತ್ರ ದಾಟಲಿಲ್ಲ!"9 ಸತೀತ್ವದ ಕರ್ತವ್ಯದಿಂದ ಕೊಂಚವೂ ಸಡಿಲಲಾರಳು, ತಾಯ್ತನದ ಕರ್ತವ್ಯದ ಸೆಳೆತಕ್ಕೆ ಸಿಕ್ಕಿ ತಂದೆಯ ಮನೆಗೆ ಹಿಂದಿರುಗಿದರೂ ಎಲ್ಲ ಸುಖವನ್ನು ತ್ಯಜಿಸುವ 'ಸುವ್ರತ'ವನ್ನು ಮಾತ್ರ ಬಿಡುವುದಿಲ್ಲ. "ಪತಿವಿಹೀನೆಗೆ ಸಲುವುದೇ ಸುವ್ರತ, ಸುಭೋಜನ, ಸೌಖ್ಯಸುಖ ಸದ್ಗತಿಗಳುಂಟೆ? ಸತಿಯರಿಗೆ ಪತಿದೈವ"ವೆಂಬ ಶೃತಿವಚನವನ್ನು ನಂಬಿ, ಮಕ್ಕಳ ಅಪ್ಪನಿಗಾಗಿ ಹುಡುಕಾಟದ ಸಾಹಸಕ್ಕೆ ತೆತ್ತುಕೊಳ್ಳುತ್ತಾಳೆ.

**ವಿಘಟಿತ ಕುಟುಂಬದ ಸ್ತ್ರೀ**

ಕುಟುಂಬವು ಪಿತೃಪ್ರಾಧಾನ್ಯತೆಯನ್ನು ನೆಲೆಗೊಳಿಸಿದ ಮೂಲಭೂತ ಘಟಕ. ಕುಟುಂಬದಲ್ಲಿ ಸಮಾನ್ಯವಾಗಿ ಸ್ತ್ರೀಗೆ ವಿವಾಹ, ಧರ್ಮಸಾಧನೆ, ವೈರಾಗ್ಯಗಳಿಗೆ

ಸಂಬಂಧಿಸಿದಂತೆ ಸ್ವ ಅಪೇಕ್ಷೆಗೆ ಅವಕಾಶ ಕಡಿಮೆ ಅಥವಾ ಇರಲಿಲ್ಲವೆಂದೇ ಹೇಳಬೇಕು. ಸಾಂಸಾರಿಕ, ಸಾಂಸ್ಕೃತಿಕ ಹೊಣೆಯನ್ನು ಹೊತ್ತು ಪಾಲಿಸಲೇಬೇಕಾದ ಸಾಮಾಜಿಕ ನಿರೀಕ್ಷೆಗಳು ಸ್ತ್ರೀಯನ್ನು ಕುರಿತು ಇರುತ್ತವೆ. ಪುರುಷನೊಬ್ಬ ಸಾಂಸಾರಿಕ ಚೌಕಟ್ಟನ್ನು ಮೀರಿ ಹೋಗುವುದು ಎಷ್ಟು ಸುಲಭವೋ ಹಾಗೂ ಸಮಾಜ ಒಪ್ಪಿತವೋ ಹಾಗೆ ಸ್ತ್ರೀಗೆ ಬಿಡಿಸಿಕೊಳ್ಳುವುದು ಸಾಧ್ಯವಿಲ್ಲ. ಅವಳ ಆದಿ ಅಂತ್ಯ ಕುಟುಂಬವೇ!

ನಳನ ಕೈಸೆರೆಯಲ್ಲಿ ಸಿಕ್ಕ ಹಂಸವು ಭಯದಿಂದ ತಲ್ಲಣಿಸುತ್ತಾ "ಕೇಳೆಲೆ ನೃಪತಿ ಬಿಡು ನನ್ನ ಮನೆಯಲಿ ಮಡದಿ ಸುತರುಮ್ಮಳವ ನೋಡು" ಎಂದು ದೈನ್ಯದಿಂದ ಬೇಡಿಕೊಂಡಾಗ ನಳನ ಹೃದಯ ಕರಗಿ ಅದನ್ನು ಬಿಟ್ಟುಬಿಡುವ ಚಿತ್ರಣವಿದೆ. ಇದು ಕುಟುಂಬ ವಿಘಟನೆಯ ಸಂಕಟದ ಮುನ್ಸೂಚನೆಯೋ ಎನ್ನುವಂತೆ ಬಂದಿದೆ, ಆ ವಿಘಟನೆ ಎಂಥ ಘೋರ ಎಂಬುದನ್ನೂ, ಮನೆಯೊಡೆಯನನ್ನು ಕಳೆದುಕೊಂಡ ಕುಟುಂಬದ ಸ್ಥಿತಿಯನ್ನು ಮುಂಗಾಣಿಸುವ ಪ್ರಯತ್ನವೇ ಆಗಿದೆ.

ನಳದಮಯಂತಿಯರು ರಾಜರಾಣಿಯರಾಗಿ ಸುಖ ದಾಂಪತ್ಯ ನಡೆಸಿ, ಮಕ್ಕಳನ್ನು ಪಡೆದು ನೆಮ್ಮದಿಯಾಗಿದ್ದರು. ಆದರೆ ನಳನ ಜೂಜಿನ ವ್ಯಸನದ ಕಾರಣವಾಗಿ ಕಾಡುಪಾಲಾಗಬೇಕಾಯಿತು. ಮಕ್ಕಳಿಂದ ದೂರವಾಗಿದ್ದರೂ ಹೇಗೋ ಒಂದು ಬದುಕನ್ನು ಕಟ್ಟಿಕೊಳ್ಳಬಹುದಿತ್ತೇನೋ ಆದರೆ ದಮಯಂತಿಯ ಸುಖವನ್ನು ಬಯಸಿ ನಳ ಅವಳನ್ನು ಒಂಟಿಯಾಗಿ ಬಿಟ್ಟುಹೋಗುತ್ತಾನೆ. ಇಡೀ ಕುಟುಂಬ ಮೂರು ಭಾಗವಾಗಿ ಛಿದ್ರವಾಗುತ್ತದೆ. ಮಹಾಭಾರತದಲ್ಲಿ ಪಾಂಡವರು ದ್ರೌಪದಿ ಮಕ್ಕಳಿಂದ ದೂರವಿದ್ದರೂ ಕುಟುಂಬ ಛಿದ್ರವಾಗುವುದಿಲ್ಲ. ಅಜ್ಞಾತವಾಸದಲ್ಲೂ ಒಬ್ಬರಿಗೊಬ್ಬರು ಬೆಂಬಲವಾಗಿರುತ್ತಾರೆ. ಇಲ್ಲಿ ನಳ ದಮಯಂತಿಯರು ಬೇರೆಬೇರೆಯಾಗಿ ಅನ್ಯರ ಊಳಿಗದಲ್ಲಿ ಹೊಟ್ಟೆಹೊರೆಯುವಂತಾಗುತ್ತದೆ. ಸ್ವಾತಂತ್ರ್ಯವಿಲ್ಲದ ದಾಸ್ಯದಲ್ಲಿ ತಮ್ಮ ಕುಟುಂಬವನ್ನು ಒಂದುಗೂಡಿಸಲು ಪ್ರಯತ್ನಿಸಲೂ ಆಗದ ಅಧೀನತೆ. ಪರಸ್ಪರರನ್ನು ನೆನೆದು ದುಃಖಿಸುವುದು ವಿನಃ ಬೇರೆ ದಾರಿಯಿಲ್ಲ. ಆದರೆ ತಂದೆ ಭೀಮನೃಪನ ಪ್ರಯತ್ನದಿಂದ ದಮಯಂತಿ ತವರು ಮನೆ ಸೇರಿದ ಮೇಲೆ ತನ್ನ ಮಕ್ಕಳಿಗೆ ತಂದೆಯ ಅಗತ್ಯವನ್ನು, ತನ್ನ ಕುಟುಂಬ ನಿಲ್ಲಬೇಕಾದರೆ ಪುರುಷ ಅನಿವಾರ್ಯವೆಂದು, ಇಲ್ಲದಿದ್ದರೆ ತನ್ನ ಬದುಕಿಗೆ ಅರ್ಥವಿಲ್ಲವೆಂದು ಭಾವಿಸಿ ಗಂಡನನ್ನು ಹುಡುಕಿಸುವ ಸಾಹಸಕ್ಕೆ ಮುಂದಾಗುತ್ತಾಳೆ. ಇಲ್ಲಿ ಅವಳಿಗೆ ಅರಸು ಕುವರಿಯಾಗಿ ಅಧಿಕಾರವಿದೆ, ಸಹಾಯವಿದೆ. ತಾಯಿ, ತಂದೆ, ಮಂತ್ರಿ, ಚಾರರು, ವಿದ್ವಾಂಸರ ನೈತಿಕ ಬೆಂಬಲವಿದೆ. ಇವನ್ನು ಬಳಸಿಕೊಂಡು ತನ್ನ ಕುಟುಂಬವನ್ನು ಮತ್ತೆ ಜೋಡಿಸುವ ಕಾರ್ಯಕ್ಕೆ ತೊಡಗುತ್ತಾಳೆ. ಇಲ್ಲಿ ದಮಯಂತಿಯದೇ ಮುಖ್ಯಪಾತ್ರ. ತನಗೆ ಮೆಚ್ಚಿದವನನ್ನು ಪಡೆಯುವಲ್ಲಿ ಅವಳ ಇಚ್ಛಾಶಕ್ತಿಯೇ ಮುಖ್ಯವಾದಂತೆ, ಪತಿಯ ಪುನಃ ಸಮಾಗಮದಲ್ಲೂ ಅವಳ ಇಚ್ಛಾಶಕ್ತಿಯೊಂದಿಗೆ ಕ್ರಿಯಾಶಕ್ತಿಯೇ ಮುಖ್ಯಪಾತ್ರ ವಹಿಸುತ್ತದೆ. ಎರಡೂ

ಸಂದರ್ಭಗಳಲ್ಲೂ ನಳ ರಿಸೀವಿಂಗ್‌ಎಂಡಲ್ಲೇ ನಿಲ್ಲುತ್ತಾನೆ. ಅವನಲ್ಲಿ ಎಲ್ಲಿಯೂ ಇಚ್ಛಾಶಕ್ತಿ ಅದಮ್ಯವಾಗಿ ಕಾಡಿ, ಕ್ರಿಯೆಗೆ ಪ್ರಚೋದನೆ ನೀಡಿದ್ದು ಕಂಡುಬರುವುದಿಲ್ಲ. ಪ್ರೇಮಕ್ಕಾಗಿ ಲೋಕಪಾಲರೊಂದಿಗೆ ತನ್ನ ಪ್ರೇಮವನ್ನು ಮುಂದಿಟ್ಟು ದಮಯಂತಿ ಸೆಣಸುವಂತೆ ಸೆಣಸಲಾರ. ಅವಳನ್ನು ಪಡೆದೇತೀರಬೇಕೆಂಬ ಛಲವಾಗಲೀ ಅದಕ್ಕೆ ಅಗತ್ಯವಾದ ಕ್ರಿಯಾಶಕ್ತಿಯಾಗಲೀ ಅವನಲ್ಲಿಲ್ಲ. ಆದರೆ ತನ್ನಿಂದಾಗಿ ಅವಳು ಕಷ್ಟಪಡಬಾರದೆಂಬ ಅಂತಃಕರಣವಿದೆ. ಬರುವ ಕಷ್ಟಗಳನ್ನು ಒಟ್ಟಿಗೆ ಜಯಿಸುವ ಮನೋಬಲವಿಲ್ಲದೆ ಅವಳನ್ನು ತ್ಯಜಿಸಿ ಹೋಗುತ್ತಾನೆ. ಇದು ಪಲಾಯನವೆನಿಸುತ್ತದೆ. ತಾನು ಮಾಡಿದ್ದು ಮೂರ್ಖತನವೆನಿಸಿದರೂ ಅವಳನ್ನು ಮತ್ತೆ ಹುಡುಕುವ ಪ್ರಯತ್ನ ಮಾಡುವುದಿಲ್ಲ. ತನ್ನ ಊಳಿಗ, ಹಾಗೂ ಕುರೂಪ ಅವನ ಕಿಂಚಿತ್ ಆತ್ಮವಿಶ್ವಾಸವನ್ನೂ ಮತ್ತಷ್ಟು ಕುಗ್ಗಿಸಿದಂತೆ ತೋರುತ್ತದೆ. ಕೇವಲ ಅವಳನ್ನು ನೆನೆದು ಕಣ್ಣೀರಿಡುವ ನಿಷ್ಕ್ರಿಯ ಸ್ಥಿತಿ ಅನುಕಂಪ ತರಬಲ್ಲದೇ ಹೊರತು ಮೆಚ್ಚುಗೆಯನ್ನಲ್ಲ. ಪರ್ಯಾಯವಾಗಿ ಒಡೆದ ಕುಟುಂಬವನ್ನು ಮತ್ತೆ ಮರಳಿ ಕಟ್ಟಿಕೊಂಡ ಶ್ರೇಯಸ್ಸು ದಮಯಂತಿಗೆ ಸೇರಬೇಕಾದ್ದು. ಇಲ್ಲಿ ವಿಘಟನೆಗೊಂಡ ಕುಟುಂಬದ ಹೆಣ್ಣಿನ ಹೋರಾಟದ ಮಾದರಿಯಾಗಿದ್ದಾಳೆ ದಮಯಂತಿ. ಅನಾದಿಕಾಲದಿಂದಲೂ ಇವತ್ತಿಗೂ ಗಂಡಂದಿರ ಜೂಜು ಮುಂತಾದ ವ್ಯಸನಗಳು, ಸಾಲಸೋಲ, ಅವಮಾನ, ಬದುಕಿನ ಸಂಕಷ್ಟಗಳನ್ನೆದುರಿಸಲಾಗದೇ ಸನ್ಯಾಸಿಗಳಾಗುವ, ಪಲಾಯನ ಮಾಡುವ ಅಥವಾ ಹೊಸ ಸಂಬಂಧ ಬೆಳೆಸಿ ಮನೆಯನ್ನು ತೊರೆದು ಹೋಗುವ ಗಂಡಂದಿರ ಹೇಡಿತನ, ವಂಚನೆಗಳಿಗೆ ಬಲಿಯಾಗಿ ಬದುಕನ್ನು ಮುಳುಗದಂತೆ ಕಾಪಾಡಲು ಹೆಣಗುತ್ತಿರುವ ಅನೇಕ ತಾಯಂದಿರನ್ನು ನಾವು ನೋಡುತ್ತಲೇ ಇರುವಾಗ ದಮಯಂತಿ ನಮಗೆ ಯಾವುದೋ ಕಾಲದ ಪತಿವ್ರತೆಯೆಂದೇನೂ ಅನಿಸುವುದಿಲ್ಲ. ನಮ್ಮಲ್ಲಿ ಗಂಡನನ್ನು ತೊರೆದು ಹೋದ ಹೆಣ್ಣುಗಳ ಕಥೆ ಹೆಚ್ಚಿಲ್ಲ. ತನ್ನ ವಾಸಸ್ಥಾನವಾದ ವಿಷ್ಣುವಿನ ಎದೆಗೆ ಬೃಗುಮುನಿ ಒದ್ದಾಗ ತನಗಾದ ಅವಮಾನಕ್ಕೆ ಕಿಂಚಿತ್ತೂ ಬೆಲೆಕೊಡದೆ ವಿಷ್ಣು ಆ ಮುನಿಯನ್ನು ಕೊಂಡಾಡುತ್ತ ಸೇವೆ ಮಾಡುವುದನ್ನು ಕಂಡು ಕುಪಿತಳಾದ ಲಕ್ಷ್ಮಿಯು ತನಗೆ ಬೆಲೆಯಿಲ್ಲದ ಜಾಗದಲ್ಲಿ ತಾನು ಒಂದು ಕ್ಷಣವೂ ನಿಲ್ಲಲಾರೆನೆಂದು ವೈಕುಂಠವನ್ನು ತೊರೆದು ಹೋಗುತ್ತಾಳೆ. ಅದರ ಫಲವಾಗಿ ತನ್ನ ಗಂಡ ಪದ್ಮಾವತೀ ಎಂಬ ಹೊಸ ಹೆಂಡತಿಯನ್ನು ಹುಡುಕಿಕೊಂಡಿರುವುದಕ್ಕೆ ಕಣ್ಣೀರು ಮಿಡಿದು, ಜಗಳಾಡುವುದು ಬಿಟ್ಟು ಲಕ್ಷ್ಮಿಗೆ ಬೇರೆ ದಾರಿಯಿಲ್ಲವಾಯಿತು!

ಕಳೆದುಹೋದ ದೂರಾದ ಹೆಂಡತಿಯರನ್ನು ಮತ್ತೆ ಪಡೆಯುವಲ್ಲಿ (ರಾಮನನ್ನು ಹೊರತುಪಡಿಸಿ) ಗಂಡುಗಳಿಗೆ ಇರದ ತುಡಿತ, ಬಿಟ್ಟು ಹೋದ ಗಂಡಂದಿರನ್ನು ಮತ್ತೆ ಪಡೆಯಲು ಈ ಹೆಣ್ಣುಗಳಿಗೆ ಏಕಿಷ್ಟುಕಾಡುತ್ತದೆ? ಗಂಡಿಗೆ ಹೆಣ್ಣಿನ ಅನಿವಾರ್ಯತೆ ಕಾಡಬಹುದೇ ವಿನಃ ಹೆಂಡತಿಯ ಅನಿವಾರ್ಯತೆಯಲ್ಲ. ಆದರೆ ಹೆಣ್ಣುಗಳಿಗೆ ಗಂಡಿನ ಅನಿವಾರ್ಯತೆಗಿಂತ ಪತಿಯ ಅವಶ್ಯಕತೆ, ಮಕ್ಕಳಿಗೊಬ್ಬ

ಅಪ್ಪನ ಅವಶ್ಯಕತೆ, ಕುಟುಂಬಕೊಬ್ಬ ಯಜಮಾನನ ಅವಶ್ಯಕತೆ ಹೆಚ್ಚಿರುತ್ತದೆಂಬುದನ್ನೇನು ಬಿಡಿಸಿಹೇಳಬೇಕಾಗಿಲ್ಲ. ಗಂಡಬಿಟ್ಟವಳೆಂಬ ಅಪಖ್ಯಾತಿಯಲ್ಲಿ ಬದುಕುತ್ತಿರುವ ಅಸಂಖ್ಯ ಒಂಟಿ ಹೆಣ್ಣುಗಳ, ತಾಯಂದಿರ ಚರಿತ್ರೆಯಲ್ಲಿ ದಮಯಂತಿಯದು ಸ್ವಲ್ಪ ಭಿನ್ನವಷ್ಟೇ. ನಳನಿಗಾಗಿ ದಮಯಂತಿ ಹಂಬಲಿಸುವಂತೆ ನಳನೂ ಅವಳನ್ನು ಹಂಬಲಿಸುತ್ತಿದ್ದನೆಂಬ ಒಂದೇ ಸಮಾಧಾನ ನಮಗೆ! ಎಲ್ಲರೂ ನಳನಂತೆ ದಮಯಂತಿಗೆ ಹಂಬಲಿಸುವಂಥವರಲ್ಲ. ಎಂದೆಂದಿಗೂ ಮರಳಲಾರದ ಸ್ಥಿತಿಯೇ ಹೆಚ್ಚು. ಮನೆಗೆ ಮತ್ತೆ ಗಂಡಂದಿರು ಎಂದಾದರೊಮ್ಮೆ ಮರಳಬಹುದೆಂದು ಕಾಯುತ್ತಾ ಕುಳಿತಿರುವ ಹೆಣ್ಣುಗಳ ಕಥೆಗೆ ಇತ್ತೀಚೆಗೆ ಜಾಗತಿಕ ಮಟ್ಟದ ವಿಸ್ತಾರಬಂದಿರುವುದು ದುರಂತವೇ ಸರಿ.

ಗಂಡಬಿಟ್ಟವಳೆಂಬ ಹಣೆಪಟ್ಟಿಯಿಂದ ತಪ್ಪಿಸಿಕೊಳ್ಳುವುದು ರಾಜಕುಮಾರಿಗೂ ಸಾಧ್ಯವಿಲ್ಲ. ನಳನಿಲ್ಲದ ಬದುಕಿಗೆ ಅರ್ಥವಿಲ್ಲ ಸಾವೇ ಶರಣು ಎಂದು ಬಾಯಲ್ಲಿ ಹೇಳಿದರೂ ದಮಯಂತಿ ತನ್ನೆಲ್ಲಾ ಬುದ್ಧಿಯನ್ನು ಧೈರ್ಯವನ್ನೂ ಒಟ್ಟುಗೂಡಿಸಿ ಶೋಧನೆಗೆ ತೊಡಗುವುದು ಅವಳನ್ನು ಇತರ ಹೆಣ್ಣುಗಳಿಂದ ಭಿನ್ನವಾಗಿಸುತ್ತದೆ. ಕೊನೆಗೂ ಈ ಕಥೆ ಗಂಡನನ್ನು ಹುಡುಕಿಕೊಂಡ, ಕುಟುಂಬವನ್ನು ಮತ್ತೆ ಬೆಸೆದವಳ ಕಥೆಯಾಗದೇ 'ದಯಾಪರ'ನಾಗಿ ಹೆಂಡತಿಯನ್ನು ಬಿಟ್ಟುಹೋದ ನಂತರ 'ಕರುಣೆ ತೋರಿ' ಹೆಂಡತಿಯನ್ನು ಒಪ್ಪಿಕೊಂಡ ನಳನ ಚರಿತ್ರೆಯಾಗಿಯೇ ದಾಖಲಾಗುತ್ತದೆ!

ಮಕ್ಕಳಿಂದ ದೂರವಾದ ತಾಯಿ, ಪತಿಯಿಂದ ತ್ಯಜಿಸಲ್ಪಟ್ಟ ಪತ್ನಿಯರು, ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆಂದು ನೋಡುವ ನಿಷ್ಠುರತೆ ಇಲ್ಲದೆ, ಬದಲಿಗೆ ಮಗಳ ಕುಟುಂಬ ಛಿದ್ರವಾದದಕ್ಕೆ ಕಣ್ಣೀರು ಮಿಡಿಯುವ, ಹುಡುಕಿಸಿ ಒಂದು ನೆಲೆ ಕಾಣಿಸಲು ಪ್ರಯತ್ನಿಸುವ, ಆಪ್ರಯತ್ನದಲ್ಲಿ ಮಗಳಿಗೆ ಬೆಂಬಲವಾಗಿ ನಿಲ್ಲುವ ಹೆಣ್ಣು ಹೆತ್ತವರನ್ನೂ ನಾವಿಲ್ಲಿ ನೋಡುತ್ತೇವೆ. ತಾಯ್ತನದ ತುಡಿತ ಮತ್ತು ಸಮಾಜ ನಿರ್ಬಂಧಿತ ಚೌಕಟ್ಟುಗಳ ಒಳಗೆ ಒದ್ದಾಡುವ ದಮಯಂತಿಗೆ ರಾಣಿವಾಸದ ಆಸರೆ ತಾಯಿತಂದೆಯರ ಸಹಾಯ ಬ್ರಾಹ್ಮಣರು, ಮಂತ್ರಿಗಳು, ಸಖಿಯರು, ಚಾರರ ಬೆಂಬಲ ದೊರೆಕಿತೆಂಬುದೇ ಸಮಾಧಾನದ ವಿಷಯ. ಚೇದಿ ರಾಜ್ಯದ ರಾಜಕುಮಾರಿಯ ಬಳಿ ಸೈರಂಧ್ರಿಯಾಗಿ ದುಡಿಯುವ ದಮಯಂತಿಗೆ ಚಂದ್ರಮತಿಗೆ ಒದಗಿದ ಮನೆಯೊಡತಿಯರ ಕಿರುಕುಳವಾಗಲಿ, ಕೀಚಕನಂತಹವರ ಕಾಟವಾಗಲೀ ಇಲ್ಲ! ಅವಳ ಸೊರಗಿಹೋದ ಸ್ಥಿತಿಗೆ ಕಾರಣ ತಾನೇ ಅರೋಪಿಸಿಕೊಂಡ ಸತೀತ್ವದ ಧರ್ಮ. ಇಡೀ ಕಥೆಯಲ್ಲಿ ಎಲ್ಲಿಯೂ ಹಿಂಸೆ ಕಾಣುವುದಿಲ್ಲ, ಚುಚ್ಚು ಮಾತುಗಳು, ಆಕ್ರಮಣಕಾರೀ ನಡವಳಿಕೆಗಳು ದೌರ್ಜನ್ಯಗಳು ಢಾಳಾಗಿ ಬರುವುದಿಲ್ಲ.

### ರೂಢಮೂಲ ಸ್ತ್ರೀ ಮಾದರಿಗಳು

ಕಥೆಯ ಉದ್ದಕ್ಕೂ ಮತ್ತೆ ಮತ್ತೆ ದಮಯಂತಿಯಿಂದ ಸತ್ಯದ ಪಾಲನೆ ಮುಖ್ಯವೆಂದು ಹೇಳಿಸಲಾಗಿದೆ. ಅದು ಯಾವ ಸತ್ಯ ಮತ್ತು ಯಾರ ಸತ್ಯ. ಆ

ಸತ್ಯದ ನಿರ್ವಚನವೇನು? ನಳ ಜೂಜಿನಲ್ಲಿ ಸೋತಿದ್ದಾನೆ ನಿಯಮದಂತೆ ರಾಜ್ಯ ಭ್ರಷ್ಟನಾಗಲೇ ಬೇಕಾದ ಸತ್ಯ ಅವನ ಮುಂದಿದೆ. ಅದನ್ನು ಹಿಡಿಯಲೇಬೇಕು. ಸಾಧ್ವಿಶಿರೋಮಣಿಯಾದ ದಮಯಂತಿ ಪತಿಭಕ್ತಿಪರಾಯಣಳು ಗಂಡನ ಸತ್ಯವೇ ಅವಳ ಸತ್ಯ. ನೆರಳು ದೇಹವನ್ನು ಬಿಟ್ಟಿರುವುದಿಲ್ಲವೆಂಬ ಸತ್ಯವನ್ನು ನಂಬಿದ ಅರ್ಧಾಂಗಿಯವಳು. ಹಾಗಾಗಿ ತನ್ನ ತಪ್ಪಿಲ್ಲದಿರುವಾಗಲೂ ತನ್ನ ಸುಖಕ್ಕಾಗಿ ಗಂಡನನ್ನು ತೊರೆದು ತಂದೆಯ ಮನೆಗೆ ಹೋಗಲಾರಳು. ಇದು ಪುರುಷ ಪ್ರಧಾನ ವೈದಿಕಶಾಹಿ ಸಂಸ್ಕೃತಿಯು ಸತಿಯರಿಗೆ ಕೊಟ್ಟಿರುವ ಸತ್ಯದ ನಿರ್ವಚನ. ಹಾಗಾಗಿ ಇಲ್ಲಿನ ದಮಯಂತಿ ಸುವ್ರತೆಯಾಗಿದ್ದು ಸನಾತನ ಪತಿವ್ರತೆಯರ ಸತ್ಯದ ಜಾಡಿನಲ್ಲಿಯೇ ನಡೆಯುವ ಪಾತ್ರವಾಗಿದ್ದಾಳೆ. ಸನಾತನ ವ್ಯವಸ್ಥೆ ಕಟ್ಟಿಕೊಟ್ಟಿರುವ ಪತಿವ್ರತೆಯರ, ಸಾಧ್ವಿಶಿರೋಮಣಿಗಳ ಸತ್ಯ, ಧರ್ಮದ ನಿರೂಪಣೆಯೇ ಈ ಕಾವ್ಯದ ಪ್ರಧಾನ ಮೌಲ್ಯವಾಗಿದೆ.

ರಂಭಾದಿಗಳ ದೌತ್ಯ, ನಳ ದೌತ್ಯ, ಲೋಕಪಾಲರ ಮುಂದೆ ಆಡುವ ಮಾತು, ಬೇಡನಿಂದ ಬಿಡಿಸಿಕೊಂಡು ತನ್ನ ಪಾತಿವ್ರತ್ಯ ಉಳಿಸಿಕೊಳ್ಳುವ ಜಾಣತನ, ಮರುಸ್ವಯಂವರದ ಯೋಜನೆಯ ಅನಿವಾರ್ಯವನ್ನು ಮನದಟ್ಟು ಮಾಡಿಕೊಡುವ ಸಂದರ್ಭದಲ್ಲೆಲ್ಲಾ ತಾನು ಪರಮ ಪವಿತ್ರಳು, ಒಲಿದ ನಲ್ಲ, ಪತಿಯನ್ನಲ್ಲದೆ ಪರಪುರುಷರನ್ನು ಕನಸು ಮನಸ್ಸಿನಲ್ಲೂ ನೆನೆಯದಿರುವ ನಿಷ್ಠೆಯನ್ನೇ ಪುನರುಚ್ಚರಿಸುತ್ತಾಳೆ. ಆ ಮೂಲಕ ಗಂಡನಿಗೆ ವಂಚಿಸುವ ಚಂಚಲ ಹೆಣ್ಣುಗಳು ಪರಮ ನೀಚೆಯರು ಎಂದು ನಂಬಿಸಲಾಗುವ ಸಮಾಜದಲ್ಲಿ ಅವರಂತಲ್ಲದ ಸಾಧ್ವಿಶಿರೋಮಣಿಯ ಪ್ರತಿನಿಧಿಯಾಗಿ ಅಪೇಕ್ಷಿತ ಅಚ್ಚಿಗೆ ಚೆನ್ನಾಗಿ ಹೊಂದಿಕೊಳ್ಳುವಂತೆ ದಮಯಂತಿ ರೂಪಿತವಾಗಿದ್ದಾಳೆ. ನಳನ ಕಾರಣದಿಂದಲೇ ಸಂಕಷ್ಟ ಸರಮಾಲೆಗಳು ಒದಗಿದರೂ ಅವನ ನೆನಪಿನಲ್ಲೇ ಕೊರಗುತ್ತಾ ಸಕಲ ಸುಖಗಳನ್ನು ತ್ಯಾಗಮಾಡಿ ಪತಿಪರಾಯಣಳಾಗಿ ವ್ರತಹಿಡಿದು ಬದುಕುವ ಅವಳ ಕ್ರಮ, "ಪತಿ ವಿಹೀನೆಯಾದ ಸತಿಗೆ ಸುವ್ರತೆಗೆ ಸುಭೋಜನ ಸುಖಗಳೆಂಬುದು ಯೋಗ್ಯವೇ", "ಮಂಡೆ ಮಾಸಿದೆ ಮಲಿನವಸನದೆ ಗಂಡನ ಚಿಂತೆಯಲಿ ಮುಖ ಬಾಡಿ ದೇಹವನು ದಂಡಿಸಿದಳ್ ಅನ್ನದಲಿ ಮನಮುರಿದುದು ಸತಿಗೆ..." ಇತ್ಯಾದಿ ರೂಢಮೂಲ ನೀತಿಯನ್ನು ಒಪ್ಪಿ ನಡೆಸುವುದರ ಮೂಲಕ ತನ್ನಂತಹ ಪರಿತ್ಯಕ್ತರಾದ ಹೆಣ್ಣುಗಳು ಬದುಕಬೇಕಾದ ಕ್ರಮವನ್ನು ನಿರ್ದೇಶಿಸುವುದಕ್ಕಾಗಿಯೇ ಸಿದ್ಧಪಡಿಸಿದ ಮಾದರಿ ಎನ್ನಬಹುದು. ಒಟ್ಟಿನಲ್ಲಿ ನಳಚರಿತ್ರೆಯ ಸ್ತ್ರೀ ವ್ಯಾಖ್ಯಾನವು ಯಾವುದೇ ಬದಲಾವಣೆಗಳಿಲ್ಲದೆ ಸನಾತನ ಕಾಲದ ಅಪೇಕ್ಷಿತ ಮತ್ತು ತಿರಸ್ಕೃತ ಎರಡೂ ಮಾದರಿಯ ರೂಢಮೂಲ ಸ್ತ್ರೀ ವ್ಯಾಖ್ಯಾನವನ್ನೇ ಮುಂದಿಟ್ಟಿದೆ.

ಇತರ ಪುರಾಣ ಕಥೆಗಳಂತೆಯೇ ಪುರುಷ ನಿರ್ಮಿತ ಮತ್ತು ಅಪೇಕ್ಷಿತ ಹೆಣ್ಣುಗಳ ಮಾದರಿಗೆ ಅಳವಡುವ ದಮಯಂತಿಯನ್ನು ಆದರ್ಶ ಪೀಠದಲ್ಲಿಟ್ಟು, ಆ ಅಚ್ಚಿಗೆ ಅಳವಡದ ತಮ್ಮ ಅಪೇಕ್ಷೆಗೆ ಭಿನ್ನವಾಗಿ ನಡೆಯುವ ಹೆಣ್ಣುಗಳನ್ನು

ತಿರಸ್ಕೃತ, ನಕಾರಾತ್ಮಕ ನೆಲೆಯಲ್ಲಿ ವ್ಯಾಖ್ಯಾನಿಸಲಾಗಿದೆ. ನಳನ ರಾಜ್ಯದ ಶ್ರೇಷ್ಠತೆಯನ್ನು ಹೇಳುವಾಗ ಆ ರಾಜ್ಯದಲ್ಲಿ "ಪತಿಯೆಡೆಗೆ ವಂಚಿಸರು ಸತಿಯರು" ಎಂದು ಹೇಳಿರುವುದು ಹಾಗೂ ನಳನು ದೌತ್ಯದ ಸಂದರ್ಭದಲ್ಲಾಡುವ "ಇಂದುಮುಖಿಯರ ಗುಣವ ತಿಳಿಯಲಸಾಧ್ಯ. ಮಾಯೆಗಳ ಹೆಣ್ಣವರು, ನಿತ್ಯದಿ ಹುಸಿಯನಾಡುವರು, ಕಾಯವಳಿದರು ಅಂತರಂಗವ ಬಾಯಬಿಡರು, ಚಪಲಚಿತ್ತದಿ ಮನವ ವಂಚಿಸಿ ಮಾತನಾಡುವರು ಗುಪಿತವಳವಡದು, ಆಪ್ತರೊಡವೆಯನಪಹರಿಸಿ ಸಾಹಸವ ಮೆರೆವ ನಿಪುಣೆಯರಿಗಿದು ಸಹಜ ಗುಣ. ಅನೃತಗಳನಾಡುವರು, ಸತ್ಯಕೆ ಪಾವಕನ ಮುಟ್ಟುವರು ಸತಿಯರನಾವಪರಿಯಲಿ ನಂಬಬಹುದೈ" ಎಂಬ ಮಾತುಗಳು ಕಥೆಯಿಂದ ಪ್ರತ್ಯೇಕವಾಗಿ ನಿಲ್ಲುತ್ತವೆ.(3–22 ರಿಂದ 25)

ಈ ವಿವರ ದಮಯಂತಿಯು ಅಂತಹ ಮಾದರಿಯಲ್ಲ ಎಂಬುದನ್ನು ಹೇಳಲೋಸುಗವೇ ಎಳೆದುತಂದಿರುವ, ಹೆಣ್ಣನ್ನು ಕುರಿತ ಪುರುಷ ಲೋಕದ ಹೇಳಿಕೆಗಳಾಗಿವೆ. ಇಡೀ ನಳಚರಿತ್ರೆಯಲ್ಲಿ ಬರುವ ಇತರ ಯಾವ ಸ್ತ್ರೀಯರೂ ನಕಾರಾತ್ಮಕ ಉದಾಹರಣೆಗಳಂತೆ ಚಿತ್ರಣಗೊಂಡಿಲ್ಲ. ಲೋಕಪಾಲರು ನಳನ ಪ್ರಾಮಾಣಿಕ ದೌತ್ಯವನ್ನು ಮೆಚ್ಚಿ "ನಳಿನ ಮುಖಿಯರ ಕಪಟ ಚಿತ್ತವ ತಿಳಿಯಲಾರಿಗೆ ಸಾಧ್ಯ, ನಿನ್ನ ತಪ್ಪಿಲ್ಲ" ಎಂದು ಸಮಾಧಾನಪಡಿಸುತ್ತಾರೆ. ಲೋಕಪಾಲರ ಈ ಅಭಿಪ್ರಾಯವು ಏಕಮುಖವಾಗಿದೆ. "ಲಲನೆಯನ್ನು ಒಲಿಸಿಕೊಳ್ಳುವ ಹದವೆನೆಂದು ಯೋಚಿಸಿ ತಾವೇ ಕಪಟದಿಂದ ನಳರೂಪಧರಿಸಿ ಬರುವ ನಾಲ್ವರು ತಮ್ಮ ಕಪಟವನ್ನು ಮರೆಮಾಚಿ ಈ ರೀತಿ ತಮ್ಮ ಅಪೇಕ್ಷಿತ ಮಾದರಿಗಿಂತ ಭಿನ್ನವಾಗಿ ಬದುಕಲು ಬಯಸುವ, ತಮ್ಮಿಚ್ಚೆಗೆ ಬೆಲೆಕೊಡದ ಹೆಣ್ಣುಗಳನ್ನು 'ಕಪಟಿ'ಗಳೆಂದು ಮಾಯಾಂಗನೆಯರೆಂದು ಮತ್ತೊಂದು ಮಾದರಿಗೆ ಫಿಕ್ಸ್ ಮಾಡುವುದು ಪುರುಷ ಚರಿತ್ರೆಯಲ್ಲಿನ ಸ್ತ್ರೀ ವ್ಯಾಖ್ಯಾನಕ್ಕೆ ಹಿಡಿದ ಕನ್ನಡಿಯೇ ಆಗಿದೆ. ಋಗ್ವೇದದ ಹತ್ತನೆಯ ಮಂಡಲದಲ್ಲಿ 'ಸ್ತ್ರೀಯರು ಸ್ನೇಹಕ್ಕೆ ಯೋಗ್ಯರಲ್ಲ ಅವರ ಹೃದಯಗಳು ತೋಳಗಳ ಹೃದಯದಂತೆ" ಎನ್ನುವ ಅರ್ಥದ ಮಾತು ಬರುತ್ತದೆ. 'ಪರಮಪುಣ್ಯ ಚರಿತ್ರೆ' ಎಂದು ಕರೆಯಲಾಗಿರುವ ಈ ಕಥೆಯ ನಾಯಕ ಅಮರ ಪ್ರೇಮಿ ನಳನೂ ಹೀಗೆಯೇ ಮಾತನ್ನಾಡಿದ್ದಾನೆ!

### ಪಾತಿವ್ರತ್ಯದ ಸರ್ಟಿಫಿಕೇಟ್

ಗಂಡನಾಗುವವನಾರೆಂದು ತಿಳಿಯುವ ಮೊದಲೂ ಮೀಸಲು ಕಾಪಿಡುವ, ವಿವಾಹದ ನಂತರ ಒಪ್ಪಿಸಿಕೊಳ್ಳುವ, ಗಂಡನಿಂದ ಪರಿತ್ಯಕ್ತವಾದರೂ, ಅವನ ಸಾವಿನ ನಂತರವೂ ತನ್ನ ಸತೀತ್ವವನ್ನು ಹೆಣ್ಣು ಉಳಿಸಿಕೊಳ್ಳಬೇಕೆಂದು ಬಯಸುವ, ಸದಾ ಪುರುಷ ಶ್ರೇಯಸ್ಸನ್ನು ಕೋರುವವಳೇ ಪತಿವ್ರತೆ. ಪತಿಯ ಗುಣದೋಷಗಳನೆತ್ತಿ ಆಡದಿರುವುದು "ಪತಿವ್ರತವನಾಚರಿಸುವ ಬಗೆ" ಎಂಬಂತಹ ವ್ಯಾಖ್ಯಾನಗಳನ್ನು, ಏಕಮುಖ ತರ್ಕವನ್ನು ನಮ್ಮ ಸಾಂಸ್ಕೃತಿಕ ಚರಿತ್ರೆ ಎತ್ತಿಹಿಡಿಯುತ್ತಲೇ ಬಂದಿದೆ.

ನಮ್ಮ ಕಲೆ, ಸಾಹಿತ್ಯ, ಆಚರಣೆಗಳು, ಅಧ್ಯಯನಗಳು ನಮ್ಮ ಸಾಂಸ್ಕೃತಿಕ ಕಥನದಲ್ಲಿ ಇದುವರೆಗೂ ಮಹಾಸತಿ ಶಿರೋಮಣಿಯರನ್ನು, ಸಾಧ್ವಿಗಳನ್ನು, ತ್ಯಾಗಸಂಪನ್ನೆಯರನ್ನು ಅವರು ಮೆರೆದ ಅಥವಾ ಮೆರೆದರೆಂದು ಹೇಳಲಾಗುವ ಪವಾಡ ಸದೃಶ ಬದುಕಿನ ವೈಭವೀಕರಣ ನಡೆದಿದೆ, ನಡೆಯುತ್ತಿದೆ. ಆಶ್ಚರ್ಯವೆಂದರೆ ಚಾರಿತ್ರಿಕ, ಶಿಷ್ಟ, ಜಾನಪದ (ಕೆಲವನ್ನು ಹೊರತುಪಡಿಸಿ), ಸಾಹಿತ್ಯಿಕ ಕಥನದಲ್ಲಿ ಹೆಣ್ಣಿನ 'ಗೈರುಹಾಜರಿ'ಯಿದೆ ಎಂಬುದನ್ನು ಸುಳ್ಳಾಗಿಸುತ್ತೇವೆಂಬ ಹಠಕ್ಕೆ ಬಿದ್ದು ಇಂದು ಹೆಣ್ಣನ್ನು 'ಢಾಳಾಗಿ' ತೋರಿಸುತ್ತಿರುವ, ಸಿನೆಮಾ, ಧಾರಾವಾಹಿ, ಜಾಹೀರಾತು, ನ್ಯೂಸ್‌ಕ್ಲಿಪಿಂಗ್‌ನ ಪರಿಭಾಷೆಯವರೆಗೂ ಸ್ತ್ರೀ ಕುರಿತ ಭಾರತೀಯ ಸನಾತನವಾದಿ ಧೋರಣೆಯನ್ನೇ ಪುನರುಚ್ಚರಿಸುತ್ತಿರುವುದು ದುರಂತವೇ ಸರಿ.

ಈ ಸತೀತ್ವದ ಪರೀಕ್ಷೆಯನ್ನು ಎದುರಿಸಬೇಕಾದ ಸಂದರ್ಭ, ಒತ್ತಡಗಳು ಈ ನೆಲದ ಎಲ್ಲ ಹೆಣ್ಣುಗಳಿಗೂ ಯಾವಾಗಬೇಕಾದರೂ ಒದಗಿಬಿಡಬಹುದಾದ ಪರೀಕ್ಷೆಯೇ. ಅದಕ್ಕೆ ಅನಸೂಯೆ, ಅಹಲ್ಯೆ, ಮುಂತಾದ ಋಷಿಪತ್ನಿಯರೂ ಸೀತೆ, ಸಾವಿತ್ರಿ, ಚಂದ್ರಮತಿ, ದ್ರೌಪದಿಯರಂತ ಅರಸು ಹೆಣ್ಣುಗಳು ಶಕುಂತಲೆ, "ನಿಮ್ಮಡಿ ನಳಿನದಲಿ ಸುಖ ದುಃಖವಲ್ಲದೆ ಬೇರೆ ಗತಿಯುಂಟೆ" ಎಂದು ಗಂಡನನ್ನೇ ನಂಬಿದ ದಮಯಂತಿಯರಂತಹ ಪರಿತ್ಯಕ್ತೆಯರು ತಮ್ಮೆಲ್ಲಾ ಅವಮಾನ ಸಂಕಷ್ಟಗಳನ್ನು ಎದುರಿಸಿ ನಿಲ್ಲುವ ಸತ್ವಯುತ ವ್ಯಕ್ತಿತ್ವ ಹೊಂದಿಯೂ ಅನ್ಯರಿಂದ ಪಾತಿವ್ರತ್ಯದ ಸರ್ಟಿಫಿಕೇಟ್ (ಅದೂ ಮುನಿಗಳು, ಪುರುಷದೈವಗಳಿಂದ) ಪಡೆಯಲೇ ಬೇಕಾದ ಅನಿವಾರ್ಯ ಪರಿಸ್ಥಿತಿಯಿದೆ. ಸತೀತ್ವವನ್ನು ಸಾಬೀತು ಮಾಡಲೇಬೇಕಾದುದಕ್ಕೆ ಉತ್ತರ, ವಿವರಣೆ ನೀಡುತ್ತಾ ನಿಲ್ಲಬೇಕಾದ, ಒಪ್ಪಿಸಿ ಪಾಸಾಗಲೇಬೇಕಾದ ಸ್ಥಿತಿಯಲ್ಲಿ ಏನೂ ಬದಲಾವಣೆಯಿಲ್ಲ. ಸಂಕಷ್ಟಗಳ ಸರಮಾಲೆಯನ್ನು ಒಂಟಿಯಾಗಿ ಎದುರಿಸಿ ಛಿದ್ರಗೊಂಡ ತನ್ನ ಕುಟುಂಬವನ್ನು ಒಂದುಗೂಡಿಸಲು ನವೆದ ದಮಯಂತಿಯೂ ಅಪರಾಧಿಯಂತೆ ನಿಲ್ಲಬೇಕಾದ ಪ್ರಸಂಗ! ದಮಯಂತಿಯು ಪುನಃಸ್ವಯಂವರಕ್ಕೆ ಸಿದ್ಧಳಾದಳೆಂಬುದನ್ನು ಕೇಳಿ ನಳ ಅವಳನ್ನು 'ದ್ರೋಹಿ'ಎನ್ನುವುದು ಮರುಮದುವೆಗೆ ಯೋಚಿಸುವ ಹೆಣ್ಣುಗಳನ್ನು ಕುರಿತ ರೂಢಮೂಲ ವ್ಯಾಖ್ಯಾನವೇ ಆಗಿದೆ. ಅವಳು ಅಂತಹ ದ್ರೋಹಿ ಹೆಣ್ಣಲ್ಲವೆಂದು, ಮದುವೆಯಿರಲಿ ಕನಸಿನಲ್ಲಿಯೂ ಸಹ ಪರಪುರುಷನನ್ನು ನೆನೆಸಿಲ್ಲ ಎಂಬುದಕ್ಕೆ ದೇವತೆಗಳಿಂದ ನಂಬಿಕೆಯ ಸರ್ಟಿಫಿಕೆಟ್ ದೊರಕುವವರೆಗೂ ನಳನಂತಹ ತ್ಯಾಗಭರಿತ ಅಮರಪ್ರೇಮಿಯೂ ಮಡದಿಯನ್ನು ಸ್ವೀಕರಿಸಲಾರನೆಂಬುದು ಈ ಪ್ರೇಮ ಕಥೆಯ ವ್ಯಂಗ್ಯವೇ ಸರಿ.

**ಹುಡಿಯಾಗದ ಸತ್ವ**

ಇತರ ಸಾಧ್ವಿಯರಿಗಿಂತ ದಮಯಂತಿಗೆ ಈ ದತ್ತವಾದ ಚೌಕಟ್ಟಿನೊಳಗೂ ಒಂದಿಷ್ಟು ಸ್ವಾತಂತ್ರ್ಯ, ಅಸ್ಮಿತೆ ಇರುವುದು ವಿಶೇಷ. ಸಮಾನ್ಯವಾಗಿ ಕಾವ್ಯಗಳಲ್ಲಿ ಸ್ತ್ರೀ ವರ್ಣನೆಯಲ್ಲಿ ಅವಳ ಬೌದ್ಧಿಕ ಸೌಂದರ್ಯಕ್ಕಿಂತಲೂ ಅವಳ ಭೌತಿಕ ಸೌಂದರ್ಯದ

ಕಡೆಗೆ ಗಮನಕೊಡುವುದು ಹೆಚ್ಚು. ಈ ಕಾವ್ಯದಲ್ಲಿ ದಮಯಂತಿಯೇ ಪೂರ್ಣವಾಗಿ ಇಡೀ ಫ್ರೇಮ್ ತುಂಬಿಕೊಂಡಿರುವವಳಾದರೂ ಅವಳ ಬಾಹ್ಯವರ್ಣನೆಯನ್ನು ನೈಷದೀಯ, ನಳಚಂಪುಗಳಂತಹ ಕೃತಿಗಳಂತೆ ಕನಕರು ವಿಪರೀತವಾಗಿ ಬೆಳೆಸಿಲ್ಲ. ವರ್ಣನೆಗಳಲ್ಲಿ ಸಂಯಮವಿದೆ. ಪಾತಿವ್ರತ್ಯದೊಂದಿಗೆ ಅವಳ ಭೌದ್ಧಿಕ ಸೂಕ್ಷ್ಮತೆ, ಜಾಣತನಗಳ ಕಡೆಗೆ ಗಮನ ನೀಡಿದೆ. ಚೇದಿನಗರದ ರಾಣಿಯಲ್ಲಿ ಊಳಿಗಕ್ಕೆ ಸೇರುವಾಗ ಅವಳು ಬಹಳ ಸ್ಪಷ್ಟವಾಗಿ ತಾನು ಹೀನವನ್ನು ಬಳಸುವವಳಲ್ಲವಾದ್ದರಿಂದ ತನ್ನತನಕ್ಕೆ ಧಕ್ಕೆಯಾಗದಂತಹ ಯಾವುದೇ ಸೇವೆಯನ್ನು ನೀಡಬೇಕೆಂದು ಹೇಳುತ್ತಾಳೆ "ನಿನಗೆ ಪೇಳೆವು ಹೀನ ಕೆಲಸವ" ಎಂದು ರಾಣಿ ಭರವಸೆಕೊಡುತ್ತಾಳೆ. ದಮಯಂತಿಯ ಪಾತ್ರ ಸಹಜತೆಯನ್ನು ಕಳೆದುಕೊಂಡು ಮಂಕಾಗಬಹುದಾಗಿದ್ದ ಪಾತಿವ್ರತ್ಯ ಕಾಪಾಡಿಕೊಳ್ಳಲು ದೇವತೆಗಳಿತ್ತ ಪವಾಡ ಶಕ್ತಿಗಳನ್ನು ಕನಕರು ಕೈಬಿಟ್ಟಿದ್ದಾರೆ. ಎಲ್ಲಿಯೂ ದಮಯಂತಿ ತಾನು ಹೆಣ್ಣಾಗಿ ಹುಟ್ಟಬಾರದಿತ್ತು ಎಂಬತಹ ನೈರಾಶ್ಯಕ್ಕೆ, ಖಿನ್ನತೆಗೆ ಇಳಿಯುವುದಿಲ್ಲ, ಅಸಹಾಯಕತೆ, ನೋವುಗಳಿದ್ದರೂ ಅವಳ ಜೀವನ್ಮುಖೀ ಚಿಂತನೆಗಳು ಹತಾಶೆಗೆ ಬೀಳದಂತೆ, ನಿಷ್ಕ್ರಿಯಳಾಗದಂತೆ ತಡೆಯುತ್ತವೆ. ಇಲ್ಲಿ ಮನುಷ್ಯ ಸಂಬಂಧಗಳ ಬಗೆಗೇ ನಂಬಿಕೆ ಕಳೆದು ಹೋಗುವಂತಹ ದುರ್ವರ್ತನೆ, ಮಾನಹಾನಿ, ಹಿಂಸೆಗಳ ಸನ್ನಿವೇಶಗಳಾಗಲೀ, ಪಾತ್ರಗಳಾಗಲೀ ಇಲ್ಲವೆಂಬುದನ್ನು ಗಮನಿಸಬಹುದು. ದಮಯಂತಿಯ ಪಾತ್ರ ಪೋಷಣೆಯನ್ನು ಕನಕರು ಕೆಲವು ಸಣ್ಣ ಪುಟ್ಟ ಬದಲಾವಣೆಗಳಿಂದ ಹೊಳಪುಗೊಳಿಸಲು ಪ್ರಯತ್ನಿಸಿದ್ದಾರೆ.

### ವರಪ್ರಸಾದದ ಮಗಳು

ಮಕ್ಕಳಿಲ್ಲವೆಂದು ಕೊರಗುತ್ತಿದ್ದ ಭೀಮನು ದಮನ ಋಷಿಗಳ ಆಣತಿಯಂತೆ ಪುತ್ರಕಾಮೇಷ್ಟಿಯಾಗವನ್ನು ಮಾಡಿ ದಮಯಂತಿಯನ್ನು ಪಡೆಯುತ್ತಾನೆ. ಮೂಲದಲ್ಲಿ ಅವಳಿಗೆ ಸಹೋದರರಿದ್ದರೆಂದು ತಿಳಿಸಲಾಗಿದೆ ಅದನ್ನು ಕನಕರು ಕೈಬಿಟ್ಟು, "ಮಂಗಳಕರ ಸುಲಗ್ನಸುತಾರೆಯಲಿ ನೃಪನರಸಿ ಪಡೆದಳು ತನುಜೆಯೊರ್ವಳ ಲೋಕಸುಂದರಿಯ ಅಮರದುಂದುಬಿ ಮೊಳಗಲಿಳೆ ಸಂಭ್ರಮಿಸೆ" ಎಂದು ದೈವದತ್ತವಾದ ಕೂಸೆಂಬ ಅಲೌಕಿಕ ಆವರಣವನ್ನು ಕೊಟ್ಟಿದ್ದಾರೆ. ನಮ್ಮ ನೆಲದಲ್ಲಿ ವಾರಸುದಾರಿಕೆಯ ಕಲ್ಪನೆ ಬೆಳೆದಂತೆ ಗಂಡು ಮಗುವಿನ ಪ್ರಾಶಸ್ತ್ಯ ಹೆಚ್ಚಾದಂತೆ ಹೆಣ್ಣುಮಗು ದೌರ್ಭಾಗ್ಯವೆಂಬ ಭಾವನೆ ಬೆಳೆಯತೊಡಗಿತು. "ಓ ಪ್ರಜಾಪತಿ ಬೇರೆಡೆಗೆ ಹೆಣ್ಣು ಮಗುವನ್ನು ಕೊಡು ಇಲ್ಲಿ ಮಾತ್ರ ಗಂಡು ಮಗುವನ್ನು ಕೊಡು"ಎಂಬ ಪ್ರಾರ್ಥನೆಯೊಂದು ಅಥರ್ವಣ ವೇದದಲ್ಲಿ ಬರುತ್ತದೆ. ಪುತ್ರ ಜನನಕ್ಕಾಗಿ ಪುಂಸವನವೆಂಬ ವ್ರತಮಾಡುತ್ತಿದ್ದುದು ವೈದಿಕ ಯುಗದ ಕೊನೆಯಲ್ಲಿ ಕಂಡುಬರುತ್ತದೆ. ಕೇವಲ ಪುತ್ರರಿಗಾಗಿ ಹಂಬಲಿಸುವ ಈ ಸಂಸ್ಕೃತಿಯಲ್ಲಿ ಪುತ್ರಿಯೊಬ್ಬಳ ಈ ಮಹಿಮಾನ್ವಿತ ಜನನ ವಿಶೇಷವೆಂದೇ ಹೇಳಬೇಕು ಗಂಡಾಗದ ನಿರಾಸೆ ಅರಮನೆಯಲ್ಲಾಗಲೀ, ಪ್ರಜಾಜನರಲ್ಲಾಗಲೀ ಕಂಡುಬರುವುದಿಲ್ಲ. ಆದರೆ

ವಾರಸುದಾರರಿಲ್ಲದ ಭೀಮನ ರಾಜ್ಯಕ್ಕೆ ಅವಳನ್ನು ವಾರಸುಧಾರಿಣಿಯಂತೇನೂ ಚಿತ್ರಿಸಿಲ್ಲ, ಅಥವಾ ಜಾನಪದ ಕಥೆಗಳಲ್ಲಿ ಬರುವಂತೆ ಅಳಿಯನು ವಾರಸುದಾರನಾಗುವುದೂ ಇಲ್ಲ. ಮದುವೆಯ ನಂತರ ನೈಷಧಕ್ಕೆ ದಮಯಂತಿಯನ್ನು ಕಳಿಸಿಕೊಡಲಾಗುತ್ತದೆ.

ಲೋಕ ಮೋಹಕ ಹೆಣ್ಣಾದ ದಮಯಂತಿಯ ಗುಣವಿಶೇಷಗಳನ್ನು ಮೂರು ಪದ್ಯಗಳಲ್ಲಿ ವಿವರಿಸಲಾಗಿದೆ. ಗುಣದಲಿ, ಶೀಲದಲಿ, ಮಾತಿನ ಭಣಿತೆಯಲಿ ಗಾಂಭೀರ್ಯದಲಿ, ವಿತರಣದಲಿ, ಅನುಪಮ ವಿದ್ಯೆಯಲಿ, ಗುರುದೇವ ಭಕ್ತಿಯಲಿ ಪ್ರಣುತಿಯಲಿ ಶರ್ವಾಣಿ ರತಿಯರಿಗೆ ಯೆಣೆ ಎನಿಪ ಸುಂದರಿಗೆ ಯಾರೂ ಸಮನಲ್ಲ. ಯಾತ್ರಿಕನಾದ ಬ್ರಾಹ್ಮಣನೊಬ್ಬ ಹೇಳುವಂತೆ "ಆ ಯುವತಿ ಲೋಕದ ಸತಿಯ ಬಗೆಯಂತಲ್ಲ. ಭಾವಿಸಲು ಪ್ರವಿಮಲಾಕಾರದಲಿ, ಮೃದುತೆ, ಸವಿನುಡಿಯ ಸಂಭಾಷಣೆಗಳಲಿ ಭುವನದೊಳು ನಾ ಕಾಣೆ ದಮಯಂತಿಗೆ ಸಮಾನರಾರನು" ಎನ್ನುವಂತಹ ವಿಶೇಷತೆ ಅವಳದು! "ಪರರ ದುಃಖವ ಪರಿಹರಿಸಿ ಮಿಗೆ ಪರರಿಗುಪಕಾರಾರ್ಥವೆಸಗಲು ಪರಮ ಪುಣ್ಯವದು"ಎಂದು ಹಿರಿಯರು ಹೇಳುವ ಮಾತನ್ನು ನಂಬಿದವಳು.

"ನಾನು ನಳನನ್ನು ಬಿಟ್ಟು ಬೇರೆಯವನನ್ನು ವರಿಸುವುದಿಲ್ಲ ಏಕೆಂದರೆ ಶ್ರವಣ ಮಾರ್ಗದಿಂದ ಪ್ರವೇಶಿಸಿದ ಅವನು ನನ್ನ ಮನಸ್ಸನ್ನು ಅಪಹರಿಸಿದ್ದಾನೆ" ಹಲವು ಮಾತೇನಿನ್ನು ನಳನೃಪತಿಲಕನೆನ್ನಯ ಪತಿಯಲಾ ಭೂತಳದ ಪುರುಷರು ಪಿತನ ಸಮ" ಎಂದು ಸ್ಪಷ್ಟವಾಗಿ ತನ್ನ ಅಭಿಪ್ರಾಯವನ್ನು ಹಂಸಕ್ಕೆ ತಿಳಿಸುವವಳು.10 ಹೀಗೆ ನಳನು ಮನಸ್ಸನ್ನು ಸೇರಿದ ಮೇಲೆ ಅವನನ್ನು ಹೊಂದಲು ಉಪಾಯದಿಂದ ತಾಯಿಯ ಮೂಲಕ ತನ್ನ ತಂದೆಗೆ ಸ್ವಯಂವರವನ್ನು ಏರ್ಪಡಿಸುವಂತೆ ಪ್ರಾರ್ಥಿಸುವುದು ಬಹಳ ಸಹಜವಾಗಿದೆ.

### ಸ್ವಯಂವರ

ಸ್ವಯಂವರದಲ್ಲಿ ದಮಯಂತಿಗೆ ಮೆಚ್ಚಿದವನನ್ನು ಆಯ್ಕೆಮಾಡಿಕೊಳ್ಳುವ ಅವಕಾಶವಿದೆ. ಸ್ವಯಂವರಾರ್ಥಿಗಳಿಗೆ ಯಾವ ಪರೀಕ್ಷೆಯೂ ಇಲ್ಲದಿರುವುದನ್ನು ಗಮನಿಸಿದಾದ ಈ ಕಥೆ ದಿಗ್ವಿಜಯ, ಅರಸೊತ್ತಿಗೆಯ ಮೇಲಾಟದ ವಾತವರಣ ನಿರ್ಮಾಣವಾದ ಕಾಲಕ್ಕಿಂತ ಹಿಂದಿನದೆಂಬುದನ್ನು ಹೇಳುತ್ತದೆ. ಬದಲಾದ ಕಾಲಮಾನದಲ್ಲಿ ಸ್ವಯಂವರಗಳು ಸ್ತ್ರೀಯ ಆಯ್ಕೆಗಿಂತ ವೀರರ ಸಾಧನೆಗೆ, ವಿಜಯಕ್ಕೆ ಹೆಚ್ಚು ಒತ್ತು ನೀಡಿವೆ. ಹೆಣ್ಣುಗಳನ್ನು ವೀರನು ಗೆದ್ದುಕೊಳ್ಳಬೇಕಾದ ಅಖಾಡಗಳಾಗಿ ಸ್ವಯಂವರಗಳು ಪರಿವರ್ತನೆಯಾದದನ್ನು ಗಮನಿಸಬಹುದು. ಸ್ಪರ್ಧೆಯಲ್ಲಿ ಗೆದ್ದವನು ಮನಮೆಚ್ಚಿದವನಾಗದಿರುವ, ಮೆಚ್ಚಿದವನು ಗೆಲ್ಲದಿರುವ, ಗೆದ್ದವನು ಮತ್ತಾರಿಗೋ ದಾನಮಾಡುವ ಸಂಕಟಗಳು ದಮಯಂತಿಗಿಲ್ಲ. ಶಿವಧನುಸ್ಸು ಮುರಿಯಲು ರಾಮನಿಗಷ್ಟೇ ಸಾಧ್ಯವಾಗಲೆಂದು ಸೀತೆ ಪ್ರಾರ್ಥಿಸಿದ್ದು ಫಲಿಸಿತ್ತು,

ದ್ರೌಪದಿಯನ್ನು ಗೆಲ್ಲಲು ಸಾಧ್ಯವಿದ್ದ ಕರ್ಣನನ್ನು ಉಪಾಯಾಂತರಗಳಿಂದ ಹಿಮ್ಮೆಟ್ಟಿಸಲು ಕೃಷ್ಣನಿದ್ದ, ಗೆದ್ದವನೊಬ್ಬ, ಮದುವೆಯಾದವನೊಬ್ಬ, ಒಪ್ಪಿಸಿಕೊಳ್ಳಬೇಕಾದವನು ಮತ್ತೊಬ್ಬನಾದ ಅಂಬಿಕೆ ಅಂಬಾಲಿಕೆ ಸೋದರಿಯರ ಅಧೀನತೆ, ಈ ವ್ಯವಸ್ಥೆಗೆ ತಿರುಗಿಬಿದ್ದ ಅಂಬೆಯ ಸ್ಥಿತಿಗಳು ನಿಧಾನವಾಗಿ ಸ್ವಯಂವರಗಳು ಹೇಗೆ ಹೆಣ್ಣಿನ ಆಯ್ಕೆಯ ಸ್ವಾತಂತ್ರ್ಯವನ್ನು ಕಸಿದುಕೊಂಡವೆಂಬುದನ್ನು ಬಿಚ್ಚಿ ಹೇಳುತ್ತವೆ.

ರಂಭೆಯ ದೌತ್ಯ ವಿಚಾರ ಮೂಲದಲ್ಲಿಲ್ಲ. ಇದನ್ನು ದಮಯಂತಿಯ ಪ್ರೇಮನಿಷ್ಠೆಯನ್ನು [illegible] ಪ್ರಾಮಾಣಿಕತೆಯನ್ನು ಪರೀಕ್ಷಿಸುವ ಸಲುವಾಗಿಯೇ ಕನಕರು ಸೃಷ್ಟಿಸಿಕೊಂಡಿದ್ದಾರೆ. ಇಂದ್ರನು ಕಳುಹಿಸಿದ್ದ ಅಖಿಳ ವಸ್ತುಗಳ ಕಾಣಿಕೆ ಕೊಟ್ಟು ಕೈಮುಗಿದು "ತಾಯೆ ಸುರಪದವಿಗಿಂತ ಮಿಗಿಲಾದ ಪದವಿ ಲೋಕದಲ್ಲುಂಟೇ ಅಂಥ ಪದವಿ ಸದರವೇ ನರಜನ್ಮದವರಿಗೆ? ಆದರೆ ಇಂಥ ಪುಣ್ಯ ನಿನಗೆ ಒದಗಿ ಬಂದಿದೆ. ಅಲ್ಲದೆ ಮರ್ತ್ಯದ ರಾಯರು ಅಸ್ಥಿರರು, ನರರನ್ನು ನೆಚ್ಚಬೇಡ" ಎಂಬ ರಂಭೆಯ ಮಾತುಗಳಾವವೂ ನಳನನ್ನು ಕುರಿತಾದ ಅವಳ ಆಕರ್ಷಣೆಯನ್ನು ಕೆಡಿಸಲಾರವು. "ಚಿತ್ತವೆನಗೊಬ್ಬನಲಿ ಸಿಲುಕಿತು ಮರಳಿಪೊಡೆ ಕಮಲಾಕರನಿಗಳವಲ್ಲ" ಅಲ್ಲದೆ "ಹಲವು ದೇವಾಂಗನೆಯರಿರುವಾಗ ಅಮರೇಂದ್ರನು ತನಗೆ, ಮನುಜಸತಿಗೆ ಆಸೆ ಪಡುವುದು ಪಾವನವೇ? ಬರಿದೆ ದುರಾಸೆ ಅವನಿಗೆ ಏಕೆ" ಎಂದು ಖಂಡಿಸುತ್ತಾಳೆ. ಈ ಆಮಿಷ ಮತ್ತು ಅಪ್ತ ಸಮಾಲೋಚನೆಗಳು ದಮಯಂತಿಯ ಪ್ರೇಮವನ್ನು ಮತ್ತಷ್ಟು ಗಟ್ಟಿಗೊಳಿಸುತ್ತವೆಯೇ ವಿನಃ ಅದನ್ನು ಸಡಿಲಿಸುವ ಶಕ್ತಿ ಅವಕ್ಕಿಲ್ಲ. ತನ್ನ ಪ್ರೇಮವೇ ಮುಖ್ಯವೆಂದು ಅಧಿಕಾರ ಅಂತಸ್ತನ್ನು ಧಿಕ್ಕರಿಸುತ್ತಾಳೆ. ಸಾಮಾನ್ಯವಾಗಿ ಒಡವೆ ವಸ್ತುಗಳು, ಆಸ್ತಿ, ಸ್ಥಾನಮಾನ ಗೌರವ ಪ್ರತಿಷ್ಠೆಗಳು ಹೆಣ್ಣನ್ನು ಹೆಚ್ಚಾಗಿ ಸೆಳೆಯುತ್ತವೆಂಬ ಪೂರ್ವಗ್ರಹ ವಿಚಾರವನ್ನು ತನ್ನ ತೀರ್ಮಾನದಿಂದ ದಮಯಂತಿ ಸುಳ್ಳುಮಾಡುತ್ತಾಳೆ.

ನಳನು ವೇಷಮರೆಸಿ ದೌತ್ಯಕ್ಕೆ ಬಂದಾಗ ಅವನ ವಿಶೇಷ ಸೌಂದರ್ಯ ಪ್ರಭೆಗೆ ಚಕಿತಳಾದರೂ ದಿಟ್ಟವಾಗಿ ದಮಯಂತಿಯು "ಆರು ನೀವು, ಎಲ್ಲಿಂದ ಬಂದಿರಿ, ಕಾರಣವಿದೇನು? ಎಮ್ಮ ರಾಜದ್ವಾರದಲಿ ನೀವು ಹೊಕ್ಕ ಹದವೇನು? ಇಲ್ಲಿ ಗಂಡುನೊಣ ಸೇರಲಮ್ಮದು" ಎಂದು ಕೇಳುತ್ತಾಳೆ. ತಾನು ಇಂದ್ರನ ದೂತನೆಂದು, ಮರ್ತ್ಯನಾದ ನಳನಿಂದ ನಿನಗೆ ಏನು ಪ್ರಯೋಜನ ಮನುಷ್ಯರು ಮರಣ ಉಳ್ಳವರು, ನಳನೇನು ಅಗ್ಗಳನೇ, ಎಂದು ಆತ ಹಂಗಿಸಿ, ಇಂದ್ರನನ್ನು ವರಿಸೆಂದು ಮನವಿಯನ್ನಿಟ್ಟಾಗ ಸಿಟ್ಟುಗೊಂಡು, "ಅಂತಹ ಹೀನ ವೃತ್ತಿಯ ಮಾತು ಬೇಡ, ಆ ದೇವತೆಗಳು ಎಂತಹವರೇ ಆಗಿರಲಿ ಅವರಿಂದ ನನಗೆ ಆಗಬೇಕಾದ ಕಾರ್ಯವೇನಿಲ್ಲ, ಆ ನಿಷಧಪತಿಯೇ ನನ್ನ ಪತಿಯೆಂದು ಭಾವಿಸಿರುವೆನು, ಅವನು ಕರುಣಿಸಿ ಒಲಿದರೆ ಲೇಸು ಇಲ್ಲದಿದ್ದರೆ ಅವನಿಗಾಗಿ ಪ್ರಾಣ ಬಿಡುತ್ತೇನೆ" ಎನ್ನುವ ಅವಳದಿಟ್ಟ ಮಾತುಗಳು ಆಧುನಿಕ ಹೆಣ್ಣಿನಂತೆ ಕೇಳಿಸುತ್ತದೆ. ಅವನೇ

ನಳನೆಂದು ಹೇಳಿದೊಡನೇ ನಂಬಿ ಬಿಡುವ ಮುಗ್ಧಳಲ್ಲ ಅವಳು. "ದೇವತೆಗಳು ಕುಟಿಲವಿದ್ಯರು ಹಾಗಾಗಿ ಪ್ರಾಕೃತರಾದ ನಾವು ನಿಮ್ಮನ್ನು ನಂಬುವ ಪರಿ ಹೇಗೆ ಮನ ನಂಬುವರೆ ಹೃದಯದ ಜೋಕೆಯಲಿ ಕುರುಹೆನಗೆ ತೋರು" ಎಂದು ಕೇಳುವಷ್ಟು ಜಾಣೆ. ಇಲ್ಲಿ ಅವಳು ದಿಟ್ಟೆಯಾಗಿ ತೋರಿದರೂ, ಆತನೇ ತಾನು ಪ್ರೇಮಿಸಿರುವ ನಳನೆಂದಾಗ 'ಹರುಷ, ಹೃದಯದ ಭೀತಿಯ' ಮಿಶ್ರಭಾವಗಳಲ್ಲಿ ಕೆಳದಿಯರ ಮರೆಗೆ ಸರಿದುಬಿಡುವ ಸಹಜ ಲಜ್ಜಿತೆ.

ದಮಯಂತಿಯನ್ನು ಒಲಿಯುವಂತೆ ಮಾಡಬೇಕೆಂದು ಇಂದ್ರನು ಹೇರಿದ ಒತ್ತಡದಿಂದ ತನ್ನ ಪ್ರೇಮವನ್ನು ಧೈರ್ಯವಾಗಿ ಸ್ಥಾಪಿಸಿಕೊಳ್ಳದೆ, ದೇವತೆಗಳೆಲ್ಲಿ ತಪ್ಪು ಭಾವಿಸುತ್ತಾರೋ ಎಂದು ನಳ ಅಳುಕುತ್ತಾನೆ. ಅದೆಲ್ಲದರ ಭಾರವನ್ನೂ ಹೊತ್ತು, ನೀನು ಲಜ್ಜೆಗೆಡಬೇಡ ಆರಿಸಿಕೊಳ್ಳುವವಳು ನಾನು ಎನ್ನುವ ದಮಯಂತಿಯು ನಳನಿಗಿಂತಲೂ ಬಹಳ ಸಧೃಢ ವ್ಯಕ್ತಿತ್ವ ಎನಿಸಿಬಿಡುತ್ತದೆ. ಆದರೆ ಲೋಕಪಾಲರ ಪ್ರಾರ್ಥನೆಮಾಡಿ ಆಶೀರ್ವಾದ ಪಡೆದುದಲ್ಲದೆ ತನ್ನ ಬದುಕು ಹಸನಾಗುವುದಿಲ್ಲವೆಂಬ ಸತ್ಯ ಸ್ವಯಂವರ ಮಂಟಪದಲ್ಲಿ ಅವಳಿಗೆ ಅರಿವಾಗುತ್ತದೆ.

ಸಂದಾನ ಮುರಿದು ಬಿದ್ದರೂ ಬಿಡದೆ ಇಂದ್ರ ಲೋಕಪಾಲರೊಂದಿಗೆ ನಳನ ವೇಷದಲ್ಲಿ ನಿಂತು ದಮಯಂತಿಗೆ ದಿಕ್ಕುತೋಚದಂತೆ ಮಾಡುತ್ತಾನೆ. ಸರಸ್ವತಿಯು ತಂದೆ ಭೀಮನೃಪನಿಗೆ ನೀಡಿದ ಸೂಚನೆಯಂತೆ ದಮಯಂತಿ ಸ್ವತಃ ತಾನೇ ಇಂದ್ರನನ್ನು ಪ್ರಾರ್ಥಿಸಿ ಬದಲಾಗದ ತನ್ನ ತೀರ್ಮಾನವನ್ನು ತಿಳಿಸುವುದಲ್ಲದೇ ಅವರು ತನ್ನ ತಂದೆಯಂತೆ ಕಾಪಾಡಬೇಕೆನ್ನುತ್ತಾಳೆ. "ಎಲೇ ಲೋಕಪಾಲರೇ ಸ್ವಪ್ನದಲ್ಲಿಯೂ ಕೂಡ ನಳನನ್ನು ಬಿಟ್ಟು ಬೇರೆ ಕಡೆ ನನ್ನ ಮನಸ್ಸು ಉಂಟಾಗದಿದ್ದಲ್ಲಿ ಆ ಸತ್ಯದಿಂದ ನಿಮ್ಮ ನಿಜರೂಪ ನನಗೆ ತೋರಿಸಿರಿ. ಮೊದಲೇ ನಾನು ನಳನನ್ನು ವರಿಸಿರುವುದರಿಂದ ನೀವು ನನಗೆ ಪರಪುರುಷರು. ಪರಸ್ತ್ರೀಯಾದ ನನ್ನಲ್ಲಿ ಹೇಗೆ ನಿಮಗೆ ಮೋಹ ಉಂಟಾಯಿತು?" ಎಂದು ಪ್ರಶ್ನಿಸುತ್ತಾಳೆ. ಅವಳ ಅಚಲ ನಿರ್ಧಾರಕ್ಕೆ, ಖಂಡಿತ ಸ್ವಭಾವಕ್ಕೆ ಲೋಕಪಾಲರೇ ಬಗ್ಗುತ್ತಾರೆಯೇ ಹೊರತು ಅವಳು ಬದಲಾಗುವುದಿಲ್ಲ.

### ದ್ಯೂತವೆಸನವೂ ಸ್ತ್ರೀ ಶೋಷಣೆಯೂ

ಕೆಲ ವರ್ಷಗಳ ನೆಮ್ಮದಿಯ ಜೀವನ ಸಾಗುವಷ್ಟರಲ್ಲಿ ನಳ ದ್ಯೂತವ್ಯಸನಕ್ಕೆ ಒಳಗಾಗುತ್ತಾನೆ. ಪುಷ್ಕರ ರಾಜ್ಯಕೋಶಾದಿಗಳನ್ನೆಲ್ಲ ಗೆದ್ದು, "ಅವನಿಪತಿ ಪಣವೇನಿನ್ನು ಪೇಳು"ಎಂದಾಗ "ನಾರಿಯಳನೊಡ್ಡುವೆನು ಸೋತಿಹ ಧಾರಿಣಿಯ ನೆರೆ ಗೆಲುವೆನೆನ್ನುತ ತನ್ನ ಮನದೊಳಗೆ ಭೂರಮಣ ಚಿಂತಿಸಿದ" ಆಹೊತ್ತಿಗೆ ಬ್ರಾಹ್ಮಣನೊಬ್ಬನಿಂದ ವಿಷಯ ತಿಳಿದ ದಮಯಂತಿ ಅಲ್ಲಿಗೆ ಬಂದು ಅವನಿಗೆ ಕೈಮುಗಿದು ಧೈರ್ಯದಿಂದ "ಶಶಿಕುಲಾಂಬುದಿ ಚಂದ್ರ ನಿಮಗೀವ್ಯಸನ ತೋರಿತೆ,

ಜೂಜಿನಲಿ ಶಿವಶಿವ ಮಹಾದೇವ ಸಾಕು ಎಂದು ತಡೆಯುತ್ತಾಳೆ. ಆಗ ಸಭೆಯಲ್ಲಿದ್ದವರೂ 'ಸಾಕುತೆಗೆ' ಎಂದು ಪುಷ್ಕರನನ್ನು ಬೈದರಂತೆ. ದ್ಯೂತದಲ್ಲಿ ಎಲ್ಲವನ್ನೂ ಕಳೆದುಕೊಳ್ಳುತ್ತಿರುವ ಗಂಡನಿಂದ ತಮಗೊದಗುವ ಪರಿಸ್ಥಿತಿಗೆ ಸಿದ್ಧವಾಗಿ ಮೊದಲೇ ಮಕ್ಕಳಸುರಕ್ಷತೆಗಾಗಿ ಅವರನ್ನು ತಂದೆಯ ಮನೆಗೆ ಕಳಿಸುವ ಏರ್ಪಾಡು ಮಾಡುವ ದಮಯಂತಿಯ ಮುಂದಾಲೋಚನೆ ಮೆಚ್ಚುವಂತದ್ದು. ದ್ಯೂತದ ಪಣವಾಗುವುದನ್ನು ಆ ಬಾರಿ ಹೇಗೋ ಅವಳು ತಪ್ಪಿಸಿಕೊಂಡಳಾದರೂ ಸಂಕಷ್ಟಗಳ ಸರಮಾಲೆಯಿಂದ ತಪ್ಪಿಸಿಕೊಳ್ಳಲಾಗಲಿಲ್ಲ.

**ಬೇಡನ ಪ್ರಸಂಗ**

ಇಲ್ಲಿ ಮೂಲ ಕಥೆಗಿಂತ ಭಿನ್ನವಾಗಿ ಎರಡು ಬದಲಾವಣೆಗಳಿವೆ. ಕಾಡಿನಲ್ಲಿ ತಿಳಿಯದೆ ದಮಯಂತಿ ಹಾವೊಂದನ್ನು ಮೆಟ್ಟಿದಾಗ ಅದು ಅವಳನ್ನು ಸುತ್ತಿಕೊಂಡು ನುಂಗತೊಡಗುತ್ತದೆ, ಅವಳ ಚೀತ್ಕಾರವನ್ನು ಕೇಳಿ ಬೆಟ್ಟದ ತುದಿಯಲ್ಲಿದ್ದ ಬೇಡನೊಬ್ಬ ಓಡಿಬಂದು ಕ್ಷಣಮಾತ್ರದಲ್ಲಿ ಹಾವನ್ನು ತನ್ನ ಕತ್ತಿಯಿಂದ ಸೀಳಿಹಾಕುತ್ತಾನೆ. ಭಯದಿಂದ ಮೂರ್ಛಿತಳಾದ ಅವಳನ್ನು ಕಪಾಡುತ್ತಾನೆ. ಮಲಿನವಾದ ಅವಳ ಮೈಯನ್ನು ತೊಳೆದು ಶೈತ್ಯೋಪಚಾರ ಮಾಡುತ್ತಾನೆ. ಅವಳ ದಿವ್ಯವಾದ ಸೊಬಗಿಗೆ ಆಸೆಪಟ್ಟ ಬೇಡನು ತನ್ನನ್ನು ವರಿಸುವಂತೆ ಕೇಳುತ್ತಾನೆ. ಮಹಾ ಪತಿವ್ರತೆಯ ಮೈಯನ್ನು ಬೇಡನೊಬ್ಬ ಮುಟ್ಟಿ ತೊಳೆದನೆಂಬುದನ್ನು ಕನಕರು ಎಚ್ಚರಗೊಂಡ ದಮಯಂತಿ ತಾನೇ ಹೋಗಿ ಮಿಂದುಬಂದಳೆಂದು ಬದಲಾಯಿಸಿದ್ದಾರೆ. ತಾನು ಮಾಡಿದ ಉಪಕಾರಕ್ಕೆ ಪ್ರತಿಫಲವಾಗಿ ಅವಳ ಚಂದಕ್ಕೆ ಆಸೆಪಟ್ಟ ಬೇಡನ ಬಯಕೆಯನ್ನು ಕೇಳಿ ದಮಯಂತಿ ಪಾತಿವ್ರತ್ಯದ ಶಕ್ತಿಯಿಂದ ಅವನನ್ನು ಸುಟ್ಟು ಭಸ್ಮಮಾಡುತ್ತಾಳೆಂಬ ಕಥೆಯನ್ನು ಬದಲಾಯಿಸಿರುವುದನ್ನು ಗಮನಿಸಬಹುದು. ಮೊದಲನೆಯ ಬದಲಾವಣೆ ಸಂಸ್ಕೃತ ಶೃಂಗಾರ ಕಾವ್ಯಗಳ ಕವಿಗಳಂತಲ್ಲದೆ ಭಕ್ತ ಕವಿಯಾದ ಕನಕರಿಗೆ ಪತಿವ್ರತೆಯನ್ನು ಹಾಗೆ ಪರಪುರುಷನೊಬ್ಬ ಮುಟ್ಟಿ ತೊಳೆಯುವುದು ಸರಿಯಲ್ಲ ಅಥವಾ ಸಾಧ್ಯವಿಲ್ಲ ಎನಿಸಿರಬೇಕು. ಎರಡನೆಯ ಬದಲಾವಣೆಯಲ್ಲಿ ಬೇಡನ ಆಸೆ ಸುಟ್ಟು ಭಸ್ಮಮಾಡಿಬಿಡಬೇಕಾದಂತಹ ಅಪರಾಧವಲ್ಲ. ತಿಳುವಳಿಕೆ ಹೇಳಿ ತಿದ್ದಬಹುದಾದದ್ದು ಎನಿಸಿರಬೇಕು. ದಮಯಂತಿ ಪಡೆದ ಉಪಕಾರಕ್ಕೆ ಕೃತಜ್ಞಳಾಗಿದ್ದಾಳೆ. ತನ್ನ ಜೀವವನ್ನು ಉಳಿಸಿರುವ ಬೇಡನು, ತಂದೆಯ ಸಮಾನನೆಂದು ಅವನ ಆಲೋಚನೆಯನ್ನು ತಿದ್ದಲು ಪ್ರಯತ್ನಿಸುವುದರ ಜೊತೆಗೆ ಮೀರಿ ಉದ್ಧಟತನ ತೋರಿದರೆ ಶಾಪಕೊಡುವುದಾಗಿ ಹೆದರಿಸುತ್ತಾಳಷ್ಟೆ. ಇಲ್ಲಿ ದಮಯಂತಿ ಹೆಚ್ಚು ಮಾನವೀಯವಾಗಿ ಕಾಣುತ್ತಾಳೆ. ವಿಶೇಷ ಶಕ್ತಿಗಳನ್ನು ಪಡೆದಿರುವ ಕಾರಣಕ್ಕೆ ಅಹಮ್ಮಿನಿಂದ ಅಮಾನುಷವಾಗಿ ವರ್ತಿಸುವ 'ಮಹಾಸತಿಯರು' 'ಮಹಾಮುನಿಗಳಿಗಿಂತ' ಇವಳು ವಿವೇಕಿ ಎನಿಸುತ್ತಾಳೆ. ಮೂಲತಃ ದೂರ್ತನೂ, ಸಮಯಸಾಧಕನೂ ಅಲ್ಲದ ಆ ಅಡವಿ ಜೀವಿ ಒಂಟಿಯಾದ, ಸುಂದರಿಯಾದ ಅವಳನ್ನು ಪಡೆಯಲು ಬಯಸಿದರೂ,

ತಿಳುವಳಿಕಸ್ಥೆಯಂತೆ ಕಾಣುವ ಅವಳ ಮಾತು ರೀತಿ ದಿಟ್ಟ ನಡವಳಿಕೆಗಳಿಂದ ಶಾಪಕೊಟ್ಟರೂ ಕೊಡಬಹುದೆಂದು ಅಂಜಿ ಓಡಿದನೆಂಬುದು ಸಹಜವಾಗಿಯೇಯಿದೆ.

### ಮರು ಸ್ವಯಂವರ

ಮರುಸ್ವಯಂವರವು ನಳನನ್ನು ಕರೆಸುವ ಉಪಾಯವಾಗಿತ್ತೆಂದು, ಕೇವಲ ಅಯೋಧ್ಯೆಗೆ ಮಾತ್ರ ಸುದ್ದಿ ನೀಡಿತ್ತೆಂದು ಕಥೆಯಲ್ಲಿ ವಿವರಣೆಗಳಿದ್ದರೂ, ಮರುಸ್ವಯಂವರಕ್ಕೆ ಋತುಪರ್ಣನಲ್ಲದೆ ಬೇರೆ ಅರಸರೂ ಬಂದಿದ್ದರೆಂದು ಇತರ ಕೆಲ ಕೃತಿಗಳಲ್ಲಿ ತಿಳಿದುಬರುತ್ತದೆ. ಮರು ಸ್ವಯಂವರದ ವಿಷಯವನ್ನು ಕೇಳಿದ ಋತುಪರ್ಣ ಆಶ್ಚರ್ಯಪಡದಿರುವುದನ್ನು ಗಮನಿಸಿದರೆ ಆ ಕಾಲದಲ್ಲಿ ಮರು ಮದುವೆ ಹೆಣ್ಣಿಗೂ ಸಹಜವಾಗಿತ್ತೆ ಎಂಬ ಅನುಮಾನ ಮೂಡುತ್ತದೆ. ಯಾಯಾತಿಯ ಮಗಳು ಮಾಧವಿಗೆ ಅನೇಕ ಮದುವೆಗಳಾಗುವುದನ್ನು, ಗಂಡ ಸತ್ತರೆ ಮೈದುನ ಅತ್ತಿಗೆಯನ್ನು ಚಿತೆಯಿಂದ ಕೈಹಿಡಿದು ಇಳಿಸಿ ಕರೆತಂದು ವಿವಾಹವಾಗುತ್ತಿದ್ದನೆಂಬ ವಿಚಾರಗಳನ್ನು ಗಮನಿಸಿದರೆ, ಈ ಕಥೆಗಳು ಹುಟ್ಟಿದ ಕಾಲದಲ್ಲಿ ಸ್ತ್ರೀಯರ ಮರುವಿವಾಹವು ಸಾಮಾನ್ಯ ವಿಚಾರವಾಗಿರಬಹುದೇ? ಕಾಲ ಬದಲಾದರೂ ಕಥೆಯ ಮೂಲವು ಮಾರ್ಪಾಟಾಗದೆ ಉಳಿದುಕೊಂಡು ಬಂದಿದ್ದು, ಮರು ಸ್ವಯಂವರ 'ನಳನಿಗಾಗಿ' ಎಂಬ ಅದರ ವಿವರಣೆ ಮಾತ್ರ ಬದಲಾಗಿರಬಹುದೇ?

ತವರು ಮನೆಗೆ ಹಿಂದಿರುಗಿದ ಮೇಲೆ ತನ್ನ ಗಂಡನನ್ನು ಹುಡುಕಲು ಯಾರಿಗೂ ತಿಳಿಯದಂತೆ ದಮಯಂತಿ ಯೋಜನೆ ಮಾಡಿದಳೆಂದು ಕೆಲವು ಕೃತಿಗಳಲ್ಲಿದೆ. ನಳನಿಗೆ ಮಾತ್ರ ಅರ್ಥವಾಗುವಂತಿದ್ದ ತನ್ನ ಸೂಚನಾ ಮಾತಿಗೆ ಬಾಹುಕ ಕೊಟ್ಟ ಉತ್ತರದಿಂದ ಅವನೇ ನಳನಿರಬಹುದೆಂದು ಬಲವಾಗಿ ಅನುಮಾನಪಡುವ ದಮಯಂತಿ ತಂದೆ ಅರಿಯದಂತೆ ತಾಯಿಯ ಅಪ್ಪಣೆ ಪಡೆದು ತನಗೆ ಪುನಃ ಸ್ವಯಂವರವೆಂದು ಅಯೋಧ್ಯೆಯಲ್ಲಿ ಮಾತ್ರ ಘೋಷಿಸುವಂತೆ ಬ್ರಾಹಣ ಸುದೇವನಿಗೆ ತಿಳಿಸಿದಳೆಂದು ನಳೋಪಾಖ್ಯಾನದಲ್ಲಿ ಕಂಡುಬಂದರೆ, ಚೌಂಡರಸನು ತಂದೆ ತಾಯಿಗಳ ಅನುಮತಿಯ ವಿಷಯವನ್ನೆತ್ತಿಲ್ಲ. ಕನಕರು ಅವಳು ತಂದೆ ತಾಯಿ, ಸಖಿಯರು, ಮಂತ್ರಿ, ಬ್ರಾಹಣರ ಸಹಾಯ ಸಹಕಾರಗಳೊಂದಿಗೆ ಈ ಸಾಹಸ ಮಾಡಲು ಸಾಧ್ಯವಾಯಿತೆಂಬಂತೆ ಕಥಿಸಿದ್ದಾರೆ.

ಒಂದೇ ದಿನದಲ್ಲಿ ನೂರಾರು ಯೋಜನ ಪಯಣಿಸಿ ಋತುಪರ್ಣನನ್ನು ಬಾಹುಕ ಚೇದಿಗೆ ಕರೆತಂದಿರುವುದನ್ನು ಸಖಿಯರಿಂದ ತಿಳಿದು ಪಡೆವಳನ ಮೂಲಕ ಅವನಿಗೆ ಬಿಡಾರವನ್ನು ದಮಯಂತಿಯೇ ಏರ್ಪಡಿಸಿದಳೆಂದು, ಕಾರಣವಿಲ್ಲದೇ ಋತುಪರ್ಣ ಬಂದದ್ದಕ್ಕೆ ಭೀಮನೃಪನು ಆಶ್ಚರ್ಯಪಟ್ಟನೆಂದು ಕೆಲ ಕೃತಿಗಳು ಹೇಳಿದರೆ, ಭೀಮನೇ ಏರ್ಪಾಟು ಮಾಡಿದನೆಂದು ಕೆಲವು ಕೃತಿಗಳಲ್ಲಿದೆ. ಬಾಹುಕನಿಂದ ಪ್ರತ್ಯೇಕವಾಗಿ ಅಡುಗೆ ಮಾಡಿಸಿ ನಳಪಾಕದ

ಸತ್ಯವನ್ನರಿಯಲಾಯಿತೆಂದು, ಸಖಿಯರು ದಮಯಂತಿಗೆಂದು ಹೇಳಿ ಆ ತಿಂಡಿಗಳನ್ನು ತಂದುಕೊಟ್ಟರೆಂದೂ, ದಮಯಂತಿಯೇ ರುಚಿ ಪರೀಕ್ಷಿಸಲು ಸಖಿಯರಿಗೆ ಹೇಳಿ ತರಿಸಿದಳೆಂದು, ಮಕ್ಕಳನ್ನು ಬಾಹುಕನ ಮುಂದೆ ಅಡ್ಡಾಡಿಸಿ ಅವನ ಪ್ರತಿಕ್ರಿಯೆಯನ್ನು ಗಮನಿಸಿದಳೆಂದೂ, ತೊವ್ವೆ ಮಾಡಿಸುವ ನೆಪಹೂಡಿ ದಮಯಂತಿಯೇ ಅವನನ್ನು ತನ್ನ ಅಂತಃಪುರಕ್ಕೆ ಕರೆಸಿಕೊಂಡಳೆಂದೂ, ತಾಯಿಯ ಒಪ್ಪಿಗೆ ಪಡೆದು ತನ್ನ ಅಂತಃಪುರಕ್ಕೆ ಬಾಹುಕನನ್ನು ಕರೆಸಿದಳೆಂದು ನಾನಾ ಬಗೆಯಲ್ಲಿ ವಿವಿಧಕೃತಿಗಳಲ್ಲಿ ವಿವರಿಸಲಾಗಿದೆ. ಇವೆಲ್ಲಾ ಸಣ್ಣ ಬದಲಾವಣೆಗಳಾದರೂ ಅವು ಬಹಳ ಮುಖ್ಯ. ಇಲ್ಲಿ ಸ್ತ್ರೀ ತನ್ನ ಬದುಕಿನ ಮುಖ್ಯ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದ ಸಂದರ್ಭಗಳನ್ನು ಸಾಹಿತ್ಯ ಕೃತಿಗಳಲ್ಲಿ ಹೇಗೆ ನಿಭಾಯಿಸಲಾಗುತ್ತದೆ ಎಂಬುದನ್ನು ಗಮನಿಸಬೇಕು. ಗಂಡನನ್ನು ಕರೆಸಿಕೊಳ್ಳಲು ದಮಯಂತಿ ತೋರುವ ಈ ವಿಶಿಷ್ಟವಾದ ಧೈರ್ಯ, ಸಾಹಸ, ತಾಳ್ಮೆ, ಉಪಾಯಗಳೆಲ್ಲಾ ಯಾವಾಗ ಒಂದು ಮೆಚ್ಚುಗೆಯನ್ನು ಪಡೆಯುತ್ತವೆ, ಮೌಲ್ಯವೆಂದು ಪರಿಗಣಿತವಾಗುತ್ತವೆ ಎಂದರೆ ಅವೆಲ್ಲವೂ 'ಸುವ್ರತೆ'ಯರ ಕರ್ತವ್ಯ ಧರ್ಮವೆನಿಸಿಕೊಂಡಾಗಮಾತ್ರ. ಆ ಚೌಕಟ್ಟಿಗೆ ಒಗ್ಗದೆ ಈ ರೀತಿ ತನ್ನಿಚ್ಛೆಯನ್ನು ಹಠಹಿಡಿದು ಸಾಧಿಸಿಕೊಳ್ಳಲು, ತೀರ್ಮಾನಗಳನ್ನು ತೆಗೆದುಕೊಳ್ಳಲು ಮಾಡುವ ಯಾವ ಕಾರ್ಯವೂ ಪ್ರಶಂಸೆ ಪಡೆಯದೆ 'ಅಪವರ್ತನೆ'ಯಾಗಿ ಉದ್ಧಟತನವಾಗಿ, ಶಿಕ್ಷಾರ್ಹ ಅಪರಾಧ, ಪಾಪಕಾರ್ಯಗಳೆನಿಸಿಬಿಡುತ್ತವೆ.

ಇಷ್ಟೆಲ್ಲಾ ಕಷ್ಟಗಳಿಗೆ ಒಳಗಾಗಿ, ಆಕಷ್ಟದಿಂದ ಹೊರಬರುವ ಮಾರ್ಗವನ್ನು ಶೋಧಿಸುವಲ್ಲಿ ತಾನು ಕಲಿತ ಬುದ್ಧಿಯನ್ನೆಲ್ಲಾ ಖರ್ಚುಮಾಡಿ ಹೈರಾಣಾದ ದಮಯಂತಿ ಮರೆಯಲ್ಲಿ ಉಳಿದು ಕಥೆಯ ಕೊನೆಯಲ್ಲಿ ನಳ ವಿಜೃಂಭಿಸಿಬಿಡುತ್ತಾನೆ. ಶ್ರೇಷ್ಠ ಪ್ರೇಮಿಯಾಗಿ, ತ್ಯಾಗಿಯಾಗಿ ಹೊಗಳಲ್ಪಡುವ ನಳ ತನ್ನ 'ದೈವೀಕಪ್ರೇಮ'ವನ್ನು ಉಳಿಸಿಕೊಳ್ಳುವಲ್ಲಿ ಅದನ್ನು ಕಾಪಾಡುವ ಅನಿವಾರ್ಯ ಸಂದರ್ಭಗಳಲ್ಲೆಲ್ಲಾ ಹತಾಶನಾಗಿ ನಿಶ್ಶಕ್ತನಂತೆ ನಿಂತು ಬಿಡುವುದನ್ನು ಕಾಣುತ್ತೇವೆ. ಆದರೆ ತನ್ನ ಪ್ರೇಮಕ್ಕೆ ತೊಡಕುಗಳು, ಪರೀಕ್ಷೆಗಳು ಬಂದಾಗಲೆಲ್ಲಾ ಮತ್ತಷ್ಟು ಗಟ್ಟಿಯಾಗುತ್ತಲೇ ಅದನ್ನು ಕಪಾಡಿಕೊಳ್ಳಲು ಶ್ರಮಿಸುವ ದಮಯಂತಿ ಇಡೀ ಕಥೆಯ ಉದ್ದಕ್ಕೂ ಶಕ್ತಳಾಗಿ ಕ್ರಿಯಾಶೀಲೆಯಾಗಿ ಕಂಡುಬರುತ್ತಾಳೆ. ನಳನ ಮುಂದೆ ಅವಳೇ ನಿಜವಾದ 'ಚಾಲೆಂಜಿಂಗ್ ಸ್ಟಾರ್' ಎನ್ನಲೇಬೇಕು

ಪುರುಷ ಪ್ರಧಾನ ವ್ಯವಸ್ಥೆಯ ಎಲ್ಲ ಒತ್ತಡಗಳ ಮಧ್ಯದಲ್ಲೂ ಭಾರತೀಯ ಸ್ತ್ರೀಯರು ಅದ್ಭುತ ಧೀಮಂತಿಕೆಯಿಂದ ಬಾಳನ್ನು ಎದುರಿಸುವರೆಂಬುದಕ್ಕೆ ದಮಯಂತಿ ಸಶಕ್ತವಾಗಿ ಕಣ್ಣೆದುರು ನಿಲ್ಲುತ್ತಾಳೆ.

**ಟಿಪ್ಪಣಿಗಳು, ಪರಾಮರ್ಶನ ಗ್ರಂಥಗಳು**

1. ನಳಚರಿತ್ರೆ, ದೇ.ಜೆ.ಗೌ ಪೀಠಿಕೆ

2. ಅದೇ.

3. ಕಥಾ ಸರಿತ್ಸಾಗರ. ಆರನೇ ಲಂಬಕ, ಸಂ.7. (ಅನು) ಶೇಷಾಚಲ ಶರ್ಮ. ಕರ್ನಾಟಕ ಅನುವಾದ ಅಕಾಡೆಮಿ–2008

4. ಕನಕದಾಸ, ಟಿ.ಎಸ್. ನಾಗರತ್ನ, ಸಾಹಿತ್ಯ ಅಕಾಡೆಮಿ–2000

5. ಶಾತಪಥ ಬ್ರಾಹ್ಮಣದ ಹದಿಮೂರನೆಯ ಖಂಡದಲ್ಲಿ ನಳನ ಹೆಸರು ಉಲ್ಲೇಖವಾಗಿದೆ–History of Indian literature by Weber. p.132

6. ಕಾರ್ಕೋಟಕ ವಿಷ ಫಲಿಸಿ ನಳ ತನ್ನೊಳಗೆ ಸೇರಿದ್ದ ಕಲಿಯನ್ನು ವಾಂತಿ ಮಾಡಿ ಹೊರಹಾಕುತ್ತಾನೆ. ಅಲ್ಲದೆ ಪೌರುಷದಿಂದ ಹೋರಾಡಿ ಅವನನ್ನು ಒಂದು ಮರಕ್ಕೆ ಕಟ್ಟಿಹಾಕಿ ಆನಂತರ ಮರು ಸ್ವಯಂವರಕ್ಕೆ ಹೋಗುತ್ತಾನೆಂಬ ಕಥೆಯೂ ಜನಸಾಮಾನ್ಯರಲ್ಲಿ ಪ್ರಚಲಿತವಿದೆ.

8. ವೇದಕಾಲೀನ ವನಿತೆಯರು, ವಿಜಯ ಭಾರತಿ, ತ.ರ.ನಾಗರಾಜು, ಬನಶಂಕರಿ ಬೆಂಗಳೂರು–1999; 'ವೇದಗಳಲ್ಲಿ ಮಹಿಳೆ' ಮಹಿಳಾ ಚಳವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ. ಡಾ. ಹಾಲತಿ ಸೋಮಶೇಕರ್.

9. ಕಥಾ ಸರಿತ್ಸಾಗರ– ಆರನೇ ಲಂಬಕ.

10. "ಶೃತಿಮಾರ್ಗ ಪ್ರವಿಷ್ಟೇನ ತೇನಾಪಹೃತಮಾನಸಾ"–ಕಥಾ ಸರಿತ್ಸಾಗರ ಸಂ.7. ಪುಟ255.

***

1. ನಳಚರಿತ್ರೆಯ ಸಂಗ್ರಹ (ಸಂ)ಎಚ್. ಎಂ. ಶಂಕರನಾರಾಯಣರಾವ್.ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೂರನೆ ಮುದ್ರಣ– 1972

2. ಕನಕದಾಸ ವಿರಚಿತ ನಳಚರಿತ್ರೆ (ಸಂ) ದೇ ಜವರೇಗೌಡ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ಎರಡನೆಯ ಮುದ್ರಣ–1985.

3. ದಾಸ ಸಾಹಿತ್ಯ ದರ್ಶನ (ಸಂ) ಎಚ್ಚೆಸ್ಕೆ. ಮಂಗಳ ಭಾರತಿ ಪ್ರಕಾಶನ–1984.

4. ಕನಕದಾಸರ ವಿಶಿಷ್ಟತೆ, ಪರಿಶೀಲನ, ಜಿ ಎಸ್. ಶಿವರುದ್ರಪ್ಪ, ಉಷಾ ಸಾಹಿತ್ಯ ಮಾಲೆ, ಮೈಸೂರು–1972

5. ಕನಕ ಕಿರಣ (ಸಂ)ಕಾ ತ ಚಿಕ್ಕಣ್ಣ. ಕಾಳಿದಾಸ ಸಾಂಸ್ಕೃತಿಕ ಸಂಘ–1982

6. ಮಹಾಕವಿ ಸೋಮದೇವ ಭಟ್ಟನ ಕಥಾ ಸರಿತ್ಸಾಗರ–ಅನು. ಶೇಷಾಚಲ ಶರ್ಮ ಕರ್ನಾಟಕ ಅನುವಾದ ಅಕಾಡೆಮಿ–2008.

*** ** ***

ಪ್ರತಿಕ್ರಿಯೆ :

## 1. ನಳಚರಿತ್ರೆಯ ಸ್ತ್ರೀ ವ್ಯಾಖ್ಯಾನಕ್ಕೊಂದು ವ್ಯಾಖ್ಯಾನ

– ಡಾ. ಕವಿತಾ ಶಿ. ಕುಸುಗಲ್ಲ,

ಕನಕದಾಸರ ನಳಚರಿತ್ರೆಯನ್ನು ಕುರಿತು ಈಗಾಗಲೇ ಸಾಕಷ್ಟು ವಿಮರ್ಶೆಗಳು ಬಂದಾಗಿವೆ. ಕೆಲವರಿಗೆ ಇದು 'ಉತ್ಕಟ ಪ್ರಣಯ ಕಥೆ'ಯಾಗಿದೆ. ಇದರಲ್ಲಿನ 'ಭಾಷೆ, ತಂತ್ರಗಳೇ' ಇದರ ಜನಪ್ರಿಯತೆಗೆ ಕಾರಣವಾಗಿವೆ. ಅಲ್ಲಲ್ಲ ನಳನ 'ಶೌರ್ಯ ಸಾಹಸ', ದಮಯಂತಿಯ ರೂಪ, ಲಾವಣ್ಯ ಯೌವನಗಳು, ಅವಳ ಪಾತಿವ್ರತ್ಯ ಪ್ರಧಾನವಾಗಿವೆ. ಆದರೆ ಡಾ. ಎನ್. ಆರ್. ಲಲಿತಾಂಬ ಅವರ ಗ್ರಹಿಕೆ ಬೇರೆಯೇ. ಅವರಿಗಿದು ನಳನ ಪ್ರೇಮಕ್ಕಿಂತಲೂ ದಮಯಂತಿಯ ಪ್ರೇಮ ಪರೀಕ್ಷೆಯ ಹಾಗೂ ಸ್ತ್ರೀ ಶೋಷಣೆಯ ಕಥನವೂ ಆಗಿದೆ.

ಜಾತಿ ಪದ್ಧತಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸುವ ಕನಕದಾಸರು ನಳಚರಿತ್ರೆಯಲ್ಲಿ ಮಹಿಳಾ ಸಮಾನತೆಯ ವಿಷಯದಲ್ಲಿ ಅದೇ ಹಳೆಯ ಸಾಂಪ್ರದಾಯಕ ಅಪೇಕ್ಷೆ ಇಟ್ಟುಕೊಂಡಿದ್ದು ಖೇದಕರ. ಜಾತಿವ್ಯವಸ್ಥೆಯ ವಿರುದ್ಧ ಬಂಡಾಯದ ಧೋರಣೆ ತೋರುವ ಕನಕರು ನಳ ಚರಿತ್ರೆಯುದ್ದಕ್ಕೂ ದಮಯಂತಿಯನ್ನು ನಡೆಸಿಕೊಂಡ ರೀತಿಯನ್ನು ಡಾ. ಎನ್. ಆರ್. ಲಲಿತಾಂಬ ಅವರು ಬಹಳ ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ. ಈ ಕಥೆಗೆ ನಳ ಚರಿತ್ರೆ ಎನ್ನುವುದಕ್ಕಿಂತ 'ದಮಯಂತಿ ಚರಿತ್ರೆ' ಎಂದು ಕರೆಯದೆ ಇದ್ದುದೇ ಕೊರತೆ' ಎಂಬುದು ಸಮಂಜಸವಾಗಿದೆ. ರಾಮಾಯಣವನ್ನು ಓದಿದ ಪ್ರಜ್ಞಾವಂತ ಓದುಗ ಸೀತಾಯ ಚರಿತಂ ಮಹಾನ್ ಎಂದು ಭಾವಿಸುವಂತೆಯೇ; ಹೆಣ್ಣನ್ನು ಒಂದು ವ್ಯಕ್ತಿತ್ವ ಎಂದು ಒಪ್ಪಿಕೊಳ್ಳಲು ಹಿಂಜರಿಯದ ಮನಸ್ಸು ದಮಯಂತಿಯ ಚರಿತ್ರೆ ಛಲ, ಧೈರ್ಯಗಳೊಂದಿಗೆ, ಸ್ವನಿರ್ಧಾರ ತೆಗೆದುಕೊಂಡು ಬದುಕನ್ನು ಮುನ್ನಡೆಸಿಕೊಳ್ಳುವ ಮಹಾಮಹಿಳೆಯ ಚರಿತ್ರೆ ಎನ್ನಿಸದಿರದು. ಇಂದಿಗೂ ಪುರುಷ ಪ್ರಧಾನ ಸಮಾಜದಲ್ಲಿ ಸಾಹಿತ್ಯ ಕೃತಿ ಇರಬಹುದು, ಸಿನಿಮಾ ಇರಬಹುದು, ಪುರುಷಾಂಕಿತಗಳೇ. ಉದಾಹರಣೆಗೆ 'ಗಂಡನ ಮನೆ' ಚಿತ್ರ, ಉದ್ದಕ್ಕೂ ಹೆಂಡತಿಯ ಸಹನೆ, ತ್ಯಾಗಗಳೇ ಇದ್ದು ಚಿತ್ರದ ಶೀರ್ಷಿಕೆ ಮಾತ್ರ ಗಂಡನ ಮನೆ. ಇಂದಿಗೂ ಆದರ್ಶ ಹೆಣ್ಣಿನ ಮಾದರಿಯಾಗಿ ಅದು ದಮಯಂತಿಯಂತಹ ಪಾತ್ರವೇ. ಇತಿಹಾಸದುದ್ದಕ್ಕೂ ಗಂಡಿನ ದ್ಯೂತವೆಸನಕ್ಕೆ ಹೆಣ್ಣು ಪಣಕ್ಕಿಡುವ ವಸ್ತುವಾಗಿ ಕಂಡದ್ದು ದುರಂತ. ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ದಮಯಂತಿಯ ಮುಂದಾಲೋಚನೆ, ಎದೆಗಾರಿಕೆ ಮಾದರೀಯ.

ಕಾಡಿನಲ್ಲಿ ಹಾವಿನಿಂದ ರಕ್ಷಣೆಗಾಗಿ ಅಬಳು ಕರೆದದ್ದು ಮುಕುಂದನನ್ನಾದರೂ ಬಂದದ್ದು ಬೇಡ. ಇದು ಸಹಜ ಸಾಧ್ಯತೆಯ ಚಿತ್ರಣವೇ? ವಿಡಂಬನೆಯೇ? 'ಆರು ಬದುಕಿದರಯ್ಯ ಹರಿ ನಿನ್ನ ನಂಬಿ/ ತೋರು ಈ ಧರೆಯೊಳಗೆ ಒಬ್ಬರನು ಕಾಣೆ' ಎಂಬ ಕನಕರ ಕೀರ್ತನೆ ಇಲ್ಲಿ ನೆನಪಾಗುತ್ತದೆ. ಕೃತಜ್ಞತಾ ಭಾವದೊಂದಿಗೆ ತನ್ನ ಪ್ರಾಣ ಉಳಿಸಿದ ಬೇಡ ತನ್ನ ತಂದೆ ಸಮಾನನೆಂದು ಅವನಿಗೆ ತಿಳಿಹೇಳಿ, ಉದ್ಧಟತನ ತೋರಿದರೆ ಶಾಪ ಕೊಡುವುದಾಗಿ ಹೆದರಿಸಿ ಜಾಣ್ಮೆ ಮೆರೆದದ್ದು ಕನಕರು ತಮ್ಮ ಕೃತಿಯಲ್ಲಿ ಮಾಡಿಕೊಂಡ ಚಿಕ್ಕ ಪುಟ್ಟ ಬದಲಾವಣೆಗಳಲ್ಲಿ ಒಂದು. ಮುಂಚಿನ ಕೃತಿಗಳಲ್ಲಿಯಂತೆಯೆ ಅವಳ ಶಾಪದಿಂದ ಆ ಬೇಡನನ್ನು ಭಸ್ಮವಾಗಿಸಿ ಕೃತಿಯನ್ನು ಪವಾಡಮಯವಾಗಿಸುವುದಿಲ್ಲ. ಕನಕರಿಗೆ ಶೂದ್ರ ಬೇಡ ಒಂಟಿಯಾದ ಅವಳ ರಕ್ಷಣೆಗಾಗಿ ಅವಳನ್ನು ವರಿಸಲಿಚ್ಛಿಸುವುದು, ಯಾವುದೇ ದುರ್ವರ್ತನೆ ತೋರದಿರುವುದು ಒಬ್ಬ ಶೂದ್ರನ ಸಂಸ್ಕೃತಿಯಾಗಿದೆ. ಹೆಚ್ಚು ಮಾನವೀಯ, ಸಹಜತೆಗೆ ಇಂಬುಕೊಡುವಂತೆ ಕನಕರು ಮಾಡಿಕೊಂಡ ಇಂತಹ ಬದಲಾವಣೆಗಳನ್ನು ಕುರಿತೂ ಲೇಖಕರು ಇಲ್ಲಿ ಮಾತನಾಡಿದ್ದಾರೆ. ಅವರು ಕನಕರು ದಮಯಂತಿಯನ್ನು ಸಾಂಪ್ರದಾಯಿಕ ಚೌಕಟ್ಟಿನಲ್ಲೇ ಚಿತ್ರಿಸಿರುವುದನ್ನು ಮಹಿಳಾ ವಿರೋಧಿಯಂತೆ ಕಾಣದೇ ಸ್ಥಿತ್ಯಂತರ ಕಾಲದ ಸಮಾಜದಲ್ಲಿ ಮಹಿಳೆಯ ಸ್ಥಿತಿಯ ಸಹಜ ಚಿತ್ರಣ ಎಂದಿದ್ದಾರೆ. ಕನಕರ ಕೃತಿಗಳಲ್ಲಿ ಮಹಿಳೆ ನಿರ್ದಿಷ್ಟ ನಿಯಮಗಳಿಗೊಳಪಟ್ಟು ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳಬಲ್ಲಳು. ದಮಯಂತಿಯ ವರ್ಣನೆಗಳಲ್ಲಿ ಸಂಯಮವಿದೆ. ಪಾತಿವ್ರತ್ಯದೊಂದಿಗೆ ಅವಳ ಬೌದ್ಧಿಕ ಸೂಕ್ಷ್ಮತೆ, ಜಾಣತನಗಳ ಕಡೆಗೆ ಗಮನ ನೀಡಲಾಗಿದೆ. ಎಲ್ಲಿಯೂ ದಮಯಂತಿ ತಾನು ಹುಟ್ಟಬಾರದಿತ್ತು ಎಂಬಂತಹ ನೈರಾಶ್ಯಕ್ಕೆ, ಖಿನ್ನತೆಗೆ ಇಳಿಯುವುದಿಲ್ಲ, ಅಸಹಾಯಕತೆ, ನೋವುಗಳಿದ್ದರೂ ಅವಳ ಜೀವನ್ಮುಖೀ ಚಿಂತನೆಗಳು ಹತಾಶೆಗೆ ಬೀಳದಂತೆ, ನಿಷ್ಕ್ರಿಯಳಾಗದಂತೆ ತಡೆಯುತ್ತವೆ ಎಂದಿದ್ದಾರೆ. ಲಲಿತಾಂಬ ಅವರಿಗೆ ಇಲ್ಲಿ ದಮಯಂತಿ ಹುಡಿಯಾಗದ ಸತ್ವ, ಈ ತರಹ ನಮ್ಮ ಭಾರತದ ಇತಿಹಾಸದುದ್ದಕ್ಕೂ ಹೆಣ್ಣು ನಡೆದು ಬಂದ ರೀತಿಯನ್ನು ಬಿಂಬಿಸುವ ಮತ್ತೊಂದು ಪಾತ್ರ ಆರ್. ಕೆ ನಾರಾಯಣ್ ರ 'ಗ್ರ್ಯಾಂಡ ಮದರ್ಸ್ ಟೇಲ್' ನಲ್ಲಿ ಬರುವ ಅಜ್ಜಿಯದ್ದು. ಯಾವತ್ತೂ ಹೊಸ್ತಿಲು ದಾಟದೇ ಇದ್ದವಳು ಗಂಡ ಮನೆ ಬಿಟ್ಟು ದೇಶಾಂತರಕ್ಕೆ ಹೋದಾಗ, ಅವನನ್ನು ಹುಡುಕಿ ತರಲು ದಿಲ್ಲಿಯವರೆಗೂ ಹೋಗುತ್ತಾಳೆ. ಅವನನ್ನು ಮನೆಗೆ ಕರೆತಂದ ಮರುಕ್ಷಣದಿಂದಲೇ ತನ್ನನ್ನು ತಾನು ನಾಲ್ಕು ಗೋಡೆಯ ಒಳಗೇ ಸೀಮಿತಗೊಳಿಸಿಕೊಳ್ಳುತ್ತಾಳೆ. ಹೋರಾಟ, ಛಲ, ಧೈರ್ಯ ಎಲ್ಲವೂ ಕುಟುಂಬವನ್ನು ಕಟ್ಟಿಕೊಳ್ಳುವುದಕ್ಕೆ ಮಾತ್ರ, ಅದನ್ನು ಮೀರಿ ಅವಳು ಹೋಗದೇ ಇದ್ದುದಕ್ಕೆ ಕಾರಣ, ಅದನ್ನು ಪುರುಷ ಸಮಾಜ ಇಷ್ಟ ಪಡುವುದಿಲ್ಲ ಎಂಬ ಕಾರಣಕ್ಕಿರಬಹುದು. ನಮ್ಮ ಸಮಾಜ ಅದನ್ನು ಭಾರತೀಯ ಸಂಸ್ಕೃತಿ ಎನ್ನುತ್ತದೆ.

ಲೋಕಪಾಲರಿಗೆ ಎದುರಾಡಲಾಗದ ಅಧೀನತೆ, ಕೀಳರಿಮೆ ನಳನನ್ನು ಒಬ್ಬ ಸಾಮಾನ್ಯನಂತೆ ಕಾಣಿಸುತ್ತವೆ. ಅದೇ ದಮಯಂತಿ ಲೋಕಪಾಲರನ್ನು ತನ್ನ ಮಾತಲ್ಲೇ ಮಣಿಸಿದ್ದು, ಕಾಡಿನಲ್ಲಿ ನಡೆಸುವ ಬದುಕಿಗಾಗಿ ಹೋರಾಟ, ನಂತರ ತನ್ನನ್ನು ಒಬ್ಬಂಟಿಯಾಗಿ ಬಿಟ್ಟು ಹೋದ ಗಂಡನಿಗಾಗಿ ಛಲ ಬಿಡದ ಹುಡುಕಾಟ ಇವೆಲ್ಲವುಗಳಿಂದ ಪಾತಿವ್ರತ್ಯದ ಜೊತೆಗೇ ತನ್ನತನ ಮೆರೆವ ಸ್ವಾಭಿಮಾನಿ, ಜಾಣ, ಆದರ್ಶ ಪಾತ್ರಳಾಗುತ್ತಾಳೆ. ಮೋಹನ ತರಂಗಿಣಿಯಲ್ಲಿಯೂ ಎದ್ದು ಕಾಣುವ ಪಾತ್ರಗಳು ರತಿ, ಚಿತ್ರಲೇಖೆ ಹಾಗೂ ಉಷೆ. ಶೃಂಗಾರರಸ ಪ್ರಧಾನವಾದ ಕೃತಿಯಾದರೂ ಇಲ್ಲಿನ ಸಾಹಸ ಪ್ರವೃತ್ತಿ, ಚಾಕಚಕ್ಯತೆ ಕನಕರ ಕೃತಿಗಳಲ್ಲಿನ ಹೆಣ್ಣು ಪಾತ್ರಗಳ ಒಟ್ಟಾರೆ ಗುಣಗಳಾಗಿವೆ. ಆ ಎಲ್ಲ ಸ್ತ್ರೀ ಪಾತ್ರಗಳೂ ಸಮಾಜದ ಸಂಪ್ರದಾಯಗಳಿಂದ ಬಂಧಿತವಾಗಿದ್ದರೂ ಜಾಣ್ಮೆ, ಧೈರ್ಯ, ಶೂರತನ, ಸಂದರ್ಭೋಚಿತ ಮಾತು, ನಿರ್ಧಾರಗಳಿಂದ ಎತ್ತರದ ಪಾತ್ರಗಳಾಗಿವೆ. ಇವುಗಳ ತುಲನಾತ್ಮಕ ಪಾತ್ರ ಪರಿಚಯಕ್ಕೂ ಅವಕಾಶ ನೀಡಬಹುದಿತ್ತು.

ಕಲಿ, ಆರ್ಯ ದೇವತೆಗಳಂಥವರು ಸಮಾಜದಲ್ಲಿ ಎಂದಿಗೂ ಸಿಗುವಂಥವರು. ನಳನಂಥ ಪ್ರಾಮಾಣಿಕ ವ್ಯಕ್ತಿ (ಜೂಜಾಡಿದರೂ) ಗಂಡನಾಗಿ ಸಿಕ್ಕಾಗ ದಮಯಂತಿಯಂತೆ ಧೈರ್ಯದಿಂದ ಮುನ್ನಡೆದು ತನ್ನ ಬದುಕನ್ನು ಕೊಂಡಿ ಕಳಚದಂತೆ ಕಟ್ಟಿಕೊಳ್ಳಬೇಕಾದದ್ದು ಅನಿವಾರ್ಯ. ಈ ಕುರಿತು ಲೇಖಕರು ಇಲ್ಲಿ ಸಾಕಷ್ಟು ಉಲ್ಲೇಖಗಳೊಂದಿಗೆ ಸ್ಪಷ್ಟ ಪಡಿಸುವ ಮೂಲಕ ಕೃತಿ ಎಷ್ಟು ಪ್ರಸ್ತುತ ಎಂಬುದನ್ನು ದರ್ಶಿಸಿದ್ದಾರೆ. ಋಗ್ವೇದದಲ್ಲಿ ಜೂಜಾಟದ ಕುರಿತು ಇರುವ ನೀತಿ ವಾಕ್ಯವನ್ನು ಉಲ್ಲೇಖಿಸುತ್ತಾ 'ನಳೋಪಾಖ್ಯಾನ ದ್ಯೂತ ಕ್ರೀಡೆಯ ಅನಿಷ್ಟಕ್ಕೆ ಅತ್ಯಂತ ಪ್ರಾಚೀನ ಉದಾಹರಣೆ', ಎಂದಿದ್ದಾರೆ. ಪುರುಷ ಪ್ರಧಾನ ಸಾಹಿತ್ಯದಲ್ಲಿ ಪುರುಷ ಪಾತ್ರಗಳ 'ದೌರ್ಬಲ್ಯಗಳನ್ನು ಮುಚ್ಚಿಡುವ ಪ್ರಯತ್ನ' ಸಾರ್ವಕಾಲಿಕವಾದದ್ದು. ಈ ಹಿಂದಿನ ಎಲ್ಲ ವಿಮರ್ಶೆಗಳಿಗಿಂತಲೂ ಡಾ. ಲಲಿತಾಂಬ ಅವರ ದೃಷ್ಟಿ ಹೇಗೆ ಭಿನ್ನ ದರ್ಶನವನ್ನು ನಮಗೆ ಒದಗಿಸಿದೆಯೋ, ಒಬ್ಬ ಸಮಕಾಲೀನ ಲೇಖಕಿ ನಳಚರಿತ್ರೆಯ ಮರುಕಟ್ಟನ್ನು ಮಾಡಿದರೆ 'ಶೂದ್ರತಪಸ್ವಿ'ಯಂತೆ ಮತ್ತೊಂದು ಮಗ್ಗುಲಿನ ಸಾಧ್ಯತೆಯ ಚಿತ್ರಣ ನಮಗೆ ದೊರೆಯುತ್ತದೆ. ರಾಮ ತಾನು ಯುದ್ಧವನ್ನು ಗೆದ್ದದ್ದು ಕ್ಷಾತ್ರ ಧರ್ಮಕ್ಕಾಗಿ ಮಾತ್ರ, ಎಂದಾಗ ಸೀತೆಗಾಗುವ ನೋವು ನಮ್ಮಲ್ಲಿನ ಬಹುಪಾಲು ಹೆಣ್ಣು ಮಕ್ಕಳದ್ದೂ ಕೂಡ. ಪುರುಷನ ಪ್ರತಿಷ್ಠೆಯ ಮುಂದೆ ಹೆಣ್ಣಿನ ತ್ಯಾಗ, ಅಳಲು, ನೋವು, ಪ್ರೀತಿ, ಪಾತಿವ್ರತ್ಯ, ಛಲ ಎಲ್ಲ ಗೌಣವಾಗುತ್ತ ಬಂದಿವೆ. ಕಥೆಯುದ್ದಕ್ಕೂ ಸಮರ್ಥನೀಯ, ಕ್ರಿಯಾಶೀಲವಾಗಿಯೇ ಕಾಣುವ ದಮಯಂತಿ ಪಾತ್ರ ಪ್ರಾಮಾಣಿಕವಾಗಿ ಕಾಣಿಸುವ, ಆದರೆ ಸ್ವತಃ ಏನನ್ನೂ ಮಾಡಲಾಗದ ನಳನ ಪಾತ್ರಗಳು ಲೇಖಕರನ್ನು ನಿಜವಾಗಲೂ ಕಾಡಿವೆ. ಬಹಳ ಸೂಕ್ಷ್ಮ ಹಾಗೂ ತೀಕ್ಷ್ಣವಾದ ಮಾತುಗಳಲ್ಲಿ 'ಈ ಸತೀತ್ವದ ಪರೀಕ್ಷೆಯನ್ನು ಎದುರಿಸಬೇಕಾದ ಸಂದರ್ಭ, ಒತ್ತಡಗಳು ಈ ನೆಲದ ಎಲ್ಲ ಹೆಣ್ಣುಗಳಿಗೂ ಯಾವಾಗ ಬೇಕಾದರೂ

ಒದಗಬಹುದಾದ ಪರೀಕ್ಷೆಯೇ', 'ನಳ ಅವಳನ್ನು 'ದ್ರೋಹಿ' ಎನ್ನುವುದು ಮರುಮದುವೆಗೆ ಯೋಚಿಸುವ ಹೆಣ್ಣುಗಳನ್ನು ಕುರಿತ ರೂಢಮೂಲ ವ್ಯಾಖ್ಯಾನವೇ ಆಗಿದೆ.' ಎಂದೆಲ್ಲ ಹೇಳಿದ್ದಾರೆ.

ಲೇಖಕರಿಗೆ ನಳಚರಿತ್ರೆ ಸನಾತನ ಕಾಲದ ಅಪೇಕ್ಷಿತ ಮತ್ತು ತಿರಸ್ಕೃತ ಎರಡೂ ಮಾದರಿಯ ರೂಢಮೂಲ ಸ್ತ್ರೀ ವ್ಯಾಖ್ಯಾನವನ್ನೇ ಮುಂದಿಟ್ಟಂತೆ, ದಮಯಂತಿಯ ಪಾತ್ರ ರೂಢಮೂಲ ನೀತಿಯನ್ನು ಒಪ್ಪಿ ನಡೆಸುವುದರ ಮೂಲಕ ತನ್ನಂತಹ ಪರಿತ್ಯಕ್ತರಾದ ಹೆಣ್ಣುಗಳು ಬದುಕಬೇಕಾದ ಕ್ರಮವನ್ನು ನಿರ್ದೇಶಿಸುವುದಕ್ಕಾಗಿಯೇ ಸಿದ್ಧಪಡಿಸಿದ ಮಾದರಿಯಾಗಿಯೂ ಕಂಡಿವೆ. ಜೊತೆಗೇ ನೈಜತೆಗಾಗಿ ಕನಕರು ಮಾಡಿಕೊಂಡ ಪುಟ್ಟ ಬದಲಾವಣೆಗಳ ಕುರಿತು ಸಮಾಧಾನವಿದೆ. ಇಡೀ ಕೃತಿ ದಮಯಂತಿಯ ಸತ್ವ ಪರೀಕ್ಷೆಯಾಗಿದ್ದೂ, ಯಾವುದಕ್ಕೂ ಜಗ್ಗದೆ ಅವಳು ಆ ಕಷ್ಟ ಕೋಟಲೆಯಿಂದ ಹೊರಬರಲು ಮಾರ್ಗ ಶೋಧಿಸಿದ್ದೂ, ಕೊನೆಗೆ ದಮಯಂತಿ ಮರೆಯಲ್ಲಿ ಉಳಿದು ನಳ ವಿಜೃಂಭಿಸಿ ಬಿಡುವುದು ವಿಪರ್ಯಾಸವಾಗಿ ಒದಗಿದೆ.

ಹಲವು ಲೇಖನ, ಕೃತಿಗಳ, ಓದಿನ ಹಿನ್ನೆಲೆ ಲೇಖನಕ್ಕೆ ಗಟ್ಟಿತನವನ್ನು ತಂದುಕೊಟ್ಟಿದೆ. ವಿಚಾರಗಳ ಹರವಿಗೆ ಶಕ್ತಿಯುತವಾದ ಭಾಷೆಯ ಹಂದರ ಹೊಂದಿಕೆಯಾಗಿದೆ. ಒಂದು ಸಣ್ಣ ಕಿಂಡಿಯಲ್ಲಿ ಜಗತ್ತಿನ ಸ್ವಭಾವವನ್ನು ಕಾಣಬಲ್ಲ ಶಕ್ತಿ ಕನಕರ ನಳಚರಿತ್ರೆಗಿರುವಂತೆ ಈ ಲೇಖನಕ್ಕೂ ಇದೆ.

ಪರಾಮರ್ಶನ :


1. ಕನಕಾವಲೋಕನ (ಕನಕದಾಸರ ಜೀವನ ಮತ್ತು ಕೃತಿಗಳನ್ನು ಕುರಿತ ಲೇಖನಗಳು) ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

2. ಕನಕದಾಸರ ನಳ ಚರಿತ್ರೆ, ಹಾತೂರು ಶಂಕರನಾರಾಯಣ ಭಟ್ಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

3. ಕನಕದಾಸರ ಸಾಹಿತ್ಯ ಅಧ್ಯಯನ. ಡಾ. ಹರಿಲಾಲ ಪವಾರ, ಡಾ. ಚಂದ್ರಶೇಖರ ರೊಟ್ಟಿಗವಾಡ. ಪ್ರಸಾರಾಂಗ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

4. Who was the true father of Sita? 01 March 2015. http://www.quora.com/Ramayana/Who-was-the-true-father-of-Sita

5. Ambedkar Babasaheb B. R. 'The Riddle of Rama and Sita' Appendix No. 1 of Part 3 of the book Riddles of Hinduism 1005. http://www.raceandhistory.com/worldhotspots/riddlerama.htm

## 2. ನಳಚರಿತ್ರೆ : ಚರಿತ್ರೆಯ ಸ್ತ್ರೀ ವ್ಯಾಖ್ಯಾನ – ಪ್ರತಿಕ್ರಿಯೆ.

– ಕವಿತಾ ಎಂ.ಎ

ಕಳೆದೆರಡು ದಶಕಗಳಿಂದೀಚೆಗೆ ಮಹಿಳೆಯರ ಬದುಕಿನ ವಿವಿಧ ಮುಖಗಳು, ಅವರು ಎದುರಿಸುತ್ತಿರುವ ಸವಾಲುಗಳು ಮತ್ತು ಅವುಗಳನ್ನು ಮಹಿಳೆಯರು ಎದುರಿಸುತ್ತಿರುವ ರೀತಿಗಳನ್ನು ಕುರಿತು ಮತ್ತೆ ಮತ್ತೆ ಚರ್ಚೆಗಳಾಗುತ್ತಿವೆ. ವಾಸ್ತವ ಜಗತ್ತಿನ ಮಹಿಳೆಯರ ಸಮಸ್ಯೆ–ಸವಾಲುಗಳ ಚರ್ಚೆ ಒಂದೆಡೆಯಾದರೆ, ನಮ್ಮ ಸಾಹಿತ್ಯ ಪರಂಪರೆಯೊಳಗಿನ ಮಹಿಳೆಯರು ಎದುರಿಸಿದ ಸಮಸ್ಯೆ–ಸವಾಲುಗಳ ಮರು ಓದು–ಚರ್ಚೆ ಇನ್ನೊಂದೆಡೆ. ಈ ಮಂಥನದ ಮೂಲಕ ಭಾರತೀಯ ಮಹಿಳಾ ಬದುಕಿನ ಆಯಾಮಕ್ಕೆ ಶಕ್ತಿಯನ್ನು ತಂದುಕೊಡುವ ಪ್ರಯತ್ನ ನಿರಂತರವಾಗಿ ಸಾಗುತ್ತಲೇ ಇದೆ. ಆ ನಿಟ್ಟಿನ ಪ್ರಯತ್ನದ ಭಾಗವಾಗಿ 'ನಳಚರಿತ್ರೆ : ಚರಿತ್ರೆಯ ಸ್ತ್ರೀ ವ್ಯಾಖ್ಯಾನ' ಮಂಡನೆಯಾಗಿದೆ.

ಸಾಮಾಜಿಕ ಚಿಕಿತ್ಸಕನಾಗಿ ಸಹೃದಯ ಮನ್ನಣೆ ಪಡೆದ ಕನಕದಾಸರು ಹೆಣ್ಣನ್ನು ಚಿತ್ರಿಸಿದ ಬಗೆಯನ್ನು 'ನಳಚರಿತ್ರೆ' ಕಾವ್ಯದ ಮೂಲಕ ಹುಡುಕ ಹೊರಟಾಗ, ಇಡೀ ಕಾವ್ಯದಲ್ಲಿ ನಾಯಕ ನಳನಿಗಿಂತ ದೃಢತೆಯನ್ನು ನಾಯಕಿ ದಮಯಂತಿಯಲ್ಲಿ ಕಾಣಬಹುದು. ಸದೃಢ ಮನಸ್ಸು, ತಾಳ್ಮೆ, ಆತ್ಮವಿಶ್ವಾಸವಿರುವವರು ಎಂತಹುದೇ ಸನ್ನಿವೇಶಗಳನ್ನು ಜಯಿಸಬಲ್ಲರು ಎಂಬ ಮಾತಿಗೆ ದಮಯಂತಿ ಸಾಕ್ಷಿಯಾಗುತ್ತಾಳೆ. ಆ ದೃಷ್ಟಿಯಿಂದ 'ಈ ಕಥೆಗೆ ನಳಚರಿತ್ರೆ ಎನ್ನುವುದಕ್ಕಿಂತ 'ದಮಯಂತಿ ಚರಿತ್ರೆ' ಎಂದು ಕರೆಯದೆ ಇದ್ದುದೇ ಕೊರತೆ ಎನಿಸಿತು' ಎಂಬ ಮುಖ್ಯ ಪ್ರಬಂಧಕಾರರ ಅಭಿಪ್ರಾಯಕ್ಕೆ ನನ್ನ ಸಹಮತವಿದೆ. ಹೌದು, ಕಾವ್ಯದ ಹೆಸರು ನಳಚರಿತ್ರೆಯಾದರು ಕಾವ್ಯದ ಪುಟ ಪುಟಗಳಲ್ಲೂ ತುಂಬಿಕೊಂಡು, ಸಹೃದಯನ ಮನದಲ್ಲಿ ನೆಲೆ ನಿಲ್ಲುವವಳು ದಮಯಂತಿಯೇ.

ತ್ಯಾಗಮೂಲ ಪ್ರೇಮಕಾವ್ಯ ಎಂದೇ ಹೆಸರಾದ ನಳಚರಿತ್ರೆಯಲ್ಲಿ ನಳನ ತ್ಯಾಗಕ್ಕೇ ಮೇಲ್ಮೆ. ನಳನನ್ನು ಮೆಚ್ಚಿದ ದಮಯಂತಿಯನ್ನು ದೇವತೆಗಳೇ ಒಲಿದು ಬಂದರೂ ತನ್ನ ಪ್ರೇಮದ ನಿಷ್ಠೆಯನ್ನು ಸಡಿಲಿಸದೆ ನಳನನ್ನೇ ಮದುವೆಯಾಗುತ್ತಾಳೆ. ಇಷ್ಟಕ್ಕೇ ನಿಲ್ಲದ ದಮಯಂತಿಯ ಪ್ರೇಮಪರೀಕ್ಷೆ ಕಾವ್ಯದುದ್ದಕ್ಕೂ ನಿರಂತರವಾಗಿ ಸಾಗುತ್ತಲೇ ಹೋಗುತ್ತದೆ. ಎಂತಹುದೇ ಪರಿಸ್ಥಿತಿಯಲ್ಲೂ ದಮಯಂತಿಯ ಪ್ರೇಮ ಚಂಚಲವಾಗುವುದೇ ಇಲ್ಲ. ಕನಕದಾಸರು ದಮಯಂತಿಯ ಪ್ರೇಮವನ್ನು ಪರೀಕ್ಷಿಸಿದ್ದು ವಿಧಿ, ಕಾಪಾಡಿದ್ದು ಭಕ್ತಿ ಎನ್ನುತ್ತಾರೆ. ಇಲ್ಲಿ ನಿಜವಾಗಿ ಗೆದ್ದದು ದಮಯಂತಿಯ 'ದೃಢಚಿತ್ತ' ಎಂಬುದರತ್ತ ಕನಕದಾಸರ ವೈಚಾರಿಕ ಪ್ರಜ್ಞೆ ಚಿಂತಿಸಲು ಸಾಧ್ಯವಾಗಿಲ್ಲ.

ವಿವಾಹದ ನಂತರ ಪುಷ್ಕರನೊಂದಿಗೆ ಜೂಜಿನಲ್ಲಿ ಸೋತ ನಳ ದಮಯಂತಿಯನ್ನು ಸದ್ಯ ಪಣಕ್ಕಿಡಲಿಲ್ಲವಲ್ಲ ಎಂಬ ಸಮಾಧಾನವಿದೆ. ಜೂಜಿನಲ್ಲಿ

ಸೋತ ನಳ ಕಾಡಿಗೆ ಹೋಗಿ ಸತ್ಯಪಾಲಿಸಲು ತೀರ್ಮಾನಿಸಿದಾಗ, ಹೆಂಡತಿಯನ್ನು ತವರು ಮನೆಗೆ ಹೋಗಿ ಸುಖವಾಗಿರುವಂತೆ ಹೇಳುತ್ತಾನೆ. ಒಪ್ಪದ ದಮಯಂತಿ

ನೆಳಲು ತನುವಿನ ಬಳಿಯಲಿಲ್ಲದೆ
ಚಲಿಸುವುದೆ ತಾ ಬೇರೆ ನಿಮ್ಮಡಿ
ನಳಿನದಲಿ ಸುಖ-ದುಃಖವಲ್ಲದೆ ಬೇರೆ ಗತಿಯುಂಟೆ

ಎಂದು ನಂಬಿಬಂದವಳನ್ನು ಅಪರಾತ್ರಿಯಲ್ಲಿ ಏಕಾಂಗಿಯಾಗಿ ಬಿಟ್ಟು ಹೋಗುವ ಉದ್ದೇಶ ನಳನಿಗೆ ಒಳ್ಳೆಯದಿರಬಹುದು. ಒಂಟಿತನದಲ್ಲಿ ಬದುಕನ್ನೆದುರಿಸಬೇಕಾದ ದಮಯಂತಿಗೆ ಅದು ಯಾತನೆಯಲ್ಲವೇ? ಹೆಂಡತಿಯನ್ನು ಒಂಟಿಯಾಗಿ ಬಿಟ್ಟ ಕಾರಣಕ್ಕೆ ನಳ ತನ್ನನು ತಾನು ಪಾಪಿ ಎಂದು ಎಷ್ಟೇ ನಿಂದಿಸಿಕೊಂಡರೂ, ದಮಯಂತಿಯ ಅಸಹಾಯಕ ಸ್ಥಿತಿಗೆ ಅದು ಉತ್ತರವಾಗುವುದಿಲ್ಲವಲ್ಲ. ಇಷ್ಟಾದರೂ ಮನಸಿನಲ್ಲೂ ಪತಿಯನ್ನು ನಿಂದಿಸದ ಪತಿಭಕ್ತೆಗೆ, ಮರುಸ್ವಯಂವರ ಎಂದಾಗ ಕುಪಿತಗೊಂಡು ಅವಳನ್ನು ದ್ರೋಹಿ ಎಂದುದೇಕೆ? ಇಲ್ಲಿ ನಳನ ಮನಸ್ಥಿತಿಯ ದ್ವಂದ್ವತೆ ಎದ್ದು ಕಾಣುತ್ತದೆ. ಇತ್ತ ಕಾಡಿನಲ್ಲಿದ್ದಾಗ ಹೆಂಡತಿ ಮಾವನ ಮನೆಸೇರಿ ಸುಖವಾಗಿರಲಿ ಎಂದು ಬಯಸಿದ ನಳ, ದಮಯಂತಿಗೆ ಮರುಸ್ವಯಂವರ ಎಂದಾಗ ಸಿಟ್ಟಾದುದೇಕೆ? ಅಂದರೆ ಹೆಣ್ಣಿಗೆ ಗಂಡನೇ ದಿಕ್ಕು, ಅವನು ಅಸಹಾಯಕನಾದಾಗ ತವರು ಮನೆಯವರೇ ಗತಿ, ಅದರ ಹೊರತಾದ ಬದುಕು ಹೆಣ್ಣಿಗಿಲ್ಲ ಎಂಬುದನ್ನು ಈ ಕಾವ್ಯ ಮತ್ತೊಮ್ಮೆ ಸಾಬೀತು ಮಾಡಿದೆ. ಕನಕದಾಸರು ಆ ರೂಢಿಗತ ಚೌಕಟ್ಟನ್ನು ಮೀರಲಾರದೇ ನಳನನ್ನು ಪುರುಷ ಪ್ರಧಾನ ವ್ಯವಸ್ಥೆಯ ಪ್ರತಿನಿಧಿಯನ್ನಾಗಿಸಿದ್ದಾರೆ.

ದಮಯಂತಿ ಮಾನವತ್ವಕ್ಕೆ ಕೊಟ್ಟ ಮಹತ್ವವನ್ನು ನಳನಿಗೆ ನೀಡಲು ಸಾಧ್ಯವಾಗಿಲ್ಲ. ಲೋಕಪಾಲರ ಮುಂದೆ ಕೀಳರಿಮೆಯಿಂದ ವರ್ತಿಸುವುದು, ಯಾರಿಗೆ ಗೊತ್ತು ದಮಯಂತಿ ಇಂದ್ರನಿಗೆ ಒಲಿದರೂ ಒಲಿಯಬಹುದೆಂದು ಅನುಮಾನಿಸುವುದು, ಸ್ತ್ರೀಯರ ಚಂಚಲ ಗುಣಗಳನ್ನು ಲೋಕಪಾಲರ ಮುಂದೆ ಗೊಣಗುವುದು, ಲೋಕಪಾಲರ ಮಾತು ಮೀರಲಾರದೆ ದಮಯಂತಿ ಇಂದ್ರನನ್ನು ಒಲಿಯುವಂತೆ ದೌತ್ಯ ವಹಿಸುವುದು. ಮಾನುಷ ಶಕ್ತಿಯನ್ನು ಮೀರಿದ ದೇವತೆಗಳನ್ನು ಒಲೈಸುವುದೇ ಆಗಿದೆ. ಈ ಸಂದರ್ಭದಲ್ಲಿ ದಮಯಂತಿ ಅಧೀನ ಸಂಸ್ಕೃತಿಯನ್ನು ಧಿಕ್ಕರಿಸಿದ ದಿಟ್ಟೆಯಾಗಿ ಕಾಣುತ್ತಾಳೆ. ಯಾವ ಆಮಿಷಗಳಿಗೂ ಸೋಲದೆ ತಾನು ಮದುವೆಯಾಗುವುದು ನಳನನ್ನೇ ಎಂದು ತನ್ನ ಪ್ರೇಮಕ್ಕೆ ಬದ್ಧಳಾಗಿ ನಿಲ್ಲುವ ಪ್ರಬುದ್ಧಳಾಗಿ ಕಾಣಿಸುತ್ತಾಳೆ. ದೇವತೆಗಳನ್ನೂ ತಿರಸ್ಕರಿಸಿ ಒಲಿದ ಹೆಂಡತಿಯನ್ನು ಮರುಸ್ವಯಂವರದ ನಂತರ ದ್ಯೂತಕ್ಕೆ ಪಣವಿಡುವುದು ವಿಪರ್ಯಾಸದ ಸಂಗತಿ ಎನಿಸುತ್ತದೆ. ಕನಕದಾಸರು ತ್ಯಾಗಮಯಿಯಾಗಿ ವರ್ಣಿಸಿರುವ ನಳನಲ್ಲಿ ಕಂಡ ಆದರ್ಶವಾದರೂ ಯಾವುದು? ಎಂಬ ಪ್ರಶ್ನೆ ಇಲ್ಲಿ ಕಾಡುತ್ತದೆ. 'ವಿಧಿಯನ್ನು,

ಕಲಿಯನ್ನು ಮುಂದುಮಾಡಿ ಈ ಕಥೆಯಲ್ಲಿ ನಳನ ದೌರ್ಬಲ್ಯಗಳನ್ನೆಲ್ಲಾ ಮುಚ್ಚುವ ಪ್ರಯತ್ನ ಮಾಡಲಾಗಿದೆ' ಎಂಬ ಪ್ರಬಂಧಕಾರರ ಮಾತನ್ನು ಒಪ್ಪಲೇ ಬೇಕು.

ಕನಕದಾಸರು ಭಕ್ತಕವಿಯಾದರಿಂದ ಬಹುಶಃ ನೈಷದೀಯ ನಳಚಂಪೂಗಳಂತಹ ಕೃತಿಯಲ್ಲಿಯಂತೆ ದಮಯಂತಿಯ ಭೌತಿಕ ಸೌಂದರ್ಯದ ಕಡೆಗೆ ಹೆಚ್ಚು ಗಮನ ಕೊಡುವ ಅವಶ್ಯಕತೆ ಬಿದ್ದಿಲ್ಲ. ಆದ್ದರಿಂದ ಅವಳ ಬೌದ್ಧಿಕ ಸೂಕ್ಷ್ಮತೆ, ಜಾಣತನಗಳ ಕಡೆಗೆ ಗಮನ ನೀಡಿದ್ದಾರೆ. ಹೆಣ್ಣು ಒಡವೆ–ವಸ್ತ್ರಾದಿ ಮೋಹಗಳಿಂದ ಚಂಚಲಗೊಳ್ಳುತ್ತಾಳೆಂಬುದನ್ನು ಕನಕದಾಸರು ಇಲ್ಲಿ ಮುರಿದಿದ್ದಾರೆ. ಇಂದ್ರನನ್ನು ಒಲಿಯುವಂತೆ ಮಾಡಲು ಬಂದ ರಂಭೆ ಒಡವೆ–ವಸ್ತ್ರಾದಿಗಳನ್ನು ನೀಡಿ ಮೋಹಗೊಳಿಸಲು ಮಾಡಿದ ಪ್ರಯತ್ನ ವಿಫಲವಾಗುತ್ತದೆ. ಇಂದ್ರನ ಒತ್ತಾಯಕ್ಕೆ ಮಾರುವೇಶದಲ್ಲಿ ಬಂದ ನಳನು ದೇವತೆಗಳನ್ನು ಹೊಗಳಿ, ನಳನನ್ನು ತೆಗಳಿದಾಗ ನೀಡುವ ದಿಟ್ಟತನದ ಉತ್ತರ ನಳನ ಮಾರುವೇಶವನ್ನು ಕಳಚುವಂತೆ ಮಾಡುತ್ತದೆ. ಆತನೇ ನಳನೆಂದು ಸಾಬೀತುಮಾಡಲು ಕುರುಹು ಕೇಳುವ ಚತುರತೆ, ನಾಲ್ವರು ದೇವತೆಗಳು ನಳನ ರೂಪವನ್ನೇ ಧರಿಸಿ ನಿಂತಾಗ ನಿಜವಾದ ನಳನನ್ನೇ ಆಯ್ಕೆಮಾಡುವ ಚತುರತೆ ಇಲ್ಲೆಲ್ಲ ದಮಯಂತಿ ಸಾಂಪ್ರದಾಯಿಕವಾಗಿ ಚಿತ್ರಿತವಾಗಿರುವ ಹೆಣ್ಣಿಗಿಂತ ಭಿನ್ನವಾಗಿ ಕಾಣುತ್ತಾಳೆ. ಆದರೂ ಅರಮನೆಯ ಹೆಣ್ಣನ್ನು ಗಂಡ ಬಿಟ್ಟವಳೆಂಬ ಹಣೆಪಟ್ಟಿಯಿಂದ ಹೊರತರಲಾರದ ಅಸಹಾಯಕತೆಯ ಕೊರಗು ಇಲ್ಲಿ ಇದ್ದೇ ಇದೆ. ಮೂರುಪಾಲಾದ ತನ್ನ ಕುಟುಂಬವನ್ನು ನಿರಂತರವಾಗಿ ಹುಡುಕುವ, ಒಗ್ಗೂಡಿಸುವ ಪ್ರಯತ್ನದಲ್ಲಿ ದಮಯಂತಿಯ ಶ್ರಮವನ್ನು ಪ್ರಶಂಶಿಸಲೇಬೇಕು. ಆದರೆ, ಇಲ್ಲಿ ಗಂಡ–ಮಕ್ಕಳನ್ನು ಒಗ್ಗೂಡಿಸಿದ ದಮಯಂತಿ ಕರುಣೆಗೆ ಪಾತ್ರಳಾಗುತ್ತಾಳೆ ಹೊರತು ಪ್ರಶಂಶೆಗಲ್ಲ. ಗಂಡ–ಮಕ್ಕಳನ್ನು ಸೇರಲೆಂಬ ಹಂಬಲದಿಂದ ಭಕ್ತಿಯ ಹೆಸರಿನಲ್ಲಿ ವ್ರತಾಧಾರಿಯಾದ ಅವಳ ಬಾಯಲ್ಲಿ ಹೇಳಿಸುವ 'ಪತಿವಿಹೀನೆಯಾದ ಸತಿಗೆ ಸುವ್ರತೆಗೆ ಸುಭೋಜನ ಸುಖಗಳೆಂಬುದು ಯೋಗ್ಯವೇ' ಎಂಬ ಮಾತು ಮತ್ತೆ ರೂಢಿಗತ ಹೆಣ್ಣಿನ ಚಿತ್ರಣವನ್ನೇ ನೆನಪಿಸುತ್ತದೆ. 'ಮಂಡೆ ಮಾಸಿದೆ ಮಲಿನ ವಸನದದೆ ಗಂಡನ ಚಿಂತೆಯಲಿ ಮುಖ ಬಾಡಿ ದೇಹವನು ದಂಡಿಸಿದಳ್ ಅನ್ನದಲಿ ಮನಮುರಿದುದು ಸತಿಗೆ' ಎಂಬ ಮಾತೂ ದೂರಾದ ಗಂಡನಿಗಾಗಿ ಕಾಯುವ ಹೆಂಡತಿಯ ಸಾಂಪ್ರದಾಯಿಕ ಚಿತ್ರಣವನ್ನೇ ಹೊಂದಿದೆ.

ಈ ಕಾವ್ಯದಲ್ಲಿ ಮಕ್ಕಳಿಲ್ಲದ ಭೀಮನು ದಮನ ಋಷಿಗಳ ಸಲಹೆಯ ಮೇರೆಗೆ ಪುತ್ರಕಾಮೇಷ್ಠಿಯಾಗವನ್ನು ಮಾಡಿ ಪುತ್ರಿ ದಮಯಂತಿಯನ್ನು ಪಡೆಯುತ್ತಾನೆ. ಹೆಣ್ಣೆಂದರೆ ಈ ಹೊತ್ತಿಗೂ ಮೂಗು ಮುರಿಯುವವರಿರುವಾಗ ಅಂದೇ ಕನಕದಾಸರ ವೈಚಾರಿಕತೆ ದುಡಿದ ಪರಿ ನೋಡಿದರೆ ಹೆಮ್ಮೆ ಎನಿಸುತ್ತದೆ. 'ಮಂಗಳಕರ ಸುಲಗ್ನ ಸುತಾರೆಯಲಿ ನೃಪನರಸಿ ಪಡೆದಳು ತನುಜೆಯೊರ್ವಳ ಲೋಕಸುಂದರಿಯ ಅಮರದುಂದುಬಿಮೊಳಗಲಿಳೆ ಸಂಭ್ರಮಿಸೆ.' ಎಂದು ಒಂದು ಸಂಭ್ರಮದ

ವಾತಾವರಣವನ್ನು ಕಟ್ಟಿಕೊಡುತ್ತಾರೆ. ಪುತ್ರ ಪ್ರಾಪ್ತಿಗಾಗಿಯೇ ಬಹುತೇಕ ಯಾಗಗಳು ಮೀಸಲು. ಆ ಮೀಸಲನ್ನು ಒಡೆದು ಪುತ್ರರಿಲ್ಲದಿದ್ದರೂ, ಪುತ್ರಿಯನ್ನು ಸಂತೋಷವಾಗಿ ಪಡೆಯುವ ಇಲ್ಲಿನ ಬದಲಾವಣೆ ಕನಕದಾಸರ ನಳಚರಿತ್ರೆಗೆ ಒಂದು ಶಕ್ತಿ ಎನಿಸಿಬಿಡುತ್ತದೆ.

ಹೀಗೆ ಇಡೀ ನಳಚರಿತ್ರೆಯನ್ನು ಗಮನಿಸಿದಾಗ ಕನಕದಾಸರು ಕೆಲವು ಕಡೆ ದಮಯಂತಿಯ ಮೂಲಕ ಹೆಣ್ಣನ್ನು ಸಾಂಪ್ರದಾಯಿಕ ಚೌಕಟ್ಟಿನಿಂದ ಹೊರತಂದು, ಹೊಸದೊಂದು ಆಲೋಚನೆಗೆ ಕಾರಣಕರ್ತರಾಗಿದ್ದಾರೆ. ಆದರೆ, ಕೆಲವು ಕಡೆ ತಮ್ಮ ಮಿತಿಯನ್ನು ಮೀರಲಾರದೆ ಅದೇ ಹಳೆಯ ಪ್ರೇಮಿನೊಳಗೇ ಕೂರಿಸಿಬಿಟ್ಟಿದ್ದಾರೆ.

### 3. ಮಹಿಳಾ ಪರವಾದ ಮೇಲು ದನಿ

– ಚಂದ್ರಶೇಖರ ತಾಳ್ಯ

ರಾಷ್ಟ್ರೀಯ ಸಂತ ಕವಿ ಕನಕ ದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ ಈ ಲೇಖನವನ್ನು ನನಗೆ ಈ–ಮೇಲ್ ಮೂಲಕ ತಲುಪಿಸಿದಾಗ ಲೇಖಕರ ಹೆಸರು ಇರಲಿಲ್ಲ. ಈ ಬರಹದ ಒಳ ಶೈಲಿಯನ್ನು ಗ್ರಹಿಸುತ್ತಾ ಹೋದಂತೆ ನನ್ನ ಮನಸ್ಸಿಗೆ ಥಟ್ಟನೆ ಹೊಳೆದದ್ದು ಇದನ್ನು ಬರೆದವರು ಮಹಿಳೆಯೇ ಇರಬೇಕು ಎಂದು.

ಯಾಕೆಂದರೆ ಲೇಖನದ ಉದ್ದಕ್ಕೂ ಮಹಿಳಾ ಪರವಾದ ದನಿ ತಾರಕದಲ್ಲಿಯೇ ಕೇಳಿಸುತ್ತದೆ. ಇದು ಸರಿಯೇ ಎಂಬ ಪ್ರಶ್ನೆಗೆ ಮಾತ್ರ ಹೌದು ಮತ್ತು ಇಲ್ಲ ಎಂಬ ಸಂಧಿಗ್ಧದ ಉತ್ತರವೇ ಗತಿ.ಮಹಿಳಾ ಪರವಾಗಿ ಹಗ್ಗವನ್ನು ಕೊಂಚ ಅತಿಯೆಂಬತೆಯೆಂಬತೆಯೇ ಜಗ್ಗಿರುವುದು ಭಾಸವಾಗುತ್ತಿದ್ದಂತೆ; ಇದು ಅತಿಯಲ್ಲವೇ? ಎನಿಸಿದರೆ; ಪರಂಪರಾಗತವಾಗಿ ನಿಷ್ಪಾಪಿ ಹೆಣ್ಣುಮಕ್ಕಳನ್ನು ಈ ಪುರುಷ ಪ್ರಧಾನ ಸಮಾಜ ಹಾಗೆಯೇ ನಡೆಸಿಕೊಂಡು ಬಂದಿದೆಯಲ್ಲವೆ? ಎಂಬ ಪ್ರಶ್ನೆಯೂ ಜೊತೆಗೇ ಏಳುತ್ತದೆ. ಹಾಗಾದರೆ ಯಾವುದು ಸರಿ? ಉತ್ತರ ಮಾತ್ರ ಅನಿರ್ದಿಷ್ಟ. ಆದರೆ ಪ್ರಸ್ತುತ ಲೇಖನದ ನಿರ್ದಿಷ್ಟತೆಯಲ್ಲಿ ಮಹಿಳೆಯ ಪರವಾದ ವಕಾಲತ್ತು ಸ್ವಲ್ಪ ಹೆಚ್ಚಾಗಿರುವುದಂತೂ ಸತ್ಯ.

ಲೇಖನ ಆಕ್ಷೇಪ ಎತ್ತುವಂತೆ ಕನಕರು ನಳ ಚರಿತ್ರೆಯಲ್ಲಿ ದಮಯಂತಿಯ ಪಾತ್ರ ಚಿತ್ರಣದಲ್ಲಿ ಅವರ ಕಾಲದ ಸಾಂಪ್ರದಾಯಿಕ ಮೌಲ್ಯಗಳ ಮೇಲಾಟ ಇರುವುದು ನಿಜ. ಪಾತಿವ್ರತ್ಯ; ಪತಿನಿಷ್ಠೆ; ಒಡೆದ ಕುಟುಂಬವನ್ನು ಕೂಡಿಸುವ ಹವಣು; ಪ್ರೇಮಮಯ ಭಾವುಕತೆ ಇವೆಲ್ಲವೂ ದಮಯಂತಿಯಲ್ಲಿರುವ ಅತ್ಯುತ್ತಮ ಸ್ತ್ರೀ ಮೌಲ್ಯಗಳೆಂದು ಕನಕರು ಸರ್ಟಿಫೈ ಮಾಡಿರುವುದು ಸ್ತ್ರೀಮಾದರಿಯ ಒಂದು ಮುಖವನ್ನು ಮಾತ್ರ. ಆಕೆ ಮಹಾಭಾರತದ ದ್ರೌಪತಿಯಂತಲ್ಲ. ಮಹಾಭಾರತದ

ಕಾಲ ಸಂದರ್ಭದಲ್ಲಿ ಅಂದರೆ ವೇದ ಯುಗ ಮುಗಿದ ತೀರಾ ಕೊನೆಯ ಘಟ್ಟದ ಕೆಲವೇ ಶತಮಾನಗಳ ನಂತರದ ಅವಧಿಯಲ್ಲಿ ರಚಿತವಾದ ಭಾರತದಲ್ಲಿ ಹೆಣ್ಣು ಸ್ವತಂತ್ರಳಾಗಿ ವರ್ತಿಸುವುದರಲ್ಲಿ ಅಚ್ಚರಿಯೇನೂ ಇಲ್ಲ. ಮಾತೃಪ್ರಧಾನ ವ್ಯವಸ್ಥೆಯ ಅಂತಿಮ ಹಂತದಲ್ಲಿನ ಹೆಣ್ಣು ಈ ಭಾರತದಲ್ಲಿ ಚಿತ್ರಿತಗೊಂಡಿರಬಹುದು. ಆ ಕಾಲಕ್ಕೆ ಸ್ತ್ರೀಯ ಸ್ವಾತಂತ್ರ್ಯವನ್ನು ಪುರುಷ ಇನ್ನೂ ಪೂರ್ಣವಾಗಿ ಕಿತ್ತುಕೊಂಡಿರಲಿಲ್ಲವೋ ಏನೋ. ದ್ರೌಪದಿ ಮನದಲ್ಲಿ ಕರ್ಣನನ್ನು ಬಯಸುವುದು ಸಾಮಾನ್ಯ ಸಂಗತಿಯೇನೂ ಅಲ್ಲ. ಆದರೆ ನಿಧಾನಕ್ಕೆ ಪುರುಷ ಪ್ರಾಧಾನ್ಯ ಹೆಚ್ಚಿದಂತೆಲ್ಲಾ ಯುಗ ಯುಗಗಳ ಮುಂಗತಿಯಲ್ಲಿ ಅಂದರೆ ಕನಕರ ಕಾಲಕ್ಕಾಗಲೇ ಸಂಪೂರ್ಣವಾಗಿ ಹೆಣ್ಣು ಗಂಡಿನ ಅಧೀನಕ್ಕೊಳಪಟ್ಟಿರುವಂತೆ ತೋರುತ್ತದೆ. ಹೆಣ್ಣು ಕೂಡ ತನ್ನ ಅಸಹಾಯಕತೆಯಲ್ಲಿ ಈ ಸ್ಥಿತಿಯನ್ನು ಒಪ್ಪಿಕೊಂಡಿರಬಹುದು. ಇಂಥಾ ತೀವ್ರ ಬಿಕ್ಕಟ್ಟನ್ನು ಹೆಣ್ಣು ಎದುರಿಸುವ ಕಾಲವೇ ಕನಕರದ್ದೂ ಆಗಿದ್ದರಿಂದ ಮಹಿಳೆಯ ಪರವಾಗಿ ಹೆಚ್ಚಿನ ಮಾನವೀಯ ಸಂಪನ್ನತೆಯನ್ನು ಅವರು ತೋರಬಹುದಾಗಿತ್ತೇ ಹೊರತು; ಇದ್ದಕ್ಕಿದ್ದಂತೆ ಸಿಡಿದು; ನುಚ್ಚು ನೂರು ಮಾಡಿಬಿಡಬಹುದಾದ ಸ್ಫೋಟಕ ಗುಣವನ್ನಲ್ಲ.

ಆದರೆ ಕನಕರು ಇಡೀ ಸಂಪ್ರದಾಯಿಕ ವ್ಯವಸ್ಥೆಯ ವಿರುದ್ಧವೇ ಸೆಟೆದು ನಿಂತವರಾಗಿಯೂ ಕೂಡ ಹೆಣ್ಣಿನ ಬಗ್ಗೆ ಮಾತ್ರ ಈ ಮಡಿವಂತಿಕೆಯನ್ನೇಕೆ ಪಾಲಿಸಿದರೋ ಎಂಬುದು ಶೋಧಿಸಬೇಕಾದ ಸಂಗತಿ.

ಊಹಿಸಬಹುದಾದ್ದೆಂದರೆ ಅವರು ಬಂದದ್ದು ದಾಸ ಕೂಟದೊಳಕ್ಕೆ. ಶಟಸಂಪ್ರದಾಯದ ಚಕ್ರವ್ಯೂಹವನ್ನು ದಾಟಿಯೇ ಈ ದಾಸಕೂಟ ತನ್ನ ಅಭಿಪ್ರಾಯಗಳನ್ನು ಸಮಾಜದ ಜೊತೆ ಹಂಚಿಕೊಳ್ಳಬೇಕಾಗಿತ್ತು. ಹನ್ನೆರಡನೇ ಶತಮಾನದ ಕಾವು ಆಗಲೇ ತಣ್ಣಗಾಗಿ ಹೋಗಿದ್ದ ಸಂದರ್ಭವದು. ವಚನ ಚಳುವಳಿಯ ಮೇಲೆ ನಡೆದ ಹಲ್ಲೆಯಿಂದಾಗಿ ತಲ್ಲಣಕ್ಕೊಳಗಾಗಿದ್ದ ಸಮಾಜ ಬೇರೊಂದು ಸಂರಚನೆಗಾಗಿ ಕಾತರಿಸುತ್ತಿರುವಂತೆ ತೋರುತ್ತದೆ. ಲಕ್ಕಣದಂಡೇಶ, ಶೂನ್ಯ ಸಂಪಾದನೆಕಾರರು ಈ ಅಪೇಕ್ಷೆಯನ್ನು ಪೂರೈಸಿದರಾದರೂ ಅವರೆಲ್ಲ ಬಸವಣ್ಣನ ಕಾಲಕ್ಕಿದ್ದ ಸ್ತ್ರೀ ಸ್ವಾತಂತ್ರ್ಯವನ್ನು ಪುನರ್ ಸ್ಥಾಪಿಸಲಾರದೇ ಹೋದರು. ಅವರ ದೃಷ್ಟಿಯೆಲ್ಲ ಲಿಂಗಾಯತವನ್ನು ಸಂಸ್ಥೀಕರಿಸುವತ್ತಲೇ ಕೇಂದ್ರೀಕೃತವಾಯಿತು. ಜೀರ್ಣಗೊಂಡಿದ್ದನ್ನು ತೇಪೆ ಹಾಕಿ ಸರಿ ಮಾಡಲಾಗಿತ್ತಾದ್ದರಿಂದ ಲೋಪಗಳು ಉಳಿದೇ ಇದ್ದವು. ಅದರಲ್ಲಿ ಹೆಣ್ಣಿನ ಸ್ವಾತಂತ್ರ್ಯವನ್ನು ಮರು ಸ್ಥಾಪಿಸುವ ಕೆಲಸವೂ ಒಂದು. ಆದರೆ ಅದೊಂದು ಸೋತು ಹೋದ ದೊಡ್ಡ ವಿಷಾದ. ಕನಕ ಬದುಕಿದ ಕಾಲವೂ ಇದೇ ಆಗಿತ್ತಾದ್ದರಿಂದ ಈ ಬಿಕ್ಕಟ್ಟಿನಲ್ಲಿ ತುಂಬಾ ಜಾಣ್ಮೆಯಿಂದಲೇ ಅವರು ಸ್ತ್ರೀ ವಾದವನ್ನು ನಿಭಾಯಿಸಿದಂತೆ ತೋರುತ್ತದೆ. ಅವರು ನಿಭಾಯಿಸಲೆತ್ನಿಸಿದ ಮಾದರಿಗಳಲ್ಲಿ ಒಂದು ಸಮಾಜದಲ್ಲಿ ಸಾಧಾರಣ ಬದುಕಿಗಷ್ಟೇ ಸೀಮಿತಗೊಂಡ ಹೆಣ್ಣಿನ ಗುಣಲಕ್ಷಣಗಳು, ಮತ್ತೊಂದು ಆದರ್ಶಪ್ರಾಯವೆನಿಸುವ ಸ್ತ್ರೀ ಮಾದರಿ.

ಮೊದಲ ಮಾದರಿಯದ್ದು ಸ್ವೇಚ್ಛಾ ವರ್ತನೆ. ಮನೋನಿಯಂತ್ರಣ ಮೀರಿದ ನಡಾವಳಿ. ಎರಡನೆಯ ಮಾದರಿ ಸಂಯಮದ್ದು. ಕೂಡು ಬಾಳನ್ನು ಹಂಚಿಕೊಳ್ಳುವ ಕ್ರಮದ್ದು. ಸಮಾಜದೊಳಗೆ ಎಂದಿನಿಂದಲೂ ಈ ಎರಡೂ ಮಾದರಿಗಳು ಇರುವುದನ್ನು ಹೇಗೆ ಅಲ್ಲಗಳೆಯುವುದು? ಕನಕರು ಹಣ್ಣಿನ ಲೇವಡಿ ಮಾಡಿರುವುದು ಮೊದಲ ಮಾದರಿಯ ಗುಣ ಲಕ್ಷಣಗಳನ್ನು ಗಮನದಲ್ಲಿರಿಸಿಕೊಂಡೇ ಹೊರತು ನಂತರದ ಮಾದರಿಯನ್ನಲ್ಲವೆಂಬುದು ನನ್ನ ಅಭಿಪ್ರಾಯ. ಹೆಣ್ಣಾಗಲಿ ಗಂಡಾಗಲಿ ಸಂಯಮಶೀಲರಾಗಿ ವರ್ತಿಸುವುದನ್ನು ಯಾವುದೇ ಸಮಾಜ ನಿರೀಕ್ಷಿಸುತ್ತದೆಯಲ್ಲವೆ? ಇಲ್ಲದಿದ್ದರೆ ಅರಾಜಕತೆಗೆ ಎಡೆಮಾಡಿಕೊಟ್ಟಂತಾಗುತ್ತದೆ.

ಫ್ರೆಡರಿಕ್ ನೀಶೆಯಂಥಾ 19ನೇ ಶತಮಾನದ ಮೇರು ದಾರ್ಶನಿಕ ಹೆಣ್ಣನ್ನು ಹೆರುವ ಯಂತ್ರವೆಂದೇ ಭಾವಿಸುತ್ತಾನೆ. ಪರಮಹಂಸರು ಹೆಣ್ಣನ್ನು ಪೂಜ್ಯನೀಯಳೆಂಬಂತೆಯೂ, ಕಾಮಿಯೆಂಬಂತೆಯೂ ಗಣಿಸಿದ್ದಾರೆ. ಎಲ್ಲ ಸಮಾಜಗಳಲ್ಲೂ ಈ ಎರಡು ಬಗೆಗಳೂ ಇರುತ್ತವಲ್ಲವೆ? ನೀಶೆಯ ನಿಲುವನ್ನು ಯಾರೂ ಒಪ್ಪಲಾರರು. ಪರಮಹಂಸರ ನಿಲುವು ವಿವೇಕಯುತವಾದದ್ದು.

ವರ್ತಮಾನದ ಹೆಣ್ಣಿನ ನಡೆಯನ್ನು ಗಮನಿಸಿದರೆ ಅದರಲ್ಲೂ ಅಕ್ಷರಸ್ಥ, ತಂತ್ರಜ್ಞಾನ ಪರಿಣಿತರನ್ನು ಸೂಕ್ಷ್ಮವಾಗಿ ನೋಡಿದರೆ ಇದು ನಮಗೇ ಅನುಭವಕ್ಕೆ ಬರುವಂಥದು. ಆಧುನಿಕತೆಯೆನ್ನುವ ದೈವವನ್ನು ವಿಕಾರಗೊಳಿಸುವ ಮಟ್ಟಿಗೆ ಆಕೆಯ ನಡೆಗಳಿವೆ. ಇದು ಯಾಕೆ ಎಂಬ ಪ್ರಶ್ನೆಗೆ ಉತ್ತರ ಹುಡುಕುವುದು ಅಲಗಿನ ಮೇಲಿನ ನಡೆ. ನಮಗೆ ತಿಳಿಯುವಂತೆಯೇ ಅನಂತ ಸ್ತ್ರೀ ವಿರೋಧೀ ಪ್ರಸಂಗಗಳಿರುವಂತೆಯೇ, ಪುರುಷ ವಿರೋಧಿ ಅತಿರೇಕಗಳೂ ಇವೆ. ಇದಕ್ಕೆ ಯಾರನ್ನು ಹೊಣೆ ಮಾಡುವುದು?

ಇವತ್ತಿನ ಸಿನೆಮಾ ನಟಿಯರು, ಅವರ ವೇಶಭೂಷಣ, ಅವರಾಡುವ ಕೃತಕ ಭಾಷೆ, ಅವರ ಅತಿರೇಕದ ವರ್ತನೆ, ಅಶ್ಲೀಲ ಕುಣಿತ ಇತ್ಯಾದಿಗಳನ್ನು ಒಂದೆಡೆ ಇಟ್ಟರೆ, ಅದೇ ಸಿನಿಮಾದ ಸಹ ನಟಿಯರ, ಮಹಿಳಾ ಕಾರ್ಮಿಕರ, ಹೊಸದಾಗಿ ಸಿನಿಮಾ ಸೇರಲು ಬರುವ ಹೆಣ್ಣುಮಕ್ಕಳ ಸ್ಥಿತಿ ಶೋಚನೀಯವಾದದ್ದು. ಇದು ಕಲೆಯ ಹೆಸರಿನಲ್ಲಿ ನಡೆಯುವ ಅತಿರೇಕವೆನ್ನದೆ ವಿಧಿಯಿಲ್ಲ. ಇದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಬೇಕು. ಇದರಲ್ಲಿ ಹೆಣ್ಣಿನ ಜವಾಬ್ದಾರಿಯೂ ಇರುತ್ತದಲ್ಲವೆ? ಇನ್ನು ಐ ಪಿ ಎಲ್ ಗಳಲ್ಲಿ ಭಾಗಿಯಾಗುವ ಕುಣಿಸುವುದಕ್ಕೋಸ್ಕರವೇ ಗಣಿಸಲ್ಪಡುವ ಹೆಣ್ಣುಮಕ್ಕಳು, ಫ್ಯಾಷನ್ ಶೋಗಳು, ರಿಯಾಲಿಟಿ ಶೋಗಳು, ಸೌಂದರ್ಯ ಸ್ಪರ್ಧೆಗಳಲ್ಲಿ ಭಗವಹಿಸುವ ಹೆಣ್ಣುಮಕ್ಕಳ ಮಾನಸಿಕ ಸ್ಥಿತಿಯನ್ನೇ ನಾವು ಗುಮಾನಿಯಿಂದ ನೋಡುವ ಪರಿಸ್ಥಿತಿಯಿದೆ. ಮಧ್ಯಮವರ್ಗದ ಮಹಿಳೆಯರ ವರ್ತನೆ ಕೂಡ ತೀರಾ ಭಿನ್ನವೇನೂ ಅಲ್ಲ. ಜಾಗತೀಕರಣದ ಭರಾಟೆಯಲ್ಲಿ ಎಲ್ಲವೂ ಪಲ್ಲಟಗೊಂಡಂತೆ ನಮ್ಮೆಲ್ಲರ ಮಾನಸಿಕ ಸ್ಥಿತಿಯೂ ಪಲ್ಲಟಗೊಂಡಿದೆ.

ಮಹಿಳೆಯೂ ತನ್ನ ಅಸ್ಮಿತೆಯನ್ನು ಮತ್ತೊಂದು ರೀತಿಯಲ್ಲಿ ತೋರಿಸಿಕೊಳ್ಳುತ್ತಿದ್ದಾಳೆ. ಗ್ರಾಹಕ ಸಂಸ್ಕೃತಿಯ ಅತಿ ದೊಡ್ಡ ಗ್ರಾಹಕಿಯಾಗಿ ಆಕೆಗೆ ಎಲ್ಲಿಲ್ಲದ ಮಹತ್ವ ದೊರಕುವಂತಾಗಿಬಿಟ್ಟಿದೆ. ಇದನ್ನು ಧನಾತ್ಮಕವೆಂಬಂತೆ ಭಾವಿಸಿರುವ ಇವತ್ತಿನ ಮಹಿಳೆಯರು, ಅದರಲ್ಲೂ ತೊಂಬತ್ತರ ದಶಕದೀಚೆಯ ವಯೋಮಾನದ ಮಹಿಳೆ ಪರಮಹಂಸರು ಪ್ರಸ್ತಾಪಿಸುವ ಕಾಮಿನಿಗೆ ಹತ್ತಿರವಾಗುತ್ತಿದ್ದಾಳೆ. ಪರಮಹಂಸರ ಕಾಲದ ಸಾಹಿತ್ಯವೂ ಇಂಥ ಪಾತ್ರಗಳನ್ನೇ ಮುಂದಿಡುತ್ತದೆ. ತಮ್ಮ ಮಕ್ಕಳು ಇಂಜಿನಿಯರ್, ಡಾಕ್ಟರ್ ಆಗಲೇಬೇಕೆಂಬುದಷ್ಟೇ ಅಲ್ಲ ಅವನು/ಅವಳು ವಿದೇಶಕ್ಕೇ ಹೋಗಬೇಕು, ಅಲ್ಲಿಂದ ಕಂತೆ ಕಂತೆ ಹಣ ಬಾಚಿಕೊಂಡು ಬರಬೇಕು ಅಥವಾ ಯಾವ ದಂಧೆಯನ್ನೇ ಮಾಡಲಿ ಅದರಿಂದ ಹಣ ಬಂದರೆ ಸಾಕು ಎಂಬ ಮಹತ್ವಾಕಾಂಕ್ಷಿಯ ಗುಣಗಳನ್ನೇ ಕಾಮಿನಿ ಗುಣಗಳೆನ್ನುವುದು.ಇದು ಮಾತ್ರ ಮೌಲ್ಯದ ವಿರುದ್ಧ. ಇದು ಸಮಾಜದ ಸ್ವಾಸ್ಥ್ಯವನ್ನು ಹದಗೆಡಿಸುವಂಥದು. ಸಹಜತೆಯನ್ನು, ಸಹಜ ಬೆಳವಣಿಗೆಯನ್ನು ಗುಮಾನಿಸುವಂಥದು. ಐ. ಟಿ. ಬಿ. ಟಿ ಯ ಹೆಣ್ಣುಮಕ್ಕಳ ಕತೆ ಮತ್ತಷ್ಟು ಕಂಗೆಡಿಸುತ್ತದೆ. ಹಣದಾಸೆಗೆ ಗಂಡನಿಗೆ ವಿಚ್ಛೇದನ ನೀಡಿದ ಹೆಣ್ಣುಮಕ್ಕಳ ಉದಾಹರಣೆಗಳಂತೂ ಹೇರಳವಾಗಿವೆ.

ಈ ವಾಸ್ತವದ ಹಿನ್ನೆಲೆಯಲ್ಲಿ ಕನಕರು ಬದುಕಿದ ಕಾಲವನ್ನಿಟ್ಟು ನೋಡಬೇಕು. ಕನಕರ ಕಾಲಕ್ಕೂ ಅನೇಕ ಕೊರತೆಗಳಿದ್ದವು. ಆಗಲೂ ಮೇಲಿನ ಎರಡೂ ಮಾದರಿಗಳಿದ್ದವು. ಲೋಕಜ್ಞಾನಿಯಾದ; ಕವಿಯಾಗಿ ಸೂಕ್ಷ್ಮ ದೃಷ್ಟಿಯಿದ್ದ ಕನಕರಿಗೆ 'ನಳಚರಿತ್ರೆ' ಯ ಮೂಲಕ ಹೆಣ್ಣಿನ ಕೆಟ್ಟ ಮಾದರಿಯಾಚೆಗಿನ ಒಳ್ಳೆಯದನ್ನು ಚಿತ್ರಿಸಬೇಕೆಂಬ ಅಪೇಕ್ಷೆಯಿರುವಂತೆ ತೋರುತ್ತದೆ. ಈ ನಿಟ್ಟಿನಿಂದ ನಾವು ನೊಡಿದೆವಾದರೆ ಕನಕ ಸ್ತ್ರೀವಿರೋಧಿಯಂತೆ ಕಾಣಿಸುವುದೇ ಇಲ್ಲ. ದಮಯಂತಿಯ ಗುಣ ವರ್ಣನೆ ಮೂಲಕ ಇದನ್ನವರು ಸಾಧಿಸಿದ್ದಾರೆಂದೇ ಹೇಳಬಹುದು. ಕನಕ ನಳನ ಮೂಲಕ ಹೆಣ್ಣಿಗೆ ಅವಹೇಳನಕಾರಿಯಾದ ಮಾತುಗಳನ್ನು ಆಡಿಸುವುದು ಆತ ದಮಯಂತಿಯನ್ನು ನೋಡುವುದಕ್ಕೂ ಮುನ್ನ. ದೇವೇಂದ್ರನ ಕುಹಕದಿಂದ ಈ ಸನ್ನಿವೇಶ ಸೃಷ್ಟಿಯಾಗುತ್ತದೆ. 'ಅಂಥಾ ಕೆಟ್ಟವಳಲ್ಲ ಈ ದಮಯಂತಿ' ಎಂಬ ಮಾತಿಗನುಗುಣವಾಗಿಯೇ, ಅವನಲ್ಲಿ ಸ್ತ್ರೀ ಪರವಾದ ಮೃದು ಧೋರಣೆ ಇರುವುದನ್ನೂ ನಾವು ಕಾಣಬಹುದು. ಹಾಗೆ ಹೇಳುವಾಗ ದಮಯಂತಿಯ ಛಾತಿ ಎಂಥದ್ದು, ಕಡು ಕಷ್ಟಗಳನ್ನೆದುರಿಸುವ ಅಸಾಮಾನ್ಯ ಧೈರ್ಯವೆಂಥದ್ದು, ಮತ್ತೆ ನಳನನ್ನೇ ಸೇರಬೇಕೆಂಬ ಅಪೇಕ್ಷೆಯಿಂದ ತನ್ನ ತಂದೆಯ ಮೂಲಕ ಆಕೆ ತೋರುವ ಜಾಣ್ಮೆ ಎಂಥದ್ದು, ಕಾಡಿನಲ್ಲಿ ಒಂಟಿಯಾಗಿ ಕಳೆದ ಆತ್ಮಸ್ಥೈರ್ಯ, ಸ್ವತಂತ್ರವಾಗಿ ಆಲೋಚಿಸುವ ಶಕ್ತಿ ಈ ಎಲ್ಲ ರೀತಿಯ ಗುಣಗಳನ್ನೂ ಕನಕರು ದಮಯಂತಿಯ ಪಾತ್ರದಲ್ಲಿ ತುಂಬಿ ನಮ್ಮೆದುರು ಮಂಡಿಸಿದ್ದಾರೆ. ಈ ಕಾರಣಕ್ಕೇ ಅವರನ್ನು ಸನಾತನ ಮೌಲ್ಯಗಳ ಆರಾಧಕ ಎಂದು ಕರೆಯುವಂತಿಲ್ಲ.

ಗಂಡ ಸತ್ತ ಮೇಲೂ ಆಕೆ ಸತೀತ್ವವನ್ನು ಉಳಿಸಿಕೊಂಡಿರಬೇಕು, ಸದಾ ಪುರುಷ ಶ್ರೇಯಸ್ಸನ್ನೇ ಹಾರೈಸಿಕೊಂಡಿರಬೇಕು ಎಂದು ಬಯಸುವುದೇ ಅಮಾನವೀಯ. ಇದನ್ನು ಯಾರೂ ಒಪ್ಪಲಾರರು. ಸನಾತನ ಸಮಾಜ ಇಂಥ ನಿರ್ಬಂಧವನ್ನು ಹೇರಿರುವುದು ನಿಜವಾದರೂ ಕನಕರು ಇಂಥಾ ಕೆಳಮಟ್ಟದ ಆಲೋಚನೆ ಮಾಡದ್ದಾರೆಂದು ದಮಯಂತಿಯ ನಳಾಪೇಕ್ಷೆಯನ್ನು ಮುಂದಿಟ್ಟುಕೊಂಡು ತೀರ್ಮಾನಕ್ಕೆ ಬರುವುದು ಅನುಚುತವೆನಿಸುತ್ತದೆ. ಹಾಗೆಯೇ ಅವರು ತಮಗೆ ಬೇಕಾಗಿರುವ ಆದರ್ಶ ಮಾದರಿಯ ಸಮರ್ಥನೆಗಾಗಿಯೇ ಹೆಣ್ಣಿನ ಅವಲಕ್ಷಣಗಳನ್ನು ನಳನ ಬಾಯಲ್ಲಿ ಹೇಳಿಸಿದಂತೆ ತೋರುತ್ತದೆ.

'ಸನಾತನ ವ್ಯವಸ್ಥೆ ಕಟ್ಟಿಕೊಟ್ಟಿರುವ ಪತಿವ್ರತೆಯರ ಸಾಧ್ವೀಶಿರೋಮಣಿಗಳ ಸತ್ಯ ಧರ್ಮದ ನಿರೂಪಣೆಯೇ ಈ ಕಾವ್ಯದ ಪ್ರಧಾನ ಮೌಲ್ಯವಾಗಿದೆ' ಎಂಬ ಲೇಖಕರ ಆಪಾದನೆ ಅಷ್ಟೇನೂ ಉಚಿತವಾದದ್ದೆನಿಸುವುದಿಲ್ಲ. ಅಷ್ಟಕ್ಕೂ ಒಂದು ಕೃತಿಯ ಹರವಿನಲ್ಲಿ ಒಳ್ಳೆಯದು ಕೆಟ್ಟದ್ದು ಸೇರಿಯೇ ಬಂದಿರುತ್ತದಲ್ಲವೆ? ಹಾಗೆ ಬಂದಾಕ್ಷಣ ಅದೇ ಕೃತಿಕಾರನ ನಿಲುವೂ ಆಗಬೇಕೆಂದೇನೂ ಇಲ್ಲ. ಹಾಗಾದರೆ ಹೆಣ್ಣನ್ನು ಹೇಗೆ ಪರಿಗಣಿಸಬೇಕು? ಹೆಣ್ಣಿನ ಅವಗುಣಗಳನ್ನು ವರ್ಣಿಸಿದರೆ ಸ್ತ್ರೀ ವಿರೋಧಿಯೆಂದೂ, ಆದರ್ಶಗಳನ್ನು ಚಿತ್ರಿಸಿದರೆ ಸನಾತನ ವ್ಯವಸ್ಥೆ ಆರಾಧಕನೆಂದೂ ಬ್ರ್ಯಾಂಡ್ ಮಾಡುವುದು ಸರ್ವೇಸಾಮಾನ್ಯ. ಕನಕದಾಸರಿಗೆ ಈ ಭಯವಿಲ್ಲ. ಯಾಕೆಂದರೆ ನಿರ್ಮಲ ಚಿತ್ತದಿಂದ ಅವರು ಹೆಣ್ಣಿನ ಮಾದರಿಗಳನ್ನಷ್ಟೇ ಕೊಟ್ಟಿದ್ದಾರೆ. ಸಾಮಾನ್ಯವಾಗಿ ಸ್ತ್ರೀವಾದದ ನೆಲೆಯಿಂದ ನೋಡುವ 'ಮಾತೃ' ಸಂಸ್ಕೃತಿಯಲ್ಲಿ ಮಹಿಳೆಯರು ಹೆಚ್ಚು ದಕ್ಷರು, ಪ್ರಾಮಾಣಿಕರು, ಹೊಣೆಗಾರಿಕೆಯನ್ನು ಸಮರ್ಥವಾಗಿ ನಿಭಾಯಿಸಬಲ್ಲವರು ಎಂಬ ಮಾತುಗಳು ಕೇಳಿಬರುತ್ತವೆ. ಇದರಲ್ಲಿ ಅನುಮಾನಿಸುವುದೇನೂ ಇಲ್ಲ. ಆದರೆ ಇದು ಪುರಾತನ ಕಾಲದ ನಿಜ. ಆದರೆ ಇಂದಿಗೆ ಇದೇ ಮಾತನ್ನು ಹೇಳಲಾದೀತೆ? ಇಂದಿನ ಸಾಮಜಿಕ ಜೀವನದ ಮುಂಚೂಣಿಯಲ್ಲಿರುವ ಮಹತ್ವದ ಮಹಿಳೆಯರು ಅದರಲ್ಲೂ ಮಹಿಳಾ ರಾಜಕಾರಣಿಗಳು ಇದನ್ನು ಹುಸಿ ಮಾಡಿಬಿಟ್ಟಿದ್ದಾರೆ. ಸುಷ್ಮಾ ಸ್ವರಾಜ್, ಕನಿಮೋಳಿ, ವಸುಂಧರಾ ರಾಜೇ, ಸ್ಮೃತಿ ಇರಾನಿ, ಜಯಲಲಿತಾ ಮುಂತಾದ ಮುಖ್ಯ ಧಾರೆಯ ರಾಜಕಾರಣಿಗಳ ಮೇಲೆ ಹೊರಿಸಿರುವ ಆಪಾದನೆಗಳು ನಮ್ಮ ಕಣ್ಣೆದುರೇ ಕುಣಿದಾಡುತ್ತಿರುವಾಗ ಹೆಣ್ಣಿನ ವಾಸ್ತವ ಮತ್ತು ಆದರ್ಶ ಎಂಬೆರಡು ಮಾದರಿಗಳನ್ನು ನೀಡುವುದು ತಪ್ಪಾಗುತ್ತದೆಯೇ? ಹೇಳಿದವರೆಲ್ಲ ಮಹಿಳಾ ವಿರೋಧಿಗಳಾಗಿ ಕಾಣಿಸುತ್ತಾರೆಯೇ?

ಕನಕದಾಸರು ಚಿತ್ರಿಸಲು ಹೊರಟಿರುವ ಸ್ತ್ರೀ ಪಾತ್ರವೆಂದರೆ ವಾಸ್ತವದಲ್ಲಿ ನಾವೆಲ್ಲರೂ ಕಾಣುವ, ನಮ್ಮ ಅನುಭವಕ್ಕೇ ವೇದ್ಯವಾಗುವ ಗುಣಾವಗುಣಗಳ ಮೊತ್ತ. ಅವರಿಗೆ ಸ್ತ್ರೀನಿಂದನೆಯೇ ಪ್ರಮುಖವಲ್ಲ, ಅದು ಅವರ ಉದ್ದೇಶವೂ ಅಲ್ಲ, ಸಮಾಜದಲ್ಲಿ ಗಂಡು ಮತ್ತು ಹೆಣ್ಣು ಎರಡೂ ಎರಡು ಕಣ್ಣುಗಳಿದ್ದಂತೆ.

ಯಾವ ಕಣ್ಣಿಗೆ ಪೆಟ್ಟಾದರೂ ದೃಷ್ಟಿ ಅಷ್ಟರ ಮಟ್ಟಿಗೆ ಊನವೇ. ಕನಕರಿಗೆ ಈ ಅರಿವು ಇದೆ. ಅವರು ಅವಗುಣಗಳ ಹೆಣ್ಣುಗಳೆದುರು ದಮಯಂತಿಯಂಥಾ ಒಳ್ಳೆಯ ಸ್ವಭಾವದ ಹೆಣ್ಣಿನ ವರ್ಣನೆ ನೀಡುವುದೂ ಈ ಉದ್ದೇಶದಿಂದಲೇ. ಹಾಗೆ ನೋಡಿದರೆ ಅವರೇನೂ ನಳನನ್ನು ಪವಿತ್ರನೆಂಬಂತೇನೂ ಚಿತ್ರಿಸುವುದಿಲ್ಲ. ಜೂಜಾಡುವ, ಕಾಡಿನಲ್ಲಿ ಹೆಣ್ಣನ್ನು ಒಂಟಿಯಾಗಿ ಬಿಟ್ಟು ಹೋಗುವ ಕಟುಕನಂತೆಯೂ ಚಿತ್ರಿಸುತ್ತಾರೆ. ಅವನ ಕಷ್ಟ, ದಮಯಂತಿಯ ಕಷ್ಟ ಎರಡನ್ನೂ ಸಮಸ್ಥಿತಿಯಲ್ಲೇ ನೋಡುತ್ತಾರೆ. ಸಮಾಜದ ಸ್ವಾಸ್ಥ್ಯಕ್ಕೆ ಸ್ತ್ರೀ ಪುರುಷರಿಬ್ಬರ ಸಹಕಾರವೂ ಮುಖ್ಯ ಎಂಬ ಸಂದೇಶವನ್ನೂ ನೀಡುತ್ತಾರೆ. ಹಾಗೆ ನೋಡಿದರೆ ಅವರಿಗೆ ದಮಯಂತಿಯ ಮೇಲಿರುವಷ್ಟು ಮರುಕ ನಳನ ಮೇಲಿಲ್ಲವೆಂದೇ ಹೇಳಬೇಕು. ಸನಾತನವೆಂದಾಕ್ಷಣ ಅಲ್ಲಿನ ಮೌಲ್ಯಗಳೆಲ್ಲವೂ ಪ್ರತಿಗಾಮಿ ಎಂದೇನೂ ಭಾವಿಸುವ ಅಗತ್ಯ ಇಲ್ಲ. ಅದನ್ನು ಯಾವ ಮಾನದಂಡದಿಂದ ನೋಡುತ್ತೇವಂಬುದೇ ಮುಖ್ಯ. ಗಾಂಧೀಜಿ ಸನಾತನ ಆದರೆ ಆತ ಪುರೋಗಾಮಿ. ಹಿಂದುತ್ವ ವಾದಿಗಳೂ ಸನಾತನರೇ ಆದರೆ ಅವರದ್ದು ಪ್ರತಿಗಾಮೀ ನೋಟ. ಈ ಭಿನ್ನತೆಗಳನ್ನು ಗಮನದಲ್ಲಿಟ್ಟುಕೊಂಡೇ ಕನಕರನ್ನು ನೋಡಬೇಕಾಗುತ್ತದೆ. ಬಹುಶಃ ಕನಕರ ಸನಾತನತೆ ಇರುವುದು ಈ ಪುರೋಗಾಮಿ ಅರ್ಥದಲ್ಲಿದ್ದಿರಬಹುದೆ?

## 4. ಕನಕ ಸಾಹಿತ್ಯ ಮಹಿಳಾ ಪಾತ್ರಗಳು ಹೆಣ್ತನದ ಕಣ್ಣಲ್ಲಿ

–ಡಾ.ಎಚ್.ಎಸ್. ಅನುಪಮಾ

16ನೇ ಶತಮಾನದ ವೈಷ್ಣವ ಪಂಥದ ಭಕ್ತ ಕವಿ ಕನಕರ ವ್ಯಕ್ತಿತ್ವ ಮತ್ತು ಸಾಹಿತ್ಯ ಇತ್ತೀಚೆಗೆ ಬಹುಚರ್ಚಿತವಾಗುತ್ತಿದೆ. ಅಂತರಂಗ–ಬಹಿರಂಗವೆನ್ನದೆ ಮನುಷ್ಯ ಜೀವಿಯನ್ನು ಬಾಧೆಗೊಳಪಡಿಸುವ ಸಕಲ ವಿಷಯಗಳನ್ನೂ ಬಹುಸೂಕ್ಷ್ಮವಾಗಿ ವಿಮರ್ಶಿಸಿದ ಕನಕರು ವ್ಯವಸ್ಥೆಯ ತಾರತಮ್ಯ, ಜಾತಿವ್ಯವಸ್ಥೆಯ ಸಿಂಧುತ್ವವನ್ನು ನೇರವಾಗಿ, ಪರೋಕ್ಷವಾಗಿ ಇಷ್ಟದೈವದೆದುರು ದೂರಿದರು. 11–12ನೇ ಶತಮಾನದ ವಚನಕಾರರು ತಮ್ಮ ವಚನಗಳಲ್ಲಿ ತಾರತಮ್ಯವನ್ನು ನೇರವಾಗಿ ಹೇಳಿದ್ದರೆ; ಮೂರ್‍ನಾಲ್ಕು ಶತಮಾನ ನಂತರ ಬಂದ ಕನಕರು ಹೇಳಲೇಬೇಕಾದ ಸತ್ಯಗಳನ್ನು ಆಧ್ಯಾತ್ಮಿಕ ಪರಿಭಾಷೆಯಲ್ಲಿ ಕೀರ್ತನೆಗಳಾಗಿ ಹಾಡಿದರು. ಜನಪದದ ಲಯ–ಮಟ್ಟು–ಪದ–ಪರಿಭಾಷೆಗಳನ್ನು ತಮ್ಮ ಕೀರ್ತನೆ ಮತ್ತು ಕಾವ್ಯಗಳಲ್ಲಿ ಯಶಸ್ವಿಯಾಗಿ ಅಡಕಗೊಳಿಸಿದ ಕನಕ ಸಾಹಿತ್ಯ ಒಂದೇಟಿಗೆ ಆಪ್ತವೂ, ಅರ್ಥಪೂರ್ಣವೂ ಎನಿಸಿಬಿಡುತ್ತದೆ. ಈ ಕಾರಣಕ್ಕಾಗಿ ಕವಿಯಾಗಿ, ಕೀರ್ತನೆಗಾರರಾಗಿ ಅವರ ರಚನೆಗಳು ಇಂದಿಗೂ ಜನಪ್ರಿಯಾಗಿವೆ.

ಉಡುಪಿಯ ಕೃಷ್ಣನ ಮೂರ್ತಿಯನ್ನೇ ತಿರುಗಿಸಿದ ಭಕ್ತಿ ಮಹಿಮೆಯ ಜನಜನಿತ ಕತೆಯನ್ನು ಇಂದು ಹೊಸ ಬೆಳಕಿನಲ್ಲಿ ನೋಡಬೇಕಾದ ರಾಜಕೀಯ ಅನಿವಾರ್ಯತೆಯಿರುವ ಹೊತ್ತಿನಲ್ಲಿ ಕನಕರ ಕಾಲ, ಆ ಕಾಲದ ಸಾಮಾಜಿಕ

ವಾತಾವರಣ, ಅವರ ಜೀವನಚರಿತ್ರೆ, ಕೃತಿಗಳನ್ನೆಲ್ಲ ಮತ್ತೆ ಅವಲೋಕಿಸಿ ಪುನರ್‌ರೂಪಿಸಿಕೊಳ್ಳಬೇಕಾದ ಅವಶ್ಯಕತೆಯಿದೆ. ಈ ಹಿನ್ನೆಲೆಯಲ್ಲಿ ಅವರ ಮಾನವಪರತೆ, ಮಹಿಳಾಪರತೆ ವಿಶ್ಲೇಷಣೆಗೊಳಗಾಗುತ್ತಿವೆ.

ಕನಕರಷ್ಟೇ ಅಲ್ಲ, ಇವತ್ತು ನಮ್ಮೆಲ್ಲ ಪುರಾತನರು, ಅವರ ಕಲೆ–ಸಾಹಿತ್ಯ–ತತ್ವಗಳು ಜೀವಪರವಾಗಿವೆ ಎನ್ನಲು ಎರಡು ಅಗ್ನಿಪರೀಕ್ಷೆಗಳನ್ನು ಹಾದು ಬರಬೇಕಾಗಿದೆ:

–ಅವರು/ಅವರ ಸಂವೇದನೆಗಳು ಶೋಷಿತಪರ, ಅಧಿಕಾರಹೀನರ ಪರವಾಗಿಯೇ?

–ಅವು ಲಿಂಗ ಅಸಮಾನತೆ, ತಾರತಮ್ಯ ಗುರುತಿಸುವ ಲಿಂಗಸೂಕ್ಷ್ಮತೆಯನ್ನು ಹೊಂದಿವೆಯೇ?

ಕನಕ ಸಾಹಿತ್ಯವನ್ನೂ ಈ ಎರಡು ನೆಲೆಗಳಿಂದ ನೋಡುವ ಅವಶ್ಯಕತೆಯಿದೆ.

ನ್ಯಾಯಸೂಕ್ಷ್ಮದ, ಸಾಮಾಜಿಕ ನ್ಯಾಯದ ಪ್ರಶ್ನೆಗಳನೆತ್ತುವ ಮೂಲಕ ಮೊದಲ ಅಗ್ನಿಪರೀಕ್ಷೆಯನ್ನು ಕನಕರು ಹಾದು ಬಂದಿದ್ದಾರೆ. ವೈಷ್ಣವ ಪಂಥ ಮತ್ತು ದಾಸಕೂಟ/ವ್ಯಾಸಕೂಟದ ಪ್ರಭಾವದಿಂದ ಅವರ ಚಿಂತನೆಗಳಿಗೆ ಕೊಂಚ ವೈದಿಕ ಮಿತಿ ಆವರಿಸಿಕೊಂಡಿದ್ದರೂ, ಜಾತಿ ಅಸಮಾನತೆಯ ವಿರುದ್ಧ ಉಳಿದವರಿಗಿಂತ ಭಿನ್ನವಾಗಿ, ಸ್ಫುಟವಾಗಿ ಆಡಿದ್ದಾರೆ. ಸಮಾಜದ ತಾರತಮ್ಯಗಳನ್ನು ಸೃಜನಶೀಲವಾಗಿ ರಾಮಧ್ಯಾನಚರಿತೆಯಲ್ಲಿ ಮಂಡಿಸಿದ್ದಾರೆ. ವಂಚಿತನಿಗೆ ಬೇಕಿರುವುದು ಕಾಲ ಮತ್ತು ಅವಕಾಶವೇ ಹೊರತು ಪಕ್ಷಪಾತವಲ್ಲ ಎಂದು ರಾಗಿಯ ಬಾಯಲ್ಲೇ ನುಡಿಸಿದ್ದಾರೆ.

ಆದರೆ ಇದೇ ಮಾನವಪರತೆ ಲಿಂಗಸೂಕ್ಷ್ಮ ವಿಷಯಗಳ ಬಗೆಗೆ ಕಾಣುವುದಿಲ್ಲ. ಕನಕರಲ್ಲಷ್ಟೇ ಅಲ್ಲ, ಸಾಮಾಜಿಕ ತಾರತಮ್ಯ ವಿರೋಧಿಸಿ, ಮೇಲ್ಜಾತಿ ಪಾರಮ್ಯವನ್ನು ಪ್ರಶ್ನಿಸಿ, ಜಾತಿನಾಶ ಪ್ರತಿಪಾದಿಸುವ ಬಹುತೇಕ ಪುರಾತನ ಹಾಗೂ ಸಮಕಾಲೀನ ಚೇತನಗಳು ಲಿಂಗತಾರತಮ್ಯ ವಿಷಯಕ್ಕೆ ಬಂದರೆ ಅದರ ವಿರುದ್ಧ ದನಿಯೆತ್ತುವುದಿರಲಿ, ಗ್ರಹಿಸಿರುವುದಕ್ಕೆ ಪುರಾವೆ ಸಿಗುವುದೂ ಕಷ್ಟವಾಗಿದೆ. ಏಕೆಂದರೆ ಪುರುಷಾಧಿಕಾರವನ್ನೆಲ್ಲ ಅನುಭವಿಸುವ ಗಂಡಿಗೆ ಲಿಂಗತಾರತಮ್ಯ ಅನುಭವಕ್ಕೆ ಬರುವುದು ಸುಲಭವಲ್ಲ. ಆ ದೃಷ್ಟಿಯಿಂದ ಚಳವಳಿಯೊಂದನ್ನು ರೂಪಿಸುತ್ತಲೇ ಅದರಲ್ಲಿ ಎಲ್ಲ ಸಮುದಾಯದ ಮಹಿಳೆಯರನ್ನೊಳಗೊಂಡ ಬಸವಣ್ಣ, ಜ್ಯೋತಿಬಾ ಫುಲೆ ಮತ್ತು ಅಂಬೇಡ್ಕರ್ ಮೇಲ್ಪಂಕ್ತಿಯಲ್ಲಿ ನಿಲ್ಲುತ್ತಾರೆ. ನಂತರ ಬುದ್ಧ, ಅಲ್ಲಮ, ರಾಮಕೃಷ್ಣ ಪರಮಹಂಸ ಇನ್ನಿತರರು ಕಣ್ಣೆದುರು ಸುಳಿಯುತ್ತಾರೆ.

ಇವರ ನಡುವೆ ಕನಕರು ಎಲ್ಲಿದ್ದಾರೆ? ನಮ್ಮೆದುರಿರುವ ಕನಕರ ಎರಡು ರೂಪಗಳಾದ ಭಕ್ತ ಕನಕ ಮತ್ತು ಕವಿ ಕನಕರು ಮಹಿಳಾ ವ್ಯಕ್ತಿತ್ವ ಪ್ರತಿಪಾದನೆಯನ್ನು ಹೇಗೆ ಮಾಡಿದ್ದಾರೆ? ಎಂದು ಪರಿಶೀಲಿಸುವುದು ಈ ಬರಹದ ಉದ್ದೇಶವಾಗಿದೆ.

16ನೇ ಶತಮಾನದಲ್ಲಿ ಬದುಕಿದ ಕನಕರು 21ನೇ ಶತಮಾನದ ಸ್ತ್ರೀಪರ ಧೋರಣೆಗಳನ್ನು ಹೊಂದಿರಬೇಕೆಂದು ಬಯಸುವುದು ಸರಿಯಲ್ಲ. ಅಥವಾ ಇವತ್ತಿನ ಸ್ತ್ರೀಕೇಂದ್ರಿತ ದೃಷ್ಟಿಕೋನದಿಂದ ಅವರನ್ನು, ಅವರ ಸಾಹಿತ್ಯವನ್ನು ಅಳೆಯುವುದೂ ಸರಿಯಲ್ಲ. ಆದರೆ 21ನೇ ಶತಮಾನದಲ್ಲಿದ್ದರೂ ಹೆಜ್ಜೆಹೆಜ್ಜೆಗೂ ಲಿಂಗತಾರತಮ್ಯ ಅನುಭವಿಸುವಾಗ ಅದನ್ನು ಗುರುತಿಸುವ, ಮೂಲ ಎಲ್ಲಿದೆಯೆಂದು ಶೋಧಿಸುವ ನಾವು ಕನಕರನ್ನು ಪುರಾನತರೆಂಬ ಭಕ್ತಿಭಾವದಲ್ಲಷ್ಟೇ ನೋಡಬಾರದು. ಅಂದಿಗೆ ಕುಲಕುಲಕುಲವೆಂದು ಹೊಡೆದಾಡದಿರಿ ಎಂದು ಅಪರೂಪದ ತತ್ವ ಬೋಧಿಸಿದ ಕನಕರು ಹೆಣ್ಣನ್ನು ಹೇಗೆ ಪರಿಭಾವಿಸಿದ್ದರು ಎಂದು ಚಿಕಿತ್ಸಕ ದೃಷ್ಟಿಯಿಂದಲೇ ನೋಡಬೇಕು.

ಇದು ಸ್ತ್ರೀವಾದಿ ದೃಷ್ಟಿಕೋನ ಎಂದು ಒಂದು 'ವಾದ'ಕ್ಕೆ ಸೀಮಿತಗೊಳ್ಳದಿರಲಿ. ಇದು ಹೆಣ್ತನದ ದೃಷ್ಟಿಕೋನ, ಜೀವಪರ ದೃಷ್ಟಿಕೋನ. ಹೆಣ್ತನ ಎನ್ನುವುದು ಜೈವಿಕ ಸತ್ಯವಷ್ಟೇ ಅಲ್ಲ, ತಿಳಿವಿನ ಸತ್ಯವೂ ಹೌದು. ಹೆಣ್ತನ ಎಂದರೆ ಪುರುಷ ದ್ವೇಷವಲ್ಲ. ಪುರುಷ ಪರಮಾಧಿಕಾರದ ಬದಲು ಮಹಿಳಾ ಪರಮಾಧಿಕಾರ ಸ್ಥಾಪಿಸಬಯಸುವ ಮನಸ್ಥಿತಿಯೂ ಅಲ್ಲ. ಹೆಣ್ತನವು ಗಂಡನ್ನು ಸದಾ ಬಯಸುತ್ತದೆ: ಗಂಡು ಇರುತ್ತಾನೆ, ಇರಬೇಕು ಜೊತೆಯಾಗಿ–ಸಖನಾಗಿ, ಮಗನಾಗಿ, ತಂದೆಯಾಗಿ, ಸಮನಾಗಿ; ಯಜಮಾನನಾಗಿ ಅಲ್ಲ. ಅಲ್ಲಿ ಗಂಡೆನ್ನುವುದು ಹೆಮ್ಮೆಯ ವಿಷಯವಲ್ಲ. ಹೆಣ್ಣೆನ್ನುವುದು ಅವಮಾನದ ವಿಷಯವೂ ಅಲ್ಲ.

ಜನಪದ ಸಂವೇದನೆಯಿರಲಿ, ವೇದಕಾಲದ ಮಾದರಿಯಿರಲಿ, ಇವತ್ತಿನ ಮಾನವ ಹಕ್ಕು ಪ್ರತಿಪಾನದೆಯ ಸಮಾಜವಿರಲಿ–ಹೆಣ್ಣನ್ನು, ಹೆಣ್ಣು ವ್ಯಕ್ತಿತ್ವವನ್ನು ಗ್ರಹಿಸುವ ಎರಡು ಮುಖ್ಯ ಮಾದರಿಯನ್ನು ಡಿ.ಆರ್. ನಾಗರಾಜ್ ಸೇರಿದಂತೆ ಬಹುಪಾಲು ವಿಮರ್ಶಕರು ಗುರುತಿಸಿದ್ದಾರೆ.

–ಮೊದಲನೆಯದು ವೇದಕಾಲದ ಗೃಹದೇವತೆಯ ಮಾದರಿ ಅಥವಾ ಜನಪದರ ಗರತಿಯ ಮಾದರಿ ಅಥವಾ ಆಧುನಿಕ ಸಮಾಜದ ಫೀಲ್‌ಗುಡ್ ಹೌಸ್‌ವೈಫ್ ಮಾದರಿ. ಈ ಮಾದರಿಯ ಹೆಣ್ಣು ತನಗೆ ದತ್ತವಾಗಿರುವ ಪಾತ್ರವನ್ನು ಸಂಪೂರ್ಣ ಒಪ್ಪಿ ನಡೆಯುತ್ತಾಳೆ. ತನ್ನ ಪಾತ್ರವನ್ನು ತನ್ಮಯಳಾಗಿ ನಿಭಾಯಿಸುತ್ತಾಳೆ. ಮಗಳು, ತಂಗಿ, ಅಮ್ಮ, ಸತಿ, ಸಖಿ, ಯಜಮಾನಿ, ದೇವದಾಸಿ–ಹೀಗೆ ಯಾವ ಪಾತ್ರವೇ ದೊರೆಯಲಿ, ಎಲ್ಲ ಕಡೆ ಸಾಂಪ್ರದಾಯಿಕ ಚಹರೆಗಳನ್ನು ಪ್ರದರ್ಶಿಸಿ, ಪ್ರತಿಪಾದಿಸಿ ಹಾಗೇ ಬದುಕುತ್ತಾಳೆ.

–ಎರಡನೆಯದು ವೇದ ಕಾಲದ ಗಾರ್ಗಿ ಮಾದರಿ, ಜನಪದರ ಗಯ್ಯಾಳಿ ಮಾದರಿ ಅಥವಾ ಇವತ್ತಿನ ಹಕ್ಕುಪ್ರಜ್ಞೆ ಜಾಗೃತಗೊಂಡ ಸ್ತ್ರೀವಾದಿ ಮಾದರಿ. ಅದು ಪ್ರಖರ ವೈಚಾರಿಕ ಮಾದರಿ. ಅದು ಅನ್ಯಾಯವೆನಿಸುವ ಎಲ್ಲವನ್ನು ಉಗ್ರವಾಗಿ ಪ್ರತಿಭಟಿಸುತ್ತದೆ, ಪ್ರಶ್ನಿಸುತ್ತದೆ, ವಿಷಾದಗೊಳ್ಳುತ್ತಲೇ ತನ್ನಂತಹ ಇತರರ ಬಗೆಗೆ

ಯೋಚಿಸುತ್ತದೆ. ಅದಕ್ಕೆ ತನ್ನ ಬುದ್ಧಿವಂತಿಕೆ ಬಗೆಗೆ ಅಪಾರ ಹೆಮ್ಮೆ. ಅಧಿಕಾರವು ಯಾವುದನ್ನು, ಯಾವ ಗುಣ ಸ್ವಭಾವಗಳನ್ನು ಹೆಣ್ಣಿಗೆ ಶೋಭೆಯಲ್ಲ ಎಂದು ವಿವರಿಸುವುದೋ ಅದನ್ನು ಒಂದು ಅತಿಗೆ ಒಯ್ಯುತ್ತದೆ. 'ಹೆಣ್ಣು ಚಂಚಲೆ, ಚಪಲೆ, ಅವರ ಬುದ್ಧಿ ಮೊಣಕಾಲ ಕೆಳಗೆ, ನೈತಿಕತೆ ಕಡಿಮೆ, ಮುಂತಾದ ಗುಣವಿಶೇಷಣೆಗಳನ್ನು ಅಲ್ಲಗಳೆದು ಅಥವಾ ಅತಿಗೊಯ್ದು ಅದನ್ನೇ ಸರಿಯೆಂದು ಸಾಧಿಸಿತೋರುವ ಮಾದರಿ ಇದು.

ಈ ಎರಡು ಮಾದರಿಗಳಲ್ಲಿ ಗಾರ್ಗಿ-ಗಂಟ್ಯಾಳಿಯರ ಒಂದು ಉದಾಹರಣೆಯೂ ಕನಕರ ಸಾಹಿತ್ಯದಲ್ಲಿ ಕಂಡುಬರುವುದಿಲ್ಲ. ಭಕ್ತಿ ನೆಲೆಯಲ್ಲಿಯೂ 'ಗಾರ್ಗಿ' ಮಾದರಿಯ ಹೆಣ್ಣಿನ ಚಿತ್ರಣ ಸಾಧ್ಯವಿತ್ತು. ಆದರೆ ಅದನ್ನು ಕನಕರೇ ಕೈಯಾರ ಬಿಟ್ಟುಕೊಟ್ಟಿದ್ದಾರೆ. ದೇವನೆದುರು ಸಮಾನತೆಗಾಗಿ ಬಂಡೆದ್ದ ಹೆಣ್ಣು ಅವರ ಕಲ್ಪನೆಯಲ್ಲಿರಲಿಕ್ಕಿಲ್ಲ. ಅವರ ಹೆಣ್ಣು ಪಾತ್ರಗಳೆಲ್ಲ ಗರತಿಯ ಮಾದರಿಯವೇ.

**ಕನಕರ ಭಕ್ತಿ ಸಾಹಿತ್ಯದಲ್ಲಿ ಹೆಣ್ಣು**

ಹಾಗೆ ನೋಡಿದರೆ ಭಕ್ತಿಗೆ ನಿರ್ಲಿಂಗೀ ಸಂವೇದನೆಯಿರಬೇಕು. ಆದರೆ ಭಕ್ತಿಯನ್ನು ಸ್ತ್ರೀ ಸಂವೇದನೆ ಎಂದು ಗುರುತಿಸಲಾಗಿದೆ. ಹೆಣ್ಣೇ ಆಗಿಬಿಡುವುದು ಭಕ್ತಿ ಮಾರ್ಗದ ಮಾದರಿ. ದೇಶಕಾಲ ಭೇದವಿಲ್ಲದೆ ಹಾಫಿಜ್-ರೂಮಿ-ಬಸವಾದಿ ಶರಣರೆಲ್ಲ ತಮ್ಮನ್ನು ಹೆಣ್ಣೆಂದು, ದೇವರನ್ನು ಗಂಡೆಂದು ಭಾವಿಸಿದ್ದಾರೆ. ಆದರೆ ಅದರಲ್ಲೂ ಸಮಸ್ಯೆಗಳಿವೆ. ಏಕೆಂದರೆ ಭಕ್ತಿ ಎಂಬ ನೆಲೆಯೇ ಸಮರ್ಪಣಾಭಾವ, ಶರಣಾಗತಿ, ಅನುಯಾಯಿತ್ವವನ್ನು ಅಪೇಕ್ಷಿಸುವಂಥದು. ಭಕ್ತಿಯ ನೆಲೆ ಉದ್ದೀಪಿಸುವ ಶರಣಾಗತಿಗೆ ಅದನ್ನು ಸ್ತ್ರೀತ್ವದೊಡನೆ ಸಮೀಕರಿಸಿ ನೋಡುವುದು ಲಿಂಗರಾಜಕಾರಣದ ಇನ್ನೊಂದು ಮುಖ. ಶರಣ ಸತಿ, ಲಿಂಗಪತಿ ಎಂದು ವಚನಕಾರರು ಹೇಳಿದಂತೆ ಕನಕರ ಎಷ್ಟೋ ಕೀರ್ತನೆಗಳಲ್ಲಿ ತನ್ನನ್ನು ಹೆಣ್ಣೆಂದು, ಆದಿಕೇಶವ ಗಂಡೆಂದು ಭಾವಿಸಿ ವಿರಹದಿಂದ ಪರಿತಪ್ಪಿಸುತ್ತಿರುವ ಹೆಣ್ಣಿಂಬಂತೆ ಚಿತ್ರಿಸಿಕೊಂಡ ರಚನೆಗಳಿವೆ. ಹೀಗೆ ಕನಕರು 'ಅರಿವಿನ ಹೆಣ್ತನ' ಅನುಭವಿಸಿದ್ದಾರೆ.

ಆದರೆ 'ಅರಿವಿನ ಹೆಣ್ತನ' ಸ್ತ್ರೀ ಪುರುಷ ಸಮಾನತೆಯ ಪ್ರಶ್ನೆ ಹುಟ್ಟಿಸಲಿಲ್ಲ. ಅವರಿಗಿಂತ ಮೂರ್ನಾಲ್ಕು ನೂರು ವರುಷ ಮೊದಲು, ಜನಪದರ ನಡುವೆ ತಿರುಗಿ, ತತ್ವ ಹೇಳಿ ಬಾಳಿದ ಶಿವಶರಣ-ಶಿವಶರಣೆಯರ ನೆಲವೇ ಕನಕರ ಕರ್ಮಭೂಮಿಯಾಗಿದ್ದರೂ ಶಿವಶರಣರ ಚಿಂತನೆಯ ಪ್ರಭಾವ ಅವರ ಮೇಲೆ ಆದಂತಿಲ್ಲ. ಭಕ್ತಿಯಲ್ಲಾಗಲೀ, ಭವದಲ್ಲಾಗಲೀ ಶಿವಶರಣೆಯರು ಎತ್ತಿದ ಎಷ್ಟೊಂದು ವಿಷಯಗಳು ಕನಕರನ್ನು ಪ್ರಭಾವಿಸಿದಂತಿಲ್ಲ. ವಚನ ಚಳವಳಿಯಲ್ಲಿ ಮೇಲುಕೀಳೆನ್ನದೆ ಇಡಿಯ ಸಮಾಜ, ವಿಶೇಷವಾಗಿ ತಳಸಮುದಾಯಗಳು ತೊಡಗಿಕೊಂಡಿದ್ದಿರುವಾಗಲೂ ಶೈವ-ವೈಷ್ಣವ ಪಂಥಗಳ ತಿಕ್ಕಾಟ ಅವರನ್ನು ಆ ಚಿಂತನೆಗಳಿಂದ ದೂರವಿರಿಸಿತೇ ಎಂಬ ಅನುಮಾನ ಸುಳಿಯುತ್ತದೆ. ಅವರ

ಮೋಹನ ತರಂಗಿಣಿಯಲ್ಲಿ ತ್ರೇತಾಯುಗದ ದ್ವಾರಕಾಪುರಿಯ ವರ್ಣನೆಯಲ್ಲಿ 11ನೇ ಶತಮಾನದ ರಾಮಾನುಜರು ಬರುತ್ತಾರೆ, ಆದರೆ ಶಿವಭಕ್ತ ಬಾಣಾಸುರನ ನಗರಿಯಲ್ಲಿ ಶರಣರ ಸುಳಿವಿಲ್ಲ.

ಅವರ ರಚನೆಗಳಲ್ಲಿ ಪದೇಪದೇ ಪರಪುರುಷರಲ್ಲಿ ಅನುರಕ್ತಳಾದ ನಾರಿ, ಅಂಥವಳ ನಿಂದಿಸುವ ಮಾತು ಬರುತ್ತದೆ. ಅದರಲ್ಲೂ ಯಾರದೋ ಸ್ವತ್ತಾದ ಪರಸತಿ, ಪರಸ್ತ್ರೀಯರ ಕುರಿತೇ ಹೇಳಲಾಗಿದೆ. ಯಾರದೂ ಅಲ್ಲದ ಅಥವಾ 'ಪರ'ನ ಸ್ವತ್ತಲ್ಲದ ಹೆಣ್ಣು ಕೇವಲ ಭೋಗದ ವಸ್ತು. ಇದು ವಚನಗಳಲ್ಲೂ, ಬುದ್ಧನ ಬೋಧನೆಗಳಲ್ಲೂ ಕಂಡುಬರುವುದು ನೋಡಿದರೆ ಎಷ್ಟೆಲ್ಲ ಸಾಮಾಜಿಕ ನಿರ್ಬಂಧಗಳ ನಡುವೆಯೂ, ಮದುವೆಯೆಂಬ ಸಂಸ್ಥೆ ಹೆಣ್ಣಿಗೆ ಹೊರಿಸಿರುವ ಜವಾಬ್ದಾರಿ ಕಟ್ಟುಪಾಡುಗಳ ನಡುವೆಯೂ 'ಪರಪುರುಷ'ನೊಡನೆ ಸತಿ ಕೂಡುವುದು ಸರ್ವೇಸಾಮಾನ್ಯವಾಗಿದ್ದಿರಬೇಕು ಮತ್ತು ಅದು ಎಲ್ಲ ಕಾಲದ ಮಾನವ ಸಮಾಜದ ತಲ್ಲಣವಾಗಿರಬೇಕು ಎನಿಸುತ್ತದೆ. ಒಟ್ಟಾರೆ ಪ್ರಭಾವ, ಪಂಥಗಳ ಮಾತು ಒತ್ತಟ್ಟಿಗಿಟ್ಟು ನೋಡಿದರೂ ಭಕ್ತ ಕನಕರದು ಸಾಂಪ್ರದಾಯಿಕ ಸನಾತನ ಮಹಿಳಾ ಮಾದರಿಯಾಗಿಯೇ ಕಂಡುಬರುತ್ತದೆ.

ಒಟ್ಟಾರೆ ಭಕ್ತ ಕನಕನನ್ನು ಐಹಿಕವಾಗಿಯೋ, ಆಧ್ಯಾತ್ಮಿಕವಾಗಿಯೋ ಲಿಂಗ ಅಸಮಾನತೆ/ಲಿಂಗ ಪ್ರಶ್ನೆ ಕಾಡಿದಂತಿಲ್ಲ. ಅವರ ಕೆಲವು ಕೀರ್ತನೆ, ಕವಿತೆಗಳ ಸಾಲು ಹೀಗಿವೆ:

–ಸೋತು ಹೆಣ್ಣಿಗೆ ಹೆದರಿ ನಾಚುವ ಪುರುಷನ್ಯಾತಕೆ ಸನ್ನೆಯನರಿತು ನಡೆಯದಿರುವ ಸತಿಯು ಯಾತಕೆ

–ಹೇವವಿಲ್ಲದ ಹೆಣ್ಣು ಗಜುಗ ಬೆಳೆದಾ ಕಣ್ಣು ಗಂಡಗಂಜದ ನಾರಿ ಅವಳೇ ಹೆಮ್ಮಾರಿ

–ಪತಿವ್ರತೆಯರೆಂಬುವರು ಶತ ಸಹಸ್ರಕೊಬ್ಬರು/ಮಿತಿಮೀರಿ ಇಹರಯ್ಯ ಇತರ ಜನರು/

ಮತಿಗೆಟ್ಟು ಮನಸೋತು ಅನ್ಯ ಪುರುಷರ ಕೂಡಿ/ಗತಿಗೆಟ್ಟು ಹೋಗುವರು ಮೂರು ತೊರೆದು

–ಶರೀರ ಸೌಖ್ಯ ಶಮನಕ್ಕಾಗದ ಹೆಣ್ಣು ಊರಲ್ಲಿದ್ದರೇನು ತೌರಲಿದ್ದರೇನು?

–ಮಾನಿನಿಯ ಮನಸು ನಿಧಾನವಿರದಿರೆ ಮಾನಾಭಿಮಾನಗಳುಳಿದೀತೇ?

–ಮಡದಿ ನುಡಿಯ ಕೇಳಿ ಜಗಳಕೊಬ್ಬರ ಕೊಡೆ ಹೋಗಬಾರದು

–ಕಂಡರೆ ಸೇರದ ನಾರಿ ಕೆಂಡವನುಗುಳುವ ಮಾರಿ

ಉಂಡರೆ ಸೇರದ ತಾಯಿ ಉರಗನ ಮೆಕ್ಕೆ ಕಾಯಿ

–ಪತಿ ಸೇವೆಗಿಂದಧಿಕ ಸೇವೆಯುಂಟೆ?

ಇಂಥ ಸಾಲುಗಳು ಹೇರಳವಾಗಿದ್ದು ಇಲ್ಲೆಲ್ಲ ಸಾಂಪ್ರದಾಯಿಕ ಯೋಚನಾಕ್ರಮಕ್ಕಿಂತ ಕನಕರ ಗ್ರಹಿಕೆ ಭಿನ್ನವಾಗಿಲ್ಲ. 'ಮಗನಿಂದೆ ಗತಿಯುಂಟೆ ಜಗದೊಳು' ಎಂಬ ಕೀರ್ತನೆಯಲ್ಲಿ ಪುತ್ರನಿಲ್ಲದೆ ಗತಿಯಿಲ್ಲ ಎಂಬ ಸಾಂಪ್ರದಾಯಿಕ ನಂಬಿಕೆಯನ್ನು ಪ್ರಶ್ನಿಸಿ ಅದರಲ್ಲಿ ಹುರುಳಿಲ್ಲವೆಂದವರು, ತತ್ವಾಗಮಗಳ ಓದಿನಿಂದ ಗತಿ ದೊರೆಯುವುದೆಂದು ಪ್ರತಿಪಾದಿಸುತ್ತಾರೆ. ಒಂದು ವೇಳೆ ಮಗಳಿಂದಲೂ ಗತಿಯುಂಟು ಜಗದೊಳು ಎಂದು ಕನಕರೇನಾದರೂ ಹೇಳಿದ್ದರೆ ಆ ಒಂದೇ ಒಂದು ಸಾಲು ಸಾಕಿತ್ತು. ಅವರು ಆದರ್ಶ ಪುರಾತನರಾಗಿಬಿಡುತ್ತಿದ್ದರು.

ಆದರೂ,

–ಸಂಸಾರ ಸಾಗರವನುತ್ತರಿಸುವಡೆ/ಕಂಸಾರಿ ನಾಮವೊಂದೇ ಸಾಕು/ತನುವ ದಂಡಿಸಿ ತುದಿಯ ಕೋಡುಗಲ್ಲಿನ ಮೇಲೆ/ವನಿತೆಯನು ಬಿಟ್ಟು ತಪವಿರುವ ಬೇಡ ಎನ್ನುತ್ತಾರೆ.

–ಡಣಾಯಕನಾಗಿ ಯುದ್ಧ ಸೋತು, ವಿಜಯನಗರದವರ ಜೊತೆ ತನ್ನ ದೇಶಕೋಶ ಕಳಕೊಂಡು, ಹೆಂಡತಿಯ ತೌರಿನಲ್ಲಿದ್ದಾಗೆ ಅವಳೇ ಇವರ ತಳಮಳ ನೋಡಲಾರದೇ ದಾಸನಾಗಿಬಿಡು ಎಂದು ಹೇಳಿದವಳೆಂದು ಜೀವನಚರಿತ್ರೆ ಹೇಳುತ್ತದೆ. ಆದದ್ದೆಲ್ಲ ಒಳತೇ ಆಯಿತು ಎಂಬ ಕೀರ್ತನೆಯಲ್ಲಿ ದಂಡಿಗೆ ಬೆತ್ತವ ಹಿಡಿದು ಆದಿಕೇಶವನ ದಾಸನ್ನಾಗಿಬಿಡು ಎಂದು ಹೇಳಿದ ಹೆಂಡತಿ ಕುರಿತು ಗೋಪಾಲ ಬುಟ್ಟಿ ಹಿಡಿವುದಕೆ/ಭೂಪಾಲನೆಂದು ಗರ್ವಿಸುತಿದ್ದೆ/ಆ ಪತ್ನೀ ಕುಲ ಸಾಸಿರವಾಗಲಿ/ಗೋಪಾಲ ಬುಟ್ಟಿ ಹಿಡಿಸಿದಳಯ್ಯಾ ಎಂದು ಹಾರೈಸುತ್ತಾರೆ.

ಎಂದೇ ಇಷ್ಟು ಹೇಳಬಹುದು, ಕನಕರು ಖಂಡಿತ ಮಹಿಳಾ ವಿರೋಧಿಯಲ್ಲ..

**ಕವಿ ಕನಕರ ಕಣ್ಣಲ್ಲಿ ಹೆಣ್ಣು**

ಎಂದಿನಿಂದ ಹೆಣ್ಣಿನ ಕುರಿತು ಗಂಡಿಗಿರುವ ಕಾಮಾಸಕ್ತಿ, ಭೋಗಾಸಕ್ತಿಯ ನಿಲುವೇ ಕನಕರದೂ. ಅವರು ರಸಿಕ ಮತ್ತು ಸೌಂದರ್ಯಗ್ರಾಹಿ ಕವಿ. ಹೆಣ್ಣನ್ನು ಅವಳ ಅಂಗಾಂಗಳಿಂದಲೇ –ಮಿಕ್ಕೆಲ್ಲದಕ್ಕಿಂತ ಮೊಲೆಯ ಗಾತ್ರ ಸ್ವರೂಪಗಳಿಂದಲೇ ಅಳೆಯುತ್ತಾರೆ. ದಾಸರಾದ ಮೇಲೂ ಒಂದು ಕೀರ್ತನೆಯಲ್ಲಿ 'ಪೋಗದೋ ಚಳಿ ಪೋಗದೋ/ನಳಿನಾಕ್ಷಿಯ ತೊಡೆ ಮೇಗಡೆ ಇಟ್ಟು/ಕಳಸಕುಚದ ಮೇಲೆ ಕೈಯಿಕ್ಕಿದಲ್ಲದೆ' ಎನ್ನುತ್ತಾರೆ! ಉಬ್ಬಿದ ಕುಚದ್ವಯದಲ್ಲಿ ತಾನು ಮೂಡಿಸಿದ ನಖಚಂದ್ರನ ಲಾಂಛನವನ್ನು ಅವರ ಗಂಡುಪಾತ್ರಗಳು ಹೆಮ್ಮೆಯಿಂದ ನೋಡುತ್ತವೆ.

ಅವರ ಮೋಹನ ತರಂಗಿಣಿ ಒಂದು ಶೃಂಗಾರ ಕಾವ್ಯ. ಅಲ್ಲಿ ಹೆಣ್ಣು ಎಂದರೆ ಸೌಂದರ್ಯಾತಿಶಯ ಮತ್ತು ಗುಣಾತಿಶಯಗಳ ಮೊತ್ತ. ಅದನ್ನು ಬರೆದಾಗ ಅವರಿನ್ನೂ ದಾಸರಾಗಿರಲಿಲ್ಲ. 'ಹೆಣ್ಣು ಮಾಯೆ'ಯೆನಿಸಿರಲಿಲ್ಲ. ಸ್ತನದ್ವಯಗಳ ವಿವರಿಸಲಂತೂ ಕನ್ನಡದ ಎಷ್ಟೆಷ್ಟು ಉಪಮೆ, ಅಲಂಕಾರ, ಪದ, ನೆಪ ಹುಡುಕಿ ಎಳತಂದಿದ್ದಾರೋ?! ಕೊಡಮೊಲೆ, ಗಡಿಗೆಮೊಲೆ, ನಣ್ಮೊಲೆ, ಬಿಲ್ಮೊಲೆ, ಹೊನ್ನಮೊಲೆ, ದುಂಡುಮೊಲೆ, ಬಟ್ಟ ಬಲ್ಮೊಲೆ, ತೋರಮೊಲೆ, ಹೊಂದಾವರೆ ಮೊಗ್ಗು ಮೊಲೆ.. ಹೀಗೆ ಸಂಸ್ಕೃತ ನಾಚುವಷ್ಟು ಕನ್ನಡದ ನಾಮಪದ, ನಾಮವಿಶೇಷಣ, ಗುಣವಿಶೇಷಣಗಳು ಸುಳಿದುಹೋಗಿವೆ. ಆ ದೇಹಭಾಗದ ರೂಪ, ಗಾತ್ರ ಎಷ್ಟು ಮುಖ್ಯವೆಂದರೆ ರುಕ್ಮಿಣಿ ಕೃಷ್ಣನ ಬಳಿ, 'ಪುತ್ರನಿಲ್ಲದೆ ಸದ್ಗತಿಯಿಲ್ಲ. ನನಗೊಬ್ಬ ಪುತ್ರನ ಕೊಡು' ಎಂದು ಕೇಳಿದರೆ ಆ ಮಹರಾಯ, 'ಮಗುವಾದರೆ ಬಿರುಮೊಲೆ ಜರಿದು ಜೋಲು ಬೀಳುತ್ತಾವೆ' ಎಂದು ಬೇಡವೆನ್ನುತ್ತಾನೆ. ಅದಕ್ಕವಳು ಮಗು ಕುಡಿಯತೊಡಗಿದಾಗ ಸೊರ ಬಿಟ್ಟು ಮೊಲೆ ಇನ್ನೂ ಬಿಗಿಗೊಂಡು ದುಂಡಗೆ ಆಕರ್ಷಿಸುವುದು ಎಂದು ಅವನ ಒಪ್ಪಿಸಿ ಮಗುವನ್ನು ಪಡೆಯುತ್ತಾಳೆ! ಮೊಲೆ ಬಿದ್ದ ಹೆಣ್ಣಿನೊಳು ಮೋಹಕ್ಕೆ ಸೊಗಸಬಹುದೆ? ಎಂದು ಹೆಣ್ಣನ್ನು ಹಳಿಯಲು, ನಿರಾಕರಿಸಲು ಸ್ತನಕಾರಣ ಹೇಳುತ್ತಾರೆ. ತಮ್ಮ ಸಖಿಯರನಾಯ್ದುಕೊಳುವ ರಾಣಿಯರೂ ಗಮನ ಕೊಡುವುದು ತನ್ನಿನಿಯನನ್ನು ಸೆಳೆಯುವಂತಹ ಕೊಡಮೊಲೆಗಳು ಅವರಿಗಿವೆಯೇ ಇಲ್ಲವೇ ಎಂಬ ಬಗ್ಗೆ! ಒಟ್ಟಾರೆ ಗಂಡಿಗೆ ಎಣೆಯಿಲ್ಲದಷ್ಟು ಕಾಮಲೀಲೆಯ ಅವಕಾಶ, ಅವಶ್ಯಕತೆ ಎರಡೂ ಇದೆ; ಅದಕ್ಕೆಂದೇ ಹೆಣ್ಣುಗಳು ಸೃಷ್ಟಿಯಾಗಿದ್ದಾರೆ; ಹೆಣ್ಣಿನ ದೇಹ, ಬದುಕು, ಕ್ರಿಯೆಗಳೆಲ್ಲ ಕಾಮದಾಹ ತಣಿಸುವತ್ತಲೇ ಕೇಂದ್ರಿತವಾಗಿವೆ ಎನ್ನುವುದು ಕವಿ ಕನಕರ ಕಲ್ಪನೆ.

ಮೋಹನ ತರಂಗಿಣಿಯ ಸೌರಾಷ್ಟ್ರ ವರ್ಣನೆ, ದ್ವಾರಕಾಪುರದ ವರ್ಣನೆಗಳಲ್ಲಿ ಹಸ್ತಿನಿ–ಚಿತ್ತಿನಿ–ಶಂಖಿನಿ–ಪದ್ಮಿನಿ ಜಾತಿಯ ಸ್ತ್ರೀಯರ ವರ್ಣನೆ ತುಂಬಿದೆ. ಆ ಪುರಗಳು ಹೇಗಿವೆ? ಅಲ್ಲಿ ಏನೇನಿವೆ? ಯಾರ್‍ಯಾರಿದ್ದಾರೆ? ಏನು ಮಾಡುತ್ತಿದ್ದಾರೆ?

–ಸಡಿಲಿದ ಮುಡಿ, ಬೆವರ್ಮಣಿ ತುಂಬಿ ತೊಟ್ಟಿಕ್ಕುವ ಮುಖ, ಅಲುಗಾಡುವ ಮೊಲೆಗಳ ಗಂಧ ತೇಯುವ ಹೆಣ್ಣುಗಳಿರುವ ಅಂಗಡಿ..

–ರಾಗರಸದೊಳನವರತ ಕಾದಲರು ಸಂಭೋಗಕ್ಕೆ ಸಮವಾಗಲೆನುತ ಇರುವ ಪೋಡಿಯಡಕೆ ಅಂಗಡಿಗಳು

–ಕಾಂತಿಯುಕ್ತ ಕನ್ನೆಯರ ಚಿಗುರು ಮೊಲೆ ನೋಡಿ ನಗುನಗುತ್ತ ಎಳೆವೆರಳ ಚಿಟುಕೊತ್ತಿ ಬಳೆ ತೊಡಿಸುವ ಬಳೆಗಾರರು

–ಕೊಂಕು ಕಾಣಬೇಕಾದರೆ ಕೂದಲಿನಲ್ಲಿ, ತೊಂಡೆ ಹಣ್ತುಟಿಯಲ್ಲಿ, ಕುಟಿಲ ಕಾಂತೆಯರ ಗಡಿಗೆ ಮೊಲೆಗಳಲ್ಲಿ ಕಾಣಬಹುದೇ ವಿನಾ ಬೇರೆಡೆ ಕಂಡುಬರುವುದಿಲ್ಲ

ವೇಶ್ಯೆಯರ ಬಲ್ಮೊಲೆ ಹಿಡಿವರು. ಚೆಂದುಟಿಗಳ ಕಡಿವರು. ಚಿಗುರು ತುಟಿಯವರ ನಿರಿಗೆ ಸುಲಿವರೇ ವಿನಹ ಗರತಿಯರ ಮುಟ್ಟುವುದಿಲ್ಲ

–ಕಳಶಮೊಲೆ, ಬಾಹುಮೂಲದ ಕಂಕುಳು ಕಾಣುವಂತೆ ತೋಳೆತ್ತಿ ನೀರೆರೆವಾಗ ದಾಹ ಅಡಗಿದ್ದರೂ ಇನ್ನೂ ಕುಡಿವ ನೆಪದಲ್ಲಿ ಹೆಂಗಳ ಮುದ್ದುಮುಖ ನೋಡುವರು

–ಕಂಕುಳು ಒಡೆಯುವಂತಿರುವ ಭಾರಿ ಮೊಲೆಗಳ ಹೆಣ್ಣಾಳುಗಳ ರುಕ್ಮಿಣಿ ಸತ್ಯಭಾಮೆಯರು ತಮಗೆ ತಕ್ಕವರೆನಿಸಿದವರನ್ನು ತಂತಮ್ಮ ಪಕ್ಷಕ್ಕೆ ಹಂಚಿಕೊಂಡರು.

–ಉಟ್ಟುಬಟ್ಟೆ ತೊಯ್ದು ಬೊಗಸೆಗಣ್ಣ ಅಬಲೆಯರು ಶೈತ್ಯದಿಂದ ಗಡಗಡ ನಡುಗಿದರು ಮೊಲೆಗಳು ನರ್ತಿಸುವಂತೆ

–ಪ್ರಿಯಕರನ ಎದೆಯ ಧೈರ್ಯವನ್ನು ಮೊಲೆಗೂಡದಿಂದ ಮೊಗೆಯುವಂತೆ ಮೇಲಕ್ಕೆ ಹತ್ತಿ ಬಂದರು ಅಬಲೆಯರು

–ದುಂಬಿಗುರುಳ ಮೂರು ಸೀಳಾಗಿಸಿ ಗೋಪಾಂಗನೆಯರು ಜಡೆ ಹೆಣೆಯ ಅವು ಕೊಡಮೊಲೆಯ ಕೊಪ್ಪರಿಗೆಯ ನಿಧಿ ಕಾಯುವ ಸರ್ಪಗಳಂತೆ ಬೆನ್ನೇರಿದವು. ಆಯಿತು. ಪುರದ ಕನ್ಯೆಯರು, ಅರಮನೆಯ ನಾರಿಯರು ಹೀಗಿದ್ದರು. ಕನ್ಯೆದಿಲೆಯ ಕರಿ ಬಣ್ಣದಬಲೆಯರು, ವನದ ಚಿಂಚಿತಿಯರು, ರೈತ ಮಹಿಳೆಯರು ಹೇಗಿದ್ದರು?

–ಮದನ ಮಂದಿರದ ಬಾಗಿಲಿಗೆ ತೋರಣ ಕಟ್ಟಿದಂತೆ ತಳಿರ ಉಡುಗೆ ಕಂಗೊಳಿಸಲು ಹೃದಯ ಗೋಪುರದ ಜೋಡಿ ಕಳಶಗಳಂತೆ ಜೋಡಿ ಮೊಲೆಗಳಿದ್ದವು.

–ಕಲ್ಲರೆಗಳ ಮೇಲೆ ಧುಮ್ಮಿಕ್ಕಿ ನೃತ್ಯವಾಡುವ ಬಿದಿರಕ್ಕಿ ಕಟ್ಟುವ ಹೆಣ್ಣುಗಳ/ ತೋರ ನುಣ್ಮೊಲೆಯೆದೆ ದಿಗಿಲಾಂತು ಕಂಪಿಸಿತು

–ಹಾಡುವರು ಅಕ್ಕಿ ಮಾಡುವರು ಬೇಟಿ ನೋಡುವರು ಬಿಲ್ಲುಬಾಣ ಹಿಡಿದು ನಿಂತರು. ಬಗೆಬಗೆಯ ಭಂಗಿಗಳಲಿ ನಿಂದ ಚಂದದ ಹೆಣ್ಣುಗಳು ಅನಿರುದ್ಧನ ಕಂಡದ್ದೇ ಅವರಿಗೆ ತಂತಮ್ಮ ಗಂಡಂದಿರ ಮೇಲಿನ ಪ್ರೀತಿ ಮುರಿದು ಮೂರು ತುಂಡಾಯಿತು.

–ತುರುಬು ಹಾಗೂ ತೋರಮೊಲೆಯ ಭಾರದಿಂದ ಸಸಿಮಡಿ ಕಾವ ಬೇಡತಿಯರ ಬಡ ನಡು ಬಳುಕುತಿಹುದು

ಪುರವೋ, ವನವೋ, ಎಲ್ಲೂ ಹೆತ್ತುಹೆತ್ತು ಹೈರಾಣಾದ ಹೆಣ್ಣುಗಳು; ಗೇಯ್ದು ಮಾಸಿದ ಚಹರೆಗಳು; ಅಂಗವಿಕಲ, ಸುಂದರಿಯರಲ್ಲದ, ವೃದ್ಧ ಹೆಣ್ಣುಗಳು ಇಲ್ಲವೇ ಇಲ್ಲ. ವಾರಾಂಗನೆಯರ ಹಾಗೂ ವೇಶ್ಯೆಯರ ನಡೆನುಡಿ, ದೇಹಸಿರಿಯ ವರ್ಣನೆ ನೋಡಿದರೆ ದೇವದಾಸಿ ಪದ್ಧತಿ ಬಗೆಗಾಗಲೀ, ಆ ಹೆಣ್ಣುಗಳ ಕೊನೆಗಾಲದ ದುರಂತದ ಬಗೆಗಾಗಲೀ ಕವಿಗೆ ನೆನಪೇ ಇರುವಂತಿಲ್ಲ. ಯುದ್ಧ ಕುರಿತು, ವೀರ

ರಸ, ಶೌರ್ಯದ ಕುರಿತು ವರ್ಣನೆಗಳಿವೆ. ಸತಿ ಹೋಗುವ ಹೆಂಗಸರ, ಆ ಕುಟುಂಬಗಳ ಬವಣೆ ಕಾಣುವುದಿಲ್ಲ. ಅವರು ಚೆನ್ನಕೇಶವನನ್ನು ಎದುರುಗೊಂಡು ತಿರುಗಾಡಿದ ಹಾಸನ, ಬೇಲೂರುಗಳ ಜನಮನದ ಬಾಯಲ್ಲಿರುವ ಮಾಸ್ತಿ ಕಥನಗೀತೆಗಳೆಂಬ ದುಃಖಾರ್ತ ಹಾಡುಗಳು ಅವರಿಗೆ ಮುಖಾಮುಖಿಯಾದವೋ ಇಲ್ಲವೋ ಗೊತ್ತಿಲ್ಲ.

ಆಯಿತು. ಕವಿತೆಯಲ್ಲಿ ಶೃಂಗಾರ–ಸೌಂದರ್ಯವಲ್ಲದೆ ಕುಂಟ–ಕುರುಡಿ–ಗೂನಿ–ಉಬ್ಬಲ್ಲು ಸುಬ್ಬಿಯರ ಸಂಕಟಗಳ ಬಗೆಗೆ ಬರೆಯಲಾದೀತೇ? ಇರಲಿ. ಅವರು ಸೃಷ್ಟಿಸಿದ ಮಹಿಳಾ ಪಾತ್ರಗಳ ಗಟ್ಟಿತನ ಯಾವುದರಲ್ಲಿದೆ?

ಚರಿತ್ರೆ ದಮಯಂತಿಯದೇ ಆಗಿದ್ದರೂ ಅದಕ್ಕೆ ನಳ ಚರಿತ್ರೆ ಎಂದು ಹೆಸರಿಡುವುದೇ ಪುರುಷ ಪರಮಾಧಿಕಾರ. ಏಕೆಂದರೆ ನಳ ಒಬ್ಬ ದುರ್ಬಲ ರಾಜ, ದುರ್ಬಲ ಗಂಡ. ಆತ ಅಶ್ವ ಹೃದಯ ಬಲ್ಲವನು. ಆದರೆ ಹೆಂಡತಿಯ ಹೃದಯ ಬಲ್ಲವನಲ್ಲ. ಅವ ಅಡಿಗೆಯ ಸೂಕ್ಷ್ಮಾತಿಸೂಕ್ಷ್ಮ ರಹಸ್ಯ ಅರಿತವನು. ಆದರೆ ಅಡಿಗೆ ಮಾಡುವ ಹೆಂಗಸರ ಒಳತೋಟಿ, ಒಳಸುಳಿಗಳ ಅರಿತವನಲ್ಲ. ನಮ್ಮ ಸಂಸ್ಕೃತಿಯಲ್ಲಿ ಹೊತ್ತುಗೊತ್ತಿಲ್ಲದೆ ಜೂಜಾಡಿ, ಸೋಲನ್ನು ವಿಧಿ–ರಾಕ್ಷಸರ ತಲೆಗೆ ಕಟ್ಟಿ, ತನ್ನದೆಲ್ಲವನ್ನು ಕಳೆದುಕೊಂಡು, ನಡುರಾತ್ರಿಯಲ್ಲಿ ಸತಿಸುತರ ಬಿಟ್ಟು ನಡೆದವರು ಮಹಾಪುರುಷರಾಗಿಬಿಟ್ಟಿದ್ದಾರೆ. ಅಂಥವರಲ್ಲಿ ನಡುರಾತ್ರಿಯಲ್ಲಿ ಹೆಂಡತಿಯನ್ನು ಕಾಡೆನ್ನದೆ, ಗುಡ್ಡಗವಿಯೆನ್ನದೆ ಬಿಟ್ಟು ನಡೆದ ಬೇಜವಾಬ್ದಾರಿಯ ನಳನೂ ಸೇರುತ್ತಾನೆ.

ದ್ಯೂತದಲ್ಲಿ ಸೋತು, ಎಲ್ಲವನ್ನು ಕಳಕೊಂಡು, ಮಕ್ಕಳನ್ನು ಅಜ್ಜನ ಮನೆಯಲ್ಲಿ ಬಿಟ್ಟು, ಹೆಂಡತಿಯೊಡನೆ ಕಾಡಿಗೆ ಬಂದ ನಳ ಉಟ್ಟ ದಟ್ಟಿ ಬಳಸಿ ಹಕ್ಕಿ ಹಿಡಿಯಲು ಹೋಗಿ ದಟ್ಟಿಯನ್ನೂ ಕಳಕೊಂಡು ನಗ್ನನಾಗುತ್ತಾನೆ. ಗಂಡನ ಮಾನ ಮುಚ್ಚಲು ದಮಯಂತಿ ಉಟ್ಟ ಸೀರೆ ಹರಿದು ಅರ್ಧ ಅವನಿಗೆ ಕೊಡುತ್ತಾಳೆ. ನಡುರಾತ್ರಿ ಅವಳ ಸೀರೆಯನ್ನುಟ್ಟ ನಳ ಅವಳನಲ್ಲೇ ಬಿಟ್ಟು ನಡೆಯುತ್ತಾನೆ. ಸರ್ಪದ ಬಳಿ ಕಚ್ಚಿಸಿಕೊಂಡು, ವಿಕೃತ ರೂಪದ ಬಾಹುಕನಾಗಿ, ಹೆಂಡತಿ ಮಕ್ಕಳ ಮರೆತು, ಸತಿಸುತರ ಜವಾಬ್ದಾರಿಯಿಲ್ಲದೆ ನಳ ಋತುಪರ್ಣ ರಾಜನ ಆಸ್ಥಾನದಲ್ಲಿ ಕುದುರೆ ತಜ್ಞನಾಗಿರುತ್ತಾನೆ. ಇತ್ತ ದಮಯಂತಿ ಅವನಿಗಾಗಿ ಜಗವೆಲ್ಲ ಹುಡುಕಾಡುತ್ತಾಳೆ. ಇನ್ನೇನು ಸರ್ಪದ ಬಾಯಿ ಹೊಗಲಿರುವ ಅವಳನ್ನು ಬೇಡನೊಬ್ಬ ರಕ್ಷಿಸಿ ಕಾಮಾತುರ ತೋರಿದಾಗ ಕನಕರ ದಮಯಂತಿ ಪುರಾಣದ ದಮಯಂತಿಗಿಂತ ಪ್ರಗತಿಪರ ನಡವಳಿಗೆ ತೋರುತ್ತಾಳೆ. ಅವಳು ತನ್ನ ಪಾತಿವ್ರತ್ಯ ಶಕ್ತಿಯಿಂದ ಬೇಡನನ್ನು ಸುಟ್ಟು ಹಾಕುವುದಿಲ್ಲ. ಬದಲಾಗಿ, 'ಪ್ರಾಣ ರಕ್ಷಿಸಿದ ನೀನು ನನ್ನ ತಂದೆಗೆ ಸಮಾನ, ಎಂದು ಬೇಡನ ಬಳಿ ವಾದಿಸಿ ಕೊನೆಗೆ ಕೋಪ ಬಂದರೆ ಶಪಿಸುವುದಾಗಿ ಧಮಕಿ ಹಾಕಿ ಪಾರಾಗುತ್ತಾಳೆ!

ಇಂಥ ಗಟ್ಟಿಗಿತ್ತಿ ಹೆಂಗಸು ಗಂಡನ ಮೈಮರೆವಿನಿಂದ, ಬೇಜವಾಬ್ದಾರಿತನದಿಂದ ಬಂದ ದುಃಸ್ಥಿತಿಯ ಲೋಪವನ್ನು ಮರೆಮಾಚಲು ವಿಧಿಯೆಂಬ ಅನೂಹ್ಯ ಶಕ್ತಿಯನ್ನು ನಂಬುತ್ತಾಳೆನ್ನುವಂತೆ ಚಿತ್ರಸಲಾಗಿದೆ. ಕರುಣಾಳು ನಳನ ತಪ್ಪಿಲ್ಲ, ಎಲ್ಲ ವಿಧಿಯಾಟ ಎಂದು ಅವಳ ಬಾಯಲ್ಲಿ ಹೇಳಿಸಲಾಗಿದೆ. ಅವಳ ಗಟ್ಟಿತನವೆಲ್ಲ ಗಂಡನನ್ನು ಹೇಗಾದರೂ ಮರಳಿ ಪಡೆಯಲು ಪ್ರಯತ್ನಿಸುವುದರಲ್ಲೇ ಖರ್ಚಾಗುತ್ತದೆ. ಒಮ್ಮೆ ಬಾಹುಕ, 'ಪತಿಯ ತಪ್ಪೆಣಿಸುವ ಸತಿ ಪತಿವ್ರತೆಯೇ?' ಎನ್ನುತ್ತಾನೆ. ನಮ್ಮ ಸತಿ ದಮಯಂತಿಯಾದರೋ ಪತಿಯ ತಪ್ಪೆಣಿಸುವುದಿರಲಿ, ಉಳಿದ ಪಂಚಮಹಾಪತಿವ್ರತೆಯರು ಕಷ್ಟನಷ್ಟದಲಿ ಬೆಂದು ಒಂದಲ್ಲ ಒಮ್ಮೆ ತಂತಮ್ಮ ಪತಿರಾಯರಿಗೆ ಬಿರುನುಡಿಯನಾಡಿದ್ದರೂ ಇವಳೆಂದೂ ಒಂದೇ ಒಂದು ಅಂತಹ ಮಾತು ಆಡುವುದಿಲ್ಲ. ಸತಿಪತಿ-ಹೆಣ್ಣುಗಂಡು ಸಮಾನರೆಂದು ಕನಕರು ಚಿತ್ರಿಸಬೇಕಿರಲಿಲ್ಲ. ಕೊನೆಪಕ್ಷ ಹೆಣ್ಣಿಗೆ ಗಂಡಿನ ಹೊರತಾದ, ವ್ಯವಸ್ಥೆಯ ಚೌಕಟ್ಟಿನ ಹೊರತಾದ ಒಂದು ಸಫಲ ಬದುಕನ್ನು ಕಲ್ಪಿಸಿಕೊಳ್ಳಬಹುದಿತ್ತು. ಅದೂ ಅವರಿಗೆ ಸಾಧ್ಯವಾಗಿಲ್ಲ.

ಮೋಹನ ತರಂಗಿಣಿಯಲ್ಲಿ ಅನಿರುದ್ಧನ ಮೋಹಿಸಿದ ಕಥಾನಾಯಕಿ ಉಷಾಯ ಸಖಿ ಚಿತ್ರಲೇಖೆ ಎಂಬ ಒಂದು ಪಾತ್ರವಿದೆ. ವಿವಾಹದ ಚೌಕಟ್ಟನ್ನು ಉಲ್ಲಂಘಿಸಿ ಪ್ರೇಮಿಗಳನ್ನು ಒಂದುಮಾಡಿದ ಚಿತ್ರಲೇಖೆ ಸತ್ವಶೀಲ ವ್ಯಕ್ತಿತ್ವವುಳ್ಳ ಪಾತ್ರವಾಗಿ ಮಾತಿನಲ್ಲೂ ಕೃತಿಯಲ್ಲೂ ಚಿತ್ರಿಸಲ್ಪಟ್ಟಿದ್ದಾಳೆ. ಆದರೆ ಚಿತ್ರಲೇಖೆಯೂ ಸೇರಿದಂತೆ ಅಂತಃಪುರದಲ್ಲಿ ತುಂಬಿಕೊಂಡ ಸಾವಿರಾರು ದಾಸಿಯರ ದೇಹ ಕುರಿತ ವಿವರವಾದ ವರ್ಣನೆಯಿದೆಯೇ ಹೊರತು ಅವರಿಗೆಲ್ಲ ದಾಸಿತನದ ಹೊರತಾದ ಅಸ್ತಿತ್ವವೇ ಇಲ್ಲ. ಇಲ್ಲಿ ಕವಿಯ ಮಾನವೀಯ ಮತ್ತು ಸೃಜನಶೀಲ ಕಲ್ಪನೆ ವಿಸ್ತಾರಗೊಂಡಿಲ್ಲ.

ಒಟ್ಟಾರೆ ಕನಕರು ಸೃಷ್ಟಿಸಿದ್ದೆಲ್ಲ ಪ್ರಶ್ನೆಗಳೇ ಇಲ್ಲದ ಗೃಹದೇವತೆಯರನ್ನು ಅಥವಾ ಗರತಿಯರನ್ನು. ಅದರಲ್ಲೂ ಹಿಂದುಮುಂದು ಮಾಂಸ ತುಂಬಿಕೊಂಡ ಮಾನಿನಿಯರನ್ನು. ಆದರೆ ನಿಜಜೀವನದ ಗೃಹಿಣಿಯರನ್ನು ಹತ್ತಿರದಿಂದ ನೋಡಿದರೆ ಗೊತ್ತಾಗುತ್ತದೆ: ಅವರಲ್ಲೂ ಪ್ರತಿರೋಧದ ಅಂಶವಿರುತ್ತದೆ. ಗರತಿಯೂ ಕೂಡಾ ಯಾವುದನ್ನೂ-ಪುರುಷಾಧಿಕಾರವನ್ನೂ ಸಹ ಒಂದು ಮಿತಿಯಾಚೆ ಹೋಗಲು ಬಿಡಲಾರಳು. ಅಕಸ್ಮಾತ್ ಅವಳ ತ್ಯಾಗ ವ್ಯರ್ಥವೆನಿಸಿದರೆ; ತಾನು ಆಹುತಿಗೊಳ್ಳುತ್ತಿರುವ ಭಾವ ಹುಟ್ಟಿದರೆ ತನ್ನ ಜೊತೆಗೆ ತನ್ನೊಡನಿರುವ ವ್ಯವಸ್ಥೆಯನ್ನೂ ಆಹುತಿಯಾಗಿಸಬಲ್ಲಳು. ಕನಕರ ಗೃಹದೇವತೆಯರ ನೋಡಿದರೆ ಹೆಣ್ಣಿನ ಒಳಸೂಕ್ಷ್ಮ ಅವರ ಅರಿವಿಗೆ ಬಂದಹಾಗೆ ಕಾಣುವುದಿಲ್ಲ.

ಮಹಿಳೆಯ ಅಥವಾ ಯಾವುದೇ ಶೋಷಿತ ವರ್ಗದ ಶಕ್ತಿ ಎಂದರೆ ಸ್ಥಾಪಿತ ಯಜಮಾನ್ಯದ ವಿರುದ್ಧ ಪ್ರತಿರೋಧವೇ ಆಗಬೇಕೆಂದಿಲ್ಲ. ಪ್ರತಿರೋಧಕ್ಕಿರುವಷ್ಟೇ ಶಕ್ತಿ ಸ್ವಾಯತ್ತತೆಯ ಬದುಕಿನಲ್ಲೂ ಇದೆ. ರೂಢಿ ವಿರೋಧಿ ಜೀವನ ಕ್ರಮ ಮತ್ತು ಉಲ್ಲಂಘನೆ-ಇವೂ ಪ್ರತಿರೋಧಗಳೇ. ಪಟ್ಟವೇರಿದ ರಾಮ ಕಂಡವರ

ಮಾತು ಕೇಳಿ, ಬೆಂಕಿ ಹಾಯ್ದು ಬಂದ ಸೀತೆಯ ಶೀಲವನ್ನು ಅನುಮಾನಿಸಿದಾಗ ಜನಪದ ರಾಮಾಯಣದ ಸೀತೆ ರಾಜ್ಯ ಬಿಟ್ಟು ಹೋಗುತ್ತಾಳೆ. ರಾಮನ ಬಿಟ್ಟು ಕಾಡಿನಲ್ಲಿ ಬದುಕಿ ಅವಳಿ ಮಕ್ಕಳ ಹೊತ್ತು, ಹೆತ್ತು, ಬೆಳೆಸುತ್ತಾಳೆ. ರಾಮನಿಲ್ಲದ ಒಂದು ಸ್ವಾಯತ್ತ ಬದುಕನ್ನು ಸಾಧ್ಯವಾಗಿಸಿಕೊಳ್ಳುತ್ತಾಳೆ. ಇನ್ನೊಂದು ಜನಪದ ರಾಮಾಯಣದಲ್ಲಿ ಲವಕುಶರು ತಮ್ಮಮ್ಮನ ಬಳಿ ಮೊಲೆಮೂಗುಗಳಿರದ ವಿಕರೂಪದ ರಕ್ಕಸಿಯೊಬ್ಬಳ ಅತಿಸುಂದರ ಉದ್ಯಾನ ತಾವು ನೋಡಿದೆವೆಂದು ಬಣ್ಣಿಸುವ ಪ್ರಸಂಗ ಬರುತ್ತದೆ. ನಿಬ್ಬೆರಗಾಗಿ ಅವರು ವರ್ಣಿಸಿರುವುದನ್ನು ಕೇಳಿದ ಮೇಲೆ ಸೀತೆಗೆ ಅದು ಶೂರ್ಪನಖಿ ಎಂದು ಹೊಳೆಯುತ್ತದೆ. ಪುರುಷೋತ್ತಮವನ್ನು ಮೋಹಿಸಿದ ಕಾರಣಕ್ಕೆ ಮೊಲೆಮೂಗುಗಳ ಕಳಕೊಂಡು ಅವಮಾನಿತಳಾದರೂ ಸುಂದರ ಉದ್ಯಾನವನ ನಿರ್ಮಿಸಿ ಏಕಾಂಗಿಯಾಗಿ, ಸ್ವಾಯತ್ತವಾಗಿ ಬದುಕಿದಳು ಅವಳು. ಹೀಗೆ ಜನಪದದ ಸೀತೆ/ಶೂರ್ಪನಖಿಯರಿಗಿರುವ ಸ್ವಾಯತ್ತ ಬದುಕಿನ ಯಾವ ಅವಕಾಶವೂ ಕನಕರ 'ದಮಯಂತಿ'ಯರಿಗೆ ಸಿಗುವುದಿಲ್ಲ. ಬಹುಶಃ ಮಹಾಕಾವ್ಯ ಬರೆದವರೆಲ್ಲ ಪುರುಷರೇ ಆದ ಕಾರಣ ಅವರಿಗೆ ಪತಿವ್ರತೆಯರನ್ನು ಸೃಷ್ಟಿಸಲು ಸಾಧ್ಯವಾಯಿತೇ ಹೊರತು ಬಂಡವಾಳದ ಹೆಣ್ಣನ್ನು ಸೃಷ್ಟಿಸಲು ಸಾಧ್ಯವಾಗಲಿಲ್ಲ.

ಹಾಗೆ ನೋಡಿದರೆ ನಿಜ ಜೀವನದಲ್ಲಿ ಭಾರತೀಯ ಸಮಾಜದ ತಳಸಮುದಾಯದ ಹೆಣ್ಣುಗಳು ಹೆಚ್ಚು ಸ್ವಾಯತ್ತ ಬದುಕು ಸಾಗಿಸಿದ್ದಾರೆ, ಅದನ್ನು ಸಾಧ್ಯಮಾಡಿಕೊಂಡಿದ್ದಾರೆ. ಅದನ್ನು ತಳಸಮುದಾಯದ ಕವಿ ಕನಕ ಗ್ರಹಿಸಿರಬೇಕಿತ್ತು. ಕೊನೆಪಕ್ಷ ತಮ್ಮ ರಾಮಧಾನ್ಯ ಚರಿತೆಯಲ್ಲಿ ಧಾನ್ಯಗಳನ್ನು ಪುರುಷರ ಬದಲಾಗಿ ಸ್ತ್ರೀಯರಂತೆ ಸೃಷ್ಟಿಸಿದ್ದರೆ; ಬಿಳ್ಮೊಲೆಯ ವರ್ಸಸ್ ಕನ್ಯೈದಿಲೆಯಂಥ ಕರಿಮೊಲೆಯ ಅಬಲೆಯರನ್ನು ಭತ್ತ-ರಾಗಿಗಳಂತೆ ಚಿತ್ರಿಸಿದ್ದರೆ ಆ ಕಾವ್ಯ ಬೇರೆಯದೇ ನೆಲೆಗೆ ಹೋಗಿ ಮುಟ್ಟುತ್ತಿತ್ತು. ಆದರೆ ಜಾತಿಪ್ರಶ್ನೆಯೊಂದನ್ನು ಹೊರತುಪಡಿಸಿ ಮಿಕ್ಕಂತೆ ವೈಷ್ಣವ ಪಂಥದ ವೈದಿಕ ಮತ್ತು ಸನಾತನ ಮೌಲ್ಯಗಳಿಗೆ ಕಟ್ಟುಬಿದ್ದ ಕಾರಣಕ್ಕೆ ಕನಕರು ಹೆಣ್ಣಿನ ವಿಷಯದಲ್ಲಿ ಜನಪದದ ಸ್ಮೃತಿ, ವಿವೇಚನೆಗಳನ್ನು ಕಡಿಮೆ ಬಳಸಿದಂತೆನಿಸುತ್ತದೆ. ಕನಕರ ಹೆಣ್ಣು ಪಾತ್ರಗಳು ದಾಸಿ, ಸಖಿ, ಪತಿವ್ರತೆಯ ಚೌಕಟ್ಟಿನಾಚೆ ಬೆಳೆಯದೇ ಪಾರಂಪರಿಕ ಮೌಲ್ಯಗಳನ್ನು ಗಟ್ಟಿಗೊಳಿಸುವುದರಲ್ಲೇ ಮಗ್ನವಾವಾಗಿಬಿಡುತ್ತವೆ.

ಕನಕರೇ, ನೀವು ಸಖಿಗೀತ ಬರೆದಿರಿ. ಅವಳ ಪರವಾಗಿ ಹಾಡಿದಿರಿ, ಆಡಿದಿರಿ. ಆದರೆ ಸಖಿ ಮೌನವಾಗುಳಿದದ್ದನ್ನು ಗುರುತಿಸದೆ ಹೋದಿರಿ. ಎಂದೇ ಅವಳು ಒಳಮನಸು ತೆರೆಯದೆ ಮೊಲೆಜಘನಗಳ ತೋರಿಸುತ್ತ ಸುಮ್ಮನಿದ್ದುಬಿಟ್ಟಳು.

ಕ್ಷಮಿಸಿ, ಸಖಿಸತಿಯರಿಗೀಗ ಎದೆಬಿಚ್ಚಿ ಮಾತಾಡಲೇಬೇಕಾದ ಕಾಲ ಬಂದಿದೆ..

# ರಾಮಧಾನ್ಯ, ಮಾರುಕಟ್ಟೆ ಮತ್ತು ಆಹಾರ ರಾಜಕಾರಣದ ಹೊಸ ಸವಾಲು

–ಡಾ. ರಂಗನಾಥ್ ಕಂಟನಕುಂಟೆ

ಕನಕದಾಸನು ತನ್ನ ಕಾಲದಲ್ಲಿ ಕಟ್ಟಿದ 'ರಾಮಧಾನ್ಯ'ದ ರೂಪಕ ಕಳೆದ ಅರ್ಧ ಸಹಸ್ರಮಾನದಲ್ಲಿ ತನ್ನ ಅರ್ಥವನ್ನು ಕಳೆದುಕೊಳ್ಳಬೇಕಿತ್ತು. ಆದರೆ ಅದನ್ನು ನಾವು ಅರೆ ಸಹಸ್ರಮಾನದ ನಂತರವೂ ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯನ್ನು ವಿವರಿಸಿಕೊಳ್ಳಲು ಇರುವ ಒಂದು ಕಾವ್ಯರೂಪಕವಾಗಿ, ವಿಶ್ಲೇಶಣೆಯ ಬಗೆಗಿನ ನುಡಿಗಟ್ಟಾಗಿ ಬಳಕೆ ಮಾಡುತ್ತಿದ್ದೇವೆ. ಈ ನೆಲೆಯಲ್ಲಿ ಅದು ಈ ಹಿಂದಿಗಿಂತ ಹೆಚ್ಚು ಇಂದು ಪ್ರಸ್ತುತವಾಗುತ್ತಿರುವುದು ವಿಶಾದದ ಸಂಗತಿ. ಅಂದರೆ ಕನಕನು ತಮ್ಮ 'ರಾಮಧಾನ್ಯ ಚರಿತೆ' ಕಾವ್ಯಕೃತಿಯಲ್ಲಿ ರಾಗಿ ಮತ್ತು ಭತ್ತಗಳನ್ನು ಪಾತ್ರವಾಗಿಸಿ ಅನ್ಯೋಕ್ತಿ ರೂಪಕದ ಮೂಲಕ ನಡೆಸಿದ ಸಾಮಾಜಿಕ ಸಂವಾದವು, ಸಾಮಾಜಿಕ ವಿವೇಕವಾಗಿ, ಸಾಮಾಜಿಕ ನ್ಯಾಯದ ಮೌಲ್ಯವಾಗಿ, ಸಮಾಜದಲ್ಲಿ ಇಡಿಯಾಗಿ ಆಚರಣೆಗೆ ಇಳಿದಿದ್ದರೆ ಸಮಾಜದಲ್ಲಿ ಬಡವ–ಶ್ರೀಮಂತ, ಮೇಲುಜಾತಿ–ಕೆಳಜಾತಿ, ಶ್ರೇಷ್ಟ–ಕನಿಶ್ಟ ಎಂಬ ತರತಮದ ಸಾಮಾಜಿಕ ಭಾವಗಳು ಮತ್ತು ಸ್ತರಗಳೇ ಇರಬಾರದಿತ್ತು. ಈ ರೂಪಕ ಕೇವಲ ಸಾಹಿತ್ಯಕ ಉಲ್ಲೇಖ ಮಾತ್ರವಾಗಿ ಉಳಿಯಬೇಕಿತ್ತು. ಆದರೆ ಈ ರೂಪಕ ಅಪ್ರಸ್ತುತವಾಗದೇ ಇಂದಿಗೂ ಅದನ್ನು ಬಳಕೆ ಮಾಡುವಂತಹ ಸಾಮಾಜಿಕ ಸ್ಥಿತಿ ಉಳಿದಿರುವುದೇ ಇಲ್ಲಿ ಗಮನಾರ್ಹವಾದ ಸಂಗತಿ. ಈ ಮಾತು ಇತರೆ ಸಂತರಿಗೂ ಸುಧಾರಕರ ವಿಚಾರಗಳಿಗೂ, ಚಳವಳಿಗಳಿಗೂ ಅನ್ವಯವಾಗುತ್ತದೆ.

ಅಂದರೆ ಕಳೆದ ಹಲವು ಶತಮಾನಗಳ ಹಿಂದೆ ಕವಿ ಇಲ್ಲವೆ ಸಂತನೊಬ್ಬ ಎತ್ತಿದ ಸಾಮಾಜಿಕ ಅಸಮಾನತೆಯ ಪ್ರಶ್ನೆ ನಮ್ಮ ಸಮಾಜದಲ್ಲಿ ಬಗೆಹರಿಯದೇ ಉಳಿದಿರುವುದನ್ನು ಇದು

ಸೂಚಿಸುತ್ತದೆ. ಇಂತಹ ಹಲವು ಸಾಮಾಜಿಕ ಸಮಸ್ಯೆಗಳನ್ನು ಕುರಿತು ಬುದ್ಧನಿಂದ ಆರಂಭವಾಗಿ ಅಂಬೇಡ್ಕರ್ ಮತ್ತು ಆ ನಂತರದಲ್ಲಿ ಎತ್ತಿರುವ ಅನೇಕ ಪ್ರಶ್ನೆಗಳು ಬಗೆಹರಿಯದೇ ಹಾಗೆಯೇ ಉಳಿದಿವೆ. ಹಾಗೆಂದು ನಮ್ಮ ಸಮಾಜದಲ್ಲಿ ಯಾವ ಬದಲಾವಣೆಯೂ ಸಂಭವಿಸಿಯೇ ಇಲ್ಲ; ಇದು ಜಡ ಸಮಾಜ ಎಂದು ಹೇಳಲು ಸಾಧ್ಯವಿಲ್ಲ. ಜನರ ದೈನಂದಿನ ಅಗತ್ಯಗಳು, ಸವಲತ್ತುಗಳು ಭೌತಿಕವಾದ ಪರಿಕರಗಳಲ್ಲಿ ಅಗಾಧವಾದ ಬದಲಾವಣೆಯನ್ನು ಕಂಡಿವೆ. ಹಾಗೆ ಬೆಳೆದ ಪರಿಣಾಮವಾಗಿಯೇ ಸರಕು ಸಂಸ್ಕೃತಿ ದೊಡ್ಡ ಪ್ರಮಾಣದಲ್ಲಿ ಬೆಳೆದು ನಮ್ಮ ನಾಡು ಅಂತಾರಾಷ್ಟ್ರೀಯ ಉದ್ದಿಮೆದಾರರಿಗೆ ಮಾರುಕಟ್ಟೆಯಾಗಿ, ಜನರು ಮನುಷ್ಯರಾಗಿಯಲ್ಲದೆ ಕೇವಲ ಗ್ರಾಹಕರಾಗಿ ಬದಲಾಗಲು ಸಾಧ್ಯವಾಗಿದ್ದು. ಈ ಮಾರುಕಟ್ಟೆಯ ಒಳಗೆ ಜನರು ಸದಾ ಕೊಳ್ಳುವವರಾಗಿ ಇರುವಂತೆ ರೂಪಿಸಲು ಸಾಧ್ಯವಾಗಿದ್ದು, ಅದನ್ನೆ 'ಅಭಿವೃದ್ಧಿ' ಎಂದು ಬಿಂಬಿಸಿ ಜನರು ನಂಬುವಂತೆಯೂ ಮಾಡಿರುವುದು. ಅಂದರೆ ಇದು ನಮ್ಮ ಸಮಾಜ ಭೌತಿಕ ರೂಪದಲ್ಲಿ ಮೆಟೀರಿಯಲ್ ಕಲ್ಚರ್ ವಿಚಾರದಲ್ಲಿ ವ್ಯಾಪಕವಾಗಿ ಬದಲಾವಣೆಯಾಗಿರುವುದನ್ನು ತೋರಿಸಿಕೊಡುತ್ತದೆ.

ಆದರೆ ಅದರ ಮನೋನೆಲೆಯಲ್ಲಿ ಸಮಾಜದ ಕೆಲವು ಮೂಲಭೂತ ರಚನೆಗಳು ಕದಲದೇ ಉಳಿದಿರುವುದನ್ನು ಇಲ್ಲಿ ಕಾಣಬಹುದು. ಅದರಲ್ಲಿ, ಜಾತಿ–ಜಾತಿಗಳ ಅಂತರ ಮತ್ತು ಕೆಳವರ್ಗ–ಮೇಲುವರ್ಗಗಳ ಸಂಬಂಧಗಳು; ಹೆಣ್ಣು ಮತ್ತು ಗಂಡಿನ ನಡುವಿನ ಲಿಂಗತಾರತಮ್ಯದ ಸಂಬಂಧಗಳು ಹಾಗೂ ಪ್ರಭುತ್ವದ ತಾರತಮ್ಯದ ಆಡಳಿತ, ಲೂಟಿ, ಯುದ್ಧ ಮತ್ತು ಹಿಂಸೆಗಳು ಬದಲಾಗದೇ ಉಳಿದಿವೆ. ಸ್ವಹಿತ ಚಿಂತನೆ ವ್ಯಾಪಕವಾಗಿ ಬೆಳೆಯುತ್ತಿದೆ. ಇಂತಹ ಬದಲಾಗದೇ ಉಳಿದಿರುವ ಸಾಮಾಜಿಕ ವ್ಯವಸ್ಥೆ, ಅದರ ವಿವಿಧ ಸಂಸ್ಥೆಗಳು ಮತ್ತು ಅವು ರೂಪಿಸಿರುವ ಸಾಮಾಜಿಕ ಸಂಬಂಧಗಳಲ್ಲಿ ಬಂಧಿಯಾಗಿರುವ ಮಾನವರು ನಿರಂತರವಾಗಿ ಹಿಂಸೆಯನ್ನು ಅನುಭವಿಸುತ್ತಲೇ ಇದ್ದಾರೆ. ಇಂತಹ ಹಿಂಸೆಯನ್ನು ಕೆಲವು ಬಾರಿ ಮುಕ್ತವಾಗಿ ಚರ್ಚಿಸಲಾಗಿದೆ. ಅದು ಸಾಮೂಹಿಕ ಶಕ್ತಿಯಾಗಿ ಹೊರಹೊಮ್ಮಿದಾಗ ಹೆಚ್ಚು ಹರಿತವಾಗಿ ಮುಕ್ತವಾಗಿ ವ್ಯಕ್ತವಾಗಿದೆ. ಇಲ್ಲವೇ ಅದು ತೀರ ವ್ಯಕ್ತಿಗತವಾಗಿದ್ದಾಗ ಹೆಚ್ಚು ರೂಪಕಗಳ ಮರೆಯಲ್ಲಿ ಅಡಗಿಕೊಂಡು ಮಾತನಾಡಬೇಕಾಗುತ್ತದೆ. ಕನಕ ರಾಮಧಾನ್ಯ ಚರಿತೆಯಲ್ಲಿ ಹೀಗೆ ರೂಪಕದ ಮರೆಯಲ್ಲಿ ನಿಂತು ಮಾತನಾಡಿರುವುದು ಎದ್ದು ಕಾಣುತ್ತದೆ. ಇಂತಹ ಒತ್ತಡ ಅನಿವಾರ್ಯತೆ ಯಾವ ವಚನಕಾರರಿಗೂ ಇರಲಿಲ್ಲ. ಯಾಕೆಂದರೆ ಅಲ್ಲಿ ಪ್ರತಿರೋಧ ಸಾಮೂಹಿಕ ಸಂಘಟಿತ ನೆಲೆಯದು. ಹರಿದಾಸರ ವೈಷ್ಣವ ಭಕ್ತಿಪರಂಪರೆಯಲ್ಲಿ ಕನಕ ಒಂಟಿಯಾಗಿ ತನ್ನ ಸಾಮಾಜಿಕ ನ್ಯಾಯದ ಹೋರಾಟವನ್ನು ನಡೆಸಿದವನು. ಉಳಿದ ಹರಿದಾಸರಿಂದ ಅವನಿಗೆ ಅಂತಹ ಬೆಂಬಲ ಇದ್ದಂತೆ ಕಾಣವುದಿಲ್ಲ. ಕೆಲವು ನೆಲೆಗಳಲ್ಲಿ ಪುರಂದರರನ್ನು ಹೊರತುಪಡಿಸಿದರೆ, ಉಳಿದ ದಾಸರ ರಚನೆಗಳು ಕನಕನನ್ನು ಹೆಚ್ಚು ಸಮರ್ಥಿಸುವುದಿಲ್ಲ. ಜೊತೆಗೆ ಪ್ರಭುತ್ವವೂ ಕೂಡ ಆತನ ಬೆನ್ನಿಗೆ ಇರಲಿಲ್ಲ.

ಅದಕ್ಕಾಗಿ ಅವನಿಗೆ ಬಹಳ ಗಂಭೀರವಾದ ಸಾಮಾಜಿಕ ಸಂಗತಿಗಳನ್ನು ಚರ್ಚಿಸಲು 'ರಾಮಧಾನ್ಯ'ದ ಅನ್ಯೋಕ್ತಿ ರೂಪಕಸೃಷ್ಟಿ ಅನಿವಾರ್ಯವಾಯಿತು. ಅದರ ಮೂಲಕ ತನ್ನ ಸಾಮಾಜಿಕ ಚಿಂತನೆಯನ್ನು ಲೋಕದ ಮುಂದಿಡಲು ಯತ್ನಿಸಿದ್ದಾನೆ. ಹರಿದಾಸರಲ್ಲಿ ಕನಕನನ್ನು ಬಿಟ್ಟರೆ ಬೇರೆ ಯಾರೂ ಇಷ್ಟು ಗಂಭೀರವಾಗಿ ಮತ್ತು ಈ ಬಗೆಯಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಮೈಮೇಲೆ ಹಾಕಿಕೊಂಡು ಅವುಗಳನ್ನು ಎದುರಾಗಲಿಲ್ಲ. ಭಕ್ತಿಯ ನೆಪದಲ್ಲಿ ಕೃಷ್ಣಪಾರಾಯಣವೇ ಹೆಚ್ಚು ಮೆರೆಯಿತು. ಕನಕನಲ್ಲಿ ಅದಿದ್ದರೂ ಕೂಡ ಅದಕ್ಕೆ ಬೇರೊಂದು ಆಯಾಮ ನೀಡುವ ಸಾಮಾಜಿಕ ಕಾಳಜಿಯೂ ಇತ್ತು. ಆ ಕಾರಣವಾಗಿಯೇ ಅವನು ಬೇರೆಲ್ಲಾ ಹರಿದಾಸರಿಗಿಂತ ಇಂದು ಹೆಚ್ಚು ಪ್ರಸ್ತುತವಾಗಿರುವುದು.

ಸ್ಥಾಪಿತ ಸಾಮಾಜಿಕ ಮೌಲ್ಯಗಳನ್ನು ಕಾಲಕಾಲಕ್ಕೆ ಪ್ರಶ್ನೆ ಮಾಡುತ್ತ ಬರಲಾಗುತ್ತಿದೆ. ಆದರೆ ಸಮಾಜದ ಸಾಂಸ್ಥಿಕ ರೂಪಗಳನ್ನು, ಸಮಾಜದ ಮನಸ್ಸನ್ನು ಇಡಿಯಾಗಿ ಬದಲಾಯಿಸಲು ಈ ದೇಶದ ಜನಪರ ರಾಜಕಾರಣ ನಡೆಸುವ ಶಕ್ತಿಗಳಿಗೆ, ಚಳವಳಿಗೆ ಸಾಧ್ಯವಾಗಿಲ್ಲದಿರುವುದನ್ನು ಇದು ಸೂಚಿಸುತ್ತದೆ. ಪ್ರತಿರೋಧ ಮತ್ತು ಪ್ರತಿಭಟನೆಗಳನ್ನು ತೀವ್ರವಾಗಿ ನಡೆಸುತ್ತಲೇ ಬರುತ್ತಿದ್ದರೂ ತನ್ನ ನಡೆಯ ಹಾದಿಯಲ್ಲಿ ತನ್ನ ಗೆಲುವನ್ನು ಸಾರಲು ಸಾಧ್ಯವಾಗಿಲ್ಲ. ಹಾಗೆಂದು ಸೋತೂ ಇಲ್ಲ. ತನ್ನ ಪ್ರತಿಭಟನೆಯನ್ನು ಭಿನ್ನಮತವನ್ನು ಚಳುವಳಿಯ ಕಾವನ್ನು ಕಾಪಾಡಿಕೊಂಡು ಬರಲಾಗುತ್ತಿದೆ. ತಾತ್ವಿಕವಾದ ಗುದ್ದಾಟವನ್ನು ನಿರಂತರವಾಗಿ ಮುನ್ನಡೆಸಿಕೊಂಡು ಬರಲಾಗುತ್ತಿದೆ. ಸಾಹಿತ್ಯ ಮತ್ತು ಪ್ರಭುತ್ವಗಳ, ಸಾಹಿತ್ಯ ಮತ್ತು ಧರ್ಮಗಳ ತಾಕಲಾಟಗಳನ್ನು ಗಮನಿಸಿದಾಗ ಇದು ಗೋಚರಿಸುತ್ತದೆ. ಇಂತಹ ತಾಕಲಾಟಗಳ ಒಂದು 'ದಾಖಲೆ'ಯಾಗಿ ಸಾಹಿತ್ಯ ಇರುವುದು ನಮಗೆ ಕಾಣಸಿಗುತ್ತದೆ. (ಸಾಹಿತ್ಯಕ್ಕೆ ದಾಖಲೆಯಾಚೆಗಿನ ಇರುವಿಕೆಯೂ ಇದೆ. ಅದು ಬೇರೆಯದೇ ಚರ್ಚೆ.) ಇಂತಹ ಪ್ರತಿಭಟನೆಯ ಸಾಹಿತ್ಯದಲ್ಲಿ ಸಂಘರ್ಷದ ಚಹರೆಯುಳ್ಳ ಕಾವ್ಯವಾಗಿ, ಕನಕನ 'ರಾಮಧಾನ್ಯ ಚರಿತೆ'ಯೂ ಒಂದು. ಕನಕ ತನ್ನ ಪ್ರತಿರೋಧವನ್ನು ಮಂಡಿಸಿದ ನಾವಿನ್ಯತೆಯ ಕಾರಣಕ್ಕಾಗಿಯೇ, ಕನಕ ಮತ್ತು ಆತನ ರಾಮಧಾನ್ಯ ಚರಿತೆ ಎರಡೂ ಇಂದಿಗೂ ಅನನ್ಯವಾಗಿರುವುದು. ಮತ್ತೆ ಮತ್ತೆ ಜನರಿಂದ ಓದುಗೊಳ್ಳುತ್ತಿರುವುದು.

ಕನಕ ತನ್ನ 'ರಾಮಧಾನ್ಯ ಚರಿತೆ'ಯಲ್ಲಿ, ಎರಡು ಪ್ರಮುಖ ಆಹಾರ ಧಾನ್ಯಗಳನ್ನು ಕೇಂದ್ರವಾಗಿಸಿಕೊಂಡು ಸಾಮಾಜಿಕ ಸಂವಾದ ನಡೆಸಿದ್ದಾನೆ. ಆ ಮೂಲಕ ಸಮಾಜದ ವರ್ಗ ಮತ್ತು ಜಾತಿಗಳ ಚಹರೆಗಳನ್ನು ವಿವರಿಸಿಕೊಳ್ಳುವ ಪ್ರಯತ್ನ ಮಾಡಿದ್ದಾನೆ. ಆ ಮೂಲಕ ಸಮಾಜದ ಒಳಗೆ ಇರುವ ಬೇಗುದಿ, ತರತಮ ಸಂಬಂಧಗಳನ್ನು ವಿವರಿಸಿದ್ದಾನೆ. ಉಳ್ಳ ವರ್ಗ ಮತ್ತು ಇಲ್ಲದ ವರ್ಗಗಳನ್ನು ವಿವರಿಸಿದ್ದಾನೆ. ರಾಗಿಯನ್ನು 'ಶ್ರೀಸಾಮಾನ್ಯ'ರ ಸಂಕೇತವಾಗಿಯೂ ನೆಲ್ಲು ಭೂಸುರರ ಉಳ್ಳವರ ಸಂಕೇತವನ್ನಾಗಿಯೂ ವಿವರಿಸಿಕೊಂಡಿದ್ದಾನೆ. (ಇದನ್ನು ಕನ್ನಡ ಜಗತ್ತು

ಈಗಾಗಲೇ ಸಾಕಷ್ಟು ವಿವರಿಸಿಕೊಂಡಿದೆ.) ಹಾಗಾಗಿ ರಾಮಧಾನ್ಯ ಚರಿತೆ ಭಾರತೀಯ ಕಾವ್ಯಮೀಮಾಂಸೆ ಅರ್ಥಾತ್ ಸಂಸ್ಕೃತ ಕಾವ್ಯಮೀಮಾಂಸೆ ಮಂಡಿಸುವ ಕಾವ್ಯತತ್ವಗಳಿಗಿಂತ ಭಿನ್ನವಾದ ತತ್ವಗಳನ್ನು ಪ್ರತಿಪಾದಿಸುತ್ತದೆ. ಇದು ಕೇವಲ ಕಾವ್ಯದ ಸೊಗಸು ಲಯ ಆನಂದ ರಸಗಳಿಗಾಗಿ ರೂಪುಗೊಂಡಿರುವ ಕಾವ್ಯವಲ್ಲ ಎಂಬುದೂ ಸ್ಪಷ್ಟವಾಗುತ್ತದೆ. ಇದು ಕನ್ನಡದ್ದೇ ಆದ ಬೇರೆಯ ಕಾವ್ಯಮೀಮಾಂಸೆ–ಜೀವನಮೀಮಾಂಸೆ ಒಂದನ್ನು ಪ್ರತಿಪಾದಿಸುತ್ತದೆ. ಒಟ್ಟು ಕನ್ನಡ ಸಾಹಿತ್ಯದ ಜೀವನಮೀಮಾಂಸೆಯ ತಾತ್ವಿಕ ಹುಡುಕಾಟದ ಕೇಂದ್ರ ನೆಲೆಯಲ್ಲಿ ಬದುಕಿನ ಸಾಮಾಜಿಕ ತಾಕಲಾಟಗಳ ಮುಖಾಮುಖಿ ಮತ್ತು ಅದರಿಂದ ಬಿಡುಗಡೆಗೊಳ್ಳುವ ಆಶಯಗಳೇ ಇರುವುದು. ಅಂದರೆ ವ್ಯಕ್ತಿ ಮತ್ತು ಸಮಾಜಗಳ ನಡುವಿನ ತಾಕಲಾಟಗಳಲ್ಲಿ 'ಕಳೆದುಹೋಗಿರುವ ನೆಮ್ಮದಿಯ ಬದುಕು'– 'ಜೀವನತತ್ವ'ದ ಮತ್ತು ಬದುಕಿನ ಮುಖ್ಯ ನೆಲೆಗಳ ಅನ್ವೇಶಣೆಯೇ ಸಾಹಿತ್ಯದ ಪ್ರಧಾನ ಭಿತ್ತಿಯಾಗಿದೆ. ಅಂತಹದ್ದರಲ್ಲಿ ಮನೋರಂಜನೆ ಒಂದು ಆನುಶಂಗಿಕ ಸಂಗತಿಯಾಗಿ ಇರಬಹುದಷ್ಟೇ. ಅದೇ ಪ್ರಧಾನವಾದ ಭಿತ್ತಿಯಲ್ಲ. ಸಾಹಿತ್ಯ ಒಂದು ರಮ್ಯ ಅನುಭವದ ಕಲಾತ್ಮಕ ಅಭಿವ್ಯಕ್ತಿ ಮಾತ್ರವಲ್ಲ. ಅದರ ಹಲವು ಆಯಾಮಗಳಲ್ಲಿ ಅದೂ ಒಂದಷ್ಟೇ.

ಅಂದರೆ ಕೇವಲ ಕಾವ್ಯಾನುಭವವನ್ನು ಮಾತ್ರ ನೀಡುವುದು ಸಾಹಿತ್ಯದ ಉದ್ದೇಶವಲ್ಲ. ಕನಕನ ರಾಮಧಾನ್ಯ ಚರಿತೆಯ ಉದ್ದೇಶವೂ ಅದಷ್ಟೇ ಅಲ್ಲ. ಇಲ್ಲವೇ ಗಾಂಧಿ ನಂಬಿದ್ದ ರಾಮರಾಜ್ಯದ ನ್ಯಾಯ ಕಲ್ಪನೆಯ ವಿಧಾನವನ್ನು ಮಂಡಿಸುವುದಲ್ಲ. (ಬಹುಶಹ ಗಾಂಧಿಗೆ ಕನಕನ ಈ ಕಾವ್ಯ ಗೊತ್ತಿದ್ದರೆ ಮತ್ತಷ್ಟು ಸಂಭ್ರಮಪಡುತ್ತಿದ್ದರೇನೋ) ಇಲ್ಲವೇ ಕೃಷ್ಣ ಮಹಿಮೆಯನ್ನು ಹೇಳಲು ರಾಮಧಾನ್ಯದ ಈ ರೂಪಕ ಹುಟ್ಟಿಕೊಂಡಿಲ್ಲ. ಬದಲಿಗೆ ಅದು ಸಾಮಾಜಿಕ ಸಂಘರ್ಶದ ಧ್ವನಿಯನ್ನು, ಸಮಾಜದ ಕೆಳಸ್ತರದ ಜನರ ಧ್ವನಿಯನ್ನು ದಿಟ್ಟವಾಗಿ ದಾಖಲಿಸಲೆಂದೇ ಸೃಷ್ಟಿಸಿಕೊಂಡಿರುವ ರೂಪಕ. ಅದರಲ್ಲೂ ವೈದಿಕ ಪುರೋಹಿತಶಾಹಿಯ ಹಿಡಿತ ಸಮಾಜದ ಮೇಲೆ ಮತ್ತು ವಿಜಯನಗರ ಸಾಮ್ರಾಜ್ಯದ ಪ್ರಭುತ್ವದ ಮೇಲೆ, ಹಾಗೂ ಪ್ರಭುತ್ವ ಪುರೋಹಿತಶಾಹಿ ಬೆಂಬಲಕ್ಕೆ ನಿಂತಿದ್ದಾಗ ಈ ಕೃತಿ ಹುಟ್ಟಿಕೊಂಡಿದೆ. ಹಾಗೆ ಹುಟ್ಟಿಕೊಂಡು ಕಾವ್ಯದ ರಸಾನಂದಗಳಿಗೆ ಮಿಗಿಲಾದ ತೀವ್ರವಾದ ವೈಚಾರಿಕತೆಯನ್ನು ಮಂಡಿಸುತ್ತಿದೆ. ಅಂತಹ ವೈಚಾರಿಕತೆಯನ್ನು ಮಂಡಿಸುವಾಗ ಕನಕ ನಿಲ್ಲುವ ನೆಲೆ ಸಮಾಜದ ಮೇಲುಸ್ತರದಲ್ಲಿ ಅಲ್ಲ. ಯಾವುದು ಸಾಮಾಜಿಕವಾಗಿ ಮೂಲೆಗೆ ತಳ್ಳಲ್ಪಟ್ಟಿರುತ್ತದೆಯೋ, ಅಪಮಾನಕ್ಕೆ ಗುರಿಯಾಗಿರುತ್ತದೆಯೋ, ಅದರ ಪರವಾದ 'ಶ್ರೀಸಾಮಾನ್ಯ'ನ ನೆಲೆಯಲ್ಲಿ ನಿಂತು ತನ್ನ ವಿಚಾರವನ್ನು ಮಂಡಿಸುತ್ತಿರುವುದು ವಿಶಿಷ್ಟ ಸಂಗತಿ.

ಈ ವೈಚಾರಿಕತೆಯು ಕಾವ್ಯಾನುಭವಕ್ಕೆ ಮೀರಿದ ಸಂಗತಿ. ವಾಸ್ತವವಾಗಿ ಎಲ್ಲ ಮಹತ್ವದ ಕೃತಿಕಾರರು ಇಂತಹ ಭಿನ್ನವಾದ ಮತ್ತು ಹೊಸದಾದ ಜೀವನಮೀಮಾಂಸೆ ಮತ್ತು ಕಾವ್ಯಮೀಮಾಂಸೆಯನ್ನು ಪ್ರತಿಪಾದಿಸುತ್ತಿರುತ್ತಾರೆ.

ಆದರೆ ಅದನ್ನು ವಿವರಿಸಿಕೊಳ್ಳುವ ವಿದ್ವಾಂಸ, ಪಂಡಿತವರ್ಗ ಅನುಸರಿಸುವ ತಪ್ಪು ವಿಧಾನಗಳಿಂದ ಕಾವ್ಯತತ್ವ-ಉದ್ದೇಶಗಳು ದಿಕ್ಕುತಪ್ಪುತ್ತವೆ. ಯಾಕೆಂದರೆ ಯಾವುದೇ ದಾರ್ಶನಿಕ ಲೇಖಕರಿಗೆ ಕಾಡಿಸಿರುವ ಬದುಕು, ಸಮಾಜ ಮತ್ತು ಅದರಿಂದ ಆದ ಜೀವನ ಅನುಭವವೇ ಅವರ ಸಾಹಿತ್ಯ ದರ್ಶನವಾಗಿರುತ್ತದೆ. ಅದರ ಹುಡುಕಾಟವೇ ಅವರ ಸಾಹಿತ್ಯದ ಪ್ರಧಾನ ಆಸಕ್ತಿಯಾಗಿತ್ತದೆ. ಅದನ್ನು ಕಾಣಿಸಲೆಂದೇ ಸಾಹಿತ್ಯವೆಂಬ ಹೊರಪಡಿಕೆಯ ದಾರಿಯಲ್ಲಿ ಸಾಗಿ ರಚನೆಯ ಕೆಲಸದಲ್ಲಿ ತೊಡಗಿರುತ್ತಾರೆ. ಅಂತಹ ಜೀವನ ದರ್ಶನ ಓದುಗರಿಗೆ ಆನಂದ ರಸೋತ್ಪತ್ತಿ ಉಂಟುಮಾಡಿದರೆ ಅದು ಬೇರೆ ಸಂಗತಿ ಮತ್ತು ಚರ್ಚೆ. ಅವರು ಕೇವಲ ಆನಂದಕ್ಕಾಗಿ, ಓದುಗರಲ್ಲಿ ರಸೋತ್ಪತ್ತಿ ಉಂಟುಮಾಡಲು ಸಾಹಿತ್ಯವನ್ನು ರಚಿಸುತ್ತಿರುವುದಿಲ್ಲ. ಸಂಸ್ಕೃತದ ಕಾವ್ಯಮೀಮಾಂಸಕರು ಮಂಡಿಸಿದ ಸಾಹಿತ್ಯದ ಉದ್ದೇಶಗಳು ಮತ್ತು ವಿವರಣೆಯ ಪ್ರಸ್ತಾನಗಳು ಸಾಹಿತ್ಯದ ಓದುಗರನ್ನು ದಿಕ್ಕುತಪ್ಪಿಸಿವೆ ಎನ್ನಬಹುದು. ಆದರೆ ಕನ್ನಡದ ಓದುಗರು, ಚಿಂತಕರು ಮತ್ತು ವಿಮರ್ಶಕರು ಮಾತ್ರ ಈ ದಾರಿಯಲ್ಲಿ ಹೆಚ್ಚು ದೂರ ಸಾಗಲೇ ಇಲ್ಲ. ಹಾಗಾಗಿ ಕನ್ನಡ ಸಾಹಿತ್ಯ ಮೀಮಾಂಸೆಗೆ ಬೇರೆಯದೇ ಆದ ಚಹರೆಯಿರುವುದು ಗೋಚರಿಸುತ್ತದೆ. ಇಲ್ಲಿ ದೇಶೀ ಚಂದಸ್ಸು ಮತ್ತು ವೈಚಾರಿಕತೆಗಳು ಮುಖ್ಯವಾಗಿರುವುದು ಕಂಡುಬರುತ್ತದೆ. ಭಾಮಿನಿ ಶಟ್ಪದಿಯಂತಹ ದೇಶೀ ಚಂದಸ್ಸಿನ ಲಯದಲ್ಲಿ ವೈಚಾರಿಕತೆಯನ್ನು ಮಂಡಿಸಿರುವ ಕನಕನ ಕೃತಿಯನ್ನು ಹಲವು ನೆಲೆಗಳಲ್ಲಿ ಎದುರಾಗಲು ಸಾಧ್ಯವಿದೆ.

ಈಗಾಗಲೇ ಅದರ ಹಲವು ಆಯಾಮಗಳನ್ನು ಕನ್ನಡದ ಸಂದರ್ಭದಲ್ಲಿ ಚರ್ಚಿಸಿಯಾಗಿದೆ ಎಂದು ಮೇಲೆಯೇ ಹೇಳಲಾಯಿತು. ಹಾಗಾಗಿ ಇಲ್ಲಿ ಇದುವರೆಗೂ ಹೆಚ್ಚು ಚರ್ಚೆಯಾಗದ ಒಂದು ಆಯಾಮವನ್ನು ಮಾತ್ರ ಒತ್ತುಕೊಟ್ಟು ಇಲ್ಲಿ ಚರ್ಚಿಸಲಾಗುವುದು. ಮುಖ್ಯವಾಗಿ ಜಾಗತೀಕರಣದ ಈ ಸಂದರ್ಭದಲ್ಲಿ ಚರ್ಚೆಯಾಗಬೇಕಾಗಿರುವ ಹಿನ್ನೆಲೆಯಲ್ಲಿ ರಾಮಧಾನ್ಯ ಚರಿತೆಯನ್ನು ವಿವರಿಸಿಕೊಳ್ಳಲು ಯತ್ನಿಸಲಾಗುವುದು. ರಾಮಧಾನ್ಯ ಚರಿತೆ ಜಾತಿ ವರ್ಗಗಳ ಪ್ರಶ್ನೆಯನ್ನು ಎತ್ತುವುದರ ಜೊತೆಗೆ ಆಹಾರ ರಾಜಕಾರಣದ ಪ್ರಶ್ನೆಯನ್ನು ಎತ್ತುತ್ತದೆ. ಯಾವ ಜಾತಿ ವರ್ಗಗಳು ಯಾವ ಬಗೆಯ ಆಹಾರವನ್ನು ತಿನ್ನುತ್ತವೆ ಎಂಬುದು ಕೂಡ ಇಲ್ಲಿ ಮುಖ್ಯವಾದ ಸಂಗತಿ. ಇದು ನಮ್ಮ ಸಮಾಜವು ಜಾತಿ, ವರ್ಗ, ಲಿಂಗ, ಧರ್ಮ, ಭಾಶೆ ಇತ್ಯಾದಿಗಳ ಆಧಾರದ ಮೇಲೆ ಜನರನ್ನು ವರ್ಗೀಕರಿಸಿದಂತೆ 'ಆಹಾರ'ವನ್ನು ಆಧರಿಸಿ ಮನುಷ್ಯರು, ಸಮಾಜ ಮತ್ತು ದೇವರನ್ನು ವರ್ಗೀಕರಿಸಲಾಗುತ್ತದೆ. ಇದರಲ್ಲಿ ಸಸ್ಯಾಹಾರ ಮತ್ತು ಮಾಂಸಾಹಾರಗಳು ಪ್ರಧಾನವಾದವು. ಇವುಗಳನ್ನು ಆಧರಿಸಿ ಜನರನ್ನು ಸಾತ್ವಿಕರು ಮತ್ತು ತಾಮಸಿಕರು ಎಂದು ಕರೆಯಲಾಗುತ್ತದೆ. ಆಹಾರವನ್ನು ಆಧರಿಸಿ ಮುಟ್ಟಬಹುದಾದವರು-ಮುಟ್ಟಬಾರದವರು; ಪ್ರತಿಭೆಯನ್ನು, ಮಡಿಮೈಲಿಗೆಯನ್ನು ತೀರ್ಮಾನಿಸಲಾಗುತ್ತದೆ.

ಹಾಗಾಗಿ ಕನಕ ಎತ್ತುವ ಆಹಾರ ರಾಜಕಾರಣದ ಪ್ರಶ್ನೆ ಮಹತ್ವ ಪಡೆದುಕೊಂಡಿದೆ. ಕನಕನ ಕಾಲಕ್ಕೆ ಮತ್ತು ಅದಕ್ಕೂ ಮೊದಲೇ ಆಹಾರ ಪದಾರ್ಥಗಳನ್ನು ಆಧರಿಸಿ ಜನರನ್ನು ಸಾಮಾಜಿಕವಾಗಿ ಸೀಳುವ ಬಗೆ ಇದ್ದದ್ದನ್ನು ಈ ಕೃತಿ ಅನಾವರಣಗೊಳಿಸುತ್ತದೆ. ಹೀಗೆ ವಿಂಗಡಣೆ ಮಾಡುವ ಕ್ರಮ ಇಂದಿಗೂ ನಿಂತಿಲ್ಲ. ಇಂದು ಬೆಳಗ್ಗೆ ತಿಂಡಿಗೆ ರಾಗಿ ರೊಟ್ಟಿ ಮಾಡಿದ್ದೆವು ಎನ್ನುವುದಕ್ಕಿಂತ ಚಪಾತಿ ಎನ್ನುವುದು ಮೇಲುತನದ ಸಂಗತಿಯಾಗಿರುತ್ತದೆ. ತಂಗಳು ಇತ್ತು ತಿಂದೆವು ಎನ್ನುವುದು ಮತ್ತೂ ಕಷ್ಟದ ಸಂಗತಿ. 'ನೀವು ವೆಜ್ಜೋ ನಾನ್ ವೆಜ್ಜೋ' ಎಂದು ಮನೆ ಬಾಡಿಗೆ ಕೊಡುವ ವೇಳೆ ಮತ್ತು 'ಒನ್ಲೀ ಫಾರ್ ವೆಜಿಟೇರಿಯನ್ಸ್' ಎಂದು ಮನೆ ಮುಂದೆ ಬೋರ್ಡು ಹಾಕುವಾಗ ಇರುವುದು ಇಂತಹ ಕ್ರಮ ಮತ್ತು ಮನಸ್ಥಿತಿಯೇ.

ಕನಕ ತನ್ನ ಕೃತಿಯ ಮೂಲಕ ಎತ್ತಿದ 'ಆಹಾರ ರಾಜಕಾರಣದ ಪ್ರಶ್ನೆ ಮತ್ತು ಸಮಸ್ಯೆ' ಇಂದು ಮತ್ತಷ್ಟು ಬೃಹದಾಕಾರವಾಗಿ ವಿಶವರ್ತುಲವಾಗಿ ಬೆಳೆದಿದೆ. ಸ್ಥಳೀಯವಾಗಿದ್ದ ಈ ಸಮಸ್ಯೆ ಇಂದು 'ಜಾಗತೀಕರಣ'ಗೊಂಡಿದೆ. ಆಹಾರದ ಮೇಲೆ ಯಜಮಾನಿಕೆ ನಡೆಸುವ ಮಾರುಕಟ್ಟೆಯ ಧಣಿಗಳು ಇಂದು ಬಲಾಢ್ಯರಾಗಿದ್ದಾರೆ. ಕಳೆದ ನಾಲ್ಕೈದು ದಶಕಗಳವರೆಗೂ ಆಹಾರವನ್ನು ಮಾರುವುದು ಪಾಪದ ಕೆಲಸ ಎಂದು ನಂಬಿದ್ದ ಸಮಾಜದಲ್ಲಿ, ಆಹಾರ ಮಾರಾಟ ದೊಡ್ಡ ಉದ್ಯಮವಾಗಿ ಬೆಳೆದಿದೆ. ಇದರಲ್ಲಿ ಸ್ಥಳೀಯ ಉದ್ದಿಮೆದಾರರಿಂದ ಆರಂಭವಾಗಿ ಬಹುರಾಷ್ಟ್ರೀಯ ಉದ್ದಿಮೆದಾರರವರೆಗೂ ಎಲ್ಲರೂ ಸಕ್ರಿಯವಾಗಿದ್ದಾರೆ. ಮನೆಗಿಂತ ಹೋಟೆಲ್‌ನಲ್ಲಿ ಊಟ ಮಾಡುವುದು ಇಂದು ಪ್ರತಿಷ್ಠೆಯ ಸಂಗತಿ. ಒಂದು ಕಾಲದಲ್ಲಿ ಹೋಟೆಲ್‌ನಲ್ಲಿ ತಿನ್ನುವುದು ವಿನಾಶದ ಸಂಕೇತ. ಚಿತ್ರಾನ್ನ ಅಂತಹದ್ದರ ಸಂಕೇತವಾಗಿ ಬೈಗುಳದ ಮಾತಾಗಿ ಬಳಕೆಯಲ್ಲಿತ್ತು. ಆದರೆ ಇಂದು ದೇಶೀ ರುಚಿಗಳಿಗಿಂತ ವಿದೇಶೀ ರುಚಿಗಳು ನಾಲಗೆಯನ್ನು ಹೆಚ್ಚು ಆಕರ್ಶಿಸುತ್ತಿವೆ. ಇದು ಒಂದು ಸಮಾಜಕ್ಕಿದ್ದ ರುಚಿಯ ಕಲ್ಪನೆಯೇ ಬದಲಾಗುವ ಕಾಲ. ಮತ್ತು ಆಹಾರವನ್ನು ತಯಾರಿಸುವ ಬಗೆಗೆ ಸ್ಥಳೀಯವಾಗಿ ಜನರು ಗಳಿಸಿಕೊಂಡುಬಂದಿದ್ದ ಅರಿವನ್ನು ಕಳೆದುಕೊಳ್ಳುವ ಕಾಲ. ಎಲ್ಲಕ್ಕೂ ಮಾರುಕಟ್ಟೆಯ ಮೇಲೆ ಅವಲಂಬಿತವಾಗಿ ಹೊಟ್ಟೆ ತುಂಬಿಸಿಕೊಳ್ಳುವ ಬಗೆ ಬೆಳೆಯುತ್ತಿದೆ.

ಹೀಗೆ ಉದ್ದಿಮೆಯಾಗಿ ಆಹಾರ ತಯಾರಿಕೆ ನಡೆಯತೊಡಗಿದ ನಂತರ ನಮ್ಮ ನಾಡಿನ ರುಚಿಗಳ ಕಲ್ಪನೆಯಯೂ ಬದಲಾಗತೊಡಗಿದೆ. ಏಕರೂಪೀತನದ ರುಚಿಗಳು ಬೆಳೆಯತೊಡಗಿದೆ. ಮೆಕ್‌ಡೊನಾಲ್ಡ್ ಮಾರುವ ಪದಾರ್ಥಗಳು ಯಾವುದೇ ನಗರದಲ್ಲಿ ಯಾವುದೇ ದೇಶದಲ್ಲಿ ತಿಂದರೂ ಒಂದೇ ರೀತಿಯಲ್ಲಿರುತ್ತದೆ. ಪೆಪ್ಸಿ, ಕೊಕಕೋಲಾ ಪಾನೀಯಗಳೂ ಇಂತಹವೇ. ಕೆಎಫ್‌ಸಿ ಮಾರುವ ಕೋಳಿ ಮಾಂಸದ ರುಚಿಯೂ ಅಷ್ಟೇ. ಇಂತಹ ಇನ್ನೂ ಎಷ್ಟೋ ಉದಾಹರಣೆಗಳನ್ನು ನೀಡಬಹುದು. ಈ ಮೊದಲು ಉಡುಪಿ, ಕಾಮತ್ ಹೋಟೆಲ್‌ಗಳು ಆರಂಭಿಸಿದ

ಉದ್ದಿಮೆಗಳು ಕೂಡ ಇಂತಹದೇ ಏಕರೂಪೀತನದ 'ರುಚಿ'ಗಳನ್ನು ಮಾರುತ್ತಿದ್ದವು. ಇಂದೂ ಕೂಡ ಯಾವುದೇ ಕಾಮತ್ ಹೋಟೆಲ್‌ಗೆ ಹೋದರೂ ಒಂದೇ ಬಗೆಯ ರುಚಿಯ ತಿನಿಸುಗಳನ್ನೇ ಮಾರುತ್ತಾರೆ. ಇಡ್ಲಿ-ವಡೆ ದೇಶದ ಯಾವುದೇ ಮೂಲೆಯಲ್ಲಿ ತಿಂದರೂ ಒಂದೇ ರುಚಿ. ಅಂದರೆ ಆಹಾರದ ಬಹುಬಗೆಗಳು ಮತ್ತು ರುಚಿಗಳು ಇಂದು ಕಾಣೆಯಾಗತೊಡಗಿವೆ. ಶತಮಾನಗಳಿಂದ ರೂಢಿಸಿಕೊಂಡು ಬಂದಿದ್ದ ಆಹಾರದ ಬಗೆಗಳು ಮತ್ತು ರುಚಿಗಳು ಕಾಣೆಯಾಗುತ್ತಿವೆ. ಅವುಗಳನ್ನು ತಯಾರುಮಾಡುತ್ತಿದ್ದ ಅರಿವು ಕೂಡ ಕಾಣೆಯಾಗುತ್ತಿದೆ. ಆಹಾರ ತಯಾರಿಕೆಯು ಉದ್ಯಮೀಕರಣಗೊಂಡ ಸಂದರ್ಭದಲ್ಲಿ ಉದ್ದಿಮೆದಾರರಿಂದ ನಾಲಿಗೆಗಳು ತಿದ್ದಲ್ಪಡುತ್ತಿವೆ. ದೇಶೀ ರುಚಿಗಳನ್ನು ಕಳೆದುಕೊಂಡು ವಿದೇಶಿ ರುಚಿಗಳತ್ತ ಯುವಜನಾಂಗ ನುಗ್ಗುತ್ತಿರುವುದು ಇದನ್ನೇ ಸೂಚಿಸುತ್ತಿದೆ. ನಮ್ಮ ನಾಲಗೆಗಳು, ಮನಸ್ಸುಗಳು, ಕನಸುಗಳು ಎಲ್ಲವೂ ಮಾರುಕಟ್ಟೆಯಲ್ಲಿ ತಿದ್ದಲ್ಪಡುತ್ತಿವೆ. ತಿದ್ದುವ ಮೂಲಕ ಜನರನ್ನು ಖಾಯಮ್ಮಾಗಿ ಮಾರುಕಟ್ಟೆಯ ದಾಸರನ್ನಾಗಿ ಮಾಡುವ ಉದ್ದೇಶವಿದೆ. ಅಂದರೆ ಒಂದು ಸಮುದಾಯ ಸಮಾಜ ರೂಢಿಸಿಕೊಂಡು ಬಂದಿದ್ದ ಆಹಾರ ಸಂಸ್ಕೃತಿಯನ್ನೇ ನಾಶಮಾಡಿ ಮಾರುಕಟ್ಟೆ ಕೇಂದ್ರಿತ ಆಹಾರ ಸಂಸ್ಕೃತಿಯನ್ನು ಬೆಳೆಸುವ ಕೆಲಸಮಾಡಲಾಗುತ್ತದೆ.

ಹಾಗೆ ತಿದ್ದಿದ ಸಮಾಜದಲ್ಲಿಯೇ ವಿಕೆಂಡ್ ಕಲ್ಚರ್ ದೊಡ್ಡ ಪ್ರಮಾಣದಲ್ಲಿ ನಗರಗಳಲ್ಲಿ ಬೆಳೆದಿದೆ. ಬೆಳೆಯುತ್ತಿದೆ. ಇದನ್ನು ಆಧರಿಸಿಯೇ ವಾರಾಂತ್ಯದಲ್ಲಿ ಗ್ರಾಹಕರನ್ನು ಹೆಚ್ಚೆಚ್ಚು ಸುಲಿಗೆ ಮಾಡಲಾಗುತ್ತಿದೆ. ಇಂತಹ ಸುಲಿಗೆಯನ್ನು ಯಾವುದೇ ನಾಚಿಕೆಯಿಲ್ಲದೆ ಉದ್ಯಮಿಗಳು ಮಾಡುತ್ತಿದ್ದಾರೆ. ಜನರೂ ಇದನ್ನು ಗೋಣಗಿಕೊಂಡೇ ಒಪ್ಪಿಕೊಂಡಿದ್ದಾರೆ. ಎಲ್ಲವೂ ಪ್ರತಿಶ್ಠೆಯ, ಬೆಳವಣಿಗೆಯ ಹೆಸರಿನಲ್ಲಿ ನಡೆಯುತ್ತಿವೆ. ಈ ನಡುವೆ ಜನರು ದೇಶೀ ರುಚಿಗಳನ್ನು ಮತ್ತು ಆಹಾರ ತಯಾರಿಕೆಯ ಬಗೆಗಳನ್ನೇ ಕಳೆದುಕೊಂಡು ಸಿದ್ಧ ಮಾದರಿಯ ಮಾರುಕಟ್ಟೆ ಆಧರಿತವಾದ ಆಹಾರ ಸಂಸ್ಕೃತಿಗೆ ತೆರೆದುಕೊಳ್ಳುತ್ತಿದ್ದಾರೆ. ಇದು ಒಂದು ಬಗೆಯಲ್ಲಿ ಆಹಾರ ಸಂಸ್ಕೃತಿಯ ಮೇಲಿನ ಸ್ವಾವಲಂಬನೆಯನ್ನು ಕಳೆದುಕೊಳ್ಳುವ ಕ್ರಮವೇ ಆಗಿರುತ್ತದೆ. ಅಲ್ಲದೆ ದುಡಿಮೆಯ ಬಹುಪಾಲು ಹಣ ಸಂಪತ್ತು ಉದ್ಯಮದಾರರ ಕಡೆ ಹರಿಯತೊಡಗಿದೆ.

ಹಾಗೆ ಬೆಳೆದಿರುವ ಸಂದರ್ಭದಲ್ಲಿ ಹೆಚ್ಚು ಮಾರಾಟವಾಗುವ ಆಹಾರ ಪದಾರ್ಥಗಳು; ಅದರಲ್ಲಿ ಹೆಚ್ಚು ಪ್ರತಿಶ್ಠಿತವಾದ ಮೆನು ಐಟಂಗಳು ಇವೆ. ಇದರ ಭಾಶಿಕ ನುಡಿಗಟ್ಟೇ ಬದಲಾಗಿಹೋಗಿದೆ. ಕನ್ನಡವು ಕಾಣದೇಹೋಗಿದೆ. ಇದರಲ್ಲಿ ರಾಮಧಾನ್ಯದ ಪಾಲು ಎಶ್ಟು? ರಾಗಿ ಹಾಗೆ ಮಹತ್ವ ಪಡೆಯಬೇಕು ಎನ್ನುವುದು ಇಲ್ಲಿ ಉದ್ದೇಶವಲ್ಲ. ಆದರೆ ಇಂತಹ ವಾಣಿಜ್ಯೀಕರಣದ ಪ್ರಕ್ರಿಯೆಯಲ್ಲಿ ರಾಗಿ ಯಾವ ಸ್ಥಾನದಲ್ಲಿ ನಿಂತಿದೆ? ಅದು ಇಂದು ಒಂದು ಆಹಾರ ಪದಾರ್ಥವಾಗಿ ಎಶ್ಟು ಸಾಮಾಜಿಕ ಮಾನ್ಯತೆಯನ್ನು ಉಳಿಸಿಕೊಂಡಿದೆ? ಎಂಬುದು ಮುಖ್ಯ

ಪ್ರಶ್ನೆಯಾಗಿದೆ. ಕನಕ ಮಾನ್ಯಮಾಡಿದ ರಾಮಧಾನ್ಯ ಮತ್ತು ಶ್ರೀಸಾಮಾನ್ಯರು ಈ ಆಹಾರ ಮಾರುಕಟ್ಟೆಯಲ್ಲಿ ಎಲ್ಲಿ ನಿಂತಿದ್ದಾರೆ? ಎಂಬುದು ಇಂದಿನ ಪ್ರಶ್ನೆಯಾಗಿದೆ. ಅಂದರೆ ಬೆಳೆದಿರುವ ಈ ಆಹಾರೋದ್ಯಮದಲ್ಲಿ, ಮೆನು ಪದಾರ್ಥಗಳು ಮತ್ತು ಹೋಟೆಲ್‌ಗಳು ಎಲ್ಲ ಜನರಿಗೂ ಸಮಾನವಾಗಿ ದೊರೆಯುವಂತಹವುಗಳಲ್ಲ. ಅವು ಜನರ ವರ್ಗಗುಣವನ್ನು ಆಧರಿಸಿವೆ. ಇಲ್ಲಿ ಜಾತಿ ಪ್ರಧಾನವಾಗಿಲ್ಲ. ಯಾವ ಜಾತಿಯಾಗಿದ್ದರೂ ಹಣವಿದ್ದರೆ ಯಾವುದೇ 'ಪ್ರತಿಷ್ಠಿತ' ಹೋಟೆಲ್‌ನಲ್ಲಿ ಊಟ ಮಾಡಬಹುದು. ಅಷ್ಟರ ಮಟ್ಟಿಗೆ ಹಣ ಮತ್ತು ಬಂಡವಾಳವಾದವು ಜಾತಿಯನ್ನು ಪಕ್ಕಕ್ಕೆ ಸರಿಸಿದೆ. ದುರಂತವೆಂದರೆ ಹಿಂದೆ ಜಾತಿ ನಿರ್ವಹಿಸುತ್ತಿದ್ದ ಪಾತ್ರವನ್ನು ಇಂದು ಹಣ ನಿರ್ವಹಿಸುತ್ತಿದೆ. ಹಣ ಇಂದು ಯಾರು ಎಲ್ಲಿಗೆ ಪ್ರವೇಶಿಸಬೇಕು? ಎಲ್ಲಿಗೆ ಪ್ರವೇಶಿಸಬಾರದು? ಎಂದು ನಿರ್ಧರಿಸುತ್ತದೆ. ಆಹಾರೋದ್ಯಮದಲ್ಲಿ ಇಂದು ಜಾತಿಯ ಕೆಲಸವನ್ನು ಹಣ ನಿರ್ವಹಿಸುತ್ತಿದೆ. ಹಣವೇ ಧರ್ಮ, ಜಾತಿ, ಆಧ್ಯಾತ್ಮ ಎಲ್ಲವೂ ಆಗಿ ಈ ಕಾಲದಲ್ಲಿ ಬದಲಾಗಿದೆ. ಆದರೆ ಇಲ್ಲಿ ಜಾತಿವ್ಯವಸ್ಥೆ ತೊಲಗಿದೆ ಎಂದು ಯಾರೂ ತಿಳಿಯಬಾರದಷ್ಟೇ.

ಅಂದರೆ ಕನಕ ಎತ್ತಿದ ಆಹಾರಗಳ ನಡುವಣ ತರತಮದ ನೆಲೆಯು ಜಾತಿಯ ನೆಲೆಯಿಂದ ಅದು ವರ್ಗದ ನೆಲೆಗೆ ಇಂದು ಜಿಗಿದಿದೆ. ಇಂದು ಜನರು ತಮ್ಮ ದೈನಂದಿನ ಬದುಕಿನಲ್ಲಿ ತೆಗೆದುಕೊಳ್ಳುವ ಆಹಾರದ ಪ್ರಮಾಣ ಮತ್ತು ಆಹಾರದ ಬಗೆಗಳು ಅವರ ಆದಾಯ ಮತ್ತು ವರ್ಗ ಮೂಲವನ್ನು ಆಧರಿಸಿರುತ್ತವೆ. ಕನಕನ ಕಾಲದಲ್ಲಿ ರಾಗಿ ಕೆಳಸ್ತರದಲ್ಲಿದ್ದರೆ ಅಕ್ಕಿ ಮೇಲುಸ್ತರದಲ್ಲಿ ಇತ್ತು. ಇಂದು ಅಕ್ಕಿಗೂ ಮೇಲೆ ಗೋಧಿ ಇದೆ. ಅದರಿಂದ ತಯಾರಿಸಿದ ಉತ್ತರ ಭಾರತ, ಚೈನೀಸ್ ಮತ್ತು ಅಮೆರಿಕ-ಯೂರೋಪಿನ ಪದಾರ್ಥಗಳು ಪ್ರತಿಷ್ಠಿತ ಆಹಾರ ಪದಾರ್ಥಗಳಾಗಿ ಯುವಜನಾಂಗವನ್ನು ಹೆಚ್ಚು ಆಕರ್ಶಿಸುತ್ತಿವೆ. ಅಂದರೆ ಪೀಜಾ ಬರ್ಗರ್ ಇತ್ಯಾದಿಗಳು ಎಲ್ಲ ವರ್ಗಗಳಿಗೆ ಬದಲಾಗಿ ಉಳ್ಳವರ್ಗಗಳ ಪ್ರತಿಷ್ಠಿತ ಆಹಾರ ಪದಾರ್ಥವಾಗಿ ಉಳಿದಿದೆ. ಈ ವರ್ಗಗಳ ಜನರನ್ನು ಆಕರ್ಶಿಸಿ ಅವರನ್ನು ತಲುಪಿ ಲಾಭವನ್ನು ಹೆಚ್ಚಿಸಿಕೊಳ್ಳಲು ಉದ್ದಿಮೆದಾರರು ಯೋಚಿಸುತ್ತಾರೆ. ಅಂದರೆ ಬದಲಾದ ಮಾರುಕಟ್ಟೆಯ ವ್ಯವಸ್ಥೆಯಲ್ಲಿ ಸ್ಥಳೀಯವಾಗಿದ್ದ ಆಹಾರ ರಾಜಕಾರಣವು ಹೊಸರೂಪ ಪಡೆದು ಜಾಗತಿಕ ನೆಲೆಗೆ ವಿಸ್ತರಣೆ ಪಡೆದಿದೆ. ಉದ್ಯಮರಹಿತ ಚಟುವಟಿಕೆಯಾಗಿದ್ದ ಆಹಾರ ಮತ್ತು ಅದರ ತಯಾರಿಕೆ ಇಂದು ಉದ್ಯಮವಾಗಿ ಮಾರುವ ಸರಕಾಗಿ ಬದಲಾಗಿದೆ.

ಈ ಹಂತದಲ್ಲಿ 'ರಾಮಧಾನ್ಯ ಮತ್ತು ಶ್ರೀಸಾಮಾನ್ಯರು' ಮತ್ತೂ ಕೆಳಗೆ ಸರಿದಿದ್ದು ಅದರ ಪದಾರ್ಥಗಳು ಮತ್ತು ಅದನ್ನು ಉತ್ಪಾದನೆ ಮಾಡುವ ಶ್ರೀಸಾಮಾನ್ಯ ರೈತರು ಮತ್ತೂ ಕುಗ್ಗಿ ಹೋಗಿದ್ದಾರೆ. ಭತ್ತ ಮತ್ತು ಗೋಧಿಗಳು ವಾಣಿಜ್ಯ ಬೆಳೆಗಳಾಗಿ ಉತ್ಪಾದನೆಯಾಗಿ ಮಾರಾಟವಾದಂತೆ ರಾಗಿ ಇಂದು ಉತ್ಪಾದನೆಯೂ ಆಗುತ್ತಿಲ್ಲ. ಮಾರಾಟವೂ ಆಗುತ್ತಿಲ್ಲ. ಬದಲಿಗೆ ಕರ್ನಾಟಕ ಬಹುಮುಖ್ಯ ಆಹಾರ

ಧಾನ್ಯಗಳಾಗಿದ್ದ ರಾಗಿ ಮತ್ತು ಜೋಳಗಳ ಉತ್ಪಾದನೆ ಪ್ರಮಾಣ ಕುಗ್ಗಿದೆ. ಭೂಪ್ರದೇಶ ಕಡಿಮೆಯಾಗಿದೆ. ಜೋಳ ರಾಗಿಗಳ ಬೆಳೆ ಆಕರ್ಶಕ ಬೆಳೆಗಳಾಗಿಯೂ ಉಳಿದಿಲ್ಲ. ತೊಗರಿ, ಹತ್ತಿ, ಸೂರ್ಯಕಾಂತಿ, ಸೋಯಾ ಮುಂತಾದ ಲಾಭತರುವ ಬೆಳೆಗಳಾಗಿ ರೈತರಿಗೆ ಕಾಣುತ್ತಿವೆ. ಇವುಗಳನ್ನು ಬೆಳೆಯಲು ಮುಂದಾಗಿದ್ದಾರೆ. ಇದೇ ಸಂದರ್ಭದಲ್ಲಿಯೇ ರೈತರು ಹೆಚ್ಚು ಸಾಲಗಾರರಾಗಿ ಆತ್ಮಹತ್ಯೆಯ ದಾರಿಯನ್ನು ತುಳಿದಿರುವುದು. ಇದು ಗಂಭೀರವಾಗಿ ಚರ್ಚೆಯಾಗಬೇಕಾದ ವಿಚಾರ. ಸದ್ಯ ನಾವು ರಾಗಿಯನ್ನೇ ಕುರಿತು ಯೋಚಿಸಿದರೆ ಕಳೆದ ಮೂವತ್ತು ವರ್ಶಗಳಲ್ಲಿ ಅದರ ಬೆಲೆಯಲ್ಲಿ ಹೆಚ್ಚು ಏರುಪೇರಾಗಿಲ್ಲ. ಅದರ ಬಳಕೆದಾರರ ಪ್ರಮಾಣದಲ್ಲಿ ಗಣನೀಯವಾಗಿ ಏರಿಕೆಯಾಗಿಲ್ಲ. ತನ್ನ ಸಾಮಾಜಿಕ ಮಾನ್ಯತೆಯನ್ನೂ ಹೆಚ್ಚಿಸಿಕೊಂಡಿಲ್ಲ. ಈ ಅರ್ಥದಲ್ಲಿ 'ರಾಮಧಾನ್ಯ' ಮಾರುಕಟ್ಟೆಯಿಂದಲೂ, ಉತ್ಪಾದನೆಯ ನೆಲೆಯಿಂದಲೂ, ಮುಖ್ಯ ಆಹಾರದ ನೆಲೆಯಿಂದಲೂ ದೂರವಾಗುವ ಹಂತಕ್ಕೆ ಬಂದುಮುಟ್ಟಿದೆ. ಇದು ರಾಗಿ ಪ್ರಶ್ನೆಯಲ್ಲ. ಅದು ಪ್ರತಿನಿಧಿಸುವ ಶ್ರೀಸಾಮಾನ್ಯರ ಬದುಕಿನ ಪ್ರಶ್ನೆ. ರೈತರ ಉಳಿವಿನ ಪ್ರಶ್ನೆ. ಸಮಾಜದಲ್ಲಿ ಅವರು ಪಡೆಯುತ್ತಿರುವ ಘನತೆ ಪ್ರಾಧಾನ್ಯತೆಗಳ ಪ್ರಶ್ನೆ. ಅಂದರೆ ತಾತ್ವಿಕವಾಗಿ ಸಾಹಿತ್ಯದಲ್ಲಿ ಮಾನ್ಯನಾಗುವ ಶ್ರೀಸಾಮಾನ್ಯ ಸಾಮಾಜಿಕ ಬದುಕಿನಲ್ಲಿ ಅಮಾನ್ಯನಾಗುವ, ಮತ್ತಶ್ಟು ವಂಚನೆಗೆ ಗುರಿಯಾಗುವ ಸಾಧ್ಯತೆಗಳೇ ಹೆಚ್ಚುತ್ತಿವೆ. ಜಾಗತಿಕ ಮಾರುಕಟ್ಟೆ ಅದಕ್ಕೆ ಮತ್ತಶ್ಟು ಇಂಬುಕೊಟ್ಟು ಮತ್ತೂ ಕುಗ್ಗಿಸುವ ಕೆಲಸ ಮಾಡುತ್ತಿದೆ. ರಾಗಿ ಜೋಳಗಳನ್ನು ಅವುಗಳನ್ನು ಬೆಳೆವ ಬಳಸುವ ಶ್ರೀಸಾಮಾನ್ಯರನ್ನು ಮತ್ತಶ್ಟು ಅಮಾನ್ಯ ಮಾಡುವ ಮಸಲತ್ತುಗಳೇ ಮಾರುಕಟ್ಟೆಯಲ್ಲಿ ನಡೆಯುತ್ತಿವೆ. ಇದಕ್ಕೆ ರಾಜಕೀಯ ಆರ್ಥಿಕ ನೆಲೆಗಳು ನೆರವು ನೀಡುತ್ತಿವೆ.

ಇದು ಕನಕನ ರಾಮಧಾನ್ಯ ಮತ್ತು ಶ್ರೀಸಾಮಾನ್ಯರು ಈ ಹಿಂದೆ ಎದುರಿಸಿದ್ದಕ್ಕಿಂತ ಭೀಕರವಾದ ಸವಾಲನ್ನು ಎದುರಿಸುತ್ತಿದ್ದಾರೆ. ಅಕ್ಕಿ ಗೋಧಿಗಳು ರಾಶ್ಟ್ರ ಮತ್ತು ಅಂತಾರಾಶ್ಟ್ರೀಯ ಬೆಳೆಗಳಾಗಿ ಪರಿಗಣಿತವಾಗಿ ಅವು ತಮ್ಮ ಎಲ್ಲೆಯನ್ನು ವಿಸ್ತರಿಸಿಕೊಂಡಿವೆ. ಹಾಗೆಯೇ ಉಳ್ಳವರ್ಗಗಳು ಕೂಡ ತಮ್ಮ ಬದುಕಿನ ಗಡಿಗಳನ್ನು ದೇಶಗಳ ಗಡಿಗಳನ್ನು ವಿಸ್ತರಿಸಿಕೊಂಡಿವೆ. ಹೀಗೆ ಎಂದಿಗೂ ತಮ್ಮ ಗಡಿಗಳನ್ನು ಮೀರಲು ಸಾಧ್ಯವೇ ಆಗದ ಜನರು ಅಮಾನ್ಯಗೊಳ್ಳುತ್ತಲೇ ಇರುತ್ತಾರೆ. ರಾಗಿ ತನ್ನ ಪ್ರದೇಶವನ್ನು ದಾಟಿ ಹೋಗಲು ಸಾಧ್ಯವಾಗದ ಸ್ಥಿತಿಯಲ್ಲಿದೆ. ರಾಗಿ ಬಳಸುವ ಕೆಲವರು ಮಾತ್ರ ಗಡಿ ದಾಟಿರಬಹುದು. ಹಾಗೆ ದಾಟಿ ಅಕ್ಕಿ ಗೋಧಿ ಪೀಜಾ ಬರ್ಗರ್‌ಗಳ ರುಚಿಗೆ ಬದಲಾಗಿರಲೂಬಹುದು. ಇಂತಹ ಸಂದರ್ಭದಲ್ಲಿಯೇ ಆಹಾರ ಪದಾರ್ಥಗಳು ಧಾನ್ಯಗಳ ಬೆಲೆಗಳು ತೀವ್ರವಾಗಿ ಏರುತ್ತಿರುವುದು ಜನರನ್ನು ಮತ್ತಶ್ಟು ಆತಂಕಿರನ್ನಾಗಿ ಅಭದ್ರರನ್ನಾಗಿಯೂ ಮಾಡುತ್ತದೆ. ಆಹಾರದ ಬೆಲೆಗಳು ಇಶ್ಟೊಂದು ಏರುತ್ತಿದ್ದರೂ ರೈತರು ಲಾಭಪಡೆದು ನೆಮ್ಮದಿ ಬದುಕನ್ನು ನಡೆಸಲು ಸಾಧ್ಯವಾಗಿಲ್ಲ. ಅವರು ಸಮಸ್ಯೆಯಲ್ಲಿ ನರಳುತ್ತಲೇ ಇದ್ದಾರೆ. ಅಂದರೆ ಗ್ರಾಹಕರು

ಮತ್ತು ಆಹಾರ ಧಾನ್ಯಗಳನ್ನು ಉತ್ಪಾದಿಸುವ ರೈತರು ಮಾರುಕಟ್ಟೆಯ ವ್ಯಾಪಾರಿಗಳ ಉದ್ದಿಮೆದಾರರ ಹಿಡಿತಕ್ಕೆ ಸಿಕ್ಕು ನಿತ್ಯ ನರಳುವ ಸ್ಥಿತಿ ಎದುರಾಗಿರುವುದು ಇದರಿಂದ ಖಚಿತಗೊಳ್ಳುತ್ತದೆ. ಅಲ್ಲದೆ ಈಗಾಗಲೇ ವಿಶ್ವವ್ಯಾಪಾರ ಸಂಘಟನೆಯ ನೀತಿಗಳನ್ನು ಭಾರತ ಒಪ್ಪಿಕೊಂಡಿರುವ ಕಾರಣ ದೇಶದ ಕೃಷಿ ಚಟುವಟಿಕೆಗಳಿಗೆ ಹೆಚ್ಚು ಸಬ್ಸಿಡಿ ನೀಡದಂತೆ ತಡೆಯಲಾಗಿದೆ. ವಿದ್ಯುತ್, ರಸಗೊಬ್ಬರ ಇತ್ಯಾದಿಗಳಿಗೆ ನೀಡುತ್ತಿದ್ದ ಸಬ್ಸಿಡಿಯನ್ನು ಕಡಿತಗೊಳಿಸಲಾಗಿದೆ. ಕೃಷಿ ಕ್ಷೇತ್ರಕ್ಕೆ ವಿದೇಶೀ ಕಂಪನಿಗಳು ನುಗ್ಗಿವೆ. ಇದರಿಂದ ರೈತರು ಮತ್ತಷ್ಟು ಸಂಕಷ್ಟಕ್ಕೆ ಗುರಿಯಾಗಿ ನಷ್ಟ ಅನುಭವಿಸಿ ನಾಶದ ದಾರಿಯಲ್ಲಿದ್ದಾರೆ. ಅಲ್ಲದೆ ದೇಶದ ಆಹಾರ ಭದ್ರತೆಗೆ ದೇಶದಲ್ಲಿ ಹೆಚ್ಚು ಆಹಾರ ಧಾನ್ಯಗಳನ್ನು ದಾಸ್ತಾನು ಮಾಡದಂತೆ ನಿರ್ಬಂಧ ಹೇರಲಾಗಿದೆ. ಇದರ ವಿರುದ್ಧ ದನಿಯೆತ್ತಿ ತನ್ನ ದೇಶದ ಹಿತ ಕಾದುಕೊಳ್ಳಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಇದು ವ್ಯಾಪಾರೀ ವರ್ಗ ಮಾರುಕಟ್ಟೆಯ ಮೇಲೆ ತನ್ನ ಹಿಡಿತವನ್ನು ಇನ್ನಷ್ಟು ಬಿಗಿಗೊಳಿಸಿ ಲಾಭದ ಕಿರಾತಕತನದಿಂದ ಕೃತಕ ಕೊರತೆಯನ್ನು ಸೃಷ್ಟಿಸಿದರೆ ಕ್ಷಾಮದ ಸ್ಥಿತಿ ಹುಟ್ಟಿಸಿ ಜನರು ಆಹಾರದ ಕೊರತೆಯಿಂದ ನರಳಿ ಸಾಯುವುವಂತೆ ಮಾಡುವುದೇ ಇದರ ಉದ್ದೇಶ. ಅಂದರೆ ದೇಶದ ಆಹಾರ ಉತ್ಪಾದನೆ ಮತ್ತು ವಿತರಣೆಯ ಪ್ರಕ್ರಿಯೆಯು ದೇಶೀ–ವಿದೇಶೀ ವ್ಯಾಪಾರಿಗಳ, ಮಾರುಕಟ್ಟೆಯ ಹಿಡಿತಕ್ಕೆ ಸಿಕ್ಕಿಕೊಂಡಿರುವುದು ಆತಂಕದ ವಿಚಾರವೇ ಸರಿ. ಇದು ಮುಂದಿನ ದಿನಗಳಲ್ಲಿ ದೊಡ್ಡ ಸಮಸ್ಯೆಯನ್ನು ತಂದೊಡ್ಡುವ ಅಪಾಯವಿದೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಸಂಗತಿಯೆಂದರೆ 'ರಾಮಧಾನ್ಯ'ವು ಬಡವರ ಧಾನ್ಯ ಎಂಬುದು ಇಂದು ರೂಪಕ ಮಾತ್ರವಾಗಿದೆ. ಅನ್ನಭಾಗ್ಯದಂತಹ ಯೋಜನೆಗಳು ಮತ್ತು ಅಕ್ಕಿ ಸಾಮಾಜಿಕವಾಗಿ ಪಡೆದಿರುವ ಮಾನ್ಯತೆಯ ಕಾರಣವಾಗಿ ಬಡವರು ಅದನ್ನು ಬಳಸುತ್ತಿದ್ದಾರೆ; ಅಂದರೆ ವಿವಿಧ ಯೋಜನೆಗಳ ಪರಿಣಾಮವಾಗಿ ಅಕ್ಕಿ ಬಡವರ ಆಹಾರವಾಗಿ ಬಳಕೆಯಾಗುತ್ತಿದೆ. ರಾಗಿಯಂತೆ ಅಕ್ಕಿಯೂ 'ಶೂದ್ರಾನ್ನ'ವಾಗಿದೆ. ಅಂದರೆ ರಾಮಧಾನ್ಯ ಚರಿತೆಯ 'ರೂಪಕ' ಬದಲಾದ ಸಂದರ್ಭದಲ್ಲಿ ತನ್ನ ಸ್ವರೂಪವನ್ನು ಬದಲಿಸಿಕೊಳ್ಳುತ್ತಿದೆ. ಅಲ್ಲದೆ ಒಂದು ಕಾಲಕ್ಕೆ ಅಕ್ಕಿಯು ರೋಗಿಗಳು ತಿನ್ನುವ ಆಹಾರ ಎನ್ನಲಾಗಿತ್ತು. ಇಂದು ಒಂದು ಸೀಮಿತ ವಲಯದಲ್ಲಾದರೂ ರಾಗಿಯೂ ರೋಗಿಗಳ ಆಹಾರವಾಗಿ ಮತ್ತು ಉಳ್ಳವರ ಆಹಾರವಾಗಿ ಬದಲಾಗಿದೆ. ಡಯಾಬಿಟಿಸ್ ರೋಗಿಗಳು ತಿನ್ನಬಹುದಾದ ಆಹಾರ ಧಾನ್ಯ ಎಂದಾಗಿದೆ. ಆದರೆ ಇಡೀ ಸಮಾಜದಲ್ಲಿ ಅಲ್ಲ. ಅದರ ಕೆಲವು ಪದಾರ್ಥಗಳು ಉದಾಹರಣೆ ರಾಗಿ ದೋಸೆ, ಬಿಸ್ಕೆಟ್ ರೊಟ್ಟಿ, ಮುದ್ದೆಗಳು ಮಧ್ಯಮ ವರ್ಗದ ಕೆಲವು ವಿಶೇಶ ತಿನಿಸುಗಳ ಸ್ಥಾನಮಾನ ಪಡೆದಿವೆ. ಅವು ಬಡವರಿಗೆ ದೊರೆಯದ 'ಸರಕು'ಗಳೂ ಆಗಿವೆ. ಆದರೆ ಅದು ರಾಗಿ ಮತ್ತು ಅಕ್ಕಿಗಳ ರೂಪಕದ ಹಂತದಲ್ಲಿ ಅದು ಇಂದಿಗೂ ಕೂಡ ಉನ್ನತ ವರ್ಗದವರ ಆಹಾರ ಪದಾರ್ಥವಾಗಿಯೇ ಇದೆ. ರಾಗಿ ಬಡವರ ಆಹಾರ ಪದಾರ್ಥವಾಗಿಯೇ ಇದೆ. ಅಂದರೆ ಸಾಮಾಜಿಕ

ಆರ್ಥಿಕ ಸಂದರ್ಭಗಳು ಬದಲಾದಂತೆ ರೂಪಕಗಳು ತಮ್ಮ ಅರ್ಥಗಳನ್ನು ಪಲ್ಲಟಿಸಿಕೊಳ್ಳುವುದು ರಾಮಧಾನ್ಯದ ಸಂದರ್ಭದಲ್ಲಿ ಕಾಣಬಹುದು. ಹಾಗಿದ್ದಾಗಲೂ ಒಟ್ಟು ಆಹಾರ ಉದ್ಯಮದಲ್ಲಿ ರಾಗಿ ಮಹತ್ವ ಯಾವುದು? ಎಂಬುದನ್ನು ಗಮನಿಸಿದರೆ ಅದು ಇಂದಿಗೂ ಬಡವರ ದಕ್ಷಿಣ ಕರ್ನಾಟಕದ ಹಳ್ಳಿಗಳ ಕೆಳಜಾತಿಗಳ ಆಹಾರವಾಗಿಯೇ ಇದೆ.

ಇದಲ್ಲದೆ ನಾವು ಗಮನಿಸಬೇಕಾದ ಮತ್ತೊಂದು ಮುಖ್ಯ ಸಂಗತಿಯೆಂದರೆ ಇಂದು ಆಹಾರದ ಉತ್ಪಾದನೆ, ವಿತರಣೆ ಮತ್ತು ಬಳಕೆಗಳನ್ನು ನಿಯಂತ್ರಿಸುವ ಶಕ್ತಿಯನ್ನು ರೈತಾಪಿಗಳು ಶ್ರೀಸಾಮಾನ್ಯರು ಕಳೆದುಕೊಂಡಿದ್ದಾರೆ. ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿರುವ ಕೃಶಿವಲಯಕ್ಕೆ ದೊಡ್ಡ ಉದ್ದಿಮೆದಾರರು ಬಹುರಾಷ್ಟ್ರೀಯ ಕಂಪನಿಗಳು ಪ್ರವೇಶಿಸಿವೆ. ಕಾರ್ಪೋರೇಟ್ ಫಾರ್ಮಿಂಗ್ ಹೆಸರಿನಲ್ಲಿ ಕೃಶಿ ಕ್ಷೇತ್ರಕ್ಕೆ ಪ್ರವೇಶಿಸಿದ್ದು ಸೊಪ್ಪಿನಿಂದ ಮಾಂಸದವರೆಗೆ ಎಲ್ಲವನ್ನು ಉತ್ಪಾದಿಸಿ ಮಾರುವವರೆಗಿನ ಎಲ್ಲಹಂತಗಳಲ್ಲೂ ಕಾರ್ಪೊರೇಟ್ ಸಂಸ್ಥೆಗಳು ಕ್ರಿಯಾಶೀಲವಾಗಿವೆ. ಇದು ಶ್ರೀಸಾಮಾನ್ಯರು ಮತ್ತು ರೈತಾಪಿಗಳು ಇವುಗಳೊಂದಿಗೆ ಸ್ಪರ್ಧಿಸಲಾಗದೆ ಮತ್ತಷ್ಟು ಸಮಸ್ಯೆಯನ್ನು ಎದುರಿಸುತ್ತ ಮತ್ತು ಕೃಶಿಯಿಂದ ದೂರವಾಗಿ ನಗರದ ಕೂಲಿಗಳಾಗಿ ಬದಲಾಗುತ್ತಿದ್ದಾರೆ. ಉತ್ಪಾದನೆಯ ನೆಲೆಯಿಂದ ದೂರವಾಗುವ ಜನರು ಗ್ರಾಹಕರಾಗಿ ಪರಾವಲಂಬಿಗಳಾಗಿ ಬದಲಾಗುತ್ತದೆ. ಮಾರುಕಟ್ಟೆಯ ಉದ್ದಿಮೆದಾರರ ಹಿಡಿತಕ್ಕೆ ಸಿಕ್ಕಿಕೊಳ್ಳುತ್ತಾರೆ. ಜನರು ಆಹಾರದ ಉತ್ಪಾದನೆ ಮತ್ತು ಬಳಕೆಯ ಸ್ವಾವಲಂಬನೆಯನ್ನು ಕಳೆದುಕೊಂಡು ಮಾರುಕಟ್ಟೆಯ ಮೇಲೆ ಪರಾವಲಂಬನೆಗೊಳ್ಳುವುದು ಅವರು ಖಾಯಂ ಆಗಿ ತಮ್ಮ ಸ್ವಾತಂತ್ರ್ಯ ಸ್ವಾವಲಂಬನೆಯನ್ನು ಕಳೆದುಕೊಂಡಂತೆಯೇ ಸರಿ. ಸದಾ ಮಾರುಕಟ್ಟೆಯ ಇಕ್ಕಳದಲ್ಲಿ ಸಿಕ್ಕಿಕೊಂಡು ನರಳುತ್ತಲೇ ಇರಬೇಕಾದ ಸಂಕಷ್ಟ ಎದುರಾಗುತ್ತದೆ. ಇಂತಹ ಸಂದರ್ಭದಲ್ಲಿ ನಮ್ಮ ಪ್ರಭುತ್ವವು ಮೇಡ್ ಇನ್ ಇಂಡಿಯಾವನ್ನು ಬದಲಿಸಿ 'ಮೇಕ್ ಇನ್ ಇಂಡಿಯಾ' ಎಂಬ ಸಾರಿಕೆ ನುಡಿಗಳನ್ನು ಹುಟ್ಟಿಸಿ ವಿದೇಶಿ ದಣಿಗಳನ್ನು ಕರೆದು ರೈತಾಪಿಗಳ ಭೂಮಿಯನ್ನು ಕಸಿದು ಅವರಿಗೆ ಅರ್ಪಿಸಲಾಗುತ್ತಿದೆ. ಕೃಶಿ ಮತ್ತು ಆಹಾರ ತಯಾರಿಕೆಯ ವಲಯಕ್ಕೂ ವಿದೇಶಿ ಉದ್ದಿಮೆಗಳು ದಾಳಿ ಮಾಡುತ್ತಿವೆ. ಚಿಲ್ಲರೆ ವ್ಯಾಪಾರ ವಲಯಕ್ಕೂ ಪ್ರವೇಶಿಸಿವೆ. ಸರ್ಕಾರಿ ಪಂಡಿತರ ಪ್ರಕಾರ ಭಾರತದಲ್ಲಿ ಶೇಕಡ 60ರಷ್ಟು ಜನ ಕೃಶಿಯನ್ನು ಅವಲಂಬಿಸಿದ್ದಾರೆ. ಇದು ಸಣ್ಣ ಹಿಡುವಳಿದಾರರಿಂದ ನಡೆಯುತ್ತಿದ್ದ ಲಾಭದಾಯಕವಾದ ಉದ್ದಿಮೆಯಾಗಿಲ್ಲ. ಹಾಗಾಗಿ ಅದನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ ಕಾರ್ಪೋರೇಟ್ ಸಂಸ್ಥೆಗಳಿಗೆ ಕೃಶಿ ಕ್ಷೇತ್ರದಲ್ಲಿ ಅವಕಾಶ ಕಲ್ಪಿಸಿಕೊಡುವ ಕೆಲಸ ಮಾಡಲಾಗುತ್ತಿದೆ. ಇದು ಜಾರಿಯಾದದ್ದೇ ಆದರೆ ಇದುವರೆಗೂ ಸಣ್ಣ ಹಿಡುವಳಿದಾರರು ಮತ್ತು ಕೃಶಿಕೂಲಿಗಳಾಗಿದ್ದವರು ನಗರದ ಕೂಲಿಗಳಾಗಿ ಬದಲಾಗುತ್ತಾರೆ. ಅಲ್ಲಿ ಶ್ರೀಸಾಮಾನ್ಯರು ಮತ್ತಷ್ಟು ಅದೃಶ್ಯರಾಗಿ ಅಮಾನ್ಯರಾಗಿಯೇ ಬಾಳುತ್ತಾರೆ. ಆದರೆ

ಇದನ್ನೇ ಶ್ರೀಸಾಮಾನ್ಯರ ಮತ್ತು ದೇಶದ ಅಭಿವೃದ್ಧಿಯೆಂದು ಮಾಧ್ಯಮಗಳ ಮೂಲಕ ಮೌಢ್ಯವನ್ನು ಸಾರಲಾಗುತ್ತದೆ.

ಅಂದರೆ ಬದಲಾದ ಆರ್ಥಿಕ ರಾಜಕೀಯ ಸನ್ನಿವೇಶಗಳು ಶ್ರೀಸಾಮಾನ್ಯರನ್ನು ಮತ್ತಷ್ಟು ಅತಂತ್ರಗೊಳಿಸಿ ಸುಲಿಗೆ ಮಾಡುವುದನ್ನೇ ಮಾಡುತ್ತವೆ. ಇಂತಹ ಸನ್ನಿವೇಶದಲ್ಲಿ ರಾಮಧಾನ್ಯ ಮತ್ತು ಶ್ರೀಸಾಮಾನ್ಯ ಕನಕ ಹೇಳಿದಂತೆ ಕಡೆಯಲ್ಲಿ ಅಂಚಿನಲ್ಲಿಯೇ ಉಳಿದಿರುತ್ತಾರೆ. ನಮ್ಮ ಸಮಾಜ ಪರಂಪರೆಗಳು ಕಟ್ಟಿಕೊಂಡು ಬಂದಿದ್ದ ಕೃಶಿ ವಿವೇಕ ಎಲ್ಲವನ್ನು ನಾಶಮಾಡಿ ರೈತಾಪಿಗಳನ್ನು ಖಾಯಂ ಕೂಲಿಗಳಾನ್ನಾಗಿ ಮಾಡಲಾಗುತ್ತಿದೆ. ಹೀಗೆ ಮಾಡುವ ಮೂಲಕ ಶ್ರೀಸಾಮಾನ್ಯ ಜನರನ್ನು ಅವರ ಆಹಾರ ಸಂಸ್ಕೃತಿಯನ್ನು ನಾಶಮಾಡಲಾಗುತ್ತಿದೆ. ರಾಗಿ ಜೋಳ ಆಹಾರ ಬಳಕೆದಾರರನ್ನು ಅಕ್ಕಿಗೋಧಿಗಳ ಬಳಕೆದಾರರನ್ನಾಗಿ ಬದಲಿಸಿ ಆಹಾರ ಮಾರುಕಟ್ಟೆಯ ದಾಸರನ್ನಾಗಿ ಮಾಡಲಾಗುತ್ತಿದೆ. ಇದೇ ಸಂದರ್ಭದಲ್ಲಿ ಶ್ರೀಸಾಮಾನ್ಯರಿಗೆ ಕಟ್ಟಿಕೊಟ್ಟಿರುವ ಬದುಕಿನ ದಾರಿಗಳು ಸ್ವಾವಲಂಬಿಯಾದವುಗಳಲ್ಲ. ಅದು ಮಾರುಕಟ್ಟೆಯ ವಂಚಕದಾರಿಯಲ್ಲಿಯೇ ನಡೆಯಬೇಕಾದ ಬಂಧನದ ದಾರಿ. ಇಂತಹ ಬಂಧನಕ್ಕೆ ಇದುವರೆಗೂ ಜನರು ಸಿಕ್ಕಿಕೊಂಡಿರಲಿಲ್ಲ. ಕನಕನ ಕಾಲದಲ್ಲಿಯೂ ಇರಲಿಲ್ಲ. ಇದ್ದರೂ ಹಳ್ಳಿಗಳ ಚಿಕ್ಕಪಟ್ಟಣಗಳ ಶೆಟ್ಟರ ಚಿಕ್ಕಪುಟ್ಟ ವ್ಯವಹಾರಂಗಳನ್ನು ಮಾತ್ರ ಬಲ್ಲವರಾಗಿದ್ದರು. ಈಗಿನ ದೇಶೀಯ ಮತ್ತು ಬಹುದೇಶೀಯ ಮಾರುಕಟ್ಟೆಯ ಜಾಲವು ನಾವು ಊಹಿಸಲಾರದ ಮಟ್ಟಿಗೆ ವ್ಯಾಪಕವಾದುದು ಹಾಗೂ ಬಲಾಢ್ಯವಾದುದು. ಇದು ಗ್ರಾಹಕರ ನೆತ್ತರು ಬೆವರುಗಳ ನಡುವೆ ವ್ಯತ್ಯಾಸವಿಲ್ಲದಂತೆ ಹೀರುತ್ತಲೇ ಇರುತ್ತದೆ. ಇಂತಹ ಸಂದರ್ಭದಲ್ಲಿ ಸಾಹಿತ್ಯದ ರೂಪಕಗಳಲ್ಲಿ ಮಾನ್ಯವಾಗುವ ಶ್ರೀಸಾಮಾನ್ಯರು ವಾಸ್ತವ ಬದುಕಿನಲ್ಲಿ ಬಾಣಲೆಯಿಂದ ಬೆಂಕಿಗೆ ಬಿದ್ದು ನಿತ್ಯ ನರಳುತ್ತಲೇ ಇರುತ್ತಾರೆ. ಇದು ಇಂದಿನ ವಾಸ್ತವ. ಹಾಗಾಗಿ ಕನಕನು ರೂಪಿಸಿದ ಸಾಹಿತ್ಯಕ ರೂಪಕವವನ್ನು ನಾವಿಂದು ವಾಸ್ತವದ ನೆಲೆಯಲ್ಲಿ ಎದುರಾಗಬೇಕಾಗಿದೆ. ಎಂದರೆ ಕಾವ್ಯದ ಉದ್ದೇಶವೂ ಕೂಡ ಸಾಹಿತ್ಯದ ಮೂಲಕ ಜನರಲ್ಲಿ ಆದರ್ಶದ ಭ್ರಮೆಗಳನ್ನು ಹುಟ್ಟಿಸುವುದಲ್ಲ. ಬದಲಿಗೆ ಭ್ರಮೆಗಳನ್ನು ದಾಟಿ ತನ್ನ ಸುತ್ತಲು ಕಟ್ಟಲಾಗಿರುವ ಕೋಟೆಗಳನ್ನು ಧ್ವಂಸ ಮಾಡಿ ಅಲ್ಲಿಂದ ಬಿಡುಗಡೆಗೊಳ್ಳಬೇಕೆಂಬ ಹಂಬಲವನ್ನು ಹುಟ್ಟಿಹಾಕಿ ಆ ದಿಕ್ಕಿನಲ್ಲಿ ಕ್ರಿಯಾಶೀಲವಾಗಿ ಮುಂದುವರಿಯಬೇಕಾಗಿರುವ ಅಗತ್ಯವನ್ನು ಧ್ವನಿಸುತ್ತಿರುತ್ತದೆ. ಹಾಗಾಗಿ ಕನಕನು ಕಟ್ಟಿದ ರೂಪಕವನ್ನು ನಾವಿಂದು ಬೇರೆಯದೇ ರೀತಿಯಲ್ಲಿ ವಿವರಿಸಿಕೊಳ್ಳಬೇಕಾಗಿದೆ.

ಕೊನೆಗೆ ಒಂದು ಮಾತು. ಇಂದು ಮಾರುಕಟ್ಟೆಯಲ್ಲಿ ಸುಳ್ಳುಗಳನ್ನು ಮೌಢ್ಯಗಳನ್ನು ನಿರ್ಭಿಡೆಯಾಗಿ ಮಾರಾಟ ಮಾಡಲಾಗುತ್ತಿದೆ. ಅದೂ ಕೂಡ ಲಾಭದಾಯಕ ಉದ್ದಿಮೆಯಾಗಿ ಮಾಧ್ಯಮಗಳ ರೂಪದಲ್ಲಿ ನಡೆಯುತ್ತಿದೆ. ಎಲ್ಲ ವಾಹಿನಿಗಳು ಇದನ್ನು ಮಾಡುತ್ತಿವೆ. ಇದು ಮತ್ತೂ ಅಪಾಯಕಾರಿಯಾದ

ಬೆಳವಣಿಗೆ. ಇಂತಹ ಸಂದರ್ಭದಲ್ಲಿ ವೈಚಾರಿಕತೆಯನ್ನು ಸಾಮಾಜಿಕ ವಿವೇಕವಾಗಿ ಬೆಳೆಸುವುದು; ಇದುವರೆಗೂ ಬೆಳೆದು ಬಂದಿದ್ದ ವಿವೇಕವನ್ನು ಕಾಪಾಡಿಕೊಳ್ಳುವುದು ಮುಖ್ಯವಾಗಿದೆ. ಅಂತಹದ್ದರಲ್ಲಿ ಕನಕನ ರಾಮಧಾನ್ಯದ ರೂಪಕವು ಒಂದು ಸಾಮಾಜಿಕ ವಿವೇಕವನ್ನು ಎಚ್ಚರವನ್ನು ಮೂಡಿಸುವ ರೂಪಕವಾಗಿ ಹುಟ್ಟಿಬೆಳೆದು ಬಂದಿತ್ತು. ಅಂತಹ ರೂಪಕಗಳ ಹಿಂದಿನ ಆಶಯದ ವೈಚಾರಿಕತೆ ಅರ್ಥವಿಲ್ಲದಂತಾಗುವ ಈ ಕಾಲದಲ್ಲಿ ಅದನ್ನು ಕಾಪಾಡಿಕೊಳ್ಳುವ ಹೊಣೆಯೂ ಇದೆ. ಅರಿವಿನ ಹಣತೆಗಳನ್ನು ಆರದಂತೆ ಕಾಪಾಡಿಕೊಳ್ಳಬೇಕಿದೆ. ಜಾಗತೀಕರಣಕ್ಕೆ ವಿರುದ್ಧದ ಜನರನುಡಿಯನ್ನು ರೂಪಿಸಿಕೊಳ್ಳುವಲ್ಲಿ ಜನರ ಜೀವನಮೀಮಾಂಸೆಯನ್ನು ಹುಡುಕಿಕೊಳ್ಳುವಲ್ಲಿ ಕನಕನ ರಾಮಧಾನ್ಯದ ರೂಪಕವು ನಮಗೆ ನೆರವಾಗುತ್ತದೆ. ಅಂತಹ ಹಲವು ರೂಪಕಗಳನ್ನು ಅಂದರೆ ಜನಪರ ಧ್ವನಿಗಳನ್ನು ಹುಡುಕಿ ಇಂದಿನ ಸಾಮಾಜಿಕ ವಿವೇಕಕ್ಕೆ ಕಸಿಮಾಡಿಕೊಳ್ಳಬೇಕಾದ ಅಗತ್ಯವಿದೆ. ಅಭಿವೃದ್ಧಿ ಮತ್ತು ನಾಗರಿಕತೆ ಎಂಬ ಮೌಢ್ಯಗಳಿಗೆ ಹೊಸಬೆಳಕು ಹರಿಸಬೇಕಾಗಿದೆ.

*** ** ***

ಪ್ರತಿಕ್ರಿಯೆ:

## 1. ರಾಮಧಾನ್ಯ ಚರಿತ್ರೆಯ ಹೊಳವುಗಳು

– ಪ್ರದೀಪ್ ಮಾಲ್ಗುಡಿ

ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳ ನಡುವೆ ಜನರ ನೆಮ್ಮದಿಯ ಜೀವನ ಕರಗುತ್ತಿದೆ. ಜಾಹೀರಾತು ಪ್ರಪಂಚ ವಿಶ್ವವನ್ನು ಆಳುತ್ತಿರುವ ಪರಿಣಾಮದಿಂದ 'ಸಮ್ಮತಿ' ಪಡೆಯುವ ಅಥವಾ ಅದನ್ನು 'ಉತ್ಪಾದಿಸುವ' ಕೆಲಸವನ್ನು ಯಶಸ್ವಿಯಾಗಿ ಮಾಡಲಾಗುತ್ತಿದೆ. ಇದಕ್ಕೆ ಬೃಹತ್ ಬಂಡವಾಳ ಹೂಡಿರುವ ದೇಶಗಳ ನವ ಸಾಮ್ರಾಜ್ಯಶಾಹಿ ಧೋರಣೆಯೇ ಕಾರಣ. ಬೃಹತ್ ಕೈಗಾರಿಕೆಗಳ ಲಾಭದಾಸೆಗೆ ದೇಶೀ ಉದ್ದಿಮೆಗಳು, ಆಹಾರ ಪದ್ಧತಿ, ಚಿಂತನ ಕ್ರಮಗಳು ನಶಿಸುತ್ತಿವೆ. ಈಗಾಗಲೇ ಉತ್ಪಾದಿಸಲ್ಪಟ್ಟಿರುವ ವಸ್ತುಗಳಿಗೆ ಮಾರುಕಟ್ಟೆ ಸೃಷ್ಟಿಸುವ ಕೆಲಸವನ್ನು ಜಾಹೀರಾತುಗಳು ಮಾಡುತ್ತಿವೆ. ಇದರಿಂದ ಕನ್ನಡ, ಕನ್ನಡ ಸಂವೇದನೆಗಳೂ ಪರಿಧಿಗೆ ತಳ್ಳಲ್ಪಟ್ಟಿವೆ. ಇಂಥ ಹೊತ್ತಿನಲ್ಲಿ ಕನಕದಾಸನ ರಾಮಧಾನ್ಯ ಚರಿತ್ರೆ ಮಧ್ಯಕಾಲದಲ್ಲಿ ಅಸ್ತಿತ್ವದಲ್ಲಿದ್ದ ವಿವಿಧ ಸಂಘರ್ಷದ ಸ್ವರೂಪವನ್ನು ದಾಖಲಿಸಲು ಇತಿಹಾಸವು ಸೋತಿರುವಲ್ಲಿ ಈ ಕೃತಿ ಗೆದ್ದಿದೆ.

ರಂಗನಾಥ ಕಂಟನಕುಂಟೆಯವರ "ಕಳೆದ ಹಲವು ಶತಮಾನಗಳ ಹಿಂದೆ ಕವಿ ಇಲ್ಲವೆ ಸಂತನೊಬ್ಬ ಎತ್ತಿದ ಸಾಮಾಜಿಕ ಅಸಮಾನತೆಯ ಪ್ರಶ್ನೆ ನಮ್ಮ ಸಮಾಜದಲ್ಲಿ ಬಗೆಹರಿಯದೇ ಉಳಿದಿರುವುದನ್ನು ಇದು ಸೂಚಿಸುತ್ತದೆ. ಇಂತಹ ಹಲವು ಸಾಮಾಜಿಕ ಸಮಸ್ಯೆಗಳನ್ನು ಕುರಿತು ಬುದ್ಧನಿಂದ ಆರಂಭವಾಗಿ ಅಂಬೇಡ್ಕರ್ ಮತ್ತು ಆ ನಂತರದಲ್ಲಿ ಎತ್ತಿರುವ ಅನೇಕ ಪ್ರಶ್ನೆಗಳು ಬಗೆಹರಿಯದೆ ಹಾಗೆಯೇ ಉಳಿದಿವೆ" ಎಂಬ ಅಂಶ ಸಮಾಜದ ಸ್ಥಗಿತ ಸ್ಥಿತಿಯನ್ನು ಕುರಿತ ಅಭಿಪ್ರಾಯವಾಗಿದೆ. ಭಾರತದಲ್ಲಿ ಸಣ್ಣ ಪ್ರಮಾಣದ ಚಲನೆಗೂ ದೀರ್ಘ ಕಾಲಾವಕಾಶ ಅವಶ್ಯಕವಾಗಿದೆ. ಜಾತಿ, ಲಿಂಗ, ಧರ್ಮ ತಾರತಮ್ಯ ಹಾಗೂ ಸಾಮಾಜಿಕ ಅಸಮಾನತೆಯನ್ನು ಕಾವ್ಯದ ಮೂಲಕ ವಿರೋಧಿಸಿದ ಕೃತಿಕಾರರು, ಚಳವಳಿಗಾರರನ್ನೂ ಒಳಗೊಂಡು ಎಲ್ಲರನ್ನೂ ಮತ್ತೆ ಸ್ಥಗಿತ ಸ್ಥಿತಿಯತ್ತ ಎಳೆಯುತ್ತಿರುವ ಸಾಮಾಜಿಕ ಸನ್ನಿವೇಶವಿದೆ. ಒಬ್ಬಿಬ್ಬರಿಂದ ನಡೆಯುತ್ತಿರುವ ಕೊಳೆ ತೊಳೆಯುವ ಕೆಲಸದಲ್ಲಿ ಯಶಸ್ಸು ಸಾಧಿಸಲು ಇನ್ನೆಷ್ಟು ಶತಮಾನಗಳು ಬೇಕೋ? ಎಂಬ ಪ್ರಶ್ನೆ ಉದ್ಭವಿಸಿದೆ. ಇದಕ್ಕೆ ಕಾಲಕಾಲಕ್ಕೆ ಕನಕನಂಥವರು ದುಡಿಯುತ್ತಿರುವುದು ಆಶಾದಾಯಕ ಬೆಳವಣಿಗೆ.

"ಹರಿದಾಸರ ವೈಷ್ಣವ ಭಕ್ತಿಪರಂಪರೆಯಲ್ಲಿ ಕನಕ ಒಂಟಿಯಾಗಿ ತನ್ನ ಸಾಮಾಜಿಕ ನ್ಯಾಯದ ಹೋರಾಟವನ್ನು ನಡೆಸಿದವನು. ಉಳಿದ ಹರಿದಾಸರಿಂದ ಅವನಿಗೆ ಅಂತಹ ಬೆಂಬಲ ಇದ್ದಂತೆ ಕಾಣವುದಿಲ್ಲ" ಎಂಬ ಅಭಿಪ್ರಾಯವೂ

ಸಮಂಜಸವಾಗಿದೆ. ತಾನು ಬದುಕಿರುವ ಸಮಾಜದ ಇತಿಮಿತಿಗಳಿಗೆ ಕನ್ನಡಿ ಹಿಡಿಯುವ ಕೆಲಸ ಮಾಡುವವರು ಎಲ್ಲ ಕಾಲದಲ್ಲೂ ಅಲ್ಪಸಂಖ್ಯಾತರೇ ಆಗಿರುತ್ತಾರೆ. ಆದರೆ ಅವರಿಗೆ ತಾನು ಹೇಳಬೇಕಿರುವುದನ್ನು ಹೇಳುವವರ ಸಂಖ್ಯೆ ಕಡಿಮೆ. ಬಸವ, ಸರ್ವಜ್ಞ, ಕನಕರಂಥವರದು ಮೆದು ದನಿಯಾಗಿದ್ದರೂ ಅವರಲ್ಲಿ ಸ್ಪಷ್ಟತೆ ಇದೆ. ಅದಕ್ಕೆ ರಾಮಧಾನ್ಯ ಚರಿತ್ರೆಯೂ ಸಾಕ್ಷಿ.

ಗಮನಾರ್ಹ ಸಂಗತಿಯೆಂದರೆ; ಆಧುನಿಕ ಪೂರ್ವದಲ್ಲಿ ಲೋಕವಿರೋಧಿ ನಿಲುವು ತಳೆಯಬೇಕಾದ ಅನಿವಾರ್ಯ ಸಂದರ್ಭದಲ್ಲಿ ಏಕಾಂಗಿಯಾಗಿ ಹೋರಾಡಿದವರಿದ್ದಾರೆ. ಇಂತಹ ಪ್ರಸಂಗಗಳು ಎದುರಾದಾಗ ಕೆಲವೇ ವ್ಯಕ್ತಿಗಳು ಸಮಷ್ಟಿಯ ಹಿತಕ್ಕಾಗಿ ಲೋಕವಿರೋಧಿ ಪಟ್ಟವನ್ನು ಕಟ್ಟಿಕೊಳ್ಳಲು ಸಿದ್ಧರಾಗುತ್ತಾರೆ. ಜೊತೆಗೆ ತಮ್ಮ ನಿಲುವನ್ನು ಯಾವುದೇ ಮರ್ಜಿ, ಮುಲಾಜು, ರಾಜಿಗೆ ಒಳಗಾಗದೆ ಪ್ರತಿಪಾದಿಸಿದ್ದಾರೆ. ಇದಕ್ಕೆ ವಚನಕಾರರು, ದಾಸರು, ಸರ್ವಜ್ಞ, ನೀಲಗಾರರು, ಜನಪದ ಕವಿಗಳು, ಎಮ್ಮೆ ಬಸವ, ಕಡಕೋಳ ಮಡಿವಾಳಪ್ಪ, ಶಿಶುನಾಳ ಷರೀಫರನ್ನೂ ಒಳಗೊಂಡಂತೆ ಅನೇಕರು ಉದಾಹರಣೆಯಾಗುತ್ತಾರೆ. ಇವರೆಲ್ಲರೂ ಒಂದಿಲ್ಲೊಂದು ರೀತಿಯಲ್ಲಿ ವಿಷಮ ಸಂದರ್ಭವನ್ನು ಎದುರಿಸಿದ್ದಾರೆ. ಅದರ ಪರಿಣಾಮದಿಂದ ಅವರ ರಚನೆಗಳಲ್ಲಿ ಬೆಡಗು, ಅನ್ಯೋಕ್ತಿ, ಲೌಕಿಕ ಮತ್ತು ಅಲೌಕಿಕ ವಸ್ತುಗಳ ಮೇಳೈಕೆ ಕಂಡುಬರುತ್ತದೆ. ಆಧುನಿಕ ಸಂದರ್ಭದಲ್ಲಿ ಕುವೆಂಪು, ಶಿವರಾಮ ಕಾರಂತ, ಲಂಕೇಶ್, ದೇವನೂರ ಮಹಾದೇವ ಮೊದಲಾದವರು ಬೆಡಗಿನ ಮೊರೆ ಹೋಗದೆ ನೇರವಾಗಿ ತಮ್ಮ ಬರಹ ಮತ್ತು ಭಾಷಣಗಳಿಂದ ಹಿಂದಿನವರ ಕೈಂಕರ್ಯವನ್ನು ಮುಂದುವರೆಸಿದರು.

ಸಮಕಾಲೀನ ಸಂದರ್ಭದಲ್ಲಿ ಆಚರಣೆಯಲ್ಲಿರುವ ಜೀವವಿರೋಧಿ ನಿಲುವುಗಳು, ಸ್ವಜನ ಪಕ್ಷಪಾತ, ಜಾತೀಯತೆ, ಸ್ವಾರ್ಥ, ಭ್ರಷ್ಟಾಚಾರ ಮೊದಲಾದವುಗಳು ಉತ್ತುಂಗ ಸ್ಥಿತಿ ತಲುಪಿದಾಗಲೆಲ್ಲ ಪ್ರತಿಭಾಶಾಲಿಗಳಿಗೆ ಸದ್ಯದ ಭಾಷೆಯಲ್ಲೇ ತನ್ನ ತುಡಿತವನ್ನು ಹೊಸದಾಗಿ ಹೊಸೆಯುವ ಸವಾಲು ಎದುರಾಗುತ್ತದೆ. ಇಲ್ಲಿ ಜಾತಿ, ಸಮಾಜ, ಆರ್ಥಿಕ, ರಾಜಕೀಯ ಕಾರಣಗಳೆಲ್ಲವೂ ಅವರಿಗೆ ಅನೇಕ ಮಿತಿಗಳನ್ನೂ ಹೇರುತ್ತಿರುತ್ತವೆ. ಅದಕ್ಕಾಗಿ ಅವರ ಕ್ರಿಯಾಶೀಲತೆ ಪರಿಚಿತವಾಗಿರುವುದನ್ನೇ, ಸ್ವತಃ ಮನುಷ್ಯರು ಅನುಭವಿಸುತ್ತಿರುವುದನ್ನೇ ಮಂಡಿಸಲು ಭಾಷೆಯನ್ನು ವಿಶಿಷ್ಟವಾಗಿ ಮಾನವೀಯ ಧೋರಣೆಯ ಪ್ರತಿಪಾದನೆಗೆ ಬಳಸುತ್ತಾರೆ. ಅದರಲ್ಲೂ ಅನುಭಾವಿ ಸಾಹಿತ್ಯ ಇದರ ಮೊರೆಹೋಗುವುದು ಸಾಮಾನ್ಯ ಸಂಗತಿ.

ಇನ್ನು ಪರಿಧಿಯಲ್ಲಿರುವವರ ಪರವಾಗಿ ಕನಕದಾಸನ ತತ್ವಚಿಂತನೆ ಇರುವುದು ಅವನ ಕೀರ್ತನೆಗಳು ಮತ್ತು ರಾಮಧಾನ್ಯ ಚರಿತ್ರೆಯಲ್ಲಿ ವ್ಯಕ್ತವಾಗಿದೆ. ರಾಗಿಯನ್ನು ಆಹಾರ ರಾಜಕಾರಣದ ವಸ್ತುವಾಗಿ ಕನಕದಾಸ ಮಂಡಿಸಿಲ್ಲ. ತತ್ಕಾಲದ ಸಾಮಾಜಿಕ ಸಂಘರ್ಷಕ್ಕೆ ರಾಗಿ ಮತ್ತು ಭತ್ತದ ಸಂವಾದ ಬಳಕೆಯಾಗಿರುವುದು ಮಹತ್ವದ್ದು.

ಆಧುನಿಕೋತ್ತರದಲ್ಲಿ ಉಂಟಾಗಿರುವ ಆಹಾರ ಸಂಬಂಧೀ ಶ್ರೇಣೀಕರಣಕ್ಕೂ ಆಧುನಿಕಪೂರ್ವದ ಶ್ರೇಣೀಕರಣಕ್ಕೂ ಸಂಬಂಧ ಕಲ್ಪಿಸುವುದನ್ನು ಕನಕನ ಚಿಂತನೆಯನ್ನು ಮುಂದುವರಿಸುವ ಕ್ರಿಯೆಯಾಗಿ ಪರಿಭಾವಿಸಬಹುದು. ಆದರೆ ಅದಕ್ಕಿಂತ ಸಂಕೀರ್ಣ ಸ್ಥಿತಿಯಲ್ಲಿ ಇಂದಿನ ಪರಿಸ್ಥಿತಿ ಇದೆ. ಇಲ್ಲಿ ಎಲ್ಲವೂ ಮಾರಾಟದ ಸರಕಾಗಿ ಬದಲಾಗಿದೆ. ತಾಯ್ತನವನ್ನೇ ಬಾಡಿಗೆ ಪಡೆಯುವ ತಂತ್ರಜ್ಞಾನದ ಬೆಳವಣಿಗೆ ಒಂದು ಕಡೆ, ಮಾಹಿತಿ ತಂತ್ರಜ್ಞಾನದಿಂದ ಜಗತ್ತು ಹಳ್ಳಿಯಾಗಿದೆ ಎಂಬ ಕಟ್ಟುವಿಕೆ ಒಂದು ಕಡೆ ನಡೆಯುತ್ತಿದೆ. ಆದರೆ ಜಗತ್ತು ಹತ್ತಿರವಾಗುತ್ತ ಮನಸುಗಳು ದೂರವಾಗುತ್ತಿರುವುದು ದುರಂತ. ವಿದ್ಯುನ್ಮಾನ ಯಂತ್ರೋಪಕರಣಗಳು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಮುಳುಗಿರುವ ಯುವ ಮತ್ತು ಅದಕ್ಕಿಂತ ಹಿಂದಿನ ಜನಾಂಗ ಸಮಕಾಲೀನ ತುರ್ತುಗಳಿಂದ ವಿಮುಖವಾಗಿದೆ. ಫೇಸ್‌ಬುಕ್, ವಾಟ್ಸ್‌ಅಪ್‌ಗಳಲ್ಲಿರುವ ಆತ್ಮೀಯತೆ ಎದುರುಬದುರಾದಾಗ ಇಲ್ಲವಾಗುತ್ತಿದೆ. ಇವುಗಳು ಕೂಡ ಏಕರೂಪೀ ಮಾದರಿಯ ನಿರ್ಮಾಣಕ್ಕೆ ಕಾರಣವಾಗುತ್ತಿವೆ. ಅದರಲ್ಲೂ ವಿಜ್ಞಾನ, ತಂತ್ರಜ್ಞಾನದಲ್ಲಿ ಪರಿಣತಿ ಹೊಂದಿರುವ ಪುರೋಹಿತಶಾಹಿ ಮನಸ್ಥಿತಿಯ ವ್ಯಕ್ತಿಗಳು ಸಾಮಾಜಿಕ ಸಮಸ್ಯೆಗಳನ್ನು ಅಪ್ರಸ್ತುತ ಎನ್ನುತ್ತಿದ್ದಾರೆ. ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ 'ಅನ್ನಭಾಗ್ಯ'ದ ವಿರುದ್ಧ ಫೇಸ್‌ಬುಕ್‌ನಲ್ಲಿ ದೊಡ್ಡಮಟ್ಟದ ಚರ್ಚೆಗಳು ನಡೆದರೆ, ಮಡೆಸ್ನಾನದ ವಿರುದ್ಧ, ವಿವಾದಾಸ್ಪದ 'ಭೂ ಸ್ವಾಧೀನ ಕಾಯ್ದೆ'ಯ ವಿರುದ್ಧ ಸೊಲ್ಲೆತ್ತುವವರ ಸಂಖ್ಯೆ ಬೆರಳೆಣಿಕೆಯಷ್ಟು ಪ್ರಮಾಣದಲ್ಲಿರುತ್ತದೆ. ಸದ್ಯದ ಎರಡು ಜನಾಂಗದವರ ಆದ್ಯತೆಗಳು ಬದಲಾಗಿರುವುದರಿಂದ ಕನಕನಂಥವರ ಸಾಮಾಜಿಕ ಬದಲಾವಣೆಯ ಆಶಯಗಳು ಮುನ್ನೆಲೆಗೆ ಬರುತ್ತಿಲ್ಲ. ಇವೆಲ್ಲದರ ಪರಿಣಾಮ ಸಮಾಜ ಸ್ಥಗಿತ ಸ್ಥಿತಿಯಲ್ಲೇ ಇದೆ. ಕಳೆದ ಎರಡೂವರೆ ದಶಕಗಳಿಂದ ದೇಶದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಪರಿಸ್ಥಿತಿ ಸುಧಾರಣೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡಿರುವ 'ಒತ್ತು' ಕೇವಲ 'ಜನರ ಕಣ್ಣೊರೆಸುವ' ಮತ್ತು 'ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶ ಅಭಿವೃದ್ಧಿ ಸಾಧಿಸಿದೆ' ಎಂಬ ದಾಖಲೆಗಳಿಗಾಗಿ ಕೆಲಸ ಮಾಡಲಾಗಿದೆ. ಆದರೆ ಮೂಲಭೂತ ಅವಶ್ಯಕತೆಗಳಾದ ನೀರು, ಊಟ, ವಸತಿ, ಆರೋಗ್ಯ, ಶಿಕ್ಷಣ ಕ್ಷೇತ್ರದಲ್ಲಿ ದೇಶ ಇನ್ನೂ ಶತಮಾನಗಳಷ್ಟು ಹಿಂದುಳಿದಿದೆ. ಬಾಹ್ಯಾಕಾಶಕ್ಕೆ ತೆರಳಿ ಅನ್ಯಗ್ರಹಗಳಲ್ಲಿ ಜೀವಿಗಳ ಕುರುಹುಗಳನ್ನು ಅರಸುತ್ತಿರುವ ಮಾನವ ಸಾಹಸ ಗಮನಾರ್ಹ ಸಾಧನೆಯಾದರೂ ಭೂಮಿಯ ಮೇಲಿರುವ ಸಹಮಾನವ ಜೀವಿಗಳ ಪರಿಸ್ಥಿತಿ ಸುಧಾರಣೆಯೆಡೆಗೆ ಅವಜ್ಞೆ ಮೂಡಿರುವುದು ವಿಪರ್ಯಾಸದ ಸಂಗತಿ. ಈ ಯಾವ ತಂತ್ರಜ್ಞಾನಗಳ ಅನ್ವೇಷಣೆ ಇಲ್ಲದಿರುವ ಸಂದರ್ಭದಲ್ಲಿ ಕನಕದಾಸ ರಚಿಸಿರುವ ರಾಮಧಾನ್ಯ ಚರಿತ್ರೆಯಲ್ಲಿ ಶೋಷಿತ ಸಮುದಾಯದ ಪರ ಚಿಂತನೆ ಇದೆ.

ರಂಗನಾಥ ಕಂಟನಕುಂಟೆಯವರು ರಾಗಿಯನ್ನು ವಾಣಿಜ್ಯ ಬೆಳೆಯಾಗಿಸುವಲ್ಲಿ ವೈಫಲ್ಯದ ಕಡೆಗೆ ಗಮನ ಸೆಳೆದಿದ್ದಾರೆ. ಆದರೆ ಇದಕ್ಕೆ ಅನೇಕ ಸಮಸ್ಯೆಗಳಿವೆ. ಕಾರಣ ರಾಗಿಯ ಇಳುವರಿ ಕಡಿಮೆ. ಆದರೆ ಅದಕ್ಕೆ ಬೇಡಿಕೆಯೇ ಇಲ್ಲವೆಂದಲ್ಲ. ಬಡವರ, ರಾಮ ಮೆಚ್ಚಿದ ರಾಗಿ ಇಂದು ಡಯಾಬಿಟೀಸ್ ರೋಗಿಗಳ ಆಹಾರವಾಗಿ ಮಾರುಕಟ್ಟೆಯಲ್ಲಿ ವಿಸ್ತರಿಸಿದೆ. ರಾಗಿ ಮುದ್ದೆ ಮತ್ತು ರೊಟ್ಟಿಯಿಂದ ಪ್ರಮೋಷನ್ ಪಡೆದು ಸದ್ಯಕ್ಕೆ ದೋಸೆ, ಇಡ್ಲಿ, ಬಿಸ್ಕೆಟ್, ಮಾಲ್ಟ್, ಮಿಕ್ಸ್ಚರ್ (ಖಾರ), ಫ್ಲೇಕ್ಸ್, ಶಾವಿಗೆ, ಹಪ್ಪಳ ಮೊದಲಾದ ಆಹಾರ ಮತ್ತು ಪಾನೀಯ ರೂಪದಲ್ಲಿ ಲಭ್ಯವಿದೆ. ರಂಗನಾಥ ಕಂಟನಕುಂಟೆಯವರ ವಾದದಂತೆ ಮಾರುಕಟ್ಟೆಯಲ್ಲಿ ರಾಗಿ ಹಿಂದುಳಿದಿಲ್ಲ. ಆರೋಗ್ಯದ ಕಾರಣದಿಂದ ರಾಗಿ ಮಾರುಕಟೆಯಲ್ಲಿ ಪ್ರಾಬಲ್ಯ ಸಾಧಿಸಿದೆ. ಬಹು ರಾಷ್ಟ್ರೀಯ ಕಂಪೆನಿಗಳು ರಾಗಿ ಉತ್ಪನ್ನಗಳನ್ನು ಉತ್ಪಾದಿಸಿ ದೇಶೀ ಮಾರುಕಟ್ಟೆಯಲ್ಲಿ ಪೈಪೋಟಿ ನೀಡುತ್ತಿದ್ದಾರೆ. ಈ ಪ್ರತಿಕ್ರಿಯೆ ಬರೆಯುವ ಹೊತ್ತಿಗೆ ಮಾರುಕಟ್ಟೆಯಲ್ಲಿ ರಾಗಿಯ ಬೆಲೆ 25–50 ರೂಪಾಯಿಗಳಿದ್ದರೆ, ರಾಗಿ ಹಿಟ್ಟಿನ ಬೆಲೆ 50 ರೂಪಾಯಿಯಾಗಿದೆ. ಆದರೆ ರಾಗಿ ಉತ್ಪನ್ನಗಳ ಬೆಲೆ ಮಧ್ಯಮ ವರ್ಗದವರ ಕೈಗೆಟುಕುತ್ತಿಲ್ಲವೆಂಬ ವಾದವನ್ನು ಒಪ್ಪಲಾಗದು.

ರಂಗನಾಥ ಕಂಟನಕುಂಟೆಯವರು ಅನ್ನಭಾಗ್ಯದಲ್ಲಿ ಅಕ್ಕಿ ನೀಡುವುದರ ಬದಲು ರಾಗಿ ನೀಡುವುದು ಅಸಾಧ್ಯದ ಮಾತು. ಏಕೆಂದರೆ ಎಕರೆಗೆ 23–25 ಕ್ವಿಂಟಾಲ್ ಬೆಳೆಯುವ ಅಕ್ಕಿಗೂ, 13–15 ಕ್ವಿಂಟಾಲ್ ಬೆಳೆಯುವ ಜೋಳಕ್ಕೂ, 8–10 ಕ್ವಿಂಟಾಲ್ ಬೆಳೆಯುವ ರಾಗಿಗೂ ನಡುವೆ ಅಗಾಧ ಅಂತರವಿದೆ. ರಾಜ್ಯದಲ್ಲಿರುವ ಒಂದು ಕೋಟಿ ಪಡಿತರ ಚೀಟಿದಾರರಿಗೆ ಅನ್ನಭಾಗ್ಯದ ಬದಲು ರಾಗಿಭಾಗ್ಯ ಕರುಣಿಸಲು ಸರ್ಕಾರ ಮುಂದಾಗುವುದು ಪ್ರಾಯೋಗಿಕವಾಗಿ ಸಾಧ್ಯವಿಲ್ಲ. ಇನ್ನು ಅಂತಾರಾಷ್ಟ್ರೀಯ ಮಾರುಕಟ್ಟೆ ಶಕ್ತಿಗಳು ದೇಶೀ ಸಮುದಾಯಗಳನ್ನು ತನ್ನ ತೆಕ್ಕೆಯೊಳಗೆ ಎಳೆದುಕೊಳ್ಳಲು ಆರಂಭಿಸಿ ಸುಮಾರು ಎರಡೂವರೆ ದಶಕಗಳಾಗುತ್ತಿವೆ. ಗ್ಯಾಟ್ ಒಪ್ಪಂದದ ನಂತರ ದೇಶೀ ಸಮುದಾಯಗಳ ಉಳಿವಿನ ಹೋರಾಟ ಆರಂಭವಾಗಿದೆ.

ಕೇಂದ್ರ ಸರ್ಕಾರದ 'ಭೂಸ್ವಾಧೀನ ಕಾಯ್ದೆ', 'ಮೇಕ್ ಇನ್ ಇಂಡಿಯಾ'ದಂತಹ ಯೋಜನೆಗಳು ಕೇವಲ ಕನ್ನಡಿಗರನ್ನಷ್ಟೇ ಅಲ್ಲ, ಇಡೀ ಭಾರತೀಯ ರೈತ ಸಂಕುಲಕ್ಕೆ ಮಾರಕವಾಗುವ ದಿನಗಳು ದೂರವಿಲ್ಲ. ಭೂ ಸ್ವಾಧೀನ ಕಾಯ್ದೆ ಜಾರಿಯಾದರೆ ದೇಶದ ಆರ್ಥಿಕತೆ ಕುಸಿಯುವುದರೊಂದಿಗೆ ಆಹಾರ ಭದ್ರತೆಗೆ ಧಕ್ಕೆಯುಂಟಾಗುತ್ತದೆ. ಸ್ವಾವಲಂಬಿ ರೈತರು ಪರಾವಲಂಬಿಗಳಾಗುತ್ತಾರೆ. ಮೇಕ್ ಇನ್ ಇಂಡಿಯಾ ಕರೆಗೆ ಓಗೊಟ್ಟು ವಿದೇಶೀ ಕಂಪೆನಿಗಳು ಭಾರತವನ್ನು ಉತ್ಪಾದನೆ ಮಾಡಲು ಬಳಸಿಕೊಳ್ಳುತ್ತವೆ. ಕಾರಣ ಮುಂದುವರೆದ ರಾಷ್ಟ್ರಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ನೂರೆಂಟು ಕಾನೂನುಗಳಿವೆ. ಆ ಕಾನೂನುಗಳ ಪ್ರಕಾರ ಅಲ್ಲಿ ಉತ್ಪಾದನೆಯ ಖರ್ಚು ಹೆಚ್ಚುತ್ತದೆ. ಜತೆಗೆ ಅಲ್ಲಿನ ವೇತನವೂ ಡಾಲರ್‌ಗಳ ಲೆಕ್ಕದಲ್ಲಿ

ಸಂದಾಯವಾಗಬೇಕು. ಆದರೆ ಭಾರತದಲ್ಲಿ ಕನಿಷ್ಠ ಕೂಲಿಗೆ ಗರಿಷ್ಠ ದುಡಿಮೆ ಮಾಡಲು ಅಪಾರವಾದ ಶ್ರಮಿಕರಿದ್ದಾರೆ. ಭೂಸ್ವಾಧೀನ ಕಾಯ್ದೆ ಜಾರಿಯಾದರೆ ಮೇಕ್ ಇನ್ ಇಂಡಿಯಾದ ಅಡಿಯಲ್ಲಿ ಬರುವ ವಿದೇಶೀ ಉತ್ಪಾದಕ ವಲಯಗಳಿಗೆ ಈಗಿರುವ ಕೂಲಿಗಿಂತ ಕನಿಷ್ಠ ದರದಲ್ಲಿ ಭೂಮಿ ಕಳೆದುಕೊಂಡ ಕೂಲಿಗಳು ಲಭಿಸುತ್ತಾರೆ. ಜತೆಗೆ ದೇಶದಲ್ಲಿರುವ ಅಪಾರ ಪ್ರಮಾಣದ ಅದಿರು, ಕಚ್ಚಾವಸ್ತುಗಳನ್ನು ಕಡಿಮೆ ದರದಲ್ಲಿ ಕೊಂಡು, ಇಲ್ಲಿಯೇ ಉತ್ಪಾದನೆ ಮಾಡಿ ಗಂಗಾನದಿ ಕೊಳಚೆ ಚರಂಡಿಯಾಗಿರುವಂತೆ ಇಡೀ ದೇಶದ ನದಿಗಳನ್ನೆಲ್ಲ ಚರಂಡಿಯಾಗಿಸಿ, ವಾತಾವರಣವನ್ನು ಹಾಳು ಮಾಡುವ ಸಾಧ್ಯತೆಗಳು ದಟ್ಟವಾಗಿವೆ. ಇಂತಹ ಜನವಿರೋಧಿ, ಪರಿಸರ ವಿರೋಧಿ, ದೇಶವಿರೋಧಿ ಯೋಜನೆಗಳು ಅಪಾಯಕಾರಿ ಮಟ್ಟದಲ್ಲಿ ಕಾರ್ಯರೂಪಕ್ಕೆ ಬರುತ್ತಿರುವ ಹೊತ್ತಿನಲ್ಲಿ ವೈಚಾರಿಕ ಆಲೋಚನೆಗಳನ್ನು ಜನರಿಗೆ ತಲುಪಿಸುವ, ಆ ಮೂಲಕ ಜಾಗೃತಿ ಮೂಡಿಸುವ ಸಾಧ್ಯತೆಗಳನ್ನು ಶೋಧಿಸಬೇಕಿದೆ. ಇದಕ್ಕೆ ಕನಕನ ಸಾಹಿತ್ಯಕ ರೂಪಕಗಳು ದಾರಿದೀಪವಾಗುತ್ತವೆ. ಎಲ್ಲೆಲ್ಲೂ ಹೆದ್ದಾರಿಗಳು ನಿರ್ಮಾಣವಾಗುತ್ತಿರುವ ಹೊತ್ತಿನಲ್ಲಿ ಅಲ್ಲಿನ ಸಂಚರಿಸುವ ವಾಹನಗಳಿಗೆ ಬಲಿಯಾಗುತ್ತಿರುವ ನಾಯಿಗಳ ಶವ ನಮಗೆ ಎಚ್ಚರ ನೀಡಬೇಕಿದೆ. ಅದರ ಜತೆಗೆ ಹಳ್ಳಿಗಳು ಮಾಯವಾಗುತ್ತ, ಅಳಿದುಳಿದ ಹಳ್ಳಿಗಳು ವಯೋವೃದ್ಧರಿಂದ ತುಂಬಿಕೊಳ್ಳುತ್ತಿರುವುದನ್ನು ವಿವೇಕದ ಕಣ್ಣಿನಿಂದ ನೋಡುವ ತಿಳಿವಳಿಕೆ ಮೂಡಬೇಕಿದೆ. ಇಲ್ಲಿ ಕೇವಲ ರಾಗಿ ಬೆಳೆಯುವವರಷ್ಟೇ ಅಥವಾ ಉಣ್ಣುವವರಷ್ಟೇ ಸಂತ್ರಸ್ತರಾಗುವುದಿಲ್ಲ. ಕನಕದಾಸನ ರಾಗಿಯ ಸಮಸ್ಯೆ ಇಂದು ಎಲ್ಲ ಬೆಳೆಗಳಿಗೂ ಅನ್ವಯಿಸುತ್ತದೆ. ಸ್ಥಾನಾಂತರದ ಪ್ರಶ್ನೆ ರಾಗಿ ಮತ್ತು ಭತ್ತಕ್ಕಿಂತ ರೈತನಿಗೆ ಹೆಚ್ಚು ಅನ್ವಯವಾಗುತ್ತದೆ.

ದೂರದೃಷ್ಟಿರಹಿತ ಮತ್ತು ಸ್ವಾರ್ಥ ರಾಜಕಾರಣದ ಫಲವಾಗಿ ರೈತರ ಸಮಸ್ಯೆಗಳು ದಿನಗಳೆದಂತೆ ಬೃಹದಾಕಾರ ತಾಳುತ್ತಿವೆ. ಆದರೆ ಸರ್ಕಾರಗಳು ಬೆಂಬಲ ಬೆಲೆ ಘೋಷಿಸುವಷ್ಟಕ್ಕೆ ಸೀಮಿತವಾಗುತ್ತಿವೆ. ರಂಗನಾಥ ಕಂಟನಕುಂಟೆಯವರು ಹೇಳುವಂತೆ ಕೃಷಿಗೆ ಸಹಾಯಧನ, ಪ್ರೋತ್ಸಾಹಧನ ನೀಡುವುದನ್ನು ಹಂತಹಂತವಾಗಿ ಕಡಿತಗೊಳಿಸಲಾಗುತ್ತಿದೆ. ಇದಕ್ಕೆ ಅಂತಾರಾಷ್ಟ್ರೀಯ ಮಾರುಕಟ್ಟೆ ಶಕ್ತಿಗಳು ಕಾರಣ. ಭಾರತದಂತಹ ಅಭಿವೃದ್ಧಿ ಶೀಲ ಮತ್ತು ತೃತೀಯ ರಾಷ್ಟ್ರಗಳು ಬೃಹತ್ ಬಂಡವಾಳ ಹೂಡಿ ನಿರ್ಮಾಣ ಮಾಡಿರುವ ಉತ್ಪನ್ನಗಳನ್ನು ಕೊಳ್ಳುವ ಗ್ರಾಹಕರನ್ನಾಗಿಸಿಕೊಳ್ಳುವ ಹುನ್ನಾರವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನಸಾಮಾನ್ಯರಿಂದ ಮರೆಮಾಚುತ್ತಿವೆ. ಗ್ಯಾಸ್ ಸಿಲಿಂಡರ್‌ನಲ್ಲಿ ಸಬ್ಸಿಡಿ ಪಡೆಯುವವರು, ಡಿಸ್ಕೌಂಟ್ ಸೇಲ್‌ನಲ್ಲಿ ಸರಕುಗಳನ್ನು ಕೊಳ್ಳುವವರು, ಆನ್‌ಲೈನ್‌ನಲ್ಲಿ ಒಂದೇ ಗಂಟೆಗೆ ಆಫರ್‌ನಲ್ಲಿ ವಸ್ತುಗಳನ್ನು ಕೊಳ್ಳಲು ಮುಗಿಬೀಳುವವರು ರೈತರಿಗೆ ಸಬ್ಸಿಡಿ ಕೊಡಿಸುವುದನ್ನು, ಅನ್ನಭಾಗ್ಯದಂತಹ ಹಸಿವು ತಣಿಸುವ ಯೋಜನೆಗಳನ್ನು

ವಿರೋಧಿಸುವ ಕೆಟ್ಟ ಸಂಪ್ರದಾಯ ರೂಪುಗೊಳ್ಳುತ್ತಿದೆ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕಾದ ಅನಿವಾರ್ಯತೆ ಸದ್ಯಕ್ಕೆ ಸೃಷ್ಟಿಯಾಗಿದೆ.

ಸಂಕೀರ್ಣ ಸಮಾಜದಲ್ಲಿ ತನಗನಿಸಿದ್ದನ್ನು ಪ್ರಖರವಾಗಿ ಮಂಡಿಸಲು ಕನಕದಾಸ 'ರಾಮಧಾನ್ಯ ಚರಿತ್ರೆ' ಕೃತಿಯನ್ನು ಬಳಸಿಕೊಂಡಿದ್ದಾನೆ. ಸಾಮಾಜಿಕ ಸನ್ನಿವೇಶದಲ್ಲಿ ಉದ್ಭವಿಸಿರುವ ವಿಷಮ ಪರಿಸ್ಥಿತಿಯನ್ನು ದಾಖಲಿಸುವಲ್ಲಿ ಈ ಕೃತಿ ಯಶಸ್ವಿಯಾಗಿದೆ. ಈ ಕೃತಿಯ ಬಗ್ಗೆ ಮೇಲ್ಜಾತಿ-ಕೆಳಜಾತಿ - ಜಾತಿಯ ಮೇಲರಿಮೆ ಮತ್ತು ಕೀಳರಿಮೆಗಳೆರಡೂ ಕಲ್ಪಿತ ವಾಸ್ತವ. ಇದು ಯಾವಾಗ ಬೇಕಾದರೂ ಕ್ರಿಯಾಶೀಲವಾಗಬಹುದು. ಅಷ್ಟೇ ಬೇಗ ನಿಷ್ಕ್ರಿಯವಾದಂತೆ ಭಾಸವಾಗುತ್ತದೆ. ಆದರೆ ಜಾತಿ ಪ್ರಜ್ಞೆ ಅಂತಸ್ತವಾಗಿ ಒಂದಿಲ್ಲೊಂದು ರೀತಿಯಲ್ಲಿ ಪ್ರವಹಿಸುತ್ತಲೇ ಇರುವುದು ಭಾರತದ ದುರಂತ - ಶ್ರೀಮಂತ-ಬಡವ(ಚಿದಾನಂದಮೂರ್ತಿ), ಸ್ಪೃಶ್ಯ-ಅಸ್ಪೃಶ್ಯ, ಬಂಡಾಯದ ದನಿ(ಹಿ.ಶಿ.ರಾಮಚಂದ್ರೇಗೌಡ), ಕನ್ನಡ-ಸಂಸ್ಕೃತ(ಸಾ.ಶಿ.ಮರುಳಯ್ಯ), ಸ್ವಾನುಭವದ ಅಭಿವ್ಯಕ್ತಿ(ಡಿ.ಕೆ.ರಾಜೇಂದ್ರ), ಮೊದಲಾದ ರೂಪಗಳಲ್ಲಿ ಕಂಡಿದೆ. ಈ ಎಲ್ಲವುಗಳನ್ನು ಒಳಗೊಳ್ಳುವ ಅರ್ಥಸಾಧ್ಯತೆಗಳನ್ನು ಹೊಂದಿರುವುದೇ ಈ ಕಾವ್ಯದ ವೈಶಿಷ್ಟ್ಯತೆ.

ಇವುಗಳ ಜತೆಗೆ ಕಪ್ಪು-ಬಿಳುಪು ಮತ್ತು ಉತ್ತರ - ದಕ್ಷಿಣ, ಆರ್ಯ - ದ್ರಾವಿಡ ಎಂಬ ವಿಷಯಗಳಡಿಯಲ್ಲೂ ರಾಮಧಾನ್ಯ ಚರಿತ್ರೆ ಚರ್ಚೆಯನ್ನು ವಿಸ್ತರಿಸಬಹುದು. ಕಪ್ಪು ಬಣ್ಣದ ರಾಗಿ ಮತ್ತು ಬಿಳಿ ಬಣ್ಣದ ಅಕ್ಕಿಯ ನಡುವೆ ನಡೆಯುವ ವರ್ಣ ಸಂಘರ್ಷದ ರೂಪಕವಾಗಿ ಅಧ್ಯಯನ ನಡೆದಿಲ್ಲ. ಅಲ್ಲದೇ ಭತ್ತ ಉತ್ತರ ಭಾರತದ ಬೆಳೆ. ರಾಗಿ ದಕ್ಷಿಣ ಭಾರತದ ಬೆಳೆ. ಆದರೆ ಉತ್ತರದಿಂದ ದಕ್ಷಿಣಕ್ಕೆ ಬಂದ ಭತ್ತ ಶ್ರೇಷ್ಠ, ದಕ್ಷಿಣದ ಬೆಳೆಯಾದ ರಾಗಿ ಕನಿಷ್ಠ ಎಂಬ ರೂಪಣೆಯನ್ನು ವಿರೋಧಿಸಲು ಕನಕದಾಸ ಪ್ರಯತ್ನಿಸಿದ್ದಾನೆ. ಈ ಕುರಿತು ಚರ್ಚೆ ನಡೆಯಬೇಕಿದೆ.

ಪುರೋಹಿತಶಾಹಿಯಲ್ಲಿ ಆರಂಭದಿಂದಲೂ ನೆಲೆಸಿರುವ, ಇಂದಿಗೂ ಮುಂದುವರಿದಿರುವ ಬಹಿಷ್ಕರಿಸುವ ಮನಸ್ಥಿತಿಯನ್ನು ಭತ್ತದ ಮಾತುಗಳಲ್ಲಿ ಸ್ಫುಟವಾಗಿ ಕನಕದಾಸ ಸೃಷ್ಟಿಸಿದ್ದಾನೆ. ಮತಿಹೀನ ನೀನೆಂದೆನುತ ಖತಿಯಲಿ ಬೈದು ಭಂಗಿಸಿದ (36), ಬಾಹಿರ ಸಾಕು ನಡೆ ನೀನಾವ ಮಾನ್ಯನು ಕಡೆಗೆ ತೊಲಗೆಂದ (37), ನೀನಯೋಗ್ಯನು ಭ್ರಷ್ಟ ತೊಲಗೆಂದ (39), ನೀನೆ ನಗೆ ಸರಿಯೇ ಭ್ರಷ್ಟ ತೊಲಗೆಂದ (42), ನೀನಾವ ಮಾನ್ಯನು ಕಡೆಗೆ ತೊಗೆಂದ (43) ಎಂದು ಆರು ಬಾರಿ ರಾಗಿಯನ್ನು ಬಹಿಷ್ಕರಿಸುತ್ತಾನೆ. ಜತೆಗೆ ನೈವೇದ್ಯ ತಾನೆಹೆನೆಂದನಾ ವ್ರಿಹಿಗ (38), ಲೋಕದೊಳಾರು ಸರಿಯಿಂತೆಂದನಾ ವ್ರಿಹಿಗ (40), ಸಿರಿಯ ಸಂಪತ್ತಾಯವನು ಕೇಳೆಂದನಾ ವ್ರಿಹಿಗ (41) ಎಂದು ಮೂರು ಬಾರಿ ತನ್ನ ಮೇಲರಿಮೆಯನ್ನು ಸಾಧಿಸಲು ಪ್ರಯತ್ನಿಸಿದರೆ, ರಾಗಿ ನಿರ್ದಯನಲ್ಲ

ತಾ ನಿನ್ನಂತೆ ಎಲೆ ಕುಟಿಲಾತ್ಮ ಹೋಗೆಂದ (48) ಕೇವಲ ಒಮ್ಮೆ ಹೋಗು ಎನ್ನುತ್ತಾನೆ. ಉಳಿದಂತೆ ನಿನ್ನೊಡನೆ ಮಾತೇಕೆ (44), ನಿನ್ನ ಜನ್ಮ ನಿರರ್ಥಕ (45), ದುರಾತ್ಮ ನಿನ್ನೊಳು ಮಾತದೇಕೆಂದ (46) ಮೊದಲಾದ ಪದ್ಯಗಳಲ್ಲಿ ಭತ್ತದ ಮಿತಿಗಳನ್ನು ತೋರಿಸಲಾಗಿದೆ. ಈ ಹಲವು ಹುಲು ಧಾನ್ಯಗಳೆನಗೆ ಸರಿದೊರೆಯೆ ಕೇಳೆಂದ (47) ಎನ್ನುವುದರಲ್ಲಿ ರಾಗಿಯು ಮೇಲ್ಮೆಯನ್ನು ಪ್ರತಿಪಾದಿಸಲಾಗಿದೆ. (ಕಂಸದಲ್ಲಿರುವ ಸಂಖ್ಯೆಗಳು ಕನಕದಾಸರ ಕಾವ್ಯ ಭಾಗ – 1, ಸಂ: ಸಾ.ಶಿ.ಮರುಳಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, 2012 ಕೃತಿಯ ರಾಮಧಾನ್ಯ ಚರಿತ್ರೆಯ ಷಟ್ಪದಿಯ ಸಂಖ್ಯೆ)

ಭಕ್ತಿ ಮತ್ತು ಅನುಭಾವ ಸಾಹಿತ್ಯದಲ್ಲಿ ಸಾಮಾನ್ಯವಾಗಿರುವ ಅಂಶವೆಂದರೆ ಲೋಕದಲ್ಲಿ ಈಗಾಗಲೇ ಬಳಕೆಯಲ್ಲಿರುವ ಪ್ರಸಿದ್ಧ ಪ್ರತಿಮೆಗಳ ಮೂಲಕ ತಾನು ಹೇಳಬೇಕಿರುವುದನ್ನು ವಸ್ತುಪ್ರತಿರೂಪವಾಗಿಸಿಕೊಳ್ಳುವುದು. ಇದಕ್ಕೆ ಕಾರಣ ತಾನು ಹೇಳುತ್ತಿರುವುದನ್ನು ಪ್ರಜ್ಞಾಪೂರ್ವಕವಾಗಿ ಅಪವ್ಯಾಖ್ಯಾನಿಸುವ ಸಾಧ್ಯತೆಗಳು ದಟ್ಟವಾಗಿರುವುದು. ಇಂತಹ ಪರಿಸ್ಥಿತಿಯನ್ನು ತಮ್ಮ ಸಾಮಾಜಿಕ ತಿಳಿವಳಿಕೆಯಿಂದ ಮನಗಂಡಿರುವುದರಿಂದ ಅನ್ಯೋಕ್ತಿ, ಪ್ರಾಣಿ, ಪಕ್ಷಿ, ಧಾನ್ಯ ಮೊದಲಾದ ಪಾತ್ರಗಳ ಮೂಲಕ ಮಾತನಾಡಿಸುವ ತಂತ್ರವನ್ನು ಬಳಸಿಕೊಳ್ಳಲಾಗಿದೆ. ಧಾನ್ಯಗಳ ಮೂಲಕ ಮಾತನಾಡಿಸುವ ತಂತ್ರ ಪ್ರಾಯಶಃ ಕನಕದಾಸನ ರಾಮಧಾನ್ಯ ಚರಿತೆಯಲ್ಲೇ ಮೊದಲನೆಯದಾಗಿರಬಹುದು.

## 2. ರಾಮಧಾನ್ಯ ಚರಿತೆ : ಮೇಲ್ಪಾಲನೆಯ ಹಂಬಲದ ಅನುಸಂಧಾನ

–ಬಿ.ಪೀರ್‌ಬಾಷ

'ಬುಧರು ಜರೆದು ನಿರಾಕರಿಸಿ ಬಿಡಲಂತು ನೀ ಶೂದ್ರಾನ್ನವಾದೆಯಲ' ಎಂದು ನರೆದಲೆಗನನ್ನು ನಿಂದಿಸುವ ವ್ರೀಹಿಯು, 'ನಿನ್ನ ವಿವೇಕಿಗಳು ಮೆಚ್ಚುವರೆ ಬಾಹಿರ ಸಾಕು ನಡೆ ನೀನಾವ ಮಾನ್ಯನು, ಕಡೆಗೆ ತೊಲಗು' ಎಂದು ತಿರಸ್ಕಾರದಿಂದ ಜರಿಯುತ್ತಾನೆ. ಸಾಂಸ್ಕೃತಿಕ ಭಾರತದ ಆಂತರ್ಯದ ತರ–ತಮಗಳ ಚಿತ್ರಣವಾಗಿರುವ ಕನಕದಾಸರ ರಾಮಧಾನ್ಯಚರಿತೆಯಲ್ಲಿ ನಡೆವ ಅಕ್ಕಿ ಮತ್ತು ಭತ್ತಗಳೆಂಬ ರೂಪಕಗಳ ಗುದ್ದಾಟವಿದು.

ಪ್ರಜಾಪ್ರಭುತ್ವ ವ್ಯವಸ್ಥೆಯ ಸಾಂವಿಧಾನಿಕ ಮೌಲ್ಯಗಳ ನೆಲೆಯಲ್ಲಿ ವ್ಯಾಖ್ಯಾನಿಸುವುದಾದರೆ ಈ ಮೇಲಿನ ಮಾತುಗಳು ಜಾತಿನಿಂದನೆ ಮತ್ತು ಅಸ್ಪೃಶ್ಯತೆಯನ್ನು ವ್ಯಕ್ತಪಡಿಸುತ್ತವೆ. ರಾಗಿ ಮತ್ತು ಭತ್ತಗಳನ್ನು ಮಾತಾಡುವ, ಬಾಳುವ ಪಾತ್ರಗಳಾಗಿಯೇ ಕನಕದಾಸರು ಚಿತ್ರಿಸಿರುವುದರಿಂದ ಇಲ್ಲಿ ರಾಗಿಯು ಶೂದ್ರಾನ್ನ ಪಾತ್ರದ ಮೂಲಕ ಶೂದ್ರರನ್ನೇ ಪ್ರತಿನಿದಿಸುತ್ತದೆ. ಅಕ್ಕಿಯು ಬುಧರ, ವಿವೇಕಿಗಳ, ಕ್ಷಿತಿಯಮರ, ದರಣಿಯಮರ, ಭೂಸುರ–ಬ್ರಹ್ಮರ, ವಸುಮತೀಶರ, ವಿಪ್ರರ, ಮಹಿಮರ ಆಹಾರವೂ ಪ್ರತಿನಿಧಿಯೂ ಆಗುತ್ತದೆ. ಈ ಎರಡು ಆಹಾರ

ಧಾನ್ಯಗಳ ನಡುವಿನ ವಾಗ್ವಾದವು ಚಾರಿತ್ರಿಕವಾಗಿ ಭಾರತದ ಎರಡು ಸಂಸ್ಕೃತಿಗಳ ನಡುವಿನ ಸಂಘರ್ಷವನ್ನು ನಿರೂಪಿಸುತ್ತದೆ. ಇವುಗಳ ಮುಖಾಮುಖಿಯ ನಡುವೆ ಕಾಣಿಸಿಕೊಳ್ಳುವ ರಾಮಭಂಟರ, ಮುನಿವರರ ನಡೆ-ನುಡಿಗಳು ವರ್ತಮಾನದ ಅಧಿಕಾರಿ, ಧರ್ಮದುರಂಧರರನ್ನೆ ಹೋಲುತ್ತವೆ. ಅಂತಿಮವಾಗಿ ಮತ್ತು ಆತ್ಯಂತಿಕವಾಗಿ ಶ್ರೇಣೀಕರಣದ ಶೃಂಗದ ಶ್ರೀರಾಮನ ಪಾತ್ರವು ಪ್ರಭುತ್ವ ವ್ಯವಸ್ಥೆಯ ಪ್ರಧಾನನ ಪಾತ್ರವನ್ನು ಪ್ರತಿಬಿಂಬಿಸುತ್ತದೆ. ಕೊನೆಯಲ್ಲಿ, ತನು-ಗುಣಗಳ ಸಾರ ಬಲದ ಮೂಲಕ ತಾನು 'ಪರಮಧಾನ್ಯ'ನೆಂದು ನರೆದಲೆಗ ತನ್ನ ಅನನ್ಯತೆಯನ್ನು ಸಾಬೀತುಪಡಿಸುತ್ತಾನೆ. ಈ ರಾಜಕಾರಣದ ಅಂತಿಮ ಹಂತದಲ್ಲಿ ಮತ್ತೆ ಪ್ರಭುತ್ವವು ತನ್ನ ನಾಮುನಂಟಿನ ತಂತ್ರದ ಮೂಲಕ ರಾಗಿಯ ಅನನ್ಯತೆಯನ್ನು, ಆತ್ಮಾಭಿಮಾನವನ್ನು ದುರ್ಬಲಗೊಳಿಸುತ್ತದೆ.

ತ್ರೇತ-ದ್ವಾಪರ ಯುಗಗಳ ಕಥನವೆಂಬಂತೆ ತಾವು ಬಾಳಿದ ಕಾಲದ ಅನುಭವ ಸಂಗತಿಗಳನ್ನು ಸಂಕೇತಿಸಿ ಕನಕದಾಸರು ರಚಿಸಿದ ಕೃತಿ ರಾಮಧಾನ್ಯ ಚರಿತೆಯು ಹೀಗೆ, ವರ್ತಮಾನದ ಸಾಂಸ್ಕೃತಿಕ ರಾಜಕಾರಣವನ್ನು ಧ್ವನಿಸುತ್ತದೆ ಮತ್ತು ಆಹಾರ ರಾಜಕಾರಣದ ದನಿಯಾಗುತ್ತದೆ, ಪ್ರತಿಬಿಂಬವಾಗುತ್ತದೆ, ಪ್ರತಿನಿಧಿಸುತ್ತದೆ, ಪ್ರತೀಕವಾಗುತ್ತದೆ.

ರಾಗಿ ಮತ್ತು ಅಕ್ಕಿಗಳೆಂಬ ರೂಪಕಗಳಂತೆಯೇ ಹಲವು ಆಹಾರಗಳು ಸಾಂಸ್ಕೃತಿಕ ಮೌಲ್ಯಗಳ ಸಂಕೇತಗಳಾಗಿ ವರ್ತಮಾನದಲ್ಲಿ ಮುಖಾಮುಖಿಯಾಗಿರುವುದು ಈ ಕಾವ್ಯ ಚರ್ಚೆಯ ಸಂದರ್ಭದಲ್ಲಿ ಪ್ರಸ್ತುತವಾಗುತ್ತವೆ. ಶಾಲಾಮಕ್ಕಳಿಗೆ ಆಹಾರವಾಗಿ ನೀಡುವಲ್ಲಿ ಚರ್ಚಿಸಲ್ಪಟ್ಟ ಹಾಲು ಮತ್ತು ಮೊಟ್ಟೆಗಳು ...ಧಾನ್ಯ ಚರಿತೆಯ ರಾಗಿ ಮತ್ತು ಭತ್ತಗಳನ್ನೇ ನೆನಪಿಸುತ್ತವೆ. ಹಾಲಿನ ಸಹಜ ಪೌಷ್ಟಿಕತೆಯನ್ನು ಅದರ ಶ್ರೇಷ್ಠತೆಯಾಗಿ ಈ ಸಂದರ್ಭದಲ್ಲಿ ಉದಾತ್ತೀಕರಿಸಲಾಯಿತು. ಅದರಲ್ಲೂ ಆಕಳ ಹಾಲನ್ನು ಪಾವಿತ್ರ್ಯದ ನೆಲೆಯಲ್ಲಿ ಬಿತ್ತರಿಸಲಾಯಿತು. ಒಂದು ದಿನವೂ ಮೇವು-ಸಗಣಿಗಳನ್ನು ಮುಟ್ಟದೇ ಅನುದಿನವೂ ಹೈನು ಬಳಸುವ 'ಕುಲಜ'ರು ದೀನರಿಗೆ ತಾವು ದಾನ ಮಡುತ್ತಿದ್ದೇವೆಂಬ ಭಾವದಲ್ಲಿ ಹಾಲು ಹಂಚಿಕೆಯ ಯೋಜನೆಗೆ ಅಭಿಮತ ವ್ಯಕ್ತಪಡಿಸಿದರು. ಆದರೆ ಪೌಷ್ಟಿಕಾಂಶದ ಕೊರತೆಯಿಂದ ಕೃಶವಾದ ಮಕ್ಕಳಿಗಾದರೂ ಮೊಟ್ಟೆಯನ್ನು ನೀಡಬೇಕೆಂಬ ಯೋಜನೆಯನ್ನು ಸಂಘರ್ಷದ ಮೂಲಕ ವಿಫಲಗೊಳಿಸಲಾಯಿತು. ಯಾವ ಕಾರಣಕ್ಕೂ ಮೊಟ್ಟೆಯನ್ನು ಶಾಲಾ ಮಕ್ಕಳು ಮುಟ್ಟಕೂಡದು ಎಂಬಂತೆ ಮೊಟ್ಟೆಯ ಶಾಲಾ ಪ್ರವೇಶವನ್ನು ನಿಷೇಧಿಸಲಾಯಿತು. ಮೊಟ್ಟೆ ಅಸ್ಪೃಶ್ಯವಾಯಿತು, ನಿಂದಿಸಲ್ಪಟ್ಟಿತು, ಮಾತ್ರವಲ್ಲ ಅದನ್ನು ತಾಮಸ ಅಹಾರವೆಂದು ಅಪಮಾನಿಸಲಾಯಿತು. ಹಾಲು ಮತ್ತು ಮೊಟ್ಟೆಗಳು ಅಕ್ಕಿ ಮತ್ತು ರಾಗಿಗಳಂತೆ ತಾವು ಆಹಾರವಾಗುತ್ತಲೇ ತಮ್ಮನ್ನುಆಹಾರವಾಗಿ ಸ್ವೀಕರಿಸಿದ ಸಮುದಾಯಗಳನ್ನು ಪ್ರತಿನಿದಿಸುತ್ತವೆ ಎಂದು ಅರ್ಥೈಸಿಕೊಂಡರೆ ಆಹಾರ ರಾಜಕಾರಣವು ವಿಸ್ತರಿಸಿದ ಮತದ್ವೇಷದ ಎಲ್ಲೆಗಳು

ನಿಚ್ಚಳವಾಗಿ ಕಾಣುತ್ತವೆ. ಮೊಟ್ಟೆಯನ್ನು ತಾಮಸ ಆಹಾರವೆಂದು ವಾದಿಸಿದ ಮುನ್ನೆಲೆಯಲ್ಲಿ ಮೊಟ್ಟೆ ತಿನ್ನುವವರು ತಾಮಸಿಗಳೆಂದು ಬಿಂಬಿಸಲಾಯಿತು. ಉದ್ದೇಶಪೂರ್ವಕವಾಗಿ ಮೊಟ್ಟೆಯೊಂದಿಗೆ ಮಾಂಸವನ್ನು ಎಳೆತರಲಾಯಿತು. ಬಳಿಕ ಮಾಂಸಹಾರಿಗಳನ್ನು ಪೈಶಾಚಿಕರಿಸಲಾಯಿತು. ಈ ಬಗೆಯ ವಿವಾದ–ವಾಗ್ವಾದಗಳ ಹಿಂದಿನ ಆಯಾಮಗಳನ್ನು ಅರ್ಥಮಾಡಿಕೊಳ್ಳಬೇಕು. ಮೊಟ್ಟೆ ವಿತರಣೆ ತಡೆದ ಯಶಸ್ಸು ಅದು ತಡೆಯುವಲ್ಲಿ ಮಾತ್ರವಲ್ಲ, ಕಸಿಯುವಿಕೆಯಲ್ಲಿ ಅಡಗಿತ್ತು ಮತ್ತು 'ಅನ್ಯ' ಆಹಾರ ಸಂಸ್ಕೃತಿಯನ್ನು ಅಪವಿತ್ರೀಕರಿಸುವಲ್ಲಿ ಯಜಮಾನ ಸಂಸ್ಕೃತಿಯು ವಿಜಯಿಯಾಯಿತು.

ಪರಂಪರೆಯ ಕಾವ್ಯದ ಅಂತಿಮ ಆಶಯ, ವರ್ತಮಾನದ ವಾಸ್ತವದಲ್ಲಿ ದುರಂತಕ್ಕೀಡಾಗುವುದು ಇಲ್ಲಿಯೆ. ರಾಗಿಯ ಸತ್ವಪರೀಕ್ಷೆಯ ಬಳಿಕವಾದರೂ ತನ್ನ ಹೆಸರಿಟ್ಟುಕೊಂಡು ಬಾಳುವ ಹೆಚ್ಚುಗಾರಿಕೆಯನ್ನು ಕಥನದ ರಾಮ ತೋರಿದರೆ, ಸತ್ವಪರೀಕ್ಷೆಯ ಫಲಿತವನ್ನೂ ಮಾನ್ಯಗೊಡದ ರಾಮ–ಗಣವು ವಾಸ್ತವದಲ್ಲಿ ಮೊಟ್ಟೆಯನ್ನು ಶಾಲಾಮಕ್ಕಳಿಗೆ ನಿಷೇಧಿಸುವಲ್ಲಿ ಯಶಸ್ವಿಯಾಯಿತು. ಆ ಮೂಲಕ ಮೊಟ್ಟೆಯು ಪ್ರತಿನಿಧಿಸುವ ಸಮುದಾಯಗಳ ಆಹಾರದ ಹಕ್ಕನ್ನು ಕಸಿಯಿತು. ಆಹಾರದ ಹಕ್ಕನ್ನು ಕಸಿಯುವುದೆಂದರೆ ಬದುಕುವ ಹಕ್ಕನ್ನೇ ಕಸಿಯುವುದು ಎಂಬುದು ಮತ್ತೆ ಸೂಚಿಸಲ್ಪಟ್ಟಿತು. ಮೊಟ್ಟೆಯ ಪರ–ವಿರೋಧವು ಅದು ಆಮಟ್ಟಿಗಿನ ವಾಗ್ವಾದ ಮಾತ್ರವಾಗಿರದೇ ಸಾಂಸ್ಕೃತಿಕ ಮೌಲ್ಯಗಳ ಮುಖಾಮುಖಿಯಾಗಿದ್ದನ್ನು ಗಮನಿಸಬೇಕು. ರಾಗಿ, ರಾಮನಾಮದ ಲಗತ್ತಿನೊಂದಿಗೆ ಅಸ್ತಿತ್ವ ರಕ್ಷಿಸಿಕೊಂಡರೆ, ಮೊಟ್ಟೆಯು ತನ್ನ ಅನನ್ಯತೆ ಉಳಿಸಿಕೊಳ್ಳುವಲ್ಲಿ ಹೆಣಗಿ ಸೋಲನುಭವಿಸಿತು. ಇನ್ನು ತಥಾಕಥಿತ ಸಂಸ್ಕೃತಿಯ ನೆಲೆಯಲ್ಲಿ ಆಹಾರದ ಚರ್ಚೆಯನ್ನು ಚರಿತ್ರೆಯಿಂದ ಭವಿಷ್ಯದ ತನಕವೂ ವಿಸ್ತರಿಸಿಕೊಂಡಿರುವ ಗೋ–ಮಾಂಸದ ಬಗ್ಗೆ ಇಲ್ಲಿ ಪ್ರಸ್ತಾಪಿಸಿದರಷ್ಟೇ ಸಾಕು ಗೋಪ್ರೇಮದ ಮಿಥ್ಯೆ–ವಾಸ್ತವಗಳೆಲ್ಲ ತೆರೆದುಕೊಳ್ಳುತ್ತವೆ. ಆಹಾರ ರಾಜಕಾರಣದ ವಿರಾಟ್ ಸ್ವರೂಪ ಕಣ್ಣೆದುರು ನಿಲ್ಲುತ್ತದೆ.

"ಪರಿಮಳದ ಚಂದನದ ತರುವಿಗೆ ಸರಿಯೇ ಒಣಗಿದ ಕಾಷ್ಠ
ಗೋವದು ಕರೆದ ಹಾಲಿಗೆ ಕುರಿಯ ಹಾಲಂತರವೇ
ಪರಮ ಸಾಹಸಿ ವೀರ ಹನುಮಗೆ ಮರದ ಮೇಲಣ ಕಪಿಯು ತಾನಂತರವೇ
ಸುರನದಿಗೆ ತಾ ಸರಿಯೆ ಕಾಡೊಳು ಹರಿವ ಹಳ್ಳದ ನೀರು
ಗರುಡನ ಮರಿಗೆ ಹದ್ದಂತರವೇ
ಹಂಸಗೆ ಬಕನು ಹೋಲುವುದೆ
ಸರಸ ಮರಿ ಕೋಗಿಲೆಗೆ ವಾಯಸ ನಣಕಿಸುವ ತೆರನಾಯ್ತು,
ನೀನಾವ ಮಾನ್ಯನು, ಛಡ, ಭ್ರಷ್ಟ, ತೊಲಗು"

ರಾಗಿಯನ್ನು ನಿಂದಿಸುವ ಭತ್ತದ ಈ ಮಾತುಗಳು ಸ್ಪಷ್ಟವಾಗಿ ತನ್ನ ಭೇದ ನಿಲುವನ್ನು ವ್ಯಕ್ತಪಡಿಸುತ್ತವೆ. ಈ ಬಗೆಯ ಗುಣ ವಿಭಜನೆಯಲ್ಲಿಯೂ ನಿಚ್ಚಳವಾಗಿ

ನಿರ್ದಿಷ್ಟ ಸಂಸ್ಕೃತಿಯೊಂದರ ಸಂಕೇತಗಳು ಒಟ್ಟಾಗಿರುವುದನ್ನು ಇಲ್ಲಿ ಗಮನಿಸಬಹುದು. ಚಂದನ, ಗೋವು, ಹನುಮ, ಸುರನದಿ, ಗರುಡ, ಹಂಸ, ಕೋಗಿಲೆಗಳ ಮೂಲಕ ತನ್ನನ್ನು ಬಣ್ಣಿಸಿಕೊಂಡಿರುವ ಸಾಂಸ್ಕೃತಿಕ ಮೌಲ್ಯವು ಕುರಿಯ ಹಾಲನ್ನು, ಹಳ್ಳದ ನೀರನ್ನು ಕೀಳಾಗಿ ಚಿತ್ರಸುವಲ್ಲಿನ ದಾರ್ಷ್ಟ್ಯ ಅದು ಅರಸು ಬಲದಿಂದ ಬಂದಿರುವಂಥಾದ್ದು. ಈ ದಾರ್ಷ್ಟ್ಯ ದೃಷ್ಟಿಗೆ ಕಾಗೆ, ಬಕ, ಕಪಿಗಳು ಕ್ಷುಲ್ಲಕ ಜೀವಿಗಳಾಗಿ ಕಾಣುತ್ತವೆ. ಈ ಬಗೆಯ ಸಿರಿಗರವೇ ದುರ್ಬಲರನ್ನು 'ಒಣಕಟ್ಟಿಗೆಗೆ ಸಮ'ವೆಂದು ಪರಿಗಣಿಸುವುದು. ಅಸ್ತಿತ್ವವನ್ನೆ ಅಮಾನ್ಯಗೊಳಿಸುವ ಮೂಲಕ ಘಡನೆಂದು ನಿಂದಿಸುತ್ತವೆ. ಭ್ರಷ್ಟನೆಂದು ಆರೋಪಿಸುತ್ತವೆ. ತೊಲಗೆಂದು ಬಹಿಷ್ಕರಿಸುತ್ತವೆ. ತಾನು ಸಂಕೇತಿಸುವ ಕುಲದ ನಡೆಯನ್ನೇ ನಾಲಗೆಯಲ್ಲಿ ನುಡಿದ ವ್ರೀಹಿಯ ದನಿ ನರೆದಲೆಗದ್ದಲ್ಲ. ನರೆದಲೆಗನದು ಆತ್ಮ ಪ್ರಶಂಸೆಗಿಂತ ಭಿನ್ನವಾದ ಆತ್ಮಾಭಿಮಾನದ್ದು. ಆದರೆ ಸಂಘರ್ಷದ ಸಂದರ್ಭದಲ್ಲಿ ಜಾಗೃತಗೊಂಡು ಶಕ್ತಿಯಾಗಿ ರೂಪುಗೊಳ್ಳುವ ಈ ಆತ್ಮಾಭಿಮಾನವು ಸನ್ಮಾನ, ಸತ್ಕಾರಗಳಲ್ಲಿ ಶಿರಬಾಗಿಸಿ ಬಿಡುತ್ತದೆ ಎಂಬುದನ್ನು ರಾಗಿಯು ರಾಮಧಾನ್ಯವಾಗುವ ಸಂದರ್ಭ ವಿವರಿಸುತ್ತದೆ.

"ಭೂಸುರರು ಸಂತೋಷಿಸಲು
ನರೆದಲಗ ನೀ ಬಾರೆನುತ ರಾಮನೃಪಾಲ ನೆರೆಮೆಚ್ಚಿ
ಕರೆದು ಕೊಟ್ಟನು ತನ್ನ ನಾಮವ"

ಮೆಚ್ಚಿ ಕರೆದು ಕೊಟ್ಟ ರಾಮನಾಮವನ್ನು ತನ್ನ ಇರವಿನುದ್ದಕ್ಕೂ ಹೊತ್ತು ಬಾಳುವ 'ಕರ್ಮ' ನರೆದಲೆಗನದು. ಗುಣ–ಸಾರದಲ್ಲಿ ಗೆದ್ದ ಬಳಿಕವೂ ಅವನ ಸಿರಿಚರಣಕಭಿನಮಿಸುವ ಭಾಗ್ಯ ಅದು ಸಹಬಾಳ್ವೆಯ ಅವಕಾಶವಾಗಿದ್ದರೆ ಸ್ವೀಕಾರ್ಹವೆನ್ನಬಹುದಿತ್ತು. ಆದರೆ 'ಧರೆಗೆ ರಾಘವನೆಂಬ' ಹೆಸರು ಹೊರುವುದಲ್ಲದೆ, 'ಮಂತ್ರಾಕ್ಷತೆ'ಯ ಗೌರವ ರಾಗಿಗೆ ಯಾವತ್ತೂ ದಕ್ಕುವುದಿಲ್ಲ. 'ಭೂತಳದ ಜನರೊಡನೆ ಪ್ರಖ್ಯಾತನಾಗು' ಎಂಬ ವರ ದೊರೆಯುವುದೇ ಹೊರತು ವ್ರಿಹಿಗನಂತೆ "ಉಪನಯನದಲಿ, ಅರಮನೆಯಲಿ, ಭೂಸುರರ ಮನೆಗಳಲಿ, ನೈವೇಧ್ಯದಲಿ, ಸವಾರಾಧನೆಯಲಿ, ಹರಿದಿವಸದೌಪಾಸನೆಗಳಲಿ, ವಿಪ್ರರ ಘಾಲದಲಿ" ಮೂರುಲೋಕದಲ್ಲೂ ನೂರುಕಾಲದಲ್ಲೂ ನರೆದಲೆಗನಿಗೆ ನಿಲ್ಲಲಣಿಯಿಲ್ಲ. ವ್ರೀಹಿಯ ಸಮ್ಮಾನಕ್ಕೆಣೆಯಿಲ್ಲ. ರಾಮಧಾನ್ಯ ಚರಿತೆಯೇ ತೋರುವ ಕಾಣ್ಕೆ ಇದು. 'ಪರಮ ಧಾನ್ಯ'ದ ಕಾವ್ಯ ದರುಶನವಿದು.

ಆಧುನಿಕ ಪ್ರಭುತ್ವ ವ್ಯವಸ್ಥೆಗಳ ಸಂದರ್ಭದಲ್ಲಿ ಆಹಾರವು, ಆಹಾರ ರಾಜಕಾರಣಕ್ಕಲ್ಲದೇ, ಅದು ಮಾರುಕಟ್ಟೆ ರಾಜಕಾರಣಕ್ಕೂ ಈಡಾಗುತ್ತಿರುವ ವರ್ತಮಾನವೇ ಪ್ರಜಾಪ್ರಭುತ್ವದಡಿಯ ಪ್ರಜೆಗಳ ಬಹುದೊಡ್ಡ ಸವಾಲು. ಧಾನ್ಯ ಚರಿತೆಯಲ್ಲಿ ರಾಮನು ಪ್ರಭುತ್ವದ ಪ್ರತೀಕವಾದರೆ, ಅದೇ ರಾಮನು ಪ್ರಭುತ್ವ ನಿರ್ಮಾಣದ ಸಾಧನವಾಗಿರುವ ಸಂದರ್ಭದಲ್ಲಿ ಆಹಾರವು, ಸಾಂಸ್ಕೃತಿಕ

ರಾಜಕಾರಣದ ಮೂಲಕ ಮಾರುಕಟ್ಟೆ ರಾಜಕಾರಣದ ಸಾಧನವಾಗಿ ಬಳಕೆಯಾಗಿರುವುದನ್ನು ವರ್ತಮಾನವು ಈಗಾಗಲೆ ನಿರೂಪಿಸಿದೆ. ಚರಿತ್ರೆ ಮತ್ತು ವರ್ತಮಾನಗಳನ್ನು ಬೆಸೆದು, ಬೆಳೆಯುತ್ತಿರುವ ರಾಮ(ಧಾನ್ಯ)ಚರಿತೆಯ ಚಲನೆಯಲ್ಲಿ ಆಹಾರವೆಂಬುದು ಅಸ್ತ್ರವಾಗಿಯೂ, ಸರಕಾಗಿಯೂ, ಸಾಧನವಾಗಿಯೂ ರೂಪಾಂತರಗೊಂಡಿದೆ. ಆಹಾರದ ಈ ಚಲನೆಯ ಗತಿಯ ಮೂಲಕವೂ ಚರಿತ್ರೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿದೆ. ಈ ನೆಲೆಯಿಂದ ಗಮನಿಸಿದಾಗ ಕನಕದಾಸರೂ ಆಹಾರವೆಂಬ ಕಾವ್ಯವಸ್ತುವಿನ ಮೂಲಕ ಸಮಕಾಲೀನ ಸಾಂಸ್ಕೃತಿಕ ರಾಜಕಾರಣವನ್ನು ನಿರೂಪಿಸಿದ್ದಾರೆ ಎಂದೇ ತೋರುತ್ತದೆ. ಕನಕರ ಕಾಲದ ಕಟುವಾಸ್ತವಗಳು ಅದು ರಾಗಿಯನ್ನು ರಾಮಧಾನ್ಯವಾಗಿಸುವಲ್ಲಿ ಪರಿಸಮಾಪ್ತಿಗೊಂಡಿರಬಹುದು. ಅಥವಾ ಈ ಅಸಹಾಯಕತೆಯ ನೆಲೆ ಕವಿಯ ನಿಲುವುಗಳಲ್ಲಿಯೂ ಇರಬಹುದು, ಎಂದೂ ಗಮನಿಸಬೇಕು.

ಬೆವರು ಸುರಿಸಿ ಬೆಳೆದ ಕಬ್ಬಿನ ಬೆಳೆಯನ್ನೆ ಬೆಂಕಿಯಾಗಿಸಿ ಅ ಬೆಂಕಿಯಲ್ಲಿ ತನ್ನನ್ನು ಸುಟ್ಟುಕೊಂಡ ನೇಗಿಲಯೋಗಿಯ ವರ್ತಮಾನ ಸಂದರ್ಭದಲ್ಲಿ 'ರಾಮಧಾನ್ಯ ಚರಿತೆ'ಯು ಯಾವ ಹೊಳಹುಗಳನ್ನು ನೀಡುತ್ತಿದೆ? ಶೂದ್ರಾನ್ನವೆಂಬ ನಿಂದನೆಗೀಡಾದ ನರೆದಲೆಗನಿರಲಿ, ಸಿರಿಧಾನ್ಯಗಳಲ್ಲೇ ಹಿರಿತನ ಪಡೆದ ಭತ್ತದ ಬೆಳೆಗಾರರೂ ಅನ್ನವುಣಿಸಿದ ಕೈಯಿಂದ ವಿಷಉಣ್ಣುತ್ತಿರುವ ಹೊತ್ತಿನಲ್ಲಿ ರಾಮಧಾನ್ಯ ಚರಿತೆ ಯಾವ ಸವಾಲಿಗೆ ಉತ್ತರವಾಗಬಲ್ಲದು? ಲೋಕದ ಹಸಿವಿಗೆ ಅನ್ನವಿಕ್ಕಿ ತಾನು ನಂಜುಂಡನಾಗಿ ಉಳಿದ ಕೃಷಿಕನ ಆತ್ಮಬೇಗುದಿಯೊಂದಿಗೆ ರಾಮ(ಧಾನ್ಯ)ಚರಿತೆಯ ಸಂಬಂಧವೇನು? ಈ ಬಗೆಯ ಪ್ರಶ್ನೆಗಳು ಮುಖ್ಯವಾಗುತ್ತವೆ.

ನನಗನಿಸುವಂತೆ, ಸವಾಲಿರುವುದು ಇಲ್ಲಿಯೇ!. ನರೆದಲೆಗನಿಗೆ ನೀಡಲಾದ 'ಧರೆಗೆ ರಾಘವ'ನೆಂಬ ಹೆಸರಿನ ಸ್ವೀಕೃತಿಯಲ್ಲಿ. ('ದೊರೆರಾಮ'ರ ಸಖ್ಯವನ್ನು ಸಂಭ್ರಮಿಸುವ 'ರಾಗಿ'ಯರ ಅಧೀನ ಮನಸ್ಥಿತಿಯಲ್ಲಿ.) ಈ ಬಗೆಯ ಸ್ವೀಕೃತಿಯೆ ಆಚಾರ್ಯರ ಪ್ರಾಬಲ್ಯವಿದ್ದ ಸಂಕಟದ ಕಾಲದಲ್ಲಿ ಕನಕರನ್ನು ದಾಸರನ್ನಾಗಿ ಮಾಡಿರುವುದು. ಅದು ಆ ಕಾಲದ ಅನಿವಾರ್ಯತೆಯೋ, ವ್ಯಕ್ತಿಗತ ಅಸಹಯಕತೆಯೋ ಆ ಮಾತು ಬೇರೆ. ಆದರೆ ಈ ಕವಿ ತನ್ನನುಭವವನ್ನೆ ರೂಪಕಗೊಳಿಸಿ ಚಿತ್ರಿಸಿದಂತಿರುವ ಕಾವ್ಯದ ಒಂದು ಚರಣವೆ ಇಡೀ ಕಾವ್ಯದ ವೈರುಧ್ಯವನ್ನು ಸೂಚಿಸುವಂತಿದೆ. ನನಗನಿಸಿರುವಂತೆ ಕಾವ್ಯದ 'ಮರ್ಮ'ವಿರುವುದೆ ಈ ಸ್ಥಾನದಲ್ಲಿ.

"ನರೆದಲೆಗನೈತಂದು ರಾಮನ
ಸಿರಿಚರಣಕಭಿನಮಿಸೆ ದೇವಾಸುರರು ಕೊಂಡಾಡೆ
ಹರಸಿ ಮುತ್ತಿನ ಸೇಸೆಯನು ಭೂ

ಸುರರು ಮಂತ್ರಾಕ್ಷತೆಯನಿತ್ತುಪಚರಿಸಿದರು ರಾಗಿಯನು ಪೊಗಳಿದರಲ್ಲಿ ಮುನಿವರರು" ಎಂಬಲ್ಲಿ.

ರಾಮಧಾನ್ಯ ಚರಿತೆ ಕಾವ್ಯವು ಅಕ್ಕಿ ಮತ್ತು ರಾಗಿಗಳನ್ನು ಮುಖಾಮುಖಿಯಾಗಿಸಿ ಸೆರೆಮನೆ ಪರೀಕ್ಷೆಯ ವಿಚಾರಣೆಯ ಬಳಿಕದ ತೀರ್ಪು ಎಂಬಂತೆ 'ಸಾರ ಹೃದಯನು ನರೆದಲೆಗನು' 'ಇವನೆ ಪರಮ ಧಾನ್ಯನು' ಎಂದು ನುಡಿಯುತ್ತದೆ. ಈ ಪರಮತನವನ್ನು ಪುರಸ್ಕರಿಸುವ ಆಚರಣೆಯಲ್ಲಿ ರಾಗಿಯನ್ನು 'ಮಂತ್ರಾಕ್ಷತೆಯನಿತ್ತು' ಸತ್ಕರಿಸಲಾಗುತ್ತದೆ. ಅಂದರೆ ರಾಗಿಯು ಪುರಸ್ಕಾರವನ್ನು ಪಡೆಯುತ್ತಾನಾದರೂ ಗೌರವದಲ್ಲಿ ಅವನಿಗೂ ಮಿಗಿಲಿನವನಾಗುವವನು, ಮಂತ್ರಾಕ್ಷತೆ ಯಾಗಿರುವ ಅಕ್ಕಿಯೆ. ಈ ಕಾವ್ಯದಲ್ಲಿಯೇ ತುಂಬಾ ಸೂಚ್ಯಭಾಗವಿದು. ನನಗಂತೂ ಈ ಚಿತ್ರಣ, ಶೂದ್ರ ಪೀಠಾಧಿಪತಿಗೆ ದೀಕ್ಷೆಯನ್ನೀಡುವ ಬ್ರಾಹ್ಮಣ ಆಚಾರ್ಯರ ದೃಶ್ಯವಾಗಿ ಕಣ್ಣಮುಂದೆ ಬರುತ್ತದೆ.

ಕನಕದಾಸರು ಪ್ರಜ್ಞಾಪೂರ್ವಕವಾಗಿ ಮಂತ್ರಾಕ್ಷತೆಯ ಮೇಲ್ತನವನ್ನು ಚಿತ್ರಿಸಿದ್ದಾರೆ ಎಂದು ನನಗನ್ನಿಸುವುದಿಲ್ಲ. ಆದರೆ ಯಜಮಾನ್ಯ ಸಂಸ್ಕೃತಿಯ ಸ್ಥಾಪಿತ ಮೌಲ್ಯಗಳನ್ನು ಮೀರಲು ಅನುಸಂಧಾನದ ಮೂಲಕ ನಡೆಸುವ ಪ್ರಯತ್ನವು ಮತ್ತೊಂದೆಡೆ ಅದು ಹೇಗೋ ನಮ್ಮನ್ನು ಸಿಕ್ಕಿಹಾಕಿಸಿರುತ್ತದೆ ಎಂಬುದು ಈ ಚಿತ್ರಸೂಕ್ಷ್ಮದಲ್ಲಿದೆ. ದಮನವನ್ನು ಅದರ ಮೂಲ ನೆಲೆಗಳಿಂದಲೇ ಉಚ್ಚಾಟಿಸದೇ ದಮನಕಾರಿಯೊಂದಿಗಿನ ಅನುಸಂಧಾನದ ಮೂಲಕ ಅನನ್ಯತೆಯನ್ನೋ, ಸಮಾನತೆಯನ್ನೊ ಸ್ಥಾಪಿಸುವ ದಮನಿತನ ಹಂಬಲ ಅಂತಿಮವಾಗಿ (ಸಂಕೇತಗಳ ಮೂಲಕವಾದರೂ) ಅಧೀನತೆಯನ್ನೇ ಮಾನ್ಯಮಾಡಿಕೊಳ್ಳುತ್ತದೆ ಎಂಬುದಕ್ಕೂ ರಾಮಧಾನ್ಯ ಚರಿತೆಯ ಒಳಗೇ ಆಧಾರಗಳಿವೆ.

ಶ್ರೇಷ್ಠತೆಯೇ ಎಲ್ಲ ಕಾಲ-ದೇಶಗಳ ಪ್ರಭುತ್ವದ ಕೇಂದ್ರಪ್ರಜ್ಞೆ, ಅದು ತನ್ನನ್ನು ಹಾಗೆ ಬಿಂಬಿಸಿಕೊಳ್ಳುವ ಮೂಲದಿಂದಲೇ ಅನ್ಯವನ್ನು ಕನಿಷ್ಠಗೊಳಿಸುವ ಪ್ರಕ್ರಿಯೆಯಲ್ಲಿ ಯಜಮಾನ್ಯವನ್ನು ಸ್ಥಾಪಿಸಿಕೊಳ್ಳುತ್ತದೆ. ಅಷ್ಟುಮಾತ್ರವಲ್ಲ ಅಧೀನ ನೆಲೆಗಳಲ್ಲಿ ಕೀಳರಿಮೆ ಇಲ್ಲವೇ ಮೇಲ್ಚಲನೆಯ ಹಂಬಲ-ಸ್ಪರ್ಧೆಯನ್ನು ಸೃಷ್ಟಿಸಿ ಅದನ್ನು ತೀವ್ರಗೊಳಿಸಿದಷ್ಟೂ ತಾನು ಬಲಗೊಳ್ಳತ್ತ ಸಾಗುತ್ತದೆ. ಪ್ರಭುತ್ವ ಕೇಂದ್ರದ ಈ ಶ್ರೇಷ್ಠ-ಕನಿಷ್ಠ ವಿಭಜನೆಗಳಿಗೀಡಾಗದ ಲೋಕದ ವಸ್ತು-ಸಂಗತಿಗಳೇ ಇಲ್ಲ. ಪ್ರಭುತ್ವದ ಹುಟ್ಟಿನೊಂದಿಗೇ ಲೋಕದ ಎಲ್ಲ ಇರುವಿಕೆಗಳು ಈ ಭೇದದ ಭಾಗಗಳಾಗಿ ಉಳಿದುಕೊಂಡಿವೆ. ತೃಣ-ಕಣವನ್ನೂ ಬಿಡದೇ ಆವರಿಸಿರುವ ಈ ಭೇದವನ್ನು ಕನ್ನಡ ಸಾಹಿತ್ಯ ಪರಂಪರೆ ಬಿನ್ನ ನೆಲೆ, ಸ್ತರ, ಕ್ರಮಗಳಲ್ಲಿ ಅಬಿವ್ಯಕ್ತಿಸಿದೆ, ಪ್ರಶ್ನಿಸಿದೆ.

ರಾಗಿಯನ್ನು 'ಪರಮಧಾನ್ಯ'ವಾಗಿ ಮಾನ್ಯಗೊಳಿಸುವ ಕನಕದಾಸರ ಇಚ್ಛೆಯಲ್ಲಿರುವುದೂ ಈ ಶ್ರೇಷ್ಠತೆಯ ಹಂಬಲವೇ ಎನ್ನುವುದು ಪ್ರಶ್ನೆ. ಅಂತೆಯೇ ಇದು ಕನಿಷ್ಠನೆಂಬ ಅರಿಮೆಯ ನೆಲೆಯಿಂದ ಹೊರಟ ಮೇಲ್ಚಲನೆಯಾಗಿದೆ

ಎಂಬುದು ಗಮನಾರ್ಹ. ರಾಗಿಯ ಪರಮತನದ ಸಾಬೀತಿಗೆ ರಾಮನ ಓಲಗವೇ ಬೇಕಾಗುವುದು, ಮತ್ತು ಪರೀಕ್ಷೆಗೀಡಾಗಲು ರಾಮನ ಸೆರೆಮನೆಯೇ ತಾಣವಾಗುವುದೂ ಈ ಬಗೆಯ ಹಂಬಲದ ಪರಿಣಾಮಗಳೇ ಆಗಿರುತ್ತವೆ. ರಾಗಿಯೇನೋ ಪರಮಧಾನ್ಯವೆಂಬ ಪುರಸ್ಕಾರಕ್ಕೆ ಪಾತ್ರವಾಯಿತು. ಅಕ್ಕಿಯೂ ಮಂತ್ರಾಕ್ಷತೆಯ ಗೌರವವನ್ನು ಉಳಿಸಿಕೊಂಡಿತು. ಆದರೆ ಇವರಿಬ್ಬರಲ್ಲದೇ ಈ ನವಧಾನ್ಯ ಪರಿವಾರದಲ್ಲಿರುವ ಉಳಿದ ಸಪ್ತ ಧಾನ್ಯಗಳ ಸ್ಥಾನವೇನು ಎಂಬುದರ ಬಗ್ಗೆ ರಾಮಧಾನ್ಯ ಚರಿತೆಯಲ್ಲಿ ಉತ್ತರ ಸಿಗುವುದಿಲ್ಲ. ತನ್ನನ್ನು ನಿರ್ದಿಷ್ಟ ಪಡಿಸಿಕೊಂಡಿರುವಂತೆ ಈ ಕೃತಿಯು 'ರಾಮಧಾನ್ಯ ಚರಿತೆ' ಮಾತ್ರವಾಗಿರುವುದರಿಂದ ಇಂತಹ ಪ್ರಶ್ನೆಗಳಿಗೆ ಈ ಕೃತಿಯೇ ಉತ್ತರಿಸಬೇಕಿಲ್ಲ ಕೂಡ.

ಆಹಾರ ಸಂಸ್ಕೃತಿ, ಆಹಾರ ರಾಜಕಾರಣಗಳ ನೆಲೆಯಲ್ಲಿ ಭತ್ತ ಮತ್ತು ರಾಗಿಯನ್ನು ಪ್ರತ್ಯೇಕ ಸಂಸ್ಕೃತಿಗಳ ರೂಪಕಗಳಾಗಿ ಗಮನಿಸಿದಾಗ ರಾಮಧಾನ್ಯ ಚರಿತೆ ಏನನ್ನು ಹೇಳುತ್ತಿದೆ ಮತ್ತು ಏನನ್ನು ಆಚರಣೆಯಾಗಿ ಮಾನ್ಯ ಮಾಡಿದೆ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ನುಡಿ–ನಡೆಗಳ ವೈರುಧ್ಯವನ್ನು ಸಮರ್ಥವಾಗಿ ನಿ–ರೂಪಿಸಿರುವುದೇ ಈ ಕಾವ್ಯದ ಯಶಸ್ಸು ಎಂದೂ ಭಾವಿಸಬಹುದು. ಪರಂಪರೆಯ ಮೌಲ್ಯವನ್ನು ಪ್ರತಿಪಾದಿಸುವ ಸಾಹಿತ್ಯ ಕೃತಿಯನ್ನು ವರ್ತಮಾನಕ್ಕೆ ಅನ್ವಯಿಸಿ ಅರ್ಥವನ್ನು ಗ್ರಹಿಸುವ ಪ್ರಕ್ರಿಯೆಯು ಕಾವ್ಯ ದರ್ಶನವನ್ನು ಇನ್ನಷ್ಟು ಸ್ಪಷ್ಟಗೊಳಿಸಬಲ್ಲದು.

### 3. ಒಂದು ಪ್ರತಿಕ್ರಿಯೆ

–ದೇವು ಪತ್ತಾರ

ಸಂಸ್ಕೃತಿ ಮತ್ತು ರಾಜಕಾರಣ ಎರಡು ವಿಭಿನ್ನ ಕ್ಷೇತ್ರಗಳನ್ನು ಪ್ರತಿನಿಧಿಸುವ ಪದಗಳು. ಮೇಲ್ನೋಟಕ್ಕೆ ಅಥವಾ ತಕ್ಷಣಕ್ಕೆ ಈ ಎರಡೂ ಪರಸ್ಪರ ಸಂಬಂಧವಿಲ್ಲದ ಕ್ಷೇತ್ರಕ್ಕೆ ಸಂಬಂಧಿಸಿದ ಪದಗಳು ಎನ್ನಿಸುತ್ತದೆ. ಆದರೆ, ಇವೆರಡೂ ಪದಗಳನ್ನು ಕುರಿತು ವಿಚಾರ – ಚಿಂತನೆ ನಡೆಸಲು ಆರಂಭಿಸಿದಾಗ ಅವುಗಳ ನಡುವಿನ ಅಂತಸ್ಸಂಬಂಧ ಅರಿವಿಗೆ ಬರದೇ ಇರದು. ವಾಸ್ತವವಾಗಿ 'ರಾಜಕಾರಣ'ವು ಸಂಸ್ಕೃತಿಯ ಒಂದು ಭಾಗ. ಸಂಸ್ಕೃತಿ ರೂಪುಗೊಳ್ಳುವುದಕ್ಕೆ ಕೊಡುಗೆ ನೀಡುವ ಹಲವು ಘಟಕಗಳ ಪೈಕಿ ರಾಜಕೀಯವೂ ಒಂದು. ಉಳ್ಳವರ ಮತ್ತು ಇಲ್ಲದವರ ನಡುವಿನ ಆಯ್ಕೆಯ ಸಂದರ್ಭದಲ್ಲಿ ಕರ್ನಾಟಕದ ರಾಜಕೀಯ ಸಂಸ್ಕೃತಿಯು ತಾತ್ವಿಕವಾಗಿ ಇಲ್ಲದವರ ಪರವಾದ ನಿಲುವು ತಳೆಯುತ್ತ ಬಂದಿದೆ. ಅದಕ್ಕೆ ಕರ್ನಾಟಕದ ಸಂಸ್ಕೃತಿಯು ರೂಪಿಸಿದ ಒತ್ತಡವೇ ಕಾರಣ ಎಂಬುದರಲ್ಲಿ ಎರಡು ಮಾತಿಲ್ಲ. ದುರ್ಬಲರ ಪರವಾದ ನಿಲುವು ತಳೆಯುವುದು ಕನ್ನಡ ಸಂಸ್ಕೃತಿಯಲ್ಲಿ ಅವಿರತವಾಗಿ ನಡೆದು ಬಂದಿರುವ ಪ್ರಕ್ರಿಯೆ. ರಾಜಕೀಯದ ಮೇಲೆ ಒತ್ತಡ ಹೇರಿ ಅದನ್ನು ಜೀವಪರವಾಗಿಸಿದ ಸಂಸ್ಕೃತಿಯು ತನ್ನ ಪಾರಮ್ಯವನ್ನು ಸಾಧಿಸುವಲ್ಲಿ

ಯಶ ಕಂಡಿದೆ ಆದರೆ, ಅದೇ ಹೊತ್ತಿಗೆ ರಾಜಕೀಯವೂ ತನ್ನ ಪ್ರಭಾವವನ್ನು ಸಂಸ್ಕೃತಿಯ ಮೇಲೆ ಬೀರದೇ ಇಲ್ಲ. ಸಾಂಸ್ಕೃತಿಕ ರಾಜಕಾರಣ ಉಂಟು ಮಾಡಿರುವ ಅವಾಂತರಗಳನ್ನು ಗಮನಿಸಿತ್ತು ಹೊರಟಾಗ ಮಾತ್ರ ಅದರ ಕರಾಳ ಹಸ್ತದ ವ್ಯಾಪಕತೆ ಅರಿವಿಗೆ ಬರುತ್ತದೆ. ದುರ್ಬಲರ ಪರವಾಗಿ ಚಿಂತಿಸುವಂತೆ, ಕ್ರಿಯಾಶೀಲವಾಗುವುದಕ್ಕೆ ಪ್ರೇರಕವಾಗುವ ಸಂಸ್ಕೃತಿಯನ್ನೇ ಕಲುಷಿತಗೊಳಿಸುವ ಹುನ್ನಾರಗಳು ಸಾಂಸ್ಕೃತಿಕ ರಾಜಕಾರಣದ ಭಾಗವೇ ಆಗಿವೆ. ಇಂತಹ ಸಾಂಸ್ಕೃತಿಕ ರಾಜಕಾರಣಕ್ಕೂ ಒಂದು ಪರಂಪರೆ ಇದೆ ಎನ್ನುವುದನ್ನು ಗಮನಿಸದೇ ಇರುವಂತಿಲ್ಲ. ಕನಕ ಮತ್ತು ಕಾಳಿದಾಸರನ್ನು 'ದಾಸ'ರನ್ನಾಗಿ ಮಾಡಿದ ಸಾಂಸ್ಕೃತಿಕ ರಾಜಕಾರಣವು ಹುಟ್ಟು ಹಾಕಿದ ಅಭದ್ರತೆಯೂ ಅಲ್ಪಕಾಲದಲ್ಲಿ ಕೊನೆಗೊಳ್ಳುವಂತಹುದಲ್ಲ. ಮಾನವ ಸಹಜ ಸತತ ಪರಶ್ರಮದಿಂದ ಮನುಷ್ಯನೊಬ್ಬ ಮುಟ್ಟಬಹುದಾದ ಉನ್ನತ ಹಂತವನ್ನು ತಲುಪಿದವರು ಕನಕ ಮತ್ತು ಕಾಳಿದಾಸ. ಪರಶ್ರಮದ ಕೊಂಡಿಯನ್ನು ಕಳಚುವ 'ಪವಾಡ'ಗಳನ್ನು ಸೇರಿಸಿ, ರೂಪಿಸಿ ದಾಸರನ್ನಾಗಿಸಿದ ಸಾಂಸ್ಕೃತಿಕ ರಾಜಕಾರಣದ ಸ್ವರೂಪವನ್ನು ಅರಿಯದಿದ್ದರೆ ಅಪಾಯ ತಪ್ಪಿದ್ದಲ್ಲ. ರಾಜಕೀಯ ಸಂಸ್ಕೃತಿಯ ಬಗ್ಗೆ ಯೋಚನೆ ಮಾಡುವ ಸಂದರ್ಭದಲ್ಲಿಯೇ ಸಾಂಸ್ಕೃತಿಕ ರಾಜಕಾರಣದ ಒಳಹುನ್ನಾರಗಳನ್ನು ಕೂಡಲೇ ಅರಿಯಲೇ ಬೇಕಾದ ಜರೂರು ಇದೆ. ಇಲ್ಲವಾದರೆ ಭವ್ಯ ಭಾರತದ ದಿವ್ಯ ಪರಂಪರೆಯಲ್ಲಿ ಮಣ್ಣಲ್ಲಿ ಮಣ್ಣಾಗಿ ಹೋದವರು ಮತ್ತೆಂದೂ ಮರಳಿ ಬಾರದಂತಾಗುತ್ತದೆ. ಹಾಗೆ ಮರಳಿಸದಂತೆ ಮಾಡುವುದೇ ಸಾಂಸ್ಕೃತಿಕ ರಾಜಕಾರಣದ ಹುನ್ನಾರ. ಸಂಸ್ಕೃತಿ ಮತ್ತು ರಾಜಕಾರಣಗಳೆರಡೂ ವ್ಯಕ್ತಿಗಳನ್ನು ಒಳಗೊಂಡ ಸಮಾಜವು ತನಗಾಗಿ ರೂಪಿಸಿಕೊಂಡವುಗಳು. ಎರಡೂ ಕೂಡ ಆರೋಗ್ಯಪೂರ್ಣ ಸಮಾಜ ನಿರ್ಮಾಣದ ಉದ್ದೇಶದಿಂದಲೇ ಹುಟ್ಟಿಕೊಂಡಂತವು. ಆದರೆ, ಒಂದು ತಾಯಿಯಂತೆಯೂ ಮತ್ತೊಂದು ಮಲತಾಯಿಯಂತೆಯೂ ಕಾಣಿಸಲು ತೊಡಗುವುದರ ಹಿಂದೆ (ತಾಯಿ–ಮಲತಾಯಿ ಪದಗಳು ಕೂಡ ಸಾಂಸ್ಕೃತಿಕ ರಾಜಕಾರಣ ರೂಪಿಸಿದ ಪರಿಕರಗಳೇ ಆಗಿವೆ) ಇರುವ ಸಂಗತಿಗಳು ಚರ್ಚೆಯ ಭಾಗ ಆಗಲೇಬೇಕು. ಕರ್ನಾಟಕದಲ್ಲಿ ಅದೀಗ ಚಾಲ್ತಿಯಲ್ಲಿದೆ. ಅದನ್ನು ಆರಂಭಿಸಿದವರು ಯಾರು ಎಂದು ಹುಡುಕುವ ಬದಲು ಅಂತಹ ಪರಂಪರೆ ಮುಂದುವರೆಸುವ ಹಾಗೂ ಅದನ್ನು ಜೀವಂತವಾಗಿ ಇಡುವ ಪ್ರಯತ್ನಗಳು ನಡೆಯುತ್ತಿರುವುದು ಆಶಾದಾಯಕ ಅಂಶ.

ಕನಕದಾಸರು ರಚಿಸಿದ 'ರಾಮಧ್ಯಾನ ಚರಿತ್ರೆ'ಯ ಕತೆ ನಡೆಯುವುದು ಆದರ್ಶ ಎಂದೇ ಪರಿಗಣಿತವಾಗುವ ರಾಮರಾಜ್ಯದ ಕಾಲದಲ್ಲಿ. ಆಗಿನ ಸಮಾಜ ವ್ಯವಸ್ಥೆಯು ಹುಟ್ಟುಹಾಕಿದ ತರತಮಭಾವದ ಸಂಕೇತಗಳಾಗಿ ಎರಡು ಧಾನ್ಯಗಳು ಪರಸ್ಪರ ಮುಖಾಮುಖಿಯಾಗುತ್ತವೆ.

ಉಳ್ಳವರು ಮತ್ತು ಇಲ್ಲದವರ ನಡುವಿನ ಮೇಲಾಟ ಹಾಗೂ ಅವು ಪ್ರತಿನಿಧಿಸುವ ಮೇಲು-ಕೀಳುಗಳ ನಡುವಿನ ಭಿನ್ನಾಭಿಪ್ರಾಯದ ನಿರ್ಣಯ ನೀಡುವ ವ್ಯಕ್ತಿ ಕೂಡಾ ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರ. ಹೀಗೆ ನೀಡುವ ನಿರ್ಣಯ ಕೂಡ ದೇವರಿಗೆ ಪ್ರಿಯ ಎಂದು ಭಾವಿಸಲಾಗುವ ಪರಮಾನ್ನದ ಪರವಾದುದಲ್ಲ. ಬದಲಿಗೆ ಕಡಿಮೆ ಅಥವಾ ದುರ್ಬಲರ ಆಯ್ಕೆ ಎಂದು ಪರಿಗಣಿತವಾಗುವ ತೃಣಧಾನ್ಯದ ಹಿರಿಮೆ ಸಾರುತ್ತಾನೆ. ಇದು ಕೇವಲ ಕತೆಯ ಮಾತಾಗಿ ಉಳಿಯದೇ ಸಂಸ್ಕೃತಿಯು ತಾನು ಆಯ್ಕೆ ಮಾಡಿಕೊಳ್ಳುವ ಮತ್ತು ಮಾಡಿಕೊಳ್ಳಬೇಕಾದ ಮೌಲ್ಯಗಳ ಪರವಾದ ರಾಜಕಾರಣವನ್ನು ಸೂಚಿಸುವ ಸಂಗತಿಯಾಗಿ ರೂಪುಗೊಳ್ಳುತ್ತದೆ. ಆದರ್ಶ ಮಾದರಿಗಳನ್ನು ರೂಪಿಸುವ ಹೊಣೆಗಾರಿಕೆ ಕೇವಲ ಕವಿಗೆ ಮಾತ್ರ ಸೀಮಿತವಾಗಿಲ್ಲ. ಅದು ಸಮಾಜದ ಹೊಣೆಗಾರಿಕೆ. ಅದು ರಾಜ್ಯದ ಸೊಗಸು ಮತ್ತು ಶ್ರೀಮಂತಿಕೆ ಕೂಡ. ಕನಕರು ಕತೆ ಕಟ್ಟಿದ ಕಾಲದಲ್ಲಿ ಇದ್ದ ಅಕ್ಕಿ ಮತ್ತು ರಾಗಿಗಳ ಸಾಮಾಜಿಕ-ಸಾಂಸ್ಕೃತಿಕ ಮಹತ್ವ ಬದಲಾದ ಸಮಕಾಲೀನ ಸಂದರ್ಭದಲ್ಲಿ ಭಿನ್ನವಾದ ನೆಲೆಯಲ್ಲಿಯೇ ಕಾಣಿಸುತ್ತದೆ. ಆದರೆ, ಕನಕ ಪ್ರತಿಪಾದಿಸಿದ ಮೌಲ್ಯ ಅಬಾಧಿತವಾಗಿ ಮುಂದುವರೆಯುತ್ತದೆ. ಪರಮಾನ್ನ ತಯಾರಿಸುವುದಕ್ಕೆ ಬಳಕೆ ಆಗುತ್ತಿದ್ದ ಅಕ್ಕಿಯೇ ಬಡವರ ಪರವಾಗಿ ನಿಲುವು ತಳೆಯುವುದಕ್ಕೆ ಸಾಧನವಾಗುತ್ತದೆ.

ಅನ್ನದಾತ ಸಾವಿನ ಮನೆ ಬಾಗಿಲು ತಟ್ಟುವ ಸ್ಥಿತಿ ರೂಪಿಸಿದ ಸಂಕೀರ್ಣ ಅರ್ಥವ್ಯವಸ್ಥೆ ಮತ್ತು ಅದು ಆಡಿಗೊಳ್ಳುವವರಿಗೆ ವಸ್ತುವಾಗುತ್ತಿರುವುದು ವಿಷಾದದ ಸೋಜಿಗ. ಹತ್ತಿ ಬಿತ್ತಿ ಬತ್ತಿ ಕಾಣೆ. ಬತ್ತ ಬಿತ್ತಿ ಬಾನ ಕಾಣೆ ಎಂದು ಕವಿಯೊಬ್ಬ ಹಾಡಿದ ಸಾಂಕೇತಿಕ ಮಾತುಗಳಿಗೆ ಜೀವ ಬಂದಂತಹ ಸ್ಥಿತಿ. ಬೆನ್ನುಲುಬನ್ನು ಮುರಿಯುತ್ತ ಹೋಗುವ ಮತ್ತು ಆ ಬಗ್ಗೆ ಪಾಪ ಪ್ರಜ್ಞೆಯೇ ಇಲ್ಲದೇ ಇರುವ ಅಮಾನವೀಯ ಸ್ಥಿತಿಗೆ ಮುಖಾಮುಖಿ ಆಗುತ್ತಿರುವ ದಿನಗಳ ಸಂದರ್ಭದ ಹಿನ್ನೆಲೆಯಲ್ಲಿ ಕನಕರ ರಾಮಧಾನ್ಯ ಚರಿತ್ರೆಯ ಕುರಿತಾಗಿ ವಿಭಿನ್ನವಾದ ಹಾಗೂ ಹೊಸ ಆಲೋಚನಾ ಕ್ರಮಗಳಿಂದ ಚಿಂತಿಸಿದ ಅಪರೂಪದ ಪ್ರಬಂಧವಿದು. ಅಭಿವೃದ್ಧಿ ರಾಜಕಾರಣದ ಬಿಂಬಿಸಿ – ನಂಬಿಸುವ ಹುನ್ನಾರಗಳನ್ನು ಚರ್ಚಿಸುತ್ತಲೇ ಬದಲಾದದ್ದು ಅಥವಾ ಬದಲಾದಂತೆ ಭ್ರಮೆಗೆ ಕಾರಣವಾಗಿರುವ ಮಟಿರೀಯಲ್ ಕಲ್ಚರ್ ಸಮಾಜದ ಮೂಲ ರಚನೆಗಳನ್ನು ಕದಲಿಸದೇ ಉಳಿಸಿರುವ ತರತಮಗಳ ಬಗ್ಗೆ ಸೊಗಸಾದ ವ್ಯಾಖ್ಯಾನ ಈ ಪ್ರಬಂಧದಲ್ಲಿದೆ. ಕಾವ್ಯವೊಂದಕ್ಕೆ ಅದು ರಚನೆಯಾದ ಐದು ನೂರು ವರ್ಷಗಳ ನಂತರ ಮುಖಾಮುಖಿಯಾಗಬೇಕಾದ ಸಂದರ್ಭ ರೂಪುಗೊಂಡ ವಿಷಾದದ ನೆಲೆಯಲ್ಲಿ ಆರಂಭವಾಗುವ 'ರಾಮಧ್ಯಾನ, ಮಾರುಕಟ್ಟೆ ಮತ್ತು ಆಹಾರ ರಾಜಕಾರಣದ ಹೊಸ ಸವಾಲು' ಪ್ರಬಂಧವು ವರ್ತಮಾನದ ಸಮಸ್ಯೆಗಳು ಹಾಗೂ ಅವುಗಳ ಸಂಕೀರ್ಣ ಸಂಗತಿಗಳನ್ನು ವಿದ್ವತ್ ಪೂರ್ಣವಾಗಿ ಚರ್ಚಿಸುತ್ತದೆ. ಮತ್ತು ಅದೇ ಕಾರಣಕ್ಕಾಗಿ ಪ್ರಿಯವಾಗುತ್ತದೆ. ರೂಪಕಗಳ ಮರೆಯಲ್ಲಿ ನಿಂತು ಮಾತನಾಡುವ ಅನಿವಾರ್ಯತೆಯನ್ನು

ಎದುರಿಸಬೇಕಾಗಿ ಬಂದದ್ದು ಕನಕದಾಸ ತನ್ನ ಸಾಮಾಜಿಕ ನ್ಯಾಯದ ಹೋರಾಟವನ್ನು ಒಂಟಿಯಾಗಿ ನಡೆಸಬೇಕಾದದ್ದರಿಂದ. 'ಪ್ರತಿಭಟನೆಯ ಸಾಹಿತ್ಯದಲ್ಲಿ ಸಂಘರ್ಷದ ಚಹರೆಯುಳ್ಳ ಕಾವ್ಯವಾಗಿ, ಕನಕನ ರಾಮಧಾನ್ಯ ಚರಿತೆಯೂ ಒಂದು. ಕನಕ ತನ್ನ ಪ್ರತಿರೋಧವನ್ನು ಮಂಡಿಸಿದ ನಾವಿನ್ಯತೆಯ ಕಾರಣಕ್ಕಾಗಿಯೇ, ಕನಕ ಮತ್ತು ಆತನ ರಾಮಧ್ಯಾನ ಚರಿತೆ ಎರಡೂ ಅನನ್ಯ' ಎಂದು ಪ್ರಬಂಧವು ವ್ಯಾಖ್ಯಾನಿಸುತ್ತದೆ. ಮುಂದುವರೆದು ಸೊಗಸು, ಲಯ ಆನಂದ ರಸಗಳನ್ನು ಪ್ರತಿಪಾದಿಸುವ ಕಾವ್ಯತತ್ವಗಳಿಗಿಂತ ಭಿನ್ನವಾದ ಸಾಮಾಜಿಕ ತತ್ವ ಇರುವ ಬೇರೆಯದೇ ಆದ ಕಾವ್ಯ-ಜೀವನ ಮೀಮಾಂಸೆ ಕಟ್ಟಿಕೊಡುತ್ತದೆ ಎಂದು ಪ್ರಬಂಧಕಾರರು ಸೂಚಿಸುವುದು ಮೆಚ್ಚುಗೆಗೆ ಪಾತ್ರವಾಗುವ ಅಂಶ. ಈ ಚರ್ಚೆಯನ್ನು ಕೇವಲ ಸಾಹಿತ್ಯ ಮತ್ತು ಸಂಸ್ಕೃತಿಗೆ ಮಾತ್ರ ಸೀಮಿತಗೊಳಿಸದೇ ಸಾಮಾಜಿಕ ಹಾಗೂ ಆರ್ಥಿಕ ಆಯಾಮಗಳನ್ನೂ ಒಳಗೊಂಡಿದೆ. ಇಲ್ಲದವರ ಅನಿವಾರ್ಯ ಆಯ್ಕೆ ಆಗಿದ್ದ ರಾಗಿಯು ಉಳ್ಳವರ ಆಹಾರವಾಗಿರುವ ಪರಿಯನ್ನು ಸೊಗಸಾಗಿ ವಿಶ್ಲೇಸಿದ್ದಾರೆ. ಅದು ನೇರವೂ-ವಾಸ್ತವವೂ, ಸಹಜವೂ ಆಗಿದೆ. ಕೃಷಿ ಮೇಲೆ ನಡೆಯುತ್ತಿರುವ ದಾಳಿಯ ವಿವಿಧ ಸ್ವರೂಪಗಳ ಚರ್ಚೆಯಲ್ಲಿ ಮುಂದುವರೆಯುವ ಜಿಜ್ಞಾಸೆ ಒಟ್ಟು ಬದುಕಿನ ಸ್ವರೂಪದ ಮೇಲೆ ಆಗುತ್ತಿರುವ ಬದಲಾವಣೆ-ರೂಪಾಂತರ ಹಾಗೂ ಅಭಿವೃದ್ಧಿಯ ಹೆಸರಿನಲ್ಲಿ ಮಾಧ್ಯಮಗಳನ್ನು ಬಳಸಿ ಮೌಢ್ಯ ಬಿತ್ತುವ ಹೊಸ ಕ್ರಮಗಳೂ ಈ ಪ್ರಬಂಧದ ವ್ಯಾಪ್ತಿಗೆ ಸೇರಿಸಿದ್ದರಿಂದ ಒಟ್ಟು ಚರ್ಚೆಗೆ ವ್ಯಾಪಕತೆ ಬಂದಿದೆ. ಹೆಚ್ಚು ಸಮಕಾಲೀನವೂ-ಸಮಯೋಚಿತವೂ ಆಗಿರುವ ಇಂತಹ ಚರ್ಚೆಗಳು ಕಾವ್ಯ ಅರ್ಥೈಸುವಿಕೆಗೆ ಮಾತ್ರವಲ್ಲದೆ ವರ್ತಮಾನದ ಬದುಕನ್ನು ಮತ್ತಷ್ಟು ಖಚಿತಪಡಿಸಿಕೊಳ್ಳುವುದಕ್ಕಾಗಿ ಅತ್ಯಗತ್ಯ. ನಮ್ಮ ಅರಿವಿನ ಮೇರೆಯನ್ನೂ ಮೀರಿ ನಡೆಯುತ್ತಿರುವ ಆರ್ಥಿಕ ರಾಜಕಾರಣವು ಇಡಿಯಾಗಿ ಬದುಕನ್ನು ಮಾತ್ರವಲ್ಲದೆ ರಾಜಕಾರಣವೂ ಸೇರಿದಂತೆ ವ್ಯವಸ್ಥೆಯನ್ನೇ ತನ್ನ ವ್ಯಾಪ್ತಿಗೆ ಸೇರಿಸುತ್ತಿರುವ ಹುನ್ನಾರಗಳನ್ನು ಅರಿಯುವ ನಿಟ್ಟಿನಲ್ಲಿ ಚಿಂತನೆಗೆ ಹಚ್ಚುತ್ತದೆ.

# ಭಾಗ – 3

# ಭಕ್ತಿಯೆಂಬ ಲೋಕದೃಷ್ಟಿಯಾಗಿ ಕನಕರ ಚಿಂತನೆಗಳು

"ಸಾಮಾಜಿಕ, ರಾಜಕೀಯ ಯಜಮಾನಿಕೆಯ ನಿರಸನ ಸಾಧನವಾಗಿ ಭಕ್ತಿ"

– ಡಾ. ಸುಬ್ರಹ್ಮಣ್ಯ ಸ್ವಾಮಿ

ಯಜಮಾನಿಕೆ ಎಂಬ ವಸ್ತುಸ್ಥಿತಿ ಇಂದಿನದಲ್ಲದಿದ್ದರೂ ಪುರಾತನ ಕಾಲದಿಂದಲೂ ಹತ್ತಾರು ಆಯಾಮಗಳಲ್ಲಿ ತನ್ನ ವಿರಾಟ್‌ದರ್ಶನವನ್ನು ಸಾಮಾಜಿಕವಾಗಿ, ರಾಜಕೀಯವಾಗಿ ನಡೆಯುತ್ತಲೆ ಬಂದಿರುವುದು ವಾಸ್ತವದ ಸಂಗತಿಯಾಗಿದೆ. ಮನೆಯಿಂದ ಅರಮನೆಯವರೆಗೆ, ಶ್ರೀಸಾಮಾನ್ಯನಿಂದ ಬಂಡವಾಳಶಾಹಿ ಅಥವಾ ರಾಜಕಾರಣಿಯವರೆಗೂ, ಅತ್ಯಂತ ವಿಸ್ತೃತವಾದ ವಿಭಿನ್ನ ತಳಹದಿಯ ನಂಬಿಕೆಯ ರಚನೆಗಳ ಮೇಲೆ ತನ್ನ ಅಸ್ತಿತ್ವವನ್ನು ಚಾಚಿದ್ದರೂ ಯಜಮಾನಿಕೆಯನ್ನು ದಕ್ಕಿಸಿಕೊಳ್ಳಲು ರಾಜಕೀಯ ಒಂದು ಪ್ರಮುಖ ಸಾಧನವಾಗಿದೆ. ಮನುಷ್ಯ ನಾಗರೀಕತೆಯ ಹೆಸರಿನಲ್ಲಿ ರೂಪಿಸಿಕೊಂಡ ವ್ಯವಸ್ಥಿತವಾದ ಸಂರಚನೆಗಳೆಲ್ಲಾ ಲಿಂಗತಾರತಮ್ಯದಿಂದ ಹಿಡಿದು ವರ್ಗ, ವರ್ಣ, ಆಹಾರ ಪದ್ಧತಿ, ಕಸುಬು ಮತ್ತು ಆಚಾರಗಳು ಒಳಗೊಂಡಂತೆ ತರತಮ ಭಾವಗಳ ಮಿತಿಯ ಒಳಗಡೆಯೇ ತನ್ನ ಚಹರೆಗಳನ್ನು ಚಾಚಿಕೊಂಡಿವೆ. ನಾವು ನಿರ್ವಚಿಸಿಕೊಳ್ಳುತ್ತಿರುವ ಸಮಾಜ ಎಂಬುದು ರಾಜಕೀಯ ಯಜಮಾನಿಕೆಯ ಬೆನ್ನೆಲುಬು ಎಂದರೆ ತಪ್ಪಾಗಲಾರದು ಎಂದು ಭಾವಿಸುತ್ತಲೆ ನಾವು ಇಂದು ಉಸಿರಾಡುತ್ತಿರುವ ಸಾಮಾಜಿಕವಾದ ಪರಿಸರವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಎಲ್ಲವೂ ಶ್ರೇಣೀಕೃತ ಸ್ತಂಭಗಳೇ ಆಗಿವೆ. ಈ ರೀತಿ ಇರುವಾಗ ಇಪ್ಪತ್ತೊಂದನೆಯ ಶತಮಾನದ ಆದಿ ಭಾಗದಲ್ಲಿರುವ ನಾವು ಎತ್ತಿಕೊಳ್ಳಬೇಕಾದ ಪ್ರಶ್ನೆ ಈ ಲೇಖನದ ಶೀರ್ಷಿಕೆಯಾಗಿದೆ.

ಯಜಮಾನಿಕೆ ಎಂಬ ರಾಕ್ಷಸನ ಆರ್ಭಟಕ್ಕೆ ಸಮಾಜ ತತ್ತರಿಸಿ ಹೋಗುತ್ತಿದೆ. ಬಿರುಗಾಳಿಗೆ ಸಿಕ್ಕ ತರಗೆಲೆಯಂತೆ ವಾಸ್ತವ ಎದುರುಗೊಂಡಿರುವ ಈ ಹೊತ್ತಿನಲ್ಲಿ ನಮಗೆ ಕನಕದಾಸರ ಮಾನವೀಯ ಸಮಾಜದ ಕಳಕಳಿಯ ವಿಚಾರಗಳು ಪ್ರಸ್ತುತವಾಗುತ್ತವೆ. ರಾಜಕೀಯ ಯಜಮಾನಿಕೆಯಿಂದ ಸಮಾಜದಲ್ಲಿ ಉಂಟಾಗಿರುವ ಸಮಸ್ಯೆಗಳಿಗೆ ಪರಿಹಾರವಾಗಿ ಭಕ್ತಿಯನ್ನು ಒಂದು ಸಾಧನವನ್ನಾಗಿ ಸ್ವೀಕರಿಸಿರುವುದು ಕಂಡರೂ ಕಾಲಾಂತರಗಳಲ್ಲಿ ಭಕ್ತಿಯೇ ಒಂದು ಸಾಮಾಜಿಕ ಸಮಸ್ಯೆಯಾಗಿ ಉಲ್ಬಣಿಸಿರುವುದನ್ನು ಕಾಣಬಹುದಾಗಿದೆ.

ಭಕ್ತಿಯೆಂಬುದು ಸೇವಕತನದ ಪ್ರತಿಬಿಂಬವಾಗಿ ಕಂಡರೆ, ದೇವರು ಯಜಮಾನಿಕೆಯ ಪ್ರತಿಬಿಂಬವಾಗಿ ರೂಪಾಂತರ ಪಡೆದಿರುವುದು ಸ್ಪಷ್ಟ. ಜಡ ಮತ್ತು ಚೇತನ ಎಂಬ ಸ್ವರೂಪಗಳು ಬುಡಮೇಲಾಗುವ ಒಂದು ಸ್ಥಿತಿಗೆ ತಲುಪಿರುವ ಸನ್ನಿವೇಶ. ಮಧ್ಯಮಕಾಲೀನ ಭಾರತದ ಚರಿತ್ರೆಯನ್ನು ಗಮನಿಸಿದರೆ ಪ್ರಭುತ್ವಗಳು ಧರ್ಮದ ಮತ್ತು ದೇವರ ಹೆಸರಿನಲ್ಲಿ ತನ್ನ ಇಚ್ಛಾಶಕ್ತಿಯನ್ನು ಪ್ರದರ್ಶಿಸುವ ಮೂಲಕವೇ ತಮ್ಮ ಸಾಮ್ರಾಜ್ಯಗಳ ಹಣೆಬರಹವನ್ನು ಬರೆದಿದ್ದಾರೆ.

ಕನಕದಾಸರು 16ನೇ ಶತಮಾನದಲ್ಲಿ, ಕರ್ನಾಟಕದಲ್ಲಿ ಸಾಮಾಜಿಕ, ರಾಜಕೀಯ ಯಜಮಾನಿಕೆಯಿಂದ ತಲೆದೋರಿದ್ದ, ಜನಸಾಮಾನ್ಯರ ಬದುಕಿನಲ್ಲಿ ಎದುರಾಗಿದ್ದ ಭಕ್ತಿಯ ತಳಮಳಗಳನ್ನು ಅತ್ಯಂತ ಗಂಭೀರವಾಗಿ ಚಿಂತನೆ ನಡೆಸುವ ಮೂಲಕವೇ ಒಂದು ಹೊಸ ಅಧ್ಯಾಯವನ್ನು ನಿರ್ಮಾಣ ಮಾಡಿದ್ದಾರೆ.

ಯಾವ ಸಮಾಜವನ್ನು ರಾಜಕೀಯವಾಗಿ, ಸಾಮಾಜಿಕವಾಗಿ ಭಕ್ತಿಯನ್ನೇ ಕೇಂದ್ರ ಮಾಡಿಕೊಂಡು ಭಯದಲ್ಲಿ, ಬಂಧನದಲ್ಲಿ ಕಟ್ಟಿಹಾಕಲಾಗಿತ್ತೋ ಅದೇ ಭಕ್ತಿಯ ಮೊರೆ ಹೋಗುವ ಮೂಲಕ ಕನಕದಾಸರು ತನ್ನ ದಂಡನಾಯಕತನದ ಪೊರೆಯನ್ನು ಕಳಚಿಕೊಂಡು ಭಕ್ತಿಯ ಲೇಪನವನ್ನು ತನ್ನ ಮುಂದಿನ ಬದುಕಿನ ಚಳುವಳಿಯ ಶಕ್ತಿಯಾಗಿ ಅಂತರ್ಮುಖಿ ಗೊಳಿಸಿಕೊಳ್ಳುತ್ತಾರೆ.

ಪ್ರಭುವಿನ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಜನರ ಬದುಕು ಅಸಹನೀಯವಾದ ಜೀವನ ನಡೆಸಬೇಕಾದ ಬಿಕ್ಕಟ್ಟಿನಲ್ಲಿ ಕಾಲಿಗೆ ಮುಳ್ಳು ತಗುಲಿದಾಗ ಹೇಗೆ ಪಾದವೂರಿ ನಡೆಯಲಾಗುವುದಿಲ್ಲವೊ ಹಾಗೆ ಹೆಳವನ ಮೇಲೆ ಕುರುಡ ಕುಳಿತಿದ್ದಾನೆ ದಾರಿಸಾಗುವುದೆಂತೊ ಎನ್ನುವ ಕವಿವಾಣಿಯ ಹಾಗೆ ಸಂದರ್ಭ ಎದುರಾಗಿದ್ದಾಗ, ಸಮಯೋಚಿತವಾಗಿ ಕನಕದಾಸರು ಮುಳ್ಳನ್ನು ಮುಳ್ಳಿನಿಂದಲೇ ಹೊರತೆಗೆಯುವ ಹಾಗೆ ಈ ಭಕ್ತಿಯನ್ನು ಸಾಮಾಜಿಕ, ರಾಜಕೀಯ ಯಜಮಾನಿಕೆಯ ನಿರ್ಮೂಲನೆ ಮಾಡುವ ಸಾಧನವಾಗಿ ಅಳವಡಿಸಿಕೊಳ್ಳುತ್ತಾರೆ.

ಯೋಧನ ಆವರಣವನ್ನು ಕಳಚಿಕೊಂಡು ದಾಸನ ಆವರಣಕ್ಕೆ ಪ್ರವೇಶ ಪಡೆದುಕೊಂಡು ಆ ಮೂಲಕವಾಗಿ 15 ಮತ್ತು 16ನೇ ಶತಮಾನದ ಚಾರಿತ್ರಿಕ ತಲ್ಲಣಗಳು ಪ್ರಭುತ್ವಗಳು ಅಳಿವಿನ ಅಂಚಿಗೆ ಸರಿಯುತ್ತಿದ್ದ ಹಾಗೂ ಧರ್ಮಗಳು

ಸವಾರಿ ಮಾಡುತ್ತಿದ್ದ ಸಂಕರದ ಕಾಲವಾಗಿ ಕಾಣುತ್ತದೆ. ಯುದ್ಧಗಳು ಈ ಕಾಲಘಟ್ಟದ ಜಗತ್ತಿನಲ್ಲಿ ಒಂದು ಹೊಸ ಭೀತಿಯನ್ನೇ ಹುಟ್ಟು ಹಾಕಿದ್ದವು. ಆದುದರಿಂದ ಕನಕ ಖಡ್ಗವನ್ನು ನಿರಾಕರಿಸಿ ಮಾನವೀಯ ಪ್ರೀತಿಯನ್ನು, ಪ್ರಭುತ್ವಕ್ಕಿಂತ ಮಿಗಿಲಾದ ರಾಜಕೀಯ ಶಕ್ತಿಯಾದ 'ಭಕ್ತಿ'ಯ ಕೇಂದ್ರಕ್ಕೆ ತನ್ನನ್ನೂ ಅರ್ಪಿಸಿಕೊಂಡು ಆ ಕಾಲದ ಕೃಷ್ಣ ಪಾರಮ್ಯವನ್ನು, "ದಾಸದಾಸರ ಮನೆಯ ದಾಸಿಯರ ಮಗ ನಾನು" ಎಂಬ ಕೀರ್ತನೆಯ ಸಾಲಿನ ಮೂಲಕವೇ ಮನುಕುಲಕ್ಕೆ ಸಾಂಕ್ರಾಮಿಕ ರೋಗವಾಗಿ ಪರಿಣಮಿಸಿದ್ದ ಜಾತಿ, ಧರ್ಮಗಳ ಕಟ್ಟಳೆಯ ಒಳಗೋಡೆಗಳನ್ನು, ಪಟ್ಟಭದ್ರರ ಸ್ವಹಿತಾಸಕ್ತಿಗಳನ್ನು ನಿರಸನಗೊಳಿಸುವ ತಂತ್ರಕ್ಕೆ ಚಾಲನೆಯನ್ನು ಕೊಡುತ್ತಾರೆ.

ಕನಕದಾಸರ ಬಯಲು ಮತ್ತು ಆಲಯದ ರೂಪಕಗಳು ಪ್ರಧಾನವಾಗಿ ಮುಖ್ಯವೆನಿಸುತ್ತವೆ. ಆಲಯದ ರಾಜಕಾರಣವನ್ನು ಬಯಲುಗೊಳಿಸುವುದು ಅಂದಿನ ಮುಖ್ಯ ಪ್ರಶ್ನೆಯಾಗಿ ಕಾಣುತ್ತದೆ. ದೈವದ ಹೆಸರಿನಲ್ಲಿ ತಲೆತಲಾಂತರಗಳಿಂದ ರಾಜನನ್ನು ಒಳಗೊಂಡಂತೆ ಆಲಯದ ಒಳಗೆ ಅರಮನೆ ಅಥವಾ ಅರಮನೆಯ ಒಳಗೊಂಡು ಆಲಯ ನಿರ್ಮಾಣ ಮಾಡುವ ಮೂಲಕವೇ ಪುರೋಹಿತಶಾಹಿಯು ತನ್ನ ಮೇಲರಿಮೆಯ ಪ್ರತಿಷ್ಠಾಪನೆಗೆ ಪ್ರಭುತ್ವದ ಜೊತೆ ಜೊತೆಗೆ ಮಾಡಿಕೊಂಡು ಬಂದಿರುವ ರಾಜಕಾರಣವನ್ನು ಕನ್ನಡದ ಸಂದರ್ಭದಲ್ಲಿ ಬಹುಶಃ ಮೊಟ್ಟ ಮೊದಲೇ ಗುರುತಿಸಿದವರು ಕನಕದಾಸ. ಅರಮನೆಯ ಆಲಯದಂತಿದ್ದ ರಾಜಗುರುಗಳು ಆಲದ ಮರದಂತೆ ಹಬ್ಬಿದ್ದ ರಾಜಕಾರಣವನ್ನು ಮತ್ತು ಅದು ಸಾಮಾಜಿಕವಾಗಿ ಎಂತಹ ಅನರ್ಥಕಾರಿಯಾದ ಬದುಕಿನ ಆಯಾಮಗಳನ್ನು ಶ್ರೀಸಾಮಾನ್ಯನ ಬದುಕಿನಲ್ಲಿ ಉಂಟುಮಾಡಿವೆ ಎಂಬುದನ್ನೂ "ಹರಿಯೇ ಇದು ಸರಿಯೆ" ಎಂದು ಕೇಳುವ ಮೂಲಕ ಪ್ರಶ್ನಿಸಿದ.

ಚಕ್ರವರ್ತಿಯ ಆಳ್ವಿಕೆಯ ಘೋರತನಕ್ಕಿಂತ, ದೈವಕೇಂದ್ರಿತವಾದ ಆಳ್ವಿಕೆಯ, ಧರ್ಮದ ತರತಮ ಭಾವಕೇಂದ್ರಿತ ನೆಲೆಗಳು ಮಾನಸಿಕವಾಗಿ ನಿರ್ಮಾಣ ಮಾಡಿದ್ದ ಕ್ರೌರ್ಯ ಅತ್ಯಂತ ಅಪಾಯಕಾರಿಯಾದದ್ದು. ಸಾಮಾಜಿಕವಾಗಿ ರಾಜಕೀಯವಾಗಿ ಈ ಕ್ರೌರ್ಯದಿಂದ ಬಿಡುಗಡೆಗೊಳಿಸಲು ಕನಕದಾಸರು 'ಜಾತಿ ಹೀನನ ಮನೆಯ ಜ್ಯೋತಿ ಹೀನವೆ', 'ಕುಲ ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರಾ' ಎನ್ನುವ ಮೂಲಕ ಆಲಯದ ರಾಜಕಾರಣದ ತಾತ್ವಿಕ ತಳಹದಿಯನ್ನು ಬಯಲುಗೊಳಿಸಿ ಮಾನವೀಯ ಸಮಾನ ಭೂಮಿಕೆಯ ಸಾಮಾಜಿಕ ಮನಸ್ಥಿತಿಯನ್ನು ರೂಪಿಸುವಲ್ಲಿ ಪ್ರಯತ್ನಪಟ್ಟರು.

"ಈ ಸಿರಿಯ ನಂಬಿ ಹಿಗ್ಗಲು ಬೇಡ ಮನವೆ ವಾಸುದೇವನ ಭಜಿಸೊ ಒರಟು ಜೀವನವೆ" ಎಂಬ ಕೀರ್ತನೆಯ ಸಾಲಿನಲ್ಲಿ ಅಧಿಕಾರ, ಸಂಪತ್ತು ಶಾಶ್ವತವಲ್ಲ "ಈ ದೇಹ ಶಾಶ್ವತವಲ್ಲ, ಪಂಚಭೂತಗಳಿಂದಾದ ದೇಹ ಎಲ್ಲರದೂ ಒಂದೇ.

ವಾಸುದೇವನ ಭಜಿಸೋ" ಎಂದರೆ ಪ್ರಾಣ ಅಥವಾ ಜೀವಪರವಾದ ಮಾನವೀಯ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಎಲ್ಲ ವಿಚಾರಗಳಿಗಿಂತ ಮುಖ್ಯವೆಂದು ಪ್ರತಿಪಾದಿಸಿದರು.

"ಸಾಸಿರನಾಮದ ಒಡೆಯಾದಿಕೇಶವನ
ಬೇಸರಿಸದೆ ಹೆಗಲ ಮೇಲಿರಿಸಿಕೊಂಡು (ಲಿ)
ಆಕಾಶ ಮಾರ್ಗದಲಿ ಚರಿಸುವ ಗರುಡನಿಗೆ
ನಾಸಿಕದ ಕೊನೆಡೊಂಕು ತಿದ್ದಲಿಲ್ಲ ಹರಿಯು"

ಕನಕದಾಸರನ್ನು ಕೇವಲ ಭಕ್ತನನ್ನಾಗಿ ಚಿತ್ರಿಸಿರುವುದೇ ಹೆಚ್ಚು ಆದರೆ ಈ ಮೇಲಿನ ಕೀರ್ತನೆಯ ಸಾಲುಗಳನ್ನು ಗಮನಿಸಿದರೆ ಸಮಾಜ ಮತ್ತು ಭಾಷೆ ಇವುಗಳ ನಡುವೆ ಇರುವ ಒಂದು ಪ್ರಮುಖ ರಾಜಕಾರಣವನ್ನು ಅಲ್ಲಗಳೆಯುತ್ತಾನೆ. ಒಂದೇ ಹೆಸರಿನಿಂದ ಗುರುತಿಸಲು ಕರೆಯಲು ಸಾಧ್ಯವಿದ್ದ ವಿಷ್ಣುವನ್ನು ಸಾವಿರ ಹೆಸರುಗಳಿಂದ ಕರೆಯುವ ಅಗತ್ಯವೇನಿತ್ತು ಮತ್ತು ಕೃಷ್ಣನ ವಾಹನವಾದ ಗರುಡನಿಗೇ ಅದರ ಕೊಕ್ಕಿನ ಡೊಂಕನ್ನು ನೇರ ಮಾಡಲಾಗದ ಈ ಗರಿಯು ಈ ಸಮಾಜದ ಮತ್ತು ಅವನನ್ನೇ ನಂಬಿಸುವ ತನ್ನ ಭಕ್ತರ ಕಷ್ಟ ಕಾರ್ಪಣ್ಯಗಳನ್ನು ಹೋಗಲಾಡಿಸಲು ಸಾಧ್ಯವೇ? ಎಂಬ ಭಕ್ತಿಯ ಕೇಂದ್ರದಲ್ಲಿ ಇದ್ದುಕೊಂಡೇ ಆ ಕೇಂದ್ರವನ್ನು ನಿರಸನಗೊಳಿಸುವ ಇಂತಹ ಅನೇಕ ಕೀರ್ತನೆಯ ಸಾಲುಗಳನ್ನು ಕನಕ ಕಟ್ಟುವ ಮೂಲಕ ಮನುಷ್ಯರಾದ ನಾವು ಬಿಡುಗಡೆಯಾಗಬೇಕಿರುವ ಸಂಕೋಲೆಗಳನ್ನು ಗುರುತಿಸುತ್ತಾನೆ.

ಸಮಾಜದಲ್ಲಿ ದೇವರು, ದೇವಸ್ಥಾನ, ಪೂಜಾರಿ ಹಾಗೂ ಭಕ್ತರು ಎಂಬ ವಲಯಗಳು ನಿರ್ಮಾಣಗೊಂಡಿದ್ದು, ಅಂದಿನಿಂದ ಇಂದಿನವರೆಗೂ ಭಯಗ್ರಸ್ಥ ಸಮಾಜವನ್ನು ಮಾತ್ರವಲ್ಲದೆ ಜನರನ್ನು ಬೆಳಕಿನ ಕಡೆಗೆ, ಬಿಡಗೊಳಿಸದೆ ಬಂಧಿಸಿರುವ ಸನಾತನ ಮೌಢ್ಯದ ಕೇಂದ್ರಗಳು ಹಾಗೂ ಅದರ ಉಪವಲಯಗಳ ಮಿತಿಮೀರಿದ ಅಬ್ಬರದಿಂದ ಇಂದು ಮಾನವ ಸಮಾಜ ವಾಸ್ತವದ ಕನಸನ್ನು, ಹಗಲುಗನಸು ಕಾಣುವಂತ ಪರಿಸ್ಥಿತಿ ಆಧುನಿಕ ಸಂದರ್ಭದಲ್ಲೂ ಎದುರಾಗಿದೆ. ವಿಜ್ಞಾನ ತಂತ್ರಜ್ಞಾನಗಳು ಎಷ್ಟೇ ಮುಂದುವರಿದರೂ ಇವುಗಳ ಪ್ರಾಬಲ್ಯ ಹೆಚ್ಚಾಗುತ್ತಲೇ ಇರುವುದು ದುರಂತವಾಗಿದೆ.

ಶ್ರೀಸಾಮಾನ್ಯನ ಬದುಕಿನ ಬೆಳಕಿಗೆ ಗ್ರಹಣವಾಗಿದ್ದ ದೇವರು ಎಂಬ ಕೇಂದ್ರ ಪ್ರಜ್ಞೆಯ ರಾಜಕಾರಣವನ್ನು ಬಯಲುಗೊಳಿಸಲು ಚಳುವಳಿಯ ಮೂಲಕವಾಗಿ ಹೊರಟ ಕನಕದಾಸರನ್ನೇ ಅರ್ಧ ಶತಮಾನಕ್ಕೂ ಹೆಚ್ಚು ದಿನಗಳಿಂದ ಕನಕ ಪ್ರಜ್ಞೆಗೆ ಮಣ್ಣೆರೆಚುವ ಪ್ರಸಂಗ ನಡೆದುಹೋಗಿದೆ. ಅದೇನೆಂದರೆ ಕನಕರು ಪ್ರಧಾನವಾಗಿ ದೇವರ ಹೆಸರಿನಲ್ಲಿ ಕಟ್ಟಿಕೊಂಡಿದ್ದ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನದ ಕುತಂತ್ರವನ್ನು ಬಯಲಿಗೆಳೆಯಲು ಹೋರಾಟ ಮಾಡಿದಾಗ,

ಅದು ತೀವ್ರವಾದಾಗ ಶತಶತಮಾನಗಳಿಂದ ನಂಬಿಸಲ್ಪಟ್ಟಿದ್ದ ದೂರವಿಟ್ಟಿದ್ದ ಅಥವಾ ಬಚ್ಚಿಟ್ಟಿದ್ದ ಸ್ಥಿತಿಗೆ ತದ್ವಿರುದ್ಧವಾದ ಪ್ರತಿರೋಧ ಬಂದಿದ್ದರಿಂದ ಉಡುಪಿಯ ಕೃಷ್ಣ ದೇವಾಲಯ ಪ್ರವೇಶ ಪವಾಡವನ್ನು ಕಟ್ಟುಕತೆ ಕಟ್ಟಿ ಹೆಣೆದಿರುವುದು ಯಾವ ವಿಚಾರವಾದಿಯಾದರೂ ಸರಳವಾಗಿ ಅರ್ಥ ಮಾಡಿಕೊಳ್ಳುವ, ವಿಚಾರವಾಗಿದೆ. ತಾರತಮ್ಯದ ರಾಜಕಾರಣ ಇನ್ನೇನು ಬಯಲಾಗುತ್ತದಲ್ಲ! ಎಂಬ ಭಯ ಈ ಶೋಷಣೆಯ ವರ್ಗಕ್ಕೆ ಎದುರಾದಾಗ ಕೃಷ್ಣನೇ (ದೇವರೇ) ಕನಕನಿಗೆ ತಿರುಗಿ ದರ್ಶನಕೊಟ್ಟ ಎಂಬುವ ಪವಾಡದ ಸುಳ್ಳು ಸುದ್ದಿಯನ್ನು ಬಿತ್ತುವ ಮೂಲಕ ಶತಶತಮಾನಗಳಿಂದ ಮುಕ್ತಿಗಾಗಿ ಹಾತೊರೆಯುತ್ತಿದ್ದ ವೈಚಾರಿಕ ಬೆಳಕನ್ನು ಕೊಡಲು ಹೊರಟ ನಾಯಕನನ್ನೇ ದೈವತ್ವಕ್ಕೆ ತಿರುಗಿಸಿ ಇಂದಿಗೂ ತರತಮವನ್ನು ಉಳಿಸಿಕೊಂಡೇ ರಾಜ್ಯದ ಬಹುಪಾಲು ಯಾತ್ರಿಕರು ಹಾಗೂ ಕನಕನ ಜನಾಂಗ ಹೆಮ್ಮೆಯಿಂದ ಬಂದು ಕೈಮುಗಿದು ಅವರ ಹುಂಡಿಗೆ ದುಡ್ಡಿ ಸುರಿದು ಅವರನ್ನು ಪೋಷಿಸುವ ಕೈಗಳಾಗಿ ದುಡಿಯುತ್ತಿವೆ. ಕನಕನ ಕನಸು ಕನಸಾಗಿಯೇ ಉಳಿದಿದೆ. ಕುತಂತ್ರ ಅತಂತ್ರವಾಗಬೇಕಾದರೆ ಕನಕನು ಕೊಟ್ಟ ತಿಳುವಳಿಕೆ ನಮ್ಮ ಬದುಕಿನ ಆಚರಣೆಯಾಗಬೇಕು. 'ಜಲವೆ ಸಕಲ ಕುಲಕ್ಕೆ ತಾಯಲ್ಲವೆ, ಜಲದ ಕುಲವೇನೇನಾದರು ಬಲ್ಲಿರಾ' ಜಲದ ಬೊಬ್ಬುಳಿಯಂತೆ ಸ್ಥಿರವಲ್ಲವೀ ದೇಹ, ನೆಲೆಯನರಿತು ನೀ ನೆನೆಕಂಡ್ಯ ಮನುಜ'. ಪ್ರಕೃತಿಯಲ್ಲಿ ಅಡಗಿರುವ ಸಮಾನತೆಯ ಪ್ರಜ್ಞೆಯನ್ನು ವೇದ ಶಾಸ್ತ್ರಗಳಿಂದ ಕಲಿಯಬೇಕಿಲ್ಲ ನೇರವಾಗಿ ಎಲ್ಲರಿಗೂ ದಕ್ಕುವ ಜ್ಞಾನ ಇಲ್ಲಿ ಕಾಣಬಹುದು.

"ಇಷ್ಟು ದಿನ ಈ ವೈಕುಂಠ
ಎಷ್ಟು ದೂರವೊ ಎನ್ನುತ್ತಲಿದ್ದೆ
ದೃಷ್ಟಿಯಿಂದಲಿ ನಾನು ಕಂಡೆ"

ಎಂಬಂತೆ ನಾವು ನಮ್ಮ ದೃಷ್ಟಿಯನ್ನು ಬದಲಾಯಿಸಿಕೊಳ್ಳದಿದ್ದರೆ ನಮ್ಮ ಬಿಡುಗಡೆ ಸಾಧ್ಯವಿಲ್ಲ.

ಮೂಢನಂಬಿಕೆ ಮತ್ತು ಸೋಮಾರಿತನ ಈ ಸಮಾಜದ ಶತ್ರುಗಳಿದ್ದ ಹಾಗೆ. ದುಡಿಯುವ ಕೈಗಳಿಗೆ ದುಡಿಯದ ಸೋಮಾರಿ ವರ್ಗ ಸೃಷ್ಟಿಸಿರುವ ಈ ಸಂಕೋಲೆಗಳಿಂದ ಮುಕ್ತಿ ಸಿಗಬೇಕಾದರೆ, ದುಡಿಮೆಯೇ ದೇವರು ಎನ್ನುವ ಪದಕ್ಕೆ ಮಾನ್ಯತೆ ಸಿಗಬೇಕಾದರೆ ಕನಕನ ವಿಚಾರಗಳನ್ನೂ ಮನದಟ್ಟುಮಾಡಿಕೊಂಡು ಕ್ರಿಯೆಯಲ್ಲಿ ಅಳವಡಿಸಬೇಕು. ತಳಸಮುದಾಯಗಳು ವಂಚಿತವಾಗಿರುವ ಅನೇಕ ಆಯಾಮಗಳಿಂದ ಮುಕ್ತವಾಗಬೇಕಾದರೆ, ಸಾಮಾಜಿಕವಾಗಿ, ರಾಜಕೀಯವಾಗಿ ಇಂದು ನಮ್ಮನ್ನು ಆವರಿಸಿರುವ ಯಜಮಾನರು ಯಾರು, ಅವುಗಳ ಸ್ವರೂಪ ಎಂಥದ್ದು, ಎಲ್ಲಿ ನಾವು ದಾರಿ ತಪ್ಪುತ್ತಿದ್ದೇವೆ, ಬದಲಾವಣೆ ಎನ್ನುವಂಥದ್ದು ಕೇವಲ ಅಧಿಕಾರ ಕೇಂದ್ರದಿಂದ ಅಥವಾ ಆಳುವ ಕೇಂದ್ರದಿಂದ ಬಯಸುವಂತದ್ದಲ್ಲ.

ಆಳಿಸಿಕೊಳ್ಳುತ್ತಿರುವ ಜನಸಮುದಾಯದಲ್ಲಿ ಬರಬೇಕಾದ ತಲಸ್ಪರ್ಶಿಯಾದ ಜ್ಞಾನವಾಗಬೇಕು ಎನ್ನುತ್ತವೆ ಕನಕದಾಸರ ಚಿಂತನೆಗಳು.

ಭಕ್ತಿಯೆಂಬ ಲೋಕದೃಷ್ಟಿಯಲ್ಲಿ ಕನಕನ ಚಿಂತನೆಗಳು ಸಾರ್ವಕಾಲಿಕವಾದ ಸತ್ಯವನ್ನೇ ಸಮಾಜದ ಮುಂದಿಟ್ಟಿವೆ. ಮನುಷ್ಯರಾದ ನಾವು ಅವುಗಳನ್ನು ಭಜನೆಯ, ಆರಾಧನೆಯ ವರ್ತುಲದಿಂದ ಹಾಗೂ ಸಿದ್ಧವಾದ ಮತ್ತು ಪಳಗಿಸಲ್ಪಟ್ಟ ಆಯಾಮಗಳಿಂದ ಹೊರಗೆ ನಿಂತು ನೋಡಬೇಕಾದ ಅನಿವಾರ್ಯತೆ ಇಂದಿನ ತುರ್ತಾಗಿದೆ.

ಮನುಕುಲವನ್ನು ಆವರಿಸಿರುವ ಈ ಸಮಸ್ಯೆಯಿಂದ ಪರಿಹಾರ ಪಡೆಯುವ ಎಲ್ಲ ಚಿಂತನೆಗಳನ್ನು ಇಲ್ಲಿ ನೀಡಿರುವ ಕನಕ, 21ನೇ ಶತಮಾನದಲ್ಲಿ ಲೋಕವನ್ನು ಯಜಮಾನಿಕೆಯ ಅಸ್ತ್ರ ರಾಜಕಾರಣವನ್ನು ಬಲಿಷ್ಠಗೊಳಿಸಿದೆ. ಸಾಮಾಜಿಕವಾಗಿ ಲೋಕದ ಜನರು ಎಚ್ಚೆತ್ತುಕೊಳ್ಳದ ಹೊರತು ಉಳಿಗಾಲವಿಲ್ಲ. ಮನುಷ್ಯ ಮನುಷ್ಯನ ವಿರುದ್ಧವೇ ತನ್ನ ಮೇಲು ಕೀಳಿನ ಸಂಘರ್ಷ, ವ್ಯಕ್ತಿಯಿಂದ ಸಿಡಿದು ಅವನು ಸೃಷ್ಟಿಸಿಕೊಂಡಿರುವ ವಲಯಗಳನ್ನು ದಾಟಿ ಅಂತರ್ ರಾಷ್ಟ್ರೀಯ ಕೀಳುಮಟ್ಟಗಳನ್ನು ಸೃಷ್ಟಿ ಮಾಡಿ ರಾಜಕೀಯ ದಾಳಗಳನ್ನು ಉರುಳಿಸುತ್ತಿರುವ ಇಂದು ಪ್ರಜಾಪ್ರಭುತ್ವ ವ್ಯವಸ್ಥೆಗಳೂ ಫಲಕೊಡದ ಬಂಜರು ಸ್ಥಿತಿಗೆ ತಲುಪುತ್ತಿರುವ ಸನ್ನಿವೇಶದ ಸಂದರ್ಭದಲ್ಲಿ ಮನುಷ್ಯನನ್ನು ಕಾಪಾಡುವುದು ಮನುಷ್ಯ ಪ್ರೀತಿ ಮಾತ್ರ ಎಂಬುದನ್ನು ಪ್ರತಿಪಾದಿಸಿರುವ ತತ್ವಜ್ಞಾನಿ ಕನಕದಾಸರು ನಮ್ಮ ನಾಡಿನ ದೊಡ್ಡ ಪ್ರತಿಭೆ. ಭಕ್ತಿ ಮನುಕುಲವನ್ನು ಆವರಿಸಿರುವ ಬಂಧನಗಳಿಂದ ಬಿಡುಗಡೆಗೊಳಿಸುವ ಸಾಧನವಾಗಬೇಕೇ ಹೊರತು ಮತ್ತೆ ಮತ್ತೆ ಬಂಧನಕ್ಕೆ, ಮೌಢ್ಯಕ್ಕೆ ಸಿಲುಕಿರುವ ಸಾಧನವಾಗಬಾರದು.

*** ** ***

ಪ್ರತಿಕ್ರಿಯೆ :

**ಸಾಮಾಜಿಕ, ರಾಜಕೀಯ ಯಜಮಾನಿಕೆಯ ನಿರಸನ ಸಾಧನವಾಗಿ ಭಕ್ತಿ**

**– ಡಾ. ಬಸವರಾಜ ಸಾದರ.**

ಭಕ್ತಿಯನ್ನಷ್ಟೇ ಅಲ್ಲ,ಮಾನವನ ಬದುಕಿನ ಎಲ್ಲ ಆಯಾಮಗಳನ್ನೂ ರಾಜಕೀಯ ಆವರಿಸಿಕೊಂಡಿದೆ ಹಾಗೂ ಕಾಲ-ಕಾಲಾಂತರದಲ್ಲೂ ಅದೇ ನಿರ್ಬಂಧಿಸಿದೆ-ನಿಯಂತ್ರಿಸಿದೆ. ಎಷ್ಟರ ಮಟ್ಟಿಗೆ ಅಂದರೆ, ಈಗಲೂ ಇಂಥ ವಿಚಾರ ಸಂಕಿರಣಗಳು ನಡೆಯುವಲ್ಲಿ ಮತ್ತು ಇಂಥಲ್ಲಿ ಚರ್ಚಿತವಾಗುವ ವಸ್ತು-ವ್ಯಕ್ತಿ-ಸಿದ್ಧಾಂತಗಳ ಆಯ್ಕೆಯ ಹಿಂದೆ ಕೂಡಾ ಒಂದು ಬಗೆಯ ರಾಜಕೀಯ ಒತ್ತಡ-ಒತ್ತಾಯ ಖಂಡಿತವಾಗಿಯೂ ಇದ್ದೇ ಇರುತ್ತದೆ. ಜಾತಿ ವ್ಯವಸ್ಥೆಯ ಚೌಕಟ್ಟಿನಲ್ಲಿ ಬಂಧಿತವಾಗಿರುವ ನಮ್ಮ ಇಂದಿನ ಎಲ್ಲ ಕ್ರಿಯೆಗಳೂ ಹೆಚ್ಚೂಕಡಿಮೆ ರಾಜಕೀಯ ನಿರ್ದೇಶನದ ಮೇಲೆಯೇ ಸಾಗುತ್ತಿರುವುದು ಅಪ್ಪಟ ಸತ್ಯ. ತುಸು ಕಠೋರವೆನ್ನಿಸಿದರೂ ಈ ಸತ್ಯವನ್ನು ನಾವು ಒಪ್ಪಿಕೊಳ್ಳಲೇಬೇಕು. ಭಕ್ತಿ ಇದಕ್ಕೆ ಹೊರತಾಗಿಲ್ಲ.

ಇಂಥ ಸಂದರ್ಭದಲ್ಲಿ, ಕನಕದಾಸರ ಬದುಕು ಮತ್ತು ಅಭಿವ್ಯಕ್ತಿಯಲ್ಲಿ ಕಂಡುಬರುವ " ಸಾಮಾಜಿಕ, ರಾಜಕೀಯ ಯಜಮಾನಿಕೆಯ ನಿರಸನ ಸಾಧನವಾಗಿ ಭಕ್ತಿ "-ಯ ಬಗೆಗೆ ಡಾ. ಸುಬ್ರಹ್ಮಣ್ಯ ಸ್ವಾಮಿಯವರು ಮಂಡಿಸಿರುವ ಆಲೋಚನೆಗಳ ಹಿನ್ನೆಲೆಯಲ್ಲಿ ನನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಿರುವೆ. ನೇರವಾಗಿ ವಿಷಯಕ್ಕೆ ಪ್ರವೇಶಿಸುವ ಮೊದಲು, ಭಕ್ತಿಯ ಹುಟ್ಟಿನ ಬಗ್ಗೆ, ಅದು ಮುಂದೆ ಅಡ್ಡದಾರಿ ಹಿಡಿದ ಬಗ್ಗೆ ಹಾಗೂ ಅಡ್ಡದಾರಿ ಹಿಡಿಸಿದವರಾರು ಎಂಬುದರ ಬಗೆಗೆ ಒಂದಿಷ್ಟು ಆಲೋಚಿಸಿಕೊಂಡರೆ, ಆ ಪರಿಪ್ರೇಕ್ಷದಲ್ಲಿ ಕನಕದಾಸರು ಭಕ್ತಿಯನ್ನು ಹೇಗೆ ನಿರ್ವಚಿಸಿಕೊಂಡರು, ಆಚರಿಸಿದರು ಎಂಬುದರ ಬಗೆಗಿನ ವಾಸ್ತವಾಂಶಗಳು ಗೋಚರವಾಗಲು ಸಾಧ್ಯ.

ಚರ್ವಿತ-ಚರ್ವಣ ಮಾತೆನಿಸಿದರೂ ವಾಸ್ತವ ನೆಲೆಯಲ್ಲಿ ವಿಚಾರಿಸಿದಾಗ ಭಕ್ತಿಯ ಹುಟ್ಟು ಭಯದಲ್ಲೇ ಆಗಿರುವುದು ಸತ್ಯ. ಆದಿಮಾನವ ತನ್ನ ಸುತ್ತಲಿನ ಪರಿಸರ ಉಂಟುಮಾಡುವ ವಿಚಿತ್ರ ವಿದ್ಯಮಾನಗಳಿಗೆ (ಅವು ನಿಸರ್ಗದ ಸಹಜ ಕ್ರಿಯೆಗಳು) ಅಚ್ಚರಿಗೊಂಡು, ಹೆದರಿ,ಅಸಹಾಯಕನಾಗಿ ತೋರ್ಪಡಿಸಿದ ಭಯವೇ ಭಕ್ತಿಯ ಮೂಲವಾದದ್ದು ವಾಸ್ತವ. ಇಂಥ ವಿಪತ್ತುಗಳನ್ನು ಎದುರಿಸುವ ಅಥವಾ ಪರಿಹರಿಸಿಕೊಳ್ಳುವ ಶಕ್ತಿ-ಸಾಮರ್ಥ್ಯ ತನಗಿಲ್ಲವೆಂಬ ಅಸಹಾಯಕತೆ ಮತ್ತು ತನ್ನ ಬದುಕು ಯಾವುದೇ ಆತಂಕ-ತೊಂದರೆಗಳಿಲ್ಲದೆ ಸಾಗಲೆಂಬ ಅದಮ್ಯ ಆಕಾಂಕ್ಷೆ-ಇವೆರಡೂ ಕಾರಣವಾಗಿ ಆತನನ್ನು ಅಗೋಚರ ಶಕ್ತಿಗಳ ಕಡೆಗೆ ಕೈ ಮುಗಿಸಿದವು.

ಹೀಗೆ ಕೈ ಮುಗಿಯುವಾಗ ಆತ ಭಯಮೂಲವಾದ ಭಕ್ತಿಯನ್ನು ತೋರ್ಪಡಿಸಿದ. ವೈಜ್ಞಾನಿಕ ಹಾಗೂ ವೈಚಾರಿಕವಾಗಿ ಸಾಕಷ್ಟು ಮುಂದೆ ಸಾಗಿದ್ದೇವೆಂದು ಹೇಳಿಕೊಳ್ಳುವ ಇಂದಿನ ದಿನಗಳಲ್ಲೂ ಇಂಥ ಭಯ ಮತ್ತು ಭಕ್ತಿ ನಮ್ಮ ಮನಸ್ಸುಗಳಲ್ಲಿ ತುಂಬಿಕೊಂಡಿರುವುದು ಸುಳ್ಳಲ್ಲ. ಈಗಲೂ ಏನಾದರೂ ಅವಘಡಗಳು ನಡೆದರೆ, ಪ್ರಕೃತಿ ವಿಕೋಪಗಳು ಸಂಭವಿಸಿದರೆ, ನಮಗೆ ಯಾವುದಾದರೂ ತೊಂದರೆಗಳು ಬಂದೆರಗಿದರೆ, ಇಷ್ಟಾರ್ಥಸಿದ್ಧಿಗಳು ಪ್ರಾಪ್ತವಾಗಬೇಕೆಂದರೆ– ಭಯ ಮೂಲವಾದ ಭಕ್ತಿಯ ಮಾರ್ಗದಲ್ಲೇ ನಾವು ಅಸಂಖ್ಯ ದೇವರುಗಳಿಗೆ ಮೊರೆ ಹೋಗುವುದು. " ತಲ್ಲಣಿಸದಿರು ಕಂಡ್ಯ ತಾಳು ಮನವೆ, ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ" ಎಂಬ ಕನಕದಾಸರ ಅಭಯದ ಹಿಂದೆ ಅಡಗಿರುವುದು ಇದೇ ನಂಬುಗೆಯಲ್ಲವೆ? ಯಾರು ಏನೇ ಮಾಡಲಿ " ನಮಗೆ ನಮ್ಮ ಕೂಡಲ ಸಂಗಯ್ಯನುಳ್ಳನ್ನಕ್ಕ "–ಎಂದು ಬಸವಣ್ಣ ಹೇಳಿದ್ದು, ಅಸಂಖ್ಯ ದಾಸರು, ಶರಣರು ತಮ್ಮ ಆರಾಧ್ಯ ದೈವರುಗಳ ನೆರಳನ್ನು ಆಶ್ರಯಿಸಿದ್ದು ಇಂಥ ಭಯ ಮೂಲವಾದ ಭಕ್ತಿಯ ಮಾರ್ಗದಲ್ಲೇ ಅಲ್ಲವೆ? ಅಂದರೆ, ತಲ್ಲಣಗಳಿಗೆ ಅಥವಾ ಬಂದೊದಗುವ ವಿಪತ್ತುಗಳಿಗೆ ಭಯಮೂಲವಾದ ನಂಬಿಕೆಯೊಂದು ಪರಿಹಾರ ಮಾರ್ಗವಾಗಿ ಕಂಡದ್ದು ಅಪ್ಪಟ ಸತ್ಯ.

2

ಇಷ್ಟೇ ಅಲ್ಲ, ಮನುಷ್ಯ ಅತೀವ ಸಂತಸಗೊಂಡಾಗ ಅಥವಾ ಯಶಸ್ಸನ್ನು ಪಡೆದಾಗ ಆಗಲೂ ಧನ್ಯತೆಯಿಂದ ಕೃತಜ್ಞತೆ ಅರ್ಪಿಸುವುದೂ ಇಂಥ ದೈವಕ್ಕೇ ಎಂಬುದು ಗಮನಾರ್ಹ. ಹೀಗೆ, ಮಾನವನ ಬಹುಮುಖ್ಯ ಸಂವೇದನೆಗಳಲ್ಲೊಂದಾದ ಭಯವು ಭಕ್ತಿಯಾಗಿ ಪರಿವರ್ತಿತಗೊಂಡು ಮನುಷ್ಯನಿಂದ ಮಾಡಿಸುವ ಈ ಕ್ರಿಯೆಗಳು ಅತ್ಯಂತ ಸಹಜವಾದವುಗಳೆ. ಹಾಗಾಗಿ ವೈಯಕ್ತಿಕ ಹಂತದಲ್ಲಿ ಈ ಬಗೆಯ ಭಕ್ತಿ ಅಥವಾ ಭಯ ನಿಜವಾಗಿಯೂ ಸಮಸ್ಯೆ ಅಲ್ಲವೇ ಅಲ್ಲ.

ವಸ್ತುಸ್ಥಿತಿ ಹೀಗಿರುವಾಗ ಭಕ್ತಿ ಸಮಸ್ಯೆಯಾದದ್ದು ಯಾವಾಗ? ಅದು ರಾಜಕೀಯಕರಣಗೊಂಡದ್ದು ಹೇಗೆ?–ಎಂಬ ಪ್ರಶ್ನೆಗಳು ನಮ್ಮೆದುರು ಸಹಜವಾಗಿಯೇ ನಿಲ್ಲುತ್ತವೆ. ಈ ಪ್ರಶ್ನೆಗಳನ್ನು ಕೆದಕುತ್ತ ಹೋದ ಹಾಗೆಯೇ ಅದು ಪ್ರತಿಭಟನೆಯ ಸ್ವರೂಪವನ್ನು ಪಡೆದದ್ದು ಹೇಗೆ? ಎಂಬ ಜಿಜ್ಞಾಸೆ ಕೂಡ ಹುಟ್ಟುತ್ತದೆ. ಈ ಎಲ್ಲ ಪ್ರಶ್ನೆಗಳಿಗೂ ಉತ್ತರ ಸಿಗುವುದು ಕನಕದಾಸರು ಕೃಷ್ಣನ ದರ್ಶನ ಪಡೆಯಲು ನಡೆಸಿದ ಪ್ರಯತ್ನದಲ್ಲಿ. ಇದು ಕನಕದಾಸರೊಬ್ಬರ ಪ್ರಯತ್ನ ಮಾತ್ರವಲ್ಲ; ಶೋಷಿತ ವರ್ಗದ ಅದೆಷ್ಟೋ ಭಕ್ತರು ಇಂಥ ಪ್ರಯತ್ನ ಮಾಡಿರುವುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಕನಕದಾಸರ ಕೃಷ್ಣ ದರ್ಶನದ ಒಂದೇ ಒಂದು ಘಟನೆಯನ್ನು ಇಂಥ ಪರಿಪ್ರೇಕ್ಷದಲ್ಲಿ ಒಡೆದು ನೋಡಿದರೆ, ಭಕ್ತಿ ಹೇಗೆ

ಯಜಮಾನಿಕೆಯ ಸ್ವತ್ತಾಗಿ ಶೋಷಣೆಯ ಸಾಧನವಾಗಿತ್ತು ಮತ್ತು ಅದನ್ನೇ ಅವರು ಹೇಗೆ ವ್ಯವಸ್ಥೆಯ ನಿರಸನದ ಸಾಧನವಾಗಿ ಬಳಸಿಕೊಂಡರೆಂಬುದು ಅತ್ಯಂತ ಸ್ಪಷ್ಟವಾಗುತ್ತದೆ. ಈ ಘಟನೆಯ ಹಿಂದಿರುವ ಕೆಲವು ವಾಸ್ತವಾಂಶಗಳನ್ನು ಮೊದಲು ಗಮನಿಸೋಣ. ಅವುಗಳೆಂದರೆ–

1. ಕನಕದಾಸರು ತಮ್ಮ ಬದುಕಿನಲ್ಲಿ ನಡೆದ ಅನೇಕ ಸಮಸ್ಯೆಗಳಿಗೆ ತಲ್ಲಣಗೊಂಡಿದ್ದರು.

2. ಇಂಥ ತಲ್ಲಣಗಳಿಗೆ ಪರಿಹಾರ ಪಡೆಯಲು ಕೃಷ್ಣನೆಂಬ ದೇವರನ್ನು ಮೊರೆ ಹೋಗಿದ್ದರು.

3. ಅದಾಗಲೇ ಕೃಷ್ಣ ಕಲ್ಲಿನ ಮೂರ್ತಿಯಾಗಿ ಉಡುಪಿಯ ಮಠದ ಗುಡಿಯಲ್ಲಿ ಸ್ಥಾಪಿತನಾಗಿದ್ದ.

4. ಆ ಕಲ್ಲಿನ ಮೂರ್ತಿಯನ್ನು ದರ್ಶಿಸಲು ಗುಡಿಯೊಳಗೆ ಹೋಗುವ ಅವಕಾಶ ಕೆಳಜಾತಿಯವರಿಗಿರಲಿಲ್ಲ.

5. ಆ ಇಡೀ ಮಠ ಮತ್ತು ಕೃಷ್ಣದರ್ಶನದ ಹಕ್ಕುಸ್ವಾಮ್ಯ ಒಂದು ಜಾತಿಯ ಪುರೋಹಿತರ ಕೈಯ್ಯಲ್ಲಿತ್ತು.

6. ಕನಕದಾಸರು ಕೃಷ್ಣನ ದರ್ಶನಕ್ಕೆ ಪ್ರಯತ್ನಿಸಿದರು– ಕೆಳಜಾತಿಯವರಾದ ಅವರಿಗದು ಸಾಧ್ಯವಾಗಲಿಲ್ಲ.

7. ಅವರು ಆ ಪುರೋಹಿತರೊಂದಿಗೆ ಸಂಘರ್ಷಕ್ಕಿಳಿಯದೆ ತಮ್ಮದೇ ಆದ ರೀತಿಯಲ್ಲಿ ಅನನ್ಯವಾದ ಭಕ್ತಿಯಿಂದ ಭಜಿಸಿದರು.

8. ಕನಕದಾಸರ ಭಕ್ತಿಯ ಪರಾಕಾಷ್ಠೆಗೆ ಮೆಚ್ಚಿದ ಕಲ್ಲಿನ ಕೃಷ್ಣನ ಮೂರ್ತಿ ತಾನೇ ಮುಖ ತಿರುಗಿಸಿ ಕಿಂಡಿಯ ಮೂಲಕ ಅವರಿಗೆ ದರ್ಶನ ನೀಡಿತು.

ಕಲ್ಲಿನ ಮೂರ್ತಿ ಹೀಗೆ ಮುಖ ಹೊರಳಿಸಲು ಸಾಧ್ಯವಿಲ್ಲ ಎಂಬ ವೈಜ್ಞಾನಿಕ ಸತ್ಯವನ್ನು ಸಧ್ಯಕ್ಕೆ ಬದಿಗಿಡೋಣ. ಬಹುಚರ್ಚಿತವಾದ ಈ ಪವಾಡದ ಘಟನೆಯ ಸತ್ಯಾಸತ್ಯತೆಯ ಮಾತೂ ಹಾಗೇ ಇರಲಿ. ನಾವೀಗ ಮುಖ್ಯವಾಗಿ ಗಮನ ಹರಿಸಬೇಕಾದದ್ದು ಭಕ್ತಿಯ ರಾಜಕಾರಣದ ಬಗೆಗೆ. ತಲ್ಲಣಗೊಂಡ ಜನರಿಗೆ ನೇರವಾದ ದೇವರ ದರ್ಶನ ಸಾಧ್ಯವಿದ್ದರೂ , ಅದನ್ನು ಸಾಧ್ಯಮಾಡಿಗೊಡದ ಪುರೋಹಿತಶಾಹಿ ವರ್ಗ, ಜಾತಿರಾಜಕಾರಣ ಮಾಡಿ ದೇವರ ಸರ್ವಸ್ವಾಮ್ಯವನ್ನು ತನ್ನಲ್ಲೇ ಇಟ್ಟುಕೊಂಡದ್ದು ಇಲ್ಲಿ ಮುಖ್ಯವಾಗಿ ಚರ್ಚಿತವಾಗಬೇಕಾಗಿರುವ ವಿಷಯ. ಮಠವೆಂಬ ರಾಜಕೀಯ ಶಕ್ತಿ, ಪುರೋಹಿತಶಾಹಿಯೆಂಬ ಜಾತಿಯ ಶಕ್ತಿ – ಇವೆರಡೂ ಒಂದುಗೂಡಿ ಅನ್ಯೋನ್ಯ ಸಂಬಂಧದಲ್ಲಿ ಒಂದು ಗಟ್ಟಿವ್ಯವಸ್ಥೆಯ ರೂಪ ಪಡೆದು, ಜನಸಾಮಾನ್ಯರನ್ನು ಶೋಷಿಸಿದ್ದು ಹೇಗೆಂಬುದಕ್ಕೆ ಈ ಘಟನೆ

ಒಂದು ಖಚಿತ ಉದಾಹರಣೆಯಾಗುತ್ತದೆ. ಈ ಅನ್ಯೋನ್ಯ ಸಂಬಂಧವನ್ನೇ ನಾವು ರಾಜಕೀಯ ಶಕ್ತಿ ಎಂದು ನಿರ್ವಚಿಸಬಹುದು. ಇಂಥ ರಾಜಕೀಯ ಶಕ್ತಿಯನ್ನು ರಾಜಕೀಯವಾಗಿಯೇ ಎದುರಿಸಲಾಗದ ಕನಕದಾಸರು, ಮತ್ತೊಂದು ಕಡೆ ತಮ್ಮ ಭಕ್ತಿಯನ್ನೂ ಬಿಟ್ಟುಕೊಡಲಾಗದೆ, ಆ ಭಕ್ತಿಯನ್ನೇ ಇನ್ನಷ್ಟು ಘನೀಕರಿಸುತ್ತ ಸಾಗಿದ್ದು ವ್ಯವಸ್ಥೆಯ ವಿರುದ್ಧ ತೋರ್ಪಡಿಸುವ ಸಾತ್ವಿಕ ಸಿಟ್ಟಾಗಿ ಕಾಣುತ್ತದೆ. ಇಂಥ ಸಾತ್ವಿಕ ಸಿಟ್ಟಿನಿಂದ ಕೂಡಿದ ಭಕ್ತಿಗೆ ದೇವರು ಮುಖ ತಿರುಗಿಸಿದ್ದು ಜಾತಿರಾಜಕಾರಣಕ್ಕೆ ಕೊಟ್ಟ ಸರಿಯಾದ ಚಾಟಿ ಏಟಲ್ಲದೆ ಇನ್ನೇನು? ಕನಕದಾಸರ ಈ ಬಗೆಯ ಸಾತ್ವಿಕ ಸಿಟ್ಟು ಬರೀ ಕ್ರಿಯೆಯಲ್ಲಿ ತೋರ್ಪಟ್ಟದ್ದು ಮಾತ್ರವಲ್ಲ; " ಕುಲ ಕುಲ ಕುಲವೆಂದು ಹೊಡೆದಾಡದಿರಿ , ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರಾ, ಬಲ್ಲಿರಾ? "–ಎಂಬ ಗಟ್ಟಿ ಸವಾಲಾಗಿ ಕೂಡಾ ಕೀರ್ತನೆಯ ರೂಪ ಪಡೆದದ್ದು ಐತಿಹಾಸಿಕ ಸತ್ಯ. ಕನಕದಾಸರು ಇಲ್ಲಿ ಜಾತಿ ರಾಜಕಾರಣವನ್ನು ನೇರವಾಗಿ ಪ್ರಶ್ನಿಸಿದ್ದು ಒಂದು ಮುಖ್ಯ ಪ್ರತಿಭಟನೆಯ ದನಿಯಾಗಿ ಮಾರ್ದನಿಸುತ್ತದೆ.

ಈ ಬಗೆಯ ಸಾಮಾಜಿಕ ಮತ್ತು ರಾಜಕೀಯ ಶಕ್ತಿಗಳನ್ನು, ಭಕ್ತಿಯನುವಿಡಿದೇ ಪ್ರಶ್ನಿಸುತ್ತ ಬಂದ ಉದಾಹರಣೆಗಳು ನಮ್ಮ ಇತಿಹಾಸದುದ್ದಕ್ಕೂ ಸಾಕಷ್ಟಿವೆ. ಕನಕದಾಸರ ಬದುಕಿನಲ್ಲಿ ನಡೆದ ಈ ಘಟನೆ ಮಾತ್ರ ಹೆಚ್ಚು ಪ್ರಸಿದ್ಧವಾಗಿದೆ. ಆದರೆ ಇಂದಿಗೂ ಜಾತಿ ಮತ್ತು ಮಠೀಯ ರಾಜಕಾರಣವು ಢಾಳಾಗಿಯೇ ಮೆರೆಯುತ್ತಿರುವುದು ಸುಳ್ಳಲ್ಲ. ಕನಕದಾಸರಿಗಾಗಿ ಗುಡಿ ಕಟ್ಟಿರುವ ನಾವು ಅವರನ್ನು ಒಬ್ಬ ಪೂಜಾಮೂರ್ತಿಯನ್ನಾಗಿ ಮಾಡಿದ್ದೇವೆಯೇ ಹೊರತು, ಅವರ ಸಾತ್ವಿಕ ಸಿಟ್ಟಿನ ಪ್ರತಿಭಟನೆಯನ್ನು ಕ್ರಿಯೆಯಲ್ಲಿ ತಂದಿಲ್ಲ. ಇಂದೂ ಕೂಡ ಕೆಲವು ಮಠಗಳಲ್ಲಿ ಕೆಳಜಾತಿಯವರಿಗೆ ಪ್ರವೇಶವಿಲ್ಲ, ಸಹ ಪಂಕ್ತಿಭೋಜನಕ್ಕೆ ಅವಕಾಶವಿಲ್ಲ. ಭಕ್ತಿಯ ಕೇಂದ್ರಗಳೆಂದು ಹೇಳಿಕೊಳ್ಳುವ ಈ ಬಗೆಯ ಮಠ–ಮಾನ್ಯಗಳು 21ನೆಯ ಶತಮಾನದ ಇಂಥ ದಿನಗಳಲ್ಲೂ ಜಾತಿ ಮತ್ತು ಅಧಿಕಾರ ರಾಜಕಾರಣದ ಕೂಪಗಳಾಗಿರುವುದು ನಾಚಿಕೆ ತರುವ ವಿಷಯ.

ಡಾ.ಸುಬ್ರಹ್ಮಣ್ಯ ಸ್ವಾಮಿಯವರು ಕನಕದಾಸರ ಬದುಕಿನಲ್ಲಿ ನಡೆದ " ತಾರತಮ್ಯ ರಾಜಕಾರಣದ " ಈ ಘಟನೆಯ ಬಗೆಗೆ ತುಂಬ ವಾಸ್ತವವಾದ ವಿಚಾರಗಳನ್ನು ಮಂಡಿಸಿದ್ದಾರೆ. ತಮ್ಮ ಪ್ರಬಂಧದಲ್ಲಿ ಅವರು ಹೇಳಿರುವ– " ರಾಜಕೀಯ ಯಜಮಾನಿಕೆಯಿಂದ ಸಮಾಜದಲ್ಲಿ ಉಂಟಾಗಿರುವ ಸಮಸ್ಯೆಗಳಿಗೆ ಪರಿಹಾರವಾಗಿ ಭಕ್ತಿಯನ್ನು ಒಂದು ಸಾಧನವನ್ನಾಗಿ ಸ್ವೀಕರಿಸಿರುವುದು ಕಂಡರೂ ಕಾಲಾಂತರಗಳಲ್ಲಿ ಭಕ್ತಿಯೇ ಒಂದು ಸಾಮಾಜಿಕ ಸಮಸ್ಯೆಯಾಗಿ ಉಲ್ಬಣಿಸಿರುವುದನ್ನು ಕಾಣಬಹುದಾಗಿದೆ."–ಎಂಬ ಮಾತುಗಳು ವರ್ತಮಾನದ ವಸ್ತುಸ್ಥಿತಿಯನ್ನೂ ಯಥಾವತ್ತಾಗಿ ದಾಖಲಿಸುವಂತಿವೆ.

ಭಕ್ತಿ ಹೀಗೆ ಶೋಷಣೆಯ ಸಾಧನವಾದದ್ದು ಪುರೋಹಿತಶಾಹಿಯ ಕಾರಣದಿಂದ ಎಂಬುದು ಸ್ಪಷ್ಟ. ದೇವರು ಮತ್ತು ಭಕ್ತರ ನಡುವೆ ಏರ್ಪಡಬಹುದಾದ ನೇರ

ಸಂಬಂಧ-ಸಂಪರ್ಕವನ್ನು ತಪ್ಪಿಸಿ, ಈ ಸಂಬಂಧ ನೇರವಾಗಿ ಸಾಧಿತವಾಗದು, ಅದಕ್ಕೆ ಒಬ್ಬ ಮಧ್ಯವರ್ತಿ ಬೇಕು, ಆ ಮಧ್ಯವರ್ತಿ ತಾನು ಮಾತ್ರ- ಎಂದು ಸಾಧಿಸಿಕೊಂಡು, ಸ್ಥಾಪಿಸಿಕೊಂಡು ಶ್ರಮರಹಿತ ಫಲಭೋಜನ ಮಾಡತೊಡಗಿದ ಪುರೋಹಿತಶಾಹಿಯ ಚಾಣಾಕ್ಷ ತಂತ್ರ ಇತಿಹಾಸದುದ್ದಕ್ಕೂ ದಾಖಲಾಗುತ್ತ ಬಂದಿದೆ. ಅಚ್ಚರಿಯೆಂದರೆ ಅದರ ಈ ತಂತ್ರ ಜನಸಾಮಾನ್ಯರನ್ನು ಮೋಸಗೊಳಿಸಿದ ಹಾಗೆಯೇ, ಪ್ರಬಲವಾಗಿದ್ದ ರಾಜಕೀಯ ಶಕ್ತಿಯನ್ನೂ ಮೋಸಗೊಳಿಸಿದ್ದು. ರಾಜಸತ್ತೆಗೆ ಬಹುಪರಾಕ್ ಹೇಳುತ್ತ, ನೀನೇ ಇಂದ್ರ, ನೀನೇ ಚಂದ್ರ, ರಾಜಾ ಪ್ರತ್ಯಕ್ಷ ದೇವತಾ- ಎಂದು ಹೊಗಳಿ, ಇಡೀ ರಾಜಕೀಯ ವ್ಯವಸ್ಥೆಗೇ ಮಂಕುಬೂದಿಯನ್ನೆರಚಿತು ಪುರೋಹಿತಶಾಹಿ ವರ್ಗ. ಹೀಗೆ ಮಾಡುವ ಮೂಲಕ ರಾಜಕೀಯ ಶಕ್ತಿಯನ್ನೂ ಕೈವಶ ಮಾಡಿಕೊಂಡ ಅದು, ರಾಜಕೀಯ ಶಕ್ತಿಗಿರುವ ಸಾಮರ್ಥ್ಯದ ದುರುಪಯೋಗ ಮಾಡಿಕೊಂಡು ಒಟ್ಟಾರೆ ಸಮಾಜವನ್ನು ಶೋಷಿಸತೊಡಗಿತು. ಹೆಳವನ ಹೆಗಲ ಮೇಲೆ ಕುರುಡ ಕುಳಿತು ಮುಂದೆ ನಡೆಯಲಾರದ ಸ್ಥಿತಿಯಲ್ಲಿ ತೊಳಲಾಡುತ್ತಿದ್ದ ಸಾಮಾನ್ಯರ ಬದುಕನ್ನು ರಾಜಕೀಯ ಶಕ್ತಿ ಮತ್ತು ಪುರೋಹಿತಶಾಹಿ ಶಕ್ತಿ-ಎರಡೂ ಒಟ್ಟಾಗಿಯೇ ನಿಯಂತ್ರಿಸಿದ ಪರಿಯಿದು. ಇದನ್ನು ಕನಕದಾಸರು ತಮ್ಮ ಸಾತ್ವಿಕ ಕೋಪದ ಮೂಲಕ ಪ್ರಶ್ನಿಸಿದರು. ಐತಿಹಾಸಿಕವಾದ ಈ ಸತ್ಯವನ್ನು ಒಪ್ಪಬಹುದಾದರೂ, ಡಾ. ಸುಬ್ರಹ್ಮಣ್ಯ ಸ್ವಾಮಿಯವರು ಮೊಗಂ ಆಗಿ, ಅಥವಾ ಅಭಿಮಾನಪೂರ್ವಕವಾಗಿ ಹೇಳಿರುವ- " .... ಪುರೋಹಿತಶಾಹಿಯು ತನ್ನ ಮೇಲರಿಮೆಯ ಪ್ರತಿಷ್ಠಾಪನೆಗೆ ಪ್ರಭುತ್ವದ ಜೊತೆ ಜೊತೆಗೆ ಮಾಡಿಕೊಂಡು ಬಂದಿರುವ ರಾಜಕಾರಣವನ್ನು ಕನ್ನಡದ ಸಂದರ್ಭದಲ್ಲಿ ಬಹುಶ: ಮೊಟ್ಟ ಮೊದಲೇ ಗುರುತಿಸಿದವರು ಕನಕದಾಸ. "- ಎಂಬ ಮಾತನ್ನು ಮಾತ್ರ ಖಂಡಿತವಾಗಿ ಒಪ್ಪಲಾಗದು. ಏಕೆಂದರೆ, ಇಂಥ ಕೆಲಸವನ್ನು ಕರ್ನಾಟಕದ ಸಾಮಾಜಿಕ, ರಾಜಕೀಯ ಮತ್ತು ಸಾಹಿತ್ಯದ ಇತಿಹಾಸದಲ್ಲಿ ಮೊಟ್ಟ ಮೊದಲು ಮಾಡಿದವರು ವಚನಕಾರರೆಂಬುದು ಅತ್ಯಂತ ಖಚಿತವಾಗಿ ದಾಖಲಾಗಿದೆ. ಭಕ್ತ ಮತು ಭಕ್ತಿ-ಎಂಬ ಪ್ರಧಾನ ನೆಲೆಗಳ ಮೇಲೆಯೇ ಜಂಗಮ ( ಡೈನಾಮಿಕ್ ) ತತ್ವದ ಸಮಾಜ ನಿರ್ಮಾಣಕ್ಕೆ ಕ್ರಿಯಾತ್ಮಕವಾಗಿ ಹೋರಾಡಿದ ವಚನಕಾರರು, ಪುರೋಹಿತಶಾಹಿ ಮತ್ತು ರಾಜಪ್ರಭುತ್ವ-ಎರಡನ್ನೂ ಏಕಕಾಲದಲ್ಲಿ ಕೆಣಕಿದರು, ಪ್ರಶ್ನಿಸಿದರು. ಜಾತಿ ವ್ಯವಸ್ಥೆ, ಲಿಂಗ ಅಸಮಾನತೆ, ವರ್ಗಭೇದ ಮತ್ತು ರಾಜಕೀಯ ಶಕ್ತಿ-ಇವೆಲ್ಲವನ್ನೂ ವಿರೋಧಿದ್ದಷ್ಟೇ ಅಲ್ಲ, ಸರ್ವಸಮಾನತೆಯ ಸಮಾಜ ನಿರ್ಮಾಣಕ್ಕಾಗಿ ತಮ್ಮ ಜೀವಗಳನ್ನೇ ಪಣಕ್ಕಿಟ್ಟು ಹೋರಾಡಿದರು. ಅಚ್ಚರಿಯೆಂದರೆ ಅವರು ಇದನ್ನೆಲ್ಲ ಮಾಡಿದ್ದು " ಭಕ್ತಿ "ಯ ನೆಲೆಗಟ್ಟಿನ ಮೇಲೆ. ಹೀಗಾಗಿ ಸಾಮಾಜಿಕ, ರಾಜಕೀಯ ಯಜಮಾನಿಕೆಯ ನಿರಸನದ ಸಾಧನವಾಗಿ ಭಕ್ತಿಯನ್ನು ಪ್ರಯೋಗಿಸಿದ ಮೊದಲ ಶ್ರೇಯಸ್ಸು ಶರಣರಿಗೆ, ವಚನಕಾರರಿಗೆ ಸಲ್ಲುತ್ತದೆ. ಇದು ಅವರು ಮೊದಲು, ಇವರು ನಂತರ ಎಂದು

ತರ-ತಮ ಎಣಿಸುವ ಮಾತಲ್ಲ; ಐತಿಹಾಸಿಕ ಸತ್ಯವನ್ನು ದಾಖಲಿಸುವ ಉದ್ದೇಶದ್ದು. ಇಲ್ಲಿ ಇನ್ನೂ ಒಂದು ಮಾತನ್ನು ಗಮನಿಸಬೇಕು; ಅದೇನೆಂದರೆ, ವಚನಕಾರರ ಪ್ರತಿಭಟನೆಯ ಕಾಲದ ನಂತರವೂ ಜಾತಿರಾಜಕಾರಣದ ಸ್ಥಿತಿ ಸಂಪೂರ್ಣ ಬದಲಾಗಿರಲಿಲ್ಲ ಎಂಬುದು. ಅಂತೆಯೇ ಭಕ್ತಿಯೇ ಪ್ರಧಾನವಾಗಿದ್ದ ದಾಸ ಪರಂಪರೆಯೂ ಆ ಸ್ಥಿತಿಯನ್ನು ವಿರೋಧಿಸಿದ್ದು ಐತಿಹಾಸಿಕವಾಗಿ ತುಂಬ ಮಹತ್ವ ಪಡೆಯುತ್ತದೆ. ಈ ಸಾಲಿನಲ್ಲಿ ಕನಕದಾಸರ ಹೆಸರು ಮಹತ್ವದ್ದಾಗಿರುವುದು ಮಾತ್ರ ಸತ್ಯ.

ಕನಕದಾಸರ ಬದುಕನ್ನು ಒಟ್ಟಾಗಿ ಪರಿಭಾವಿಸಿದಾಗ ಅವರು ಉಂಡ ನೋವುಗಳ ಪಟ್ಟಿ ದೊಡ್ಡದಾಗಿರುವುದು ಕಂಡುಬರುತ್ತದೆ. ಹೀಗಾಗಿ ಅವರ ಇಡೀ ಬದುಕು ತಲ್ಲಣಗಳಿಂದಲೇ ತುಂಬಿದ್ದರೆ ಅಚ್ಚರಿಯಲ್ಲ. ಸೈನಿಕರಾಗಿದ್ದ ಅವರು ಯುದ್ಧದಲ್ಲಿ ಗಾಯಗೊಂಡು, ಅದರಿಂದ ಬೇಸರಗೊಂಡು ಅಲ್ಲಿಂದ ಹೊರಬಂದರು. ಅವರ ರಕ್ತಸಂಬಂಧಿಗಳ ಸರಣಿ ಸಾವುಗಳು ಅವರನ್ನು ದೊಡ್ಡ ನೋವು-ನಿರಾಶೆಗೆ ಒಳಗು ಮಾಡಿದ್ದೂ ನಿಜ. ಈ ಎಲ್ಲ ವಿದ್ಯಮಾನಗಳಿಂದ ಬದುಕಿನ ಬಗ್ಗೆ ಒಂದು ಬಗೆಯ ವಿರಕ್ತಿ ಮೂಡಿದ ಅವರು ಲೌಕಿಕದಿಂದ ಆಧ್ಯಾತ್ಮದತ್ತ ವಾಲಿದರು. ಆ ಬದುಕಿಗೆ ಬೇಕಾದ ಗುರುವನ್ನು ಅರಸಿಕೊಂಡರು. ಕೃಷ್ಣಭಕ್ತಿಯಲ್ಲಿ ಮುಳುಗಿದರು. ಇಷ್ಟೆಲ್ಲ ಬದಲಾವಣೆಗಳಾಗುತ್ತಿದ್ದಾಗಲೂ ಅವರಲ್ಲಿದ್ದ ಮಾನವೀಯ ಪ್ರೀತಿ ಮತ್ತು ಸಾಮಾಜಿಕ ಕಾಳಜಿಗಳು ಒಂದಿಷ್ಟೂ ಕಡಿಮೆಯಾಗಿರಲಿಲ್ಲ. " ದಾಸ ದಾಸರ ಮನೆಯ ದಾಸಿಯರ ಮಗ ನಾನು " ಎನ್ನುತ್ತ, ಕುಲ, ಜಾತಿ, ಸಾಮಾಜಿಕ ಅನಿಷ್ಟಗಳು, ತರ-ತಮಗಳು-ಇವನ್ನೆಲ್ಲ ಖಂಡಿಸಿ ರಚಿಸಿದ ಅವರ ಅಸಂಖ್ಯ ಕೀರ್ತನೆಗಳೇ ಇದಕ್ಕೆ ಸಾಕ್ಷಿ. ಭಕ್ತಿಪಾರಮ್ಯದಲ್ಲಿ ಮುಳುಗಿದ್ದುಕೊಂಡೇ ಸಮಾಜ ಸ್ವಾಸ್ಥ್ಯದ ಬಗೆಗೆ ಅವರು ತೋರಿದ ಈ ಬಗೆಯ ಕಾಳಜಿ ಅನನ್ಯವಾದುದು. ಈ ಹಂತದಲ್ಲೇ, ಪುರೋಹಿತರ ಮತ್ತು ಮಠಗಳ ಕೈಗಳಲ್ಲಿ ಸಿಕ್ಕಿಕೊಂಡಿದ್ದ ಭಕ್ತಿ, ಸಾಮಾಜಿಕ ಮತ್ತು ರಾಜಕೀಯ ಯಜಮಾನಿಕೆಯ ಗತ್ತನ್ನು ಪಡೆದು ಹೇಗೆ ಶೋಷಣೆಗೆ ದಾರಿ ಮಾಡಿಕೊಂಡಿತ್ತೆಂಬುದನ್ನು ಅರಿತ ಕನಕದಾಸರು ಅಂಥ ಯಜಮಾನಿಕೆಯ ನಿರಸನದ ಅಸ್ತ್ರವಾಗಿ ಭಕ್ತಿಯನ್ನೇ ಬಳಸಿಕೊಂಡರು. ಆದರೆ, ಅವರ ಭಕ್ತಿಯ ನಡೆ ಮಾತ್ರ ಸಾತ್ವಿಕ ಕೋಪದ್ದೆಂದು ಹೇಳಲೇಬೇಕು. ಈ ಬಗೆಯ ಪ್ರಗತಿಪರ ಆಶಯ ಹೊಂದಿದ ಕನಕದಾಸರ ಹೆಸರು ಇಡೀ ದಾಸಪರಂಪರೆಯಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುತ್ತದೆ.

ಕನಕದಾಸರ ಅಭಿವ್ಯಕ್ತಿಯಲ್ಲಿ "ಭಕ್ತಿ"-ಎಂಬುದು ಹಲವು ರೀತಿಯಲ್ಲಿ ಪ್ರಕಟವಾದದ್ದು ಸ್ಪಷ್ಟ. " ಈ ಸಿರಿಯ ನಂಬಿ ಹಿಗ್ಗಲು ಬೇಡ ಮನವೆ, ವಾಸುದೇವನ ಭಜಿಸೋ ಒರಟು ಜೀವನವೆ " ಎಂದು ಅದು ಒಮ್ಮೊಮ್ಮೆ ದೇವರ ಮೊರೆ ಹೋದರೆ, ಮತ್ತೊಮ್ಮೆ-" ಸಾಸಿರನಾಮದ ಒಡೆಯಾದಿಕೇಶವನ ಬೇಸರಿಸದೆ ಹೆಗಲ ಮೇಲಿರಿಸಿಕೊಂಡು,ಆಕಾಶ ಮಾರ್ಗದಲಿ ಚರಿಸುವ ಗರುಡನಿಗೆ ನಾಸಿಕದ

ಕೊನೆಡೊಂಕು ತಿದ್ದಲಿಲ್ಲ ಹರಿಯು "– ಹೀಗೆ ಅದೇ, ದೇವರ ಸಾಮರ್ಥ್ಯವನ್ನು ಪ್ರಶ್ನಿಸುತ್ತದೆ. ಇಂಥ ಕನಕದಾಸರು ಮತ್ತೊಂದು ಕೀರ್ತನೆಯಲ್ಲಿ " ಇಷ್ಟು ದಿನ ಈ ವೈಕುಂಠ ಎಷ್ಟು ದೂರವೋ ಎನುತಲಿದ್ದೆ, ದೃಷ್ಟಿಯಿಂದಲಿ ನಾನು ಕಂಡೆ " ಎಂದಿರುವುದನ್ನು ಗಮನಿಸಿದರೆ, ಅವರು ಭಕ್ತಿಯ ಮಾರ್ಗದಲ್ಲಿ ಕ್ರಮೇಣ ಏರುಗತಿಯನ್ನು ಸಾಧಿಸಿರುವುದು ಸ್ಪಷ್ಟವಾಗುತ್ತದೆ. ಈ ರೀತಿ ಭಕ್ತಿ ಮಾರ್ಗದಲ್ಲಿ ನಡೆಯುತ್ತ ಉನ್ನತಿ ಸಾಧಿಸಿದ ಕನಕದಾಸರರು, ಆ ಭಕ್ತಿಯೇ ಪಟ್ಟಭದ್ರರ ಕೈಯಲ್ಲಿ ಸಿಕ್ಕು ಸಾಮಾಜಿಕ ಮತ್ತು ರಾಜಕೀಯ ಯಜಮಾನಿಕೆಯ ಸ್ವತ್ತಾದಾಗ ಅದನ್ನು ವಿರೋಧಿಸುತ್ತಾರೆ. ಅಷ್ಟೇ ಅಲ್ಲ, ದೇವರಿಗೇ – ಹರಿಯೇ ಇದು ಸರಿಯೆ ಎಂದೂ ಸವಾಲನ್ನೂ ಹಾಕುತ್ತಾರೆ. ಇದೊಂದು ರೀತಿಯಲ್ಲಿ ಭಕ್ತಿಯೇ ಭಕ್ತಿಗೆ ಸವಾಲು ಹಾಕುವ ಕ್ರಮವೆನ್ನಬಹುದು. ಸಾಮಾಜಿಕ ಸ್ತರದಲ್ಲಿ ಮೌಲ್ಯವೊಂದು ಅಧಿಕಾರಸ್ಥರ ಕೈಯಲ್ಲಿ ಸಿಕ್ಕು ಆ ಸಮಾಜದ ಶೋಷಣೆಗೇ ಕಾರಣವಾದಾಗ ಕನಕದಾಸರು ಪ್ರತಿಸ್ಪಂದಿಸಿದ ರೀತಿ ಇದು. ಈ ಕಾರಣಕ್ಕಾಗಿಯೆ ಕನಕದಾಸರು ನಮಗೆ ಪ್ರಮುಖರಾಗುತ್ತಾರೆ.

ಹೀಗೆ ಭಕ್ತಿಪಂಥದಲ್ಲಿ ಕ್ರಮಿಸುತ್ತಲೇ ಅದನ್ನು ದುರುಪಯೋಗಪಡಿಸಿಕೊಂಡ ಮುಖಗಳನ್ನು ಬಯಲಿಗೆಳೆದ ಕನಕದಾಸರದು ನಿಜಕ್ಕೂ ಪ್ರಗತಿಪರ ನಡೆಯಾಗಿದೆ. ಇಲ್ಲಿ ಅವರು ದನಿ ಎತ್ತರಿಸಿರಲಿಕ್ಕಿಲ್ಲವಾದರೂ, " ನಿಮ್ಮ ದಾರಿ ಸರಿಯಿಲ್ಲ, ಅದಕ್ಕಾಗಿ ನನ್ನ ದಾರಿಯನ್ನು ಇನ್ನಷ್ಟು ಗಟ್ಟಿಗೊಳಿಸಿಕೊಂಡು ನಡೆಯುತ್ತೇನೆ " ಎನ್ನುವ ಕ್ರಮದಲ್ಲಿ ಸಾಗಿದ್ದು ನಿಜ. ಇದು ಕೂಡ ಪ್ರತಿಭಟನೆಯೇ. ಕನಕದಾಸರ ಕೀರ್ತನೆಗಳಲ್ಲಿ ಈ ಬಗೆಯ ಪ್ರತಿಭಟನೆ ಮತ್ತು ಪ್ರಶ್ನೆಗಳು ಮತ್ತೆ ಮತ್ತೆ ಒಡೆದು ಕಾಣುತ್ತವೆ. ಇಂಥ ಪ್ರತಿಭಟನೆ ಮತ್ತು ಪ್ರಶ್ನೆಗಳನ್ನವರು ಕೇವಲ ಸಮಾಜಕ್ಕೆ ಮಾತ್ರ ಒಡ್ಡುವುದಿಲ್ಲ, ತಾವು ನಂಬಿದ ದೇವರಿಗೂ ಹಾಕುತ್ತಾರೆ. ಇದು ನಿಜವಾದ ಪ್ರಗತಿ ಪ್ರಜ್ಞೆ ಮತ್ತು ಕ್ರಿಯೆ. ಇಂಥ ಹೊಣೆಯನ್ನು ಸಮರ್ಥವಾಗಿ ನಿಭಾಯಿಸಿದ ಕನಕದಾಸರು ಅಂದು ಪ್ರಸ್ತುತರಾದಂತೆ ಇಂದಿಗೂ ಮತ್ತು ಸರ್ವಕಾಲಕ್ಕೂ ಪ್ರಸ್ತುತರಾಗುತ್ತಾರೆ.

ಭಕ್ತಿಯ ಬಣ್ಣ ಹಚ್ಚಿಕೊಂಡ ಧಾರ್ಮಿಕ ವ್ಯವಸ್ಥೆ ಇವತ್ತು ರಾಜಕೀಯ ಶಕ್ತಿಯೊಂದಿಗೆ ಶಾಮೀಲಾಗಿ ಅರ್ಥಸ್ವಾಮ್ಯ ಮತ್ತು ಅಧಿಕಾರಸ್ವಾಮ್ಯದ ಹಿಡಿತಕ್ಕೆ ಹುನ್ನಾರ ನಡೆಸುತ್ತಿದೆ. ಜಾತಿ ಮತ್ತು ಪ್ರಭುತ್ವ ಆಧಾರಿತ ಈ ಎರಡೂ ಶಕ್ತಿಗಳು ಪರಸ್ಪರ ಕೊಡು–ಕೊಳ್ಳುವಿಕೆಯ ಮೂಲಕ ತಮ್ಮ ಅಸ್ತಿತ್ವವನ್ನು ಗಟ್ಟಿಗೊಳಿಸಿಕೊಳ್ಳುತ್ತಿವೆ. ಜಾತಿ ಭಾವನೆಯನ್ನು ಇನ್ನಷ್ಟು ಗಾಢವಾಗಿ ಗಟ್ಟಿಗೊಳಿಸುತ್ತಿರುವ ಮಠಗಳು, ಆಯಾ ಜಾತಿಗಳ ಆಧಾರದಲ್ಲೇ ರಾಜಕೀಯ ಶಕ್ತಿಗಳನ್ನು ಬೆಳೆಸುತ್ತಿವೆ. ಹಣ ಮತ್ತು ಅಧಿಕಾರ ಎರಡನ್ನೂ ಪೊಗದಸ್ತಾಗಿ ಅನುಭವಿಸಲು ಸಾಧ್ಯವಿರುವ ಕಾರಣಕ್ಕಾಗಿಯೇ ಪೀಠಗಳನ್ನು ಹಿಡಿಯಲು ಮತ್ತು ರಾಜಕೀಯ ಅಸ್ತಿತ್ವ ಪಡೆಯಲು ಇನ್ನಿಲ್ಲದ ಪೈಪೋಟಿ ನಡೆಯುತ್ತಿದೆ. ಮಠಗಳ ಅಧಿಪತಿಗಳಾಗಲು ಪೈಪೋಟಿ,

ಜಗಳ, ಹೊಡೆದಾಟ, ಕೋರ್ಟು–ಕಛೇರಿ ಎಲ್ಲ ನಡೆಯುತ್ತಿವೆ. ಭಕ್ತಿಯು ರಾಜಕಾರಣದ ರೂಪ ಪಡೆದು, ಶಕ್ತಿರಾಜಕಾರಣಕ್ಕೆ ಕೆಟ್ಟ ಪ್ರೇರಣೆ ನೀಡುತ್ತಿದೆ. ಇತಿಹಾಸದಲ್ಲಿ ಕೂಡ ಈ ಬಗೆಯ ಅಪವಿತ್ರ ಮೈತ್ರಿ ಸಮಾಜವನ್ನು ಹದಗೆಡಿಸುತ್ತಿದ್ದಾಗ ಶರಣರು–ದಾಸರು ಪ್ರತಿಭಟಿಸಿದ್ದಿದೆ–ಸಿಡಿದೆದ್ದದ್ದಿದೆ. ಈ ಪಂಕ್ತಿಯಲ್ಲಿ ಕನಕದಾಸರ ಹೆಸರು ಮುಂಚೂಣಿಯಲ್ಲಿ ನಿಲ್ಲುತ್ತದೆ. ಇಷ್ಟೆಲ್ಲ ಹಿನ್ನೆಲೆಯಲ್ಲಿ, ಭಕ್ತಿಪಂಥದಲ್ಲಿ ಕ್ರಮಿಸಿಯೂ ಈ ಬಗೆಯ ಸಾಮಾಜಮುಖಿ ಚಿಂತನೆ ಮಾಡಿದ ಕನಕದಾಸರ ನಡೆಯನ್ನು ಡಾ. ಸುಬ್ರಹ್ಮಣ್ಯ ಸ್ವಾಮಿಯವರು ಇಲ್ಲಿ ಸಮರ್ಥವಾಗಿ ವಿಶ್ಲೇಷಿಸಿದ್ದಾರೆ. ಇದೆಲ್ಲವನ್ನೂ ಸೋದಾಹರಣವಾಗಿ ಪ್ರಸ್ತುತಪಡಿಸುವ ಅವರು ತಮ್ಮ ವಿಶ್ಲೇಷಣೆಯ ಕೊನೆಗೆ ಹೇಳುವ – "ಭಕ್ತಿ ಮನುಕುಲವನ್ನು ಆವರಿಸಿರುವ ಬಂಧನಗಳಿಂದ ಬಿಡುಗಡೆಗೊಳಿಸುವ ಸಾಧನವಾಗಬೇಕೇ ಹೊರತು, ಮತ್ತೆ ಮತ್ತೆ ಬಂಧನಕ್ಕೆ, ಮೌಢ್ಯಕ್ಕೆ ಸಿಲುಕಿಸುವ ಸಾಧನವಾಗಬಾರದು"–ಎಂಬ ಮಾತನ್ನು ನಾನು ಒಪ್ಪುತ್ತೇನೆ ಮತ್ತು ಬೆಂಬಲಿಸುತ್ತೇನೆ.

### 2. ಸಾಮಾಜಿಕ – ರಾಜಕೀಯ ಯಜಮಾನಿಕೆ ನಿರಸನ ಸಾಧನವಾಗಿ ಭಕ್ತಿ
### – ಡಾ. ಹೆಚ್. ಎಲ್. ಪುಷ್ಪ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಡಾ. ಸುಬ್ರಹ್ಮಣ್ಯಸ್ವಾಮಿ ಸಾಕಷ್ಟು ವಿಷಯುಗಳನ್ನು ಚರ್ಚಿಸಿದ್ದಾರೆ. 15–16ನೇ ಶತಮಾನದ ಭಕ್ತಿಪಂಥದ ವಿಚಾರಧಾರೆಗಳು ಇಡೀ ಭಾರತನ್ನು ವ್ಯಾಪಿಸಿದ್ದ ಸಂದರ್ಭದಲ್ಲಿ ಕರ್ನಾಟಕದಲ್ಲಿ ತಲೆ ಎತ್ತಿದ ದಾಸಕೂಟ ಪಂಥದ ಬಹುದೊಡ್ಡ ಹೆಸರು ಕನಕದಾಸರದಾಗಿತ್ತು. ಹಂಪಿಯಲ್ಲಿ ಪುರಂದರದಾಸರು ವ್ಯಾಸತೀರ್ಥರ ಬಳಿ ಬಂದು ಹಾಗೆ ತೋರುತ್ತದೆ. ಮುಂದೆ ಕನಕದಾಸರು ಇವರ ಸಂಪರ್ಕಕ್ಕೆ ಬಂದ ನಂತರ ಇನ್ನಷ್ಟು ಸ್ಪಷ್ಟತೆಯನ್ನು ಈ ದೂಸಕೂಟ ಪಡೆಯುತ್ತದೆ.

ದಾಸಕೂಟಕ್ಕೆ ಸೇರುವವರಲ್ಲಿ ಕೆಲವು ಸಾಮಾನ್ಯ ನಿರೀಕ್ಷೆಗಳು ಇದ್ದವೆಂದು ತೋರುತ್ತದೆ. ಸಾಕಷ್ಟು ಸಂಗೀತದ ಬಗೆಗಿನ ತಿಳುವಳಿಕೆ, ಇತಹಾಸ–ಪುರಾಣಗಳ ಬಗ್ಗೆ ಜ್ಞಾನ, ದೇವ–ಭಕ್ತಿ ಈ ಕುರಿತಾಗಿ ಶ್ರದ್ಧೆ, ವೈರಾಗ್ಯ, ನಿತ್ಯತೃಪ್ತಿಯ ಜೊತೆಗೆ ತಕ್ಕಮಟ್ಟಿಗಿನ ದೇಹದ ದೃಢತೆ–ಇವೆಲ್ಲವನ್ನೂ ಅರ್ಹತೆಗಳೆಂದು ನಿರೀಕ್ಷೆ ಮಾಡಲಾಗಿತ್ತು. ಹೀಗಾಗಿಯೇ 12ನೇ ಶತಮಾನದಲ್ಲಿ ವಚನ ಚಳುವಳಿಗೆ ಎಲ್ಲಾ ವರ್ಗ–ವರ್ಣದವರು ಪ್ರವೇಶ ಮಾಡಿದಂತೆ ದಾಸಕೂಟಕ್ಕೆ ಜನಸಾಮಾನ್ಯರ ಪ್ರವೇಶವಾಗಲಿಲ್ಲ. ಸಾಲ ಮಾಡೆನು, ಸಾಲದು ಎನೆನು, ನಾಳೆಗಿಡೆನು–ಇಂತಹ ಮಾತುಗಳಿಗೆ ಬದ್ಧರಾಗಿದ್ದ ದಾಸರು 'ಹರಿಚಿತ್ತ ನಡೆಸಿದ ಕಡೆ ತಮ್ಮ ನಡೆ' ಎಂಬಂತೆ ಬದುಕಿದವರು.

ಸಾಮಾಜಿಕ ರಾಜಕೀಯ ಯಜಮಾನಿಕೆಯಿಂದ ದೂರ ನಿಂತವರಿಗೆ ಮಾತ್ರ ಈ ನಡೆ ಸಾಧ್ಯವಾಗುತ್ತಿತ್ತು. ಕನಕದಾಸ ತನ್ನ ಬದುಕಿನಲ್ಲಿ ಉತ್ತಮವಾದ ರಾಜಕೀಯ

ಸಾಮಾಜಿಕ ಬದುಕನ್ನು ಕಂಡುಂಡವನೂ, ಅದನ್ನು ತಾನೇ ತ್ಯಜಿಸಿ ಹೊರಬಂದವನೂ ಆಗಿದ್ದಾನೆ. ಹೀಗಾಗಿ ಬಂಧನ ಮತ್ತು ಬಿಡುಗಡೆಯ ಸಂಕಷ್ಟಗಳ ಅರಿವು ಅವನಿಗಿತ್ತು. ಕನಕದಾಸರು ಸರ್ವವನ್ನು ತ್ಯಾಗಮಾಡಿ ವಿಜಯನಗರಕ್ಕೆ ಬಂದರೂ ಯಾವೊಂದು ಮತದ ಪಡಿಯಚ್ಚಿಗೆ ಸಿಲುಕದೆ ಎಲ್ಲ ಮತ ವಿಚಾರಗಳನ್ನು ಅರಿತವನಾಗಿದ್ದನು. ಮಾಧ್ವಮತದ ತತ್ವ, ಸಂಪ್ರದಾಯಗಳು ಅವುಗಳ ಸರ್ವಾಪರಣ ಜೀವನ ನೀತಿ ಅವನಿಗೆ ಸಾಕಷ್ಟು ಪ್ರಭಾವ ಬೀರಿವೆ. ಕನಕದಾಸನ ಕೀರ್ತನೆಗಳಲ್ಲಿ ದಾಸಕೂಟದ ಸಾಮಾನ್ಯ ಅಭಿವ್ಯಕ್ತಿ ಕ್ರಮದಂತೆ ದೇವಸ್ತುತಿ, ನಾಮಸ್ಮರಣೆಯ ಹಾಡುಗಳು ಸಂಪ್ರದಾಯವೆಂಬಂತೆ ಇರುವುದಾದರೂ ಉಳಿದವರಿಗಿಂತ ಅವನು ಭಿನ್ನವಾಗುವುದು ತನ್ನ ಕಾಲದ ರಾಜಕೀಯ, ಸಾಮಾಜಿಕ, ಮತ್ತು ಧರ್ಮವನ್ನು ಕುರಿತಾದ ತನ್ನದೇ ಭಿನ್ನವಾದ ವಿಚಾರ ಮಂಡನೆಯಲ್ಲಿ. ಆದರೆ ಈ ಎಲ್ಲಾ ವಿಚಾರ ವ್ಯಕ್ತವಾಗುವುದು, ಭಕ್ತಿಯೆಂಬ ಕೇಂದ್ರದಲ್ಲೇ.

ಸನಾತನ ವ್ಯವಸ್ಥೆಯಿಂದ ಹೊರನಿಂತು ಮಾತನಾಡಿದಾಗ ಕೆಲವು ಬಾರಿ ಮಾನ್ಯತೆ ಸಿಗಬಹುದು, ಸಿಗದಿರಬಹುದು. ಆದರೆ ಭಕ್ತಿಯೆಂಬ ಜನ ಒಪ್ಪಿತವಾದ ವ್ಯವಸ್ಥೆಯ ಒಳಗಡೆ ನಿಂತು ದಾಸನಾಗಿ ಮಾತನಾಡಿದಾಗ ಅದಕ್ಕೆ ಸಿಗುವ ಮಾನ್ಯತೆಯೇ ಬೇರೆ ರೀತಿಯದು. ಕನಕದಾಸ ಹೀಗೆ ವ್ಯವಸ್ಥೆಯ ಒಳಗಡೆ ನಿಂತೇ ವ್ಯವಸ್ಥೆಯ ಕುಂದುಕೊರತೆಯನ್ನು ಬಯಲಿಗೆ ಎಳೆಯುತ್ತಾನೆ. ಡಾ.ಸುಬ್ರಹ್ಮಣಸ್ವಾಮಿ ಗುರುತಿಸುವಂತೆ 'ಭಯ–ಬಂಧನಗಳ ಕೇಂದ್ರವಾಗಿದ್ದ ಭಕ್ತಿಯ ಮೊರೆ ಹೋಗುವ ಮೂಲಕವೇ ಜನರ ಅಜ್ಞಾನದ ಪೊರೆಯನ್ನು ಕಳಚುವ, ತನ್ನನ್ನು ಮುಕ್ತನನ್ನಾಗಿಸಿಕೊಳ್ಳುವ' ಕಾರ್ಯ ನಿರ್ವಹಿಸುತ್ತಾನೆ. ಕುಲದ ಬಗ್ಗೆ 'ಆತ್ಮಯಾವ ಕುಲ, ಜೀವ ಯಾವ ಕುಲ, ತತ್ವೇಂದ್ರಿಯಗಳ ಕುಲ ಪೇಳಿರಯ್ಯ, ಆತ್ಮಾಂತರಾತ್ಮ ನೆಲೆಯಾದಿಕೇಶವ ಆತನೊಲಿದ ಮೇಲೆ ಯಾತರ ಕುಲವಯ್ಯ! ಎನ್ನುತ್ತಾನೆ.

ಅನಾದಿಕಾಲದಿಂದಲೂ 'ದೇವರು ಗುರು' ಈ ಕೇಂದ್ರಗಳು ಯಜಮಾನಿಕೆಯ ಪ್ರತಿಬಿಂಬವಾಗಿಯೇ ಉಳಿದುಬಂದಿವೆ. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ಮಾತು ದೈವಕ್ಕೂ, ಯಜಮಾನಿಕೆಗೂ ಒಪ್ಪುವಂತದ್ದು. ಹೊರೆಸಿಕೊಂಡು ನಡೆಯುವವರಿಗೆ ಒಂದು ಸಂಸ್ಕೃತಿಯಿದ್ದಂತೆ ಹೊರುವವನಿಗೂ ಒಂದು ಸಂಸ್ಕೃತಿಯನ್ನು ನಂಬಲರ್ಹವಾದ ರೀತಿಯಲ್ಲಿ ನಿರ್ದೇಶಿಸಿರುವುದರಿಂದ ಎದುರಿಸಿ ನಿಲ್ಲಲಾಗದ ಭಯಭಕ್ತಿ ಯಥಾಸ್ಥಿತಿಯನ್ನು ಮುಂದುವರೆಸುತ್ತಿರುತ್ತದೆ. ಹೀಗಾಗಿಯೇ ಈ ಸ್ಥಿತಿಯನ್ನು ಪ್ರಶ್ನಿಸಬೇಕಾದದ್ದು ಅಭಿವ್ಯಕ್ತಿ ಸ್ವಾತಂತ್ರವೇ ಆಗಿರುತ್ತದೆ. ಕನಕ ಭಕ್ತ ಅಥವಾ ದಾಸನಾಗುತ್ತಲೇ ದಾಸನಿಗೆ ಬೇಕಾದ ವೈಚಾರಿಕಾ ಬಿಡುಗಡೆಯನ್ನು ಕುರಿತಂತೆ ಯೋಚಿಸುತ್ತಾನೆ. 'ಬಯಲು ಮತ್ತು ಆಲಯ' ಈ ಹಿನ್ನೆಲೆಯಲ್ಲಿ ಕನಕ ಬಳಸುವ ಶಕ್ತನಾದ ರೂಪಕಗಳು. ಆಲಯವನ್ನೇ ಬಯಲಾಗಿಸುವ, ಬಯಲನ್ನು ಆಲಯವಾಗಿಸುವ ತತ್ವಶಾಸ್ತ್ರದ

ಮೂಲಭೂತವಾದ ಪ್ರಶ್ನೆಗಳನ್ನು ಒಡ್ಡುತ್ತಾ ಹೋಗುತ್ತಾನೆ. ಈ ತರ್ಕದ ಕೇಂದ್ರ ಭಕ್ತಿಯೇ ಆಗಿದ್ದು 'ಭಕ್ತಿ ಎನ್ನುವುದು ಇದ್ದುದ್ದನ್ನು ಇದ್ದ ಹಾಗೆ ಒಪ್ಪಿಕೊಳ್ಳುವುದಲ್ಲ. ಅದು ಪ್ರಶ್ನಿಸಬೇಕಾದ್ದು' ಎನ್ನುತ್ತಾನೆ.

ದೈವವನ್ನು ವಿನೀತನಾಗಿ ಕಂಡರಷ್ಟೇ ಸಾಲದು, ಪ್ರಶ್ನಿಸುವಂತೆಯೂ ಇರಬೇಕು ಎಂಬುದು ಕನಕನ ನಿಲುವು. ಭಕ್ತಿಯೆಂಬುದು ಸರ್ವಸಾಮಾನ್ಯರು ಒಪ್ಪಿಕೊಂಡ. ಲೋಕದೃಷ್ಟಿ ಎಂಬುದು ನಿಜವಾದರೂ ಅದನ್ನು ಕವಿ, ಸಂತ, ಸಮಾಜ ಚಿಕಿತ್ಸಕ ದೃಷ್ಟಿ ಉಳ್ಳವನಾಗಿದ್ದ ಕನಕ ಕಾಣುವ ರೀತಿಯೇ ಇಷ್ಟವಾದುದು. ಕೃತಿ ಯಾವಾಗಲೂ ಕೃತಿಕಾರನಿಗೆ ವ್ಯಾವಹಾರಿಕ ಭಾಷೆಗಿಂತ ಭಿನ್ನವಾದ ಸ್ವಾತಂತ್ರ್ಯವನ್ನು ಒದಗಿಸಿಕೊಡುತ್ತದೆ. ಅವನು ತನ್ನ ಕೃತಿಯಲ್ಲಿ ದೈವವನ್ನು ಎದುರಾಗುತ್ತಾನೆ. ರಾಜನನ್ನು ಎದುರಾಗುತ್ತಾನೆ. ಇದನ್ನೇ ಕವಿ ಸ್ವಾತಂತ್ರ್ಯ ಎನ್ನಲಾಗುತ್ತದೆ. ಸಖ್ಯಭಾವದಲ್ಲಿ ಕನಕ ಹರಿಯನ್ನು ಈ ಕೆಳಕಂಡಂತೆ ಕೇಳುತ್ತಾನೆ.

15–16ನೇ ಶತಮಾನದಲ್ಲಿ ಕನಕದಾಸನಿಗೆ ಸಮಾಜದಲ್ಲಿನ ಬಡವ–ಶ್ರೀಮಂತ, ಮೇಲ್ವರ್ಗ–ಕೆಳವರ್ಗ, ಯುದ್ಧ–ಜಾತಿ–ಈ ಮುಂತಾದವು ತಾನು ನಂಬಿದ ಬದುಕಿನಲ್ಲಿನ ಆಳವಾದ ಕಂದಕಗಳಂತೆ ತೋರಿದವು. ಶಾಂತಿಗಾಗಿ, ಮುಕ್ತಿಗಾಗಿ, ಮನುಕುಲದ ಒಳತಿಗಾಗಿ ತುಡಿಯುತ್ತಿದ್ದ ಅವನ ಮನಸ್ಸು ಈ ಎಲ್ಲಾ ತೊಡಕುಗಳನ್ನು ಮೀರಲು ಭಕ್ತಿಯೇ ಸಹಜ ಸಾಧಾರಣ ಮಾರ್ಗವಾಗಿ ತೋರಿತು. ವಿಜಯನಗರದ ಸಂಪರ್ಕದಲ್ಲಿದ್ದ ಅವನಿಗೆ 'ದಾಸಕೂಟ'ದ ಸಾಮಾನ್ಯ ಸಹಜವಾಗಿಯೇ ಒದಗಿತು. ಮನಸ್ಸಿನಲ್ಲಿ ಮಾಡಿದ್ದ ವೈರಾಗ್ಯ ಆರಿಸಿಕೊಂಡಿದ್ದು ಭಕ್ತಿಯೆಂಬ ಮಾರ್ಗವನ್ನೇ ಆಗಿತ್ತು. ಆದರೆ ಪೂರ್ವ ಜೀವನದ ಅರಿವನ್ನು ಉಳ್ಳ ಅವನಿಗೆ ಅಧಿಕಾರ, ಜಾತಿ ಮತ್ತು ವರ್ಗ ಪ್ರಜ್ಞೆಗಳು ಪಾದದಲ್ಲಿ ಕೀಳದೆ ಉಳಿದ ಮುಳ್ಳುಗಳಾಗಿದ್ದವು. ತನುಗೆ ಕಾಡಿದ ಈ ಎಲ್ಲಾ ವಿಷಮತೆಗಳನ್ನು ಕೀರ್ತನೆಗಳಲ್ಲಿ, ಕಾವ್ಯಗಳಲ್ಲಿ ಅಭಿವ್ಯಕ್ತಿಸುವ ಪ್ರಯತ್ನ ಮಾಡಿದನು.

ಹೀಗಾಗಿ ಕನಕದಾಸರ ಸಾಲಿಗೆ ಭಕ್ತಿಯೆನ್ನುವುದು ತನ್ನನ್ನು ತಾನು ಕಂಡುಕೊಳ್ಳುವ ಮಾರ್ಗ. ತನ್ನನ್ನು ತನ್ನ ಸಮಾಜವನ್ನು ಕಾಡಿದ ಮೌಢ್ಯಗಳಿಂದ ಬಿಡಿಸಿಕೊಳ್ಳುವ ಸಾಧನವಾಗಿಯೂ ತೋರುತ್ತದೆ. ಅಂದು ಕನಕಾದಿಗಳು ತೋರಾಣಿಕೆಯ ಭಕ್ತಿಯೆಂಬ ಭ್ರಮೆಯಿಂದ ಬಿಡಿಸಿಕೊಳ್ಳುವ ಹೋರಾಟವನ್ನು ಸಮಾಜದ ನಡುವೆ ನಿಂತು ಮಾಡಿದರು. ಇಂದು ಆಧುನಿಕವಾಗಿ, ವೈಜ್ಞಾನಿಕವಾಗಿ, ಜಾಗತಿಕವಾಗಿ ಬೆಳೆಯುತ್ತಿರುವ ಸಮಾಜ ದೈವ ಮತ್ತು ರಾಜಕಾರಣದ ಎದುರು ಅವನತಮುಖಿಯಾಗಿಯೇ ತಲೆ ತಗ್ಗಿಸಿ ನಿಂತಿದೆ. ಈ ಪಾಡುಗಳಿಂದ ಹೊರಬರಲು ಭಕ್ತಿ ಇಂದು ಮಾರ್ಗವಾಗಿ ಉಳಿದಿಲ್ಲ. ಮೂಢನಂಬಿಕೆಗಳು, ಜೋತಿಷ್ಯಶಾಸ್ತ್ರಗಳು ಮಾಧ್ಯಮವನ್ನು ಒಳಗೊಂಡಂತೆ ಬೀದಿಯ ಮಧ್ಯೆ ಬಂದು ನಿಂತಿದೆ. ಹೀಗೆ ಹೆಳವನ ಹೆಗಲ ಮೇಲೆ ಕುರುಡು ಕುಳಿತಿದ್ದಾನೆ. ದಾರಿ ಸಾಗುವುದೆಂತೋ ನೋಡಬೇಕು.

## 3. ನೀರ ಸಂಗವ ಬಿಟ್ಟು ಆಣಿಮುತ್ತಾದ ಕ್ರಿಯೆ

– ಡಾ. ಶ್ರೀಧರ ಪಿಸ್ಸೆ

ಸಮುದ್ರದ ಕಪ್ಪೆಚಿಪ್ಪಿನಲ್ಲಿರುವ ಮುತ್ತು ಅಗಾಧ ನೀರಿನ ನಡುವಿದ್ದರೂ ಒಂದು ಹನಿನೀರು ಕೂಡ ಸೋಕದಂತೆ ತನ್ನದೇ ಪ್ರತ್ಯೇಕ ಸ್ವತಂತ್ರ ಜಗತ್ತಿನಲ್ಲಿ ಇರುತ್ತದೆ. ಹಾಗೆಯೇ ಕನಕದಾಸರು ವೈದಿಕ ಆವರಣದೊಳಗಿದ್ದರೂ ಅವರ ಚಿಂತನೆಗಳ ಹೂರಣ ವೈದಿಕ ಸ್ವರೂಪ ಪಡೆಯದೆ ಸ್ವತಂತ್ರ ಬೌದ್ಧಿಕ ಬಲ ಹೊಂದಿರುವ ತನ್ನದೇ ಕ್ರಮವನ್ನು "ನೀರ ಸಂಗವ ಬಿಟ್ಟು ಆಣಿಮುತ್ತಾದ ಕ್ರಿಯೆ" ಎಂಬ ಸಾಲು ಪ್ರಕಟಪಡಿಸಿದೆ.

ವೈದಿಕ ಪರಂಪರೆ ಮೊದಲಿಗೆ ಅಖಿಲ ಭಾರತ ವಲಯದಲ್ಲಿ, ನಂತರ ತಮಿಳು ಮತ್ತು ಕನ್ನಡ ಭಾಷಿಕ ವಲಯಗಳಲ್ಲಿ ಹೇಗೆ ಭಿನ್ನವಾಗಿ ಮರುಹುಟ್ಟು ಪಡೆದುಕೊಂಡಿತು ಎಂಬುದು ತಿಳಿದ ವಿಚಾರವೇ ಆಗಿದೆ. ಕನ್ನಡದ ವೈದಿಕ ದ್ವೈತ ನೆಲೆಯ ಆಂದೋಲನದಲ್ಲಿ ದಾಸಕೂಟದ ಆಧಾರ ಕಂಬಗಳಲ್ಲಿ ಕನಕನೂ ಒಬ್ಬನಾಗಿದ್ದನು. ಹೀಗಿದ್ದರೂ ಅದರಿಂದ ಹೊರತಾದ ಮತ್ತು ಪ್ರತ್ಯೇಕವಾದ ಚಿಂತನೆಗಳನ್ನು ಅವರಿಗೆ ಕಟ್ಟಿಕೊಳ್ಳಲು ಹೇಗೆ ಸಾಧ್ಯವಾಗಿದ್ದಿರಬಹುದು ಎಂಬುದು ಕುತೂಹಲ ಹುಟ್ಟಿಸುವ ಸಂಗತಿಯಾಗಿದೆ. ಕನಕ ಹುಟ್ಟಿದ ಮೂರು ನೂರು ವರುಷಗಳ ಹಿಂದೆಯೇ ನಡೆದ ಶಕ್ತಿವಿಶಿಷ್ಟಾದ್ವೈತ ಆಂದೋಲನ ದ್ವೈತದ ತಾರತಮ್ಯ ನೀತಿಯ ಭದ್ರಬುನಾದಿಯಾದ ಜಾತಿವ್ಯವಸ್ಥೆಯನ್ನು ಗೌಣವಾಗಿ ನಡೆಸಿಕೊಳ್ಳತೊಡಗಿದ್ದೇ ಅದರ ನಾಶಕ್ಕೆ ಕಾರಣವಾಗಿತ್ತು. ಅಂತಹ ಪ್ರಬಲ ಮತ್ತು ಪ್ರಧಾನ ವೈದಿಕ ನೆಲೆಯೊಳಗೆ ತನ್ನದೇ ಪ್ರತ್ಯೇಕ ಚಿಂತನೆಗಳ ಜಗತ್ತನ್ನು ಹೇಗೆ ಹುಟ್ಟಿಹಾಕಿಕೊಳ್ಳಲು ಸಾಧ್ಯ ಎಂಬ ಪ್ರಶ್ನೆ ಕಾಡುವಂತಹದ್ದಾಗಿದೆ. ಈ ಹಿನ್ನೆಲೆಯಲ್ಲಿ ಒಂದರ ಕೆಳಗೊಂದಿದ್ದು ತುಳಿತದ ಆಯಕಟ್ಟಿಗೆ ಸಿಲುಕಿರುವ ಪರಂಪರಾಗತ ಸಮಾಜದ ಬಹುಸಮುದಾಯಗಳ ವ್ಯವಸ್ಥೆಯನ್ನು ಒಂದರ ಪಕ್ಕ ಒಂದು ಕೂರುವ ದುಂಡು ಮೇಜಿನ ವ್ಯವಸ್ಥೆಯನ್ನಾಗಿ ಕಲ್ಪಿಸಿರುವ ಚಿಂತನೆಗಳು ಕನಕನ ಸಾಹಿತ್ಯದಲ್ಲಿ ಪ್ರಕಟವಾಗಿರಬಹುದೆ ಅಥವಾ ಕನಕ ತನ್ನ ತತ್ವಚಿಂತನೆಗಳನ್ನು ಕಟ್ಟಿಕೊಂಡ ರಚನಾ ಸ್ವರೂಪ ಯಾವ ಬಗೆಯದಿರಬಹುದು ಎಂಬುದು ಈ ಬರಹದ ಆರಂಭ ಬಿಂದುವಾಗಿದೆ.

ಕನಕರ ಬದುಕು ಮತ್ತು ಬರಹ ಒಂದಕ್ಕೊಂದು ಸಂಬಂಧ ಪಡದ ವಿಷಯವಾಗಿರುವಂತೆ ಕಾಣುವುದಿಲ್ಲ. ದಾಸತನದ ಹಿಂದಿನ ಜೀವನದಲ್ಲಿ "ಕನಕ ದಳದಲಿ ಬಂದು ಕಲೆತನೆಂದರೆ ಫೌಜು ಕನುಕುಮನುಕಾಗುವುದು.. ದುರದಲ್ಲಿ ನಾಲ್ಕು ದಿಕ್ಕಲಿ ಹೊಕ್ಕು ಹೊಳೆವಂಥ ಬಿರುದು ಬಿಂಕವ.. ಪರಬಲವ ಕಂಡರೆ ಉರಿದು ಬೆಂಕಿಯಹ ಮನವ"ನ್ನು ಹೊಂದಿದವನಾಗಿದ್ದನು. ಅವನು "ಸ್ವಾರಿ ಹೊರಡಲು ಛತ್ರ ಭೇರಿ ನಿಸ್ಸಾಳಗಳು ಭೋರೆಂಬ ಭೋಂಕಾಳೆ ಧೀರ ರಾಹುತರಾಣ್ಯ

ಭಾರಿ ಪರಿವಾರದಹಂಕಾರ ಭಾರ" ಹೊತ್ತಿದ್ದನು. ವಿಜಯನಗರ ಸಾಮ್ರಾಜ್ಯದ ಪುಟ್ಟ ಪಾಳೆಯಪಟ್ಟಿನಲ್ಲಿ "ಗರುವದೊಳಗಿಹ" "ದೊರೆತನ"ವನ್ನು ಮೆರೆದಿದ್ದೆನೆಂದು ಹೇಳಿಕೊಂಡಿದ್ದಾನೆ. ಅಂದರೆ ಕನಕ ಪ್ರವೃತ್ತಿಯಲ್ಲಿ ಯೋಧನೂ ವೃತ್ತಿಯಲ್ಲಿ ಆಳ್ವಿಕೆ ನಡೆಸುವವನೂ ಆಗಿದ್ದೆನೆಂಬ ಪ್ರಖರ ಪ್ರಜ್ಞೆ ಅವನಿಗೆ ದಾಸ ಜೀವನದಲ್ಲಿಯೂ ಇತ್ತೆಂಬುದನ್ನು ಈ ಸಾಲುಗಳು ಕಾಣಿಸುತ್ತವೆ. ಈ ಅಂಶ ಕನಕನ ವ್ಯಕ್ತಿತ್ವದಲ್ಲಿ ಮುಂಚೂಣಿ ಹೋರಾಟಗಾರ ಮತ್ತು ನುರಿತ ರಾಜತಾಂತ್ರಿಕನೊಬ್ಬ ದಾಸ ಅಥವಾ ದಾಸಪೂರ್ವ ಜೀವನದಲ್ಲಿ ಅಡಗಿದ್ದನೆಂಬ ಸಂಗತಿಯನ್ನು ಅರುಹುತ್ತದೆ.

ಗರುವದೊಳಗಿಹ ದೊರೆತನಕ್ಕಾಗಿ ಕನಕ ನಡೆಸಿದ ಕಾಳಗವೊಂದರಲ್ಲಿ ಮಾರಣಾಂತಿಕ ಹೊಡೆತ ಬಿದ್ದು ಅವನ ದೇಹ "ಖಂಡತುಂಡಾಗಿ ಪ್ರತಿರಣವನುತ್ತರಿಸಿ ಮರಣವ ತಾಳಿರೆ.. ಕುಂತದಿಂ ತೂಂತುಗೊಂಡೆನ್ನ ಬೆನ್ನಿಂದಿಳಿವ ಸಂತತ ನೆತ್ತರನೊರಸಿ ಬಿಸುಟೆ.. ಕ್ಷೀಣ ದೇಹವ ಬಿಡುವೆನೆಂದು ಪಾಡಂಬಟ್ಟು" ಬಳಲುತ್ತಿದ್ದನು. ಪರಬಲದ ಕೈಯಲ್ಲಿ ಪೆಟ್ಟು ತಿಂದು ನೆಲಕ್ಕೊರಗಿದಂಥ ಸಾವು ಬದುಕಿನ ಹೋರಾಟದ ಸಮಯದಲ್ಲಿ "ವೇದಾಶಾಸ್ತ್ರ ಮುಖದಿ ಬಾಧಿಸುವ ದುರಿತಾಗ್ನಿಗಂಬು" ಆದ "ಮಹಾಂಬೋಧಿ ಶಯನನೆ" ಬಂದು ತನ್ನ "ಹಣೆಯ ನೇವರಿಸಿ ಪಂಚಪ್ರಾಣ ಪ್ರತಿಷ್ಠೆಯನು ಮಾಡಿ" "ಮದರೂಪು ಬಿಡಿಸಿ ಸನ್ಮುದ ರೂಪು ಧರಿಸೆಂದು.. ಇದು ರಹಸ್ಯವು ಎಂದು ಹಿತವ ಬೋಧಿಸಿ ಎನಗೆ ಬದುಕಿಸಿದೆ ಬದುಕಿದೆನು" ಎಂದು ಹೇಳಿಕೊಂಡಿದ್ದಾನೆ. ಈ ಕ್ರಿಯೆಯನ್ನು "ದೊರೆತನವ ಬಿಡಿಸಿ ಸುಸ್ಥಿರ ಮಾರ್ಗ ತೋರಿಸಿದೆ" ಎಂದು ವಿವರಿಸಿಕೊಂಡಿರುವುದು. ಮತ್ತು ತನ್ನನ್ನು ತನ್ನ ಸಾವು ಬದುಕಿನ ಹೊತ್ತಿನಲ್ಲಿ ಕಾಪಾಡಿದ ವ್ಯಕ್ತಿರೂಪದ ಶಕ್ತಿಯನ್ನು "ಹೆಣಕೆ ಪ್ರಾಣವ ಪ್ರಯೋಗಿಸಿದಂತರಾತ್ಮ"ನಾದ "ಗುರುಮಂತ್ರ ಮೂಲ ಸದ್ಗುರುಮೂರ್ತಿ" ಎಂದು ಬಣ್ಣಿಸಿಕೊಂಡಿರುವುದು ವ್ಯಕ್ತಿಯೊಬ್ಬನ ಜೀವನದ ಮಹತ್ವದ ಘಟನೆಯಾಗಿರುವಂತೆಯೇ ಮಾನವ ಸಮುದಾಯವನ್ನು ಸರಿದಾರಿಗೆ ಹಚ್ಚುವ ಸಂಗತಿಯೂ ಆಗಿದೆ ಎಂಬ ಅಂಶ ಕನಕನಿಗೂ ತಿಳಿದಿದ್ದರಿಂದ ಆತ ಇದನ್ನು "ಓದಿ ಹೇಳಿದರೊಂದು ಕಥೆಯಾಗುತಿದೆ" ಎಂದು ಉದ್ಗರಿಸಿದ್ದಾನೆ.

ಕನಕನ ವ್ಯಕ್ತಿತ್ವ ದೊರೆತನದಿಂದ ಸುಸ್ಥಿರ ಮಾರ್ಗಕ್ಕೆ ಅಥವಾ ಮದ ರೂಪದಿಂದ ಸನ್ಮುದ ರೂಪಕ್ಕೆ ಬದಲಾದ ಈ ಪ್ರಸಂಗ ವ್ಯಕ್ತಿಯ ವೈಯಕ್ತಿಕ ಹಿತಾಸಕ್ತಿ ಸಾಮಾಜಿಕ ಹಿತಾಸಕ್ತಿಯಾಗಿ ಬದಲಾದ ಒಂದು ಮಹತ್ವದ ತಿರುವಿನ ಹಂತವನ್ನು ಮಂಡಿಸಿದೆ. ಕನಕನ ಸಾವು ಬದುಕಿನ ಸಂದರ್ಭದಲ್ಲಿ ಅವನಿಗೆ ವ್ಯಕ್ತಿ ಹಿತ ಮತ್ತು ಸಮುದಾಯ ಹಿತ ಕುರಿತು ಅರಿವು ಮೂಡಿಸಿದೆ. ವ್ಯಕ್ತಿ ಹಿತದಲ್ಲಿ ವ್ಯಕ್ತಿ ಮತ್ತು ಸಮುದಾಯದ ಅಳಿವು ಇದ್ದರೂ ಪ್ರತಿಯೊಬ್ಬರೂ ವ್ಯಕ್ತಿ ಹಿತದ ಹಾದಿಯಲ್ಲಿ ಸಾಗುತ್ತಿರುವುದು ಮತ್ತು ಇದಕ್ಕೆ ತಾನೇ ಅತ್ಯುತ್ತಮ ಉದಾಹರಣೆಯಾಗಿ ಕೊಳುಗುಳದಲ್ಲಿ ಸಾವಿನ ದವಡೆಗೆ ಸಿಕ್ಕಿಬಿದ್ದಿದ್ದು ಕನಕ ಒಪ್ಪಿಕೊಂಡಿದ್ದ ಜೀವನ ಮೌಲ್ಯಗಳ ಪುಸಿತನವನ್ನು ಮನದಟ್ಟು ಮಾಡಿರುವಂತಿದೆ. ಹಾಗೆಯೇ ತನ್ನ

ಜೀವ ಉಳಿಸಿ ಸಮುದಾಯ ಹಿತದ ಮಂತ್ರ ಬೋಧಿಸಿದ ಶ್ರೀವೈಷ್ಣವ ಗುರು ಅಂತರಾತ್ಮನಾಗಿ ಮಹಾತ್ಮನಾಗಿ ಮಹಾಂಬೋಧಿ ಶಂಭುನನಾಗಿ ಸದ್ಗುರುಮೂರ್ತಿಯಾಗಿ ಕಂಡಿದ್ದಾನೆ. ಇದು ಸಾವಿನ ಕದ ತಟ್ಟಿದ ವ್ಯಕ್ತಿಯ ಜೀವ ಪ್ರೀತಿಯ ಮನಸ್ಥಿತಿ ಎಂದು ಗುರುತಿಸಬಹುದಾದರೂ ಕನಕನ ಅತಿದಟ್ಟ ಜೀವನ ಪ್ರೀತಿಯ ದ್ಯೋತಕವೂ ಆಗಿದೆ. ಹಾಗಾಗಿಯೆ ಕನಕನಿಗೆ ಸಮುದಾಯ ಹಿತದಲ್ಲಿ ವ್ಯಕ್ತಿ ಮತ್ತು ಸಮುದಾಯದ ಉಳಿವು ಇದ್ದರೂ ಯಾರೊಬ್ಬರೂ ಸಮುದಾಯ ಹಿತದ ಹಾದಿಯಲ್ಲಿ ಮುನ್ನಡೆಯದಿರುವುದು ಎದ್ದು ಕಂಡಿದೆ ಮತ್ತು ಈ ಕೊರತೆಯನ್ನು ತುಂಬುವಲ್ಲಿ ತನ್ನನ್ನೇ ಪಣಕ್ಕಿಟ್ಟುಕೊಳ್ಳಲು ಸಮರ್ಪಿಸಿಕೊಂಡಂತಿದೆ. ಈ ಘಟನೆ ಅವನಲ್ಲಿ ಸುಪ್ತವಾಗಿದ್ದ ಜಾನಪದದ ಸಮುದಾಯ ಪ್ರಜ್ಞೆ ಮುನ್ನೆಲೆಗೆ ಬರುವಲ್ಲಿಯೂ ಸಹಾಯಕವಾಗಿದ್ದಿರಬಹುದು.

ಸಂಪೂರ್ಣ ಸಮರ್ಪಣಾಭಾವ ಪ್ರಕಟಪಡಿಸಿರುವ ಕನಕನ ಬಹುಪಾಲು ಹಾಡು (ತಾಂತ್ರಿಕವಾಗಿ ಕೀರ್ತನೆಯ ಚೌಕಟ್ಟನ್ನು ಸಮರ್ಪಕವಾಗಿ ಒಳಗೊಂಡಿದ್ದು ಅನುಭವ ದ್ರವ್ಯ ಮತ್ತು ಆಶಯಗಳ ಪ್ರಕಟಣೆಯಲ್ಲಿ ಕೀರ್ತನೆಯ ಚೌಕಟ್ಟು ಮೀರಿದ ಸಂಕೀರ್ಣ ಹಾಡು)ಗಳನ್ನು ಸೂಕ್ಷ್ಮವಾಗಿ ಪರಿಕಿಸಿದಾಗ ಅವು ಶ್ರೀವೈಷ್ಣವ ಭಕ್ತಿಯನ್ನು ಒಳಗೊಂಡಿರುವುದು ಕಾಣುತ್ತದೆ. (ದ್ವೈತ ಮತ್ತು ವಿಶಿಷ್ಟಾದ್ವೈತ ಮತಗಳ ಕೇಂದ್ರ ದೈವ ವಿಷ್ಣುವೇ ಆಗಿರುವುದರಿಂದ ವ್ಯತ್ಯಾಸ ಒಡೆದು ಕಾಣುವುದಿಲ್ಲ.) ಅಂದರೆ ಕನಕ ಶ್ರೀವೈಷ್ಣವ ಪಂಥದ ಗುರುವಿನ ಶಿಷ್ಯ/ಭಕ್ತನಾಗಿ ಕೆಲಕಾಲ ನಡೆದುಕೊಂಡಿದ್ದಿರಬಹುದು ಮತ್ತು ಆ ಅವಧಿಯಲ್ಲಿ ಇಂಥ ಸಂಪೂರ್ಣ ಸಮರ್ಪಣಾಭಾವದ ಹಾಡುಗಳನ್ನು ರಚಿಸಿದ್ದಿರಬಹುದು. ಸಮುದಾಯ ಹಿತಾಸಕ್ತಿಯನ್ನು ವಾಸ್ತವಗೊಳಿಸುವ ತೀವ್ರ ತುಡಿತವೂ ತನ್ನ ಜೀವವನ್ನೆ ಪಣಕ್ಕಿಟ್ಟು ಹೋರಾಡಬಲ್ಲ ಯೋಧನೂ ರಾಜತಾಂತ್ರಿಕತೆಯಲ್ಲಿ ನಿಪುಣನೂ ಆಗಿದ್ದ ಕನಕನಿಗೆ ಶ್ರೀವೈಷ್ಣವ ಮತದಲ್ಲಿ ಸಾಧನೆಯ ಹಾದಿಯಲ್ಲಿ ಸವಾಲುಗಳೇ ಇಲ್ಲದೆ ಜೀವನ ಸಪ್ಪೆಯಾಗಿದ್ದಿರಬಹುದು. ಇದು ಅವನ ಜೀವನವನ್ನು ಪೇಲವಗೊಳಿಸುವ ಮಾರ್ಗವೂ ಆಗಿದ್ದಿಬಹುದು ಎಂಬ ಭಯ ಅವನನ್ನು ಸುಪ್ತವಾಗಿ ಕಾಡಿದ್ದಿರಬಹುದು. ಅಲ್ಲದೆ ಅವನು ಜೀವಿಸಿದ್ದ ವಿಜಯನಗರದ ಹಂಪೆಯಲ್ಲಿ ದ್ವೈತ ಮತ ಕೇಂದ್ರಿತ ವೈಷ್ಣವ ಮತ ಪ್ರಧಾನ ಮತ್ತು ಪ್ರಬಲ ಧಾರೆಯಾಗಿತ್ತು. ವ್ಯಾಸರಾಯ ಕುಹೂಯೋಗದ ನೆಪದಲ್ಲಿ ಸಾಮ್ರಾಟ ಕೃಷ್ಣದೇವರಾಯನ ಸ್ಥಾನವನ್ನು ಆರು ತಿಂಗಳ ಕಾಲ ಆಕ್ರಮಿಸಿ ಇಡೀ ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಕನ್ನಡ ನಾಡಿನಲ್ಲಿ ದ್ವೈತ ಭಕ್ತಿಯ ಆಂದೋಲನ ಹುಟ್ಟುಹಾಕುವಲ್ಲಿ ಮುಂಚೂಣಿಯಲ್ಲಿದ್ದನು. ವ್ಯಾಸರಾಯ ಬದಲಾವಣೆಯ ಗಾಳಿ ಎಬ್ಬಿಸಬಲ್ಲ ಶಕ್ತಿಯಾಗಿದ್ದ ಆ ಸಂದರ್ಭದಲ್ಲಿ ಕನಕನ ವ್ಯಕ್ತಿತ್ವಕ್ಕೆ ವಿಶಿಷ್ಟಾದ್ವೈತ ಮತಕ್ಕಿಂತ ದ್ವೈತ ಮತದಲ್ಲಿ ವಿಪುಲ ಸವಾಲುಗಳೂ ಸಾಧನೆಯ ಅವಕಾಶಗಳೂ ಕಂಡಿದ್ದಿರಬಹುದು. ಹಾಗಾಗಿ ಕನಕ ವ್ಯಾಸರಾಯನು ಆತ ಕೆರೆ ಕಟ್ಟಿಸುತ್ತಿದ್ದ ಎಡೆಯಲ್ಲಿ ಒಂದು ಸಂಜೆ ಹೋಗಿ ಕಂಡಿದ್ದನೆಂದು

ಕಾಣುತ್ತದೆ. ದ್ವೈತ ಭಕ್ತಿಯ ಆಂದೋಲನದ ಮೂಲಕ ವೈದಿಕ ಪುನರುತ್ಥಾನದ ಕನಸಿನಲ್ಲಿ ತೇಲುತ್ತಿದ್ದ ವ್ಯಾಸರಾಯ ಅಪರಿಚಿತ ಕನಕನನ್ನು ಅವನ ಕೆಳಜಾತಿಯ ಬುದ್ಧಿಮಟ್ಟವನ್ನು ಕುರಿತು ತಳೆದಿದ್ದ ಪೂರ್ವಗ್ರಹಿಕೆಯಲ್ಲೆ "ಕೋಣ"ನೆಂದು ಮೂದಲಿಸಿ ಅಪಮಾನಿಸಿ ಅವಹೇಳನ ಮಾಡಿದ ಸಂಗತಿ ಸಾಂಸ್ಕೃತಿಕ ಮಹತ್ವ ಪಡೆದಿದೆ.

ಕನಕನಿಗಿದ್ದ ತೀವ್ರ ಉತ್ಕಟತೆ ಎದುರು ವ್ಯಾಸರಾಯ ಅವನನ್ನು ನಡೆಸಿಕೊಂಡ ಕ್ರಮ ತಡೆಯುಂಟು ಮಾಡುವ ಬದಲು ಅವನಲ್ಲಿ ಮತ್ತಷ್ಟು ತೀವ್ರತೆಯನ್ನು ಹೆಚ್ಚಿಸಿದ್ದಿರಬಹುದು. ಅದರ ಪರಿಣಾಮವಾಗಿ ಕನಕ ವ್ಯಾಸರಾಯನ ಆಲೋಚನಾ ಕ್ರಮ ಮತ್ತು ಮನಸ್ಥಿತಿಯ ಸ್ವರೂಪ, ದ್ವೈತಮತದ ತತ್ವಸಿದ್ಧಾಂತ ಮತ್ತು ಅದರ ಇತಿಮಿತಿಗಳ ಬಗ್ಗೆಯೂ ತಾನು ಪ್ರಧಾನಧಾರೆಯ ಭಾಗವಾಗಬೇಕಿದ್ದಲ್ಲಿ ಈ ಎಲ್ಲದರ ಕುರಿತು ಅನುಸರಿಸಬೇಕಿದ್ದ ಹಾದಿಯ ಬಗ್ಗೆಯೂ ಸ್ಪಷ್ಟ ನಿಲುವು ಮತ್ತು ಯೋಜನೆ ರೂಪಿಸಿ ಅದನ್ನು ಕಾರ್ಯರೂಪಕ್ಕೆ ತಂದಂತೆ "ಕನಕದಾಸರ ಮೇಲೆ ದಯ ಮಾಡಲು, ವ್ಯಾಸ ಮುನಿಮತದ ಜನರೆಲ್ಲ ದೂರಿ ಕೊಂಬರೊ" ರಚನೆಯ ವಿವರಗಳಲ್ಲಿ ಕಂಡುಬರುತ್ತದೆ. ಎದುರಾಳಿಗೆ ಆತ ಬಯಸಿದ್ದನ್ನು ನೀಡಿ ಅವನಿಂದ ತಾನು ಪಡೆಯ ಬಯಸಿದ್ದನ್ನು ಆತನೇ ನೀಡುವಂತೆ ಮಾಡಿದ ನಿಪುಣ ರಾಜತಾಂತ್ರಿಕ ನಡೆಯನ್ನು ಕನಕ ಅನುಸರಿಸಿದಂತೆ ಇದೆ. ವ್ಯಾಸರಾಯನ ಕಣ್ಣಲ್ಲಿದು ಕನಕನ ವ್ಯಕ್ತಿತ್ವದಲ್ಲಿ ಚಾರಿತ್ರ್ಯದಲ್ಲಿ ಅಡಕವಾಗಿದ್ದ ದ್ವೈತ ಸಿದ್ಧಾಂತ ಪ್ರಜ್ಞೆಯ ದ್ಯೋತಕ, ಭಾಗವತ ತತ್ವ ನಿರೂಪಣೆಯ ಪ್ರತೀಕವೆಂಬ ಗ್ರಹಿಕೆಯಾಗಿದ್ದರೆ, ಕನಕನ ಕಣ್ಣಿನಲ್ಲಿ ತನ್ನ ಸಾಧನೆಯ ಹಾದಿಯಲ್ಲಿ ಎದುರಾದ ವ್ಯಾಸಕೂಟದ ತೊಡರನ್ನು ನಿವಾರಿಸಿಕೊಳ್ಳುವ ಉಪಾಯವಾಗಿದ್ದಂತೆ ಇದೆ.

ಈ ಸಂದರ್ಭದ ನಿರೂಪಣೆಯಲ್ಲಿರುವ ಬಾಳೆಹಣ್ಣಿನ ಪ್ರಸಂಗಕ್ಕೆ ಸಮಾನವಾದ ನಿರೂಪವೊಂದು ಜೈನಮತದಲ್ಲಿಯೂ ಕಂಡುಬರುತ್ತದೆ. ಜೈನದರ್ಶನ ಗುರು ಕ್ಷೀರಕದಂಬ ತನ್ನ ಮಗ ಪರ್ವತ ಮತ್ತು ಶಿಷ್ಯ ನಾರದನಿಗೆ ಹಿಟ್ಟಿನ ಆಡನ್ನು ನೀಡಿ ಯಾರೂ ಇಲ್ಲದ ಕಡೆ ಯಾರೂ ನೋಡದ ಕಡೆ ಪೂಜಿಸಿ ಅದರ ಕಿವಿಯನ್ನು ಕತ್ತರಿಸಿ ತರಬೇಕೆಂದು ಸೂಚಿಸುತ್ತಾನೆ. ಪರ್ವತ ಅದರ ಕಿವಿ ಕತ್ತರಿಸಿ ತರುತ್ತಾನೆ. ನಾರದ ಏಕಾಂತದಲ್ಲಿಯೂ ಅಂತರಿಕ್ಷದವರು, ಜ್ಯೋತಿರ್ಗಣಗಳು, ವ್ಯಂತರಾದಿಗಳು ಇರುವುದರಿಂದ ಬರಿಗೈಲಿ ಬರುತ್ತಾನೆ. ನಾರದನ ವಿವೇಚನಾ ಪ್ರಜ್ಞೆ ಮೆಚ್ಚುವ ಕ್ಷೀರಕದಂಬ ಅವನಿಗೆ ತನ್ನ ಉಪಾಧ್ಯಾಯ ಪದವಿ ನೀಡುತ್ತಾನೆ. ಕನಕ ಜೈನಮತ ನಿರೂಪಿತ ಪ್ರಸಂಗದಂತೆ ನಡೆದುಕೊಂಡಿದ್ದು ಕೇವಲ ಪ್ರಭಾವ ಎನ್ನುವುದಕ್ಕಿಂತ ಆತನ ಆಲೋಚನ ಕ್ರಮ ತನ್ನದೇ ಹಾದಿ ಹಿಡಿದಿದ್ದರ ಸೂಚಕದಂತೆ ಕಾಣುತ್ತದೆ.

ವ್ಯಾಸಕೂಟದ ಪ್ರಬಲ ವಿರೋಧದ ನಡುವೆಯೂ ವ್ಯಾಸಕೂಟದಿಂದಲೇ ಮಾನ್ಯನಾಗಿ ದಾಸಕೂಟದ ಸ್ಥಾಪನೆಗೆ ಕಾರಣನಾದ ಕನಕನಿಗೆ ವೈಷ್ಣವ ದ್ವೈತ

ಭಕ್ತಿ ಆಂದೋಲನದ ಆವರಣದಲ್ಲಿ ಸ್ಥಾನ ದೊರೆತರೂ ವ್ಯಾಸಕೂಟದ ಬಣಗು ವಿದ್ವಾಂಸ ಪಡೆಯ ಸಮಾಜೋ-ಮಾನಸಿಕ ರೋಗಿಗಳ ಕಿರುಕುಳದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ತಮ್ಮ ಬೌದ್ಧಿಕ ಮಟ್ಟದ ಕಠೋರ ವಾಸ್ತವ ಸ್ಥಿತಿಯನ್ನು ಅವರಿಗೆ ಮನದಟ್ಟು ಮಾಡಿಸುವುದು ಕನಕನಿಗೆ ಅನಿವಾರ್ಯವಾಗಿತ್ತು. ಹಾಗಾಗಿ ಕನಕ ಜಾನಪದದಲ್ಲಿ ಬೀಡುಬೀಸಾಗಿ ಬಳಕೆಯಲ್ಲಿದ್ದ ಒಡಪು-ಒಗಟುಗಳ ಮಾದರಿಯಲ್ಲಿ ವೈದಿಕ ಪುರಾಣ ಆಧಾರಿತ ಮುಂಡಿಗೆಗಳನ್ನು ರಚಿಸಿದ್ದಂತೆ ತೋರುತ್ತದೆ. ಇವನ್ನು ವ್ಯಾಸಕೂಟದ ಬಣಗು ವಿದ್ವಾಂಸರ ಬಾಯಿ ಮುಚ್ಚಿಸುವ ಅಸ್ತ್ರವಾಗಿ ಪ್ರಯೋಗಿಸಿದಂತಿದೆ. ಈ ಮೂಲಕ ವೈದಿಕ ಪುರಾಣಗಳ ಪ್ರಸಂಗಗಳನ್ನು ವೈದಿಕ ವೈಷ್ಣವರ ವಿರುದ್ಧವೆ ಬಳಕೆ ಮಾಡಿದೆ. ಇಂಥ ಬೌದ್ಧಿಕ ಬೆದರಿಕೆ ಮೂಲಕ ವೈದಿಕರ ಅಲ್ಪತನವನ್ನು ಅವರಿಗೆ 'ಮನವರಿಕೆ ಮಾಡಿಕೊಡುವ ಜೊತೆಗೆ ಇಡೀ ಜಗತ್ತಿಗೂ ಸಾರಿ ಹೇಳುವ ಕಾರ್ಯ ಕೈಗೆತ್ತಿಕೊಂಡಿದೆ. ಇದರಿಂದ ಬೆದರಿದ ಬಣಗು ವಿದ್ವಾಂಸರು ಕನಕನನ್ನು ಕೆಣಕಬೇಡ ಕೆಣಕಿ ತಿಣುಕಬೇಡ ಎಂಬ ಗಾದೆಮಾತನ್ನು ಹುಟ್ಟಿಹಾಕಿದಂತಿದೆ.

ಕನಕನ ಚಿಂತನಾ ಸ್ವರೂಪದ ಮಂಡನಾ ವಿಧಾನವನ್ನು ಆತನ "ಹರಿಭಕ್ತಿ ಸಾರ" ಕೃತಿಯ ರಚನಾ ವಿಧಾನದ ಮೂಲಕ ಅರಿಯಬಹುದಾಗಿದೆ. ಹರಿಭಕ್ತಿ ಸಾರ ನಾಲ್ಕು ಹಂತಗಳಲ್ಲಿ ರಚನೆಯಾಗಿರುವಂತೆ ಕಾಣುತ್ತದೆ. 1. ಸರ್ವಸಮರ್ಪಣಾ ಭಾವ. 2. ದೈವ ವಿಮರ್ಶೆ ಮತ್ತು ಭಕ್ತ ಆಧಾರಿತ ದೈವ.ಚಿಂತನೆ. 3. ವಾಸ್ತವ ಬದುಕಿನ ಕಠೋರ ಮುಖಗಳು. 4. ಚೈತನ್ಯವಾದಿಯ ಚಿಂತನೆಗಳು ಎಂದು ಅವನ್ನು ಸ್ಥೂಲವಾಗಿ ಗುರುತಿಸಬಹುದು. ಇವುಗಳಿಗೆ ಅತ್ಯುತ್ತಮ ನಿದರ್ಶನವಾಗಿ ಕೆಳಗಿನ ಷಟ್ಪದಿಗಳನ್ನು ಉದಾಹರಿಸಬಹುದು..

1. ಸರ್ವಸಮರ್ಪಣ ಭಾವ
ಗಿಳಿಯ ಮರಿಯನು ತಂದು ಪಂಜರ
ದೊಳಗೆ ಪೋಷಿಸಿ ಕಲಿಸಿ ಮೃದುನುಡಿ
ಗಳನು ಲಾಲಿಸಿ ಕೇಳ್ವ ಪರಿಣತರಂತೆ ನೀನೆನಗೆ
ತಿಳುಹು ಮತಿಯನು ಎನ್ನ ಜಿಹ್ವೆಗೆ
ಮೊಳಗುವಂದದಿ ನಿನ್ನ ನಾಮಾ
ವಳಿಯ ಪೊಗಳಿಕೆಯಿತ್ತು ರಕ್ಷಿಸು ನಮ್ಮನನವರತ

2. ದೈವ ವಿಮರ್ಶೆ
ತಾಯನಗಲಿದ ತನಯನೀ ರಾ
ಧೇಯನೊಳಗೆ ರಹಸ್ಯದಲಿ ಕುಲ
ದಾಯವನು ನೆರೆ ತಿಳುಹಿಯರ್ಜುನನಿಂದ ಕೊಲ್ಲಿಸಿದೆ

ಮಾಯಮಂತ್ರದ ಕುಟಿಲಗುಣದ–
ನ್ಯಾಯವೋ ಇದು ನ್ಯಾಯವೋ ನಿ
ನ್ನಾಯವನು ನೀ ಬಲ್ಲೆ ರಕ್ಷಿಸು ನಮ್ಮನನವರತ

ಮತ್ತು ಭಕ್ತ ಆಧಾರಿತ ದೈವ ಚಿಂತನೆ
ಸಿರಿಯ ಸಂಪತ್ತಿನಲಿ ನೀ ಮೈ
ಮರೆದು ಮದಗರ್ವದಲಿ ದೀನರ
ಕರುಣದಿಂದೀಕ್ಷಿಸದೆ ಕಡೆಗಣ್ಣಿಂದ ನೋಡುವರೆ
ಹರ ಹರ ಅನಾಥರನು ಪಾಲಿಸಿ
ವರವ ಕೊಡುವ ಉದಾರಿಯೆಂಬೀ
ಬಿರುದ ಬಿಡುವರೇ ತಂದೆ ರಕ್ಷಿಸು ನಮ್ಮನನವರತ
3. ಬದುಕಿನ ಕಠೋರ ವಾಸ್ತವ ಸ್ಥಿತಿ
ಊರು ತನಗೊಂದಿಲ್ಲ ಹೊತ್ತ ಶ
ರೀರಗಳ ಮಿತಿಯಿಲ್ಲ ತಾ ಸಂ
ಚಾರಿಸದ ಸ್ಥಳವಿಲ್ಲ ನುಡಿಯದ ಭಾಷೆ ಮತ್ತಿಲ್ಲ
ಬೇರೆ ಹೊಸತೊಂದಿಲ್ಲ ಉಣ್ಣದ
ಸಾರ ವಸ್ತುಗಳಿಲ್ಲ ತನುಸಂ
ಚಾರವೀ ಬಗೆಯಾಯ್ತು ರಕ್ಷಿಸು ನಮ್ಮನನವರತ

ಸತ್ತವರಿಗಳಲೇಕೆ ತನ್ನನು
ಹೊತ್ತವರು ಪೆತ್ತವರುಗಳು ತಾ
ಸತ್ತು ಹೋಗುವರಲ್ಲದುಳಿವರೆ ಮರುಗಲೇಕಿನ್ನು
ಮೃತ್ಯು ಬೆನ್ನಿನೊಳಿಹುದು ತಾವಿ
ನ್ನತ್ತು ಮಾಡುವುದೇನು ಪೂರ್ವದ
ತೆತ್ತಿಗನು ನೀನೀಗ ರಕ್ಷಿಸು ನಮ್ಮನನವರತ

4. ಚೈತನ್ಯವಾದಿ ಚಿಂತನೆ
ಬೀಗಮುದ್ರೆಗಳಿಲ್ಲದೂರಿಗೆ
ಬಾಗಿಲುಗಳೊಂಬತ್ತು ಹಗಲಿರು
ಳಾಗಿ ಮುಚ್ಚದೆ ತೆರೆದಿಹುದು ಜೀವಾತ್ಮ ತಾನಿರುತ
ನೀಗಿಯೆಲ್ಲವ ಬಿಸುಟು ಬೇಗದಿ
ಹೋಗುತಿಹ ಸಮಯದಲಿ ಇವರವ
ರಾಗಬಲ್ಲರೆ ನೀನೆ ರಕ್ಷಿಸು ನಮ್ಮನನವರತ

ಮಣ್ಣು ಮಣ್ಣಿನೊಳುದಿಸಲದರಲಿ
ಮಣ್ಣುಬೊಂಬೆಗಳಾಗಿ ರಂಜಿಸಿ
ಮಣ್ಣಿನಾಹಾರದಲಿ ಜೀವವ ತೊರೆದು ಉಪಚರಿಸಿ
ಮಣ್ಣಿನಲಿ ಬಂಧಿಸಿದ ದೇಹವ
ಮಣ್ಣುಗೂಡಿಸಬೇಡ ಜ್ಞಾನದ
ಕಣ್ಣದೃಷ್ಟಿಯನ್ನಿಟ್ಟು ರಕ್ಷಿಸು ನಮ್ಮನನವರತ
ತೊಲಗುವರು ಕಡೆಕಡೆಗೆ ತಾ ಹೊಲೆ
ಹೊಲೆಯೆನುತ ಕಳವಳಿಸಿ ಮೂತ್ರದ
ಬಿಲದೊಳಗೆ ಬಂದಿಹುದ ಕಾಣದೆ ಬರಿದೆ ಮನನೊಂದು
ಜಲದೊಳಗೆ ಮುಳುಗಿದರೆ ತೊಲಗದು
ಹೊಲೆಗೆಲಸವೀ ದೇಹದೊಳು ನೀ
ನೆಲೆಸಿರಲು ಹೊಲೆಯುಂಟೆ ದೇವ ರಕ್ಷಿಸು ನಮ್ಮನನವರತ

ಎಂಜಲೆಂಜಲು ಎಂಬರಾ ನುಡಿ
ಎಂಜಲಲ್ಲವೆ ವಾರಿ ಜಲಚರ
ದೆಂಜಲಲ್ಲವೆ ಹಾಲು ಕರುವಿನೆಂಜಲೆನಿಸಿರದೆ
ಎಂಜಲೆಲ್ಲಿಯದೆಲ್ಲಿಯುಂ ಪರ
ರೆಂಜಲಲ್ಲದೆ ಬೇರೆ ಭಾವಿಸ
ಲೆಂಜಲುಂಟೇ ದೇವ ರಕ್ಷಿಸು ನಮ್ಮನನವರತ

ಮಂಗಳಂ
ಮಂಗಳಂ ಸರ್ವಾದಿಭೂತಗೆ
ಮಂಗಳಂ ಸರ್ವವನು ಪೊರೆವಗೆ
ಮಂಗಳಂ ತನ್ನೊಳಗ ಲೋಕವನು ಲಯಿಸಿಕೊಂಬವಗೆ
ಮಂಗಳಂ ಸರ್ವಸ್ವತಂತ್ರಗೆ
ಮಂಗಳಂ ಸಿರಿಗೊಡೆಯ ಚೆನ್ನಿಗರಾಯ ಕೇಶವಗೆ

ಮಧ್ವಮತ ಕೇಂದ್ರಿತ ವೈಷ್ಣವ ಭಕ್ತಿ ಆಂದೋಲನದ ಪರಿಭಾಷಾ ಆವರಣದಲ್ಲಿ ಕನಕ ತನ್ನ ಸ್ವತಂತ್ರ ಚಿಂತನಾ ಕ್ರಮಗಳ ಹೆಜ್ಜೆ ಗುರುತುಗಳನ್ನು ಸ್ಪಷ್ಟವಾಗಿ ಮೂಡಿಸುವಲ್ಲಿ ಯಶ ಪಡೆದಿರುವುದನ್ನು ಇಲ್ಲಿ ಕಾಣಬಹುದು. ತನ್ನ ವ್ಯವಸ್ಥೆಯ ಬೆಳವಣಿಗೆ ಭಾಗವೆಂದು ಕನಕನನ್ನು ಮಾನ್ಯ ಮಾಡಿದ ವೈದಿಕ ಮಧ್ವಮತ ಕೇಂದ್ರಿತ ವೈಷ್ಣವ ಶಕ್ತಿಯೆ ಆತನನ್ನು ಸರ್ವನಾಶ ಮಾಡಬಲ್ಲ ಎದುರಾಳಿಯೂ ಆಗಿತ್ತೆಂಬ ವಿವೇಕ ಪ್ರಜ್ಞೆ ಅವನಲ್ಲಿ ಮನೆಮಾಡಿದ್ದಿರಬಹುದು. ಹನ್ನೆರಡನೆಯ ಶತಮಾನದಲ್ಲಿ ಅಂತರಜಾತಿ ಮದುವೆಯ ನೆಪದಲ್ಲಿ ಸರ್ವನಾಶವಾಗಿದ್ದ ವಚನ ಚಳವಳಿ ಕುರಿತ ಪ್ರಖರ ಚಾರಿತ್ರಿಕ ಪ್ರಜ್ಞೆಯಿಂದಾಗಿ ಪರಿಭಾಷೆಯ ಬಳಕೆಯ

ಮಟ್ಟದಲ್ಲಿ ಆವರಣದೊಂದಿಗೆ ರಾಜಿ ಮಾಡಿಕೊಂಡಿದ್ದಿರಬಹುದು. ಆದರೆ ದಾಟಿಸಬೇಕಿದ್ದ ಅನುಭವ ದ್ರವ್ಯವನ್ನು ಆವರಣದ ಕಲ್ಲು ಇಟ್ಟಿಗೆಗಳನ್ನು ಬಳಸಿಕೊಂಡೇ ಪರಿಣಾಮಕಾರಿಯಾಗಿ ದಾಟಿಸಿರುವ ಬಗೆಯನ್ನು ಹರಿಭಕ್ತಿಸಾರದಲ್ಲಿ ಕಾಣಬಹುದು.

ಚೈತನ್ಯವಾದಿ ಚಿಂತನಾ ಕ್ರಮದಲ್ಲಿ ಸ್ಥಾಪಿತ ಸಾಮಾಜಿಕ ಜೀವನ ಮೌಲ್ಯಗಳನ್ನು ಅಮೌಲ್ಯೀಕರಿಸಿರುವುದು ಮತ್ತು ಸ್ಥಾಪಿತ ಜೀವನ ಮೌಲ್ಯಗಳ ಪರಿಭಾಷೆಯಲ್ಲಿಯೆ ಸ್ವತಂತ್ರ ಸ್ವರೂಪದ ಹೊಸ ತಾತ್ವಿಕ ನೆಲೆಗಟ್ಟೊಂದನ್ನು ಕಟ್ಟಿಕೊಟ್ಟಿರುವುದು ಗಮನಿಸತಕ್ಕದ್ದಾಗಿದೆ. ಹಾಗಾಗಿಯೆ ಚೈತನ್ಯವಾದಿಯ "ಜ್ಞಾನ ಕಣ್ಣಿನ ದೃಷ್ಟಿ" ದೇಹ ತತ್ವ, ಕ್ಷಣ ಭಂಗುರ ತತ್ವ, ಜಾತಿ ತತ್ವ, ಲಿಂಗ ತತ್ವಗಳ ಆಚೆಗಿನ ಪ್ರಕೃತಿ ನಿಯಮದ ಜೀವ ತತ್ವವನ್ನು ಮನವರಿಕೆ ಮಾಡಿಸಿದೆ. ಇದೇ ಬಗೆಯ ಚಿಂತನಾ ಕ್ರಮವನ್ನು "ತಲ್ಲಣಿಸದಿರು ಕಂಡ್ಯ ತಾಳು ಮನವೆ", "ಕುಲ ಕುಲ ಕುಲವೆನ್ನುತಿಹರು", "ಕುಲ ಕುಲ ಕುಲವೆಂದು ಹೊಡೆದಾಡದಿರಿ", "ತನು ನಿನ್ನದು ಜೀವನ ನಿನ್ನದೊ", "ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ" ಮೊದಲಾದ ಹಾಡುಗಳಲ್ಲೂ ಕಾಣಬಹುದು.

ಕನಕನ ಹಾಡುಗಳ ಕಾಲಾನುಕ್ರಮ ಅರಿಯದೆ ಕೃತಿ ಪ್ರವೇಶ ಮಾಡುವ ನಮಗೆ ಅವನ ಭಾಷಾ ಸ್ವರೂಪದಲ್ಲಿ ದ್ವಂದ್ವ ನಿಲುವು ಕಾಣುವುದು ಸಹಜವಾಗಿದೆ. ಹರಿಭಕ್ತಿ ಸಾರ ಕೃತಿಯಲ್ಲಿ ಕನಕ ಅನುಸರಿಸಿರುವ ಉದ್ದೇಶಿತ ರಚನಾ ಕ್ರಮದಲ್ಲಿಯೆ ಆತನ ಹಾಡುಗಳನ್ನು ಮರುಜೋಡಿಸಿಕೊಂಡಲ್ಲಿ ನಿಖರ ಓದಿಗೊಂದು ಸೂಕ್ತ ಅನುಕ್ರಮ ರೂಪಿಸಿಕೊಳ್ಳಲು ಸಹಾಯವಾಗುವುದು. ಅವುಗಳಲ್ಲಿ ಕಾಣುವ ದ್ವಂದ್ವಗಳಿಗೆ ಉತ್ತರ ಸಿಗಬಹುದೆಂದು ತೋರುತ್ತದೆ.

ಪುರಾಣ ಪ್ರಸಂಗಗಳನ್ನು ಅವು ಇದ್ದ ಹಾಗೆಯೆ ಮತ್ತೆ ಹೇಳುವಲ್ಲಿ ನಿರಾಸಕ್ತನಾಗಿದ್ದ ಕನಕ ಅವನ್ನು ತನ್ನ ಚಿಂತನೆಗೆ ಅನುಗುಣವಾಗಿ ಮತ್ತೆ ಕಟ್ಟಿಕೊಡುವಲ್ಲಿ ನಿಪುಣನಾಗಿರುವುದು ತಿಳಿದ ಅಂಶವೇ ಆಗಿದೆ. ಭಾಗವತದ ಪ್ರಸಂಗಗಳಲ್ಲಿ ಮುಖ್ಯವಾಗಿ ಕೃಷ್ಣ ಮತ್ತು ಗೋಪಿಕೆಯರ ಪ್ರಸಂಗವನ್ನು ಭಕ್ತಿಯ ಕಾಂತಾಸಕ್ತಿ ಅಭಿವ್ಯಕ್ತಿ ಕ್ರಮ ಅನುಸರಿಸಲು ಬಳಸಿರುವುದೇ ಹೆಚ್ಚಾಗಿ ಕಂಡುಬರುತ್ತದೆ. ಆದರೆ ಕನಕ ಇದನ್ನು "ಮುಟ್ಟದಿರೊ ಎನ್ನನು-ರಂಗಯ್ಯ" ಹಾಡಿನಲ್ಲಿ ಭಿನ್ನವಾಗಿ ಕಂಡಿದ್ದಾನೆ.

ಅತ್ತೆಯೊಬ್ಬಳ ಕೂಡ ಆಡಿ ಬರುವುದ ಕಂಡೆ
ಸತ್ಯವ ಮಾಡದಿರೊ-ಹೇ ಸರಿನಂಟ
ನೂರೆಂಟ
ಬಣ್ಣದ ಬಂಟ
ಬಿಡು ಎನ್ನ ಗಂಟ

ಹಡೆದವರ ತಲೆಗೆ ಮರಳು ಚೆಲ್ಲದಂತೆ
ಮಡದ್ಯೇರ ಕೂಡ್ಯಾಡಿ ಕಲಿತ್ಯೆಲ್ಲೊ ಮಿರುಗ
ದಿಮ್ಮದಿರುಗ
ಸೊಕ್ಕಿಮುರುಗ
ಬಿಡು ಎನ್ನ ಸೆರಗ

ಅಂಗೈಯ ನೊರೆಹಾಲು ಮುಂಗೈಯ ಮೇಲುಗಡೆ
ಸಿಂಗಾರವಾದುದ ಕಂಡೆ ಕಲೆಯ
ಕಾಗಿನೆಲೆಯ
ಬಟ್ಟಮೊಲೆಯ
ಕನಕಯ್ಯನಿಗೊಲೆಯ

ಇಲ್ಲಿ ಕೃಷ್ಣ ಹೆಣ್ಣುಬಾಕ ಪುರುಷರ ಪ್ರತೀಕವಾಗಿದ್ದಾನೆ. ಗೋಪಿಕೆಯೊಬ್ಬಳು ಅಂಥ ಪುರುಷನನ್ನು ದಿಟ್ಟತನದಿಂದ ಬುದ್ಧಿವಂತಿಕೆಯಿಂದ ಮತ್ತು ಅಷ್ಟೇ ಸೂಕ್ಷ್ಮ ಜಾಣ್ಮೆಯಿಂದ ನಿಭಾಯಿಸಲಾದ ವಿವರಗಳಿವೆ. ಸತಾಯಿಸುವ, ಆಟವಾಡಿಸುವ, ಮೋಜು ಪಡೆಯುವ ಮೂಲಕವೆ ದುಷ್ಟ ಪುರುಷರನ್ನು ಎದುರಿಸುವ ಪ್ರತಿನಿಧಿಯಾಗಿ ಗೋಪಿಕೆಯ ಚಿತ್ರಣ ಕಂಡುಬರುತ್ತದೆ. ಈ ಹಾಡಿನಲ್ಲಿ ಪುರುಷ ಸಮಾಜದ ಪ್ರಧಾನ ತತ್ವ ಗೌಣವಾಗಿರುವುದು ಮತ್ತು ಅಧೀನ ತತ್ವ ಪ್ರಧಾನವಾಗಿರುವುದು ಗಮನಿಸತಕ್ಕ ಅಂಶವಾಗಿದೆ. ಇದೇ ಬಗೆಯಲ್ಲಿ ವೈದಿಕ ಪುರಾಣವನ್ನು ತನ್ನ ಚಿಂತನಾ ಕ್ರಮಗಳಿಂದ ಒಡೆದು ಮರುಕಟ್ಟುವ ಕ್ರಮವನ್ನು ಕನಕನ ಇತರ ಪ್ರಮುಖ ಕೃತಿಗಳಲ್ಲೂ ಕಾಣಬಹುದು.

ರಾಮಧಾನ್ಯ ಚರಿತೆ ಶ್ರೇಷ್ಟತೆ ವ್ಯಸನದ ಹಿನ್ನೆಲೆಯಲ್ಲಿ ಮೇಲು-ಕೀಳು ಜಾತಿಗಳು ಮತ್ತು ಬಡವ-ಬಲ್ಲಿದರ ನಡುವಿನ ತಾರತಮ್ಯ ನೀತಿಯನ್ನು ಪ್ರತಿಭಟನಾತ್ಮಕ ನೆಲೆಯಲ್ಲಿ ನಿರೂಪಿತವಾಗಿರುವ ಬತ್ತ ಮತ್ತು ರಾಗಿಗಳ ಜಗಳದ ಕತೆಯೆಂದೂ ವೈದಿಕ ವೈಷ್ಣವ ಪುರಾಣದ ಚೌಕಟ್ಟಿನಲ್ಲಿ ಸಮಕಾಲೀನ ಸಾಮಾಜಿಕ ಆಶಯಗಳನ್ನು ಮಂಡಿಸಿರುವ ಮರುರಚಿತ ಪುರಾಣವೆಂದೂ ಗುರುತಿಸಲಾಗಿದೆ. ಇದರ ಅರ್ಥವಲಯದ ಸಾಧ್ಯತೆ ಅಷ್ಟಕ್ಕೇ ಸೀಮಿತಗೊಂಡಂತೆ ಕಂಡುಬರುವುದಿಲ್ಲ. ಸಮಾನತೆಯ ಆಶಯಯೊಂದಿಗೆ ಕೆಳಜಾತಿ ಬಡವರ ಪರ ವಾದ ಮಂಡಿಸುವ ರಾಗಿ ಮತ್ತು ಶ್ರೇಷ್ಟತೆ, ಶ್ರೀಮಂತಿಕೆ ಪರ ನಿಂತು ಜಗಳದ ರಂಗೇರಿಸಿದ ಬತ್ತ ಇವೆರಡನ್ನೂ, ನ್ಯಾಯವಾದಿ ರಾಮ ಅವುಗಳ ಸತ್ವ ಪರೀಕ್ಷೆ ಮಾಡಲು ಆರು ತಿಂಗಳ ಅವಧಿಗೆ ಸೆರೆಯಲ್ಲಿಡುತ್ತಾನೆ. ಸೆರೆಯ ಅವಧಿ ಕಳೆದ ನಂತರ ಅಕ್ಕಿ ತನ್ನ ಸಾಮರ್ಥ್ಯ ಸಾಬೀತು ಪಡಿಸುವಲ್ಲಿ ಸೋತು ಹುಳಬಿದ್ದು ಮುಗ್ಗುಲು ಅಕ್ಕಿಯಾಗಿ ಬದಲಾವಣೆಯಾಗಿರುತ್ತದೆ. ಆದರೆ ರಾಗಿ ಸೆರೆಯ ಅವಧಿಯ ನಂತರವೂ ತನ್ನ ಸಾಮರ್ಥ್ಯ ಉಳಿಸಿಕೊಂಡು ಬಳಕೆಗೆ ಯೋಗ್ಯವಾದ ಧಾನ್ಯವಾಗಿ ಉಳಿದಿರುತ್ತದೆ

ಎಂದು ರಾಮಧಾನ್ಯ ಚರಿತೆ ನಿರೂಪಿಸುತ್ತದೆ. ಸಮಾಜದ ದಮನಿತ ಸಮುದಾಯಗಳು ತಮ್ಮ ಸಾಮಾಜಿಕ ಮತ್ತು ಆರ್ಥಿಕ ಜೀವನ ಮೌಲ್ಯಗಳ ಕಟ್ಟುಪಾಡುಗಳನ್ನು ಮೀರಿ ತಮ್ಮ ಜೀವನವನ್ನು ರೂಪಿಸಿಕೊಳ್ಳುವಲ್ಲಿ ತಮ್ಮಲ್ಲಿರುವ ಸಾಮರ್ಥ್ಯವನ್ನು, ಒಳಸತ್ವವನ್ನು ಒರೆಗೆ ಹಚ್ಚಿ ಪ್ರಕಟಪಡಿಸುವ ಅಗತ್ಯವಿದೆಯೆಂದು ಸಾರಿದೆ.

ನಳ ಚರಿತ್ರೆ ಪುರುಷ ಸಮಾಜದ ಪುರುಷ ಕೇಂದ್ರಿತ ಜೀವನಮೌಲ್ಯಗಳನ್ನೇ ನಿರೂಪಿಸುತ್ತದೆ. ನಳ-ದಮಯಂತಿಯರ ಪ್ರೇಮ ಕತೆಯನ್ನು ನಳನ ಹಿತದೃಷ್ಟಿಯಿಂದಲೇ ಮಂಡಿಸಿದೆ. ಇಡೀ ಕೃತಿಯನ್ನು ಸೂಕ್ಷ್ಮ ಓದಿಗೆ ಒಳಪಡಿಸಿದಾಗ ಈ ಮಾತನ್ನು ಖಡಾಖಂಡಿತವಾಗಿ ಹೇಳುವ ಧೈರ್ಯ ಇಲ್ಲದಂತಾಗುತ್ತದೆ.

ನಳ ಒಬ್ಬ ಪುರುಷನಾಗಿ ತನ್ನ ಪ್ರೇಮವನ್ನು ಉಳಿಸಿಕೊಳ್ಳುವಲ್ಲಿ ತನ್ನ ಕುಟುಂಬದ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವಲ್ಲಿ ಪುರುಷ ಸಮಾಜದ ಜೀವನ ಮೌಲ್ಯಗಳನ್ನು ತನ್ನ ಹಿತಾಸಕ್ತಿಗೆ ಅನುಗುಣವಾಗಿ ಬಳಿಸಿಕೊಳ್ಳುವಲ್ಲಿ ವಿಫಲನಾಗಿರುವುದು ಮತ್ತು ಇದರ ಸೂಕ್ಷ್ಮ ನೆಲೆಯನ್ನು ಗ್ರಹಿಸದೆ ದಮಯಂತಿಯ ಮೇಲೆ ಪುರುಷಪರ ಜೀವನ ಮೌಲ್ಯಗಳನ್ನು ಸಾರಾಸಗಟಾಗಿ ಅನುಸರಣೆ ಮಾಡುವಂತೆ ಹೇರುವುದು ಆತನ ವ್ಯಕ್ತಿತ್ವದಲ್ಲಿ ಕಂಡುಬರುವ ದೌರ್ಬಲ್ಯವಾಗಿದೆ. ಆತ ಸಾಮಾಜಿಕವಾಗಿ ಬಲಶಾಲಿಯಾಗಿದ್ದರೂ ಅದನ್ನು ತನ್ನ ಪ್ರೇಮ ವ್ಯವಹಾರಕ್ಕೆ ಪೂರಕವಾಗಿ, ತನ್ನ ಕುಟುಂಬದ ರಕ್ಷಣೆಗಾಗಿ, ತನ್ನ ಕೌಟುಂಬಿಕ ಜವಾಬುದಾರಿಗಳ ನಿರ್ವಹಣೆಗಾಗಿ ಬಳಸದೆ ಹಿಂಜರಿಯುವ ಕಾರಣದಿಂದ ನಳ ದುರ್ಬಲ ವ್ಯಕ್ತಿತ್ವದವನಾಗಿ ಕಾಣುತ್ತಾನೆ.

ಆದರೆ ದಮಯಂತಿ ಪುರುಷ ಸಮಾಜದ ನಿರ್ಬಂಧಿತ ಸ್ವಾತಂತ್ರ್ಯದೊಳಗೆ ತನ್ನ ಪ್ರೇಮವನ್ನು ಉಳಿಸಿಕೊಳ್ಳುವಲ್ಲಿ, ಕುಟುಂಬವನ್ನು ರಕ್ಷಿಸಿಕೊಳ್ಳುಲ್ಲಿ ಜವಾಬ್ದಾರಿಯಿಂದ ನಡೆದುಕೊಳ್ಳುತ್ತಾಳೆ, ಎಂತಹ ದುರ್ಗಮ ಸನ್ನಿವೇಶ ಎದುರಾದರೂ ಸಮಚಿತ್ತದಿಂದ ತನ್ನ ಪ್ರೇಮವನ್ನೂ ಕುಟುಂಬವನ್ನೂ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾಳೆ. ಹಾಗಾಗಿ ಈ ಕೃತಿಯಲ್ಲಿ ನಿರೂಪಿತ ದಮಯಂತಿಯ ಪಾತ್ರ ಚಿತ್ರಣ ಪುರುಷ ಸಮಜದೆದುರಿಗೆ ತನ್ನ ಪ್ರೇಮಕ್ಕಾಗಿ ಸೆಣಸುವ ಮತ್ತು ತನ್ನ ಕುಟುಂಬದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುವ ಮೂಲಕ ಗೆಲ್ಲುವ ಶಕ್ತಿಶಾಲಿ ಮಹಿಳೆಯಾಗಿ ಚಿತ್ರಿತವಾಗಿದ್ದಾಳೆ. ಪುರುಷ ಸಮಾಜದ ಚೌಕಟ್ಟಿನೊಳಗೆ ಒಪ್ಪಿತ ಮಹಿಳೆಯರ ಇಕ್ಕಟ್ಟುಗಳನ್ನೂ ಬಿಕ್ಕಟ್ಟುಗಳನ್ನೂ ಹೋರಾಟಗಳನ್ನೂ ಅವರ ಶಕ್ತಿಶಾಲಿತ್ವವನ್ನೂ ವೈದಿಕ ವೈಷ್ಣವ ಪುರಾಣ ಕತೆಯ ಚೌಕಟ್ಟಿನಲ್ಲಿ ಮರುನಿರೂಪಿಸುವ ಮೂಲಕ ಕನಕ ಸ್ತ್ರೀಯರ ಸ್ಥಿತಿಗತಿಗಳ ಸಾಮಾಜಿಕ ವಿಮರ್ಶೆಯನ್ನು ಹೀಗೆ ಮೆಲುದನಿಯಲ್ಲಿಯೇ ಮಾಡಿರುವುದು ಕಂಡುಬರುತ್ತದೆ.

ಹಂಪಿಯ ಸುತ್ತಲ ಹಳ್ಳಿಗಳಲ್ಲಿ ಇಂದಿಗೂ ಕೆಳವರ್ಗದ ಮಹಿಳೆಯರು ರೈತ ಕಾರ್ಮಿಕರಾಗಿ ತಮ್ಮ ಊರಿನ ಹೊಲಗದ್ದೆಗಳಲ್ಲಿ ದುಡಿಯಲು ದಿನ ಬೆಳಗ್ಗೆ ಗುಂಪುಗಳಲ್ಲಿ ನಡೆದು ಹೋಗುತ್ತಿರುವಂಥ ಮತ್ತು ಬಹುಪಾಲು ಕೆಳವರ್ಗದ ಪುರುಷರು ಚಹಾ ಅಂಗಡಿಗಳಲ್ಲಿ ಅರ್ಧಕಪ್ ಚಹಾ ಹೀರುತ್ತ ಹರಟೆಯಲ್ಲಿ ಕಾಲ ಕಳೆಯುತ್ತ ಕುಳಿತಿರುವಂಥ ಚಿತ್ರ ಸಾಮಾನ್ಯವಾದುದು. ಪುರುಷರು ತಮ್ಮ ಘನತೆಗೆ ತಕ್ಕ ಕೆಲಸ ಸಿಕ್ಕಲ್ಲಿ ದುಡಿಮೆಗೆ ಹೋಗುವುದುಂಟು. ತಮ್ಮ ದುಡಿಮೆ ಕೈ ಹತ್ತಲಿ ಹತ್ತದೆ ಇರಲಿ ಮನೆಯ ಹೆಂಗಸರು ದುಡಿದು ತರುವ ಹಣದಲ್ಲಿ ಒಂದು ಪಾಲನ್ನು ತಮ್ಮ ಖರ್ಚಿಗಾಗಿ ಪಡೆಯುವುದು ಕೂಡ ಅಷ್ಟೇ ಸಾಮಾನ್ಯ ಸಂಗತಿಯಾಗಿದೆ. ಮಹಿಳೆಯರು ಗಂಡಸರಂತೆ ಕುಟುಂಬದ ಆದಾಯಕ್ಕಾಗಿ ದುಡಿಯುವುದು ಮತ್ತು ಹೆಂಗಸರಂತೆ ಮನೆಯ ಕೆಲಸಗಳನ್ನು ನಿರ್ವಹಿಸುವುದು, ಕುಟುಂಬ ನಿರ್ವಹಣೆಯಲ್ಲಿ ಪುರುಷರು ವಿಫಲರಾದರೂ ಅದನ್ನು ಪ್ರಶ್ನಿಸಿದೆ ತಾವೇ ತಮ್ಮ ಶಕ್ತಿ ಮೀರಿ ಸಮರ್ಥವಾಗಿ ನಿಭಾಯಿಸುವುದು ಕಂಡುಬರುತ್ತದೆ. ಆದರೆ ಪುರುಷರು ತಮ್ಮ ಕುಟುಂಬದ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ಪೂರ್ಣ ನಿರಾಸಕ್ತರಾಗಿದ್ದಂತೆ ಇದ್ದಾರೆ. ಪುರುಷ ಸಮಾಜದ ಇಂಥ ಕುಟುಂಬಗಳಲ್ಲಿನ ಸ್ತ್ರೀ-ಪುರುಷರ ಸಾಮಾಜಿಕ ಪಾತ್ರ ನಿರ್ವಹಣೆ ಕುರಿತ ವಿಮರ್ಶೆಗೊಂದು ರೂಪಕವಾಗಿ ಕನಕ ನಳ ಚರಿತೆಯನ್ನು ರಚಿಸಿದ್ದಿರಬಹುದು.

ಮೋಹನ ತರಂಗಿಣಿ ವೈದಿಕ ವೈಷ್ಣವ ಮತ್ತು ಶೈವ ಪುರಾಣಗಳನ್ನು ಆಧರಿಸಿದ ಕೃತಿ. ಬೆಟಗೇರಿ ಕೃಷ್ಣಶರ್ಮ ಈ ಕೃತಿಯನ್ನು ಸಮಕಾಲೀನ ಸಮಾಜದ ಸಾಮಾಜಿಕ ಮತ್ತು ಧಾರ್ಮಿಕ ಆಶಯಗಳನ್ನೂ ಇತಿಹಾಸವನ್ನೂ ದಾಖಲಿಸಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇದರಲ್ಲಿ ಮುಖ್ಯವಾಗಿ 1. ಮನ್ಮಥ ಶಿವನಿಂದ ಸುಟ್ಟು ಬೂದಿಯಾದ ಮೇಲೆ ವಿಧವೆಯಾದ ರತಿಯನ್ನು ಕೃಷ್ಣನ ಮಗ ಪ್ರದ್ಯುಮ್ನ ಮದುವೆ ಮಾಡಿಕೊಳ್ಳುವುದು. 2. ಕೃಷ್ಣನ ಮೊಮ್ಮಗ ಅನಿರುದ್ಧ ಮತ್ತು ಶಿವಭಕ್ತ ಹಾಗೂ ಅಸುರ ದೊರೆ ಬಾಣಾಸುರನ ಮಗಳು ಉಷೆಯ ಪ್ರೇಮ ಮದುವೆ ಅಂದರೆ ವೈಷ್ಣವ ಮತ್ತು ಶೈವರು/ ದೇವ ಮತ್ತು ದಾನವರು/ ಮೇಲುಜಾತಿ ಮತ್ತು ಕೆಳಜಾತಿಗಳ ನಡುವೆ ಮದುವೆ ನೇರವೇರುವುದು. ಹಾಗೂ 3. ಈ ಮದುವೆಗೆ ಹರಿಪಾರಮ್ಯ ಮತ್ತು ಶಿವಪಾರಮ್ಯ ಪ್ರಶ್ನೆ ಮುಂದೆ ಬಂದು ಯುದ್ಧಗಳಾಗಿ ಹರಿಹರ ಸಮಾನತೆ ಮತ್ತು ಸಾಮರಸ್ಯ ಎತ್ತಿಹಿಡಿಯುವುದನ್ನು ಹೇಳಿದೆ. ಈ ಕೃತಿ 1. ವಿಧವಾ ವಿವಾಹ, 2. ಅಂತರ ಜಾತೀಯ/ಮತೀಯ ವಿವಾಹ, ಮತ್ತು 3. ವೈದಿಕ ಉಪಪಂಥಗಳಾದ ಹರಿಹರ ಸಮಾನತೆ ಮತ್ತು ಸಾಮರಸ್ಯ ಕುರಿತ ವಿಷಯಗಳನ್ನು ನಿರ್ವಹಿಸಿರುವುದು ಕಾಣುತ್ತದೆ. ವಿಜಯನಗರದ ಪತನಕ್ಕೆ ಶಿವಪಾರಮ್ಯ ಮತ್ತು ಹರಿಪಾರಮ್ಯ ಪ್ರಶ್ನೆಯೂ ಮುಖ್ಯ ಪಾತ್ರ ವಹಿಸಿದ್ದನ್ನು ಕಣ್ಣಾರೆ ಕಂಡಿದ್ದ ಕನಕನಿಗೆ ಇದು ಸುಧಾರಣೆಯಾಗಬೇಕಿರುವ ಸಮಾಜ ಘಾತುಕ ವಿಷಯವಾಗಿ ಕಂಡಿದ್ದಿರಬಹುದು. ಹಾಗಾಗಿ ಪುರಾಣಗಳ ಮರುಹೆಣೆಯುವಿಕೆ

ಮೂಲಕ ಸಮಕಾಲೀನ ಸಮಾಜದ ಸಮಸ್ಯೆಗಳನ್ನು ಸುಧಾರಿಸುವ ಕ್ರಮ ಮುಂದಿಟ್ಟಿರುವಂತೆ ಕಾಣುತ್ತದೆ.

ರಾಮಧಾನ್ಯ ಚರಿತೆ, ನಳ ಚರಿತೆ ಮತ್ತು ಮೋಹನ ತರಂಗಿಣಿ ಕೃತಿಗಳಲ್ಲಿ ನಡೆಸಿರುವ ಮುಕ್ತ ಚಿಂತನಾ ಕ್ರಮಗಳಿಂದಾಗಿ ಪ್ರಕೃತಿ ಅಥವಾ ಜೀವಮೂಲ ಚೈತನ್ಯ ನಿಯಮದಡಿಯಲ್ಲಿ ಸಾಮಾಜಿಕ ಜೀವನಮೌಲ್ಯಗಳ ಸುಧಾರಣೆ ಕ್ರಮವನ್ನು ಪ್ರತಿಪಾದಿಸಿರುವುದು ಕನಕ ಕೃತಿಗಳ ಕೇಂದ್ರಬಿಂದುವಾಗಿದೆ ಎಂದು ಹೇಳಬಹುದು.

ಈ ಹಿನ್ನೆಲೆಯಲ್ಲಿ ಈ ಗೋಷ್ಠಿ ಮತ್ತು ಪ್ರಬಂಧದ ಸುತ್ತ ಸುಳಿಯುವ ಭಕ್ತಿ, ಲೋಕದೃಷ್ಟಿ, ಸಮಾಜ, ಯಜಮಾನಿಕ, ನಿರಸನ ಮುಂತಾದ ಪದರೂಪಗಳ ಚಿಂತನಾ ಕ್ರಮಗಳನ್ನು ಹೀಗೆ ಗುರುತಿಸಬಹುದು.

**ಭಕ್ತಿ:** ಭಕ್ತಿಗೂ ಧ್ಯಾನಕ್ಕೂ ನಿಕಟ ಸಂಬಂಧ ಇರುವಂತೆ ತೋರುತ್ತದೆ. ಧ್ಯಾನ ಕುರಿತು ಮೊಟ್ಟ ಮೊದಲಿಗೆ ಗೌತಮ ಬುದ್ಧ ಆನಪಾನ ಸತಿಯೆಂದು ವಿವರಿಸಿರುವುದು ತಿಳಿದುಬರುತ್ತದೆ. ಬುದ್ಧನದು ನಿರಾಕಾರ ಮತ್ತು ಮಾನವ ಕೇಂದ್ರಿತ ಚಿಂತನಾಕ್ರಮವಾಗಿದೆ. ಆತನ ಪ್ರಕಾರ ಧ್ಯಾನವೆಂಬುದು ಹರಿವ ಮನಸ್ಸು ಉಸಿರ ಚಲನೆಯನ್ನು ಅನುಸರಿಸುತ್ತಲೇ ಕಂಡುಕೊಳ್ಳುವ ನಿಲುತಾಣವಾಗಿದೆ. ವ್ಯಕ್ತಿ ತನ್ನ ಗುಣಾವಗುಣಗಳನ್ನು ಪರಿಶೀಲಿಸಿ ತಿದ್ದಿಕೊಳ್ಳುವ ಕ್ರಮವಾಗಿರುವಂತೆಯೇ ಮನಸಿನ ತಾಳಿಕೆಯ ಕಸುವನ್ನು ಹೆಚ್ಚಿಸಿಕೊಳ್ಳುವ ವಿಧಾನವೂ ಇದಾಗಿದೆ. ಸಮಾಜದ ಉನ್ನತಿ/ಸುಧಾರಣೆ ಇಡಿಯಾಗಿ ಏಕೀಕೃತ ನೆಲೆಯಲ್ಲಿ ಸಂಭವಿಸುವುದಕ್ಕಿಂತ ವ್ಯಕ್ತಿಮಟ್ಟದಲ್ಲಿ ಆಗುವ ಉನ್ನತಿ/ಸುಧಾರಣೆಯಿಂದಲೇ ಸಾಗಬೇಕು ಎಂಬ ಚೀನೀ ತತ್ವಜ್ಞ ಕನ್‌ಫ್ಯೂಶಿಯಸ್(ಕ್ರಿ.ಪೂ.551–479)ನ ವಿಚಾರದಿಂದ ಇದು ಮರುಹುಟ್ಟು ಪಡೆದುಕೊಂಡಂತೆ ಕಾಣುತ್ತದೆ. ಹಾಗಾಗಿಯೆ ಮಾನವ ನಿರ್ಮಿತ ಮತ್ತು ಸ್ಥಾಪಿತ ಎಲ್ಲ ಚಿಂತನಾಕ್ರಮಗಳ ಪೂರ್ವಮೂಲದಲ್ಲಿ ವ್ಯಕ್ತಿತ್ವ ಕಡೆವ ಕಮ್ಮಟಸಾಲೆ ಎಂದು ಧ್ಯಾನವನ್ನು ಹೇಳಬಹುದು. ಇದು ನಂತರದ ಕಾಲದ ಪತಾಂಜಲಿಯ ಕಣ್ಣಲ್ಲಿ ಯೋಗ ಸ್ವರೂಪ ಪಡೆದು ವಿಭಿನ್ನ ಆಯಾಮಗಳಲ್ಲಿ ಮೈತಳೆದಂತೆ ಕಾಣುತ್ತದೆ.

ಶಂಕರ, ಮಧ್ವ, ರಾಮಾನುಜರ ವೈದಿಕ ಚಿಂತನೆಯ ಪುನರುತ್ಥಾನವಾದಿ ನೆಲೆಗಳಾದ ಅದ್ವೈತ, ದ್ವೈತ ಮತ್ತು ವಿಶಿಷ್ಟಾದ್ವೈತ ಮತಗಳು ತಮ್ಮ ಆಲೋಚನಾ ದೃಷ್ಟಿಕೋನಗಳನ್ನು ಸಾಮಾಜಿಕ ನೆಲೆಗಟ್ಟಿನಲ್ಲಿ ವಾಸ್ತವಗೊಳಿಸುವ ಪ್ರಯತ್ನದಲ್ಲಿ ಧ್ಯಾನ ಕ್ರಮದಿಂದ ಭಕ್ತಿಯ ಚಿಂತನಾಕ್ರಮ ಮೈತಳೆದಂತೆ ತೋರುತ್ತದೆ. ಧ್ಯಾನದ ವಿವರಣೆಯಂತೆ ದೇಹದಲ್ಲಿ ಚೈತನ್ಯ ತುಂಬುವ ಉಸಿರಾಟವನ್ನು ಭಕ್ತಿ ಕಲ್ಪನೆಯು ಸರ್ವಶಕ್ತ/ದೈವವಾಗಿಯೂ ಉಸಿರಾಟದ ಗತಿ ಅನುಸರಿಸುವ ಹರಿವ ಮನಸ್ಸನ್ನು ಭಕ್ತನಾಗಿಯೂ ಕಂಡರಸಿ ಪ್ರಧಾನ–ಅಧೀನ ಅರ್ಥದಲ್ಲಿ ದೈವ–ಭಕ್ತ ಜೋಡುಪದಗಳನ್ನು ಹುಟ್ಟುಹಾಕಿಕೊಂಡಿದೆ. ಸರ್ವಶಕ್ತ ಮತ್ತು ಶರಣಾಗತ ಪರಿಭಾವನೆಯ ನೆಲೆಯಲ್ಲಿ ಭಕ್ತಿ ಚಿಂತನಾಕ್ರಮವನ್ನು ಕಟ್ಟಿಕೊಳ್ಳುವ ಮೂಲಕ

ನಿರಾಕಾರ ಕಲ್ಪನೆ ಸಾಕಾರವಾಗಿಯೂ ಮಾನವ ಕೇಂದ್ರಿತ ದೈವಕೇಂದ್ರವಾಗಿಯೂ ಬದಲಾಗಿದೆ. ಈ ಮೂರೂ ಮತಗಳು ತಮ್ಮ ಭಾವ ವಿಚಾರ ಚಿಂತನೆಗಳ ಪ್ರತೀಕವಾದ ದೈವ ಕಲ್ಪನೆಯನ್ನು ಸರ್ವಶಕ್ತನ ಸ್ಥಾನದಲ್ಲಿ ನಿಲ್ಲಿಸಿ ಭಕ್ತಿ ಕಲ್ಪನೆಯನ್ನು ರೂಪಿಸಿವೆ. ಮತ್ತು ತಮ್ಮ ಮತತತ್ತ್ವ ಪ್ರತಿಪಾದಕರನ್ನೂ ಅವಲಂಬಿಗಳನ್ನೂ ನಿಷ್ಠಭಕ್ತರನ್ನಾಗಿ ಮಾಡಿವೆ. ಭಕ್ತಿಯ ಈ ಕಾರ್ಯ ಸ್ವರೂಪ ಧಾರ್ಮಿಕ ಮತಪಂಥವೊಂದರ ಮತ ಪ್ರಸಾರ, ಸ್ವಮತ ಪ್ರತಿಪಾದನೆ, ಮತೀಯ ಭಾವನೆ–ಇವನ್ನು ಒಳಗೊಳ್ಳುವಂತೆ ಮಾಡಿದೆ. ಅಲ್ಲದೆ ಸ್ವಮತ ಶ್ರೇಷ್ಠ ವ್ಯಸನವನ್ನೂ ಹುಟ್ಟುಹಾಕಿತು. ದೈವ–ಭಕ್ತ ಕಲ್ಪನೆಯ ಜೋಡುನುಡಿ ವೈದಿಕ ಪ್ರಧಾನ–ಅವೈದಿಕ ಅಧೀನ ಎಂಬ ಚಿಂತನೆಯನ್ನು ಪ್ರಚೋದಿಸಿ ಭಕ್ತಿಯ ಸಾಮಾಜಿಕ ಅನ್ವಯತೆಯನ್ನು ಹುಟ್ಟುಹಾಕಿತು.

ಶಂಕರರ ಅದ್ವೈತ ಮತ ಸಮಾಜದಲ್ಲಿ ವೈದಿಕ ಬ್ರಾಹ್ಮಣರಲ್ಲಿನ ಶೈವ ವೈಷ್ಣವ ಪಂಥಗಳನ್ನು ಏಕತ್ರಗೊಳಿಸಲು ತನ್ನ ತತ್ತ್ವವನ್ನು ಮಿತಿಗೊಳಪಡಿಸಿಕೊಂಡ ಪರಿಣಾಮದಿಂದಲೋ ಏನೋ ಅದು ಮೇಲುಜಾತಿಗೆ ಸೀಮಿತವಾಯಿತು. ಇದನ್ನು ಮುರಿಯಲೆತ್ನಿಸಿದ ವಿಶಿಷ್ಟಾದ್ವೈತ ತನ್ನ ಭಕ್ತ/ಮತಾವಲಂಬಿಗಳ ವಿಚಾರದಲ್ಲಿ ಜಾತಿ ನಿಯಮಗಳ ಸಡಿಲಿಕೆಯನ್ನು ಅನುಸರಿಸಿ ತನ್ನ ತೆಕ್ಕೆಗೆ ಸಮಾಜದ ಬಹುಸಮುದಾಯಗಳನ್ನು ಸೆಳೆದುಕೊಂಡಿತು. ಸ್ವಮತ ಕೇಂದ್ರಿತ ಭಕ್ತಿ ಆಂದೋಲನವನ್ನು ಹುಟ್ಟುಹಾಕುವಲ್ಲಿ ಇದು ಚಾರಿತ್ರಿಕ ಯಶಸ್ಸು ಕೂಡ ಪಡೆಯಿತು. ಇದರಿಂದ ಪ್ರೇರಿತವಾದ ಶಕ್ತಿ ವಿಶಿಷ್ಟಾದ್ವೈತ ಮತ ಅವೈದಿಕ ನಾಥಪಂಥ ವಿಚಾರಧಾರೆಯನ್ನು ತನ್ನ ಬೆನ್ನೆಲುಬಾಗಿಸಿಕೊಂಡಿತು, ಎಲ್ಲ ಜಾತಿಮೂಲಗಳಿಂದ ಮತಾಂತರಗೊಂಡ ಶಿವಭಕ್ತರ ಪಡೆಯ ಮೂಲಕ ಶರಣ ಚಳವಳಿ ಜಯಭೇರಿ ಬಾರಿಸಿತು, ವೈದಿಕ ವೈಷ್ಣವ ಬ್ರಾಹ್ಮಣ ಮತಕ್ಕೆ ಸೆಡ್ಡುಹೊಡೆದು ತನ್ನ ಬಲವನ್ನು ತೋರಿಸಿತು. ಇದರಿಂದ ಉತ್ತೇಜನಗೊಂಡ ಮಧ್ವರ ದ್ವೈತಮತ ಶರಣ ಚಳವಳಿಯ ಜನಮನ ಗೆಲ್ಲುವ ತಂತ್ರೋಪಾಯಗಳನ್ನೆಲ್ಲ ತನ್ನದಾಗಿಸಿಕೊಂಡು, ಹರಿದಾಸ ಆಂದೋಲನ ಹುಟ್ಟುಹಾಕಿತು. ಆದರೂ ವೈಷ್ಣವ ಬ್ರಾಹ್ಮಣರ ಶ್ರೇಷ್ಠತೆ ಮತ್ತು ಅದಕ್ಕೆ ಪೂರಕವಾಗಿ ಸಮಾಜೋ–ಧಾರ್ಮಿಕ ಉನ್ನತ ಸ್ಥಾನಮಾನಗಳ ಪ್ರತಿಪಾದನೆ ಮೂಲಕ ತನ್ನ ನಿರಂಕುಶ ಮತ್ತು ಆಕ್ರಮಣಕಾರಿ ಮನೋಭಾವವನ್ನು ಸ್ಥಿರಪಡಿಸಿತು. ಆದರೆ ವೈದಿಕ ಪಾರಮ್ಯ ತಾತ್ವಿಕ ನೆಲೆಗಟ್ಟನ್ನು ಸಮರ್ಥವಾಗಿ ಪ್ರಶ್ನೆ ಮಾಡಿದುದೂ ಬಹುಸಮುದಾಯ ಕೇಂದ್ರಿತ ಸಮಾಜದ ಜೀವನಮೌಲ್ಯಗಳನ್ನು ಕಟ್ಟಿಕೊಟ್ಟಿದುದೂ ಹರಿದಾಸ ಪರಂಪರೆಯ ಗಟ್ಟಿಕಾಳೆಂದು ಪರಿಗಣಿತವಾಗಿರುವ ಕನಕರ ಭಕ್ತಿ ಕುರಿತ ಚಿಂತನಾ ಕ್ರಮ ಮಾತ್ರ. ಇದು ಅನುಭವ ನಿಷ್ಠೆ, ಪ್ರಖರ ವಾಸ್ತವ ದೃಷ್ಟಿ, ದಿಟ್ಟ ಸಾಮಾಜಿಕ ಪ್ರಜ್ಞೆ, ಮಾನವ ಕೇಂದ್ರಿತ ಚಿಂತನೆಗಳಿಂದ ಕೂಡಿದ್ದು ಸ್ವತಂತ್ರ ಚಿಂತನೆಯ ಸ್ವರೂಪವನ್ನು ಪಡೆಯಿತು ಮತ್ತು ವೈದಿಕ ಕೇಂದ್ರಿತ ಭಕ್ತಿ ಕಲ್ಪನೆಯನ್ನು ಅಪಮೌಲ್ಯೀಕರಿಸಿತು.

**ಲೋಕದೃಷ್ಟಿ:** ಪ್ರಧಾನ ಕಲ್ಪನೆ ಅಧೀನ ಕಲ್ಪನೆಯನ್ನು ಅವಲಂಬಿಸಿದೆ ಮತ್ತು ಆಧರಿಸಿದೆ. ಅಧೀನವಾದುದು ಇಲ್ಲದಿದ್ದರೆ ಪ್ರಧಾನವಾದುದರ ಅಸ್ತಿತ್ವವೇ ಇರುವುದಿಲ್ಲ. ಹಾಗಾಗಿ ಅಧೀನ ಸ್ವತಂತ್ರವಾಗಿದೆ. ಪ್ರಜೆಗಳಿಲ್ಲದೆ ಪ್ರಭುತ್ವವಿಲ್ಲವೆಂದು ಈ ಚಿಂತನಾ ಕ್ರಮವನ್ನು ಆಧುನಿಕ ಪದರೂಪಗಳಲ್ಲಿ ಹೇಳಬಹುದು. ಕನಕರ ಈ ಲೋಕದೃಷ್ಟಿಯ ಸತ್ಯ ವಸಾಹತು ಕಾಲದಲ್ಲಿ ಗಾಂಧಿಗೂ ತಿಳಿದಿತ್ತು, ಬ್ರಿಟಿಷರಿಗೂ ತಿಳಿದಿತ್ತು. ಹಾಗಾಗಿ ಗಾಂಧಿಯ ಅಸಹಕಾರ ಆಂದೋಲನ ಯಶಪಡೆಯಿತು. ಬ್ರಿಟಿಷರು ಆಳಿಸಿಕೊಳ್ಳುವವರ ಒಪ್ಪಿಗೆಯಿಲ್ಲದೆ ಆಳಿಕೆ ನಡೆಸಲು ಅಸಮರ್ಥರಾಗಿ ಪರಮಪದದಿಂದ ಹೊರನಡೆದರು.

**ಸಮಾಜ:** ಮನು ನಿರೂಪಿಸಿರುವ ಮತ್ತು ಬ್ರಾಹ್ಮಣರು ಪರಂಪರಾಗತವಾಗಿ ಪ್ರತಿಪಾದಿಸಿಕೊಂಡು ಬಂದಿರುವ ಬ್ರಾಹ್ಮಣ ಪುರುಷ ಕೇಂದ್ರಿತ ಹಿತಾಸಕ್ತಿ ಪ್ರಧಾನವಾದ ಶ್ರೇಣೀಕೃತ ವ್ಯವಸ್ಥೆಯುಳ್ಳ ಸಮಾಜದಲ್ಲಿ ಸರ್ವರು ಸರ್ವ ಸ್ವತಂತ್ರರು, ಸಮಾನ ಅವಕಾಶ ಪಡೆಯಲು ಅರ್ಹರು ಎಂಬ ಅಂಶವನ್ನು ಒಳಗೊಂಡಿದೆ.

**ರಾಜಕೀಯ:** ಮಧ್ವಮತ ಪ್ರಣೀತ ದೈವಗಳು, ಮಧ್ವತತ್ವ ಪ್ರತಿಪಾದಕ ವೈದಿಕ ಭೂಸುರರು ಸರ್ವಶಕ್ತ ದೈವವೆಂದೂ ದೀನರು, ಅಧೀನರು, ಅವೈದಿಕ ಸಮುದಾಯಗಳು ಹರಿದಾಸ ಭಕ್ತರೆಂದೂ ವೈಷ್ಣವ ಭಕ್ತಿ ವ್ಯಾಸಕೂಟ ಮತ್ತು ದಾಸಕೂಟಗಳನ್ನು ಹುಟ್ಟುಹಾಕಿತ್ತು. ಹೀಗೆ ದೈವ ಕೇಂದ್ರಿತ ಭಕ್ತಿ ಕಲ್ಪನೆ ಶ್ರೇಣೀಕೃತ ಸಮಾಜದಲ್ಲಿ ಬ್ರಾಹ್ಮಣರ ಪರಮಪದ ಒಪ್ಪಿಕೊಳ್ಳುವಂತೆಯೂ ಹಾಗೆ ಒಪ್ಪಿಕೊಂಡವರು ದಾಸ್ಯತನದಲ್ಲುಳಿಯುವ ತಂತ್ರೋಪಾಯ ಒಳಗೊಳ್ಳುವಂತೆಯೂ ಇತ್ತು. ಕನಕರ ಭಕ್ತಿ ಕಲ್ಪನೆ ದೀನರು, ಅಧೀನರು ಮತ್ತು ಅವೈದಿಕ ಕೇಂದ್ರಿತವೂ ಆಗಿದ್ದು ಆಳುವ-ಆಳಿಸಿಕೊಳ್ಳುವ ಚಿಂತನಕ್ರಮ ಪಲ್ಲಟಗೊಂಡ ಭಕ್ತ ಕೇಂದ್ರಿತ ಚಿಂತನಾಕ್ರಮವಾಗಿ ಸಾಕಾರಗೊಂಡಿದೆ.

**ಯಜಮಾನಿಕೆ:** ಜಾತಿ ಶ್ರೇಣೀಕರಣ ಪ್ರತಿಪಾದಿತ ವೈದಿಕಶಾಹಿ ಚಿಂತನ ಕ್ರಮವಾಗಿದ್ದು, ಸ್ವಕೇಂದ್ರಿತ ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ, ರೂಢಿಸುತ್ತದೆ, ಆಚರಣೆಗೆ ತರುತ್ತದೆ. ಇದು ದೈವ ಪರವಾಗಿಯೂ ಭಕ್ತರ ಪರ ನಿರ್ಲಿಪ್ತವಾಗಿಯೂ ನಿಲುವು ತಳೆದು ಅಂತಿಮವಾಗಿ ಸಾಂಸ್ಕೃತಿಕ ಯಜಮಾನಿಕೆಯೆ ಆಗಿರುತ್ತದೆ. ಕನಕರ ಚಿಂತನೆ ಇದನ್ನು ತದ್ವಿರುದ್ಧ ಸ್ಥಿತಿಯಲ್ಲಿ ಮಂಡಿಸುತ್ತದೆ.

**ನಿರಸನ:** ಈ ಕಲ್ಪನೆ ಸ್ಥಾಪಿತ ತತ್ವ ಚಿಂತನೆಗಳು ಮತ್ತು ಜೀವನ ಮೌಲ್ಯಗಳನ್ನು ಅಪಮೌಲ್ಯೀಕರಿಸುತ್ತದೆ. ಕನಕರ ಚಿಂತನೆಗಳಲ್ಲಿ ಉದಾಹರಣೆಗೆ ಸಸ್ಯಾಹಾರ ಕಲ್ಪನೆಗೂ ಮಾನವನ ಶ್ರೇಷ್ಠತೆ ಕಲ್ಪನೆಗೂ ತಳುಕು ಹಾಕಿರುವ ಸಾಮಾಜಿಕ ಜೀವನಮೌಲ್ಯವನ್ನು ನೋಡಬಹುದು. ಪ್ರಕೃತಿ ನಿಯಮಾನುಸಾರ ಮಾನವ ಶುದ್ಧ ಸಸ್ಯಾಹಾರಿಯಾಗಲೀ ಶುದ್ಧ ಮಾಂಸಾಹಾರಿಯಾಗಲೀ ಆಗಿರದೆ ಮಿಶ್ರಾಹಾರಿಯಾಗಿದ್ದಾನೆ. ಮಾನವರ

ಗುಣಸ್ವಭಾವಗಳಲ್ಲಿ ವ್ಯತ್ಯಾಸಗಳಿದ್ದರೂ ಮಾನವರಲ್ಲಿ ಶ್ರೇಷ್ಠರು ಕನಿಷ್ಠರು ಇಲ್ಲ. ಈ ವಾಸ್ತವ ಅಂಶಗಳಿಗೆ ಬದಲಾಗಿ ಸಾಮಾಜಿಕ ಜೀವನದಲ್ಲಿ ಕೆಲವರ ಹಿತಾಸಕ್ತಿಗನುಗುಣವಾಗಿ ಸಸ್ಯಾಹಾರ-ಮಾಂಸಾಹಾರ ಸೇವನೆಗೆ ಪೂರಕವಾಗಿ ಶ್ರೇಷ್ಠತೆ-ಕನಿಷ್ಠ ಕಲ್ಪನೆಗಳನ್ನು ಸಮಾಜದ ಜೀವನಮೌಲ್ಯಗಳಾಗಿ ರೂಢಿಸಲಾಗಿದೆ. ಸಮಾಜದ ಈ ಕೃತಕ ಜೀವನಮೌಲ್ಯಗಳನ್ನು ಅಪಮೌಲ್ಯೀಕರಿಸಿ ಪ್ರಾಕೃತಿಕ ನಿಯಮದನ್ವಯ ವಾಸ್ತವ ಜೀವನಮೌಲ್ಯಗಳ ವಿಚಾರವನ್ನು ಕನಕರ ಚಿಂತನೆ ಸಾರುತ್ತದೆ. ಇಂಥ ಒಂದು ಪ್ರಯತ್ನದಲ್ಲಿ ಸಮಾಜದಲ್ಲಿ ಸ್ಥಾಪಿತವಾದ ಸಸ್ಯಾಹಾರ ಕ್ರಮ ಒಳಗೊಂಡಿರುವ ಮಿಶ್ರಾಹಾರ ಕ್ರಮವನ್ನು ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು ವಸುಧೆಯೊಳಗೆ ಭೂಸುರರುಣಲಿಲ್ಲವೆ? ಎಂಬ ಸಾಲು ಸಾರಿ ಹೇಳುತ್ತದೆ. ಮಾನವ ಶುದ್ಧ ಸಸ್ಯಹಾರಿಯಾಗಿರದೆ ಮಿಶ್ರಾಹಾರಿಯಾಗಿದ್ದಾನೆ ಎಂಬುದನ್ನು ಆಧುನಿಕ ಕಾಲದಲ್ಲಿ ಗಾಂಧೀ ತಮ್ಮ ಸತ್ಯದ ಪ್ರಯೋಗಗಳ ಮೂಲಕ ಮತ್ತೆ ಒಪಿಕೊಂಡಿದ್ದಾರೆ.

ಭಕ್ತಿ ಎಂಬುದು ಸ್ವಮತ ಪ್ರತಿಪಾದನೆ ಮತ್ತು ಪ್ರಚಾರಾಂದೋಲನದ ತಂತ್ರ/ ಮೆಥಡಾಲಜಿ ಎಂಬುದನ್ನು ಕಾಲಕ್ರಮದಲ್ಲಿ ಗ್ರಹಿಸಿಕೊಂಡಿದ್ದ ಕನಕರಿಗೆ ಅನ್ಯಮತ ಕೇಂದ್ರಿತ ಪ್ರತಿಪಾದನೆ ಮತ್ತು ಪ್ರಚಾರಾಂದೋಲನದ ಚೌಕಟ್ಟಿನಲ್ಲಿ ಮಾನವ ಕೇಂದ್ರಿತವಾದ ತಮ್ಮ ಸ್ವತಂತ್ರ ಚಿಂತನೆಗಳ ಮಂಡನೆ ಮತ್ತು ಪ್ರಚಾರ ಕೈಗೊಳ್ಳುವ ಕ್ರಮವಾಗಿತ್ತು. ಹಾಗಾಗಿಯೆ ಧಾರ್ಮಿಕ ಮತ್ತು ಸಾಮಾಜಿಕ ಜೀವನ ಮೌಲ್ಯಗಳ ಹೇರಿಕೆ ವಿರುದ್ಧ ಅವರ ಖಡಾಖಂಡಿತ ನಿಲುವು ದಾಖಲಾಗಿದೆ. ಅಂದರೆ ಕನಕರ ಚಿಂತನೆಗಳು ಆಳುವವರ ಬೆನ್ನಿಗೆ ನಿಲ್ಲುವ ಬದಲು ಆಳಿಸಿಕೊಳ್ಳುವವರ ಗಟ್ಟಿದನಿಯಾಗಿ ಹೊರಹೊಮ್ಮಿವೆ. ಅವರ ಕೃತಿಗಳು ಪುರಾಣ ಕತೆಗಳನ್ನು ಪುನಾರಚನೆ ಮಾಡುವ ಪ್ರಕ್ರಿಯೆಯ ಭಾಗವಾಗಿ ಒಡಮೂಡಿದ್ದು, ಓದುಗ/ ಕೇಳುಗರನ್ನು ಪುನರಾವಲೋಕನ ಮಾಡಲು ಪ್ರೇರೇಪಿಸುತ್ತವೆ, ಒತ್ತಾಯಿಸುತ್ತವೆ, ಸ್ವತಂತ್ರ ಆಲೋಚನೆಯನ್ನು ಉದ್ದೀಪಿಸುತ್ತವೆ. ದೈವ ಕೇಂದ್ರಿತ ಭಕ್ತಿ ಚಳವಳಿಯಲ್ಲಿ ಮೂಡಿಬಂದ ಕನಕರ ಮಾನವ ಕೇಂದ್ರಿತ ಚಿಂತನೆಗಳು ಭಾರತದ ನಿಜವಾದ ರೆನೈಸಾನ್ಸ್‌ನ ಕನಸು ಹೊತ್ತ ಸಮಾಜ ಸುಧಾರಕರಿಗೆ ಕೊಡುಗೆಯಾಗಿ ಒದಗಿ ಬಂದ ಕಪ್ಪೆಚಿಪ್ಪಿನೊಳಗಿನ ಮುತ್ತುಗಳಾಗಿವೆ. ದೈವ ಕೇಂದ್ರಿತ ತರತಮ ಪುರಾಣ ಜಗತ್ತಿನಿಂದ ಮಾನವ ಕೇಂದ್ರಿತ ಸಾಮಾಜಿಕ ಸಮಾನ ಜಗತ್ತಿನೆಡೆಗೆ ಚಾಚಿ ನಿಂತ ಕೈಮರಗಳಾಗಿವೆ. ಹೀಗಿದ್ದರೂ ಕನಕರ ಕೃತಿಗಳು ಜಾತಿ ಮನಸ್ಸುಗಳಲ್ಲಿ ಅತಿ ವಿರೋಧ ಮತ್ತು ವೈಭವೀಕರಣಕ್ಕೆ ಒಳಗಾಗಿರುವುದು ಬಹುಸಮುದಾಯಗಳ ಸಮಾಜದ ದುರಂತವಾಗಿದೆ.

## ಭಕ್ತಿಯೆಂಬ ಲೋಕದೃಷ್ಟಿಯಾಗಿ ಕನಕರ ಚಿಂತನೆಗಳು – ಆತ್ಮ ಸಾಂಗತ್ಯದ ಮೂಲಕ ಸಮುದಾಯದತ್ತ

–ಡಾ. ಸಬಿತಾ ಬನ್ನಾಡಿ

ಕನಕರನ್ನು ಭಕ್ತ ಎಂದು ಪರಿಗಣಿಸಬಹುದೋ ಅಥವಾ ಅನುಭಾವಿ ಎಂದು ಪರಿಗಣಿಸಬಹುದೋ ಎಂಬ ಪ್ರಶ್ನೆಹಾಕಿಕೊಂಡರೆ ಸಮುದಾಯದ ಜೊತೆ ಹೆಚ್ಚು ಬೆರೆತ ಅವರು ಅನುಭಾವಿಯ ಮಟ್ಟಕ್ಕೇರಿದರೂ ಭಕ್ತನಾಗಿ ಇರಬಯಸಿದ ವ್ಯಕ್ತಿಯಾಗಿ ಕಾಣುತ್ತಾರೆ. ಕನ್ನಡ ಪ್ರಜ್ಞೆಗೆ ಅನುಭಾವ ಎಂದ ಕೂಡಲೇ ನೆನಪಾಗುವುದು ಅಲ್ಲಮ. ಸಾಧಾರಣವಾಗಿ ಅಕ್ಕ, ಬಸವ, ಕನಕರನ್ನು ಭಕ್ತರೆಂದೇ ಭಾವಿಸಲಾಗುತ್ತದೆ. ಆತ್ಮಸಾಂಗತ್ಯವನ್ನು ಸಾಧಿಸಿದ ಕನಕ ಇಹದ ಭೋಗಗಳನ್ನು ನಿರಾಕರಿಸಿ ಸಂತನಾದವನು. ಆದರೆ ಊರೂರು ತಿರುಗಿ ಜನರೊಂದಿಗೆ ಬೆರೆತವನು. ಭಕ್ತಿಯಾಗಲೀ, ಅನುಭಾವವಾಗಲೀ ಆತನಿಗೆ ಕೇವಲ ವೈಯಕ್ತಿಕ ಸಾಧನೆಗೆ ಸಾಧನವಲ್ಲ. ಹೀಗೆ ಸಮುದಾಯದೊಂದಿಗೆ ಬೆರೆಯುವುವದು ಭಕ್ತಿ ಪಂಥದ ಪ್ರಮುಖ ಲಕ್ಷಣಗಳಲ್ಲೊಂದು.

ಭಕ್ತಿಯೆಂಬುದು ಒಂದು ಲೋಕದೃಷ್ಟಿ. ಇದು ತನ್ನದೇ ರೀತಿಯಲ್ಲಿ ಲೋಕವನ್ನು ಅರ್ಥೈಸಿಕೊಳ್ಳುತ್ತದೆ. ಇದಕ್ಕೆ ತನ್ನದೇ ಆದ ಕಟ್ಟುಪಾಡುಗಳಿವೆ. ಭಕ್ತಿ ಮಾರ್ಗ ವ್ಯಕ್ತಿಯಿಂದ ಸಮುದಾಯದ ಕಡೆಗೆ ಚಲಿಸುವಂತದಾಗಿದ್ದು ಇದಕ್ಕೆ ಪ್ರತಿ ವ್ಯಕ್ತಿಯೂ ಸಾದನೆಯ ದಾರಿಯಲ್ಲಿ ನಡೆಯಬೇಕಾದ್ದು ಬಹಳ ಮುಖ್ಯ. ಈ ಮೂಲಭೂತ ಅಂಶಗಳನ್ನು ಅರಿಯದೇ ದಾಸ ಅಥವಾ ಶರಣ ಪಂಥದ ಸಾಮಾಜಿಕ ನಿಲುವನ್ನು ಅರಿಯಲು ಸಾಧ್ಯವಾಗುವುದಿಲ್ಲ. ಇಂದಿನ ನಮ್ಮ ಅವಶ್ಯಕತೆಗಳಿಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಅಲ್ಲಿಂದ ಎರವಲು ತಂದು ನಮ್ಮ ನಿಲುವಿಗೆ ವಿರುದ್ಧವಾದ ವಿಚಾರಗಳು ಬಂದಿದ್ದರೆ ಅದನ್ನು ವೈರುಧ್ಯವೆಂದೋ ಅಥವಾ ಅವುಗಳ ಕುರಿತು

ಜಾಣ ಮರೆವನ್ನು ನಟಿಸಿಯೋ ನಾವು ಭಕ್ತಿ ಪಂಥವನ್ನು ಅರಿಯುವುದು ಸಾಧ್ಯವಿಲ್ಲ. ಯಾಕೆಂದರೆ ಇಂದು ನಾವು ಲೋಕವನ್ನು ಅರಿಯುವ ಅಸ್ತ್ರಗಳು ಬೇರೆಯಾಗಿರುವುದರಿಂದ ಅವರು ಹೇಳುವ ಕೆಲವು ವಿಚಾರಗಳ ಕುರಿತು ನಮಗೆ ಅಸಮ್ಮತಿ ಇದ್ದರೆ ಅದು ಸಹಜವೇ ಆಗಿರುತ್ತದೆ. ಇಂದು ನಾವು ಸಂಪತ್ತಿನ ಸಮಾನ ಹಂಚಿಕೆ ಬಗ್ಗೆ ಮಾತನಾಡುತ್ತಿದ್ದರೆ ಅಂದು ಅವರು ಸಂಪತ್ತಿನ ನಿರಾಕರಣೆಯ ಮೂಲಕ ಸಮಾನತೆಯ ಮಾತನ್ನಾಡುತ್ತಿದ್ದರು ಎನ್ನುವುದನ್ನು ಮರೆಯುವಂತಿಲ್ಲ. ಮೂಲತಃ ಭಕ್ತಿಯೆಂಬ ಲೋಕದೃಷ್ಟಿಯು ಇರುವುದನ್ನು ಅರಿಯುವುದು ಮತ್ತು ತೊರೆಯುವುದು ಎಂಬ ನೆಲೆಯಲ್ಲಿ ಕೆಲಸ ಮಾಡುತ್ತಿರುತ್ತದೆ. ಶರಣರಂತೆ ದಾಸರಲ್ಲೂ ಕೂಡ ಅವರ ಚಿಂತನೆಯ ಮೂಲಧಾತು ಅವರು ನಂಬುವ ದೇವರೇ. ಇಡೀ ಲೋಕವನ್ನು ಅವರು ತಾವು ಏಕಭಾವದಿಂದ ನಂಬುವ ದೇವರ ಮೂಲಕವೇ ಗ್ರಹಿಸಿಕೊಳ್ಳುತ್ತಾರೆ. ಹೀಗಾಗಿ ಅವರ ರಚನೆಗಳೆಲ್ಲವೂ ಅವರು ನಂಬುವ ದೇವರ ಜೊತೆಗಿನ ಮುಖಾಮುಖಿಯಾಗಿರುತ್ತದೆ. ದಾಸರು ಹೀಗೆ ಲೋಕದ ಮೂಲಕ ವಿಷ್ಣುವನ್ನು ನೋಡದೇ ವಿಷ್ಣುವಿನ ಮೂಲಕ ಲೋಕವನ್ನು ನೋಡುತ್ತಾರೆ.

ಭಾರತದಲ್ಲಿ ಕ್ರಿ.ಶ.6ನೇ ಶತಮಾನದ ನಂತರದಲ್ಲಿ ಭಕ್ತಿ ಚಳುವಳಿಗಳು ಕಂಡು ಬರುತ್ತವೆ. ಭಕ್ತಿಯ ಬಗೆಗೆ ಉಲ್ಲೇಖಗಳು ವೇದ, ಉಪನಿಷತ್ತು, ಸ್ಮೃತಿ, ಪುರಾಣ ಮತ್ತು ಸೂತ್ರಗಳಲ್ಲಿ ಕಾಣಿಸುತ್ತವೆ. 'ಭಕ್ತಿ'ಯ ಕುರಿತಾದ 'ನಾರದ ಸೂತ್ರ' ಹಾಗೂ 'ಶಾಂಡಿಲ್ಯ ಸೂತ್ರ'ಗಳ ನಿರೂಪಣೆಗಳು ಕುತೂಹಲಕರವಾಗಿವೆ.

'ಶಾಂಡಿಲ್ಯ ಭಕ್ತಿ ಸೂತ್ರ'ವು ಭಕ್ತಿಯನ್ನು 'ಪರಾಭಕ್ತಿ' ಎಂದು ಕರೆದು ಆ ಭಕ್ತಿಯು ಪರಾನುರಕ್ತಿ ರೂಪವಾದುದೆಂದು ಬಣ್ಣಿಸುತ್ತದೆ. ಲೌಕಿಕ ವಸ್ತುಗಳಲ್ಲಿ ನಾವು ತೋರಿಸುವ ಅನುರಕ್ತಿ ಅಥವಾ ಅನುರಾಗವು ಭಕ್ತಿ ಎಂದೆನಿಸುವುದಿಲ್ಲ. ದೇವರಲ್ಲಿ ನಾವು ತೋರಿಸುವ ಅತ್ಯುತ್ಕಟವಾದ (ಪರಾ) ಅನುರಕ್ತಿಯೇ ಭಕ್ತಿ ಎಂದು ಶಾಂಡಿಲ್ಯ ಸೂತ್ರವು ಸ್ಪಷ್ಟಪಡಿಸುತ್ತದೆ. ಲೌಕಿಕ ವಸ್ತುಗಳಲ್ಲಿ ತೋರಿಸುವ ಅನುರಕ್ತಿ ಸಾಂಸಾರಿಕ ಬಂಧನಕ್ಕೆ ಕಾರಣವಾದದ್ದು. ಆದರೆ ಭಗವಂತನಲ್ಲಿ ತೋರಿಸುವ ಅನುರಕ್ತಿ ಸಂಸಾರದಿಂದ ವಿಮೋಚನೆಗೆ ಕಾರಣವಾದದ್ದು. ಆದ್ದರಿಂದ ಅಂತಹ ಅನುರಕ್ತಿಯನ್ನು ಮಾಡದೆ ಇರಬಾರದೆಂದು ಶಾಂಡಿಲ್ಯ ಸೂತ್ರವು ಹೇಳುತ್ತದೆ. ( ಡಿ.ಪ್ರಹ್ಲಾದ ರಾವ್; ಸಂ:ರಹಮತ್ ತರೀಕೆರೆ; ಧರ್ಮ, ವಿಶ್ವಕೋಶ, 2000;ಪು:255)

ಭಕ್ತಿಯು ಮೂಲಭೂತವಾಗಿ ಒಂದೇ ಆದರೂ ಬೇರೆ ಬೇರೆ ನಿಮಿತ್ತಗಳಿಂದ ಅದು 11 ವಿಧಗಳೆಂದು ನಾರದ ಭಕ್ತಿಸೂತ್ರವು ಹೇಳುತ್ತದೆ. ಅವುಗಳೆಂದರೆ 1.ಗುಣಮಹಾತ್ಮ್ಯಾಸಕ್ತಿ 2. ರೂಪಾಸಕ್ತಿ 3. ಪೂಜಾಸಕ್ತಿ 4. ಸ್ಮರಣಾಸಕ್ತಿ 5.ದಾಸ್ಯಾಸಕ್ತಿ 6.ಸಖ್ಯಾಸಕ್ತಿ 7. ವಾತ್ಸಲ್ಯಾಸಕ್ತಿ 8.ಕಾಂತಾಸಕ್ತಿ 9.ಆತ್ಮನಿವೇದನಾಸಕ್ತಿ 10.ತನ್ಮಯಾಸಕ್ತಿ 11.ಪರಮ ವಿರಹಾಸಕ್ತಿ.

ಕನ್ನಡ ನಾಡಿನಲ್ಲಿ ನಡೆದು ಹೋದ ಶರಣ ಮತ್ತು ದಾಸ ಪಂಥಗಳನ್ನು ನಾವು ಮತ್ತೆ ಮತ್ತೆ ಜೊತೆ ಜೊತೆಯಲ್ಲೇ ನೆನಪಿಸಿಕೊಳ್ಳುತ್ತೇವಾದರೂ, ಹೋಲಿಸುತ್ತೇವಾದರೂ ಅವೆರಡರ ಸ್ವರೂಪದಲ್ಲಿ ಕೆಲವು ವ್ಯತ್ಯಾಸಗಳಿವೆ. ವಚನ ಚಳುವಳಿಯ 'ಅನುಭವ ಮಂಟಪ'ದ ಪರಿಕಲ್ಪನೆಯಲ್ಲಿ ಅದರ ಪ್ರವೇಶಕ್ಕೆ ಗುರುಶಿಷ್ಯ ಸಂಬಂಧದ ನಿಯಮಗಳಿಲ್ಲ. ಅದು ಭಕ್ತರಾಗ ಬಯಸುವವರಿಗೆಲ್ಲಾ ಮುಕ್ತ ಪ್ರವೇಶ ನೀಡುತ್ತಿತ್ತು. ಆದರೆ ದಾಸರಲ್ಲಿ ದಾಸಕೂಟ, ವ್ಯಾಸಕೂಟದ ಪರಿಕಲ್ಪನೆ ಇದ್ದು ಇದು ಗುರುಶಿಷ್ಯ ಸಂಬಂಧದ ಮೂಲಕ ವಿಸ್ತರಿಸಿಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಶರಣರಿಗಿಂತ ದಾಸರಿಗೆ ಸ್ವಾತಂತ್ರ್ಯ ಕಡಿಮೆಯೆಂದೇ ಹೇಳಬಹುದು.

ಇದರಲ್ಲಿ ದಾಸಪಂಥವು ಅನುಸರಿಸುವುದು ದಾಸ್ಯಾಸಕ್ತಿಯನ್ನು. ದಾಸ್ಯಾಸಕ್ತಿ ಎಂದರೆ, ದೇವನ ಅನಂತ ಸದ್ಗುಣಗಳನ್ನು ಅರಿತು ಅವನ ದಾಸನು ತಾನೆಂಬ ಭಾವನೆಯನ್ನು ಹೊಂದುವುದು.(ಅದೇ; ಪು:255) ಹೀಗೆ ಇಂತಹ ಹಂತ ತಲುಪಿದವರನ್ನು ಮಾತ್ರ ದಾಸರು ಭಕ್ತರೆಂದು ಒಪ್ಪಿಕೊಳ್ಳುತ್ತಾರೆ. ಕನಕದಾಸರ ಕೀರ್ತನೆಯೊಂದು ಹೀಗಿದೆ:

ಹ್ಯಾಂಗೆ ನೀ ದಾಸನಾದಿ ಪ್ರಾಣಿ
ಹ್ಯಾಂಗೆ ದಾಸನಾದಿ ಹೀಂಗೆ ಸಂಸಾರದೊಳು
ಮಂಗನಂದದಿ ಭಂಗಪಡುವವ
ಆಸೆಯ ಬಿಡಲಿಲ್ಲ ಕಾಸುಗಳಿಸುವೆಯಲ್ಲ
ದೋಷಕ್ಕೆ ಗುರಿಯಾಗಿ ಹೇಸಿಕೆಯೊಳು ಬಿದ್ದು
ತನುವು ನನ್ನದು ಎಂದು ತನಯ ಮಾನಿನಿಯರೆ
ಇನಿತು ಎನಗೆ ಗತಿಯೆಂಬುವ ಮೂಢನೆ
. . . . .
ಕಾಲುಗೆಜ್ಜೆಯ ಕಟ್ಟಿ ಮೇಲೆ ಕರತಾಳ ಪಿಡಿದು
ಶ್ರೀ ಲೋಲನ ಗುಣ ಪೊಗಳಿ ನಟಿಸದಲೆ
ಕುಣಿದು ಹರಿಯ ಮುಂದೆ ಮಣಿದು ಸಜ್ಜನ ಪದಕೆ
ಅಣಿಮಾದ್ಯಷ್ಟಸಿದ್ಧಿ ಕೈಗೊಳ್ಳದವನಾಗಿ
. . . . .
ಪಕ್ಷಿವಾಹನನ ಗುಣ ಲೆಕ್ಕಿಸಿ ಪೊಗಳದೆ
ಬೆಕ್ಕಸ ಬೆರಗಾಗಿ ಅಕ್ಕಿಗೆ ತಿರುಗುವವ
ಭೋಗಿಶಯನನನುರಾಗದಿ ಭಜಿಸದೆ
ಕಾಗಿನೆಲೆಯಾದಿಕೇಶವರಾಯನೆನದೆ
ಹ್ಯಾಂಗೆ ನೀ ದಾಸನಾದಿ . . .

(ಜನಪ್ರಿಯ ಕನಕ ಸಂಪುಟ; ಪ್ರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ;1989; ಪು: 92)

ಮೇಲಿನ ಭಾವ ನೆಲೆಯೂರುವುದು ಲೌಕಿಕದ ಆಸೆಗಳನ್ನು ತ್ಯಜಿಸಿದ ಮೇಲೆಯೇ. ಹೀಗಾಗಿ, ದಾಸಪಂಥವು ಭಕ್ತರಿಂದ ಲೌಕಿಕದ ಆಸೆಯನ್ನು ಮೀರುವುದನ್ನು ನಿರೀಕ್ಷಿಸುತ್ತದೆ. ಮಾತ್ರವಲ್ಲ ಭಕ್ತಿ ಎಂಬ ಪರಿಕಲ್ಪನೆಯು ಈ ಭೂಮಿಯ ಮೇಲಿನ ಎಲ್ಲ ವಸ್ತು ವಿಷಯವನ್ನು ಸಮಾನವಾಗಿ ಪರಿಗಣಿಸುತ್ತದೆ. ಇದು ಭೇದ ಭಾವವನ್ನು ಮಾಡುವುದಿಲ್ಲ. ನಾರದ ಸೂತ್ರ ಮತ್ತು ಶಾಂಡಿಲ್ಯ ಸೂತ್ರಗಳು ಇದನ್ನು ಸ್ಪಷ್ಟವಾಗಿ ಹೇಳುತ್ತವೆ. "ಭಕ್ತರಲ್ಲಿ ಜಾತಿ, ವಿದ್ಯೆ, ರೂಪ, ಕುಲ, ಧನ, ಕರ್ಮ ಮುಂತಾದವುಗಳಿಂದ ಯಾವ ಭೇದವೂ ಇರಲಾರದು. ಏಕೆಂದರೆ ಭಕ್ತರೆಲ್ಲರೂ ಭಗವಂತನಿಗೆ ಆತ್ಮೀಯರು ಎಂದು ನಾರದ ಭಕ್ತಿ ಸೂತ್ರ ಹೇಳಿದರೆ, ಎಲ್ಲ ಮಾನವರೂ, ಜನರು ಅತ್ಯಂತ ಕೀಳೆಂದು ಹೇಳುವ ಕುಲದಲ್ಲಿ ಹುಟ್ಟಿದವರೂ ಸೇರಿದಂತೆ, ಭಕ್ತಿ ಮಾರ್ಗವನ್ನನುಸರಿಸುವ ಹಕ್ಕನ್ನು ಸಮಾನವಾಗಿ ಪಡೆದಿದ್ದಾರೆ ಎಂಬುದಾಗಿ ಶಾಂಡಿಲ್ಯ ಸೂತ್ರ ಹೇಳುತ್ತದೆ."(ಅದೇ;ಪು: 258)

ಕನಕರ ಕೀರ್ತನೆಗಳಲ್ಲೂ ಮೇಲಿನ ವಿಚಾರಗಳು ಹಾಸುಹೊಕ್ಕಾಗಿರುವುದನ್ನು ಕಾಣಬಹುದು. ಶರಣರನ್ನೂ ಒಳಗೊಂಡು ಭಾರತದಲ್ಲಿ ಹುಟ್ಟಿದ ಎಲ್ಲ ಭಕ್ತಿ ಪಂಥಗಳಲ್ಲೂ ನಾವು ಇಂತಹ ನಿಲುವುಗಳನ್ನು ಗಮನಿಸಬಹುದು. ಅಂದರೆ ಭಕ್ತಿಯೆಂಬುದು ತನ್ನ ಲೋಕದೃಷ್ಟಿಯನ್ನು ಸ್ಪಷ್ಟಪಡಿಸಿಕೊಳ್ಳುವುದನ್ನು ಈ ಮೂಲಕ ಕಾಣಬಹುದು. ಈ ಲೋಕದೃಷ್ಟಿಯು ಲೌಕಿಕದ ಹಲವು ತಲ್ಲಣಗಳಿಗೆ ತನ್ನದೇ ಪರಿಹಾರವನ್ನು ಒದಗಿಸುತ್ತಿರುತ್ತದೆ. ಅದು ಅನುಭಾವದ ರೂಪದಲ್ಲಿ ಒದಗಿ ಬರುತ್ತದೆ. ಹೀಗಾಗಿ, ಅವರು ಲೌಕಿಕದಲ್ಲಿ ಸಾಮಾನ್ಯವಾಗಿ ಜನರು ಯಾವುದಕ್ಕಾಗಿ ಹಂಬಲಿಸಿ ಕೊರಗುತ್ತಿರುತ್ತಾರೋ ಅದನ್ನೇ ನಿರಾಕರಿಸುವುದನ್ನು ಕಾಣಬಹುದು.

ನೆಚ್ಚದಿರು ಸಂಸಾರ ನೆಲೆಯಲ್ಲವೀಕಾಯ
ಅಚ್ಯುತನ ನಾಮವನು ನೆನೆದು ಸುಖಿಯಾಗೋ
ಗಳಿಸದಿರು ಸೀಮೆಯನು ಗಳಿಸದಿರು ದ್ರವ್ಯವನು
ಗಳಿಸದಿರು ನೀ ದುರಿತ ರಾಶಿಗಳನು
ನಳಿನನಾಭನ ದಿವ್ಯನಾಮವನು ನೆನೆನೆನೆದು
ನೆಲೆಯಾದ ಪರಮ ಪದವಿಯನು ಪಡೆಯೊ ಮನವೆ

(ಜನಪ್ರಿಯ ಕನಕ ಸಂಪುಟ:ಪು:79)

ಮೇಲಿನ ಎಲ್ಲ ಚಿಂತನೆಗಳು ಕನಕರ ಆತ್ಮಸಾಂಗತ್ಯದ ಅನುಭಾವದ ಹಾದಿಯನ್ನು ಸ್ಪಷ್ಟ ಪಡಿಸುತ್ತವೆ. ಇಷ್ಟಾಗಿಯೂ ಶರಣರಾಗಲೀ, ದಾಸರಾಗಲೀ ಈ ಭಕ್ತಿ ಸೂತ್ರಗಳಿಗಷ್ಟೇ ಕಟ್ಟು ಬಿದ್ದಿದ್ದಾರೆಂದು ಭಾವಿಸಬೇಕಿಲ್ಲ. ಅವರು ಆ ದಾರಿಯನ್ನು ಆಯ್ಕೆ ಮಾಡಿಕೊಂಡು ಮುಂದೆ ತಮ್ಮ ಅನುಭವಗಳನ್ನು ಬೆಳೆಸಿಕೊಂಡು ತಮ್ಮದೇ ಹಾದಿಯನ್ನು ಕಂಡುಕೊಂಡವರು. ಅವರು ಹಾಗೆ ಕಂಡುಕೊಂಡಿಲ್ಲದೇ ಹೋಗಿದ್ದರೆ, ಇಂದಿನ ನಮ್ಮೊಂದಿಗೆ ಅವರ ಸಂವಾದ

ಮುಂದುವರಿಯುವುದು ಸಾಧ್ಯವಿರಲಿಲ್ಲ. ದಾಸರ ಪದಗಳನ್ನು ಇಂದಿಗೂ ಜನ ನೆನಪಿಸಿಕೊಳ್ಳುವಾಗ ಅವರೇನೂ ಅದನ್ನು ತಮ್ಮ ಜೀವನದಲ್ಲಿ ಚಾಚೂ ತಪ್ಪದೇ ಪಾಲಿಸುವುದಿಲ್ಲ. ಆದರೆ ಅದರೊಳಗೆ ತಮ್ಮದೊಂದು ಗುರುತಿಸಿಕೊಳ್ಳುವಿಕೆಯನ್ನು ಹೊಂದಬಯಸುತ್ತಾರೆ. ಇದಕ್ಕೆ ಕಾರಣ, ಈ ನೆಲದ ಸಾಮಾಜಿಕ ರಚನೆಯೊಳಗಿರುವ ಹಲವು ಅಸಾಂಗತ್ಯಗಳೇ ಆಗಿವೆ. ಇವುಗಳನ್ನು ನಿವಾರಿಸಿಕೊಳ್ಳುವ ತಿಳುವಳಿಕೆಯಾಗಿ ನಾವಿಂದು ವಚನ/ಕೀರ್ತನೆಗಳೆಡೆ ತಿರುಗಿ ನೋಡುತ್ತಿದ್ದೇವೆ. ಅವರ ಅಂದಿನ ದಾರಿ ಬೇರೆ ಇದ್ದರೂ ಅವರು ಎತ್ತಿದ ಸಾಮಾಜಿಕ ಲೋಪಗಳು ಇಂದಿಗೂ ಮುಂದುವರಿದಿದ್ದು – ಬೇರೆ ದಾರಿಯಲ್ಲಿ ಸಾಗುತ್ತಿರುವ ನಾವು ಅವರ ಸಹಾಯವನ್ನು ಪಡೆದು ನಮ್ಮ ಗಮ್ಯ ತಲುಪಲು ಪ್ರಯತ್ನಿಸುತ್ತಿದ್ದೇವೆ.

*

ಆತ್ಮ ಸಾಂಗತ್ಯವೆಂಬುದು ವಸ್ತು ಸಾಂಗತ್ಯವನ್ನು ನಿರಾಕರಿಸುವ ಭಕ್ತಿಯ ದಾರಿ. ವಸ್ತು ಸಾಂಗತ್ಯ ಮೋಹದಿಂದ ಮುಕ್ತವಾದ ಕಾಲವೊಂದು ಎಂದಾದರೂ ಇತ್ತೇ ಎಂದು ಆಲೋಚಿಸಿದರೆ ಬಹುಶಃ ಮನುಷ್ಯ ನಾಗರೀಕತೆಯತ್ತ ಕಾಲು ಹಾಕತೊಡಗಿದ ಮೇಲೆ ಇದು ಹೆಚ್ಚಾಯಿತೇ ಹೊರತು ಕಡಿಮೆಯಂತೂ ಆಗಲಿಲ್ಲ ಎಂಬುದು ವೇದ್ಯವಾಗುತ್ತದೆ. ಆದರೆ ಈ ಮೋಹವು ಹುಟ್ಟುಹಾಕಿದ ಅಮಾನುಷತೆಯನ್ನು ದಾಟಲು, ತಡೆಯಲು ಹಲವು ಪ್ರಯತ್ನಗಳು ಇತಿಹಾಸದುದ್ದಕ್ಕೂ ನಡೆದು ಬಂದಿವೆ ಎಂಬುದೂ ಅಷ್ಟೇ ನಿಜ. ರಾಜರ ಆಳ್ವಿಕೆಯ ಕಾಲದ ವಿದ್ಯಮಾನಗಳನ್ನು ಸುಮ್ಮನೆ ಗಮನಿಸಿದರೂ ಸಾಕು ಈ ವಸ್ತುಸಾಂಗತ್ಯವೆಂಬುದು ಮನುಷ್ಯನನ್ನೇ ಹೇಗೆ ಆಳಿತು ಎಂಬುದು ತಿಳಿಯುತ್ತದೆ. ದಾಸರು ಬಾಳಿಬದುಕಿದ ಕಾಲದ ವಿಜಯನಗರ ಸಾಮ್ರಾಜ್ಯವನ್ನೇ ಉದಾಹರಣೆಯಾಗಿ ತೆಗೆದುಕೊಂಡರೂ ಇದು ಸ್ಪಷ್ಟವಾಗುತ್ತದೆ. ಅವರ ವೈಭವದ ಆಳ್ವಿಕೆಯನ್ನು ಇಂದು ನಾವು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವಾದರೂ ಆ ಹೆಮ್ಮೆಯ ಮೂಲ ಯಾವುದು ಎಂದು ಪರಿಶೀಲಿಸಿದರೆ ಅದು ವಸ್ತು ಸಾಂಗತ್ಯದ ಮೋಹವೇ ಆಗಿರುತ್ತದೆ. ವಸ್ತು ಸಾಂಗತ್ಯವೆಂದರೇನು? ಮನುಷ್ಯ ತನ್ನನ್ನು ತಾನು ತನ್ನ ಸುತ್ತಲ ಜೀವಿಗಳಿಗಿಂತಲೂ ಹೆಚ್ಚಾಗಿ ತನ್ನ ವೈಯಕ್ತಿಕ ಸುಖವನ್ನು ಕಾಪಿಡಲು ಸಹಾಯವಾಗುವ ವಸ್ತುಗಳೊಂದಿಗೆ ಹೆಚ್ಚು ಸಮೀಕರಿಸಿಕೊಳ್ಳುವುದು. ಈ ವಸ್ತುಗಳ ವ್ಯಾಪ್ತಿ ಬಹಳ ಹಿರಿದಾದದ್ದು. ಅದು ಆಡಂಬರದ ಉಡುಗೆ ತೊಡುಗೆ, ಅರಮನೆ, ಆಲಯ, ಭೂ ಸಾಮ್ರಾಜ್ಯ, ಬೃಹತ್ ಸೈನ್ಯ, ಆಳು ಕಾಳು, ದಾಸ–ದಾಸಿಯರು, ಗಂಡ, ಹೆಂಡತಿ, ಹೆಂಡತಿಯರು, ಕುದುರೆ, ಆನೆ ಮೊದಲಾದ ಪ್ರಾಣಿ ಮತ್ತು ಪ್ರಾಣಿ ಆಧಾರಿತ ವಾಹನಗಳು ಮೊದಲಾದ ಎಲ್ಲವನ್ನೂ ಒಳಗೊಳ್ಳುತ್ತದೆ. ಅಂದರೆ ಇಲ್ಲಿ ಜೀವವಿಲ್ಲದ್ದು ಮಾತ್ರವಲ್ಲ ಜೀವ ಇರುವುದೂ ಪಟ್ಟಿಯಲ್ಲಿ ಸೇರಿಕೊಳ್ಳುತ್ತದೆ. ಹೆಣ್ಣು ಮಾತ್ರವಲ್ಲ ಗಂಡೂ ಭೋಗದ ಸಾಧನವಾಗುತ್ತಾನೆ. ಈ ಕೊನೆಯಿಲ್ಲದ ಭೋಗದ ಆಕಾಂಕ್ಷೆಗೆ ಅವುಗಳನ್ನು ಪಡೆದುಕೊಳ್ಳುವ ಅಧಿಕಾರ ಇರುವವರು

ಯಾವ ಹಿಂಸೆಗಾದರೂ ತಯಾರಿರುತ್ತಾರೆ. ಮಾತ್ರವಲ್ಲ ಇಂತಹ ಜೀವನ ಕ್ರಮವೇ ಅಧಿಕೃತವೆನಿಸಿಕೊಳ್ಳಲು ಪೂರಕವಾಗುವ ಒಂದು ಬಳಗವೇ ಈ ಆಧಿಕಾರ ಕೇಂದ್ರದ ಸುತ್ತ ಹುಟ್ಟಿಕೊಳ್ಳುತ್ತದೆ. ಭಕ್ತಿ ಪಂಥದ ಅನುಯಾಯಿಗಳು ನಿರಾಕರಿಸುವ ಜೀವನ ಶೈಲಿಯಲ್ಲಿ ಮೇಲೆ ಉಲ್ಲೇಖಿಸಿದ ಎಲ್ಲ ವಸ್ತುಗಳ ಯಾದಿಯಿದೆ. ಅದರಲ್ಲೂ ಮುಖ್ಯವಾಗಿ ಹೆಣ್ಣು ಹೊನ್ನು ಮಣ್ಣುಗಳ ನಿರಾಕರಣೆ ಪುನರುಕ್ತಗೊಳ್ಳುತ್ತವೆ. ಇದು ಹೀಗೇಕೆಂದರೆ ಮೂಲತಃ ಭೋಗದ ಮೇಲಿನ ಹಕ್ಕಿರುವುದು ಗಂಡಿಗೆ ಮಾತ್ರ ಎಂದು ಭಾವಿಸಲಾಗಿದೆ. ಹೀಗಾಗಿ ಆಸನ ಸುಖದ ಮೂಲವೆಂದರೆ ಭೂ ಸಂಪತ್ತು ಮತ್ತು ಹೊನ್ನಿನ ಸಂಪತ್ತು. ಹಾಗೂ ಈ ಎರಡು ಸಂಪತ್ತಿದ್ದರೆ ಅದರ ಮೂಲಕ ಪಡೆದುಕೊಳ್ಳಬಹುದಾದದ್ದು ಹೆಣ್ಣನ್ನು. ಈ ಹೆಣ್ಣು ತನ್ನ ನಿರಂತರ ಭೋಗಕ್ಕಾಗಿಯೇ ಹುಟ್ಟಿದವಳು ಎಂಬ ಭಾವ ಇರುವುದರಿಂದಲೇ ಅವಳನ್ನು ಇನ್ನೆರಡು ನಿರ್ಜೀವ ಸಂಗತಿಗಳ ಜೊತೆ ಸಮೀಕರಿಸಲಾಗಿದೆ. (ಹೆಣ್ಣಿನ ನಿರೂಪಣೆಗಳು ಕನಕರ ಸಾಹಿತ್ಯದೊಳಗೂ ಹೆಚ್ಚಾಗಿ ಈಗಾಗಲೇ ಲೋಕವು ಅವಳನ್ನು ವಿವರಿಸಿಕೊಂಡ ರೀತಿಯಲ್ಲೇ ಇದೆ. ದಮಯಂತಿ, ಉಷೆ, ಕೀರ್ತನಯಿ ಕೆಲವು ವಿವರಗಳು ಇದನ್ನೇ ತೋರುತ್ತವೆ. ನಿಜ. ಆದರೆ ಇದನ್ನು ಇನ್ನೊಂದು ನೆಲೆಯಲ್ಲಿ ನೋಡುವ ಪ್ರಯತ್ನ ಮಾಡಬಹುದೇ? ಅದೆಂದರೆ, ಇವರು ಲೋಕ ಹೆಣ್ಣನ್ನು ಹೇಗೆ ಗ್ರಹಿಸಿಕೊಂಡಿದೆಯೋ – ಹೊನ್ನು ಮಣ್ಣುಗಳನ್ನು ಗ್ರಹಿಸಿಕೊಂಡ ಬಗೆಯಲ್ಲಿ– ಹಾಗೇ ಕೃತಿಯಲ್ಲೂ ಮಂಡಿಸುವ ಮೂಲಕ ಹೆಣ್ಣಿನ ಸ್ಥಿತಿ ಬದಲಾಗದೇ ಇರುವ ಸುಡು ವಾಸ್ತವವನ್ನು ಹಾಗೇ ದಾಖಲಿಸಿದ್ದಾರೆ. ಆ ಮೂಲಕ ಸಮಾಜವೊಂದು ಹೇಗಿರಬಾರದೋ ಹಾಗೆ ಇರುವುದನ್ನು ಸೂಚಿಸುತ್ತಿದ್ದಾರೆ. ಹೆಣ್ಣೆಂದರೆ ಸಾಧನ ಎಂದು ಭಾವಿಸಿದ್ದರಿಂದಲೇ ಹೆಣ್ಣನ್ನು ಮಣ್ಣು ಹೊನ್ನುಗಳೊಂದಿಗೆ ಸಮೀಕರಿಸಲಾಗಿದ್ದು ಹೀಗೆ ಸಮೀಕರಿಸಲಾದ ಹೆಣ್ಣಿನ ಪರಿಕಲ್ಪನೆಯನ್ನು ಅವರು ನಿರಾಕರಿಸುತ್ತಿರಬಹುದು. ಮಣ್ಣು, ಹೊನ್ನುಗಳಿಗಾಗಿ ಮೇಲಾಟ ನಡೆಯುವಂತೆ ಹೆಣ್ಣಿನ ಮೇಲೆ ಹಕ್ಕು ಸಾಧಿಸುವುದಕ್ಕಾಗಿಯೂ ನಡೆಯುವ ಮೇಲಾಟವನ್ನು ಅವರು ನಿರಾಕರಿಸುತ್ತಿರಬಹುದು. ಕನಕರನ್ನೂ ಸೇರಿಸಿಕೊಂಡಂತೆ ಹಲವು ಭಕ್ತರು ಮತ್ತು ಅನುಭಾವಿಗಳು ನಮಗೆ ಈ ರೀತಿಯ ಸೂಚನೆಯನ್ನು ನೀಡುತ್ತಿದ್ದಿರಬಹುದಲ್ಲವೇ?) ಈ ಮೂರು 'ವಸ್ತು'ಗಳ ಮೇಲೆ ಹಕ್ಕು ಸಾಧಿಸುವುದಕ್ಕಾಗಿ ಇತಿಹಾಸದುದ್ದಕ್ಕೂ ಹಲವು ಕದನಗಳು, ಅನ್ಯಾಯಗಳು ನಡೆದು ಹೋಗಿವೆ. ಆದರೆ ಇವುಗಳನ್ನು ವಶಪಡಿಸಿಕೊಳ್ಳುವ ಮೋಹ ಮಾತ್ರ ಹಿಂಗದೇ ಇನ್ನಷ್ಟು ಹೆಚ್ಚುತ್ತಾ ಹೋಗುವುದನ್ನು ಕೂಡ ಕಾಣಬಹುದು. ವಿಜಯನಗರ ಸಾಮ್ರಾಜ್ಯದ ವಿಸ್ತರಣೆಗಾಗಿ ನಡೆದ ಯುದ್ಧಗಳು, ಆ ಕಾಲದಲ್ಲಿ ಸಾಮಾನ್ಯ ಜನರ ಮೇಲೆ ಹಾಕಲಾಗುತ್ತಿದ್ದ ದುಬಾರಿ ತೆರಿಗೆಗಳು, ಆ ಕಾಲದಲ್ಲಿ ವಿಸ್ತರಣೆಗೊಂಡ ವ್ಯಾಪಾರ ವಹಿವಾಟುಗಳು ಎಲ್ಲವೂ ಅಂದಿನ ಜನರ ವಸ್ತು ವ್ಯಾಮೋಹವನ್ನು ಹೆಚ್ಚಿಸಲು ಪೂರಕವಾಗಿತ್ತು. ಆದರೆ ಇದೆಲ್ಲ ಉಳ್ಳವರಿಗೆ ಮಾತ್ರ, ಇಲ್ಲದವರಿಗಲ್ಲ. ವಿಜಯನಗರದ ವಾಸ್ತುವೈಭವವೇ ಅವರ ಭೋಗ ಪರ ಜೀವನ ಶೈಲಿಯನ್ನು

ಪ್ರತಿಬಿಂಬಿಸುವಂತಿದೆ. ಹಾಗೆಯೇ ರಾಜವಂಶಗಳೊಳಗೆ ಅಧಿಕಾರಕ್ಕಾಗಿ ನಡೆದ ಶೀತಲ ಯುದ್ಧ, ಅದಕ್ಕಾಗಿ ರಕ್ತ ಸಂಬಂಧಿಗಳೊಳಗೇ ನಡೆದ ಪಿತೂರಿಗಳು ಕೂಡ ಈ ವಸ್ತು ಸಾಂಗತ್ಯವು ಮನುಷ್ಯನನ್ನು ಅಮಾನುಷತೆಯತ್ತ ತಳ್ಳುವುದನ್ನೇ ಹೇಳುತ್ತವೆ. ಇದು ಕೇವಲ ವಿಜಯನಗರ ಸಾಮ್ರಾಜ್ಯದಲ್ಲಿ ಮಾತ್ರ ನಡೆಯಲಿಲ್ಲ. ಜಗತ್ತಿನ ಎಲ್ಲ ಸಾಮ್ರಾಜ್ಯಗಳಲ್ಲೂ ಎಲ್ಲ ಕಾಲದಲ್ಲೂ ನಡೆದಿವೆ.

ಇಂತಹ ಬೆಳವಣಿಗೆಗಳನ್ನು ವಿರೋಧಿಸುವ ನಡೆಗಳು ಕೂಡ ಇತಿಹಾಸದುದ್ದಕ್ಕೂ ಬೇರೆ ಬೇರೆ ಸ್ತರಗಳಲ್ಲಿ ನಡೆದಿದೆ. ಆದರೆ ಬಲಿಷ್ಟ ಅಧಿಕಾರಸ್ತರ ಎದುರು ಸಾಮಾನ್ಯರು ಹೋರಾಡಿ ಗೆಲ್ಲುವುದು ಅಸಾಧ್ಯದ ಮಾತಾಗಿರುತ್ತದೆ. ಹೀಗಾಗಿಯೇ, ಪ್ರಜಾಪ್ರಭುತ್ವ ವ್ಯವಸ್ಥೆ ಬರುವ ಪೂರ್ವದಲ್ಲಿ ಅಧಿಕಾರಸ್ಥರ ವಿರುದ್ಧ ಸಾಮಾನ್ಯರ ಆಂದೋಲನ ನೇರವಾಗಿ ಕಾಣಿಸುವುದಿಲ್ಲ. ನಮ್ಮ ಜನಸಾಮಾನ್ಯರಲ್ಲಿ ಕಾಣಿಸುವ ಗಾದೆಯ ಮಾತೊಂದಿದೆ. 'ಆಳುವವನ ಕಣ್ಣಿಗೆ ಬೀಳ ಬೇಡ' ಎಂಬುದೇ ಆ ಮಾತು. ಆಳುವವರಿಂದ ದೂರದಲ್ಲಿದ್ದುಕೊಂಡು ತಮ್ಮದೇ ಬದುಕೊಂದನ್ನು ಕಟ್ಟಿಕೊಳ್ಳುವುದೊಂದೇ ಅವರಿಗೆ ಇದ್ದ ಬದಲಿ ದಾರಿಯಾಗಿತ್ತು. ಭಾರತದ ವಿಶಿಷ್ಟ ಲಕ್ಷಣವೆಂದರೆ, ಇಲ್ಲಿನ ಹಲವು ದೈವ ದೇವರುಗಳು ಅವರ 'ಅವರದೇ ಆದ ಬದುಕನ್ನು' ನಡೆಸಲು ಅವರಿಗೆ ನೆಲೆಯೊಂದನ್ನು ಒದಗಿಸಿಕೊಡುವುದು. ರಾಜ ಪ್ರಭುತ್ವದ ಎದುರಿಗೆ ಮಾತಾಡಲು ಸಾಧ್ಯವಾಗುವುದು ಈ ದೇವ ಪ್ರಭುತ್ವಕ್ಕೆ ಮಾತ್ರ. ಬಡವರ, ಸಾಮಾನ್ಯರ ಈ ದೇವ ಪ್ರಭುತ್ವ ರಾಜಪ್ರಭುತ್ವವನ್ನು ಪ್ರತಿಭಟಿಸುವುದಕ್ಕಿಂತಲೂ ಮುಖ್ಯವಾಗಿ ನಿರಾಕರಣೆಯ ಮೂಲಕ ತಮ್ಮ ಗಮ್ಯವನ್ನು ತಲುಪುತ್ತವೆ. ಆ ನಿರಾಕರಣೆಯ ಹಲವು ರೂಪಗಳಲ್ಲಿರಬಹುದು. ಅದು ರಾಜ ಪ್ರಭುತ್ವ ಮತ್ತು ಅದಕ್ಕೆ ಪೂರಕವಾಗಿರುವ ಹಲವು ವ್ಯವಸ್ಥೆಗಳು ಹುಟ್ಟು ಹಾಕಿದ ಶ್ರೇಣೀಕರಣಗಳ ನಿರಾಕರಣೆಯೂ ಆಗಬಹುದು. ಈ ನಿರಾಕರಣೆಯ ಮಾದರಿಯು ಮೂಲತಃ ಭಕ್ತಿ ಪಂಥಗಳಲ್ಲಿ ಕಂಡುಬರುತ್ತವೆ. ಭಕ್ತಿ ಪಂಥಗಳ ಈ ಪ್ರಕ್ರಿಯೆಯು ವಸ್ತು ಸಾಂಗತ್ಯದ ನಿರಾಕರಣೆಯಿಂದಲೇ ಮೊದಲುಗೊಳ್ಳುತ್ತವೆ.

ಅವರು ವಸ್ತುಸಾಂಗತ್ಯದ ಎದುರಿಗೆ ಆತ್ಮ ಸಾಂಗತ್ಯವನ್ನು ಮಂಡಿಸುತ್ತಾರೆ. ಆತ್ಮ ಸಾಂಗತ್ಯವು ಮೊದಲು ತನ್ನನ್ನು ತಾನು ಅರಿಯುವ ಯತ್ನದೊಂದಿಗೆ ಆರಂಭವಾಗುತ್ತದೆ. ಈ ಅರಿವು ತನ್ನ ಮತ್ತು ತಾನು ನಂಬುವ ದೇವರ ನಡುವಣ ಮಾತುಕತೆಯ ಮೂಲಕವೇ ಮೂಡತೊಡಗುತ್ತದೆ. ಹೀಗಾಗಿ ಭಕ್ತರು ತಮ್ಮೆಲ್ಲ ಭಾವಗಳನ್ನು ದೇವರೊಂದಿಗೆ ನಿವೇದಿಸಿಕೊಳ್ಳುತ್ತಿರುತ್ತಾರೆ. ತಮ್ಮನ್ನು ಅರಿಯುವುದರ ಜೊತೆಗೇ ಅವರು ತಮ್ಮ ಸಹಜೀವಿಗಳನ್ನೂ ಅರಿಯ ತೊಡಗುತ್ತಾರೆ. ಆದ್ದರಿಂದಲೇ ಭಕ್ತಿ ಪಂಥಗಳು ಒಂದು ಸಮುದಾಯವಾಗಿ ಬದುಕುತ್ತಿರುತ್ತವೆ. ವಸ್ತು ಸಾಂಗತ್ಯ ಮತ್ತು ಆತ್ಮ ಸಾಂಗತ್ಯಕ್ಕಿರುವ ಪ್ರಮುಖ ವ್ಯತ್ಯಾಸವೆಂದರೆ, ವಸ್ತು ಸಾಂಗತ್ಯ ಸದಾ ಗಳಿಸುವುದರ ಕಡೆಗೆ, ಗಳಿಸಿದ್ದರೊಂದಿಗೆ ತಮ್ಮನ್ನು ಸಮೀಕರಿಸಿಕೊಳ್ಳುವುದರಲ್ಲಿ ಹಾಗೂ ಹಾಗೆ ಗಳಿಸಿಕೊಳ್ಳಲು ತೊಡಕಾಗುವ ಎಲ್ಲವನ್ನು ನಿವಾರಿಸಿಕೊಳ್ಳುವುದರಲ್ಲಿ

ಆಸಕ್ತವಾಗಿರುತ್ತದೆ. ಆದರೆ, ಆತ್ಮ ಸಾಂಗತ್ಯ ಕೊಡುವುದರಲ್ಲಿ, ಕಳೆದುಕೊಳ್ಳುವುದರಲ್ಲಿ ಹಾಗೂ ನಿವೇದಿಸಿಕೊಳ್ಳುವುದರಲ್ಲಿ ನಂಬಿಕೆ ಹೊಂದಿರುತ್ತದೆ. ಈ ಕಳೆದುಕೊಳ್ಳುವ ಪ್ರಕ್ರಿಯೆಯೆಂಬುದು ದೀರ್ಘ ಸಾಧನೆಯ ಹಾದಿಯಾಗಿರುತ್ತದೆ. ಇದು ವಸ್ತುವಿನಿಂದ ತನ್ನನ್ನು ತಾನು ಬೇರ್ಪಡಿಸಿಕೊಳ್ಳುತ್ತಾ ಹೋಗುತ್ತದೆ. ಹೀಗಾಗಿ ಗಳಿಕೆ ಎಂಬುದು ಅರ್ಥ ಕಳೆದುಕೊಳ್ಳುತ್ತಾ ಹೋಗುತ್ತದೆ. ಈ ಗಳಿಕೆಗಾಗಿ ಒದ್ದಾಡುವ ರಾಜನೂ, ಕಳ್ಳನೂ ಬೇರೆ ಬೇರೆ ಎಂದು ಅವರಿಗೆ ಕಾಣಿಸುವುದೇ ಇಲ್ಲ. ಕನಕದಾಸರ 'ಎಲ್ಲಾರು ಮಾಡುವುದು ಹೊಟ್ಟೆಗಾಗಿ' ಎಂಬ ಕೀರ್ತನೆಯನ್ನು ಈ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳಬಹುದು. ಈ ಕೀರ್ತನೆಯ ಪ್ರಕಾರ ವ್ಯಾಪಾರಿ, ಪುರೋಹಿತ, ಸೈನಿಕ, ರೈತ, ಜಂಗಮ, ಜೋಗಿ, ರಾಜ, ಕಳ್ಳ, ವೇಷದಾರಿ, ವೇಶ್ಯೆ . . . ಎಲ್ಲಾರೂ ಮಾಡುವುದು ಹೊಟ್ಟೆಗಾಗಿ. ಇವರಲ್ಲಿ ಯಾವ ವ್ಯತ್ಯಾಸವೂ ಇಲ್ಲ. ವ್ಯತ್ಯಾಸ ಇರುವುದು ಮುಕ್ತಿಗಾಗಿ ಮಾಡುವ ಭಕ್ತಿಯಲ್ಲಿ ಮಾತ್ರ. ಹೀಗೆ ಒಟ್ಟು ಬದುಕನ್ನು ನೋಡುವ ಕ್ರಮವನ್ನೇ ಆತ್ಮಸಾಂಗತ್ಯದ ದಾರಿಯಾದ ಭಕ್ತಿ ಬದಲಿಸಿಬಿಡುತ್ತದೆ. ಮನುಷ್ಯನ ಬವಣೆಗೆ ಮೂಲ ಕಾರಣಗಳನ್ನು ಇದು ಶೋಧಿಸುತ್ತದೆ. ಆ ಬವಣೆಗಳನ್ನು ನೀಗುವ ದಾರಿಯನ್ನೂ ಅದು ಸೂಚಿಸುತ್ತದೆ. ಭಕ್ತರೇನೋ ಭಕ್ತಿಯ ದಾರಿಯ ಮೂಲಕ ಈ ಲೋಕದ ಎಲ್ಲ ಜಿಡುಕುಗಳಿಂದ ಪಾರಾಗುತ್ತಾರೆ. ಆದರೆ ಈ ಭಕ್ತಿಯ ಕಠಿಣ ದಾರಿಯಲ್ಲಿ ನಡೆಯಲಾರದ ದೊಡ್ಡ ಸಮೂಹವೊಂದು ಕೂಡ ಎಲ್ಲ ಕಾಲದಲ್ಲಿ ಇರುತ್ತದೆ. ಅದು ಅತ್ತ ಪ್ರಭುತ್ವದ, ವ್ಯವಸ್ಥೆಯ ದಮನದಿಂದ ಬಿಡುಗಡೆ ಬಯಸುತ್ತದೆ. ಇತ್ತ ಭಕ್ತಿಯ ದಾರಿಯಲ್ಲಿ ಪೂರ್ತಿಯಾಗಿ ನಡೆಯಲು ಆಗದೇ ಪರಿತಪಿಸುತ್ತಿರುತ್ತದೆ. ಅವರಿಗೆ ಭಕ್ತಿಯ ಕೆಲವು ದಾರಿಗಳು ಬಹುಶಃ ಒಂದು ಮಧ್ಯಮ ದಾರಿಯನ್ನು ತೋರುತ್ತದೆ. ಅದ್ದರಿಂದಲೇ ಅವರು ಇಂತಹ ದಾರಿಗಳೆಡೆಗೆ ಆಸೆ ಕಣ್ಣಿನಿಂದ ನೋಡುತ್ತವೆ. ಹೀಗಾಗಿ ಇಂದಿಗೂ ಈ ಭಕ್ತಿ ಪಂಥಗಳು ಅವರಿಗೊಂದು ದಾರಿದೀಪದಂತೆ ಕಾಣಿಸುತ್ತಿರುತ್ತದೆ. ಮತ್ತೇನಕ್ಕಲ್ಲದಿದ್ದರೂ ಅನಿವಾರ್ಯವಾಗಿ ವಸ್ತುಸಾಂಗತ್ಯದ ಲೋಕದಲ್ಲಿ ಬದುಕುತ್ತಿರುವವರಿಗೆ ಈ ವಸ್ತುಸಾಂಗತ್ಯದ ಮೋಹವನ್ನು ನಿಯಂತ್ರಣದಲ್ಲಿಡಲಾದರೂ ನೆರವಾಗುತ್ತಿರುತ್ತದೆ. ವಸ್ತು ಸಾಂಗತ್ಯ ಮೋಹದಿಂದ ಮುಕ್ತವಾದ ಕಾಲ ಬಹುಶಃ ಎಂದಿಗೂ ಇಲ್ಲ. ಆದರೆ ವಸ್ತು ಸಾಂಗತ್ಯವೇ ಬದುಕಿನ ಮೌಲ್ಯವೆನಿಸಿಕೊಳ್ಳುವ ಗಳಿಗೆ ಮತ್ತು ಕಾಲ ಕ್ರೌರ್ಯದ ಎಲ್ಲೆಯನ್ನು ಮೀರಲೂ ಹೇಸುವುದಿಲ್ಲ. ಇದನ್ನು ದಾಟಲು ಭಕ್ತಿ ಪರಂಪರೆಯ ಅರಿವಿನ ಅಗತ್ಯ ಬೇಕಾಗುತ್ತದೆ. ಕನಕದಾಸರು ಆತ್ಮಸಾಂಗತ್ಯದ ಮೂಲಕ ಸಮುದಾಯವನ್ನು ತಲುಪಿದ ಬಗೆಯನ್ನು ಇನ್ನು ಮುಂದೆ ಪರಿಶೀಲಿಸಬಹುದು.

*

ವಾರ್ತೆ ಕೀರ್ತಿಯೆಂಬವೆರಡು ಬಂದುವಯ್ಯ ಸತ್ತ ಮೇಲೆ
ವಸ್ತು ಪ್ರಾಣ ನಾಯಕನು ದೊರಕಲಿಲ್ಲವು

ಕರ್ತಕಾಗಿನೆಲೆಯಾದಿಕೇಶವ ನಾರಾಯಣನ
ಅರ್ಥಿಯಿಂದ ಭಜಿಸಿ ನೀವು ಸುಖ ಬಾಳಿರೊ

ಎಂದು ಕೊನೆಯಾಗುವ 'ಡಿಂಬಿನೊಳು ಪ್ರಾಣವಿರಲು' ಎಂಬ ಕೀರ್ತನೆಯಲ್ಲಿ ಕನಕದಾಸರು ವಸ್ತು ವ್ಯಾಮೋಹದ ನಶ್ವರತೆಯನ್ನು ಮನಗಾಣಿಸಲು ಪ್ರಯತ್ನಿಸುತ್ತಾರೆ.

ಹತ್ತು ಎಂಟು ಲಕ್ಷಗಳಿಸಿ ಮತ್ತೆ ಸಾಲದೆಂದು ಪರ
ರರ್ಥಕಾಗಿ ಆಸೆಪಟ್ಟು ನ್ಯಾಯ ಮಾಡುವರೊ
ಬಿತ್ತಿ ಬೆಳೆವೆವೆಂದು ನೀವು ವ್ಯರ್ಥ ಚಿಂತೆ ಮಾಡಿ ಬರಿದೆ
ಸತ್ತು ಹೋದ ಮೇಲೆ ನಿಮ್ಮ ಅರ್ಥವಾರಿಗೊ

ಇದು ಇನ್ನಷ್ಟು ಪರಿಣಾಮ ಬೀರುವುದು ಅವರು ಕುಲದ ಕುರಿತು ಮಾಡುವ ವ್ಯಾಖ್ಯಾನ ಹಾಗೂ ಸಿರಿವಂತಿಕೆಯ ಅಹಂಕಾರದ ಕುರಿತು ಹೇಳುವ ಮಾತುಗಳಲ್ಲಿ.'ಬಾಧಿಸಿ ಬಡವರ ಅರ್ಥವನೊಯ್ವಗೆ\ವ್ಯಾಧಿಯು ಕಾಡದೆ ಬಿಟ್ಟೀತೆ\ಭೇದವೆಣಿಸಿ ಬಲು ಕ್ಷುದ್ರವ ಕಲಿತರೆ\ಮೋದವೆಂದಿಗು ಆದೀತೆ' (ಕೇಶವನೊಲುಮೆಯು ಆಗುವತನಕ) ಎಂಬುದು ಒಟ್ಟು ಸಮುದಾಯವನ್ನು ವ್ಯಾಪಿಸಿರುವ ಅಸಮಾನ ವರ್ಗದ ನೆಲೆಯನ್ನು ಪ್ರಶ್ನಿಸುತ್ತಾರೆ. ಆದರೆ ಇದರ ಕುರಿತು ಪ್ರತಿಭಟನೆ ಮಾಡುವುದು ಇವರ ದಾರಿಯಲ್ಲ. ಬದಲಿಗೆ ಆ ರಚನೆಯನ್ನೇ ನಿರಾಕರಿಸುವುದು ಅವರ ದಾರಿ. ಆ ರಚನೆಯನ್ನು ಬಿಟ್ಟು ಕೇಶವನ ಸ್ಮರಿಸಿದರೆ ಆಗ ಮಾತ್ರ ಮೋಕ್ಷ ಸಿಕ್ಕೀತು ಎನ್ನುವ ಭಕ್ತಿಯ ನೆಲೆಯೊಂದಿಗೆ ಅದನ್ನು ತಳುಕು ಹಾಕುತ್ತಾರೆ. ಹಾಗೆಯೇ, ಇದೇ ನೆಲೆಯ ಮೂಲಕ ಕುಲದ ಪ್ರಶ್ನೆಯನ್ನೂ ಮುನ್ನೆಲೆಗೆ ತರುತ್ತಾರೆ. 'ಜಲದ ದಾರಿಯಲಿ ಬಂದಿರುವೆ ನೀನೆಲೊ\ಕುಲವು ಜಾತಿ ಗೋತ್ರವುಳ್ಳವನು ನೀನೆಲೋ(?) (ನಾನು ನೀನು ಎನ್ನದಿರೊ) ಎನ್ನುವ ಅವರು ಮನುಷ್ಯನ ಈ ಭಾವನೆಯೇ ಭ್ರಮಾಧೀನವಾದದ್ದು ಎನ್ನುವುದರ ಮೂಲಕ ಈ ಲೋಕದಲ್ಲಿ ಇಂತಹ ಅವಾಸ್ತವ ವಿಚಾರಕ್ಕಾಗಿ ನಡೆಯುವ ಕಲಹವನ್ನೇ ಅರ್ಥವಿಲ್ಲದ್ದು ಎಂದು ತಿಳಿಹೇಳುವ ಧ್ವನಿಯಲ್ಲಿ ವಿವರಿಸುತ್ತಾರೆ. ಈಗಾಗಲೇ ಜನಪ್ರಿಯವಾಗಿರುವ(ಆದರೆ ಇಂದಿಗೂ ಜನರಿಗೆ ಅರ್ಥವೇ ಆಗದಿರುವ!), ಈ ಕೆಳಗಿನ ಸರಳವಾದ ಮಾತುಗಳು ಅವರು ಸಮುದಾಯದ ತಿಳಿವಿಗಾಗಿ ಹೇಳಿದ ಮಾತುಗಳೂ ಆಗಿವೆ:

ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ವೇಂದ್ರಿಯಂಗಳ ಕುಲ ಪೇಳಿರಯ್ಯ
ಆತ್ಮಾಂತರಾತ್ಮ ನೆಲೆಯಾದಿ ಕೇಶವ
ಆತನೊಲಿದ ಮೇಲೆ ಯಾತರ ಕುಲವಯ್ಯ

(ಕುಲ ಕುಲ ಕುಲವೆನ್ನುತಿಹರು)

ಕುಲವೆಂಬುದೇ ಅರ್ಥಹೀನವೆನಿಸಿದ ಮೇಲೆ ಅದಕ್ಕಾಗಿ ಹೊಡೆದಾಡುವುದು ಇನ್ನೂ ಅರ್ಥಹೀನ ಎಂಬುದನ್ನೂ ಅವರ ಕುಲ ಕುಲ ಕುಲವೆಂದು ಹೊಡೆದಾಡದಿರಿ ಎಂಬ ಕೀರ್ತನೆ ಇನ್ನಷ್ಟು ವಿಸ್ತರಿಸುತ್ತದೆ.

ಈ ಮೂಲಕ ಕನಕರು ಒಟ್ಟು ಸಮುದಾಯವನ್ನು ಅಥವಾ ಸಮಾಜವನ್ನು ಗ್ರಹಿಸಿಕೊಳ್ಳಬೇಕಾದ ಕ್ರಮವನ್ನು ನಿರ್ವಚಿಸುತ್ತಾರೆ. ಆ ನಿರ್ವಚನೆಯನ್ನು ಭಕ್ತಿಯ ಮೂಲಕ ನಿರ್ವಹಿಸುತ್ತಾರೆ. ಅವರ ಪ್ರಕಾರ ಈ ಲೋಕದ ಅಸ್ತಿತ್ವವೆಂಬುದು ಪ್ರತಿ ಮನುಷ್ಯನಿಗೂ ಭಿನ್ನವಾಗಿರುತ್ತದೆ. ಅದು ಪ್ರತಿ ಮನುಷ್ಯನ ಜೀವಿತಾವಧಿ ಎಷ್ಟಿದೆಯೋ ಅಷ್ಟೇ ಆಗಿರುತ್ತದೆ. ಹೀಗಾಗಿ ಇಲ್ಲಿ ಅವರು ಹಿಂದು ಮತ್ತು ಮುಂದುಗಳನ್ನು ಕಾಣುವ ಕ್ರಮವು ಭಿನ್ನವಾಗಿರುತ್ತದೆ. ಕನಕರಿಗೆ ಹಿಂದಿನ ನೆನಪುಗಳೆಂದರೆ, ಪುರಾಣ ಕತೆಗಳಲ್ಲಿ ಕಾಣುವ ಕೇಶವನ ಮಹಿಮೆಗಳು ಮಾತ್ರವಾಗಿದ್ದರೆ ಮುಂದಿನ ಉಲ್ಲೇಖವನ್ನೇ ಅವರು ಮಾಡುವುದಿಲ್ಲ. ಇದು ಕುತೂಹಲಕಾರಿ ಮಾತ್ರವಲ್ಲ, ನಿರ್ಮಮಕಾರವನ್ನು ಸಾಧಿಸುವ ಒಂದು ಮಾರ್ಗವೂ ಹೌದು. ತನ್ನ ನಂತರದ ತಲೆಮಾರಿನವರಿಗಾಗಿ ಅರ್ಥ, ಆಸ್ತಿ ಕೂಡಿಡುವ ಮನುಷ್ಯನ ಹಂಬಲವನ್ನೇ ನಿರಾಕರಿಸುವ ಒಂದು ಮಾರ್ಗವಾಗಿಯೂ ಇದನ್ನು ನಾವು ಗ್ರಹಿಸಲು ಸಾಧ್ಯವಿದೆ.

ಕನಕದಾಸರ ಬಹುಚರ್ಚಿತ 'ರಾಮಧಾನ್ಯ ಚರಿತ್ರೆ' ಯನ್ನೇ ಗಮನಿಸಿದರೂ ಕನಕರು ಒಟ್ಟು ಸಮುದಾಯವನ್ನು ಗ್ರಹಿಸಿಕೊಳ್ಳುವ ಬಗೆ ಸ್ಪಷ್ಟಗೊಳ್ಳುತ್ತದೆ. ರಾಗಿ ಮತ್ತು ಭತ್ತದ ನಡುವೆ ನಡೆಯುವ ಸಂಭಾಷಣೆಯಲ್ಲಿ ಎರಡೂ ಕೂಡ ತಮ್ಮ ತಮ್ಮ ಹೆಚ್ಚುಗಾರಿಕೆಯನ್ನು ಮತ್ತು ಎದುರಾಳಿಯ ಕುಂದುಗಳನ್ನು ಎತ್ತಿಹಿಡಿಯುವಾಗ ರಾಗಿಯು ಬಡವರ ಬಂಧುವೆಂದೂ, ಅಕ್ಕಿಯು ಶ್ರೀಮಂತರ ಭೋಗಕ್ಕೆ ಒದಗುವ, ಬಡವರ ಕಷ್ಟಕ್ಕೆ ಆಗದ ನಿರುಪಯೋಗಿ ಎಂದೂ ವಾದ ನಡೆಯುತ್ತದೆ. ಆದರೆ ರಾಮ ಅವುಗಳ ಜಗಳವನ್ನು ಪರಿಹರಿಸಲು ಕಂಡುಕೊಳ್ಳುವ ಮಾರ್ಗವೇ ಈ ಕೃತಿಯ ಹೆಚ್ಚುಗಾರಿಕೆಯಾಗಿದೆ. ರಾಮನಿಲ್ಲಿ ಏಕಪಕ್ಷೀಯವಾಗಿ ತೀರ್ಮಾನ ಕೊಡುವುದಿಲ್ಲ, ಯಾರನ್ನೂ ದೂಷಿಸುವುದೂ ಇಲ್ಲ. ಬದಲಿಗೆ ಇಬ್ಬರಿಗೂ ಶಿಕ್ಷೆ ವಿಧಿಸಿ ತಮ್ಮನ್ನು ತಾವೇ ಅರಿತುಕೊಳ್ಳುವಂತೆ ಮಾಡುತ್ತಾನೆ. ಒಟ್ಟು ಸಮುದಾಯಕ್ಕೆ ಕನಕ ಸೂಚಿಸುತ್ತಿರುವ ದಾರಿಯಾಗಿಯೂ ಇದನ್ನು ಪರಿಗಣಿಸಬಹುದು. ಅಂದರೆ, ಪ್ರತಿಯೊಬ್ಬರೂ ಮೊದಲು ಸ್ವಯಂ ಶಿಕ್ಷೆಯನ್ನು ವಿಧಿಸಿಕೊಳ್ಳಬೇಕಾಗಿದೆ. ಆ ಮೂಲಕ ತಮ್ಮನ್ನು ತಾವೇ ಪರೀಕ್ಷಿಸಿಕೊಳ್ಳಬೇಕಾಗಿದೆ. ಯಾರು ಶ್ರೇಷ್ಠ ಎಂಬ ತೀರ್ಮಾನವನ್ನು ಮೂರನೆಯವರು ನೀಡುವ ಬದಲು ಅವರವರೇ ಅರಿತುಕೊಳ್ಳುವುದು ಉನ್ನತವಾದ ದಾರಿ. ಅದೇ ಆತ್ಮಸಾಂಗತ್ಯದ ದಾರಿ. ಈ ಆತ್ಮ ಸಾಂಗತ್ಯವಿಲ್ಲದ ದಾರಿ, ಬಿರುಕಿನ ದಾರಿ. ಇಡೀ ಸಮಾಜವನ್ನು ಬಿರುಕಿಗೆ ತಳ್ಳುವ ದಾರಿಯಾಗಿರುತ್ತದೆ. ಹೀಗಾಗಿ ಕೆಲವು ಗುಣಗಳು ಮತ್ತು ಅವಗುಣಗಳನ್ನು ಹೊಂದಿರುವ ರಾಗಿ ಮತ್ತು ಅಕ್ಕಿಗಳು ಸಹಬಾಳ್ವೆ ಮಾಡಬೇಕೆಂದು ರಾಮ

ತೀರ್ಪು ನೀಡುತ್ತಾನೆ. ಹಾಗೂ ಅಕ್ಕಿಗೆ ತನ್ನ ಅವಗುಣಗಳನ್ನು ತಿದ್ದಿಕೊಳ್ಳಲು ಸಲಹೆ ನೀಡುತ್ತಾನೆ. " ನೀವು ಧರೆಯೊಳಗಿಬ್ಬರತಿ ಹಿತದಲಿ ನೀವಿಹುದು/ನಾವು ಕೊಟ್ಟೆವು ವರವ ಸಲ್ಲುವು/ದಾವ ಕಾಲದಲಿನ್ನು ನೀವೇ/ ಪಾವನರು ಪರಮ ಸುಖಿಯೆಂದುಪಚರಿಸಿದನು ನೃಪತಿ. (ಅದೇ;ರಾಮಧಾನ್ಯ ಚರಿತೆ;ಪು:179) ರಾಗಿ ಸಮರ್ಥವಾದುದು ಎಂದು ಅರಿತ ಮೇಲೆ ಅದನ್ನು ಅಕ್ಕಿಯೂ ಒಪ್ಪಿಕೊಳ್ಳಬೇಕು ಎನ್ನುವುದು ಕೂಡ ಗಮನಾರ್ಹ ಸಂಗತಿ. ನಮ್ಮ ಸಮಾಜದ ದೊಡ್ಡ ತೊಡಕೆಂದರೆ, ತಮ್ಮ ಸಾಮರ್ಥ್ಯವನ್ನು ಸಾಬೀತು ಮಾಡಿದ ಮೇಲೂ ಸಮಾಜ ಒಪ್ಪದೇ ಅನುಮಾನಿಸುವುದು. ಅದು ಹೆಣ್ಣಿರಬಹುದು ಅಥವಾ ದಮನಿತರಿರಬಹುದು. ಇದನ್ನು ಈ ಕೃತಿ ನಿರಾಕರಿಸಿ ರಾಗಿಯನ್ನು ಒಪ್ಪಿಕೊಂಡ ಸಂಕೇತವಾಗಿ ಅದರ ತಲೆಯ ಮೇಲೆ ಅಕ್ಕಿ ಅಕ್ಷತೆಯಾಗಿ ಬೀಳುತ್ತದೆ.

ಭಕ್ತಿಯೆಂಬುದನ್ನು ಸಾಮಾನ್ಯವಾಗಿ ವೈಯಕ್ತಿಕ ನೆಲೆಯಲ್ಲೇ ಕಾಣಲಾಗುತ್ತದೆ. ಆದರೆ ಅದಕ್ಕೊಂದು ಸಾಮುದಾಯಿಕ ಮುಖವೂ ಇರುತ್ತದೆ. ಅದರ ಗಮ್ಯ ಒಟ್ಟು ಸಮಾಜವಾಗಿರುತ್ತದೆ. ಸಂಸಾರವನ್ನು ನೆಚ್ಚದಿರಿ ಎಂದು ಹೇಳುತ್ತಲೇ ಇತರ ಸಂಸಾರಿಗರಿಗೆ ಭಕ್ತಿ ತತ್ವದ ಬೆಳಕಲ್ಲಿ ತಾವು ಕಂಡುಕೊಂಡಿರುವ ವಿಚಾರಗಳನ್ನು ಸರಳ ಕೀರ್ತನೆ, ಸಾಂಗತ್ಯದಂತ ಕೃತಿಗಳ ಮೂಲಕ ತಲುಪಿಸುವ ಪ್ರಯತ್ನ ಮಾಡುತ್ತಾರೆ. ಅದು ಅವರ ಸಾಮಾಜಿಕ ನಿಲುವನ್ನು ಅಭಿವ್ಯಕ್ತಿ ಮಾಡುತ್ತಿರುತ್ತದೆ. ಹೀಗಾಗಿಯೇ ಒಂದು ಸಮಾಜ ಹೇಗಿರಬೇಕು ಎಂದು ಅವರು ಬಯಸುತ್ತಿರುತ್ತಾರೋ ಅದು ಮಾತ್ರ ಅಭಿವ್ಯಕ್ತಿಗೊಳ್ಳದೇ ಒಂದು ಸಮಾಜ ಹೇಗಿರಬಾರದೋ ಅದೂ ಅಸ್ತಿತ್ವದಲ್ಲಿದೆ ಎಂಬುದನ್ನೂ ಅವರ ಕೃತಿಗಳು ದಾಖಲಿಸುತ್ತಾ ಹೋಗುತ್ತದೆ. ಕನಕರ ಕೃತಿಗಳಲ್ಲೂ ಇದನ್ನು ಗಮನಿಸಬಹುದು. ಹೆಣ್ಣು, ಹೊನ್ನು, ಮಣ್ಣುಗಳಿಗಾಗಿ ಮೃಗಗಳಾಗುವುದನ್ನು, ಕುಲ, ವರ್ಗಗಳ ಪ್ರತಿಷ್ಠೆಯಿಂದ ಇತರರನ್ನು ಕಡೆಗಾಣಿಸುವುದನ್ನು, ಮೋಸ, ಅಸತ್ಯ, ವಂಚನೆಗಳಿಂದ ಅಧಮ ಬದುಕು ಬಾಳುತ್ತಿರುವವರಿರುವುದನ್ನೂ ಅವರ ಕೃತಿಗಳು ದಾಖಲಿಸುತ್ತಾ ಅದನ್ನು ಬಯಲು ಮಾಡುವುದರೊಂದಿಗೆ ಅವುಗಳ ವಿರುದ್ಧವಾದ ನಿಲುವನ್ನೂ ಅವರ ಕೃತಿಗಳು ದಾಖಲಿಸುತ್ತವೆ. ಅವರು ತಳೆಯುವ ಈ ನಿಲುವೇ ಇವತ್ತಿಗೂ ನಾವು- ಭಿನ್ನ ಸಂದರ್ಭದಲ್ಲಿ, ಆದರೆ ಅದೇ ಕೇಡುಗಳೊಂದಿಗೆ ಬಾಳುತ್ತಿರುವ ನಾವು- ಕನಕರನ್ನು ಮತ್ತೆ ಮತ್ತೆ ಭೇಟಿಯಾಗುವುದಕ್ಕೆ ಕಾರಣವಾಗಿರುತ್ತದೆ.

*** ** ***

ಪ್ರತಿಕ್ರಿಯೆ :

## 1. ಆತ್ಮ ಸಾಂಗತ್ಯದ ಮೂಲಕ ಸಮುದಾಯದತ್ತ

– ಪ್ರೊ. ಶಾಶ್ವತ ಸ್ವಾಮಿ ಮುಕ್ಕುಂದಿಮಠ

ಭಕ್ತಿಯೆಂಬ ಲೋಕದೃಷ್ಟಿಯಲ್ಲಿ ಕನಕರ ಚಿಂತನೆಗಳ ಮಾಲಿಕೆಯಲ್ಲಿ ಡಾ. ಸಬಿತಾ ಬನ್ನಾಡಿಯವರು ಸಿದ್ಧಪಡಿಸಿದ "ಆತ್ಮಸಾಂಗತ್ಯದ ಮೂಲಕ ಸಮುದಾಯದತ್ತ" ಪ್ರಬಂಧಕ್ಕೆ ಕೆಲವು ವಿಚಾರಗಳನ್ನು ವ್ಯಕ್ತಪಡಿಸಿದ ನನ್ನ ಅಭಿಪ್ರಾಯ ಇಲ್ಲಿದೆ.

ರಾಷ್ಟ್ರೀಯ ಸಂತಕವಿ ಕನಕದಾಸರು. ದಾಸಸಾಹಿತ್ಯ ಕ್ಷೇತ್ರದಲ್ಲಿ ಇವರದು ವಿಶಿಷ್ಟ ಸ್ಥಾನ. ದಾಸ ಸಾಹಿತ್ಯ ಇತಿಹಾಸದಲ್ಲಿ ಮೊದಲ ಘಟ್ಟದ ಕಾಲಾವಧಿಯಲ್ಲಿ ಆಗಿಹೋದ ಅನೇಕ ದಾಸನರೇಣ್ಯಾರಲ್ಲಿ ಅಗ್ರಗಣ್ಯರು, ಭಕ್ತ ಶ್ರೇಷ್ಠರು, ಶ್ರೀಹರಿಯ ಪರಮಭಕ್ತರು, ಅವರು ತಮ್ಮ ಉತ್ಕಟ ಭಕ್ತಿಯಿಂದ ತಮ್ಮ ಆರಾಧ್ಯದಥವ ಶ್ರೀಂತರಿಯ ಅನುಗೃಪಕ್ಕೆ ಪಾತ್ರರಾಗಿ ಆ ಮೂಲಕ ಪರಮಾತ್ಮನ ಲೀಲೆಗಳನ್ನು ಪ್ರದರ್ಶಿಸಿ ತಮ್ಮ ಅಂತರಂಗದಲ್ಲಿ  ಆವರಿಸಿರುವ ಅದಮ್ಯ ಹರಿಭಕ್ತಿಯನ್ನು ಲೋಕಕ್ಕೆ ಮೆರೆದ ಶ್ರೇಷ್ಠ ಹರಿಭಕ್ತರು. ಒಂದು ಪ್ರದೇಶದ ಪಾಳೆಯ ನಾಯಕನಾಗಿದ್ದ ತಿಮ್ಮಪ್ಪ ಭಗವಂತನು ನಿರ್ಮಿಸಿದ ಒಂದು ಘಟನೆ ಅವರ ಬದುಕಿನಲ್ಲಿ ಒಂದು ದೈವಿ ತಿರುವು ಪಡೆದು ಶ್ರೀಹರಿಯ ಪರಮ ಭಕ್ತನಾಗಿ 'ಕನಕದಾಸ' ರಾದ ಪರಿವರ್ತನೆ, ಅವರ ಮೇಲೆ ಪರಮಾತ್ಮನ ಅಗಾಧವಾದ ಕಾರುಣ್ಯಕ್ಕೆ ಸಾಕ್ಷಿಯಾಗಿದೆ. ವಿಜಯನಗರದ ಕಾಲದಲ್ಲಿ ಪ್ರಚಾರದಲ್ಲಿದ್ದ ಶ್ರೀರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಮತ್ತು ಶ್ರೀಮಧ್ವಾಚಾರ್ಯರ ದ್ವೈತ ಮತಗಳ ಪ್ರಭಾವ ಕನಕರ ಮೇಲೆ ಗಾಢವಾಗಿ ಬೀರಿತ್ತು. ಶ್ರೀತಾತಾಚಾರ್ಯರು ಹಾಗೂ ಶ್ರೀವ್ಯಾಸರಾಜರು ಉಭಯರ ಶಿಷ್ಯತ್ವದಲ್ಲಿ ಕನಕರು ಭಕ್ತಿಯ ಪಾರಮ್ಯವನ್ನು ಪಡೆದರೂ, ಶಾಸ್ತ್ರ-ಪುರಾಣಗಳ ಪರಿಜ್ಞಾನ ಅವರದಾಯಿತ್ತು. ಅಂತೆಯೇ ಕನಕರು ನೂರಾರು ಕೀರ್ತನ ಪದಗಳನ್ನು ರಚಿಸಿ ದಾಸ ಪರಂಪರೆಯ ಮಾರ್ಗದಲ್ಲಿ ಸಾಗಿ ಹರಿದಾಸರೆನಿಸಿದ್ದಾರೆ. ಕನ್ನಡದಲ್ಲಿ ಉತ್ತಮ ಕಾವ್ಯಗಳನ್ನು ರಚಿಸಿ, ದಾಸ ಕವಿಗಳೆನಿಸಿ ವೈಶಿಷ್ಟ್ಯವನ್ನು ಮೆರೆದರು. ತಳ ಸಮುದಾಯದಿಂದ ಬಂದ ಕನಕದಾಸರು ಲೋಕದ ರೂಢಿಗಳನ್ನು ನಿಷ್ಠುರ ಮಾತುಗಳಲ್ಲಿ ಸಾರಿ ಕ್ರಾಂತಿಕಾರಕ ದಾಸರೆನಿಸಿಕೊಂಡರು.

ಕನಕರ ವಿಶಿಷ್ಟವಾದ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಅವರು ತಾವು ಪಡೆದ ಭಕ್ತಿಯ ಪರಮಜ್ಞಾನವು ವ್ಯಷ್ಟಿಗಾಗಿ ಉಪಯೋಗಿಸದೆ ಅದನ್ನು ಸಮಷ್ಟಿಗಾಗಿ ಉಪಯೋಗಿಸಿದ ಸಂತ ಶ್ರೇಷ್ಠರು. ಅಂತೆಯೇ ಅವರು ಅನುಭವಿಸಿದ

ಆತ್ಮಸಾಂಗತ್ಯದ ಪರಮಜ್ಞಾನವನ್ನು ಸಮುದಾಯದ ಹಿತಕ್ಕೆ ಧಾರೆಯೆರೆದರು. ಪ್ರಬಂಧಕಾರರಾದ ಡಾ. ಸಬಿತಾ ಬನ್ನಾಡಿಯವರು ತಮ್ಮ ಇಡಿ ಪ್ರಬಂಧವಾದ್ಯಂತ ಸಮುದಾಯದ ಒಳಿತಕ್ಕೆ ಕನಕರು ನೀಡಿದ ವಿಚಾರದ ಜ್ಞಾನವನ್ನು ಸೋದಾರಣೆಯೊಂದಿಗೆ ವಿವರಿಸಿದ್ದಾರೆ. ಭಕ್ತಿಯು ಲೋಕದೃಷ್ಟಿ ಅದು ತನ್ನ ರೀತಿಯಲ್ಲಿ ವ್ಯವಹರಿಸುತ್ತದೆ; ಅರ್ಥೈಸುತ್ತದೆ ಎಂದು ವಿವೇಚಿಸುತ್ತಾರೆ. ಭಕ್ತಿಯ ವ್ಯಾಖ್ಯಾನವನ್ನು ನಾವು ಹೀಗೆ ಹೇಳಬಹುದು; ಭಕ್ತಿ ಎಂಬುವುದು ಭಗವಂತನಲ್ಲಿ ಇಟ್ಟ ಪ್ರೀತಿ ಅದು ಅಂತರಂಗದ ಸಂವೇದನಶೀಲ ಅನುಭವ. ಜೀವಾತ್ಮ ಮತ್ತು ಪರಮಾತ್ಮನ ನಡುವಣ ಪ್ರೀತಿ, ವಾತ್ಸಲ್ಯಗಳ ಅದಮ್ಯ ತುಡಿತ, ಆನಂದಗಳ ಅನುಸಂದಾನವೇ ಭಕ್ತಿ.

"ಹ್ಯಾಂಗೆ ದಾಸನಾದೋ ಪ್ರಾಣಿ, ಹ್ಯಾಂಗೆ ದಾಸನಾಗಿ ಹೀಂಗೆ ಸಂಸಾರದೊಳು" ಎಂದು ಸಂಸಾರದಿಂದ ವಿಮುಖವಾಗಿ ಸಮುದಾಯದೆಡೆ ಸಾಗಿದ ಕನಕರ ಬಗೆಗೆ ಅಚ್ಚರಿ ಮೂಡಿಸುತ್ತದೆ. ಕನಕರ ಚಿಂತನೆಗಳನ್ನು ನೋಡೋಣ.

*** ಸಂಸಾರ ನಿರಸನ:**

ನೆಚ್ಚದಿರು ಸಂಸಾರ ನೆಲೆಯಿಲ್ಲಾದೀಪರಿಯ
ಅಚ್ಚುತನ ನಾಮವನು ನೆನೆದು ಸುಖಿಯಾಗು ॥

ಧರೆಯ ಬೋಗವನ್ನು ಮೆಚ್ಚಿ ಹರಿಯ ಕೆಡಲು ಬೇಡ
ಧರೆಯ ಭೋಗ ಕನಸಿನಂತೆ ॥

ಸಾಕು ಸಾಕು ಮನುಜ ಸೇವೆ ಮಾಡಿ ನೊಂದೆ ನಾನು
ಬೇಕು ನಿನ್ನ ಪಾದ ಭಜನೆ ಕೊಟ್ಟು ಸಲಹೊ ॥

*** ಸರ್ವಾರ್ಪಣ ಭಾವ :**

ತನು ನಿನ್ನದು ಜೀವನಿನ್ನದು ಸ್ವಾಮಿ
ಅನುದಿನದಲಿ ಬಾಹ ಸುಖ ದುಃಖ ನಿನ್ನದಯ್ಯ ॥

ತಲ್ಲಣಿಸದಿರು ಕಂಡ್ಯ ತಾಳು ಮನವೆ
ಎಲ್ಲರನು ಸಲುಹುವನು ಇದಕೆ ಸಂಶಯವಿಲ್ಲ ॥

*** ಕುಲ-ಛಲ ವಿರೋಧ;**

ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರು ಬಲ್ಲಿರಾ ॥

ಎಂಜಲೆಂಜಲೆಂಬರಾನುಡಿಯು
ಎಂಜಲವಲ್ಲವೆ ವಾರಿಜಲಕರ ಹಾಲುಕರುವಿನ ॥

* ಸಜ್ಜನರ ಸಂಗ ಕೊಡೆ ಲೇಸು;

ಅಜ್ಞಾನಿಗಳ ಕೂಡ ಅಧಿಕ ಸ್ನೇಹಕ್ಕಿಂತು
ಸುಜ್ಞಾನಿಗಳ ಕೊಡೆ ಜಗಳವೆ ಲೇಸು ॥

* ಹರಿಯ ಕೃಪೆ ಇಲ್ಲದೇ ನರನು ಬಾಳನು;
ತೊರೆದು ಜೀವಿಸಬಹುದೆ ಹರಿ ನಿನ್ನ ಚರಣವ
ಬರಿದು ಮಾತೆಕಿನ್ನೂ ಅರಿತು ಪೇಳುವೆನಯ್ಯ
ಕರುಣಿಸೆನ್ನನು ಕಾಯೋ ಕರುಣನಿಧಿ ॥

ಇಲ್ಲಿರುವ ಚಿಂತನೆಗಳು ಆತ್ಮಸಾಂಗತ್ಯದ ಮೂಲಕ ಸಮುದಾಯದೆಡೆಗೆ ನಡೆಗೆ ಅದ್ಭುತವಾಗಿವೆ. ಕನಕರ 'ರಾಮಧ್ಯಾನಚರಿತೆ' ಸಮಾಜವನ್ನು ಕಾಡುತ್ತಿರುವ ಅಸ್ಪೃಶ್ಯತೆ, ಅಸಮಾನತೆ, ಉಚ್ಚ ನೀಚ್ಚ ಕುಲಾಚಾರಗಳನ್ನು ವಿಡಂಬಿಸಿ ಸಮುದಾಯವನ್ನು ಎಚ್ಚರಿಸಿದ ವಿಚಾರ ಇಂದಿಗೂ ಪ್ರಸ್ತುತ.

**2. ಕನಕ ಆತ್ಮಸಾಂಗತ್ಯದಿಂದ ಸಮುದಾಯದೆಡೆಗೆ**

– ಶ್ರೀ ಪ್ರಕಾಶ್

ಕನಕದಾಸನನ್ನು ಮರು ಓದಿಗೆ ಒಳಪಡಿಸುತ್ತಿರುವ ನಾವು ಈ ಹೊತ್ತಿನ ಬಿಕ್ಕಟ್ಟುಗಳಿಗೆ ಕನಕಪ್ರಜ್ಞೆ ಎಂಬ ನಿರ್ಧಿಷ್ಟ ತಾತ್ವಿಕತೆಯನ್ನು ಕಟ್ಟಿಕೊಳ್ಳುತ್ತಿದ್ದೇವೆ.ಈ ಬಗೆಯ ಸಾಂಸ್ಕೃತಿಕ ಅನುಸಂಧಾನದ ಮುಲಕ ಹೊಸ ಬಗೆಯ ಜ್ಞಾನ ಮತ್ತು ಸಾಮಾಜಿಕ ಪ್ರಜ್ಞೆಯ ಅರಿವಿನ ಸಂಕಥನಗಳನ್ನು ಸಹ ರೂಪಿಸಿಕೊಳ್ಳುತ್ತಿದ್ದೇವೆ. ಈ ಮುಖಾಂತರ ಹೊಸ ಯುಗಮಾನಕ್ಕೆ ಬೇಕಾದ ಸಮಾನತೆಯ ವೈಚಾರಿಕ ಆಕೃತಿಗಳನ್ನು ಕಟ್ಟುವ ಸಮಾಜಮುಖಿಯ ಅಧ್ಯಯನದ ಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳುತ್ತಿದ್ದೇವೆ.

ನಮ್ಮ ಹಿಂದಣವನ್ನು ಈ ಹೊತ್ತಿನ ಸಾಂಸ್ಕೃತಿಕ ಪ್ರಜ್ಞೆಗನುಗುಣವಾಗಿ ವಿಸ್ತರಿಸಿಕೊಂಡು ಈ ಕಾಲಮಾನವನ್ನು ಪೊಲಿಟಿಕಲ್ ಕರೆಕ್ಟನೆಸ್‌ಗೆ ಒಳಗುಮಾಡುತ್ತಿದ್ದೇವೆ.ಇದು ಜ್ಞಾನ ಮತ್ತು ಅದರ ಅಧಿಕಾರ ಕೇಂದ್ರಗಳನ್ನು ವಿಕೇಂದ್ರಿಕರಿಸುವ ಪ್ರಕ್ರಿಯೆ ಎಂದೇ ಅರ್ಥಮಾಡಿಕೊಳ್ಳಬೇಕಿದೆ. ನಮ್ಮ ಸಾಮಜಿಕ ಪ್ರಜ್ಞೆ ಮತ್ತು ಅರಿವಿನ ಅರ್ಥಸಾಧ್ಯತೆಗಳನ್ನು ಈ ಜಾತಿ ಸಮಾಜ ಮರೆವಿಗೆ ಸರಿಸಿದ ಸಂಗತಿಗಳಿಂದ ಮರು ಓದುವ ಮೂಲಕ ಸಾಂಸ್ಕೃತಿಕ ವಿದ್ಯಮಾನಗಳು ಈ ಸಮಾಜದ ಜ್ಞಾನ ಮತ್ತು ಅಧಿಕಾರ ಕೇಂದ್ರಗಳ ವಿಕೇಂದ್ರೀಕರಣಗಳಿಗಾಗಿ ಒತ್ತಾಯಿಸುತ್ತಿವೆ. ಇದು ಒಂದು ರೀತಿಯಲಿ ಸಾಂಸ್ಕೃತಿಕವಾಗಿ ಈ ಸಮಾಜ ಪ್ರಜಾಸತಾತ್ಮಕವಾಗುವ ಕಡೆಗೆ ಚಲಿಸುತ್ತಿದೆ ಎಂದೇ ಹೇಳಬಹುದು.

ಕೆಳಜಾತಿಗಳು ಸಾಂಸ್ಕೃತಿಕವಾಗಿ ತಮ್ಮ ಗುರುತುಗಳನ್ನು ಸಂಘಟಿಸಿಕೊಳ್ಳುವ ಕಾಲದಲ್ಲಿವೆ. ಈ ದಿಸೆಯಲ್ಲಿ ಕೆಳಜಾತಿಗಳ ಸ್ಮೃತಿಪರಂಪರೆಯತ್ತ ಆರೋಗ್ಯವಾಗಿ ಅನುಸಂಧಾನಿಸುವ ಪ್ರಯತ್ನಗಳಿಗೆ ಚಾಲನೆ ಉಂಟಾಗುತ್ತಿದೆ.ಇಂತಹ ತಾತ್ವಿಕ ದೃಷ್ಟಿಕೋನದಡಿಯಲ್ಲಿ ಕನಕದಾಸರಂತಹ ಸಂತರು,ಶರಣರ ಬಗ್ಗೆ ಈ ಹಿಂದಿನ ಜನಪ್ರಿಯ ಹಾಗು ಸಾರ್ವತ್ರಿಕವೆನ್ನುವಂತಹ ಗ್ರಹಿಕೆಗಳಿಂದ ಹೊರಬರಲು ಸಾಧ್ಯವಾಗುತ್ತಿದೆ.ಕನಕದಾಸರಂಥವರು ವ್ಯಕ್ತಿಯೂ ಹೌದು ಸಾಮುದಾಯಿಕ ಶಕ್ತಿಯೂ ಹೌದು. ಅಂದರೆ ಕನಕದಾಸರು ತಮ್ಮ ವ್ಯಕ್ತಿತ್ವದ ಮೂಲಕವೇ ಸಮುದಾಯಿಕತೆಯ ಸಾಂಸ್ಕೃತಿಕ ರಾಜಕಾರಣವನ್ನು ನಿರ್ವಹಿಸಿದ್ದಾರೆ.ಇವರ ಒಟ್ಟು ನಡೆ ಹಾಗು ಸಾಹಿತ್ಯ ಮತ್ತೆ ಆಧ್ಯಾತ್ಮ ಚಿಂತನೆ ಇವೆಲ್ಲವೂ ವೈದಿಕ ಮನಸ್ಥಿತಿಯ ವ್ಯಕ್ತಿ ಆರಾಧನೆಯ ಪ್ರವೃತ್ತಿಗೆ ವಿರುದ್ಧವಾಗಿವೆ. ಕನಕರ ಆತ್ಮ ಸಾಂಗತ್ಯವು ಭಕ್ತಿ ವಿಜೃಂಭಣೆಯ ಸಾಧಕನ ಕಥನವಲ್ಲ;ಇದು ಅಲ್ಲಮನ ಬಯಲತತ್ವದ ಅನುಭಾವಿಕ ನೆಲೆಯದ್ದು. ಈ ಬಯಲು ಎಂಬುದೇ ನಾನು ನೀನು ಎಂಬ ಉಭಯವಳಿಯುವ ಮನಸ್ಥಿತಿಯದು. ಅಂದರೆ ವ್ಯಕ್ತಿ ಕೇಡುಗಳಿಂದ ಬಿಡುಗಡೆಗೊಂಡು ಜೀವ ಮತ್ತೆ ಆತ್ಮ ಎಂಬ ವಿಭೇಧವಿಲ್ಲದ ಹೊಸ ಮಾನುಷ ಪ್ರಜ್ಞೆಗೆ ರೂಪಾಂತರಗೊಳ್ಳುವುದೇ ಆಗಿರುತ್ತದೆ. ಹಾಗಾಗಿ ಕನಕನ ಆತ್ಮಸಾಂಗತ್ಯವು ವ್ಯಷ್ಟಿಯಿಂದ ಸಮಷ್ಟಿಯಡೆಗೆ ತುಯ್ಯುತ್ತಿರುತ್ತದೆ.

ಎಂದೂ ಕಂಡರಿಯದ ಬಿಕ್ಕಟ್ಟುಗಳ ಕಾಲವಿದು. ಕಾರಣ ಈ ಸಮಾಜವು ಬಹಳ ಸಂಕೀರ್ಣವಾದ ಸಾಮಾಜಿಕ ಹಾಗು ಸಾಂಸ್ಕೃತಿಕ ಗ್ರಹಿಕೆಗಳಿಂದ ಕೂಡಿದ್ದು,ಪೊಲಿಟಿಕಲ್ಲಾಗಿ ತರತಮದ ಅಪಾಯಗಳನ್ನು ಒಳಗೊಂಡಿದೆ. ಹಾಗಾಗಿ ಇಲ್ಲಿ ವ್ಯಕ್ತಿ ಮತ್ತು ಸಮಾಜ ಭಿನ್ನ ಹಾಗು ಅಭಿನ್ನವೆಂಬ ಎರಡೂ ವಲಯಗಳಲ್ಲಿ ಉಸಿರಾಡಬೇಕಾಗಿದೆ. ಅದರಲ್ಲೂ ಜಾತಿ ತರತಮದ ಈ ಸಾಮಾಜಿಕ ವ್ಯವಸ್ಥೆ ಕೇಂದ್ರ ಮತ್ತು ಪರಿಧಿ ಎಂದು ವಿಂಗಡಿಸಿಕೊಂಡಿದೆ. ಈ ಪರಿಧಿಯ ವ್ಯಕ್ತಿ ಮತ್ತು ಸಮುದಾಯಗಳು ಶೋಷಣೆ ಹಾಗು ಅಮಾನುಷವಾಗಿ ಮಾನವೀಯ ಘನತೆ ಮತ್ತು ಗೌರವದ ವ್ಯಕ್ತಿತ್ವ ಸಂಪಾದಿಸುವಲ್ಲಿ ಹೋರಾಡುತ್ತಲೇ ಬರುತ್ತಿವೆ. ಈ ಬಗೆಯ ಹೋರಾಟವು ಕೇವಲ ರಾಜಕೀಯಾತ್ಮಕವಾಗಿ ಮಾತ್ರವಾಗಿರದೇ ಇಡೀ ಮೂಲಭೂತ ಸಾಮಾಜಿಕ ಗ್ರಹಿಕೆಗಳ ಪಲ್ಲಟಗಳ ಬೌದ್ಧಿಕ ಸಂಘರ್ಷವೂ ಸಹ ಆಗಿರುತ್ತದೆ. ಹಾಗೆಯೇ ಇವುಗಳನ್ನು ಬಹಳ ತೆಳುವಾಗಿ ನೋಡವುದು ಬಹಳ ಅಪಾಯಕಾರಿ. ಯಾಕಂದರೆ ಸಂಕೀರ್ಣತೆ ಈ ಸಮಾಜದ ಲಕ್ಷಣ. ಇಲ್ಲಿ ಸಮಾಜ ಮತ್ತು ವ್ಯಕ್ತಿ ಈ ಬಗೆಯನ್ನು ಹಾದು ಹೋಗಬೇಕಾಗಿರುತ್ತದೆ ಇದು ಈ ನೆಲದ ಸಾಂಸ್ಕೃತಿಕವಾದ ವಿಲಕ್ಷಣ ಸೌಂದರ್ಯ.

ಕನಕದಾಸನನ್ನು ನಾವು ಹಿಂದೆ ವಿವರಿಸಿಕೊಂಡು ಬಂದ ಬಗೆ ಈಗ ಬದಲಾಗಿತ್ತಿದ್ದು, ಈಗ ಸಮುದಾಯವಾದದ ತಾತ್ವಿಕತೆಗಳಿಗೆ ಅನುಗುಣವಾಗಿ

ಓದುತ್ತಲೇ ಕನಕನನ್ನು ನಾವು ವಿಸ್ತರಿಸುವ ಕಾಲಘಟ್ಟದಲ್ಲಿದೇವೆ. ಹಾಗೆಂದು ಕೇವಲ ಪೊಲಿಟಿಕಲ್ ಆಗಿ ವಿವರಿಸಿಕೊಂಡು ಉಳಿದ ಕನಕನ ದಾರಿಗಳನ್ನು ಅವಜ್ಞೆಗೊಳಪಡಿಸುತ್ತಿದ್ದೇವೆ ಎಂಬ ಅಳುಕು ಬೇಡ. ಆದರೆ ಓಟುಬ್ಯಾಂಕಿನ ವಿಪರೀತಗಳಿಗೆ ಈ ಪ್ರವೃತ್ತಿಗಳು ಬಲಿಯಾಗದಿರುವಂತೆ ನೋಡಿಕೊಳ್ಳುವ ಅಗತ್ಯವಿದೆ.ಕನಕನನ್ನು ಜನಾಂಗೀಯ ಪ್ರತಿಮೆಯಾಗಿ ನೋಡುವವರೂ ಈ ಅಪಾಯಗಳ ಬಗ್ಗೆ ಎಚ್ಚರವಿರಬೇಕಾಗುತ್ತದೆ. ಯಾಕಂದರೆ ಇದೇ ಕನಕ ಅಧಿಕಾರ ಹಾಗು ಭವದ ಕೇಡಿಗೆ ಕಾರಣವಾಗುವ ಸೂತಕಗಳನ್ನು ಧಾಟಿ ಕೇಶವನನ್ನು ಮತ್ತು ತನ್ನನ್ನು ಬಯಲುಗೊಳಿಸಿಕೊಂಡಿದ್ದಾನೆ.ಆದ್ಧರಿಂದ ಈ ವಿವೇಕವನ್ನು ಮರೆಯುವಂತೆಯೂ ಇಲ್ಲ.

ಸಾಮಾಜಿಕವಾಗಿ ಅವಮಾನದ ಹಿನ್ನಲೆಯಿಂದ ಬಂದ ವ್ಯಕ್ತಿ ಮತ್ತು ಸಮುದಾಯಗಳು ತಮ್ಮನ್ನು ಕಟ್ಟಿಕೊಳ್ಳುವ ಬಗೆಯೇ ತಾತ್ವಿಕವಾಗಿ ಸಮತೆಯ ಸಾಮಾಜಿಕ ದರ್ಶನದ ನಿಲುವುಗಳನ್ನು ಬೆನ್ನಿಗಿಟ್ಟುಕೊಂಡೆ ಸಾಗಬೇಕಾರುತ್ತದೆ. ಕನಕ ಈ ಬಗೆಯ ಜ್ಞಾನ ಮತ್ತು ತಿಳಿವಳಿಕೆಗಳ ಪರಂಪರೆಗೆ ಸೇರಿದವನಾಗಿರುತ್ತಾನೆ. ಹಾಗೆ ನೋಡಿದರೆ ಕನಕನ ಮತ್ತು ಆತನ ಸಮುದಾಯ ಎದುರಾಗುವ ಸಾಮಾಜಿಕತೆಯ ಅನುಭವವು ಒಂದೇ ಆಗಿರುತ್ತದೆ. ಹಾಗಾಗಿ ತಾನು ಹರಿಭಕ್ತನಾಗಿ ಕೇವಲ ಭಜನೆ ಮಾಡಿಕೊಂಡು ವ್ಯಾಸಕೂಟದಲ್ಲಿ ಉಳಿದುಬಿಡಲಿಲ್ಲ. ತಾನು ಹೊಂದಿದ ಜ್ಞಾನ ಮತ್ತು ತಿಳುವಳಿಕೆಗಳು ಬಯಲಿನ ತತ್ವಕ್ಕೆ ಅಂದರೆ ಸಮಾಜದ ಪರಿಧಿಗೆ ಚಲನೆಗೊಳ್ಳುವಂತೆ ಕನಕ ಸಾಂಸ್ಕೃತಿಕ ರಾಜಕಾರಣವನ್ನು ಮಾಡಿದ್ದಾನೆ ಎಂದೇ ಗ್ರಹಿಸಿಕೊಳ್ಳವುದು ಈ ಹೊತ್ತಿಗೆ ಚಾರಿತ್ರಿಕವಾಗಿ ಸರಿಯಾಗಿಯೇ ಇದೆ. ಹೀಗಾಗಿ ಈತ ಆತ್ಮಸಂಗಾತ್ಯದ ನೆಪದಲ್ಲಿ ತನ್ನ ಸಮುದಾಯಿಕ ಸ್ಮೃತಿಯಿಂದ ದೂರವನ್ನು ಕಾಯ್ದುಕೊಳ್ಳಲಾರ. ಈ ಕಾರಣದಿಂದಲೇ ಈತನೊಳಗೆ ಸಾತ್ವಿಕವಾದ ಬಂಡುಕೋರತನ ವ್ಯಕ್ತವಾಗಿದೆ. ಈ ಬಂಡುಕೋರತನವು ಧರ್ಮ ಮತ್ತು ದೈವಿಕತೆಯನ್ನು ಮಾನವೀಕರಣಗೊಳಿಸುವ ಸಾಮಾಜಿಕ ಹಾಗು ಸಾಂಸ್ಕೃತಿಕ ಹೊಣೆಗಾರಿಕೆಯ ನೆಲೆಯದ್ದು. ಆದ್ದರಿಂದಲೇ ಈತ ತನ್ನ ಸಾಹಿತ್ಯ ಮತ್ತು ಆಧ್ಯಾತ್ಮಿಕ ಯಾನವನ್ನು ಕೇವಲ ವೈಯಕ್ತಿಕ ವಿಜೃಂಭಣೆಯ ಹಂತಕ್ಕೆ ತೆಗೆದುಕೊಂಡು ಹೋಗಲಾರ. ಈತನ ನಡೆಯು ಜೀವ ಮತ್ತು ದೈವಿಕತೆಯನ್ನು ರೂಢಿಗತವಾದ ಪ್ರಭುತ್ವಗಳಿಂದ ಬಿಡಿಸುವುದೇ ಆಗಿರುತ್ತದೆ. ಧರ್ಮ ಮತ್ತು ಆಧ್ಯಾತ್ಮಿಕ ಸಂಕಥನಗಳನ್ನು ಕನಕ ಜನತೆಯತ್ತ ತಿರುಗಿಸುತ್ತಾನೆ. ಲೋಕಾವಿರಕ್ತಿಯ ಭಾಗವಾಗಿ ತಾನು ಸಂಪ್ರದಾಯಸ್ಥನಾಗಿ ಉಳಿಯದ ಕನಕ ಲೋಕವಿಮರ್ಶೆಯ ಪಾಠಗಳನ್ನು ತನ್ನ ದೈವ ಮತ್ತು ಆಧ್ಯಾತ್ಮದ ಮೂಲಕ ಹುಟ್ಟುಹಾಕಿದ್ದಾನೆ. ದೈವ ಮತ್ತು ಭಕ್ತಿಯನ್ನು ಕೇವಲ ಸ್ತುತಿಯ ಪರಕಾಷ್ಠೆಗೇರಿಸಲು ಇಚ್ಚಿಸದ ಕನಕ ತನ್ನ ಆತ್ಮಸಾಂಗತ್ಯದ ಮೂಲಕ ಲೋಕಾನುರಕ್ತಿಯನ್ನೇ ಸಾಮಾಜಿಕ ಹೊಸ ನೈತಿಕತೆಯ ಮೇಲೆ ಸಂಘಟಿಸಲು ಪ್ರಯತ್ನಸಿದ್ದಾನೆ.

ಕನಕನ ಆತ್ಮಸಂಗಾತ್ಯದ ಈ ಪರಿಕಲ್ಪನೆಯು ಸರಳವಾದ ಸಮಾನತೆಯ ವಿಚಾರಗಳಿಗೆ ಸೀಮಿತಗೊಳಿಸುವುದ ಕ್ಕಿಂತಲೂ ಈ ಕಾಲಮಾನವು ಪ್ರತಿಪಾದನೆ ಮಾಡಬೇಕಾದ ಹಾಗು ಒಳಗೊಳ್ಳಬೇಕಾದ ಹೊಸ ಸಮಾನತೆಯ ತತ್ವಗಳಿಗೆ ಕನಕದಾಸನನ್ನು ಮುಖಾಮುಖಿಯಾಗಿಸುವ ಸಂಸ್ಕೃತಿಯ ಪುನರ್ ವ್ಯಾಖ್ಯಾನದ ತಾತ್ವಿಕತೆಯ ಒಳನೋಟಗಳಿಂದ ಈ ಆತ್ಮಸಾಂಗತ್ಯ ಎಂಬ ಪರಿಕಲ್ಪನೆಯನ್ನು ವಿವರಿಸಿಕೊಳ್ಳಲಾಗಿದೆ. ಇದು ಭಕ್ತಿ ಚಳವಳಿಯ ವ್ಯಕ್ತಿ ಸಾಧನೆಯ ವಿಜೃಂಭಣೆಯ ಕಥನ ವಿನ್ಯಾಸಕ್ಕಿಂತಲೂ ವ್ಯಕ್ತಿಯ ಪ್ರಜ್ಞೆ ಹೇಗೆ ಸಮುದಾಯಿಕತೆಯನ್ನು ಪ್ರತಿಪಾದಿಸುತ್ತದೆಂಬುದರ ಬಗ್ಗೆ ಪರಿಶೀಲಿಸಲಾಗಬೇಕಾಗುತ್ತದೆ. ಹಾಗೆಯೇ ಕೆಳ ಜಾತಿಯ ಸಂತರು ಶರಣರನ್ನು ಮೇಲಸ್ತರದ ಆಧ್ಯಾತ್ಮಿಕ ಸಂಕಥನಗಳಲ್ಲಿ ಕಟ್ಟಿಹಾಕಿ ಅವುಗಳ ಪ್ರತಿಪಾದಕನನ್ನಾಗಿ ನೋಡುವ ಪರಿ ಸಾಂಸ್ಕೃತಿಕವಾಗಿ ಆ ವ್ಯಕ್ತಿ ಹಾಗು ಆತನ ಸಮುದಾಯವನ್ನು ಸೆಕೆಂಡರಿಯಾಗಿ ನೋಡುವ ಅಪಾಯಗಳನ್ನು ತಂದೊಡ್ಡುತ್ತದೆ. ಕನಕದಾಸರ ನಡೆ ಹರಿಭಕ್ತಿಯನ್ನು ಸಾರುವುದೇ ಆದರೂ ಇಲ್ಲಿ ಕನಕ ತನ್ನದೇ ಸಮುದಾಯಿಕ ದಾರಿಯನ್ನು ಸಂಘಟಿಸುತ್ತಾನೆ. ಈತನಿಗೆ ಹರಿ ರೂಢಿಗತನಾದ ದೈವದ ಪರಿಯ ರೀತಿ ಸಾಕಾರ ಗುಣವಾಚೆಗಿನವ. ಆತ ಬಾಗಿಲನ್ನು ಒಡೆದು ಬರುವ ಬಯಲ ಜನತೆಯ ಯೋಗಿಯಾಗಿ ಕಾಣಬೇಕು. ದರ್ಶನದ ಸ್ವರೂಪವೇ ಬದಲಾಗಿ ಎಲ್ಲರಿಗೂ ದೈವ ಸಾಮಾಜಿಕ ತರತಮಗಳಿಲ್ಲದೆ ಬಹಳ ಮುಕ್ತವಾಗಿ ಗೋಚರವಾಗುವಂತಾಗಬೇಕೆಂಬ ನಿಲುವುಗಳನ್ನು ಪ್ರಕಟಿಸುತ್ತಾನೆ. ಚಾರಿತ್ರಿಕವಾಗಿ ಅಂದು ಭಕ್ತಿ ಚಳವಳಿಯೂ ಈ ಸಮಾಜದ ಊಳಿಗಮಾನ್ಯ ವ್ಯವಸ್ಥೆ ಹಾಗು ಬ್ರಾಹ್ಮಣಶಾಹಿಯ ವಿರೋಧದ ನಡುವೆ ಆಗತಾನೆ ತಲೆ ಎತ್ತುತ್ತಿದ್ದ ಶ್ರಮಿಕ ವರ್ಗ ಹಾಗು ಉತ್ಪಾದನ ವರ್ಗಗಳಿಗೆ ಆಧ್ಯಾತ್ಮಿಕ ಹಾಗು ಧಾರ್ಮಿಕ ಹಕ್ಕುದಾರಿಕೆಯನ್ನು ಮೇಲ್ಜಾತಿ ನಿರಾಕರಿಸಿತ್ತು. ಕಾರಣ ಎರಡೂ ವರ್ಗಗಳು ಶೂದ್ರಾತಿಶೂದ್ರ ಸಮುದಾಯಗಳಿಂದ ಬಂದವೆಂಬ ಕಾರಣಗಳೂ ಇವೆ. ಕನಕದಾಸರಂತಹ ಭಕ್ತರು ಇಂತಹ ತಡೆಗೋಡೆಗಳನ್ನು ಒಡೆಯುವಲ್ಲಿ ಚಳವಳಿಯನ್ನೆ ಚಾರಿತ್ರಿಕವಾಗಿ ಉಸಿರಾಡಿದ್ದಾರೆ. ಹಾಗೂ ಈತನಿಗೆ ಧಾರ್ಮಿಕವಾಗಿ ಹೊಸ ಜ್ಞಾನ ಮತ್ತು ತಿಳುವಳಿಕೆಯನ್ನು ಕಟ್ಟುವುದು ಕೂಡ ಇವರ ಹೊಣೆಗಾರಿಕೆಯಾಗಿತ್ತು. ಈ ಕಾರಣಕ್ಕಾಗಿ ಆತ ಸ್ನಾನವ ಮಾಡಿ ಜ್ಞಾನ ತೀರ್ಥದಲ್ಲಿ ಎಂದು ಹೇಳುವ ಕ್ರಮವೇ ಹೊಸ ಸಾಮಾಜಿಕ ದರ್ಶನ ಮೀಮಾಂಸೆಯಾಗಿಯೇ ಕಾಣುತ್ತದೆ. ಕುವೆಂಪುರವರು ಹೇಳಿದಂತೆ ದೇವರ ಅನ್ಯಾಯವನ್ನು ಮಾನವರೆ ತಿದ್ದಿ ಎಂದೇಳಿದಂತೆ ಕನಕನ ಆಧ್ಯಾತ್ಮದ ಹಾದಿಯೂ ಈ ತಿಳಿವಳಿಕೆಯ ಪ್ರಖರತೆಯನ್ನೆ ಒತ್ತಿ ಹೇಳುತ್ತದೆ.

ಬಯಲಾಗುವ ಪರಂಪರೆ ಕೇವಲ ಭಕ್ತಿ ವಿಜೃಂಭಣೆ ಹಾಗು ವೈಯಕ್ತಿವಾದ ಮೋಕ್ಷಗಾಮಿ ಕನವರಿಕೆಗಳನ್ನು ನಿರಾಕರಿಸುತ್ತದೆ. ಬಯಲಾದ ಮೇಲೆ ಎಲ್ಲಿಯ ವ್ಯಕ್ತಿ ಮತ್ತು ಎಲ್ಲಿಯ ಸಮಾಜ ಇವೆರಡರ ನಡುವೆ ಸಂಬಂಧದ ಮಾತೆ ಬರದು

ಹಾಗಾಗಿ ಕನಕನದು ಇಂತಹ ಪ್ರಜ್ಞೆ, ಈ ಪ್ರಜ್ಞೆಗೆ ಕೇಡುಗಳಿಲ್ಲ; ಅದು ಸಮತೆ ಹಾಗು ಜೀವಕಾರುಣ್ಯದ ಬುದ್ಧನ ದಾರಿ. ಕನಕನಂತಹ ಎಲ್ಲ ಪರಂಪರೆಯ ವ್ಯಕ್ತಿತ್ವಗಳು ಯಾವುದೋ ಅನ್ಯಧರ್ಮದ ಆಧ್ಯಾತ್ಮದ ಮೂಸೆಯಲ್ಲಿ ಕೊಚ್ಚಿ ಹೋಗದೆ ಎಲ್ಲವನ್ನು ತನ್ನ ಸಾಮಾಜಿಕ ನೆಲೆಗೆ ತಳಸ್ಪರ್ಶಿಸುತ್ತಲೇ ತನ್ನ ಆತ್ಮ ಸಾಂಗತ್ಯವನ್ನು ಒಂದು ಸಾಮಾಜಿಕ ದರ್ಶನವನ್ನಾಗಿಸುತ್ತಾರೆ. ಕೆಳಜಾತಿಗಳ ಅನಾಧುನಿಕ ಜಗತ್ತು ಅಂದರೆ ವೈದಿಕ ಜ್ಞಾನ ಮತ್ತು ಆಧುನಿಕ ವೈಚಾರಿಕತೆ ನಿರಾಕರಿಸಿದ ಜಗತ್ತು ಈ ಬಗೆಯ ಸಾಮಾಜಿಕ ಫಿಲಾಸಫಿಯ ಒರತೆಯೇ ಆಗಿದೆ. ಕನಕ ಹರಿಭಕ್ತನಾದರೂ ನಾಮಸ್ಮರಣೆಯ ಮೂಲಕ ಹೊಸ ಸಮುದಾಯಕ್ಕೆ ಬೇಕಾದ ಜ್ಞಾನ ಮತ್ತು ತಿಳುವಳಿಕೆಯನ್ನು ತನ್ನ ಆಧ್ಯಾತ್ಮಿಕತೆಯ ಮೂಲಕ ಸೃಜಿಸಿದ್ದಾನೆ. ಮಂತ್ರಕ್ಕಿರುವ ಅಧಿಕಾರವನ್ನು ಒಡೆದು ಹಾಕಿ ನಾಮಸ್ಮರಣೆಯ ಮೂಲಕ ವ್ಯಕಿ ಆತ್ಮಸಾಂಗತ್ಯವನ್ನು ಸಾಧಿಸಿ ಕೊನೆಗೆ ನಿರ್ವಿಕಾರ ಹಾಗು ಕೇಡಿಲ್ಲದ ಮಾನುಷ ಪ್ರಜ್ಞೆಯ ಸಂಚಲನಗೊಳ್ಳುವ ಸಾಧ್ಯತೆಯನ್ನು ಕನಕನ ವಿಚಾರ ಮತ್ತು ಆಧ್ಯಾತ್ಮದ ಮಾರ್ಗದಲ್ಲಿ ಹುಡುಕಿಕೊಳ್ಳಬಹುದು. ಲೋಕಾನುರಕ್ತಿ ಹಾಗು ಲೋಕವಿರಕ್ತಿ ಎನ್ನುವ ಸರಳ ಆಧ್ಯಾತ್ಮಿಕ ಕಲ್ಪನೆಯಲ್ಲಿ ಈ ಆತ್ಮಸಾಂಗತ್ಯದ ಪರಿಕಲ್ಪನೆಯನ್ನು ನೋಡುವ ಅಗತ್ಯವಿಲ್ಲ. ಅವೈದಿಕನಾದರೂ ಕನಕ ವೈಷ್ಣವ ಮತದ ನುಡಿಗಟ್ಟಿನ ಮೂಲಕವೇ ಹೊಸ ಸಾಮಾಜಿಕ ದರ್ಶನದ ವಿಚಾರಗಳನ್ನು ಸಂಘಟಿಸುತ್ತಾನೆ. ತೀರಾ ಮೋಕ್ಷಗಾಮಿಯ ವ್ಯಸನ ಪ್ರವೃತ್ತಿಯ ಆಚೆಗಿನ ಕನಕನ ದಾರಿ ಜನತೆಯನ್ನು ಅಪ್ಪಿಕೊಳ್ಳುವ ಭಿನ್ನವಾದ ಆಧ್ಯಾತ್ಮಿಕ ಸಂಕಥನವಾಗಿದೆ. ಕನಕನ ಅನುಭಾವಿಕತೆ ಕೇವಲ ವ್ಯಕ್ತಿವಾದದ ವಿಜೃಂಭಣೆಯಾಗದೆ ವ್ಯಕ್ತಿ ಮತ್ತು ಸಮಾಜಕ್ಕೆ ಬೇಕಾದ ಜ್ಞಾನ ಮತ್ತು ವಿವೇಕವನ್ನು ಒಳಗೊಂಡಿರುತ್ತದೆ. ಅಂದರೆ ಮಂಟೇಸ್ವಾಮಿ ಪರಿಭಾಷೆಯಲ್ಲಿ ಹೇಳುವುದಾದರೆ ಇದು ಕೂಡ ಲೋಕಕಟ್ಟುವ ಪ್ರಕ್ರಿಯೆಯೇ ಆಗಿ ತೋರುತ್ತದೆ.

ಕನಕನನ್ನು ನಾವು ಈ ಹಿಂದೆ ಒಬ್ಬ ಭಕ್ತಿ ಕವಿ ಸಂತ ಎದು ಅರ್ಥಮಾಡಿಕೊಂಡ ಬಗೆ ತೀರಾ ಸರಳೀಕರಣದ್ದು. ಈಗ ಸಮಜದ ಅವಮಾನದಿಂದ ನೊಂದ ಸಮುದಾಯಗಳು ಆಧುನಿಕಗೊಂಡು ತ್ಮನ್ನು ರಾಜಕೀಯವಾಗಿ ಪ್ರಬಲಗೊಳಿಸಿಕೊಳ್ಳುವ ತುರ್ತಿನಲ್ಲಿವೆ. ಹಾಗೆಯೇ ನ್ಮದೇ ಸಾಂಸ್ಕೃತಿಕ ಆತ್ಮಪ್ರತ್ಯಯದ ಗುರುತಿನ ಬೆನ್ನುಕೂಡ ಹಿಡಿಯುತ್ತವೆ. ಡೆಮಕ್ರಟಿಕ್ ಆಗುವ ದಾರ್ಮಿಕ ಪರಂಪರೆಗಳು ನಮ್ಮ ಬೆನ್ನಿಗಿವೆ. ಅಂಬೇಡ್ಕರ್ ೇಳುವ ಸೋಶಿಯಲ್ ಡೆಮಾಕ್ರಸಿಯ ಹಾದಿಯಲ್ಲಿ ಅಂಚಿನ ಸಮುದಾಯಗಳು ತಸವಾಗಿ ನಡೆಯಬೇಕಿದೆ. ಪರಂಪರೆಯ ಕೇಡ ತೊಳೆವಲ್ಲಿ ಕನಕನಂತಹ ಕೆಳುತಿಗಳ ಸಂತರು ಕೇವಕ ಭಕ್ತಿಪಂಥದ ಹಿಂಬಾಲಕರಾಗಿ ಮಾತ್ರ ಮುಂದುರೆದಿಲ್ಲ. ಶೋಷಿತರಿಗೆ ಬೇಕಾದ ತತ್ವ ಮತ್ತು ವಿವೇಕದ ವಿಚಾರಗಳನ್ನು ಆತ್ಮಸಗತ್ಯದ ಮೂಲಕವೇ ಸಮುದಾಯಿಕ ನೆಲೆಗೆ ಸಂಘಟಿಸಿದ್ದಾರೆ. ಈ ರೀತಿಯ ಮರು

ಓದಿನ ಗ್ರಹಿಕೆಯಿಂದ ಕನಕನಂಥವರು ಸೋಶಿಯಲ್ ಡೆಮಾಕ್ರಟಿಕ್ ವ್ಯಕ್ತಿತ್ವದವರಾಗಿ ಕಂಡುಬರುತ್ತಾರೆ.

ನಮ್ಮ ಪರಂಪರೆಗಳ ಆಧ್ಯಾತ್ಮಿಕ ಸಂಕಥನಗಳನ್ನು ಜ್ಞಾನ ಮತ್ತು ಅಧಿಕಾರ ಕೇಂದ್ರಗಳನ್ನು ವಿಕೇಂದ್ರಿಕರಿಸುವ ಸಾಧ್ಯತೆಗಳ ನಡೆಯಾಗಿ ನಾವು ಈ ಆತ್ಮಸಾಂಗತ್ಯದ ಪರಿಕಲ್ಪನೆಯನ್ನು ಸಮುದಾಯಿಕ ನೆಲೆಗೆ ಕೊಂಡೊಯ್ಯಬಹುದು.

**ಹುಟ್ಟಿದ ಮೊದಲುಗೊಂಡು ಇಂದು ಪರಿಯಂತರವು**

ಭ್ರಷ್ಟನಾಗಿ ಪರರ ಸೇವೆಯಿಂದಿರುತಿಹೆನು ಎಂಬಲ್ಲಿ ಕನಕನ ಆತ್ಮಸಾಂಗತ್ಯವು ವಿರಮಿಸುವ ಬಗೆಯದ್ದಾಗಿರದೆ ಅದು ಅಲ್ಲಮನ ಬಯಲಿನತ್ತ ಸಾಗುತ್ತದೆ. ಈ ತರದ ವಿಚಾರಗಳ ಮೂಲಕವೇ ನಾವು ಹೊಸ ವೈಚಾರಿಕ ನುಡಿಗಟ್ಟುಗಳನ್ನಾಗಿ ಜನಪ್ರಿಯಗೊಳಿಸಬೇಕಿದೆ. ಬ್ರಾಹ್ಮಣೀಯ ದರ್ಶನಗಳನ್ನು ಆತ್ಯತಿಂಕವೆಂದು ಪರಿಭಾವಿಸುವ ಕ್ರಮಗಳಿಂದ ಬಿಡಿಸಿಕೊಂಡು ಅಬ್ರಾಹಣ ದರ್ಶನಗಳ ಕಡೆಗೆ ಚಲಿಸಬೇಕು. ಕನಕನನ್ನು ಈ ಬಗೆಯ ಸಾಮಾಜಿಕ ಜ್ಞಾನಮೀಮಾಂಸಕನನ್ನಾಗಿ ನೋಡುವ ಸಾಧ್ಯತೆಗಳು ವಿಪುಲವಾಗಿವೆ.

## 3. ಆತ್ಮ ಸಾಂಗತ್ಯವೆಂಬ ಅನುಭಾವದಿಂದ ಸಮುದಾಯದತ್ತ

– ಡಾ. ನಿಕೇತನ

ಆತ್ಮ ಸಾಂಗತ್ಯದ ಭಕ್ತಿಯ ಲೋಕದೃಷ್ಟಿಯಾಗಿ ವಿಸ್ತರಣೆಗೊಳ್ಳುವ ಸೂಕ್ಷ್ಮತೆಯನ್ನು ಅರಿಯುವ ಪ್ರಯತ್ನವಿರುವುದನ್ನು ಲೇಖನದಲ್ಲಿ ಮನಗಾಣಬಹುದಾಗಿದೆ. ಇಲ್ಲಿ ಒಂದು ಮುಖ್ಯ ವಿಚಾರವನ್ನು ಪ್ರಸ್ತಾಪಿಸುತ್ತಿದ್ದೇನೆ. 'ನಾರದ ಸೂತ್ರ', 'ಶಾಂಡಿಲ್ಯಸೂತ್ರ'– ಮೊದಲಾದ ಶಾಸ್ತ್ರೀಯ ವಿವೇಚನೆಗಳನ್ನು ಆಧಾರವಾಗಿ ತೆಗೆದುಕೊಂಡು ಭಕ್ತಿ ಮತ್ತು ಭಕ್ತನ ವಿವೇಚನೆಗಿಂತ ಭಿನ್ನವಾಗಿ ಜನಪದ ಮಾರ್ಗದಿಂದ ವಿಶ್ಲೇಷಿಸುವುದು ಹೆಚ್ಚು ಮುಖ್ಯವೆನಿಸುತ್ತದೆ. 'ಸಮುದಾಯದತ್ತ' ಎಂಬ ಪದವೇ ಜನಪದ ಕೇಂದ್ರಿತವಾದುದು. ಇದರಿಂದ ದಾಸರ ಭಕ್ತಿ ಮತ್ತು ಭಕ್ತ ಜನಸಾಮಾನ್ಯನೇ ಹೊರತು ಸೂತ್ರಗಳು ಹೇಳುವ ಸೈದ್ಧಾಂತಿಕ ಚೌಕಟ್ಟಿನಲ್ಲಿ ಬೆಳೆದ ಭಕ್ತನಲ್ಲ. ಇಲ್ಲಿ ಭಕ್ತಿ ಮತ್ತು ಭಕ್ತರ ಸಂಬಂಧ ಅತ್ಯಂತ ಸರಳವಾದುದು. ಜನಸಾಮಾನ್ಯರು ನೈತಿಕ ಮಾರ್ಗದ ಮೂಲಕ ಭಕ್ತಿಯನ್ನು ರೂಢಿಸಿಕೊಂಡು ಪರಮಾತ್ಮನನ್ನು ಪಡೆಯಬೇಕೆಂಬ ಹಂಬಲವಿದೆ. "ಭಕ್ತಿ ಎಂಬುದು ಒಂದು ಲೋಕದೃಷ್ಟಿ. ಇದು ತನ್ನದೇ ಆದ ರೀತಿಯಲ್ಲಿ ಲೋಕವನ್ನು ಅರ್ಥೈಸಿಕೊಳ್ಳುತ್ತದೆ. ಇದಕ್ಕೆ ಅನೇಕ ಕಟ್ಟುಪಾಡುಗಳಿವೆ" – ಎಂಬ ಪ್ರಬಂಧಕಾರರ ಮಾತು ಒಪ್ಪತಕ್ಕದ್ದು. ಲೌಕಿಕ ಬದುಕಿನಲ್ಲಿರುವ ಆಸೆಗಳೇ ಆ ಕಟ್ಟುಪಾಡುಗಳು. ಇವು ನೈತಿಕ ದಾರಿಗಿರುವ ದೊಡ್ಡ ತೊಡಕುಗಳು. ಈ ತೊಡಕುಗಳಿಂದ, ಅಂದರೆ ಕಟ್ಟುಪಾಡುಗಳಿಂದ ಮುಕ್ತರಾಗುವುದೇ ಭಕ್ತಿಯ ಕಡೆಗೆ ನಡೆಯುವ ದಾರಿಯಾಗಿದೆ. ಈ ಲೌಕಿಕ

ಲೋಕವನ್ನು ದಾಸರು ತಮ್ಮ ಕೀರ್ತನೆಗಳಲ್ಲಿ ಅರ್ಥೈಸುವ ಪ್ರಯತ್ನ ಮಾಡಿದ್ದಾರೆ. ಸಾಮಾಜಿಕ ವಿಡಂಬನೆಯ ಕೀರ್ತನೆಗಳು ಈ ಲೌಕಿಕ ಲೋಕವನ್ನು ವಿವರಿಸುವ ಪ್ರಯತ್ನವನ್ನು ಮಾಡುತ್ತವೆ. "ಕುಲ ಕುಲ ಕಲವೆನ್ನುತಿಹರು", "ಎಲ್ಲರೂ ಮಾಡುವುದು ಹೊಟ್ಟೆಗಾಗಿ", "ಕಲಿಯುಗದ ಮಹಿಮೆಯನು", ಇತ್ಯಾದಿ ಕೀರ್ತನೆಗಳನ್ನು ಉದಾಹರಿಸಬಹುದು. ಲೌಕಿಕ ಜಗತ್ತನ್ನು ವಿವರಿಸುತ್ತಾ ಅದರ ಮಿತಿ ಮತ್ತು ಪರಿಣಾಮಗಳನ್ನು ಅತೀ ಸರಳವಾಗಿ ದಾಸರ ಕೀರ್ತನೆಗಳು ವಿವರಿಸುತ್ತವೆ. ಒಂದು ರೀತಿಯಲ್ಲಿ ಲೋಕವನ್ನು ಅರ್ಥೈಸುವ ಪ್ರಕ್ರಿಯೆಯಿದು. ಅದರ ಮೂಲಕ ಭಕ್ತಿಯ ಅಗತ್ಯ ಮತ್ತು ಸ್ವರೂಪವನ್ನು ವಿವರಿಸುವ ಪ್ರಯತ್ನವನ್ನು ದಾಸರು ಮಾಡುತ್ತಾರೆ. ಆ ಮೂಲಕ ಭಕ್ತಿ ಎಂಬ ಲೋಕದೃಷ್ಟಿಯನ್ನು ನಿರ್ಮಿಸುವ ಕಾರ್ಯವನ್ನು ನಿರ್ವಹಿಸುತ್ತಾರೆ. "ಹ್ಯಾಂಗೆ ನೀ ದಾಸನಾದೆ ಪ್ರಾಣಿ" –ಎಂಬ ಕೀರ್ತನೆಯು ಈ ರೀತಿ ಲೌಕಿಕ ಲೋಕವನ್ನು ವಿವರಿಸುತ್ತಾ ಅದರಿಂದ ಬಿಡುಗಡೆಗೊಂಡು ಭಕ್ತಿಯತ್ತ ಹೊರಳುವ ಪ್ರಕ್ರಿಯೆಯನ್ನು ವಿವರಿಸುತ್ತದೆ. ಇದನ್ನು ಪ್ರಬಂಧಕಾರರು ಮೇಲಿನ ಭಕ್ತಿಯ ಭಾವ ನೆಲೆಯೂರುವುದು ಲೌಕಿಕದ ಆಸೆಗಳನ್ನು ತ್ಯಜಿಸಿದ ಮೇಲೇಯೇ. ಹೀಗಾಗಿ "ದಾಸ ಪಂಥವು ಭಕ್ತರಿಂದ ಲೌಕಿಕದ ಆಸೆಯನ್ನು ಮೀರುವುದನ್ನು ನಿರೀಕ್ಷಿಸುತ್ತದೆ" ಎಂಬ ಉಲ್ಲೇಖದ ಮೂಲಕ ಸರಿಯಾಗಿಯೇ ಗುರುತಿಸಿದ್ದಾರೆ. ಇದರಿಂದ ಯಾವುದೇ ಸೂತ್ರಬದ್ಧ ರೀತಿಯಲ್ಲಿ ಲೌಕಿಕ ಮತ್ತು ಭಕ್ತಿಯನ್ನು ವಿವರಿಸುವುದಕ್ಕಿಂತ ಭಿನ್ನವಾಗಿ ಸರಳವಾಗಿ ಜನಪದೀಯ ರೀತಿಯ ವಿವೇಚನೆಯನ್ನು ಕನಕದಾಸರ ಕೀರ್ತನೆಗಳಲ್ಲಿ ಕಾಣಬಹುದು. ಜನಪದ ಮುಕ್ತಕಗಳ ದಾರಿಯಲ್ಲೇ ಇವು ಇವೆ ಎನ್ನಬಹುದು.

ಪ್ರಬಂಧದಲ್ಲಿ ವಸ್ತುಸಾಂಗತ್ಯದ ಎದುರಿಗೆ ಭಕ್ತಿ ಪಂಥದವರು ಕಟ್ಟಿಕೊಂಡ ಆತ್ಮ ಸಾಂಗತ್ಯವನ್ನು ವಿವರಿಸುತ್ತಾರೆ. ವಸ್ತು–ಸಾಂಗತ್ಯ ಸದಾ ಗಳಿಸುವುದರ ಕಡೆಗೆ, ಗಳಿಸಿದ್ದರೊಂದಿಗೆ ತಮ್ಮನ್ನು ಸಮೀಕರಿಸಿಕೊಳ್ಳುವುದರಲ್ಲಿ ಹಾಗೂ ಹಾಗೆ ಗಳಿಸಿಕೊಳ್ಳು ತೊಡಕಾಗುವ ಎಲ್ಲವನ್ನೂ ನಿವಾರಿಸಿಕೊಳ್ಳುವುದರಲ್ಲಿ ಆಸಕ್ತವಾಗಿದ್ದರೆ, ಆತ್ಮಸಾಂಗತ್ಯ ಕೊಡುವುದರಲ್ಲಿ, ಬೆಳೆಸಿಕೊಳ್ಳುವುದರಲ್ಲಿ ಹಾಗೂ ನಿವೇದಿಸಿಕೊಳ್ಳುವುದರಲ್ಲಿ ಆಸಕ್ತವಾಗುವ ಬಗೆಯನ್ನು ಸರಿಯಾಗಿಯೇ ಗುರುತಿಸಿದ್ದಾರೆ.

ಪ್ರಬಂಧದ ಮುಕ್ತಾಯದಲ್ಲಿ ಭಕ್ತಿಯ 'ಸಾಧನೆ'ಗೆ ಇದು ತೊಡಕಾಗಿರುವುದರಿಂದ ಭಕ್ತರಿಗೆಲ್ಲಾ ತೊಡೆದು ಬರಬೇಕೆಂದು' ಕನಕ ದಾಸರ ನಿಲುವು ಎಂಬ ನೆಲೆಯಲ್ಲಿ ವಿವರಿಸುವಂಥ ಪ್ರಯತ್ನವನ್ನು ಮಾಡಿದ್ದಾರೆ.

ಆದರೆ ಲೌಕಿಕದಲ್ಲೇ ಅಲೌಕಿಕದ ಶೋಧನೆ ಕನಕದಾಸರ ಇನ್ನೊಂದು ಮುಖ್ಯ ದೃಷ್ಟಿ ಇದನ್ನು ಅವರ ರಾಮಧ್ಯಾನ ಚರಿತೆಯಂಥ ಕೃತಿಗಳಲ್ಲಿ ಕಾಣಬಹುದು. ಅಲೌಕಿಕವೆಂದರೆ ಲೌಕಿಕದ ಆಸೆ–ಆಕಾಂಕ್ಷೆಗಳಿಂದ ಮುಕ್ತವಾಗುವುದು ಒಂದು ರೀತಿಯಲ್ಲಿ ಹಾವು ಪೊರೆ ಕಳಚುವ ರೀತಿಯಲ್ಲಿ. ಇದರಿಂದ ಆತ್ಮ ವಿಮರ್ಶೆ

ಅಥವಾ ಆತ್ಮ ನಿರೀಕ್ಷಣೆ ಇಲ್ಲಿ ಬಹುಮುಖ್ಯವಾಗುತ್ತದೆ. ಆತ್ಮ ನಿರೀಕ್ಷಣೆಯ ನಂತರ ನಡೆಯಬೇಕಾದ ದಾರಿಯ ವಿವೇಚನೆಯಿದೆ. 'ದಾಸಪಟ್ಟವೊ ಸನ್ಯಾಸಪಟ್ಟವೊ', ನೇಮವಿಲ್ಲದ ಹೋಮ ಇನ್ಯಾತಕೆ', 'ನಾರಾಯಣ ಎಂಬ ನಾಮದ ಬೀಜವನ್ನು', 'ಸತ್ಯವಂತರ ಸಂಗವಿರಲು',- ಇತ್ಯಾದಿ ಕೀರ್ತನೆಗಳಲ್ಲಿ ಇದನ್ನು ಗುರುತಿಸಬಹುದಾಗಿದೆ. ಅಂದರೆ ನಾಮದ ಲೌಕಿಕದಿಂದ ಪೂರ್ಣ ಮುಕ್ತರಾಗಿ ಲೌಕಿಕರಾಗಿರೆಂದು ಕೀರ್ತನೆಗಳ ಪ್ರತಿಪಾದನೆಯಲ್ಲ. ಲೌಕಿಕದಲ್ಲೇ ಅಲೌಕಿಕದ ಶೋಧನೆಯೇ ಕೀರ್ತನೆಗಳ ಉದ್ದೇಶ. ಆ ಮೂಲಕ ಸಮುದಾಯವನ್ನು ನೈತಿಕವಾಗಿ ಉದ್ಧರಿಸುತ್ತಾ ಭಕ್ತಿಯತ್ತ ಸೆಳೆಯುವ ಯತ್ನ ಕನಕದಾಸರ ಕೀರ್ತನೆಯಲ್ಲಿದೆ.

ಮೇಲ್ನೋಟಕ್ಕೆ ಲೌಕಿಕದಿಂದ ಅಲೌಕಿಕ, ಸಂಸಾರ ಬಂಧನದಿಂದ ಸಂಸಾರ ಮುಕ್ತತೆಯ ಕಡೆಗೆ ಚಲಿಸಿ ಭಕ್ತಿಯಿಂದ ಮುಕ್ತಿಯ ಪಥದೆಡೆಗೆ ಸಾಗುವಂಥ ಚಿಂತನೆಗಳ ಮೂಲಕ ಆತ್ಮ ಸಾಂಗತ್ಯದಿಂದ ಮುಕ್ತಿಯ ಪಥದೆಡೆಗೆ ಚಲನೆ ಬಯಲು ಆಲಯದೊಳಗೋ ಎಂಬ ಪ್ರಶ್ನೆಯೊಡನೆ ನಮ್ಮನ್ನು ಚಿಂತನೆಗೆ ಹಚ್ಚುತ್ತದೆ. ಆ ಸಂದರ್ಭದಲ್ಲಿ ನಮ್ಮೊಳಗಿನ ಅರಿಷಡ್ವರ್ಗಗಳು, ಧನಾತ್ಮಕ-ಋಣಾತ್ಮಕ ದೃಷ್ಟಿಕೋನ, ನಾಸ್ತಿಕ-ಅನಾಸ್ತಿಕ-ಆಸ್ತಿಕ ಮನೋಭಾವಗಳು, ಸಂಕುಚಿತ-ವಿಶಾಲ ಮನೋಭಾವಗಳು ವ್ಯಕ್ತಿಯ ವ್ಯಕ್ತಿತ್ವದ ಏರು-ತಗ್ಗುಗಳನ್ನು ನಿಕಷಕ್ಕೆ ಒಡ್ಡುತ್ತವೆ. ತನ್ಮೂಲಕ ವ್ಯಕ್ತಿಯ ಲೌಕಿಕ-ಅಲೌಕಿಕ ಜಗತ್ತು, ಸಂಸಾರ ಬಂಧನ-ಸಂಸಾರ ಮುಕ್ತತೆಯ ಹಂಬಲ, ಕನಕರ ಚಿಂತನೆಯ ಭಕ್ತ-ಭಗವಂತನ ಪರಿಕಲ್ಪನೆಯಲ್ಲಿ ಈ ಕ್ಷಣದಲ್ಲೇ-ವರ್ತಮಾನದಲ್ಲೇ ಆತ್ಮ ಸಾಂಗತ್ಯದ ಮೂಲಕ ಭಕ್ತಿಯ ಮುಕ್ತಿಯ ದಾರಿಯಾಗಿ ಗೋಚರಿಸುತ್ತಾ ಬಯಲು ಆಲಯದೊಳಗೇ ಎಂಬಲ್ಲಿ ಪರ್ಯಾವಸಾನಗೊಳ್ಳುತ್ತದೆ.

# ಭಾಗ – 4

# ಚಾರಿತ್ರಿಕ ಆಕರವಾಗಿ ಕನಕರ ಕೃತಿಗಳು

# "ಕನಕದಾಸರ ಕೀರ್ತನೆಗಳಲ್ಲಿ ಜಾತಿ ತಾರತಮ್ಯದ ಆಯಾಮಗಳು"

– ಶ್ರೀ ಹೆಚ್. ದಂಡಪ್ಪ

ಕನಕದಾಸರು ಭಾರತೀಯ ಭಕ್ತಿ ಪರಂಪರೆಯ ವಿಶಿಷ್ಟವಾದ ಸ್ಥಾನ ಪಡೆದಿರುವ ಸಂತಕವಿ ಮತ್ತು ದಾರ್ಶನಿಕರು. ಭಾರತದ ಭಕ್ತಿ ಪರಂಪರೆಯಲ್ಲಿದ್ದ ಎಲ್ಲಾ ಸಂತರು ಭಾರತೀಯ ಸಮಾಜದ ಜಾತಿಪದ್ಧತಿಯನ್ನು ಖಂಡಿಸಿ ಸಮಾನತಾ ಸಮಾಜದ ಕನಸನ್ನು ಕಂಡವರು.

ಭಕ್ತಿಪರಂಪರೆಯ ಈ ಸಂತರನ್ನು ಅನುಭಾವಿಗಳೆಂದೂ ಕರೆಯಲಾಗುತ್ತಿದೆ. ಈ ಅನುಭಾವಿಗಳು, ಪ್ರಕೃತಿಯಲ್ಲಿ ಹೇಗೆ ಮೇಲು ಕೀಳು ಇಲ್ಲದೆ ಪರಸ್ಪರ ಅಂತರ್ ಸಂಬಂಧದಿಂದ, ಒಂದು ಸಮತೋಲನದಿಂದ ಸರಿದೂಗಿಸಿಕೊಂಡು ಹೋಗುವ ಗುಣವಿದೆಯೋ ಅದೇ ಗುಣ ಮನುಷ್ಯನಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿರಬೇಕು ಎಂದು ಬಯಸಿದವರು. ಪ್ರಕೃತಿಯಲ್ಲಿ ವೈವಿಧ್ಯವಿದ್ದರೂ ಅವು ಜೈವಿಕ ಜಾಲವೊಂದನ್ನು ಸೃಷ್ಟಿಸಿಕೊಂಡಿವೆ. ಹೀಗಾಗಿ ಅಲ್ಲಿ ಸಮತೋಲನವಿದೆ, ಸಮತೋಲನವಿದ್ದಾಗ ಯಾವುದೇ ಏರು ಪೇರುಗಳಿಲ್ಲದೆ ಮೇಲು ಕೀಳುಗಳ ಭಾವನೆಯೂ ಇರುವುದಿಲ್ಲ. ಮನುಷ್ಯನ ಸಮಾಜದಲ್ಲಿಯು ಪ್ರಕೃತಿಯಲ್ಲಿರುವಂತಹ ವ್ಯವಸ್ಥೆ ಇದ್ದರೆ ಮನುಷ್ಯನೇ ತನ್ನ ಸ್ವಾರ್ಥಕ್ಕಾಗಿ ಸೃಷ್ಟಿಸಿಕೊಂಡಿರುವ ಜಾತಿಗಳು ಇಲ್ಲವಾಗಿ ವಿಶ್ವಮಾನವತೆ ನೆಲೆಗೊಳ್ಳುತ್ತದೆ. ಸಂತರ ಅಥವಾ ಅನುಭಾವಿಗಳು ಬಯಸಿದ್ದು ಇಂತಹ ಮನುಷ್ಯ ಸಮಾಜವನ್ನು, ವಿಶ್ವಪ್ರಜ್ಞೆಯುಳ್ಳ ವಿಶ್ವ ಮಾನವತಾ ವ್ಯವಸ್ಥೆಯುಳ್ಳ ಸಮಾಜದ ನಿರ್ಮಾಣ ಅವರ ಕನಸು. ಇಂತಹ ಅನುಭಾವಿ ಸಂತ ಪರಂಪರೆಯಲ್ಲಿ ಅರಳಿದ ಅತ್ಯಂತ ಸುಂದರ ಹೂ ಕನಕದಾಸರು. ಈ ವಿಶೇಷಣವನ್ನು ನಾನು ಉತ್ಪ್ರೇಕ್ಷೆಗಾಗಿ

ಬಳಸುತ್ತಿಲ್ಲ. ನಾನು ಇಲ್ಲಿಯವರೆಗೂ ಉತ್ಪ್ರೇಕ್ಷೆಯಿಂದ ಕೂಡಿರುವ ಪದಗಳನ್ನು ಬಳಸಿಲ್ಲ. ಇದು ಕನಕದಾಸರಿಗೆ ಅವರು ಸೃಷ್ಟಿಸಿರುವ ಸಾಹಿತ್ಯಕ್ಕೆ, ಕೀರ್ತನೆಗಳಿಗೆ ಆ ಮೂಲಕ ಭಾರತೀಯ ಸಮಾಜಕ್ಕೆ ಅವರು ಕೊಟ್ಟಿರುವ ಕೊಡುಗೆಗೆ ಅರ್ಹವಾಗಿಯೇ ಇದೆ. ಮುಂದೆ ನಾನು ಮಂಡಿಸುವ ವಿಚಾರಗಳೂ ಸಹ ಕನಕದಾಸರನ್ನು ಸುಂದರ ಹೂ ಎಂದು ಕರೆದಿರುವುದರ ಔಚಿತ್ಯ ಮನವರಿಕೆ ಮಾಡಿಕೊಡುತ್ತವೆ. ಕನಕದಾಸರ ಕೀರ್ತನೆಗಳಲ್ಲಿ ಜಾತಿಯ ತಾರತಮ್ಯದ ನೆಲೆಗಳ ಸ್ವರೂಪವನ್ನು ಚರ್ಚಿಸುವುದಕ್ಕೆ ಮುನ್ನ ಜಾತಿ ಸ್ವರೂಪ ಅದರ ಗುಣಲಕ್ಷಣಗಳ ಬಗ್ಗೆ ತಿಳಿದುಕೊಳ್ಳುವುದು ಅಗತ್ಯವೆನಿಸುತ್ತದೆ.

ಭಾರತದ ಸಾಮಾಜಿಕ ಸ್ವರೂಪದ ಮುಖ್ಯವಾದ ತಳಪಾಯವೆಂದರೆ ಜಾತಿವ್ಯವಸ್ಥೆ. ಪ್ರಾಚೀನ ಕಾಲದಿಂದಲೂ ಕ್ರಿಯಾಶೀಲವಾಗಿ ಬರುತ್ತಲಿರುವ ಈ ಜಾತಿವ್ಯವಸ್ಥೆಯು ಸಮಾಜದಲ್ಲಿ ತರತಮಭಾವ, ಅಸಮಾನತೆ, ಅಧೀನತೆ, ಅವಲಂಬನೆ ಇತ್ಯಾದಿ ವ್ಯವಸ್ಥೆಯನ್ನು ಸೃಷ್ಟಿಸಿದೆ. ಈ ಜಾತಿಯ ಸ್ವರೂಪ ಹೇಗಿದೆಯೆಂದರೆ ಇವು ವೃತ್ತಗಳಾಗಿ ಹೆಣೆದುಕೊಂಡಿವೆ. ಭಾರತೀಯ ಸಮಾಜ ಎಂಬುದು ದೊಡ್ಡ ವೃತ್ತವಾದರೆ ಅವರೊಳಗೆ ಸಣ್ಣ ಸಣ್ಣ ವೃತ್ತಗಳು ಒಂದರೊಳಗೆ ಒಂದು ಸೇರಿವೆ. ಕನಿಷ್ಠವಾಗಿರುವ ವೃತ್ತವನ್ನು ಬಲಾಢ್ಯವಾಗಿರುವ ದೊಡ್ಡ ವೃತ್ತ ಒತ್ತರಿಸಬಹುದು, ಅಮುಕಿ ಉಸಿರುಗಟ್ಟಿಸಬಹುದು. ಒಳಗೆ ಸಾವಿರಾರು ವೃತ್ತಗಳಿದ್ದು ಒಂದು ವೃತ್ತ ಮತ್ತೊಂದು ವೃತ್ತದ ಮೇಲೆ ಸವಾರಿ ಮಾಡಲು ಸಾಧ್ಯವಿದೆ. ಇದನ್ನೇ ಶ್ರೇಸೇಂಕಣ ಎಂದು ಕರೆಯಲಾಗುತ್ತದೆ. ಜಾತಿ ವ್ಯವಸ್ಥೆಯ ಸ್ವರೂಪವನ್ನು ಪಿರಮಿಡ್ಡಿಗೂ ಹೋಲಿಸಲಾಗುತ್ತದೆ. ಪಿರಮಿಡ್ಡಿನ ತುತ್ತತುದಿಯಲ್ಲಿ ಮೇಲ್ಜಾತಿ ಇದ್ದರೆ ಕೆಳಗೆ ಕೆಳಜಾತಿಗಳು ಇರುತ್ತವೆ. ಮೇಲು ಜಾತಿಗಳು ಕೆಳಜಾತಿಗಳನ್ನು ಹಿಡಿತದಲ್ಲಿ ಇಟ್ಟುಕೊಂಡಿರುತ್ತಾರೆ. ಇಂತಹ ಜಾತಿ ವ್ಯವಸ್ಥೆಯ ಸ್ವರೂಪವನ್ನು ಕುರಿತು ವ್ಯಾಖ್ಯಾನಗಳನ್ನು ಕೆಲವು ಸಮಾಜ ಶಾಸ್ತ್ರಜ್ಞರು ನೀಡಿದ್ದಾರೆ. ಅವುಗಳನ್ನು ಗಮನಿಸುವುದು ಸೂಕ್ತವಾದದ್ದು.

ಮೈಕೆವರ್ ಮತ್ತು ಪೇಜ್ ಹೇಳುವಂತೆ "ಜನರ ಸ್ಥಾನಮಾನವು ಸಂಪೂರ್ಣವಾಗಿ ಮೊದಲೇ ನಿರ್ಣಯಿಸಲಾಗಿದ್ದು ಅವರು ಹುಟ್ಟಿದಾಗಲೆ ಅವರ ಜೀವನದ ಸ್ಥಿತಿಗತಿಗಳು ಇಂತಹವೆಂದು ತೀರ್ಮಾನವಾಗಿ ಅದನ್ನು ಬದಲಾಯಿಸಲು ಯಾವ ವಿಧವಾದ ಭರವಸೆಯೂ ಇಲ್ಲದಿದ್ದರೆ ಅದು ಜಾತಿಯಾಗುತ್ತದೆ."

ಎಡಬ್ಲ್ಯು ಗ್ರೀನ್ ಹೇಳುವಂತೆ ಸಮಾಜದಲ್ಲಿ ಜಾತಿಯು ಸ್ತರ ವಿನ್ಯಾಸದ ಒಂದು ವ್ಯವಸ್ಥೆ. ಇದರಲ್ಲಿ ಅಂತಸ್ತುಗಳ ಏಣಿ ಶ್ರೇಣಿಗಳ ಸ್ವರೂಪವಿದ್ದು ಯಾವುದೇ ಚಲನೆಯಿಲ್ಲದೆ ಸ್ಥಾವರವಾಗಿರುತ್ತದೆ. ಜಡವಾಗಿರುತ್ತದೆ. ಯಾವ ಬದಲಾವಣೆಯೂ ಇರುವುದಿಲ್ಲ. ಯಾವಾಗ ಬದಲಾವಣೆಯಿರುವುದಿಲ್ಲವೋ, ಸಾಮಾಜಿಕ ಶ್ರೇಣಿಗಳು ಅದಲು ಬದಲಾಗುವುದಿಲ್ಲವೋ, ಸ್ಥಾನಮಾನಗಳು ಒಂದೇ ರೀತಿಯಲ್ಲಿರುತ್ತದೋ

ಅಲ್ಲಿ ನಿರ್ಬಂಧಗಳಿರುತ್ತವೆ. ಅಂದರೆ ಜಾತಿಯು ಒಂದು ಮುಚ್ಚಿದ ನಿರ್ಬಂಧವಿರುವ ವ್ಯವಸ್ಥೆಯುಳ್ಳ ಸಮೂಹ. `Cast is a closed groups' ಇದನ್ನೇ ಸಿ.ಎಚ್.ಕೂಲೆ ಅವರ, `When class is sometimes strictly heriditery we may call it a caste' ಎಂದು ಹೇಳುತ್ತಾರೆ. ಸಮಾಜಶಾಸ್ತ್ರಜ್ಞರಾದ ಡಿ.ಎನ್.ಮಜುಂದಾರ್ ಮತ್ತು ಟಿ.ಎನ್.ಮದನ್ ಅವರು `Cast is a closed groups' ಎಂದು ಹೇಳಿದರೆ ಇ.ಎಚ್.ಬ್ಲಂಟ್ ಅವರು ಜಾತಿಗೆ ಒಂದು ಹೆಸರಿದ್ದು ಅನುವಂಶೀಯವಾಗಿರುತ್ತದೆ. ಒಳಬಾಂಧವ್ಯವಿದ್ದು ವಿವಾಹ ಮತ್ತಿತರ ಸಾಮಾಜಿಕ ಸಂಬಂಧಗಳ ಬಗ್ಗೆ ಕೆಲವಾರು ನಿಯಮಗಳಿರುತ್ತವೆ. ಹಾಗೆಯೇ ತನ್ನದೇ ಆದ ಆಚಾರ ವಿಚಾರಗಳನ್ನು, ರೀತಿ ನೀತಿಗಳನ್ನು ಒಳಗೊಂಡಿರುವ ಒಂದು ಗುಂಪಿಗೆ ಜಾತಿ ಎಂದು ಕರೆದಿದ್ದಾರೆ. ಎಸ್.ವಿ.ಕೇತಕರ್ ಅವರು ಜಾತಿಯು ಒಂದು ಸಮೂಹವಾಗಿದ್ದು ಮುಖ್ಯವಾಗಿ ಎರಡು ಗುಣಗಳನ್ನು ಹೊಂದಿದೆ. ಮೊದಲನೆಯದು ಆ ಸಮೂಹದ ಸದಸ್ಯನಾಗಿ ಹುಟ್ಟಿದವರಿಗೆ ಸದಸ್ಯತನ ಮತ್ತು ಅಲ್ಲಿ ಹುಟ್ಟಿದವರ ಆ ಜಾತಿಯ ಸಮೂಹದಲ್ಲಿ ಸೇರುವುದು. ಎರಡನೆಯದಾಗಿ ಸಮೂಹದ ಹೊರಗಡೆ ಯಾವುದೇ ರೀತಿಯ ವಿವಾಹವಾಗಲಿ ಬಾಂಧವ್ಯವಾಗಲಿ ಬೆಳೆಸುವಂತಿಲ್ಲ. ಕಠೋರವಾದ ಸಾಮಾಜಿಕ ನಿಯಮಗಳಿಂದ ಬಾಂಧವ್ಯಗಳನ್ನು ಮತ್ತು ಇತರೆ ಜಾತಿಗಳಿಂದ ಹೇಗೆ ಅಂತರ ಕಾಯ್ದುಕೊಳ್ಳಬೇಕೆಂದು ನಿರ್ಬಂಧಿತರಾಗಿರುವವರು."

ಈ ಮೇಲ್ಕಂಡಂತೆ ಜಾತಿ ಎಂಬ ಪದವನ್ನು ವ್ಯಾಖ್ಯಾನಿಸಲಾಗಿದೆ. ಈ ಜಾತಿಯ ಗುಣ ಲಕ್ಷಣಗಳು ಈ ಕೆಳಕಂಡಂತಿವೆ.

1. ಜಾತಿಯು ಸಾಮಾಜಿಕ ಏಣಿ ಶ್ರೇಣಿಯನ್ನು ಪ್ರತಿನಿಧಿಸುತ್ತದೆ.
2. ಜಾತಿಯು ಸಾಮಾಜಿಕ ವ್ಯವಸ್ಥೆಯ ಒಂದು ಭಾಗ
3. ಊಟೋಪಚಾರಗಳಲ್ಲಿ ನಿರ್ಬಂಧವಿರುತ್ತದೆ.
4. ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದಂತೆ ಕೆಳಜಾತಿಗಳಿಗೆ ಅರ್ಹತೆ, ಅನರ್ಹತೆಗೆ ಸಂಬಂಧಿಸಿದ ನಿಯಮಗಳಿವೆ. ಅವುಗಳನ್ನು ಪಾಲಿಸಬೇಕು.
5. ಸಾಮಾಜಿಕ ಸಂಬಂಧಗಳ ಮೇಲೆ ನಿರ್ಬಂಧ
6. ಕೆಲವು ಜಾತಿಗಳಿಗೆ ಮಾತ್ರ ನಾಗರಿಕ ಹಾಗೂ ಧಾರ್ಮಿಕ ಸೌಲಭ್ಯಗಳು.
7. ಉದ್ಯೋಗಗಳ ಆಯ್ಕೆ ಮೇಲಿನ ನಿರ್ಬಂಧಗಳು.
8. ವಿವಾಹದ ಮೇಲೆ ನಿರ್ಬಂಧ
9. ಶುದ್ಧ-ಅಶುದ್ಧತೆಯ ಪ್ರಶ್ನೆಗಳು
10. ವಾಸಿಸುವ ಸ್ಥಳಗಳಿಗೆ ಮತ್ತು ಧಾರ್ಮಿಕ ಸ್ಥಳಗಳಿಗೆ ಪ್ರವೇಶದ ಅವಕಾಶದ ಪ್ರಶ್ನೆಗಳು.

ಈ ಮೇಲ್ಕಂಡ ಲಕ್ಷಣಗಳು ಜಾತಿಯ ವ್ಯವಸ್ಥೆಯಲ್ಲಿದ್ದು ಆಯಾ ಜಾತಿಗೆ ಸಂಬಂಧಿಸಿದಂತೆ ನಿಯಮಗಳು ಅನ್ವಯವಾಗುತ್ತವೆ. ಇಂತಹ ಅಮಾನುಷವಾದ ಜಾತಿಪದ್ಧತಿಯನ್ನು ಬೌದ್ಧ ಧರ್ಮವು ಮೊದಲಿಗೆ ವಿರೋಧಿಸಿತು. ಇಂತಹ ಜಾತಿಪದ್ಧತಿ ಋಗ್ವೇದದ ಪುರುಷ ಸೂಕ್ತದಲ್ಲಿ ಬರುವ ವಿವರಣೆ ಜಾತಿ ವರ್ಣಗಳ ವ್ಯವಸ್ಥೆಯ ಉಗಮದ ಬಗ್ಗೆ ಇರುವ ಮೊದಲ ಮಾಹಿತಿ. ವರ್ಣ ವ್ಯವಸ್ಥೆಯ ಉಗಮದ ಬಗ್ಗೆ ಹೇಳಿದರೂ ಜಾತಿಯ ಪರಿಕಲ್ಪನೆ ಇಲ್ಲಿಂದಲೇ ಪ್ರಾರಂಭವಾಯಿತು ಎಂದು ಹೇಳಬಹುದು. ಈ ವಿವರಣೆ ಈಗಾಗಲೇ ಎಲ್ಲರಿಗೂ ಗೊತ್ತಿರುವಂತಹದ್ದೇ ಆಗಿದೆ. ಈ ವಿವರಣೆಯಂತೆ ಪ್ರಜಾಪತಿಯಾದ ಬ್ರಹ್ಮನ ಮುಖದಿಂದ ಬ್ರಾಹ್ಮಣನು, ಬಾಹುಗಳಿಂದ ಕ್ಷತ್ರಿಯನು, ತೊಡೆಗಳಿಂದ ವೈಶ್ಯನು ಮತ್ತು ಪಾದಗಳಿಂದ ಶೂದ್ರನು ಹುಟ್ಟಿರುತ್ತಾನೆ. ನಂತರದ ಶತಪಥ ಬ್ರಾಹ್ಮಣ, ಮಹಾಭಾರತದ ಶಾಂತಿಪರ್ವ, ತೈತ್ತರೀಯ ಬ್ರಾಹ್ಮಣ ವಾಯುಪುರಾಣ ಮತ್ತು ಭಾಗವತ ಪುರಾಣಗಳಲ್ಲಿ ಜಾತಿ ಉಗಮದ ಬಗೆಗಿನ ವಿವರಗಳಿವೆ. ಈ ವಿವರಗಳನ್ನು ಸಮರ್ಥಿಸುವ ಮತ್ತು ಅದಕ್ಕೆ ವಿಧಿ ವಿಧಾನಗಳನ್ನು ಕೆಲವು ಸ್ಮೃತಿಗಳು ಒದಗಿಸಿದವು. ಅವುಗಳಲ್ಲಿ ಮನುಸ್ಮೃತಿ ಬಹಳ ಮುಖ್ಯವಾದದ್ದು. ಜಾತಿ ವ್ಯವಸ್ಥೆಯ ಸ್ವರೂಪವನ್ನು ಅದರ ನೀತಿ ನಿಯಮಗಳನ್ನು ಕಟ್ಟುಪಾಡುಗಳನ್ನು ವೃತ್ತಿಕಸುಬು, ಮದುವೆ, ಆಚರಣೆ, ನಡವಳಿಕೆ ಮನುಷ್ಯ ಇನ್ನೊಬ್ಬ ಮನುಷ್ಯನೊಂದಿಗೆ ನಡೆದುಕೊಳ್ಳಬೇಕಾದ ರೀತಿ–ನೀತಿಗಳು ಜಾತಿ ಮತ್ತೊಂದು ಜಾತಿಯೊಂದಿಗೆ ವ್ಯವಹರಿಸಬೇಕಾದಾಗ ನಿರ್ವಹಿಸಬೇಕಾದ ಜವಾಬ್ದಾರಿಗಳು ಈ ನೀತಿ ನಿಯಮಗಳನ್ನು ಮೀರಿದಾಗ ವಿಧಿಸಬಹುದಾದ ಶಿಕ್ಷೆಗಳು ಒಟ್ಟಾರೆ ಕಾಯ್ದೆ ಮತ್ತು ನಿಯಮಗಳು ಈ ಸ್ಮೃತಿಗಳಲ್ಲಿದ್ದು ಕೆಳಜಾತಿಗಳು ಅದನ್ನು ಪಾಲಿಸಲೇಬೇಕಿತ್ತು. ಈ ಸ್ಮೃತಿಗಳು ಮತ್ತು ಶಾಸ್ತ್ರಗಳು ರೂಪಿಸಿರುವ ನಿಯಮಗಳಂತೆಯೇ ಜಾತಿ ವ್ಯವಸ್ಥೆ ಇದ್ದು ಅದರಂತೆಯೇ ನಡೆದುಕೊಳ್ಳಬೇಕಿತ್ತು. ಒಂದು ವೇಳೆ ಸ್ಮೃತಿಗಳಲ್ಲಿನ, ಶಾಸ್ತ್ರಗಳಲ್ಲಿನ ನಿಯಮಗಳನ್ನು ಮೀರಿದರೆ ಸ್ಮೃತಿಗಳಲ್ಲಿರುವಂತೆ ಕಠೋರವಾದ ಶಿಕ್ಷೆಯನ್ನು ವಿಧಿಸಬಹುದಾಗಿತ್ತು. ಅದು ಆಯಾ ಜಾತಿಯ ಶ್ರೇಣೀಕರಣವನ್ನು ಅವಲಂಬಿಸುತ್ತಿತ್ತು. ಈಗಲೂ ಸಹ ಕೆಲವು ಗ್ರಾಮಗಳಲ್ಲಿ, ಬುಡಕಟ್ಟುಗಳಲ್ಲಿ ಆಯಾ ಗ್ರಾಮದ ಮುಖ್ಯ ಜಾತಿಯ ಅಂದರೆ ಮೇಲ್ಜಾತಿಯ ಮುಖಂಡನ ನೇತೃತ್ವದಲ್ಲಿ ಪಂಚಾಯಿತಿಯಿದ್ದು ಆ ಪಂಚಾಯಿತಿಯ ತೀರ್ಮಾನಕ್ಕೆ ಉಳಿದ ಜಾತಿಯವರು ತಲೆಬಾಗಲೇಬೇಕಾಗುತ್ತದೆ. ಈ ಅಮಾನುಷವಾದ ಜಾತಿಪದ್ಧತಿಯ ವ್ಯವಸ್ಥೆಯಲ್ಲಿ ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಗೌರವಯುತವಾಗಿ ನಡೆಸಿಕೊಳ್ಳದೆ ಪ್ರಾಣಿಗಳಿಗಿಂತ ಕಡೆಯಾಗಿ ನೋಡಿ ನಡೆಸಿಕೊಂಡಿದ್ದಾನೆಂಬುದಕ್ಕೆ ನಮ್ಮ ಇತಿಹಾಸ, ಪುರಾಣ, ಶಾಸ್ತ್ರ, ಸ್ಮೃತಿಗಳು ನಿಖರವಾದ, ಖಚಿತವಾದ ಆಧಾರಗಳನ್ನು ಒದಗಿಸಿವೆ. ಈಗಲೂ ಬೇರೆ ಬೇರೆ ರೀತಿಯಲ್ಲಿ ಈ ಜಾತಿ ಪದ್ಧತಿ ಅನುಷ್ಠಾನದಲ್ಲಿದೆ ಎಂಬುದು ಸರ್ವವಿಧಿತ.

ಇಂತಹ ಜಾತಿ ಪದ್ಧತಿಯನ್ನು ಕನಕದಾಸರು ತಮ್ಮ ಅಭಿವ್ಯಕ್ತಿಗಳಾದ ಕೀರ್ತನೆ, ಮುಂಡಿಗೆ ಮತ್ತು ಹರಿಭಕ್ತಿಸಾರ ಕೃತಿಗಳಲ್ಲಿ ವಿರೋಧಿಸಿದ್ದಾರೆ. ಅವರು ಈ

ವ್ಯವಸ್ಥೆಯನ್ನು ಯಾವ ಸ್ವರೂಪದಲ್ಲಿ ಪ್ರತಿರೋಧಿಸಿದ್ದಾರೆ ಎಂಬುದನ್ನು ಅವರ ಕೀರ್ತನೆಗಳ ಜೊತೆಯಲ್ಲಿ ವಿಶ್ಲೇಸಿಸಿಕೊಳ್ಳುವುದು ಅಗತ್ಯ.

ಕನಕದಾಸರು ಯಾವ ಬಗೆಯಲ್ಲಿ ಜಾತಿಗೆ ಪ್ರತಿರೋಧವನ್ನು ಒಡ್ಡುತ್ತಾರೆಂಬುದನ್ನು ಈಗ ಅವರ ಹರಿಭಕ್ತಿಸಾರದ ಒಂದು ಕೀರ್ತನೆಯೊಂದಿಗೆ ಪ್ರಾರಂಭಿಸಬಹುದು. ಮನುಪ್ರಣೀತವಾದ ಮನುಸ್ಮೃತಿಯಲ್ಲಿ ಕೆಳಜಾತಿಯ ಜನರು ಇಲ್ಲವೇ ಅಸ್ಪೃಶ್ಯರು ದಾರಿಯಲ್ಲಿ ಹೋಗುವಾಗ ತಮ್ಮ ಎಂಜಲನ್ನು ಉಗಿಯಬಾರದು. ದಾರಿಯಲ್ಲಿ ಹೋಗುವಾಗ ಇವರು ತಮ್ಮ ಕೊರಳಿಗೆ ಇಲ್ಲವೇ ಸೊಂಟಕ್ಕೆ ಒಂದು ಕುಡಿಕೆಯನ್ನು ಕಟ್ಟಿಕೊಂಡಿರಬೇಕು ಮತ್ತು ಆ ಕುಡಿಕೆಯಲ್ಲಿ ಉಗಿದು ಊರಿನಿಂದ ಹೊರಗೆ ಹೋದಾಗ ಅದನ್ನು ಚೆಲ್ಲಬೇಕು. ಅದೂ ಯಾರೂ ಓಡಾಡದೆ ಇರುವ ಪ್ರದೇಶದಲ್ಲಿ. ಆ ಎಂಜಲು ಮೇಲು ಜಾತಿಯವರಿಗೆ ಕಾಣಿಸಬಾರದು. ಅಷ್ಟೇ ಏಕೆ ಅವನು ಬೀದಿಯಲ್ಲಿ ಹೋಗುವಾಗ ಅವನ ಹೆಜ್ಜೆಗುರುತುಗಳೂ ಸಹ ಕಾಣಲಾರದು ಮತ್ತು ಆ ಹೆಜ್ಜೆಗುರುತುಗಳಲ್ಲಿ ಅವನ ದೇಹದ ಸ್ಪರ್ಶ ಇರುವುದರಿಂದ ಅದನ್ನು ಮೇಲುಜಾತಿಯವರು ತುಳಿಯಬಾರದು. ಆದುದರಿಂದ ಕೆಳಜಾತಿಗಳ ಜನರು ಬೀದಿಗಳಲ್ಲಿ ಓಡಾಡುವಾಗ ಸದಾ ಬೆನ್ನಿನ ಹಿಂದೆ ಒಂದು ಪೊರಕೆಯನ್ನು ಕಟ್ಟಿಕೊಂಡಿದ್ದು ಅವರು ನಡೆದು ಮುಂದೆ ಹೋಗುತ್ತಿದ್ದರೆ ಅದು ಅವನು ನಡೆದ ಹೆಜ್ಜೆಗಳನ್ನು ಸ್ವಚ್ಛಗೊಳಿಸುತ್ತಿರಬೇಕು. ಇನ್ನು ಮೈ ಕೈ ಮುಟ್ಟುವುದಂತೂ ಇಲ್ಲವೇ ಇಲ್ಲ. ಅದರಲ್ಲೂ ಕೆಳಜಾತಿಗಳವರನ್ನು ಸ್ಪರ್ಶಿಸುವುದು ಮೈಲಿಗೆಯೇ ಆಗುತ್ತದೆ. ಎಲ್ಲ ಚಟುವಟಿಕೆಗಳಿಂದ ಕೆಳಜಾತಿಗಳು ದೂರವೇ ಇರಬೇಕಾಗುತ್ತಿತ್ತು. ಕನಕದಾಸರು ಇದನ್ನು ಪ್ರತಿರೋಧಿಸುತ್ತಾರೆ. ಅವರು ಪ್ರತಿರೋಧಿಸುವ ವಿಧಾನವೂ ಕೂಡಾ ಉಳಿದ ಭಾರತೀಯ ಅನುಭಾವಿ ಪರಂಪರೆಯ ಭಕ್ತ ಸಂತರಿಗಿಂತ ಭಿನ್ನಬಗೆಯಲ್ಲಿ. ಅವರ ಅಭಿವ್ಯಕ್ತಿ ವಿಧಾನವೇ ಬೇರೆ ಕನಕದಾಸರ ಅಭಿವ್ಯಕ್ತಿ ವಿಧಾನವೇ ಬೇರೆ. ಈ ಕೀರ್ತನೆಯನ್ನು ಗಮನಿಸಿ.

"ಎಂಜಲೆಂಜಲು ಎಂಬುದು ನುಡಿ
ಎಂಜಲಲ್ಲವೆ ವಾರಿ ಜಲಚರ
ದೆಂಜಲಲ್ಲವೆ ಹಾಲುಕರುವಿನ ಎಂಜಲೆನಿಸಿರದೆ
ಎಂಜಲಲ್ಲಿಯದೆಲ್ಲಿಯುಂ ಪರ
ರೆಂಜಲಲ್ಲದೆ ಬೇರೆ ಭಾವಿಸ
ಲೆಂಜಲುಂಟೆ ದೇವ ರಕ್ಷಿಸು ನಮ್ಮನನವರತ"

ಈ ಕೀರ್ತನೆಯಲ್ಲಿ ಕನಕದಾಸರು ಕಾವ್ಯಲಿಂಗಾಲಂಕಾರವನ್ನು ಬಳಸಿದ್ದಾರೆ. ಕಾವ್ಯಲಿಂಗಾಲಂಕಾರದ ಲಕ್ಷಣವೆಂದರೆ ಸಮರ್ಥನೀಯವಾದದ್ದನ್ನು ಸಮರ್ಥಿಸುವುದು ಈ ಕಾವ್ಯಾಲಂಕಾರದ ಕಾರ್ಯವಾಗಿರುತ್ತದೆ. ಜಾತಿಪದ್ಧತಿ ಅದರ ಆಚರಣೆ ಸಮರ್ಥನೀಯವಾದದ್ದಲ್ಲ. ಜಾತಿ ಇಲ್ಲವೆಂಬುದು

ಸಮರ್ಥನೀಯವಾದದ್ದು ಈ ಸಮರ್ಥನೀಯವಾದದ್ದನ್ನು ಈ ಕೀರ್ತನೆ ಸಮರ್ಥಿಸುತ್ತದೆ. ಜಾತಿ, ಬೇಧ, ಮತ, ಪಂಥಗಳಿಲ್ಲದ ವಿಶ್ವಮಾನವತೆಯನ್ನು ಸಮರ್ಥಿಸುತ್ತದೆ. ಇಡೀ ಪ್ರಕೃತಿ ಎಂಜಲೆ. ಪ್ರಾಣಿ, ಪಕ್ಷಿ, ಗಿಡಮರಬಳ್ಳಿ, ನೀರು ಎಲ್ಲವೂ ಪರಸ್ಪರ ಆಶ್ರಯಿಸಿಕೊಂಡು ಅಸ್ತಿತ್ವದಲ್ಲಿರುವುದರಿಂದ, ಒಂದು ಜೈವಿಕ ಜಾಲವಾಗಿರುವುದರಿಂದ ಎಲ್ಲವೂ ಒಂದು ರೀತಿಯಲ್ಲಿ ಎಂಜಲೇ ಆಗಿದೆ. ಪುರೋಹಿತ ವರ್ಗ ಶ್ರೇಷ್ಠವೆಂದು ಕುಡಿಯುವ ಹಾಲು ಎಂಜಲೆ, ಕುಡಿಯುವ ನೀರು ಎಂಜಲೆ, ಹಣ್ಣು ಹಂಪಲು, ಎಲೆ ಗಿಡ, ಸೊಪ್ಪು ಎಲ್ಲವನ್ನು ಪಕ್ಷಿಗಳು, ಪ್ರಾಣಿಗಳು, ಕ್ರಿಮಿಕೀಟಗಳು ಸ್ಪರ್ಶಿಸಿರುತ್ತವೆ. ಅವೂ ಎಂಜಲೆ. ಇಂತಹ ಎಂಜಲು ಎಲ್ಲಾ ಕಡೆಯೂ ಇರುವಾಗ ಕೆಳಜಾತಿಗಳ ಎಂಜಲು ಎಂದು ಹೀಯಾಳಿಸಿ ಅವರನ್ನು ದೂರವಿಟ್ಟು ಅಮಾನವೀಯವಾಗಿ ವರ್ತಿಸುವುದೇಕೆ ಎಂಬುದು ಕನಕದಾಸರ ಪ್ರಶ್ನೆ. ಅಸ್ಪೃಶ್ಯತೆಯನ್ನು ಕನಕದಾಸರು ವಿರೋಧಿಸುವ ಸ್ವರೂಪ ಇದು. ಅದನ್ನು ವಿರೋಧಿಸುವುದು ಪ್ರಕೃತಿಯಲ್ಲಿರುವ ಚೇತನಾಚೇತನ ವಸ್ತುಗಳಿಂದಲೇ ಈ ಪ್ರತಿರೋಧವು ಮುಂದಿನ ಒಂದು ಕೀರ್ತನೆಯಲ್ಲಿ ಸ್ಪಷ್ಟವಾಗಿ ಅಭಿವ್ಯಕ್ತಿಯಾಗಿರುವ ಕ್ರಮವನ್ನು ಕಾಣಬಹುದು. ಇದು ಬಹಳ ಜನಪ್ರಿಯವಾಗಿರುವ ಎಲ್ಲರೂ ಉದ್ಧರಿಸುವ ಕೀರ್ತನೆಯಾದರೂ ಅದು ಬೇರೆ ಬೇರೆ ಅರ್ಥ ಸಾಧ್ಯತೆಗಳನ್ನು ಹೊರಡಿಸುವುದರಿಂದ ಇಲ್ಲಿ ಉಲ್ಲೇಖಿಸುತ್ತಿದ್ದೇನೆ.

ಕುಲಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರು ಬಲ್ಲಿರ ।ಪ।
ಹುಟ್ಟದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟು ಕಾಣಿಸಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆ ಕಂಡ್ಯ ಮನುಜ ॥1॥

ಜಲವೇ ಸಕಲ ಕುಲಕ್ಕೆ ತಾಯಲ್ಲವೆ
ಜಲದ ಕುಲವನೇನಾದರೂ ಬಲ್ಲಿರ
ಜಲದ ಬೊಬ್ಬುಳಿಯಂತೆ ಸ್ಥಿರವಲ್ಲವೀದೇಹ
ನೆಲೆಯನರಿತು ನೀ ನೆನೆ ಕಂಡ್ಯ ಮನುಜ ॥2॥

ಹರಿಯೇ ಸರ್ವೋತ್ತಮ ಹರಿಯೇ ಸರ್ವೇಶ್ವರ
ಹರಿಮಯವೆಲ್ಲವನುತ ತಿಳಿದು
ಸಿರಿ ಕಾಗಿ ನೆಲೆಯಾದಿ ಕೇಶವ ರಾಯನ
ಚರಣ ಕಮಲವ ಕೀರ್ತಿಸುವನೆ ಕುಲಜ ॥3॥

ಕನಕದಾಸರಿಗೆ ಶಿಷ್ಯಸಮಾಜದವರು ಎಂದು ಕರೆಯಿಸಿಕೊಳ್ಳುವ ಮೇಲ್ಜಾತಿಯವರ ಸಂಪರ್ಕವೂ ಇತ್ತು. ಅತ್ಯಂತ ಕೀಳು ಕುಲದಲ್ಲಿ ಹುಟ್ಟಿರುವ ಸಾಮಾನ್ಯ ಅಸ್ಪೃಶ್ಯನ ಒಡನಾಟವೂ ಇತ್ತೆಂಬುದು ಅವರ ಕೀರ್ತನೆಗಳಿಂದ, ಅವರ ಕಾವ್ಯಗಳಿಂದ ತಿಳಿದುಬರುತ್ತದೆ. ಇವರಿಬ್ಬರ ಅಂದರೆ ಶ್ರೇಷ್ಠ ಜಾತಿ ಎನಿಸಿಕೊಂಡವರ ಮತ್ತು ಕುಲೀನ ಎನ್ನಿಸಿಕೊಂಡವರ ಸಾಮಾಜಿಕ ಸ್ಥಿತಿಗತಿಗಳನ್ನು ಒಟ್ಟೊಟ್ಟಿಗೆ ಇಟ್ಟುಕೊಳ್ಳುವುದು ಕನಕದಾಸರ ಸಮಷ್ಠಿ ಮನಸ್ಸಿಗೆ ಅತ್ಯಂತ ಸಹಜ ವಿಷಯ. ಕತ್ತಲು–ಬೆಳಕು, ನ್ಯಾಯ–ಅನ್ಯಾಯ, ತಪ್ಪು–ಒಪ್ಪು, ಒಳಿತು–ಕೆಡಕು, ಬೇಕು–ಬೇಡ, ಕಪ್ಪು–ಬಿಳುಪು, ಕತ್ತಲು–ಬೆಳಕು ಇವುಗಳನ್ನು ವಿಶ್ಲೇಷಿಸುವ, ವಿಮರ್ಶಿಸುವ, ಪುನರ್ ವಿಮರ್ಶಿಸುವ ಮನಸ್ಥಿತಿ ಕನಕದಾಸರಿಗಿತ್ತು. ಆದ್ದರಿಂದಲೇ ಅವರು ತಮ್ಮ ಅಭಿವ್ಯಕ್ತಿಯಲ್ಲಿ ಜಾತೀಯತೆಯ ವಿಷಯ ಬಂದಾಗ ಅದನ್ನು ಪ್ರತಿರೋಧಿಸಿ ಮಾನವತ್ವವನ್ನು ಸಾರಲು ತೊಡಗುತ್ತಾರೆ. ಆ ಕೀರ್ತನೆಗಳಲ್ಲಿ ವ್ಯಕ್ತವಾಗುವ ತಾತ್ವಿಕ ವಿಚಾರಗಳನ್ನು ತಿರಸ್ಕರಿಸುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಅಷ್ಟರ ಮಟ್ಟಿಗೆ ಅವು ತರ್ಕಬದ್ಧವಾಗಿರುತ್ತವೆ. ನಿಖರವಾಗಿರುತ್ತವೆ. ಮೇಲಿನ ಕೀರ್ತಿಯಲ್ಲಿ ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ಎಂದು ಪ್ರಶ್ನಿಸುತ್ತಾರೆ. ಸಾವಿರಾರು ಜಾತಿಗಳಿರುವ ಈ ದೇಶದಲ್ಲಿ ಕುಲದ ಮೂಲವನ್ನು ಹುಡಕವುದರಲ್ಲಿ ಇಂದಿಗೂ ಗೊಂದಲಗಳಿವೆ. ಅಷ್ಟೇ ಏಕೆ ಪುರಾಣ ಸ್ಮೃತಿ, ಶಾಸ್ತ್ರಗಳನ್ನು ಓದಿಕೊಂಡುಬಂದಿರುವ ಪುರೋಹಿತ ಶಾಹಿಯನ್ನು ಅವರ ಕುಲದ ಮೂಲವನ್ನು ತಿಳಿಸಿ ಹೇಳಿರೆಂದು ಪ್ರಶ್ನಿಸುತ್ತಾ ಹೋದಾಗ ಅವರು ಕುಲದ ಮೂಲ ಹೇಳಲು ಸಾಧ್ಯವಾಗುವುದಿಲ್ಲ. ಹೇಗೆ ಪ್ರಕೃತಿಯಲ್ಲಿರುವ ಸಕಲ ಜೀವರಾಶಿಗಳಿಗೂ ತಾಯಿಯಾಗಿರುವ ಜಲದ ಕುಲವನ್ನು ಅರಸುವುದಕ್ಕೆ ಸಾಧ್ಯವಾಗುವುದಿಲ್ಲವೋ ಹಾಗೆಯೇ ಮನುಷ್ಯನು ತಾನೇ ಮಾಡಿಕೊಂಡಿರುವ ಕುಲದ ಮೂಲಗಳನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಬೇಕಾದರೆ ಊಹೆ ಮಾಡಬಹುದಷ್ಟೆ. ಹೀಗಿರುವಾಗ ಜಾತಿ–ಕುಲ ಎಂದು ಹೊಡೆದಾಡುವುದರಲ್ಲಿ ಅರ್ಥವಿಲ್ಲವೆಂದು ಕನಕದಾಸರು ಮೇಲಿನ ಕೀರ್ತನೆಯಲ್ಲಿ ತಮ್ಮ ವಿಚಾರವನ್ನು ಮಾಡಿಸಿದ್ದಾರೆ.

ಮತ್ತೊಂದು ಕೀರ್ತನೆಯಲ್ಲಿ ಮಾತೆಯುದರದೊಳು ನವಮಾಸ ಮಲಮೂತ್ರದೊಳು ಯಾತನೆಯ ಯೋನಿ ಮುಖ ಮಾರ್ಗವಿಡಿದು ಭೂತಳಕೆ ಬಂದ ಹದನೇನು ತೀರಿಸಿಕೊಂಡೆ? ಜಾತಿ ಯಾವುದು? ನಿನ್ನ ಹೆಸರೇನು ಮರುಳೆ? ಎಂದು ಕನಕದಾಸರು ಪ್ರಶ್ನಿಸುತ್ತಾರೆ. ಈ ಪ್ರಶ್ನೆಯು ಕನಕದಾಸರ ಜ್ಞಾನದ ಎತ್ತರ ಮತ್ತು ಅವರ ವೈಚಾರಿಕ ತಾತ್ವಿಕ ನೆಲೆಗಳ ಪ್ರಖರತೆಯನ್ನು ಗಮನಿಸಬಹುದು. ಜಾತಿಕುಲದ ವಿರುದ್ಧದ ಪ್ರತಿರೋಧ ಉಳಿದ ದಾಸರಿಗೆ (ಅಂದರೆ ಕನ್ನಡ ದಾಸಕೂಟದವರಿಗೆ) ಇರಲಿಲ್ಲ. ಆದರೆ ಕನಕದಾಸರಿಗೆ ಅದರ ಅಗತ್ಯವಿತ್ತು. ಏಕೆಂದರೆ ತಾನೇ ಕೀಳು ಕುಲದವನಾಗಿದ್ದು ಪಂಡಿತ ಮಂಡಲಿ ಮತ್ತು

ಪುರೋಹಿತರಿಂದ ಅನೇಕ ಬಾರಿ ಅವಮಾನಿತನಾಗಿದ್ದರು. ಹೀಗಾಗಿ ಅವರು ತಮ್ಮ ಜ್ಞಾನ ಮತ್ತು ವೈಚಾರಿಕ ಪ್ರಖರತೆಯನ್ನು ಬೆಳೆಸಿಕೊಂಡು ಪುರೋಹಿತ ಶಾಹಿಯನ್ನು ಎದುರಿಸಿದರು. ಅವರಿಗಾದ ಅವಮಾನಗಳು, ಜಾತಿಯ ನಿಂದೆಗಳು, ಕನಕದಾಸರಿಗೆ ಒಂದು ಬಗೆಯ ಸೃಜನಶೀಲ ಶಕ್ತಿಯಾಗಿ ಕ್ರಿಯಾಶೀಲವಾದವು. ಸಮಾಜದಲ್ಲಿ ಕನಕದಾಸರ ವೈಯಕ್ತಿಕ ಬದುಕು ಅವಮಾನಗಳಿಂದಲೇ ತುಂಬಿತ್ತು ಎಂಬುದಕ್ಕೆ ಆಧಾರಗಳಿವೆ. ಅಂದಿನ ಸಾಮಾಜಿಕ ಸ್ಥಿತಿಗತಿಗಳು, ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಿಸರವನ್ನು ಸೂಕ್ಷ್ಮವಾಗಿ ಗಮನಿಸಿದರೆ ದಾಸಪರಂಪರೆಯಲ್ಲಿ ಏಕಾಂಗಿಯಾಗಿಯೇ ಕಾಣುತ್ತಾರೆ. ಹೀಗಾಗಿ ಅವರ ಸೃಜನಶೀಲ ಶಕ್ತಿಯ ವ್ಯಕ್ತಿತ್ವದಲ್ಲಿ ಧಾರ್ಮಿಕತೆ ಒಂದು ಕಡೆಗೆ ವೈಚಾರಿಕತೆ ಮತ್ತೊಂದು ಕಡೆಗೆ ಅರಳಿವೆ. ಧಾರ್ಮಿಕತೆ ಎಂದರೆ ಸ್ಥಗಿತಗೊಂಡ ಮತಧರ್ಮವಲ್ಲ. ಚಲನಶೀಲತೆ ತುಂಬಿದ ಮಾನವತಾ ಧರ್ಮ. ಈ ಸಂದರ್ಭದಲ್ಲಿ ತ.ಸು.ಶಾಮರಾಯರು ಹೇಳುವ ಮಾತುಗಳು ನೆನಪಿಗೆ ಬರುತ್ತವೆ "ಆಗ ಸಮಾಜದಲ್ಲಿ ಧರ್ಮ ನಿಯಂತ್ರಣ ಕರ್ತೃಗಳಾಗಿ ಜನರಿಗೆ ಮಾರ್ಗದರ್ಶನ ಮಾಡಿಸಬೇಕಾಗಿದ್ದ ಬ್ರಾಹ್ಮಣವರ್ಗ, ಅಂತಃ ಶೂನ್ಯವಾಗಿ, ಕೇವಲ ಡಾಂಭಿಕತನ, ಮಡಿವಂತಿಕೆ, ಅರ್ಥಹೀನವಾದ ಆಚಾರ ಜಾತೀಯತೆಗಳಲ್ಲಿ ಪರಿಣಾಮಗೊಂಡಿತ್ತು. ಕುರುಡನನ್ನು ಕೈಹಿಡಿದು ಹೋಗುವ ಕುರುಡನಂತೆ ಜನಜಂಗುಳಿ ಅವರನ್ನು ಅನುಸರಿಸಬೇಕಾಗಿತ್ತು. ಮೂಕ ಪ್ರಾಣಿಗಳಂತೆ ತಮ್ಮನ್ನು ಅನುಸರಿಸಿ ಬರುತ್ತಿದ್ದ ಆ ಜನರನ್ನು ದೈವ ಧರ್ಮಗಳ ಹೆಸರಿನಲ್ಲಿ ಶೋಷಿಸಿ, ಸ್ವಾರ್ಥ ಸಾಧನೆ ಮಾಡಿಕೊಳ್ಳುತ್ತಿದ್ದ ಪುರೋಹಿತ ವರ್ಗವನ್ನು ಕಂಡು ಕನಕದಾಸ ಅಪಾರ ಹೇಸಿರಬೇಕು" ಇಂತಹ ಪರಿಸರದಲ್ಲಿದ್ದ ಕನಕದಾಸರು ತಮ್ಮ ವೈಚಾರಿಕ ಪ್ರಖರತೆ ಮತ್ತು ಜ್ಞಾನದಿಂದ ಕ್ರಿಯಾಶೀಲ ಮನೋಭಾವವನ್ನು ಬೆಳೆಸಿಕೊಂಡು ಜಾತಿ ವ್ಯವಸ್ಥೆಗೆ ಕಾರಣರಾದವರನ್ನು ವಿರೋಧಿಸುತ್ತಾರೆ. ನಿಸರ್ಗದಲ್ಲಿರುವ ಎಲ್ಲಾ ಪ್ರಾಣಿ, ಪಕ್ಷಿಗಳ ಅದರಲ್ಲೂ ಮಾನವನ ಹುಟ್ಟಿನ ನೈಸರ್ಗಿಕವಾದ ಕ್ರಿಯೆಯನ್ನು ಒಂದು ಕೀರ್ತನೆಯಲ್ಲಿ ಅಭಿವ್ಯಕ್ತಿಸಿ ಜಾತಿ ವ್ಯವಸ್ಥೆಯನ್ನು ತರ್ಕಬದ್ಧವಾಗಿ ಟೀಕಿಸಿರುವುದು ಮತ್ತು ಪುರೋಹಿತಶಾಹಿಗೆ ಅದನ್ನು ಮನವರಿಕೆ ಮಾಡಿಕೊಟ್ಟಿರುವುದು ಅವರ ಸೃಜನಶೀಲ ಪ್ರತಿಭೆಯ ಎತ್ತರವನ್ನು ಪ್ರತಿಬಿಂಬಿಸುತ್ತದೆ. ಇದೇ ಸಂದರ್ಭದಲ್ಲಿ ಜಾತಿಯನ್ನು ವಿರೋಧಿಸುವ ಮತ್ತೊಂದು ಕೀರ್ತನೆಯನ್ನು ಉಲ್ಲೇಖಿಸುವುದು ಉಚಿತವಾಗಿದೆ.

ಕುಲ ಕುಲ ಕುಲವೆನ್ನುತಿಹರು
ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ–
ಕೆಸರೊಳು ತಾವರೆ ಪುಟ್ಟಲು ಅದು ತಂದು
ಬಿಸಜನಾಭನಿಗರ್ಪಿಸಲಿಲ್ಲವೆ
ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವ
ವಸುಧೆಯೊಳಗೆ ಭೂಸುರರುಣಲಿಲ್ಲವೆ

ಮೃಗಗಳ ಮೈಯಲಿ ಪುಟ್ಟಿದ ಕತ್ತುರಿಯ
ತೆಗೆದು ಪೂಸುವರು ದ್ವಿಜರೆಲ್ಲರು
ಬಗೆಯಿಂದ ನಾರಾಯಣ ನ್ಯಾವಕುಲ
ಅಗಜ ವಲ್ಲಭ ನ್ಯಾತರ ಕುಲದವರು
ಆತ್ಮ ಯಾವಕುಲ ಜೀವ ಯಾವಕುಲ
ತತ್ವೇಂದ್ರಿಯಗಳ ಕುಲ ಪೇಳಿರಯ್ಯಾ
ಆತ್ಮಾಂತರಾತ್ಮ ನೆಲೆಯಾದಿ ಕೇಶವನು
ಆತನೊಲಿದ ಮೇಲೆ ಯಾತರ ಕುಲವಯ್ಯ

ಈ ಕೀರ್ತನೆಯು ಕಾವ್ಯಲಿಂಗಾಲಂಕಾರವಾಗಿದ್ದು ಸಮರ್ಥನೀಯವಾದದ್ದನ್ನು ಸಮರ್ಥಿಸುತ್ತದೆ. ಜಾತಿ ವ್ಯವಸ್ಥೆ ಇಲ್ಲವೆಂಬುದು ಸಮರ್ಥನೀಯವಾದದ್ದು. ಅದನ್ನು ಮೇಲಿನ ಕೀರ್ತನೆಯಲ್ಲಿರುವ ಅಲಂಕಾರಗಳು ಜಾತಿ ಎಂಬುದನ್ನು ವಿರೋಧಿಸುತ್ತವೆ. ಕೆಸರು ಹಸುವಿನ ಮಾಂಸ, ಮೃಗಗಳು ಇವು ಅಶುಚಿಯನ್ನು ಕೊಳಕನ್ನು ಸೂಚಿಸುತ್ತವೆ. ಆದ್ದರಿಂದ ಇವು ಸ್ಪರ್ಶಕ್ಕೆ ಅನರ್ಹವಾದವುಗಳು. ತಾವರೆ ಕ್ಷೀರ, ಕಸ್ತೂರಿ, ಇವು ಮೇಲಿನ ಅಸ್ಪೃಶ್ಯವೆಂದು ಭಾವಿಸಿರುವುಗಳಿಂದಲೇ ಹುಟ್ಟಿದಂತಹವು. ಆದರೆ ಮಾನವನಾದವನು ಕೆಳಜಾತಿಯಲ್ಲಿ ಹುಟ್ಟಿದ್ದಾನೆಂಬ ಕಾರಣಕ್ಕೆ ಅವನನ್ನು ಮುಟ್ಟಿಸಿಕೊಳ್ಳುವಂತಿಲ್ಲ. ಇದು ಜೀವ ವಿರೋಧಿಯಾದದ್ದು, ಮಾನವ ವಿರೋಧಿಯಾದದ್ದು ಎಂಬುದು ಕನಕದಾಸರ ಅಭಿಪ್ರಾಯ. ಕೆಸರಿನಲ್ಲಿ ಹುಟ್ಟುವ ಕಮಲ ವಿಷ್ಣುವಿನ ಪೂಜೆಗೆ ಬಳಸಬಹುದು. ಮಾಂಸದಲ್ಲಿ ಹುಟ್ಟಿದ ಹಾಲನ್ನು ಕುಡಿಯಬಹುದು ಮೃಗದ ಮೈಯಲ್ಲಿ ಹುಟ್ಟಿದ ಕಸ್ತೂರಿಯನ್ನು ಮೈಗೆ ಹಚ್ಚಿಕೊಳ್ಳಬಹುದು. ಆದರೆ ಎಲ್ಲರಂತೆ ರಕ್ತ ಮಾಂಸ ಮನಸ್ಸು ಭಾವನೆಗಳನ್ನು ಹೊಂದಿರುವ ಮನುಷ್ಯನನ್ನು ಏಕೆ ಮುಟ್ಟಿಸಿಕೊಳ್ಳಬಾರದು ಎಂಬ ವಿಚಾರ ಈ ಕೀರ್ತನೆಯಲ್ಲಿದೆ. ಕೆಳಜಾತಿಯ ಮನುಷ್ಯರು ಮುಟ್ಟಿಸಿಕೊಳ್ಳಲು ಅರ್ಹರಲ್ಲದವರಾದರೆ ವಿಷ್ಣು, ಶಿವ, ಇವರ ಕುಲಗಳ ಬಗ್ಗೆ ತಿಳಿದುಕೊಂಡಿರುವಿರಾ ಎಂಬ ಪ್ರಶ್ನೆಯನ್ನು ಎತ್ತುತ್ತಾರೆ. ಈ ಪ್ರಶ್ನೆಯೇ ಇಲ್ಲಿ ಮುಖ್ಯವಾದದ್ದು. ವಿಷ್ಣು ಮತ್ತು ಶಿವ ಪುರೋಹಿತಶಾಹಿಯ ಎರಡು ಕಣ್ಣುಗಳಿದ್ದಂತೆ. ಅಷ್ಟೇ ಏಕೆ ಪುರೋಹಿತಶಾಹಿಯ ಕಷ್ಟಕಾಲದಲ್ಲಿ ನೆರವಾಗುವ ಈ ದೇವರುಗಳು ಅವರ ಹೃದಯವಿದ್ದಂತೆ. ಕೆಳವರ್ಗದವರ ದೇವತೆಗಳು ಮತ್ತು ಎಲ್ಲಾ ದೇವರುಗಳನ್ನು ವಿಷ್ಣು ಮತ್ತು ಶಿವನೊಂದಿಗೆ ಸಮೀಕರಿಸಿ ಕೆಳಜಾತಿಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ವಿಷ್ಣು ಮತ್ತು ಶಿವ ಬೇಕೇ ಬೇಕು. ರಾಕ್ಷಸರು ಎಂದು ಕರೆಯಲ್ಪಡುವವರು ಸಾಮಾನ್ಯವಾಗಿ ಕೆಳಜಾತಿಯ ದೇವರುಗಳೇ. ಅವರನ್ನು ಕೊಲ್ಲಿಸುವ ಬಗೆಯನ್ನು ಕಂಡರೆ ಪುರೋಹಿತಶಾಹಿಯ ಹುನ್ನಾರಗಳೇನು ಎಂಬುದು ಮನವರಿಕೆಯಾಗುತ್ತದೆ. ಈ ಕೀರ್ತನೆಯಲ್ಲಿ ವಿಷ್ಣುವಿನ ಮತ್ತು ಶಿವನ ಕುಲವನ್ನೇ ಪ್ರಶ್ನಿಸಿ ಕೊನೆಗೆ ಆತ್ಮಜೀವ

ತತ್ವೇಂದ್ರಿಯಗಳಿಗೆ ಹೇಗೆ ಜಾತಿ ಕುಲವಿಲ್ಲವೋ ಮನುಷ್ಯನಿಗೂ ಸಹಜಾತಿ ಕುಲವಿಲ್ಲವೆಂದು ಕನಕದಾಸರು ಖಚಿತವಾಗಿ ಸ್ಪಷ್ಟವಾಗಿ ಸಾರುತ್ತಾರೆ.

ಮೊದಲೇ ತಿಳಿಸಿದಂತೆ ಕನಕದಾಸರು ತಮ್ಮ ಪ್ರತಿಭೆ, ಜ್ಞಾನ ಪ್ರಖರ ವೈಚಾರಿಕ ಶಕ್ತಿಯಿಂದ ಪ್ರಖರವಾದ, ಕ್ರಿಯಾಶೀಲವಾದ ಸೃಜನಶೀಲ ಶಕ್ತಿಯಿಂದ ಕೀರ್ತನೆಗಳ ಮೂಲಕ ಜಾತಿ ವ್ಯವಸ್ಥೆಯನ್ನು ತಮ್ಮದೇ ಆದ ರೀತಿಯಲ್ಲಿ ಪ್ರತಿರೋಧಿಸಿದ್ದಾರೆ. ಈ ವಿರೋಧ ಅಷ್ಟೇನು ಸುಲಭವಲ್ಲ. ಭಕ್ತಿಪಂಥದ ಒಳಗಡೆಯೇ ಇದ್ದು ಪ್ರಧಾನ ನೆಲೆಯಲ್ಲಿದ್ದ ಅಥವಾ ಸ್ಥಾನದಲ್ಲಿದ್ದ ವಿಷ್ಣುವನ್ನೇ ಪ್ರಶ್ನಿಸುವುದು ಸಾಮಾನ್ಯರಿಂದ ಸಾಧ್ಯವಾಗುವುದಿಲ್ಲ. ಅಸಾಮಾನ್ಯವಾದ ಜ್ಞಾನ, ವೈಚಾರಿಕ ಪ್ರಖರತೆ ಇದ್ದುದರಿಂದಲೇ ಕನಕದಾಸರು ವಿಷ್ಣುವನ್ನೇ ಪ್ರಶ್ನಿಸುತ್ತಾರೆ. ಈ ಸಾಲುಗಳನ್ನು ಗಮನಿಸಿ.

ಆರು ಬದುಕಿದರಯ್ಯಾ ಹರಿ ನಿನ್ನ ನಂಬಿ
ತೋರು ಈ ಧರೆಯೊಳಗೆ ಒಬ್ಬರನೂ ಕಾಣೆ
ಕಲಹ ಬಾರದ ಮುನ್ನ ಕರ್ಣನೊಬ್ಬನ ಕೊಂದೆ
ಸುಲಭದಲ್ಲಿ ಕೌರವನ ಮನೆಯ ಮುರಿದೆ
ನೆಲನ ಬೇಡಲು ಹೋಗಿ ಬಲಿಯ ಭೂಮಿಗೆ ತುಳಿದೆ
ಮೊಲೆಯನುಣ್ಣಲು ಹೋಗಿ ಪೂತನಿಯ ಕೊಂದೆ.

ಇಲ್ಲಿ ಬಳಕೆಯಾಗಿರುವ ಅಲಂಕಾರಗಳು ವ್ಯಾಜ್ಯಸ್ತುತಿ ಅಲಂಕಾರ. ವ್ಯಾಜ್ಯಸ್ತುತಿ ಅಲಂಕಾರದಲ್ಲಿ ನಿಂದೆಯ ಮೂಲಕ ಸ್ತುತಿ, ಸ್ತುತಿಯ ಮೂಲಕ ನಿಂದೆಯನ್ನು ರವಾನಿಸಲಾಗುತ್ತದೆ. ಮೇಲಿನ ಕೀರ್ತನೆಯ ಸಾಲುಗಳು ಸ್ತುತಿಯ ಮೂಲಕ ನಿಂದೆ ಇದೆ. ಈ ನಿಂದೆ ಕನಕದಾಸರು ಮಾಡಿರುವುದು ಉಚಿತವಾಗಿಯೇ ಇದೆ. ಕರ್ಣ, ಕೌರವ, ಬಲಿ ಪೂತನಿ ಇವರ್ಯಾರೂ ವೈದಿಕರಲ್ಲ. ಇವರೆಲ್ಲ ಕೆಳಜಾತಿಗಳವರೇ ಆದುದರಿಂದ ಕೃಷ್ಣ ಇಲ್ಲವೇ ವಿಷ್ಣು ಅವರನ್ನು ರಕ್ಷಿಸಲಿಲ್ಲ. ಇವರನ್ನೆಲ್ಲಾ ಉಪಾಯವಾಗಿಯೇ ಕೊಲ್ಲುತ್ತಾನೆ. ಈ ಕಾರಣಕ್ಕಾಗಿ ಕನಕದಾಸರು ಹರಿಯನ್ನೆ ನಿಂದಿಸುವ ಮಟ್ಟಕ್ಕೆ ಹೋಗುತ್ತಾರೆ. ಜಾತಿ ವ್ಯವಸ್ಥೆಯನ್ನು ಈ ನೆಲೆಗಳಲ್ಲಿ ವಿರೋಧಿಸುವ ಕನಕದಾಸರು ವಿಶ್ವ ಮಾನವ ಪ್ರಜ್ಞೆಯುಳ್ಳವರು. ತಾವು ನಂಬಿದ ದೇವರನ್ನೇ ಜಾತಿ ವಿಚಾರದಲ್ಲಿ ಪ್ರಶ್ನಿಸುವ ಸಂತ ಇಲ್ಲವೇ ಕವಿಯನ್ನು ಬೇರೆ ಎಲ್ಲೂ ಕಾಣಲು ಸಾಧ್ಯವೇ ಇಲ್ಲ.

ಕನಕದಾಸರ ಕೀರ್ತನೆಗಳನ್ನು ಅಧ್ಯಯನ ಮಾಡುವಾಗ ಒಂದು ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅವರ ಅನುಭವದ ವಿಸ್ತಾರ, ವ್ಯಾಪ್ತಿ ಹಾಗೂ ವ್ಯಕ್ತಿಯ ಸ್ವರೂಪ ವಿಶಿಷ್ಟವಾದದ್ದು. ಇದಕ್ಕೆ ಕಾರಣ ವೈದಿಕ ಪರಂಪರೆಯ ಸಾಂಪ್ರದಾಯಿಕ ಧರ್ಮ ಮತ್ತು ಆಚರಣೆಗಳಿಂದ ಪಡೆದ ಸೀಮಿತ ಅನುಭವ ಕನಕದಾಸರದಲ್ಲ ಬದಲಿಗೆ ಅವೈದಿಕ ಪರಂಪರೆಯ ಅದರಲ್ಲೂ ಬೌದ್ಧ ಪರಂಪರೆಯ ಜ್ಞಾನದ ಪ್ರಭಾವ ಇವರ ಮೇಲಾಗಿದೆ. ಇದರ ಜೊತೆಗೆ ವೈಯಕ್ತಿಕವಾದ ಬದುಕಿನ

ಬವಣೆ ಅವಮಾನದಂತಹ ಉತ್ಕಟ ಭಾವಾವೇಶಗಳು ಅವರಲ್ಲಿ ಒಂದುಗೂಡಿ ಅವರ ಸೃಜನಶೀಲ ಶಕ್ತಿಯನ್ನು ರೂಪಿಸಿವೆ. ಆದ್ದರಿಂದ ಕನಕದಾಸರು ಸಾಮಾಜಿಕ ವಿಸಂಗತಿಗಳ ಬಗ್ಗೆ ಬೂಟಾಟಿಕೆ, ಡಂಭಾಚಾರದ ಬದುಕು, ಜಾತಿ ಮತಗಳಿಂದ ಮಾನವನ ಹೃದಯದಲ್ಲಿ ಮೂಡಿದ ಬಿರುಕುಗಳ ಬಗ್ಗೆ ಉತ್ಕಟ ಪ್ರತಿರೋಧ ಅಸಹನೆಗಳು ಅವರ ಕೀರ್ತನೆಗಳಲ್ಲಿ ಅಭಿವ್ಯಕ್ತಗೊಂಡಿವೆ. ಭಕ್ತಿಯ ಉಲ್ಲಾಸಕ್ಕಿಂತ ಪ್ರತಿರೋಧವೇ ಹೆಚ್ಚಾಗಿದೆ. ಬೆಳ್ಳಕ್ಕಿಯ ಡಂಭತನ, ಗುಂಡು ಮುಳುಗನ ಹಕ್ಕಿಯ ಧ್ಯಾನ, ಮಂಡೂಕನ ಧ್ಯಾನ, ಗಾಣದೆತ್ತಿನ ಪ್ರದಕ್ಷಿಣೆ, ಮಾಣಿಕ್ಯದ ರಾಶಿಯಲ್ಲಿ ಅಣಿಮುತ್ತು ಹುಡುಕುವ ಐವರು ಅಂಧಕರು ಈ ಸಾಲುಗಳಲ್ಲಿ ವ್ಯಕ್ತವಾಗಿರುವ ವಿಚಾರ ಮೇಲು ನೋಟಕ್ಕೆ ಮೌಢ್ಯದ ಭಕ್ತಿಯ ಆಚರಣೆಗಳೆಂದು ತೋರಿದರೂ ವಾಸ್ತವವಾಗಿ ಸಾಮಾಜಿಕ ಅಸಮಾನತೆಯನ್ನುಂಟುಮಾಡಿರುವ ಮೇಲು ಜಾತಿ ಪುರೋಹಿತಶಾಹಿ ವರ್ಗದ ವಿರೋಧವೇ ಇದೆ. ತಾವು ಮಾಡುವ ಆಚರಣೆಗಳಿಂದಲೇ ತಾವು ಶ್ರೇಷ್ಠ, ಉಳಿದವರು ಕನಿಷ್ಟ ಎಂಬ ಭಾವನೆ ಅವರಲ್ಲಿ ಬೇರೂರಿದೆ. ಆದ್ದರಿಂದ ಕನಕದಾಸರು ಮೇಲೆ ಹೇಳಿದಂತೆ ಆಚರಿಸಿಬಿಟ್ಟರೆ ಶ್ರೇಷ್ಠರಾಗುವುದಿಲ್ಲ ಮಾನವೀಯತೆಯ ಹೃದಯವನ್ನು ಬೆಳೆಸಿಕೊಳ್ಳಬೇಕು, ಮನುಷ್ಯರನ್ನು ಮನುಷ್ಯರನ್ನಾಗಿ ನೋಡಬೇಕು. ಆಗ ನಿಮ್ಮ ಆಚರಣೆಗಳಿಗೆ ಬೆಲೆ ಬರುತ್ತದೆ ಆದ್ದರಿಂದ ಮೊದಲು ಜಾತಿ ವ್ಯವಸ್ಥೆಯನ್ನು ಬಿಡಿ ಎಂಬುದು ಅವರ ತಾತ್ವಿಕ ದರ್ಶನವಾಗಿದೆ. "ದಾಸದಾಸರ ಮನೆಯ ದಾಸಿಯ ಮಗ ನಾನು" ಎಂದು ಪ್ರಾರಂಭವಾಗುವ ಕೀರ್ತನೆಯಲ್ಲಿ ಶಂಕುದಾಸ, ಮಂಕುದಾಸ, ಮರುಳದಾಸ, ಬಡದಾಸ, ಕುರುಬದಾಸ, ಮಾದಿಗದಾಸ, ಆಳಿನಾಳಿನ ದಾಸ ಎಂದು ತಮ್ಮನ್ನೇ ತಾವು ಕೀಳು ಜಾತಿಗಳಲ್ಲಿ ಗುರುತಿಸಿಕೊಂಡಿದ್ದಾರೆ. ಇಲ್ಲಿ ಬರುವ ಹೆಸರುಗಳೆಲ್ಲ ಸಾಮಾನ್ಯವಾಗಿ ಹಿಂದುಳಿದ ಅಸ್ಪೃಶ್ಯ ಜಾತಿಗಳಲ್ಲಿನ ಜನರ ಹೆಸರುಗಳು. ಕುರುಬದಾಸ ಅಷ್ಟೇ ಅಲ್ಲ ಎಲ್ಲಾ ಹಿಂದುಳಿದ ಅಸ್ಪೃಶ್ಯ ಜಾತಿಗಳ ದಾಸ ಎಂಬ ಅರ್ಥ ಇಲ್ಲಿ ಸೂಚನೆಯಾಗಿದೆ. ಈ ಮೂಲಕ ಜಾತಿಯ ತಾರತಮ್ಯವನ್ನು ಕನಕದಾಸರು ವಿರೋಧಿಸುತ್ತಿದ್ದಾರೆ. ತನ್ನನ್ನು ಕೆಳಜಾತಿಗಳಲ್ಲಿ ಅಸ್ಪೃಶ್ಯ ವರ್ಗಗಳಲ್ಲಿ ಗುರುತಿಸಿಕೊಳ್ಳುವುದು ಮಾನವತಾವಾದಿಯಾದವನ ಲಕ್ಷಣ. ಕನಕದಾಸರು ಈ ರೀತಿ ಅಸ್ಪೃಶ್ಯ ಜಾತಿಗಳಲ್ಲಿ ಗುರುತಿಸಿಕೊಂಡು ಆ ಮೂಲಕ ವಿಶ್ವ ಪ್ರಜ್ಞೆಯುಳ್ಳವರಾಗಿ ವಿಶ್ವಾತ್ಮಕ ತಾತ್ವಿಕ ದರ್ಶನವನ್ನು ತಮ್ಮ ಕೀರ್ತನೆಗಳ ಮೂಲಕ ಕಟ್ಟಿಕೊಟ್ಟಿದ್ದಾರೆ.

ಜಾತಿ ವ್ಯವಸ್ಥೆಯನ್ನು ಪೋಷಿಸುವ ಅದನ್ನು ಬದಲಾವಣೆಯಾಗದಂತೆ ಜಡಗೊಳಿಸಿ ಕ್ರಿಯಾಶೀಲ ಹೀನವಾಗಿಸುವ ಧಾರ್ಮಿಕ ಆಚರಣೆಗಳು ವಿಧಿವಿಧಾನಗಳನ್ನು ಕನಕದಾಸರು ಕಟುವಾಗಿ, ಅರ್ಥಹೀನವಾದವು ಡಾಂಭಿಕತನದಿಂದ ಕೂಡಿರುವಂತಹವುಗಳು, ಈ ಡಾಂಭಿಕತನ ಜಾತಿ ವ್ಯವಸ್ಥೆಯನ್ನು ಪೋಷಿಸುವ ಒಂದು ಹುನ್ನಾರವೇ ಆಗಿರುತ್ತದೆ. ಈ ಸಾಲುಗಳನ್ನು ಗಮನಿಸಿ

ಪಟ್ಟೆನಾಮವ ಬಳಿದು ಪಾತ್ರೆ ಕೈಯಲ್ಲಿ ಪಿಡಿದು
ಗುಟ್ಟಿನಲಿ ರಹಸ್ಯವ ಗುರುತರಿಯದೆ
ಕೆಟ್ಟ ಕೂಗನು ಕೂಗಿ ಬಗುಳಿ ಬಾಯಾರುವಂಥ
ಹೊಟ್ಟೆಗೇಡ ಮೃಗಗಳೆಲ್ಲ ಶ್ರೀ ವೈಷ್ಣವರೇ ಕೃಷ್ಣ ॥

ಇಲ್ಲಿ ಪುರೋಹಿತಶಾಹಿಯ ವಿಡಂಬನೆಯ ಜೊತೆಗೆ ಅವರ ಆಚರಣೆಗಳನ್ನು ವಿರೋಧಿಸಲಾಗಿದೆ ಇಲ್ಲವೇ ವಿಡಂಬಿಸಲಾಗಿದೆ. ಇಲ್ಲಿ ಆಚರಣೆಗಳ ವಿರೋಧವೆಂದರೆ ಪುರೋಹಿತಶಾಹಿಯ ವಿರೋಧ ಈ ವಿರೋಧ ಜಾತಿಯ ನೆಲೆಗಳನ್ನು ವಿರೋಧಿಸುವುದೂ ಆಗಿದೆ. ಕೆಳಜಾತಿಗಳ ಮನಸ್ಸನ್ನು ಅಧೀರಗೊಳಿಸುವುದರ ಮೂಲಕ ಅವರ ಮೇಲೆ ಹಿಡಿತವನ್ನು ಸಾಧಿಸಬಹುದಾಗಿದೆ. ಈಗಲೂ ಸಹ ದಿನನಿತ್ಯದ ಬೆಳಗ್ಗೆ ಟಿ.ವಿ. ವಾಹಿನಿಗಳಲ್ಲಿ ಬರುವ ಪುರೋಹಿತರ ಕಾರ್ಯಕ್ರಮಗಳನ್ನು ವೀಕ್ಷಿಸಿದರೆ ಅಳ್ಳೆದೆಯವರು ಅಷ್ಟೇ ಏಕೆ ಧೈರ್ಯವಂತರೂ ಸಹ ಹೆದರಿಕೆಯಿಂದ ಅವರು ಹೇಳಿದಂತೆ ಕೇಳುವ ಮನಸ್ಸಾಗುತ್ತದೆ. ಕೆಳಜಾತಿಗಳು ಅವರು ಹೇಳಿದಂತೆ ಕೇಳುತ್ತಾರೆ. ಈ ಆಚರಣೆಗಳೂ ಸಹ ಜಾತಿಯನ್ನು ಪೋಷಿಸುವಂತಹವುಗಳೇ ಆಗಿವೆ.

'ನಾನು ನೀನು ಎನ್ನದಿರೋ ಮಾನವ ಜ್ಞಾನದಿಂದ ನಿನ್ನ ನೀನೇ ತಿಳಿದು ನೋಡಲೋ' ಎಂಬ ಕೀರ್ತನೆಯಲ್ಲಿ ಕಾಮ, ಕರ್ಮ, ಜಾತಿ ಕುಲಗಳ ಚಕ್ರದಲ್ಲಿ ಸಿಲುಕಿ ಬದುಕನ್ನು ಆ ಮೂಲಕ ಸಮಾಜವನ್ನು ಜಡಗೊಳಿಸಿ ಕ್ರಿಯಾಶೀಲತೆಯಿಲ್ಲದಂತೆ ಮಾಡಿರುವ ಪುರೋಹಿತಶಾಹಿಯು ತಮ್ಮ ಅಜ್ಞಾನವನ್ನು ಬಿಟ್ಟು ಮಾನವರನ್ನು ಮಾನವರಾಗಿ ಕಾಣುವ ಆ ಮೂಲಕ ಭ್ರಾತೃತ್ವ ಸಹಬಾಳ್ವೆ ಸಮಾನತೆಯಿಂದ ಬದುಕುವುದನ್ನು ಕಲಿತುಕೊಳ್ಳಿ ಎಂದು ಕರೆಕೊಡುವ ಆಶಯವಿದೆ. ಈ ಕೀರ್ತನೆಯಲ್ಲಿ ಬರುವ ನಿದರ್ಶನಗಳೆಲ್ಲ ದೈಹಿಕ ಸ್ವರೂಪದವಾಗಿದ್ದು ದೇಹದ ಇತಿಮಿತಿ ಮತ್ತು ಮಾನವರಿಗಿರುವ ಏಕರೂಪದ ಮಾನಸಿಕ ಸ್ಥಿತಿಗಳನ್ನು ಹೇಳುತ್ತಾ ಮಡಿ ಮೈಲಿಗೆ ಎಂದು ಜಾತಿ ವ್ಯವಸ್ಥೆಯನ್ನು ಪೋಷಿಸುವುದನ್ನು ವಿರೋಧಿಸಲಾಗಿದೆ.

ಕನಕದಾಸರ ಕೀರ್ತನೆಗಳಲ್ಲಿ ಸಂವಾದ ರೂಪದ ಕೀರ್ತನೆಗಳಿವೆ. ಇದರಲ್ಲಿ ನೀನು ಎಂಬ ಪದ ಬಳಕೆಯಾಗುತ್ತದೆ. ಇದು ಹಲವಾರು ಅರ್ಥ ಸಾಧ್ಯತೆಗಳನ್ನು ಒಳಗೊಂಡಿದೆ. ಕೆಲವು ಕೀರ್ತನೆಗಳಲ್ಲಿ ನೀನು ಎಂಬ ಪದ ರಕ್ಷಿಸುವವನನ್ನು ಸೂಚಿಸಿದರೆ ಮತ್ತೆ ಕೆಲವು ಕೀರ್ತನೆಗಳಲ್ಲಿ ಭಕ್ತನ ಮೊರೆ ಹೋಗುವವನ ಪ್ರತಿ ವ್ಯಕ್ತಿತ್ವವನ್ನು ಸೂಚಿಸುತ್ತದೆ. ಇದು ಅಂದರೆ ಪ್ರತಿ ವ್ಯಕ್ತಿತ್ವ ಇಡಿಯಾಗಿ ಮನುಷ್ಯ ಕುಲವನ್ನು ಪ್ರತಿನಿಧಿಸುವ ಸಾಮರ್ಥ್ಯ ಪಡೆದಿದೆ. ಮನುಷ್ಯ ಕುಲದ ಲಕ್ಷಣಗಳನ್ನು ಅವನ ಸ್ವಾಭಿಮಾನವನ್ನು ಅವನ ಎಲ್ಲ ತವಕ ತಲ್ಲಣಗಳನ್ನು ಹೇಳುತ್ತದೆ. ಇದು ಬಹಳ ಮುಖ್ಯವಾದದ್ದು, ಏಕೆಂದರೆ ಭಕ್ತನಾದ ಕನಕದಾಸರು ಅಥವಾ ಭಕ್ತಿ

ಪರಂಪರೆಯ ಕನಕದಾಸರು ಇಲ್ಲಿ ದೇವರಿಗಿಂತ ಅಂದರೆ ಕಾಯುವಾತನಿಗಿಂತ ಮನುಷ್ಯನೇ ಮುಖ್ಯನಾಗುತ್ತಾನೆ ಎಂದು ಹೇಳುತ್ತಾರೆ. ಭಾಷೆಯು ಇಂತಹ ಕಡೆಗಳಲ್ಲೆಲ್ಲಾ ಧಾರ್ಮಿಕ ಸಾಂಕೇತಿಕತೆಯ ಭಾಷೆಯಾಗಿರುತ್ತದೆ. ದೇವರನ್ನು ಆತ್ಮವಾಗಿ ಪ್ರಾರ್ಥಿಸುವ ಭಾಷೆಯು, ಪ್ರಶ್ನಿಸುವ ಭಾಷೆಯ ಸಾಂಕೇತಿಕೆಯನ್ನು ಪಡೆದುಕೊಳ್ಳುವುದು ಕನಕದಾಸರಲ್ಲಿ ಮಾತ್ರ. ಇದು ಕನಕದಾಸರ ಇತ್ಯಾತ್ಮಕವಾದ ವಿಚಾರ. ದೇವರು ಮತ್ತು ಮನುಷ್ಯರ ಸಂಬಂಧದ ನೆಲೆಗಳನ್ನು ಚರ್ಚಿಸುವಾಗ, ಪುರಾಣ ಪ್ರತೀಕಗಳನ್ನು ಬಳಸುವಾಗ ಹಳೆಯ ಅರ್ಥವಿಲ್ಲದ ಆಚರಣೆಗಳನ್ನು ಖಂಡಿಸುವಾಗ ಜಾತಿಯತೆಯನ್ನು ಪ್ರತಿರೋಧಿಸುವಾಗ ಭಾಷೆಯು ಧಾರ್ಮಿಕ ಸಾಂಕೇತಿಕತೆಯನ್ನು ಪಡೆದುಕೊಂಡ ಭಾಷೆಯಾಗುತ್ತದೆ. ಧಾರ್ಮಿಕ ಭಾಷೆಯಾದಾಗ ಸಾಂಕೇತಿಕತೆಯನ್ನು ಪಡೆದುಕೊಳ್ಳುವುದರಿಂದ ನಿಗೂಢತೆ ಅಮೂರ್ತತೆ ಕಾಣಿಸಿಕೊಳ್ಳುತ್ತದೆ. ಮೇಲು ನೋಟಕ್ಕೆ ಇಲ್ಲಿ ಬಳಸಿರುವ ಭಾಷೆ ದೈವತ್ವವನ್ನು ಕುರಿತು ಹೇಳುತ್ತದೆ ಎನ್ನಿಸಿದರೂ ಅದು ಮನುಷ್ಯನ ಏಳು ಬೀಳುಗಳನ್ನು ಅವನ ಬದುಕಿನ ಸ್ವರೂಪವನ್ನು ಆ ಮೂಲಕ ಅವನ ಸಮಾಜದ ಸ್ವರೂಪ ಸಮಾಜದ ಸ್ತರ ವಿನ್ಯಾಸ ಅಂದರೆ ಜಾತಿ ವ್ಯವಸ್ಥೆಯನ್ನು ಕುರಿತು ಹೇಳುತ್ತದೆ. ಧಾರ್ಮಿಕ ಭಾಷೆಯ ಸಾಂಕೇತಿಕತೆಯ ಸ್ವರೂಪವನ್ನು ನಾವು ಅರ್ಥ ಮಾಡಿಕೊಂಡರೆ ಕನಕನ ಕೀರ್ತನೆಗಳ ಸಾಂಸ್ಕೃತಿಕ ಮಹತ್ವ ಅರಿವಾಗುತ್ತದೆ. ಅದರಲ್ಲೂ ಇಂದಿನ ಕವಿಗಳು ಸರಳ ಭಾಷಾ ಬಳಕೆಯನ್ನು ಮಾಡಿ ಜೀವನದ ಗಹನವಾದ ವಿಚಾರಗಳನ್ನು ಹೇಳುತ್ತಿದ್ದೇವೆ ಎಂದು ಭ್ರಮೆಯಲ್ಲಿದ್ದಾರೆ. ಇಂತಹ ಕವಿಗಳು ಕನಕದಾಸರನ್ನು ಓದಲೇಬೇಕು. ಆಗ ಇಂದಿನ ತವಕ ತಲ್ಲಣಗಳನ್ನು ಎದುರಿಸುವ ಉಪಾಯಗಳಿಗೆ ಮಾರ್ಗದರ್ಶನ ಕನಕದಾಸರಲ್ಲಿ ಸಿಗುತ್ತದೆ.

ಮಗುವಿನ ಮರುಳಿದು ಬಿಡದಲ್ಲ
ಈ ಜಗದೊಳು ಪಂಡಿತರಿಂದ ಬಿಡಿಸಿ
ನೀರನು ಕಂಡರೆ ಮುಳುಗುತಿದೆ
ಮೋರೆಯ ತೋರದೆ ಓಡುತಿದೆ
ಧಾರಿಣಿ ಅಲ್ಲಲ್ಲಿ ಅಳೆಯುತಿದೆ ದೊಡ್ಡ
ಭೈರವಾಕಾರದಿ ಕೂಗುತಿದೆ
ಪೊಡವಿಯ ಕೊಟ್ಟರೆ ಬಿಸುಡುತಿದೆ ತನ್ನ
ಕೊಡಲಿಯೊಳ್ ಭೂಪರ ಕಡಿಯುತಿದೆ
ಅಡವಿ ಕೋತಿಗಳ ಕೂಡುತಿದೆ
ಮಡದಿಯರನು ಹಿಡಿದೆಳೆವುತಿದೆ
ಉಟ್ಟಿದ್ದ ವಸ್ತ್ರವ ಬಿಸುಡುತಿದೆ ತನ್ನ
ದಿಟ್ಟ ತೇಜಿಯನೇರಿ ನಲಿಯುತಿದೆ
ಸೃಷ್ಟಿಯೊಳು ಭೂಸುರರು ಪೊರೆವ ಜಗ
ಜಟ್ಟಿಯಾದಿ ಕೇಳವರಾಯನಂತೆ

ಮೇಲ್ಕಂಡ ಕೀರ್ತನೆಯಲ್ಲಿ ಬರುವ ಪದಗುಚ್ಛಗಳಿಗೆ ಈ ರೀತಿ ಅರ್ಥವಿದೆ.

- ನೀರನು ಕಂಡರೆ ಮುಳುಗುತಿದೆ – ಮತ್ಸ್ಯಾವತಾರ.
- ಮೋರೆಯ ತೋರದೆ ಓಡುತಿದೆ – ವರಾಹಾವತಾರ
- ಧಾರಿಣಿ ಅಲ್ಲಲ್ಲಿ ಅಳೆಯುತಿದೆ – ವಾಮನಾವತಾರ
- ದೊಡ್ಡ ಭೈರವನಾಕಾರದಿ ಕೂಗುತಿದೆ – ನರಸಿಂಹಾವತಾರ
- ಪೊಡವಿಯ ಕೊಟ್ಟರೆ ಬಿಸುಡುತಿದೆ ತನ್ನ ಕೊಡಲಿಯೊಳ್ ಭೂಪರ ಕಡಿಯುತಿದೆ
- ಪರಶುರಾಮಾವತಾರ
- ಅಡವಿ ಕೋತಿಗಳ ಕೂಡುತಿದೆ – ರಾಮಾವತಾರ
- ಮಡದಿಯರನು ಹಿಡಿದಳುವುತಿದೆ – ಕೃಷ್ಣಾವತಾರ
- ಉಟ್ಟಿದ್ದ ವಸ್ತ್ರವ ಬಿಸುಡುತಿದೆ – ಬೌದ್ಧಾವತಾರ
- ತನ್ನದಿಟ್ಟ ತೇಜಿಯನೇರಿ ನಲಿಯುತಿದೆ – ಕಲ್ಕ್ಯಾವತಾರ

ಹೀಗೆ ಒಂದೊಂದು ಅವತಾರದ ಮೂಲಕ ಹರಿಯ ಪಾರಮ್ಯವನ್ನು ಎತ್ತಿ ಹಿಡಿಯಲಾಗಿದೆ ಎಂದು ಮೇಲ್ನೋಟಕ್ಕೆ ಭಾಸವಾಗುತ್ತದೆ. ಮೊದಲ ಎರಡು ಸಾಲುಗಳು ಮತ್ತು ಕೊನೆಯ ಎರಡು ಸಾಲುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇಲ್ಲಿರುವ ಧ್ವನಿ ಗೊತ್ತಾಗುತ್ತದೆ.

– ಮಗುವಿನ ಮರುಳಿದು ಬಿಡದಲ್ಲ, ಈ ಜಗದೊಳು ಪಂಡಿತರಿಂದ ಬಿಡಿಸಿ.

– ಸೃಷ್ಟಿಯೊಳು ಭೂಸುರರು ಪೊರೆವ ಜಗಜಟ್ಟಿಯಾದಿ ಕೇಶವನಂತೆ

ಸೃಷ್ಟಿಯಲ್ಲಿ ಭೂಸುರರು ಜನರನ್ನು ರಕ್ಷಿಸುವ ಆದಿಕೇಶವನಂತೆ ಇದ್ದಾರೆ ಎಂಬ ವ್ಯಂಗ್ಯದ ಧ್ವನಿ ಇದೆ. ಭೂಸುರರು ಉಳಿದ ಎಲ್ಲರನ್ನೂ ಎಲ್ಲವನ್ನು ಅಂದರೆ ಇಡೀ ಸಮಾಜವನ್ನು ರಕ್ಷಿಸುವ ಹೊಣೆ ಹೊತ್ತಿದ್ದಾರೆ. ಅದು ಹೇಗೆಂದರೆ ಆದಿಕೇಶವನಂತೆ ಅಂದರೆ ದೇವರ ರೀತಿಯಲ್ಲಿ. ಈ ರೀತಿ ಇಡೀ ಸಮಾಜದ ಹೊಣೆಯನ್ನು ಹೊತ್ತಿರುವ ಈ ಭೂಸುರರು ಅವತಾರಗಳ ಕಲ್ಪನೆಯನ್ನೂ ತಂದಿದ್ದಾರೆ. ಮೇಲಿನ ಸಾಲುಗಳನ್ನು ಗಮನಿಸಿದಾಗ ಇದು ವ್ಯಾಜ್ಯ ಸ್ತುತಿ ಅಲಂಕಾರವಾಗುತ್ತದೆ. ಸ್ತುತಿಯ ಮೂಲಕ ನಿಂದರೆ ಇದರ ಗುಣ. ಈಗಿನ ಕಾವ್ಯ ಮೀಮಾಂಸೆಯಲ್ಲಿ ಇದನ್ನು ಧ್ವನಿ ಎಂಬ ಹೆಸರಿನಿಂದ ಕರೆಯಲಾಗುತ್ತಿದೆ.

ವಿಷ್ಣುವಿನ ಎಲ್ಲಾ ಅವತಾರಗಳು ಕೆಡುಕಿನ ವಿರುದ್ಧವೇ ಇರುವವಾದರೂ ಆ ಕೆಡಕು ಯಾರೆಂದರೆ ವೈದಿಕ ಧರ್ಮದ ವಿರೋಧಿಗಳು ಮತ್ತು ಕೆಳಜಾತಿಯವರು. ವೈದಿಕ ಧರ್ಮವನ್ನು ಯಾರು ವಿರೋಧಿಸಿದರೋ ಅವರನ್ನು ನಾಶ ಮಾಡಲಾಯಿತು. ಕನಕದಾಸರು ಇದನ್ನೇ ಹೇಳುತ್ತಾ ಸೃಷ್ಟಿಯ, ಸಮಾಜದ ರಕ್ಷಣೆ ಮಾಡುವವರು ಭೂಸುರರು ಎಂದು ವ್ಯಂಗ್ಯವಾಗಿ ಹೇಳುತ್ತಾರೆ. ಇಲ್ಲಿ

ಬಳಕೆಯಾಗಿರುವ ಕಾಕು ಕೌಶಲ, ಹೇಳುವ ಚಾತುರ್ಯ ಭಾಷೆಯ ಧಾರ್ಮಿಕ ಸಾಂಕೇತಿಕತೆ, ಇತ್ಯಾದಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇಲ್ಲಿನ ಧ್ವನಿ ಜಾತಿ ವ್ಯವಸ್ಥೆಯ ವಿರೋಧಿ ನೆಲೆಗಳನ್ನು ಒಳಗೊಂಡಿರುವುದು ಸ್ಪಷ್ಟವಾಗುತ್ತದೆ. ಇಲ್ಲಿ ಜಾತೀಯತೆಯನ್ನು ಪೋಷಿಸುವ ಪುರಾಣ ಸ್ಮೃತಿ ಪುಣ್ಯಕತೆಗಳನ್ನು ಕನಕದಾಸರು ನಿರಾಕರಿಸುತ್ತಾರೆ. ಏಕೆಂದರೆ ಜಾತಿ ಪದ್ಧತಿಯನ್ನು ಮೊದಲಿಂದಲೂ ಸಮರ್ಥನೆ ಮಾಡಿರುವ ಪುರಾಣಗಳನ್ನು ಸೃಷ್ಟಿಸಿರುವ ಪುರೋಹಿತ ಶಾಹಿಯು (ಭೂಸುರರು) ಜಾತಿ/ವರ್ಣಗಳನ್ನು ಸೃಷ್ಟಿಸಿ ಸಮಾಜದಲ್ಲಿ ತಾರತಮ್ಯವುಂಟು ಮಾಡಿ ಮನುಷ್ಯ ಮತ್ತೊಬ್ಬ ಮನುಷ್ಯನನ್ನು ಗೌರವದಿಂದ ನಡೆಸಿಕೊಳ್ಳುವ ಪ್ರೀತಿ, ವಿಶ್ವಾಸಗಳನ್ನು ತೋರುವ ಮನೋಭಾವವನ್ನು ಬೆಳೆಸದೆ ಮನುಷ್ಯ ಸಂಬಂಧಗಳನ್ನು ಹಾಳು ಮಾಡುತ್ತಾ ಬಂದಿದ್ದಾರೆ. ಆದ್ದರಿಂದ ಈ ಭೂಸುರರನ್ನು ಕನಕದಾಸರು ತಮ್ಮ ಕೀರ್ತನೆಗಳಲ್ಲಿ ವಿರೋಧಿಸುತ್ತಾ ಬರುತ್ತಾರೆ. ಪುರೋಹಿತ ಶಾಹಿಯನ್ನು ಕನಕದಾಸರು ಭೂಸುರರೆಂದು ಹಲವಾರು ಬಾರಿ ಸಂಬೋಧಿಸಿದ್ದಾರೆ. ಈ ಭೂಸುರರು ಎಂಬ ಪದ ಹಲವಾರು ಕೀರ್ತನೆಗಳಲ್ಲಿ ಬಳಸಿದ್ದಾರೆ. ಅವರಿಗೆ ಬ್ರಾಹ್ಮಣ ಎಂದು ಕರೆಯುವ ಮನಸ್ಸಾಗುವುದೇ ಇಲ್ಲ. ಕುಲ ಕುಲವೆನ್ನುತಿಹರು ಎಂಬ ಕೀರ್ತನೆಯಲ್ಲಿ ಬರುವಂತಹ ಸಂದರ್ಭವಂತೂ ಔಚಿತ್ಯಪೂರ್ಣವಾಗಿದೆ. ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು ವಸುಧೆಯೊಳಗೆ ಭೂಸುರರುಣಲಿಲ್ಲವೇ? ಎಂಬ ವಾಕ್ಯದಲ್ಲಿ ಗೋವಿನ ಮಾಂಸವನ್ನು ತಿನ್ನುವ ಕೆಳಜಾತಿಗಳನ್ನು ಅಸ್ಪೃಶ್ಯರೆಂದು ಕರೆದು ಕೀಳಾಗಿ ನಡೆಸಿಕೊಂಡು ಅಮಾನವೀಯವಾಗಿ ವರ್ತಿಸುತ್ತಾರೆ. ಆದರೆ ಅದೇ ಮಾಂಸದಲ್ಲಿ ಉತ್ಪತ್ತಿಯಾಗುವ ಹಾಲನ್ನು ಅಮೃತವೆಂದು ಕುಡಿಯುತ್ತಾರೆ. ಹಾಲು ಸ್ವೀಕಾರಾರ್ಹವಾದದು ಆದರೆ ಅದರ ಮೂಲವಾದ ಮಾಂಸ ತ್ಯಾಜ್ಯವಾದದ್ದು ಮಾಂಸ ಮತ್ತು ಹಾಲು ಎರಡೂ ಒಂದೇ ಎಂದು ಇದರ ಧ್ವನಿ. ಈ ಧ್ವನಿಯ ಮೂಲಕ ಮಾನವರೆಲ್ಲರೂ ಒಂದೇ ಅದು ಮಾನವ ಕುಲ ಎಂಬುದು ಕನಕದಾಸರ ಅಭಿಪ್ರಾಯವಾಗಿದೆ.

ಅವತಾರಗಳ ಕಲ್ಪನೆಯನ್ನು ಭೂಸುರರು (ಪುರೋಹಿತ ಶಾಹಿಯು) ತಂದಿದ್ದು ಕೆಳವರ್ಗ/ಜಾತಿಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವ ಉದ್ದೇಶ. ಅವತಾರಗಳ ಕಲ್ಪನೆ ಒಂದು ರೀತಿಯಲ್ಲಿ ಸಮೀಕರಣಗೊಳಿಸುವ ಕ್ರಿಯೆ. ಕೆಳಜಾತಿಗಳ ದೇವತೆಗಳನ್ನು ಹಾಗೂ ಅವರ ಕುಲ ಲಾಂಛನಗಳಾಗಿದ್ದ ಪ್ರಾಣಿ ಪಕ್ಷಿಗಳನ್ನು ಪುರೋಹಿತ ವರ್ಗ ಶಿಷ್ಟ ದೇವತೆಗಳೊಂದಿಗೆ ಸಮೀಕರಣಗೊಳಿಸಿದರು. ಸಮೀಕರಿಸಲು ಸಾಧ್ಯವಾಗದೆ ಇರುವ ದೇವತೆಗಳಿಗೆ ಒಂದು ಸ್ಥಾನಕೊಟ್ಟು ಇವುಗಳಿಗೆ ಒಂದೊಂದು ಕಥೆ ಬರೆದು ಗ್ರಂಥಗಳನ್ನು ರಚಿಸಿದರು. ಹೊಸ ಅವತಾರಗಳಿಗೆ ಅನುಗುಣವಾಗಿ ಹೊಸ ಆಚರಣೆಗಳು ಪ್ರಾರಂಭವಾದವು. ಬುದ್ಧ, ಮೀನು, ಆಮೆ, ಕರಡಿ ಸೇರಿದಂತೆ ಕುಲ ಲಾಂಛನದ ದೇವತೆಗಳೆಲ್ಲರೂ ವಿಷ್ಣುವಿನ ಅವತಾರದ ಭಾಗವಾದರು. ಮೇಲೆ ಉಲ್ಲೇಖಿಸಲಾದ ಅವತಾರದ ವ್ಯಕ್ತಿಗಳು ಅವೈದಿಕತೆಯನ್ನು ಪ್ರತಿಪಾದಿಸುತ್ತಿದ್ದವರನ್ನು ರಾಕ್ಷಸರೆಂದು ಕರೆದರು, ಅವರ ಕುಲ ಲಾಂಛನಗಳಿಂದಲೇ

ಅವರನ್ನು ಕೊಲ್ಲುವ ಹುನ್ನಾರಗಳನ್ನು ಹೆಣೆದಿದ್ದರಿಂದ ಅವೈದಿಕ ಚಳುವಳಿ ಬೆಳೆಯದಂತೆ ನೋಡಿಕೊಳ್ಳಲು ಸಾಧ್ಯವಾಯಿತು. ಮೀನು, ಹಂದಿ, ಹುಲಿ, ಸಿಂಹ, ಪರಶುರಾಮ, ಆಂಜನೇಯ, ಬುದ್ಧ ಇವರೆಲ್ಲಾ ಅವೈದಿಕರೆಂಬುದು ಸರ್ವವಿಧಿತ. ರೈತರಿಗೆ ಜನಪ್ರಿಯವಾಗಿದ್ದ ಹನುಮಂತನಿಗೆ ಸ್ವತಂತ್ರವಾದ ಒಂದು ಪಂಥವೇ ಇತ್ತು. ಇವನು ಕೊನೆಗೆ ರಾಮನ ಭಂಟನಾಗಿಬಿಟ್ಟ.

ಆದಿಶೇಷನ ವಿಷಯ, ವಿಷ್ಣು ಮಲಗಲು ಆದಿಶೇಷನನ್ನು ಬಳಸಿಕೊಳ್ಳುತ್ತಾನೆ. ಇದೇ ಹಾವು ಶಿವನಿಗೆ ಕಂಠದ ಹಾರ. ಗಣೇಶನಿಗೆ ಆಯುಧ, ಆನೆ ತಲೆ ಇರುವ ಗಣೇಶ ಶಿವ ಪಾರ್ವತಿಯರ ಮಗ. ಗ್ರಾಮೀಣರು ಪೂಜಿಸುವ ಎಷ್ಟೋ ದೇವತೆಗಳು ಶಿವನ ರಕ್ಷಣೆಯಲ್ಲಿವೆ ಎಂದು ಹೇಳಲಾಗುತ್ತದೆ. ಶಿವನ ನಂದಿಯನ್ನು ಈಗಲೂ ಪೂಜಿಸಲಾಗುತ್ತಿದೆ. ಇವುಗಳಿಗೆ ಸಂಬಂಧಿಸಿದ ಕತೆಗಳಿಗೆ ಸಂಬಂಧ ಕಲ್ಪಿಸಲು ಹೊರಟರೆ ಗೊಂದಲವುಂಟಾಗುತ್ತದೆ. ಅಷ್ಟರಮಟ್ಟಿಗೆ ಸಮೀಕರಣವಾಗಿದೆ. ಈ ಸಮೀಕರಣ ಮಾಡಿದ್ದು ಪುರೋಹಿತಶಾಹಿಯು ಎಲ್ಲಾ ಕೆಳಜಾತಿಗಳನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುವ ಮಹೋದ್ದೇಶದಿಂದ. ಅದಕ್ಕಾಗಿಯೇ ಅವರು ಬುದ್ಧ ಮತ್ತು ಅಶೋಕ ನಾಗರಿಕಗೊಳಿಸುವ ಹಾಗೂ ಜಾತಿ ಜಾತಿಗಳ ನಡುವೆ ಇದ್ದ ಅಂತರವನ್ನು ಹೋಗಲಾಡಿಸುವ ಪ್ರಯತ್ನ ಮಾಡಿದರೆ ಪುರೋಹಿತಶಾಹಿ ಅದಕ್ಕೆ ತಣ್ಣೀರೆರೆಚಿತು ಜಾತಿಯ ಬಂಧವನ್ನು ಅವತಾರಗಳ ಕಲ್ಪನೆ ಮೂಲಕ ಪುರಾಣಗಳನ್ನು ಸೃಷ್ಟಿಸುವ ಮೂಲಕ ಅಸಮಾನತೆ ಮತ್ತು ಜಾತಿಯ ನೆಲೆಗಳನ್ನು ಹಾಗೆಯೇ ಉಳಿಸಿಕೊಂಡರು. ಇದರಿಂದಾಗಿ ವರ್ಗ/ವೃತ್ತಿ, ಜಾತಿ, ಪಂಗಡ ಇವುಗಳನ್ನು ಮೀರಿದ ಸಮಾನತೆ ಮತ್ತು ನ್ಯಾಯವನ್ನು ಆಧರಿಸಿದ, ಎಲ್ಲರಿಗೂ ಸಮಾನವಾಗಿ ಅನ್ವಯಿಸುವ ಸಾಮಾನ್ಯ ವಿಚಾರಗಳನ್ನು ಹುಡುಕುವುದಕ್ಕೆ ಸದಾ ಅಡ್ಡಗಾಲು ಹಾಕುತ್ತಲೇ ಬಂದರು. ಇಂತಹ ಹುನ್ನಾರಗಳನ್ನು ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಬಯಲು ಮಾಡಿದ್ದಾರೆ. ಮತ್ತೆ ನಾನು ಎರಡು ಕೀರ್ತನೆಯ ಭಾಗಗಳನ್ನು ಉದ್ಧರಿಸುವ ಮೂಲಕ ನನ್ನ ಭಾಷಣವನ್ನು ಮುಗಿಸಬಯಸುತ್ತೇನೆ.

ತೊಲಗುವರು ಕಡೆ ಕಡೆಗೆ ತಾ ಹೊಲೆ
ಹೊಲೆಯೆನುತ ಕಳುವಳಿಸಿ ಮೂತ್ರದ
ಬಿಲದೊಳಗೆ ಮುಳುಗಿದರೆ ತೊಲಗದು
ಹೊಲಗೆಲಸವೀ ದೇಹದೊಳು ನೀ
ನೆಲೆಸಲು ಹೊಲೆಯುಂಟೇ ರಕ್ಷಿಸು ನಮ್ಮನನವರತ ।

ಬೀಜ ವೃಕ್ಷದೊಳಾಯ್ತು ವೃಕ್ಷಕ್ಕೆ
ಬೀಜವಾರಿಂದಾಯ್ತು? ಲೋಕದಿ
ಬೀಜ ವೃಕ್ಷ ನ್ಯಾಯವಿದ ಭೇದಿಸುವರಾರಿನ್ನು
ಸೋಜಿಗವ ನೀ ಬಲ್ಲೆ!

ಕೆಳಜಾತಿ ಸಂಸ್ಕೃತಿಗಳು ಅನಧಿಕೃತ ಎನ್ನಬಹುದಾದ ಭಾಷೆ ಸಾಹಿತ್ಯ ರೂಪಗಳನ್ನು ಬಳಸಿಕೊಳ್ಳುತ್ತವೆ. ಈ ರೂಪಗಳು ಸಾಮಾನ್ಯವಾಗಿ ಕೇಳುಗರನ್ನು ಪ್ರೇಕ್ಷಕರನ್ನು ಆಧರಿಸಿಕೊಂಡಿರುತ್ತವೆ. ಕನಕದಾಸರು ಶ್ರೇಷ್ಠ ಕುಲದವರಲ್ಲ. ಆದ್ದರಿಂದ ಕೇಳು ಇಲ್ಲವೇ ಪ್ರೇಕ್ಷಕ ಸಮುದಾಯದವರನ್ನು ಉದ್ದೇಶಿಸುವಾಗ ಕೆಲವು ಕೀರ್ತನೆಗಳಲ್ಲಿ ಜಾತಿ ಮತಕುಲವನ್ನು ವಿರೋಧಿಸುವಾಗ ಭಾಷೆಯು ಸ್ವಲ್ಪ ಸರಳವಾಗುತ್ತದೆ. ಸರಳತೆ ಮತ್ತು ಪಾರದರ್ಶಕತೆ ಇದ್ದು ಅಲಂಕಾರಿಕವಾಗಿದ್ದರೂ ಜನಸಾಮಾನ್ಯರಿಗೆ ತಟ್ಟುವಂತಿರುತ್ತದೆ. ಜಾತಿ, ಕುಲ, ಮತಗಳ ಬಗ್ಗೆ ಪಂಡಿತರಿಗೆ ತಲುಪಿಸಬೇಕೆನಿಸಿದಾಗ ಆಧ್ಯಾತ್ಮಕವಾದ ಶಿಷ್ಠ ಪರಿಭಾಷೆಯನ್ನೇ ಉಪಯೋಗಿಸುತ್ತಾರೆ. ಇದು ಬಹಳ ಮುಖ್ಯವಾದದ್ದು. ಕೆಳಜಾತಿ, ಅಸ್ಪೃಶ್ಯ ಜನರಿಗೆ ಪಾರದರ್ಶಕ ಸರಳವಾದ ಭಾಷೆಯನ್ನು ಬಳಸಿ ಅವರ ಸ್ಥಿತಿಗತಿಗಳ ಬಗ್ಗೆ ಜಾತಿ ವ್ಯವಸ್ಥೆಯ ಬಗ್ಗೆ ವಿರೋಧಿಸಬೇಕಾದ ಅವಶ್ಯಕತೆ ಇತ್ಯಾದಿಗಳನ್ನು ಹೇಳಿದರೆ ಪುರೋಹಿತ ಶಾಹಿಗೆ ಧಾರ್ಮಿಕ ಪರಿಭಾಷೆಯನ್ನು ಸಾಂಕೇತಿಕ ಭಾಷೆಯನ್ನು ಬಳಸಿ, ಕೆಳಜಾತಿ/ಅಸ್ಪೃಶ್ಯ ಜಾತಿಗಳನ್ನು ಹೇಗೆ ನಡೆಸಿಕೊಳ್ಳಲಾಗುತ್ತಿದೆ ಎಂಬುದನ್ನು ವಿಷದಪಡಿಸುತ್ತಾರೆ. ಮಧ್ಯಕಾಲೀನ ಕನ್ನಡ ಸಾಹಿತ್ಯದ ಅಭಿವ್ಯಕ್ತಿ ವಿಧಾನ ದೇಸಿ ಇಲ್ಲಿ ದೇಸಿಯೇ ಮುಖ್ಯ. ಆದರೂ ಕನಕ ಮಾರ್ಗ ಅಂದರೆ ಶಿಷ್ಟ ಭಾಷೆ, ಅಲಂಕಾರಿಕ ಭಾಷೆಯನ್ನೇ ಬಳಸುತ್ತಾರೆ. ಈ ಎರಡೂ ಭಾಷೆಯನ್ನು ಬಳಸುವ ಜ್ಞಾನ ಮತ್ತು ಸೃಜನಶೀಲ ಕ್ರಿಯಾಶಕ್ತಿ ಕನಕದಾಸರಿಗಿತ್ತು.

ಕನಕದಾಸರ ಮನಸ್ಸು ಸಂದೇಹ ಪೂರ್ಣ ಮನಸ್ಸು, ಅನ್ವೇಷಕ ಮನಸ್ಸು ಮತ್ತು ಅನೌಪಚಾರಿಕ ಮನಸ್ಸು, ಸಮಗ್ರ ವಿಶ್ವದ ಅಖಂಡ ಸತ್ಯವಾಗಿದೆ ಮತ್ತು ಏಕಕಾಲದಲ್ಲಿ ಚಲನಶೀಲವೂ, ಕ್ರಿಯಾಶೀಲವೂ, ಜೀವಂತವೂ, ಜೈವಿಕವೂ, ಆಧ್ಯಾತ್ಮಿಕವೂ ಆಗಿದೆ ಎಂದು ಭಾವಿಸಿದ್ದರು. ಆದ್ದರಿಂದಲೇ ಅವರು ಅನುಭಾವಿಯಂತೆ ಸತತವಾಗಿ ಪ್ರಶ್ನಿಸುತ್ತಾ ಅನುಮಾನಿಸುತ್ತಾ ಸಂವಾದದಲ್ಲೇ ತಮ್ಮ ಪ್ರಶ್ನೆಗಳನ್ನು ಎತ್ತುತ್ತಾರೆ. ತಮ್ಮ ಎದುರಾಳಿಗಳನ್ನು ವಿರೋಧಿಸಿ ತಮ್ಮ ವಿಚಾರಗಳನ್ನು ಮಂಡಿಸುತ್ತಾರೆ. ಆದ್ದರಿಂದಲೇ ನಾನು ಅನುಭಾವಿ ಪರಂಪರೆಯಲ್ಲಿ ಅರಳಿದ ಅತ್ಯಂತ ಸುಂದರ ಹೂ ಎಂದು ಹೇಳಿದ್ದು. ಶೂದ್ರರ, ದಲಿತರ ಚೇತನಗಳನ್ನು ಹುರುಪುಗೊಳಿಸಿ ಅವರಲ್ಲಿ ಉತ್ಸಾಹವನ್ನು ತುಂಬುವ ಆ ಮೂಲಕ ಅವರಲ್ಲಿ ಕ್ರಿಯಾಶೀಲ ಮನೋಭಾವವನ್ನು ಅವರ ಬದುಕು ಸುಂದರವಾಗಬೇಕೆಂದು ಬಯಸಿದ ಕೀರ್ತನೆಗಳು ಸಾಕಷ್ಟಿವೆ. ಅಷ್ಟೇ ಅಲ್ಲದೆ ವೈದಿಕ ಪರಂಪರೆಯ ಒಳ್ಳೆಯ ಅಂಶಗಳೊಂದಿಗೆ ಶೂದ್ರ, ಹಿಂದುಳಿದ ದಲಿತ ಜಾತಿಗಳ ದಿವ್ಯಶಕ್ತಿಯನ್ನು ಬೆಸೆಯುವ ಕೆಲಸವಾದಾಗ ಮಾತ್ರ ಸಮಾನತಾ ಸಮಾಜ ಬೆಳೆಯಲು ಸಾಧ್ಯವೆಂಬ ಆಶಯ ಕನಕದಾಸರ ಕೀರ್ತನೆಗಳಲ್ಲಿದೆ.

*** ** ***

ಪ್ರತಿಕ್ರಿಯೆ :

1. ಒಳಬಂಡಾಯಗಾರನ ಜಾತಿಭಂಜನ ಕ್ರಿಯೆ; ಪ್ರತಿಕ್ರಿಯೆ

–ಅರುಣ್ ಜೋಳದಕೂಡ್ಲಿಗಿ

'ಕನಕದಾಸರ ಕೀರ್ತನೆಗಳಲ್ಲಿ ಜಾತಿ ತಾರತಮ್ಯದ ಆಯಾಮಗಳು' ಹೆಚ್.ದಂಡಪ್ಪ ಅವರ ಲೇಖನವನ್ನು ಗಮನದಲ್ಲಿಟ್ಟುಕೊಂಡು ಕೆಲವು ಮುಖ್ಯ ಟಿಪ್ಪಣಿಗಳನ್ನು ಇಲ್ಲಿ ಮಂಡಿಸುತ್ತೇನೆ. ಇಲ್ಲಿ ಲೇಖನಕ್ಕೆ ಪ್ರತಿಕ್ರಿಯೆಯಾಗಿ ಒಂದೆರಡು ಅಂಶಗಳಿರುವಂತೆ ಕನಕದಾಸರನ್ನು ಕೇಂದ್ರೀಕರಿಸಿ ಜಾತಿ ಪ್ರಶ್ನೆಯನ್ನು ಕುರಿತು ನೋಡಬಹುದಾದ ಬಹುಮುಖಿ ದೃಷ್ಟಿಕೋನಗಳ ಹೊಸ ಸಾಧ್ಯತೆಗಳತ್ತ ಗಮನಸೆಳೆಯುವುದು ಇಲ್ಲಿನ ಮುಖ್ಯ ಕಾಳಜಿಯಾಗಿದೆ.

1. 11 ಪುಟಗಳ ದೀರ್ಘ ಲೇಖನದಲ್ಲಿ ದಂಡಪ್ಪ ಅವರು ಕನಕದಾಸರ ಕೀರ್ತನೆಗಳಲ್ಲಿ ಜಾತಿ ತಾರತಮ್ಯವನ್ನು ಕಾಣಿಸುವ ಬಗೆಗೆ, ಕನಕರು ಜಾತಿಯನ್ನು ಮೀರುವ ಬಗೆಗೆ ಅವರ ಕೀರ್ತನೆಗಳನ್ನು ಉಲ್ಲೇಖಿಸಿ ವಿಶ್ಲೇಷಿಸಲು ಪ್ರಯತ್ನಿಸಿದ್ದಾರೆ. ಇಲ್ಲೆಲ್ಲಾ ಕನಕದಾಸರನ್ನು ಗಮನದಲ್ಲಿಟ್ಟುಕೊಂಡಿದ್ದಾರೆ. ಮುಖ್ಯವಾಗಿ ಕನಕರನ್ನು ದಾಸಸಾಹಿತ್ಯದಿಂದ ಪ್ರತ್ಯೇಕಿಸಲು ಇರುವ ಎರಡು ಪ್ರಧಾನ ಸಂಗತಿಗಳಲ್ಲಿ ಕೆಳಜಾತಿಗೆ ಸೇರಿದವರು ಎನ್ನುವುದು ಒಂದಾದರೆ, ಎರಡನೆಯದು ಕನಕರು ಕೇವಲ ದಾಸರಾಗದೆ, ಕೀರ್ತನಕಾರರಾಗದೆ ಬಹಳ ಮುಖ್ಯವಾಗಿ ಕವಿಯಾಗಿರುವುದು. ಕನಕ ಕವಿಯಾದ ಕಾರಣ ದಾಸತ್ವವನ್ನೂ, ಕೀರ್ತನಾಕಾರತ್ವವನ್ನೂ ಮೀರಲು ಸಾಧ್ಯವಾಗಿದೆ. ಕವಿಯಾಗಿ ರೂಪುಗೊಂಡ ಕಾರಣವೆ ಅವರಿಗೆ ಸಿಕ್ಕ ಸುತ್ತಣ ಪರಿಸರವನ್ನು ನೋಡಬಹುದಾದ ಸೂಕ್ಷ್ಮತೆಯ ದೃಷ್ಟಿಕೋನ ಮತ್ತು ಸಮಾಜಿಕ ನ್ಯಾಯದ ನೆಲೆಯಲ್ಲಿ ರೂಪುಗೊಂಡ ವೈಚಾರಿಕತೆ ಮತ್ಯಾವ ದಾಸರಿಗೂ ಸಿಗಲಿಲ್ಲ. ಹೀಗೆ ರೂಪುಗೊಂಡ 'ಕವಿ' ದೃಷ್ಠಿಕೋನವೆ ಕೀರ್ತನೆಯಲ್ಲಿ ದಾಟಿತು. ಇದನ್ನು ನೋಡಿದರೆ ಕನಕರ ಕೀರ್ತನೆಗಳನ್ನು ಮಾತ್ರ ಕತ್ತರಿಸಿ ಜಾತಿ ದೃಷ್ಟಿಕೋನವನ್ನು ಪ್ರತ್ಯೇಕವೆಂಬಂತೆ ಚಿಂತಿಸುವುದೇ ಮೂಲತಃ ತೊಡಕಿನದು. ಇಂತಹ ತೊಡಕನ್ನು ದಂಡಪ್ಪ ಅವರು ಇನ್ನಷ್ಟು ಸೂಕ್ಷ್ಮವಾಗಿ ಪರಿಗಣಿಸಬೇಕಿತ್ತು. ಇದು ಈ ಲೇಖನದ ತಾತ್ವಿಕ ಮಿತಿಯೆಂದು ನನಗನ್ನಿಸುತ್ತಿದೆ.

2. ಕನಕಕವಿ ತನ್ನ ಕಾಲದ ಜಾತಿ ತಾರತಮ್ಯದಿಂದ ಬೇಸತ್ತು ಅದರ ಟೊಳ್ಳುತನವನ್ನು ಬಯಲು ಮಾಡುತ್ತಲೇ ಜಾತಿಯ ಮೀರುವಿಕೆಯ ಕಡೆ ಚಲಿಸುತ್ತಾರೆ. ಇದನ್ನು ನಾವು ಅರ್ಥಮಾಡಿಕೊಳ್ಳುವ ಕ್ರಮ ಯಾವುದು? ಕನಕನನ್ನು ಕುರುಬ ಸಮುದಾಯಕ್ಕೆ ಕಟ್ಟಿಹಾಕಿ ಎದುರು ವೈದಿಕಶಾಹಿಯನ್ನು ಇಟ್ಟುಕೊಂಡು ವಿಶ್ಲೇಷಣೆ ಮಾಡುವುದೇ? ಅಥವಾ ಈ ವಿರುದ್ಧ ಸಂಗತಿಗಳನ್ನು ಮೀರಿ

ಜಾತಿವಿನಾಶದ ನೆಲೆಯಲ್ಲಿ ಅರ್ಥಮಾಡಿಕೊಳ್ಳುವುದೇ ಎನ್ನುವ ಪ್ರಶ್ನೆಯನ್ನು ಹಾಕಿಕೊಳ್ಳಬೇಕಿದೆ. ಇದನ್ನು ಖಚಿತಪಡಿಸಿಕೊಂಡಾಗ ಕನಕರನ್ನು ವರ್ತಮಾನದಲ್ಲಿ ಎದುರುಗೊಳ್ಳಬೇಕಾದ ನೆಲೆಗೆ ಸ್ಪಷ್ಟತೆ ಸಿಗುತ್ತದೆ. ಇಂತಹ ಬಹಳ ಮುಖ್ಯವಾದ ತಾತ್ವಿಕ ಪ್ರಶ್ನೆಯನ್ನು ದಂಡಪ್ಪ ಅವರು ಕೇಳಿಕೊಂಡಿದ್ದರೆ ಇಲ್ಲಿನ ವಿಶ್ಲೇಷಣೆಯ ಕ್ರಮವೇ ಬದಲಾಗುತ್ತಿತ್ತು ಎಂದು ನನ್ನ ಅಭಿಪ್ರಾಯ.

3. ವರ್ತಮಾನದಲ್ಲಿ ಕನಕರ ಗುರುತು ಯಾವ ರೂಪದಲ್ಲಿ ಬಲಗೊಂಡಿದೆ ಎಂದು ನೋಡೋಣ. ಕರ್ನಾಟಕದ ಬಹುಪಾಲು ಹಳ್ಳಿಗಳಲ್ಲಿ ಕನಕದಾಸರ ಹೆಸರಿನ ವೃತ್ತ, ಕಾಲನಿ, ನಗರ, ಸಂಘ ಸಂಸ್ಥೆಗಳಿವೆ. ಕಾರು ಬೈಕು ಮೊದಲಾದ ವಾಹನಗಳ ಮೇಲೆ, ಮನೆ ಅಂಗಡಿ ಮುಂತಾದ ಕಟ್ಟಡಗಳ ಮೇಲೆ ಕನಕದಾಸರ ಹೆಸರು ಅಚ್ಚಾಗಿದೆ. ವರ್ಷಕ್ಕೊಮ್ಮೆ ಕನಕದಾಸರನ್ನು ನೆನಪಿಸಿಕೊಳ್ಳುವ ಜಯಂತಿ ಆಚರಣೆ ನಗರಗಳಲ್ಲಿ ಮತ್ತು ಸಾವಿರಾರು ಹಳ್ಳಿಗಳಲ್ಲಿ ಆಯೋಜನೆಗೊಳ್ಳುತ್ತದೆ. ಇನ್ನು ಕುರುಬ ಸಮುದಾಯದ ಮಠಗಳಲ್ಲಿ ಕನಕನ ಆರಾಧನೆಗಳು ನಡೆಯುತ್ತವೆ. ಇವುಗಳ ಹಿನ್ನೆಲೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಇವೆಲ್ಲವೂ ನಿಸ್ಸಂಶಯವಾಗಿ ಕುರುಬ ಸಮುದಾಯವನ್ನು ಆಧರಿಸಿದ ಅಥವಾ ಒಳಗೊಂಡ ಪ್ರಕ್ರಿಯೆಗಳು. ಇದನ್ನು ಹೊರತುಪಡಿಸಿದರೆ ಬ್ರಾಹ್ಮಣ ಯುವಕರು ಅಥವಾ ದಲಿತ ಮುಸ್ಲಿಂ ಯುವಕರು ಕನಕಸಂಘವನ್ನು ಕಟ್ಟಿಕೊಂಡದ್ದು, ಮೇಲಿನ ಪ್ರಕ್ರಿಯೆಗಳು ಈ ಸಮುದಾಯಗಳಲ್ಲಿ ನಡೆದದ್ದು ಕಾಣುವುದಿಲ್ಲ. ಉದಾಹರಣೆ ಕೊಡಲು ಒಂದೆರಡು ಅಪರೂಪದ ಸಂಗತಿಗಳು ಸಿಗಬಹುದಷ್ಟೆ. ಈ ಸಂಗತಿಯನ್ನು ವಾಲ್ಮೀಕಿ, ಬಸವಣ್ಣ, ಭಗೀರತ ಮುಂತಾದ ಜಾತಿಜನ್ಯ ಗುರುತುಗಳ ಅನುಸಂದಾನದ ಪ್ರಕ್ರಿಯೆಗೂ ಅನ್ವಯವಾಗುತ್ತದೆ. ಕನಕನ ವರ್ತಮಾನ ಹೀಗಿರುವಾಗ, ಸ್ವತಃ ಕನಕರು ಜಾತಿಯ ಬಗ್ಗೆ ತೋರುವ ಯಾವ ಸಂಗತಿಗಳನ್ನು ಮುನ್ನೆಲೆಗೆ ತರಬೇಕು ಎಂಬುದನ್ನು ಯೋಚಿಸೋಣ.

ಕನಕನನ್ನು ಆಧರಿಸಿದ ಸಾರ್ವಜನಿಕ ಸಂಸ್ಥೆಗಳೂ ಇವೆ. ಅವು ಮಂಗಳೂರು ವಿವಿಯ ಕನಕ ಅಧ್ಯಯನ ಪೀಠ, ಕನ್ನಡ ವಿವಿಯ ಹಾಲುಮತ ಅಧ್ಯಯನ ಪೀಠ, ಸಂತಕವಿ ಕನಕ ರಾಷ್ಟ್ರೀಯ ಸಂಶೋಧನ ಸಂಸ್ಥೆ ಬೆಂಗಳೂರು, ಕಾಗಿನೆಲೆಯ ಕನಕ ಅಭಿವೃದ್ಧಿ ಪ್ರಾಧಿಕಾರ ಇತ್ಯಾದಿ. ಇವುಗಳು ಕನಕನನ್ನು ಜಾತಿಜನ್ಯವಾಗಿ ಕಟ್ಟದೆ ಜಾತಿ ಮೀರಿದ ನೆಲೆಯಲ್ಲಿ ಕನಕನನ್ನು ಜನಮಾನಸದಲ್ಲಿ ನೆಲೆಗೊಳಿಸಲಿಕ್ಕೆ ಪೂರಕವಾದ ಕೆಲಸಗಳನ್ನು ಮಾಡಬೇಕಿದೆ. ಈ ಸಂದರ್ಭದಲ್ಲಿ ಕನಕನ ಜಾತಿ ಮೀರುವ ಚರ್ಚೆಗಳನ್ನು ಮುನ್ನೆಲೆಗೆ ತರಬೇಕಿದೆ. ಇದು ಈಗ ಬಹಳ ಮುಖ್ಯವಾಗಿ ಆಗಬೇಕಾದ ಕೆಲಸವಾಗಿದೆ.

4. ದಾಸಸಾಹಿತ್ಯದ ಒಟ್ಟು ಚಿಂತನೆ ಕನಕದಾಸರನ್ನು ಮತ್ತು ಅವರ 'ಜಾತಿ' ಪ್ರಶ್ನೆಯನ್ನು ಹೇಗೆ ನಿಭಾಯಿಸಿದೆ ಎಂದು ನೋಡಬೇಕಾಗಿದೆ. ಅಂದರೆ ಕನಕರ

ಮೂಲಕ ಇಡೀ ದಾಸಸಾಹಿತ್ಯವನ್ನು ನೋಡಿದರೆ ಅದು ಇನ್ನಷ್ಟು ನಿಚ್ಚಳವಾಗಿ ಕಾಣುತ್ತದೆ. ದಾಸಸಾಹಿತ್ಯದ ಚಿಂತನೆಗಳನ್ನು ಪ್ರಧಾನವಾಗಿ ಗಮನಿಸಿದರೆ ಕನಕದಾಸರು ಯಾವ ಯಾವ ಸಂಗತಿಗಳಿಗೆ, ಕಾರಣಗಳಿಗೆ, ಸಮರ್ಥನೆಗಳಿಗೆ ಉಲ್ಲೇಖವಾಗುತ್ತಾರೆ ಎಂದು ಪಟ್ಟಿಮಾಡಿದರೆ ಕುತೂಹಲಕಾರಿ ಸಂಗತಿಗಳು ಬಯಲಾಗುತ್ತವೆ. ಆಗ ಮೇಲುಜಾತಿಯ ಮಠೀಯ ವಿದ್ವತ್‌ಲೋಕ ಕನಕನನ್ನು ವಿಶ್ಲೇಷಿಸುವ ಕ್ರಮ ಅರಿವಾಗುತ್ತದೆ. ಮುಖ್ಯವಾಗಿ ದಾಸಸಾಹಿತ್ಯಕ್ಕೆ ಎದುರುಗೊಳ್ಳಬಹುದಾದ ಸಾಮಾಜಿಕ ನ್ಯಾಯದ ಪ್ರಶ್ನೆ, ಪುರೋಹಿತಶಾಹಿ ಪ್ರಶ್ನೆ, ಹರಿಸರ್ವೋತ್ತಮದ ಪ್ರಶ್ನೆ ಮತ್ತು ಬ್ರಾಹ್ಮಣ ಪಾರಮ್ಯದ ಕಟುವಾದ ಪ್ರಶ್ನೆಗಳು ಎದುರಾದಗಲೆಲ್ಲಾ ಈ ಪ್ರಶ್ನೆಗಳಿಂದ ಪಾರಾಗಲು 'ಕನಕ' ಒಂದು ಅಸ್ತ್ರದಂತೆ ಬಳಕೆಯಾಗುವುದನ್ನು ಗಮನಿಸಬಹುದು. ಇಲ್ಲೆಲ್ಲಾ ಕನಕರು ದಾಸಸಾಹಿತ್ಯಕ್ಕೆ ಅಂಟಬಹುದಾದ ಶಾಶ್ವತ ಊನತೆಯನ್ನು ಕೊಂಚ ಕಡಿಮೆ ಮಾಡುತ್ತಾರೆಂದು ಅನ್ನಿಸುತ್ತದೆ.

5. ಕನಕರು ತನ್ನ ಕೀರ್ತನೆಗಳಲ್ಲಿ ತನ್ನ ಜಾತಿಯನ್ನು ಸ್ವಾಭಿಮಾನದ ಸಂಕೇತವಾಗಿಯೂ ಯಾವುದೇ ಕೀಳಿರಿಮೆ ಇಲ್ಲದೆ 'ನಾವು ಕುರುಬರು ನಮ್ಮ ದೇವರು ಬೀರಯ್ಯ, ಕಾವೆ ನಮ್ಮಜ್ಜ ನರಕುರಿಯ ಹಿಂಡುಗಳ' ಎಂದಿದ್ದಾರೆ. ಇದು ವೈದಿಕರು ಗೋವು ಮತ್ತು ಗೋಪಾಲಕನ ಮೂಲಕ ಭಕ್ತ ಮತ್ತು ಭಗವಂತನ ರೂಪಕ ಕಟ್ಟಿಕೊಳ್ಳುವುದಕ್ಕೆ ಪರ್ಯಾಯವಾಗಿ ಕನಕರು 'ಕುರಿ' ಮತ್ತು 'ಕುರುಬ'ನ ಮೂಲಕ ಭಕ್ತ ಭಗವಂತನನ್ನು ರೂಪಕವಾಗಿ ಕಟ್ಟುವ ಕ್ರಮ ಇಡೀ ದಾಸಪರಂಪರೆಯಲ್ಲಿಯೇ ವಿಶಿಷ್ಟವಾದುದು. ಆದರೆ ಈ ಕೀರ್ತನೆ ಉಂಟುಮಾಡಿದ ಪರಿಣಾಮ ಮಾತ್ರ ಜಾತಿ ನೆಲೆಯಲ್ಲಿ ಎನ್ನುವುದನ್ನು ಗಮನಿಸಬೇಕು. ಇದಕ್ಕೆ ಪೂರಕವಾಗಿ ಜನಪದ ಹಾಡುಪರಂಪರೆಯಲ್ಲಿ ದೊಡ್ಡಮಟ್ಟದ ರಚನೆಗಳಾಗಿವೆ. ಇದನ್ನು ಡೊಳ್ಳಿನ ಹಾಡುಗಳಲ್ಲಿ ಕಾಣಬಹುದು.

ನಿಂಗಣ್ಣ ಸಣ್ಣಕ್ಕಿ ಅವರು ಸಂಪಾದಿಸಿದ ಡೊಳ್ಳಿನ ಪದಗಳು ಕೃತಿಯ ಒಂದು ಡೊಳ್ಳಿನ ಹಾಡಿನ ಪೂರ್ಣ ಪಾಠವೊಂದು ಹೀಗಿದೆ:

**ವಚನ :**

ನಮ್ಮ ಕೈಗಳು ಕಾಮಧೇನು ! ಗೈಮೆ ಕಲ್ಪವೃಕ್ಷ ! ಮಂಗಳ ಗ್ರಹ ಮುಳುಗುವವರೆಗೆ ನಾವು ಕುರಿ ಮೇಯಿಸುವುದರಿಂದ ಅದಕ್ಕೆ ಕುರುಬರ ಚಿಕ್ಕೆ ಎಂದು ಹೆಸರು ಬಂದಿರುವದು. ಕಾರಣ ನಮ್ಮ ಚರಿತ್ರೆ ಹಾಗೆ ಮಹತ್ವದ್ದಾಗಿರುವದು.

**ಪದ :**

ಗೋಕುಲದೊಳಗಾಕಳ ಮೇಯಿಸಿದಾ
ಶ್ರೀಕೃಷ್ಣನು ಕುರುಬನು ಕೇಳು
ಶ್ರೀಕೃಷ್ಣನು ಕುರುಬರು ಕೇಳು
ಸುಳ್ಳಾದರೆ ಪಂಡಿತರನು ಕೇಳು ॥ 28 ॥

ಸಂಸ್ಕೃತ ಸಾಹಿತ್ಯದಾಕಾಶ ದಿನ ಮಣಿ
ಕಾಲಿದಾಸ ಕುರುಬನು ಕೇಳು
ಕಾಲಿದಾಸ ಕುರುಬನು ಕೇಳು
ನೀನೊಪ್ಪದಿದ್ದರೀಗಲೆ ಹೇಳು ॥ 29 ॥
ಕನ್ನಡ ನಾಡಿನ ಚನ್ನಿಗ ಕವಿವರ
ಕನಕದಾಸ ಕುರುಬನು ಕೇಳು
ಕನಕದಾಸ ಕುರುಬನು ಕೇಳು
ಕೇಳಿದಕಾಗಿ ನಮ್ಮೀ ಕುಲ ಮೇಲು ॥ 30 ॥

ವಿಜಯನಗರ ಸಾಮ್ರಾಜ್ಯದ ಕಟ್ಟಿದ
ಹುಕ್ಕ ಬಕ್ಕರು ಕುರುಬರು ಕೇಳು
ಹುಕ್ಕ ಬುಕ್ಕರು ಕುರುಬರು ಕೇಳು
ಸಂಗೊಳ್ಳಿರಾಯಣ್ಣನು ಕಟ್ಟಾಳು ॥ 31 ॥

ಮರಾಠಾ ಸಾಮ್ರಾಜ್ಯ ಕಟ್ಟಿದ ಶಿವಾಜಿ
ಮಹಾರಾಜ ಕುರುಬನು ಕೇಳು
ಮಹಾರಾಜ ಕುರುಬನು ಕೇಳು
ಸುಳ್ಳಾದರೆ ತಿಳಿ ಇತಿಹಾಸದೊಳು ॥ 32 ॥

ಅಲ್ಪ ವೆಚ್ಚದಲಿ ರೈತಗೆ ಗೊಬ್ಬರ
ಕೊಡುವವರೇ ಕುರುಬರು ಕೇಳು
ಕೊಡುವವರೇ ಕುರುಬರು ಕೇಳು
ಹೀಗೀ ರೈತ ಕುರುಬರೊಳ್ಳೇ ಮೇಳು ॥ 33 ॥

ಬಹಳ ಹೇಳಲಾರೆ ಮೈಲಾರ ಲಿಂಗನು
ಕುರುಬರ ಮನೆ ಕಾಯುವ ಆಳು
ಕುರುಬರ ಮನೆ ಕಾಯುವ ಆಳು
ಈ ಜಗದಿ ಭಕ್ತಿ ಗಾವುದ ಮೇಲು ॥ 34 ॥

ಹೀಗೆ ಕನಕರನ್ನು ಕುರುಬ ಸಮುದಾಯಕ್ಕೆ ಸೀಮಿತಗೊಳಿಸುವ ಮೌಖಿಕ ರಚನೆಗಳು ಯಥೇಚ್ಚವಾಗಿ ರಚನೆಯಾಗಿವೆ. ಈ ಹಿನ್ನೆಲೆಯಲ್ಲಿ ಕನಕರ ಜಾತಿ ಪ್ರಶ್ನೆಯು ಮೌಖಿಕ ಪರಂಪರೆಯಲ್ಲಿ ಹೇಗೆ ರೂಪಾಂತರಗೊಂಡಿದೆ ಎನ್ನುವ ಚರ್ಚೆ ಮಾಡಲು ಸಾಧ್ಯವಿದೆ.

6. ಕನಕರ ಜಾತಿ ತರತಮದ ಬಗ್ಗೆ ಎತ್ತುವ ಪ್ರಶ್ನೆಗಳನ್ನು ಒಟ್ಟಾರೆ ಕೆಳಜಾತಿ ದಾಸರ ನೆಲೆಯಲ್ಲಿಯೂ ಇನ್ನಷ್ಟು ಭಿನ್ನವಾಗಿ ವಿಶ್ಲೇಷಣೆ ಮಾಡಲು ಅವಕಾಶವಿದೆ. ಒರಿಸ್ಸಾದ ಚೈತನ್ಯ ಪಂಥದ ಪ್ರಭಾವದಲ್ಲಿ ಏಕವ್ಯಕ್ತಿ ಮಾದರಿಯ ದ್ವೈತಭಾಗವತ ಭಕ್ತಿಯನ್ನು ಕೆಳಜಾತಿಗಳ ಜನರಲ್ಲಿ ಸಾರಬೇಕೆನ್ನುವ ಹಿನ್ನೆಲೆಯಲ್ಲಿ ಕೆಳಜಾತಿಗಳನ್ನು 'ದಾಸಯ್ಯ' 'ದಾಸಪ್ಪ'ಗಳಾಗಿ ದೀಕ್ಷೆ ನೀಡುವುದು ನಡೆಯಿತು. ಇಂಥದ್ದೊಂದು ದಾಸಪರಂಪರೆ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ದಾಸಪ್ಪ ಜೋಗಪ್ಪ ಪರಂಪರೆಯಾಗಿ ಮುಂದುವರಿದಿದೆ. ಇಂತವರ ರಚನೆಯ ಕೀರ್ತನೆಗಳ ಬಗ್ಗೆ ಇನ್ನಷ್ಟು ಸೂಕ್ಷ್ಮವಾದ ಅಧ್ಯಯನಗಳು ನಡೆಯಬೇಕಾಗಿದೆ.

ಮುಖ್ಯವಾಗಿ ಪಿಂಜಾರ ಬಡೇಸಾಬರು (ರಾಮದಾಸರು). ಗಾಣಿಗ ಸಮುದಾಯದ ಮಳಿಗೆ ರಂಗಸ್ವಾಮಿದಾಸರು. ರಾಯಚೂರು ಪ್ರಾಂತ್ಯದ ಚಂದನಕೆರೆ ದೊರೆಗಳು ಬೇಡರಾಗಿದ್ದರೂ ಭಾಗವತರಾದರು, ಗೋಪಾಲದಾಸರು ಪ್ರಭಾವ ಬೀರಿದರು. ಕೋಸಗಿಯ ಜಗನ್ನಾಥದಾಸರು ಹಲವಾರು ನೇಕಾರರಿಗೆ ದೀಕ್ಷೆ ನೀಡಿದರು. ಅಸ್ಥಿಹಾಳ ಗೋವಿಂದ ದಾಸರು ನಾಯಿಂದ ಸಮುದಾಯದವರಿಗೆ ದೀಕ್ಷೆ ನೀಡಿದರು. ಮಾನವಿಯ ಶ್ಯಾಮಸುಂದರ ವಿಠಲದಾಸರು ಹರಿಜನ ಮೂರ್ತೆಪ್ಪನನ್ನು ತಮ್ಮ ಆಪ್ತ ವರ್ಗದಲ್ಲಿರಿಸಿಕೊಂಡು ಹರಿದಾಸನನ್ನಾಗಿ ಮಾಡಿದರು. ಚಂಡರಕಿ ರಾಘವೇಂದ್ರದಾಸರು ಹೂಗಾರ (ಜೀರರು) ಸಮುದಾಯದವರನ್ನು ದಾಸಕೂಟದಲ್ಲಿ ಸೇರಿಸಿದರು. ಜೀರರ ಭೀಮದಾಸ ಕೆಲವು ಕೀರ್ತನೆಗಳನ್ನೂ ಬರೆದಿದ್ದಾನೆ. ಬೆಂಗಳೂರಿನ ದಾಸ ಲಕ್ಷ್ಮಿನಾರಾಯಣರಾಯರು ನಡೆಸುತ್ತಿದ್ದ ಭಜನಾ ಗೋಷ್ಠಿಯಲ್ಲಿ ಎಲ್ಲಾ ಜಾತಿಯವರಿಗೆ ಪ್ರವೇಶವಿತ್ತು. ಇಂತಹ ಕೆಳಜಾತಿಗಳ ಪ್ರವೇಶಕ್ಕೆ ಕನಕದಾಸರ ಪ್ರಭಾವವನ್ನು ವಿಶ್ಲೇಷಣೆಗೆ ಒಳಪಡಿಸಬೇಕಾಗಿದೆ. ಅಂತೆಯೇ ಕೆಲವು ಕೆಳಜಾತಿಯ ದಾಸರ ಕೀರ್ತನೆಗಳಲ್ಲಿ ಬರುವ ಜಾತಿ ಪ್ರಶ್ನೆಯನ್ನು ಗುರುತಿಸುತ್ತಾ ಕನಕದಾಸರ ಎತ್ತುವ ಜಾತಿ ಪ್ರಶ್ನೆಯ ಜತೆಗಿಟ್ಟು ಚರ್ಚಿಸಲು ಅವಕಾಶವಿದೆ.

7. ಕನ್ನಡ ಮತ್ತು ಕರ್ನಾಟಕದ ಸಂದರ್ಭದಲ್ಲಿ ಜಾತಿ ಚರ್ಚೆ ಬಂದಾಗ 'ಕುಲಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ? ಎನ್ನುವ ಪ್ರಶ್ನೆಯೊಂದು ಮತ್ತೆ ಮತ್ತೆ ಎದುರಾಗುತ್ತದೆ. ಅಷ್ಟರಮಟ್ಟಿಗೆ ಮನುಕುಲ ಉತ್ತರಿಸಲಾಗದ ಜಟಿಲ ಪ್ರಶ್ನೆಯೊಂದನ್ನು ಕನಕರು ಕೇಳಿದ್ದಾರೆ. ಈ ಪ್ರಶ್ನೆಗೆ ಈತಕವೂ ಉತ್ತರ ಸಿಕ್ಕಿಲ್ಲ. ಅಥವಾ ಉತ್ತರ ಸಿಗದಷ್ಟು ಖಚಿತವಲ್ಲದ ಮೂಲವಿಲ್ಲದ ಜಾತಿಯೊಂದು ಹೇಗೆ ತನ್ನ ಪ್ರಾಬಲ್ಯವನ್ನು ಚಾಚಿದೆ ಎನ್ನುವ ನೆಲೆಯಲ್ಲಿ ಮರು ಚಿಂತನೆ ಮಾಡುವ ಅಗತ್ಯವಿದೆ. ಅಂತೆಯೇ ಉಡುಪಿಯ ಕೃಷ್ಣಮಠದ ಕನಕನ ಕಿಂಡಿಯೊಂದು ಜಾತಿಶ್ರೇಣೀಕರಣವನ್ನು ಡಾಳಾಗಿ ಬಿಂಬಿಸುವ ಮೂರ್ತರೂಪ. ಇದು ಕೃಷ್ಣನನ್ನೇ ತನ್ನೆಡೆಗೆ ತಿರುಗಿಸಿಕೊಂಡು ದರ್ಶನ ಕೊಡುವಂತೆ ಮಾಡಿದ ಕನಕನ ಬಂಡಾಯದ ರೂಪಕ. ವೈಧಿಕತೆಯ ಗರ್ವಭಂಗ ಮಾಡಿದ ಈ ಕಥೆ ಮತ್ತು ಬೌತಿಕ ಕಿಂಡಿ ಜಾತಿ ನೆಲೆಯ ವೈಚಾರಿಕತೆಯನ್ನು ರೂಪಿಸಲು ಇರುವ ಶಕ್ತ

ರೂಪಕದಂತೆ ಕಾಣುತ್ತದೆ. ಇದು ನುಂಗಲಾರದ ತುತ್ತಾಗಿ ಉಡುಪಿಯ ಕೃಷ್ಣಮಠಕ್ಕೆ ಅಂಟಿಕೊಂಡ ನುಂಗಲಾರದ ತುತ್ತಾಗಿ ಬ್ರಾಹ್ಮಣ್ಯಕ್ಕೆ ದುಸ್ವಪ್ನವಾಗಿದೆ. ಕುಲದ ಪ್ರಶ್ನೆ ಮತ್ತು ಕನಕನ ಕಿಂಡಿಯ ಶಕ್ತರೂಪಕಗಳನ್ನು ವಿಸ್ತರಿಸುವ ಕ್ರಿಯಾಶೀಲ ಕೆಲಸವೂ ಆಗಬೇಕಿದೆ.

## 2. ಕನಕದಾಸರ ಕೀರ್ತನೆಗಳಲ್ಲಿ ಜಾತಿ ತಾರತಮ್ಯದ ಆಯಾಮಗಳು

– ಡಾ. ಕೆ.ಷರೀಫಾ

ಮೇಲ್ಕಂಡ ಶೀರ್ಷಿಕೆಯಡಿಯಲ್ಲಿ ಶ್ರೀ.ಹೆಚ್.ದಂಡಪ್ಪನವರು ಬರೆದಿರುವ ಪ್ರಬಂಧಕ್ಕೆ ಪ್ರತಿಕ್ರಿಯೆಯಾಗಿ ಕೆಲವು ವಿಚಾರಗಳನ್ನಿಲ್ಲಿ ಚರ್ಚಿಸಲಾಗಿದೆ.ಲೇಖನದ ಆರಂಭದಲ್ಲಿ ಇವರು ಕನಕದಾಸರ ಕೀರ್ತನೆಗಳಲ್ಲಿ ಜಾತಿ ತಾರತಮ್ಯದ ಆಯಾಮಗಳನ್ನು ಚರ್ಚಿಸುವುದಕ್ಕೆ ಮುನ್ನ ಜಾತಿಯ ಸ್ವರೂಪ ಮತ್ತು ಅದರ ಗುಣ ಲಕ್ಷಣಗಳ ಬಗ್ಗೆ ಚರ್ಚಿಸಿದ್ದಾರೆ. ಅಮಾನುಷವಾದ ಜಾತಿಪದ್ಧತಿಯಿರುವ ನಮ್ಮ ಸಮಾಜ ವ್ಯವಸ್ಥೆಯಲ್ಲಿ ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಗೌರವಯುತವಾಗಿ ನಡೆಸಿಕೊಳ್ಳದಿರುವುದನ್ನು ಕಾಣುತ್ತೇವೆ. ಅವನನ್ನು ಪ್ರಾಣಿಗಳಿಗಿಂತ ಕೀಳಾಗಿ ನಡೆಸಿಕೊಂಡಿರುವುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಇದನ್ನು ಲೇಖಕರು ಸಮರ್ಥವಾಗಿಯೇ ಗುರುತಿಸಿದ್ದಾರೆ.

ಸಮಾಜದಲ್ಲಿ ಸ್ಥಾಪಿತಗೊಂಡ ಜಾತಿ ವ್ಯವಸ್ಥೆಯನ್ನು ಕನಕದಾಸರು ಮಿಕ್ಕವರಿಗಿಂತಲೂ ಭಿನ್ನವಾಗಿ ಮತ್ತು ಸ್ಪಷ್ಟವಾದ ನುಡಿಗಳಲ್ಲಿ ಹೇಳುತ್ತಾರೆ. ನ್ಯಾಯಪರವಾದ ಚಿಂತನೆಗಳಿಂದಲೇ ಕನಕರು ಗುರುತಿಸಲ್ಪಡುತ್ತಾರೆ. ಸಾಮಾಜಿಕ ನ್ಯಾಯದ ಪರಿಕಲ್ಪನೆಗಳು ಕನಕರ ಚಾವಡಿಯಲ್ಲಿ ಚರ್ಚಿತವಾಗಿ ಬಡವರಪರ, ಶೋಷಿತರಪರ, ನ್ಯಾಯವಂಚಿತ ಜನರ ಪರವಾಗಿರುವುದನ್ನು ಅವರ ಕೀರ್ತನೆಗಳ ಮುಖಾಂತರ ದಂಡಪ್ಪನವರು ಗುರುತಿಸುತ್ತಾರೆ.

ವಚನಕಾರರು 12 ನೇ ಶತಮಾನದಲ್ಲಿಯೇ ಈ ಜಾತಿ ತಾರತಮ್ಯವನ್ನು ಕುರಿತು ನೇರವಾದ ಶಬ್ದಗಳಲಿ ಮಂಡಿಸಿದ್ದಾರೆ. ಅವರು ವಚನಕಾರರ ನಂತರ ಮೂರ್ನಾಲ್ಕು ಶತಮಾನಗಳ ನಂತರ ಬಂದವರು. ವಚನಕಾರರು ನೇರವಾಗಿ ಸಮಾಜವನ್ನುದ್ದೇಶಿಸಿ ನುಡಿದರೆ, ಕನಕದಾಸರು ಅದನ್ನು ತಮ್ಮ ಇಷ್ಟ ದೇವರ ಮುಂದೆ ಮಂಡಿಸುವುದನ್ನು ರೂಢಿಸಿಕೊಂಡಿರುವುದನ್ನು ಕಾಣಬಹುದು. ಅವರು ಸಮಾಜಕ್ಕೆ ಹೇಳಲೇಬೇಕಾದಂತಹ ಮಾತುಗಳನ್ನು ಕೀರ್ತನೆಗಳ ರೂಪದಲ್ಲಿ ಅಧ್ಯಾತ್ಮಿಕ ಪರಿಭಾಷೆಯಲ್ಲಿ ಹೇಳುತ್ತಾರೆ. ಅವರ ಕೀರ್ತನೆಗಳು ಸಾಮಾಜಿಕ ನ್ಯಾಯ,ಮತ್ತು ಶೋಷಿತರ ಪರವಾಗಿವೆ ಹಾಗೂ ಅಧಿಕಾರಹೀನರ ಪರ ವಹಿಸುತ್ತವೆ. ಆದ್ದರಿಂದಲೇ ಅವರ ಹಾಡು ಕೀರ್ತನೆಗಳಲ್ಲಿ ನ್ಯಾಯಪರತೆ ಮತ್ತು ಸಾಮಾಜಿಕ ನ್ಯಾಯದ ಪರ ಧ್ವನಿಯೆತ್ತುತ್ತವೆ.

16ನೇ ಶತಮಾನದಲ್ಲಿ ಪ್ರಚಲಿತವಿದ್ದ ದಾಸಕೂಟ, ವ್ಯಾಸಕೂಟ ಮತ್ತು ವೈಷ್ಣವ ಪಂಥದ ಪ್ರಭಾವಗಳು ಅವರ ಕೀರ್ತನೆಗಳಲ್ಲಿ ಕಾಣುತ್ತೇವೆ. ಕನಕದಾಸರು ರಚಿಸಿದ "ರಾಮಧ್ಯಾನಚರಿತೆ"ಯಲ್ಲಿ ಕಣ್ಣಿಗೆ ರಾಚುವ ಸಮಾಜದ ತರತಮಗಳನ್ನು ಕುರಿತು ಮಂಡಿಸುತ್ತಾರೆ. ಹೆಚ್.ದುಂಡೆಪ್ಪನವರು ಕನಕದಾಸರ ಬಹಳ ಜನಪ್ರೀಯವಾದ ಕೀರ್ತನೆಯಾದ ·

"ಕುಲಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲಯನೇನಾದರು ಬಲ್ಲಿರ
ಹುಟ್ಟಿದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ

–2–

ಗುಟ್ಟು ಕಾಣಿಸಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆ ಕಂಡ್ಯ ಮನುಜ"

ಈ ಕೀರ್ತನೆಯಲ್ಲಿ ಕನಕದಾಸರಿಗಿರುವ ಮೇಲ್ಜಾತಿಯ ಮತ್ತು ಕೆಳಜಾತಿಯ ಎಲ್ಲ ಶಿಷ್ಯಂದಿರ ಒಡನಾಟವಿದ್ದು, ಜಾತಿಯ ವಿಷಯದ ಕುರಿತು ಈ ರೀತಿಯ ಪ್ರತಿರೋಧವನ್ನು ವ್ಯಕ್ತಪಡಿಸುತ್ತಾರೆ. ಸರ್ವರಿಗೂ ವೇದ್ಯವಾಗುವಂತೆ ತಮ್ಮ ತಾತ್ವಿಕ ವಿಚಾರಗಳನ್ನು ಭಾರತದಂತಹ ಸಾವಿರಾರು ಜಾತಿಗಳಿರುವ ನಾಡಿನಲ್ಲಿ ಕನಕರು ಕುಲದ ಮೂಲಕ್ಕೇ ಕೈ ಹಾಕುತ್ತಾರೆ. ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ? ಎಂದು ಎಂದು ಸಮಾಜಕ್ಕೆ ಸವಾಲು ಹಾಕುತ್ತಾರೆ. ಈ ದೇಶದಲ್ಲಿರುವ ಜಾತಿ ಮತದ ಗೊಂದಲಗಳನ್ನು ದಂಡಪ್ಪನವರು ಸೂಕ್ತವಾಗಿ ಗುರುತಿಸುತ್ತಾರೆ.

ಕನಕದಾಸರು ದಾಸಪರಂಪರೆಯಲ್ಲಿ ಏಕಾಂಗಿಯಾಗಿ ಹೋರಾಟ ಮಾಡಿರುವುದನ್ನು ಗುರುತಿಸಬಹುದಾಗಿದೆ. ಒಂದು ಕಡೆ ಧಾರ್ಮಿಕತೆ,ಮತ್ತೊಂದು ಕಡೆ ವೈಚಾರಿಕತೆ ಎರಡನ್ನು ಮೇಳೈಸಿಕೊಂಡ ವ್ಯಕ್ತಿತ್ವ ಕನಕರದು. ಜನ ಸಮುದಾಯವನ್ನು ಧರ್ಮದ ಹೆಸರಿನಲ್ಲಿ ಶೋಷಣೆ ಮಾಡಿರುವ ವೈದಿಕರ ನಡೆಯನ್ನು ನೋಡಿದ ಕನಕದಾಸರಿಗೆ ರೋಸಿ ಹೋಗಿದ್ದರ ಚಾರಿತ್ರಿಕ ಸತ್ಯವನ್ನು ಲೇಖಕರು ಸಮರ್ಥವಾಗಿ ಗುರುತಿಸಿದ್ದಾರೆ. ಕನಕದಾಸರ ಕೀರ್ತನೆಗಳಲ್ಲಿ ಜಾತಿ ವ್ಯವಸ್ಥೆಯನ್ನು ಸಮರ್ಪಕವಾಗಿ ಟೀಕಿಸುವುದರೊಂದಿಗೆ ಪರೋಹಿತಶಾಹಿಗೆ ಮನವರಿಕೆ ಮಾಡಿಕೊಟ್ಟಿರುವುದು ಕನಕರ ಶ್ರೇಷ್ಠತೆಯಾಗಿದೆ. ಅದು ಅವರ ನಿರ್ಭಿಡೆಯ ವ್ಯಕ್ತಿತ್ವವನ್ನು ತೋರಿಸುತ್ತದೆ.

ಮುಂದುವರೆದು ಕನಕದಾಸರು ಆತ್ಮ ಯಾವ ಕುಲ ಜೀವ ಯಾವ ಕುಲ ಎಂದು ಕೇಳುತ್ತಾರೆ. ಮಾನವ ಕುಲಂ ತಾನೊಂದೇ ವಲಂ ಎನ್ನುವಂತೆ ಮನುಜ ಮನುಜರ ಮಧ್ಯೆ ಯಾವುದೇ ಭೇದವಿಲ್ಲವೆಂದ ಅವರು ಶಿವ, ವಿಷ್ಣುವಿನ

ಧರ್ಮವನ್ನೇ ಪ್ರಶ್ನಿಸುತ್ತಾರೆ. ಆತ್ಮ, ಜೀವ, ತತ್ವಗಳಿಗೆ ಯಾವ ರೀತಿ ಕುಲವಿಲ್ಲವೋ ಹಾಗೆ ಸಕಲ ಜೀವಾತ್ಮರೆಲ್ಲ ಒಂದೇ ಅವರಿಗೆ ಯಾವುದೆ ಜಾತಿ,ಕುಲಗಳ ಕಂಪಾರ್ಟಮೆಂಟ್‌ಗಳಲ್ಲಿ ವಿಂಗಡಿಸುವುದನ್ನು ಕನಕರು ಬಹಳ ಸ್ಪಷ್ಟವಾಗಿ ವಿರೋಧಿಸುತ್ತಾರೆ. ಆಗಿನ ಕಾಲದಲ್ಲಿ ಭಕ್ತಿ ಪಂಥವು ಪ್ರಧಾನವಾಗಿದ್ದು ಕನಕದಾಸರೂ ದಾಸ,ವ್ಯಾಸ,ವೈದಿಕರ ಮಧ್ಯದಲ್ಲಿದ್ದುಕೊಂಡೇಹೋರಾಡುವುದು ಬಹಳ ಕಷ್ಟದ ಕೆಲಸ. ಸನಾತನಿ ವಿಚಾರಗಳು ಒಪ್ಪಿತವಾಗಿರುವಾಗ ಸಮುದ್ರದ ಅಲೆಗಳ ವಿರುದ್ಧ ಈಜುವುದು ಬಹಳ ಕ್ಲಿಷ್ಟಕರ.ಕನಕರು ತಮ್ಮಲ್ಲಿ ವೈಚಾರಿಕ ಸ್ಪಷ್ಟತೆ ಇರುವ ಕಾರಣಕ್ಕೇನೆ ವಿಷ್ಣುವನ್ನೇ ಪ್ರಶ್ನಿಸುತ್ತಾರೆಂದು ಲೇಖಕರು ಗುರುತಿಸುತ್ತಾರೆ." ಆರು ಬದುಕಿದರಯ್ಯಾ ಹರಿ ನಿನ್ನ ನಂಬಿ " ಎಂದು ಪ್ರಶ್ನಿಸುವ

–3–

ಕನಕರ ಧೈರ್ಯ ಅಸಮಾನ್ಯವಾದುದು. ದೇವರನ್ನೆ ಜಾತಿ ವಿಚಾರದಲ್ಲಿ ಪ್ರಶ್ನಿಸುತ್ತಾ ನಿನ್ನ ನಂಬಿ ಬದುಕಿದವರು ಯಾರೂ ಇಲ್ಲ ಹರಿಯೆ ಎಂದು ಹೇಳಲು ಬಹಳ ಧೈರ್ಯ ಬೇಕಾಗುತ್ತದೆ. ಇಂತಹ ಎದೆಗಾರಿಕೆ ಇರುವ ಸಂತ ಕವಿ ಚರಿತ್ರೆಯಲ್ಲಿ ಇನ್ನೊಬ್ಬರಿಲ್ಲ. ಪುರೋಹಿತರ ಅವತಾರ ವೇಷಭೂಷಣಗಳು ಎಷ್ಟೊಂದು ಭಯಂಕರವಾಗಿರುತ್ತವೆಯೆಂದರೆ,ಅದನ್ನು ನೋಡಲೂ ಸಹ ಭಯವಾಗುತ್ತದೆ. ಭಯವೇ ಭಕ್ತಿಯ ಮೂಲವಲ್ಲವೇ? ಹೀಗಿರುವಾಗ ಕನಕದಾಸರು ಆ ವೈದಿಕರನ್ನು ಆಗಿನ ಕಾಲದಲ್ಲಿ ಹೇಗೆ ಎದುರಿಸಿದರೋ ಎಂಬುದು ಚಿಂತನಾರ್ಹ ವಿಷಯವಾಗಿದೆ. ಒಪ್ಪಿತ ಮೌಲ್ಯಗಳನ್ನು ಮುರಿದು ಹೊಸ ಮೌಲ್ಯಗಳನ್ನು ಕಟ್ಟುವುದು ಬಹಳ ಕಷ್ಟದ ಕೆಲಸ. ಒಟ್ಟಾರೆ ಮಾನವನನ್ನು ಮಾನವನ್ನನ್ನಾಗಿ ನೋಡಲು ಕನಕರ ಕೀರ್ತನೆಗಳು ಭೋಧಿಸುತ್ತವೆ. "ನಾನು ನೀನು ಎನ್ನದಿರೋ ಮಾನವ ಜ್ಞಾನದಿಂದ ನಿನ್ನ ನೀನೇ ತಿಳಿದು ನೋಡಲೋ"ಎನ್ನುತ್ತಾ ಸರ್ವ ಧರ್ಮ ಸಮಾನತೆ, ಮಾನವೀಯತೆ, ಸೌಹಾರ್ದತೆಯಿಂದ

ಬದುಕಲು ಕನಕದಾಸರು ಕರೆ ನೀಡುತ್ತಾರೆ.

ಕನಕದಾಸರ ಕೀರ್ತನೆಗಳಲ್ಲಿ ಅತೀ ಧರ್ಮಿಕತೆ ಇರುವಂತೆ ಕಂಡರೂ ಅದನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ನಿಜದ ಅರಿವು ನಮಗಾಗುತ್ತದೆ. ಅವರು ಬಳಸುವ ಭಾಷೆ ಧಾರ್ಮಿಕ ಸಂಕೇತದಂತಿದ್ದರೂ ಅದು ಒಳಗೊಂಡಿರುವ ನೇತ್ಯಾತ್ಮಕ ವಿಚಾರಗಳನ್ನು ಪರಿಶೀಲಿಸಬೇಕಾಗುತ್ತದೆ. ಪುರಾಣ, ಪ್ರತೀಕಗಳು ಮತ್ತು ಪುರಾಣ, ಡಾಂಭಿಕ ಭಕ್ತಿ, ಅರ್ಥವಿಲ್ಲದ ಆಚರಣೆಗಳನ್ನು ಅವರು ನಿಖರವಾಗಿ ಖಂಡಿಸುತ್ತಾರೆ."ಹಸುವಿನ ಮಾಂಸದೊಳುತ್ಪತ್ತಿಯಾದ ಕ್ಷೀರವನು ವಸುಧೆಯೊಳಗೆ ಭೂಸುರರುಣಲಿಲ್ಲವೇ?" ಎನ್ನುವಲ್ಲಿ ಮಾಂಸ ತಿನ್ನುವವರನ್ನು ಹೀಗಳೆವ ಸಂಸ್ಕೃತಿಯನ್ನು ಅವರು ಹೀಗಳೆಯುತ್ತಾರೆ. ದೀರ್ಘವಾದ ಲೇಖನದಲ್ಲಿ ದಂಡಪ್ಪನವರು ಕನಕದಾಸರ ಕೀರ್ತನೆಗಳಲ್ಲಿರುವ ಸರ್ವ ಧರ್ಮ ಸಮಾನತೆಯ

ತತ್ವಗಳು, ಜಾತಿ ಪದ್ಧತಿ, ದೇವರಿಗೂ ಬಿಡದಂತೆ ಪ್ರಶ್ನಿಸುವ ಎದೆಗಾರಿಯನ್ನು ಅವರ ಕೀರ್ತನೆಗಳ ಮೂಲಕವೇ ಶೋಧಿಸಿದ್ದಾರೆ.

## 3. ಕನಕದಾಸರ ಕೀರ್ತನೆಗಳಲ್ಲಿ ಜಾತಿ ತಾರತಮ್ಯದ ಆಯಾಮಗಳು

–ಪ್ರೊ. ಸುಮಾ ಎಸ್

ಕನಕದಾಸರು ಭಾರತೀಯ ಭಕ್ತಿ ಪರಂಪರೆಯ ವಿಶಿಷ್ಟವಾದ ಸ್ಥಾನ ಪಡೆದಿರುವ ಸಂತಕವಿ ಮತ್ತು ದಾರ್ಶನಿಕರು. ಭಾರತದ ಭಕ್ತಿ ಪರಂಪರೆಯಲ್ಲಿದ್ದ ಎಲ್ಲಾ ಸಂತರು ಭಾರತೀಯ ಸಮಾಜದ ಜಾತಿಪದ್ಧತಿಯನ್ನು ಖಂಡಿಸಿ ಸಮಾನತಾ ಸಮಾಜದ ಕನಸನ್ನು ಕಂಡವರು.

ಭಕ್ತಿಪರಂಪರೆಯ ಈ ಸಂತರನ್ನು ಅನುಭಾವಿಗಳೆಂದೂ ಕರೆಯಲಾಗುತ್ತಿದೆ. ಈ ಅನುಭಾವಿಗಳು, ಪ್ರಕೃತಿಯಲ್ಲಿ ಹೇಗೆ ಮೇಲು ಕೀಳು ಇಲ್ಲದೆ ಪರಸ್ಪರ ಅಂತರ್ ಸಂಬಂಧದಿಂದ, ಒಂದು ಸಮತೋಲನದಿಂದ ಸರಿದೂಗಿಸಿಕೊಂಡು ಹೋಗುವ ಗುಣವಿದೆಯೋ ಅದೇ ಗುಣ ಮನುಷ್ಯನಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿರಬೇಕು ಎಂದು ಬಯಸಿದವರು. ಪ್ರಕೃತಿಯಲ್ಲಿ ವೈವಿಧ್ಯವಿದ್ದರೂ ಅವು ಜೈವಿಕ ಜಾಲವೊಂದನ್ನು ಸೃಷ್ಟಿಸಿಕೊಂಡಿವೆ. ಹೀಗಾಗಿ ಅಲ್ಲಿ ಸಮತೋಲನವಿದೆ, ಸಮತೋಲನವಿದ್ದಾಗ ಯಾವುದೇ ಏರು ಪೇರು ಅಥವಾ ಮೇಲು ಕೀಳುಗಳ ಭಾವನೆಯೂ ಇರುವುದಿಲ್ಲ. ಮನುಷ್ಯನ ಸಮಾಜದಲ್ಲಿಯೂ ಪ್ರಕೃತಿಯಲ್ಲಿರುವಂತಹ ವ್ಯವಸ್ಥೆ ಇದ್ದರೆ ಮನುಷ್ಯನೇ ತನ್ನ ಸ್ವಾರ್ಥಕ್ಕಾಗಿ ಸೃಷ್ಟಿಸಿಕೊಂಡಿರುವ ಜಾತಿಗಳು ಇಲ್ಲವಾಗಿ ವಿಶ್ವಮಾನವತೆ ನೆಲೆಗೊಳ್ಳುತ್ತದೆ. ಸಂತರು ಅಥವಾ ಅನುಭಾವಿಗಳು ಬಯಸಿದ್ದು ಇಂತಹ ಮನುಷ್ಯ ಸಮಾಜವನ್ನು, ವಿಶ್ವಪ್ರಜ್ಞೆಯುಳ್ಳ ವಿಶ್ವ ಮಾನವತಾ ವ್ಯವಸ್ಥೆಯುಳ್ಳ ಸಮಾಜದ ನಿರ್ಮಾಣ ಅವರ ಕನಸು. ಇಂತಹ ಅನುಭಾವಿ ಸಂತ ಪರಂಪರೆಯಲ್ಲಿ ಅರಳಿದ ಅತ್ಯಂತ ಸುಂದರ ಹೂ ಕನಕದಾಸರು. ಈ ವಿಶೇಷಣವನ್ನು ನಾನು ಉತ್ಪ್ರೇಕ್ಷೆಗಾಗಿ ಬಳಸುತ್ತಿಲ್ಲ. ನಾನು ಇಲ್ಲಿಯವರೆಗೂ ಉತ್ಪ್ರೇಕ್ಷೆಯಿಂದ ಕೂಡಿರುವ ಪದಗಳನ್ನು ಬಳಸಿಲ್ಲ. ಇದು ಕನಕದಾಸರಿಗೆ ಅವರು ಸೃಷ್ಟಿಸಿರುವ ಸಾಹಿತ್ಯಕ್ಕೆ, ಕೀರ್ತನೆಗಳಿಗೆ ಆ ಮೂಲಕ ಭಾರತೀಯ ಸಮಾಜಕ್ಕೆ ಅವರು ಕೊಟ್ಟಿರುವ ಕೊಡುಗೆಗೆ ಅರ್ಹವಾಗಿಯೇ ಇದೆ. ಮುಂದೆ ನಾನು ಮಂಡಿಸುವ ವಿಚಾರಗಳೂ ಸಹ ಕನಕದಾಸರನ್ನು ಸುಂದರ ಹೂ ಎಂದು ಕರೆದಿರುವುದರ ಔಚಿತ್ಯ ಮನವರಿಕೆ ಮಾಡಿಕೊಡುತ್ತವೆ. ಕನಕದಾಸರ ಕೀರ್ತನೆಗಳಲ್ಲಿ ಜಾತಿಯ ತಾರತಮ್ಯದ ನೆಲೆಗಳ ಸ್ವರೂಪವನ್ನು ಚರ್ಚಿಸುವುದಕ್ಕೆ ಮುನ್ನ ಜಾತಿ ಸ್ವರೂಪ ಅದರ ಗುಣಲಕ್ಷಣಗಳ ಬಗ್ಗೆ ತಿಳಿದುಕೊಳ್ಳುವುದು ಅಗತ್ಯವೆನಿಸುತ್ತದೆ.

ಭಾರತದ ಸಾಮಾಜಿಕ ಸ್ವರೂಪದ ಮುಖ್ಯವಾದ ತಳಪಾಯವೆಂದರೆ ಜಾತಿವ್ಯವಸ್ಥೆ. ಪ್ರಾಚೀನ ಕಾಲದಿಂದಲೂ ಕ್ರಿಯಾಶೀಲವಾಗಿ ಬರುತ್ತಲಿರುವ ಈ ಜಾತಿವ್ಯವಸ್ಥೆಯು

ಸಮಾಜದಲ್ಲಿ ತರತಮಭಾವ, ಅಸಮಾನತೆ, ಅಧೀನತೆ, ಅವಲಂಬನೆ ಇತ್ಯಾದಿ ವ್ಯವಸ್ಥೆಯನ್ನು ಸೃಷ್ಟಿಸಿದೆ. ಈ ಜಾತಿಯ ಸ್ವರೂಪ ಹೇಗಿದೆಯೆಂದರೆ ಇವು ವೃತ್ತಗಳಾಗಿ ಹೆಣೆದುಕೊಂಡಿವೆ. ಭಾರತೀಯ ಸಮಾಜ ಎಂಬುದು ದೊಡ್ಡ ವೃತ್ತವಾದರೆ ಅವರೊಳಗೆ ಸಣ್ಣ ಸಣ್ಣ ವೃತ್ತಗಳು ಒಂದರೊಳಗೆ ಒಂದು ಸೇರಿವೆ. ಕನಿಷ್ಟವಾಗಿರುವ ವೃತ್ತವನ್ನು ಬಲಾಢ್ಯವಾಗಿರುವ ದೊಡ್ಡ ವೃತ್ತ ಒತ್ತರಿಸಬಹುದು, ಅಮುಕಿ ಉಸಿರುಗಟ್ಟಿಸಬಹುದು. ಒಳಗೆ ಸಾವಿರಾರು ವೃತ್ತಗಳಿದ್ದು ಒಂದು ವೃತ್ತ ಮತ್ತೊಂದು ವೃತ್ತದ ಮೇಲೆ ಸವಾರಿ ಮಾಡಲು ಸಾಧ್ಯವಿದೆ. ಇದನ್ನೇ ಶ್ರೇಸೇಂಕಣ ಎಂದು ಕರೆಯಲಾಗುತ್ತದೆ. ಜಾತಿ ವ್ಯವಸ್ಥೆಯ ಸ್ವರೂಪವನ್ನು ಪಿರಮಿಡ್ಡಿಗೂ ಹೋಲಿಸಲಾಗುತ್ತದೆ. ಪಿರಮಿಡ್ಡಿನ ತುತ್ತತುದಿಯಲ್ಲಿ ಮೇಲ್ಜಾತಿ ಇದ್ದರೆ ಕೆಳಗೆ ಕೆಳಜಾತಿಗಳು ಇರುತ್ತವೆ. ಮೇಲು ಜಾತಿಗಳು ಕೆಳಜಾತಿಗಳನ್ನು ಹಿಡಿತದಲ್ಲಿ ಇಟ್ಟುಕೊಂಡಿರುತ್ತಾರೆ. ಇಂತಹ ಜಾತಿ ವ್ಯವಸ್ಥೆಯ ಸ್ವರೂಪವನ್ನು ಕುರಿತು ವ್ಯಾಖ್ಯಾನಗಳನ್ನು ಕೆಲವು ಸಮಾಜ ಶಾಸ್ತ್ರಜ್ಞರು ನೀಡಿದ್ದಾರೆ. ಅವುಗಳನ್ನು ಗಮನಿಸುವುದು ಸೂಕ್ತವಾದದ್ದು.

ಮ್ಯೆಕೆವರ್ ಮತ್ತು ಪೇಜ್ ಹೇಳುವಂತೆ "ಜನರ ಸ್ಥಾನಮಾನವು ಸಂಪೂರ್ಣವಾಗಿ ಮೊದಲೇ ನಿರ್ಣಯಿಸಲಾಗಿದ್ದು ಅವರು ಹುಟ್ಟಿದಾಗಲೆ ಅವರ ಜೀವನದ ಸ್ಥಿತಿಗತಿಗಳು ಇಂತಹವೆಂದು ತೀರ್ಮಾನವಾಗಿ ಅದನ್ನು ಬದಲಾಯಿಸಲು ಯಾವ ವಿಧವಾದ ಭರವಸೆಯೂ ಇಲ್ಲದಿದ್ದರೆ ಅದು ಜಾತಿಯಾಗುತ್ತದೆ."

ಎಡಬ್ಲ್ಯು ಗ್ರೀನ್ ಹೇಳುವಂತೆ ಸಮಾಜದಲ್ಲಿ ಜಾತಿಯು ಸ್ತರ ವಿನ್ಯಾಸದ ಒಂದು ವ್ಯವಸ್ಥೆ. ಇದರಲ್ಲಿ ಅಂತಸ್ತುಗಳ ಏಣಿ ಶ್ರೇಣಿಗಳ ಸ್ವರೂಪವಿದ್ದು ಯಾವುದೇ ಚಲನೆಯಿಲ್ಲದೆ ಸ್ಥಾವರವಾಗಿರುತ್ತದೆ. ಜಡವಾಗಿರುತ್ತದೆ. ಯಾವ ಬದಲಾವಣೆಯೂ ಇರುವುದಿಲ್ಲ. ಯಾವಾಗ ಬದಲಾವಣೆಯಿರುವುದಿಲ್ಲವೋ, ಸಾಮಾಜಿಕ ಶ್ರೇಣಿಗಳು ಅದಲು ಬದಲಾಗುವುದಿಲ್ಲವೋ, ಸ್ಥಾನಮಾನಗಳು ಒಂದೇ ರೀತಿಯಲ್ಲಿರುತ್ತದೋ ಅಲ್ಲಿ ನಿರ್ಬಂಧಗಳಿರುತ್ತವೆ. ಅಂದರೆ ಜಾತಿಯು ಒಂದು ಮುಚ್ಚಿದ ನಿರ್ಬಂಧವಿರುವ ವ್ಯವಸ್ಥೆಯುಳ್ಳ ಸಮೂಹ. `Cast is a closed groups' ಇದನ್ನೇ ಸಿ.ಎಚ್.ಕೂಲೆ ಅವರ, `When class is sometimes strictly heriditery we may call it a caste' ಎಂದು ಹೇಳುತ್ತಾರೆ. ಸಮಾಜಶಾಸ್ತ್ರಜ್ಞರಾದ ಡಿ.ಎನ್.ಮಜುಂದಾರ್ ಮತ್ತು ಟಿ.ಎನ್.ಮದನ್ ಅವರು `Cast is a closed groups' ಎಂದು ಹೇಳಿದರೆ ಇ.ಎಚ್.ಬ್ಲಂಟ್ ಅವರು ಜಾತಿಗೆ ಒಂದು ಹೆಸರಿದ್ದು ಅನುವಂಶೀಯವಾಗಿರುತ್ತದೆ. ಒಳಬಾಂಧವ್ಯವಿದ್ದು ವಿವಾಹ ಮತ್ತಿತರ ಸಾಮಾಜಿಕ ಸಂಬಂಧಗಳ ಬಗ್ಗೆ ಕೆಲವಾರು ನಿಯಮಗಳಿರುತ್ತವೆ. ಹಾಗೆಯೇ ತನ್ನದೇ ಆದ ಆಚಾರ ವಿಚಾರಗಳನ್ನು, ರೀತಿ ನೀತಿಗಳನ್ನು ಒಳಗೊಂಡಿರುವ ಒಂದು ಗುಂಪಿಗೆ ಜಾತಿ ಎಂದು ಕರೆದಿದ್ದಾರೆ. ಎಸ್.ವಿ.ಕೇತಕರ್ ಅವರು ಜಾತಿಯು ಒಂದು ಸಮೂಹವಾಗಿದ್ದು ಮುಖ್ಯವಾಗಿ ಎರಡು ಗುಣಗಳನ್ನು ಹೊಂದಿದೆ. ಮೊದಲನೆಯದು

ಆ ಸಮೂಹದ ಸದಸ್ಯನಾಗಿ ಹುಟ್ಟಿದವರಿಗೆ ಸದಸ್ಯತನ ಮತ್ತು ಅಲ್ಲಿ ಹುಟ್ಟಿದವರ ಆ ಜಾತಿಯ ಸಮೂಹದಲ್ಲಿ ಸೇರುವುದು. ಎರಡನೆಯದಾಗಿ ಸಮೂಹದ ಹೊರಗಡೆ ಯಾವುದೇ ರೀತಿಯ ವಿವಾಹವಾಗಲಿ ಬಾಂಧವ್ಯವಾಗಲಿ ಬೆಳೆಸುವಂತಿಲ್ಲ. ಕಠೋರವಾದ ಸಾಮಾಜಿಕ ನಿಯಮಗಳಿಂದ ಬಾಂಧವ್ಯಗಳನ್ನು ಮತ್ತು ಇತರೆ ಜಾತಿಗಳಿಂದ ಹೇಗೆ ಅಂತರ ಕಾಯ್ದುಕೊಳ್ಳಬೇಕೆಂದು ನಿರ್ಬಂಧಿತರಾಗಿರುವವರು."

ಈ ಮೇಲ್ಕಂಡಂತೆ ಜಾತಿ ಎಂಬ ಪದವನ್ನು ವ್ಯಾಖ್ಯಾನಿಸಲಾಗಿದೆ. ಈ ಜಾತಿಯ ಗುಣ ಲಕ್ಷಣಗಳು ಈ ಕೆಳಕಂಡಂತಿವೆ.

1. ಜಾತಿಯು ಸಾಮಾಜಿಕ ಏಣಿ ಶ್ರೇಣಿಯನ್ನು ಪ್ರತಿನಿಧಿಸುತ್ತದೆ.
2. ಜಾತಿಯು ಸಾಮಾಜಿಕ ವ್ಯವಸ್ಥೆಯ ಒಂದು ಭಾಗ
3. ಊಟೋಪಚಾರಗಳಲ್ಲಿ ನಿರ್ಬಂಧವಿರುತ್ತದೆ.
4. ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದಂತೆ ಕೆಳಜಾತಿಗಳಿಗೆ ಅರ್ಹತೆ, ಅನರ್ಹತೆಗೆ ಸಂಬಂಧಿಸಿದ ನಿಯಮಗಳಿವೆ. ಅವುಗಳನ್ನು ಪಾಲಿಸಬೇಕು.
5. ಸಾಮಾಜಿಕ ಸಂಬಂಧಗಳ ಮೇಲೆ ನಿರ್ಬಂಧ
6. ಕೆಲವು ಜಾತಿಗಳಿಗೆ ಮಾತ್ರ ನಾಗರಿಕ ಹಾಗೂ ಧಾರ್ಮಿಕ ಸೌಲಭ್ಯಗಳು.
7. ಉದ್ಯೋಗಗಳ ಆಯ್ಕೆ ಮೇಲಿನ ನಿರ್ಬಂಧಗಳು.
8. ವಿವಾಹದ ಮೇಲೆ ನಿರ್ಬಂಧ
9. ಶುದ್ಧ-ಅಶುದ್ಧತೆಯ ಪ್ರಶ್ನೆಗಳು
10. ವಾಸಿಸುವ ಸ್ಥಳಗಳಿಗೆ ಮತ್ತು ಧಾರ್ಮಿಕ ಸ್ಥಳಗಳಿಗೆ ಪ್ರವೇಶದ ಅವಕಾಶದ ಪ್ರಶ್ನೆಗಳು.

ಈ ಮೇಲ್ಕಂಡ ಲಕ್ಷಣಗಳು ಜಾತಿಯ ವ್ಯವಸ್ಥೆಯಲ್ಲಿದ್ದು ಆಯಾ ಜಾತಿಗೆ ಸಂಬಂಧಿಸಿದಂತೆ ನಿಯಮಗಳು ಅನ್ವಯವಾಗುತ್ತವೆ. ಇಂತಹ ಅಮಾನುಷವಾದ ಜಾತಿಪದ್ಧತಿಯನ್ನು ಬೌದ್ಧ ಧರ್ಮವು ಮೊದಲಿಗೆ ವಿರೋಧಿಸಿತು. ಇಂತಹ ಜಾತಿಪದ್ಧತಿ ಋಗ್ವೇದದ ಪುರುಷ ಸೂಕ್ತದಲ್ಲಿ ಬರುವ ವಿವರಣೆ ಜಾತಿ ವರ್ಣಗಳ ವ್ಯವಸ್ಥೆಯ ಉಗಮದ ಬಗ್ಗೆ ಇರುವ ಮೊದಲ ಮಾಹಿತಿ. ವರ್ಣ ವ್ಯವಸ್ಥೆಯ ಉಗಮದ ಬಗ್ಗೆ ಹೇಳಿದರೂ ಜಾತಿಯ ಪರಿಕಲ್ಪನೆ ಇಲ್ಲಿಂದಲೇ ಪ್ರಾರಂಭವಾಯಿತು ಎಂದು ಹೇಳಬಹುದು. ಈ ವಿವರಣೆ ಈಗಾಗಲೇ ಎಲ್ಲರಿಗೂ ಗೊತ್ತಿರುವಂತಹದ್ದೇ ಆಗಿದೆ. ಈ ವಿವರಣೆಯಂತೆ ಪ್ರಜಾಪತಿಯಾದ ಬ್ರಹ್ಮನ ಮುಖದಿಂದ ಬ್ರಾಹ್ಮಣನು, ಬಾಹುಗಳಿಂದ ಕ್ಷತ್ರಿಯನು, ತೊಡೆಗಳಿಂದ ವೈಶ್ಯನು ಮತ್ತು ಪಾದಗಳಿಂದ ಶೂದ್ರನು ಹುಟ್ಟಿರುತ್ತಾನೆ. ನಂತರದ ಶತಪಥ ಬ್ರಾಹ್ಮಣ, ಮಹಾಭಾರತದ ಶಾಂತಿಪರ್ವ, ತೈತ್ತರೀಯ ಬ್ರಾಹ್ಮಣ ವಾಯುಪುರಾಣ ಮತ್ತು ಭಾಗವತ ಪುರಾಣಗಳಲ್ಲಿ ಜಾತಿ ಉಗಮದ ಬಗೆಗಿನ ವಿವರಗಳಿವೆ. ಈ ವಿವರಗಳನ್ನು ಸಮರ್ಥಿಸುವ ಮತ್ತು ಅದಕ್ಕೆ ವಿಧಿ ವಿಧಾನಗಳನ್ನು ಕೆಲವು ಸ್ಮೃತಿಗಳು ಒದಗಿಸಿದವು. ಅವುಗಳಲ್ಲಿ ಮನುಸ್ಮೃತಿ

ಬಹಳ ಮುಖ್ಯವಾದದ್ದು. ಜಾತಿ ವ್ಯವಸ್ಥೆಯ ಸ್ವರೂಪವನ್ನು ಅದರ ನೀತಿ ನಿಯಮಗಳನ್ನು ಕಟ್ಟುಪಾಡುಗಳನ್ನು ವೃತ್ತಿಕಸುಬು, ಮದುವೆ, ಆಚರಣೆ, ನಡವಳಿಕೆ ಮನುಷ್ಯ ಇನ್ನೊಬ್ಬ ಮನುಷ್ಯನೊಂದಿಗೆ ನಡೆದುಕೊಳ್ಳಬೇಕಾದ ರೀತಿ-ನೀತಿಗಳು ಜಾತಿ ಮತ್ತೊಂದು ಜಾತಿಯೊಂದಿಗೆ ವ್ಯವಹರಿಸಬೇಕಾದಾಗ ನಿರ್ವಹಿಸಬೇಕಾದ ಜವಾಬ್ದಾರಿಗಳು ಈ ನೀತಿ ನಿಯಮಗಳನ್ನು ಮೀರಿದಾಗ ವಿಧಿಸಬಹುದಾದ ಶಿಕ್ಷೆಗಳು ಒಟ್ಟಾರೆ ಕಾಯ್ದೆ ಮತ್ತು ನಿಯಮಗಳು ಈ ಸ್ಮೃತಿಗಳಲ್ಲಿದ್ದು ಕೆಳಜಾತಿಗಳು ಅದನ್ನು ಪಾಲಿಸಲೇಬೇಕಿತ್ತು. ಈ ಸ್ಮೃತಿಗಳು ಮತ್ತು ಶಾಸ್ತ್ರಗಳು ರೂಪಿಸಿರುವ ನಿಯಮಗಳಂತೆಯೇ ಜಾತಿ ವ್ಯವಸ್ಥೆ ಇದ್ದು ಅದರಂತೆಯೇ ನಡೆದುಕೊಳ್ಳಬೇಕಿತ್ತು. ಒಂದು ವೇಳೆ ಸ್ಮೃತಿಗಳಲ್ಲಿನ, ಶಾಸ್ತ್ರಗಳಲ್ಲಿನ ನಿಯಮಗಳನ್ನು ಮೀರಿದರೆ ಸ್ಮೃತಿಗಳಲ್ಲಿರುವಂತೆ ಕಠೋರವಾದ ಶಿಕ್ಷೆಯನ್ನು ವಿಧಿಸಬಹುದಾಗಿತ್ತು. ಅದು ಆಯಾ ಜಾತಿಯ ಶ್ರೇಣೀಕರಣವನ್ನು ಅವಲಂಬಿಸುತ್ತಿತ್ತು. ಈಗಲೂ ಸಹ ಕೆಲವು ಗ್ರಾಮಗಳಲ್ಲಿ, ಬುಡಕಟ್ಟುಗಳಲ್ಲಿ ಆಯಾ ಗ್ರಾಮದ ಮುಖ್ಯ ಜಾತಿಯ ಅಂದರೆ ಮೇಲ್ಜಾತಿಯ ಮುಖಂಡನ ನೇತೃತ್ವದಲ್ಲಿ ಪಂಚಾಯಿತಿಯಿದ್ದು ಆ ಪಂಚಾಯಿತಿಯ ತೀರ್ಮಾನಕ್ಕೆ ಉಳಿದ ಜಾತಿಯವರು ತಲೆಬಾಗಲೇಬೇಕಾಗುತ್ತದೆ. ಈ ಅಮಾನುಷವಾದ ಜಾತಿಪದ್ಧತಿಯ ವ್ಯವಸ್ಥೆಯಲ್ಲಿ ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಗೌರವಯುತವಾಗಿನಡೆಸಿಕೊಳ್ಳದೆ ಪ್ರಾಣಿಗಳಿಗಿಂತ ಕಡೆಯಾಗಿ ನೋಡಿ ನಡೆಸಿಕೊಂಡಿದ್ದಾನೆಂಬುದಕ್ಕೆ ನಮ್ಮ ಇತಿಹಾಸ, ಪುರಾಣ, ಶಾಸ್ತ್ರ, ಸ್ಮೃತಿಗಳು ನಿಖರವಾದ, ಖಚಿತವಾದ ಆಧಾರಗಳನ್ನು ಒದಗಿಸಿವೆ. ಈಗಲೂ ಬೇರೆ ಬೇರೆ ರೀತಿಯಲ್ಲಿ ಈ ಜಾತಿ ಪದ್ಧತಿ ಅನುಷ್ಠಾನದಲ್ಲಿದೆ ಎಂಬುದು ಸರ್ವವಿಧಿತ.

ಇಂತಹ ಜಾತಿ ಪದ್ಧತಿಯನ್ನು ಕನಕದಾಸರು ತಮ್ಮ ಅಭಿವ್ಯಕ್ತಿಗಳಾದ ಕೀರ್ತನೆ, ಮುಂಡಿಗೆ ಮತ್ತು ಹರಿಭಕ್ತಿಸಾರ ಕೃತಿಗಳಲ್ಲಿ ವಿರೋಧಿಸಿದ್ದಾರೆ. ಅವರು ಈ ವ್ಯವಸ್ಥೆಯನ್ನು ಯಾವ ಸ್ವರೂಪದಲ್ಲಿ ಪ್ರತಿರೋಧಿಸಿದ್ದಾರೆ ಎಂಬುದನ್ನು ಅವರ ಕೀರ್ತನೆಗಳ ಜೊತೆಯಲ್ಲಿ ವಿಶ್ಲೇಸಿಸಿಕೊಳ್ಳುವುದು ಅಗತ್ಯ.

ಕನಕದಾಸರು ಯಾವ ಬಗೆಯಲ್ಲಿ ಜಾತಿಗೆ ಪ್ರತಿರೋಧವನ್ನು ಒಡ್ಡುತ್ತಾರೆಂಬುದನ್ನು ಈಗ ಅವರ ಹರಿಭಕ್ತಿಸಾರದ ಒಂದು ಕೀರ್ತನೆಯೊಂದಿಗೆ ಪ್ರಾರಂಭಿಸಬಹುದು. ಮನುಪ್ರಣೀತವಾದ ಮನುಸ್ಮೃತಿಯಲ್ಲಿ ಕೆಳಜಾತಿಯ ಜನರು ಇಲ್ಲವೇ ಅಸ್ಪೃಶ್ಯರು ದಾರಿಯಲ್ಲಿ ಹೋಗುವಾಗ ತಮ್ಮ ಎಂಜಲನ್ನು ಉಗಿಯಬಾರದು. ದಾರಿಯಲ್ಲಿ ಹೋಗುವಾಗ ಇವರು ತಮ್ಮ ಕೊರಳಿಗೆ ಇಲ್ಲವೇ ಸೊಂಟಕ್ಕೆ ಒಂದು ಕುಡಿಕೆಯನ್ನು ಕಟ್ಟಿಕೊಂಡಿರಬೇಕು ಮತ್ತು ಆ ಕುಡಿಕೆಯಲ್ಲಿ ಉಗಿದು ಊರಿನಿಂದ ಹೊರಗೆ ಹೋದಾಗ ಅದನ್ನು ಚೆಲ್ಲಬೇಕು. ಅದೂ ಯಾರೂ ಓಡಾಡದೆ ಇರುವ ಪ್ರದೇಶದಲ್ಲಿ. ಆ ಎಂಜಲು ಮೇಲು ಜಾತಿಯವರಿಗೆ ಕಾಣಿಸಬಾರದು. ಅಷ್ಟೇ ಏಕೆ ಅವನು ಬೀದಿಯಲ್ಲಿ ಹೋಗುವಾಗ ಅವನ ಹೆಜ್ಜೆಗುರುತುಗಳೂ ಸಹ ಕಾಣಲಾರದು ಮತ್ತು ಆ ಹೆಜ್ಜೆಗುರುತುಗಳಲ್ಲಿ ಅವನ ದೇಹದ ಸ್ಪರ್ಶ ಇರುವುದರಿಂದ

ಅದನ್ನು ಮೇಲುಜಾತಿಯವರು ತುಳಿಯಬಾರದು. ಆದುದರಿಂದ ಕೆಳಜಾತಿಗಳ ಜನರು ಬೀದಿಗಳಲ್ಲಿ ಓಡಾಡುವಾಗ ಸದಾ ಬೆನ್ನಿನ ಹಿಂದೆ ಒಂದು ಪೊರಕೆಯನ್ನು ಕಟ್ಟಿಕೊಂಡಿದ್ದು ಅವರು ನಡೆದು ಮುಂದೆ ಹೋಗುತ್ತಿದ್ದರೆ ಅದು ಅವನು ನಡೆದ ಹೆಜ್ಜೆಗಳನ್ನು ಸ್ವಚ್ಛಗೊಳಿಸುತ್ತಿರಬೇಕು. ಇನ್ನು ಮೈ ಕೈ ಮುಟ್ಟುವುದಂತೂ ಇಲ್ಲವೇ ಇಲ್ಲ. ಅದರಲ್ಲೂ ಕೆಳಜಾತಿಗಳವರನ್ನು ಸ್ಪರ್ಶಿಸುವುದು ಮೈಲಿಗೆಯೇ ಆಗುತ್ತದೆ. ಎಲ್ಲ ಚಟುವಟಿಕೆಗಳಿಂದ ಕೆಳಜಾತಿಗಳು ದೂರವೇ ಇರಬೇಕಾಗುತ್ತಿತ್ತು. ಕನಕದಾಸರು ಇದನ್ನು ಪ್ರತಿರೋಧಿಸುತ್ತಾರೆ. ಅವರು ಪ್ರತಿರೋಧಿಸುವ ವಿಧಾನವೂ ಕೂಡಾ ಉಳಿದ ಭಾರತೀಯ ಅನುಭಾವಿ ಪರಂಪರೆಯ ಭಕ್ತ ಸಂತರಿಗಿಂತ ಭಿನ್ನಬಗೆಯಲ್ಲಿ. ಅವರ ಅಭಿವ್ಯಕ್ತಿ ವಿಧಾನವೇ ಬೇರೆ ಕನಕದಾಸರ ಅಭಿವ್ಯಕ್ತಿ ವಿಧಾನವೇ ಬೇರೆ. ಈ ಕೀರ್ತನೆಯನ್ನು ಗಮನಿಸಿ.

"ಎಂಜಲೆಂಜಲು ಎಂಬುದು ನುಡಿ
ಎಂಜಲಲ್ಲವೆ ವಾರಿ ಜಲಚರ
ದೆಂಜಲಲ್ಲವೆ ಹಾಲುಕರುವಿನ ಎಂಜಲೆನಿಸಿರದೆ
ಎಂಜಲಲ್ಲಿಯದೆಲ್ಲಿಯುಂ ಪರ
ರೆಂಜಲಲ್ಲದೆ ಬೇರೆ ಭಾವಿಸ
ಲೆಂಜಲುಂಟೆ ದೇವ ರಕ್ಷಿಸು ನಮ್ಮನನವರತ"

ಈ ಕೀರ್ತನೆಯಲ್ಲಿ ಕನಕದಾಸರು ಕಾವ್ಯಲಿಂಗಾಲಂಕಾರವನ್ನು ಬಳಸಿದ್ದಾರೆ. ಕಾವ್ಯಲಿಂಗಾಲಂಕಾರದ ಲಕ್ಷಣವೆಂದರೆ ಸಮರ್ಥನೀಯುವಾದದ್ದನ್ನು ಸಮರ್ಥಿಸುವುದು ಈ ಕಾವ್ಯಾಲಂಕಾರದ ಕಾರ್ಯವಾಗಿರುತ್ತದೆ. ಜಾತಿಪದ್ಧತಿ ಅದರ ಆಚರಣೆ ಸಮರ್ಥನೀಯುವಾದದ್ದಲ್ಲ. ಜಾತಿ ಇಲ್ಲವೆಂಬುದು ಸಮರ್ಥನೀಯವಾದದ್ದು ಈ ಸಮರ್ಥನೀಯವಾದದ್ದನ್ನು ಈ ಕೀರ್ತನೆ ಸಮರ್ಥಿಸುತ್ತದೆ. ಜಾತಿ, ಬೇಧ, ಮತ, ಪಂಥಗಳಿಲ್ಲದ ವಿಶ್ವಮಾನವತೆಯನ್ನು ಸಮರ್ಥಿಸುತ್ತದೆ. ಇಡೀ ಪ್ರಕೃತಿ ಎಂಜಲೆ. ಪ್ರಾಣಿ, ಪಕ್ಷಿ, ಗಿಡಮರಬಳ್ಳಿ, ನೀರು ಎಲ್ಲವೂ ಪರಸ್ಪರ ಆಶ್ರಯಿಸಿಕೊಂಡು ಅಸ್ತಿತ್ವದಲ್ಲಿರುವುದರಿಂದ, ಒಂದು ಜೈವಿಕ ಜಾಲವಾಗಿರುವುದರಿಂದ ಎಲ್ಲವೂ ಒಂದು ರೀತಿಯಲ್ಲಿ ಎಂಜಲೇ ಆಗಿದೆ. ಪುರೋಹಿತ ವರ್ಗ ಶ್ರೇಷ್ಠವೆಂದು ಕುಡಿಯುವ ಹಾಲು ಎಂಜಲೆ, ಕುಡಿಯುವ ನೀರು ಎಂಜಲೆ, ಹಣ್ಣು ಹಂಪಲು, ಎಲೆ ಗಿಡ, ಸೊಪ್ಪು ಎಲ್ಲವನ್ನು ಪಕ್ಷಿಗಳು, ಪ್ರಾಣಿಗಳು, ಕ್ರಿಮಿಕೀಟಗಳು ಸ್ಪರ್ಶಿಸಿರುತ್ತವೆ. ಅವೂ ಎಂಜಲೆ. ಇಂತಹ ಎಂಜಲು ಎಲ್ಲಾ ಕಡೆಯೂ ಇರುವಾಗ ಕೆಳಜಾತಿಗಳ ಎಂಜಲು ಎಂದು ಹೀಯಾಳಿಸಿ ಅವರನ್ನು ದೂರವಿಟ್ಟು ಅಮಾನವೀಯವಾಗಿ ವರ್ತಿಸುವುದೇಕೆ ಎಂಬುದು ಕನಕದಾಸರ ಪ್ರಶ್ನೆ ಅಸ್ಪೃಶ್ಯತೆಯನ್ನು ಕನಕದಾಸರು ವಿರೋಧಿಸುವ ಸ್ವರೂಪ ಇದು. ಅದನ್ನು ವಿರೋಧಿಸುವುದು ಪ್ರಕೃತಿಯಲ್ಲಿರುವ ಚೇತನಾಚೇತನ ವಸ್ತುಗಳಿಂದಲೇ ಈ ಪ್ರತಿರೋಧವು ಮುಂದಿನ ಒಂದು ಕೀರ್ತನೆಯಲ್ಲಿ

ಸ್ಪಷ್ಟವಾಗಿ ಅಭಿವ್ಯಕ್ತಿಯಾಗಿರುವ ಕ್ರಮವನ್ನು ಕಾಣಬಹುದು. ಇದು ಬಹಳ ಜನಪ್ರಿಯವಾಗಿರುವ ಎಲ್ಲರೂ ಉದ್ಧರಿಸುವ ಕೀರ್ತನೆಯಾದರೂ ಅದು ಬೇರೆ ಬೇರೆ ಅರ್ಥ ಸಾಧ್ಯತೆಗಳನ್ನು ಹೊರಡಿಸುವುದರಿಂದ ಇಲ್ಲಿ ಉಲ್ಲೇಖಿಸುತ್ತಿದ್ದೇನೆ.

ಕುಲಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರು ಬಲ್ಲಿರ ।ಪ।
ಹುಟ್ಟದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟು ಕಾಣಿಸಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆ ಕಂಡ್ಯ ಮನುಜ ॥1॥

ಜಲವೇ ಸಕಲ ಕುಲಕ್ಕೆ ತಾಯಲ್ಲವೆ
ಜಲದ ಕುಲವನೇನಾದರೂ ಬಲ್ಲಿರ
ಜಲದ ಬೊಬ್ಬುಳಿಯಂತೆ ಸ್ಥಿರವಲ್ಲವೀದೇಹ
ನೆಲೆಯನರಿತು ನೀ ನೆನೆ ಕಂಡ್ಯ ಮನುಜ ॥2॥

ಹರಿಯೇ ಸರ್ವೋತ್ತಮ ಹರಿಯೇ ಸರ್ವೇಶ್ವರ
ಹರಿಮಯವೆಲ್ಲವನುತ ತಿಳಿದು
ಸಿರಿ ಕಾಗಿ ನೆಲೆಯಾದಿ ಕೇಶವ ರಾಯನ
ಚರಣ ಕಮಲವ ಕೀರ್ತಿಸುವನೆ ಕುಲಜ ॥3॥

ಕನಕದಾಸರಿಗೆ ಶಿಷ್ಯ ಸಮಾಜದವರು ಎಂದು ಕರೆಯಿಸಿಕೊಳ್ಳುವ ಮೇಲ್ಜಾತಿಯವರ ಸಂಪರ್ಕವೂ ಇತ್ತು. ಅತ್ಯಂತ ಕೀಳು ಕುಲದಲ್ಲಿ ಹುಟ್ಟಿರುವ ಸಾಮಾನ್ಯ ಅಸ್ಪೃಶ್ಯನ ಒಡನಾಟವೂ ಇತ್ತೆಂಬುದು ಅವರ ಕೀರ್ತನೆಗಳಿಂದ, ಅವರ ಕಾವ್ಯಗಳಿಂದ ತಿಳಿದುಬರುತ್ತದೆ. ಇವರಿಬ್ಬರ ಅಂದರೆ ಶ್ರೇಷ್ಠ ಜಾತಿ ಎನಿಸಿಕೊಂಡವರ ಮತ್ತು ಕುಲೀನ ಎನ್ನಿಸಿಕೊಂಡವರ ಸಾಮಾಜಿಕ ಸ್ಥಿತಿಗತಿಗಳನ್ನು ಒಟ್ಟೊಟ್ಟಿಗೆ ಇಟ್ಟುಕೊಳ್ಳುವುದು ಕನಕದಾಸರ ಸಮಷ್ಠಿ ಮನಸ್ಸಿಗೆ ಅತ್ಯಂತ ಸಹಜ ವಿಷಯ.

ಕತ್ತಲು-ಬೆಳಕು, ನ್ಯಾಯ-ಅನ್ಯಾಯ, ತಪ್ಪು-ಒಪ್ಪು, ಒಳಿತು-ಕೆಡಕು, ಬೇಕು-ಬೇಡ, ಕಪ್ಪು-ಬಿಳುಪು, ಕತ್ತಲು-ಬೆಳಕು ಇವುಗಳನ್ನು ವಿಶ್ಲೇಷಿಸುವ, ವಿಮರ್ಶಿಸುವ, ಪುನರ್ ವಿಮರ್ಶಿಸುವ ಮನಸ್ಥಿತಿ ಕನಕದಾಸರಿಗಿತ್ತು. ಆದ್ದರಿಂದಲೇ ಅವರು ತಮ್ಮ ಅಭಿವ್ಯಕ್ತಿಯಲ್ಲಿ ಜಾತೀಯತೆಯ ವಿಷಯ ಬಂದಾಗ ಅದನ್ನು ಪ್ರತಿರೋಧಿಸಿ ಮಾನವತ್ವವನ್ನು ಸಾರಲು ತೊಡಗುತ್ತಾರೆ. ಆ ಕೀರ್ತನೆಗಳಲ್ಲಿ ವ್ಯಕ್ತವಾಗುವ ತಾತ್ವಿಕ ವಿಚಾರಗಳನ್ನು ತಿರಸ್ಕರಿಸುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಅಷ್ಟರ ಮಟ್ಟಿಗೆ ಅವು ತರ್ಕಬದ್ಧವಾಗಿರುತ್ತವೆ. ನಿಖರವಾಗಿರುತ್ತವೆ. ಮೇಲಿನ ಕೀರ್ತಿಯಲ್ಲಿ ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ಎಂದು ಪ್ರಶ್ನಿಸುತ್ತಾರೆ.

ಸಾವಿರಾರು ಜಾತಿಗಳಿರುವ ಈ ದೇಶದಲ್ಲಿ ಕುಲದ ಮೂಲವನ್ನು ಹುಡುಕುವುದರಲ್ಲಿ ಇಂದಿಗೂ ಗೊಂದಲಗಳಿವೆ. ಅಷ್ಟೇ ಏಕೆ ಪುರಾಣ ಸ್ಮೃತಿ, ಶಾಸ್ತ್ರಗಳನ್ನು ಓದಿಕೊಂಡುಬಂದಿರುವ ಪುರೋಹಿತ ಶಾಹಿಯನ್ನು ಅವರ ಕುಲದ ಮೂಲವನ್ನು ತಿಳಿಸಿ ಹೇಳಿರೆಂದು ಪ್ರಶ್ನಿಸುತ್ತಾ ಹೋದಾಗ ಅವರು ಕುಲದ ಮೂಲ ಹೇಳಲು ಸಾಧ್ಯವಾಗುವುದಿಲ್ಲ. ಹೇಗೆ ಪ್ರಕೃತಿಯಲ್ಲಿರುವ ಸಕಲ ಜೀವರಾಶಿಗಳಿಗೂ ತಾಯಿಯಾಗಿರುವ ಜಲದ ಕುಲವನ್ನು ಅರಸುವುದಕ್ಕೆ ಸಾಧ್ಯವಾಗುವುದಿಲ್ಲವೋ ಹಾಗೆಯೇ ಮನುಷ್ಯನು ತಾನೇ ಮಾಡಿಕೊಂಡಿರುವ ಕುಲದ ಮೂಲಗಳನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಬೇಕಾದರೆ ಊಹೆ ಮಾಡಬಹುದಷ್ಟೆ. ಹೀಗಿರುವಾಗ ಜಾತಿ–ಕುಲ ಎಂದು ಹೊಡೆದಾಡುವುದರಲ್ಲಿ ಅರ್ಥವಿಲ್ಲವೆಂದು ಕನಕದಾಸರು ಮೇಲಿನ ಕೀರ್ತನೆಯಲ್ಲಿ ತಮ್ಮ ವಿಚಾರವನ್ನು ಮಾಡಿಸಿದ್ದಾರೆ.

ಮತ್ತೊಂದು ಕೀರ್ತನೆಯಲ್ಲಿ ಮಾತೆಯುದರದೊಳು, ನವಮಾಸ, ಮಲಮೂತ್ರದೊಳು ಯಾತನೆಯ ಯೋನಿ ಮುಖ ಮಾರ್ಗವಿಡಿದು ಭೂತಳಕೆ ಬಂದ ಹದನೇನು ತೀರಿಸಿಕೊಂಡೆ? ಜಾತಿ ಯಾವುದು? ನಿನ್ನ ಹೆಸರೇನು ಮರುಳೆ? ಎಂದು ಕನಕದಾಸರು ಪ್ರಶ್ನಿಸುತ್ತಾರೆ. ಈ ಪ್ರಶ್ನೆಯು ಕನಕದಾಸರ ಜ್ಞಾನದ ಎತ್ತರ ಮತ್ತು ಅವರ ವೈಚಾರಿಕ ತಾತ್ವಿಕ ನೆಲೆಗಳ ಪ್ರಖರತೆಯನ್ನು ಗಮನಿಸಬಹುದು. ಜಾತಿಕುಲದ ವಿರುದ್ಧದ ಪ್ರತಿರೋಧ ಉಳಿದ ದಾಸರಿಗೆ (ಅಂದರೆ ಕನ್ನಡ ದಾಸಕೂಟದವರಿಗೆ) ಇರಲಿಲ್ಲ. ಆದರೆ ಕನಕದಾಸರಿಗೆ ಅದರ ಅಗತ್ಯವಿತ್ತು. ಏಕೆಂದರೆ ತಾನೇ ಕೀಳು ಕುಲದವನಾಗಿದ್ದು ಪಂಡಿತ ಮಂಡಲಿ ಮತ್ತು ಪುರೋಹಿತರಿಂದ ಅನೇಕ ಬಾರಿ ಅವನಮಾನಿತನಾಗಿದ್ದರು. ಹೀಗಾಗಿ ಅವರು ತಮ್ಮ ಜ್ಞಾನ ಮತ್ತು ವೈಚಾರಿಕ ಪ್ರಖರತೆಯನ್ನು ಬೆಳೆಸಿಕೊಂಡು ಪುರೋಹಿತ ಶಾಹಿಯನ್ನು ಎದುರಿಸಿದರು. ಅವರಿಗಾದ ಅವಮಾನಗಳು, ಜಾತಿಯ ನಿಂದೆಗಳು, ಕನಕದಾಸರಿಗೆ ಒಂದು ಬಗೆಯ ಸೃಜನಶೀಲ ಶಕ್ತಿಯಾಗಿ ಕ್ರಿಯಾಶೀಲವಾದವು. ಸಮಾಜದಲ್ಲಿ ಕನಕದಾಸರ ವೈಯಕ್ತಿಕ ಬದುಕು ಅವಮಾನಗಳಿಂದಲೇ ತುಂಬಿತ್ತು ಎಂಬುದಕ್ಕೆ ಆಧಾರಗಳಿವೆ. ಅಂದಿನ ಸಾಮಾಜಿಕ ಸ್ಥಿತಿಗತಿಗಳು, ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಿಸರವನ್ನು ಸೂಕ್ಷ್ಮವಾಗಿ ಗಮನಿಸಿದರೆ ದಾಸಪರಂಪರೆಯಲ್ಲಿ ಏಕಾಂಗಿಯಾಗಿಯೇ ಕಾಣುತ್ತಾರೆ. ಹೀಗಾಗಿ ಅವರ ಸೃಜನಶೀಲ ಶಕ್ತಿಯ ವ್ಯಕ್ತಿತ್ವದಲ್ಲಿ ಧಾರ್ಮಿಕತೆ ಒಂದು ಕಡೆಗೆ ವೈಚಾರಿಕತೆ ಮತ್ತೊಂದು ಕಡೆಗೆ ಅರಳಿವೆ. ಧಾರ್ಮಿಕತೆ ಎಂದರೆ ಸ್ಥಗಿತಗೊಂಡ ಮತಧರ್ಮವಲ್ಲ. ಚಲನಶೀಲತೆ ತುಂಬಿದ ಮಾನವತಾ ಧರ್ಮ. ಈ ಸಂದರ್ಭದಲ್ಲಿ ತ.ಸು.ಶಾಮರಾಯರು ಹೇಳುವ ಮಾತುಗಳು ನೆನಪಿಗೆ ಬರುತ್ತವೆ "ಆಗ ಸಮಾಜದಲ್ಲಿ ಧರ್ಮ ನಿಯಂತ್ರಣ ಕರ್ತೃಗಳಾಗಿ ಜನರಿಗೆ ಮಾರ್ಗದರ್ಶನ ಮಾಡಿಸಬೇಕಾಗಿದ್ದ ಬ್ರಾಹ್ಮಣವರ್ಗ, ಅಂತಃ ಶೂನ್ಯವಾಗಿ, ಕೇವಲ ಡಾಂಭಿಕತನ, ಮಡಿವಂತಿಕೆ, ಅರ್ಥಹೀನವಾದ ಆಚಾರ ಜಾತೀಯತೆಗಳಲ್ಲಿ ಪರಿಣಾಮಗೊಂಡಿತ್ತು. ಕುರುಡನನ್ನು ಕೈಹಿಡಿದು ಹೋಗುವ ಕುರುಡನಂತೆ

ಜನಜಂಗುಳಿ ಅವರನ್ನು ಅನುಸರಿಸಬೇಕಾಗಿತ್ತು. ಮೂಕ ಪ್ರಾಣಿಗಳಂತೆ ತಮ್ಮನ್ನು ಅನುಸರಿಸಿ ಬರುತ್ತಿದ್ದ ಆ ಜನರನ್ನು ದೈವ ಧರ್ಮಗಳ ಹೆಸರಿನಲ್ಲಿ ಶೋಷಿಸಿ, ಸ್ವಾರ್ಥ ಸಾಧನೆ ಮಾಡಿಕೊಳ್ಳುತ್ತಿದ್ದ ಪುರೋಹಿತ ವರ್ಗವನ್ನು ಕಂಡು ಕನಕದಾಸ ಅಪಾರ ಹೇಸಿರಬೇಕು" ಇಂತಹ ಪರಿಸರದಲ್ಲಿದ್ದ ಕನಕದಾಸರು ತಮ್ಮ ವೈಚಾರಿಕ ಪ್ರಖರತೆ ಮತ್ತು ಜ್ಞಾನದಿಂದ ಕ್ರಿಯಾಶೀಲ ಮನೋಭಾವವನ್ನು ಬೆಳೆಸಿಕೊಂಡು ಜಾತಿ ವ್ಯವಸ್ಥೆಗೆ ಕಾರಣರಾದವರನ್ನು ವಿರೋಧಿಸುತ್ತಾರೆ. ನಿಸರ್ಗದಲ್ಲಿರುವ ಎಲ್ಲಾ ಪ್ರಾಣಿ, ಪಕ್ಷಿಗಳ ಅದರಲ್ಲೂ ಮಾನವನ ಹುಟ್ಟಿನ ನೈಸರ್ಗಿಕವಾದ ಕ್ರಿಯೆಯನ್ನು ಒಂದು ಕೀರ್ತನೆಯಲ್ಲಿ ಅಭಿವ್ಯಕ್ತಿಸಿ ಜಾತಿ ವ್ಯವಸ್ಥೆಯನ್ನು ತರ್ಕಬದ್ಧವಾಗಿ ಟೀಕಿಸಿರುವುದು ಮತ್ತು ಪುರೋಹಿತಶಾಹಿಗೆ ಅದನ್ನು ಮನವರಿಕೆ ಮಾಡಿಕೊಟ್ಟಿರುವುದು ಅವರ ಸೃಜನಶೀಲ ಪ್ರತಿಭೆಯ ಎತ್ತರವನ್ನು ಪ್ರತಿಬಿಂಬಿಸುತ್ತದೆ. ಇದೇ ಸಂದರ್ಭದಲ್ಲಿ ಜಾತಿಯನ್ನು ವಿರೋಧಿಸುವ ಮತ್ತೊಂದು ಕೀರ್ತನೆಯನ್ನು ಉಲ್ಲೇಖಿಸುವುದು ಉಚಿತವಾಗಿದೆ.

ಕುಲ ಕುಲ ಕುಲವೆನ್ನುತಿಹರು
ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ–
ಕೆಸರೊಳು ತಾವರೆ ಪುಟ್ಟಲು ಅದು ತಂದು
ಬಿಸಜನಾಭನಿಗರ್ಪಿಸಲಿಲ್ಲವೆ
ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವ
ವಸುಧೆಯೊಳಗೆ ಭೂಸುರರುಣಲಿಲ್ಲವೆ
ಮೃಗಗಳ ಮೈಯಲಿ ಪುಟ್ಟಿದ ಕತ್ತುರಿಯ
ತೆಗೆದು ಪೂಸುವರು ದ್ವಿಜರೆಲ್ಲರು
ಬಗೆಯಿಂದ ನಾರಾಯಣ ನ್ಯಾವಕುಲ
ಅಗಜ ವಲ್ಲಭ ನ್ಯಾತರ ಕುಲದವರು
ಆತ್ಮ ಯಾವಕುಲ ಜೀವ ಯಾವಕುಲ
ತತ್ವೇಂದ್ರಿಯಗಳ ಕುಲ ಪೇಳಿರಯ್ಯಾ
ಆತ್ಮಾಂತರಾತ್ಮ ನೆಲೆಯಾದಿ ಕೇಶವನು
ಆತನೊಲಿದ ಮೇಲೆ ಯಾತರ ಕುಲವಯ್ಯ

ಈ ಕೀರ್ತನೆಯು ಕಾವ್ಯಲಿಂಗಾಲಂಕಾರವಾಗಿದ್ದು ಸಮರ್ಥನೀಯವಾದದ್ದನ್ನು ಸಮರ್ಥಿಸುತ್ತದೆ. ಜಾತಿ ವ್ಯವಸ್ಥೆ ಇಲ್ಲವೆಂಬುದು ಸಮರ್ಥನೀಯವಾದದ್ದು. ಅದನ್ನು ಮೇಲಿನ ಕೀರ್ತನೆಯಲ್ಲಿರುವ ಅಲಂಕಾರಗಳು ಜಾತಿ ಎಂಬುದನ್ನು ವಿರೋಧಿಸುತ್ತವೆ. ಕೆಸರು ಹಸುವಿನ ಮಾಂಸ, ಮೃಗಗಳು ಇವು ಅಶುಚಿಯನ್ನು ಕೊಳಕನ್ನು ಸೂಚಿಸುತ್ತವೆ. ಆದ್ದರಿಂದ ಇವು ಸ್ಪರ್ಶಕ್ಕೆ ಅನರ್ಹವಾದವುಗಳು. ತಾವರೆ ಕ್ಷೀರ, ಕಸ್ತೂರಿ, ಇವು ಮೇಲಿನ ಅಸ್ಪೃಶ್ಯವೆಂದು ಭಾವಿಸಿರುವುಗಳಿಂದಲೇ ಹುಟ್ಟಿದಂತಹವು. ಆದರೆ ಮಾನವನಾದವನು ಕೆಳಜಾತಿಯಲ್ಲಿ ಹುಟ್ಟಿದ್ದಾನೆಂಬ ಕಾರಣಕ್ಕೆ ಅವನನ್ನು

ಮುಟ್ಟಿಸಿಕೊಳ್ಳುವಂತಿಲ್ಲ. ಇದು ಜೀವ ವಿರೋಧಿಯಾದದ್ದು, ಮಾನವ ವಿರೋಧಿಯಾದದ್ದು ಎಂಬುದು ಕನಕದಾಸರ ಅಭಿಪ್ರಾಯ, ಕೆಸರಿನಲ್ಲಿ ಹುಟ್ಟುವ ಕಮಲ ವಿಷ್ಣುವಿನ ಪೂಜೆಗೆ ಬಳಸಬಹುದು. ಮಾಂಸದಲ್ಲಿ ಹುಟ್ಟಿದ ಹಾಲನ್ನು ಕುಡಿಯಬಹುದು ಮೃಗದ ಮೈಯಲ್ಲಿ ಹುಟ್ಟಿದ ಕಸ್ತೂರಿಯನ್ನು ಮೈಗೆ ಹಚ್ಚಿಕೊಳ್ಳಬಹುದು. ಆದರೆ ಎಲ್ಲರಂತೆ ರಕ್ತ ಮಾಂಸ ಮನಸ್ಸು ಭಾವನೆಗಳನ್ನು ಹೊಂದಿರುವ ಮನುಷ್ಯನನ್ನು ಏಕೆ ಮುಟ್ಟಿಸಿಕೊಳ್ಳಬಾರದು ಎಂಬ ವಿಚಾರ ಈ ಕೀರ್ತನೆಯಲ್ಲಿದೆ. ಕೆಳಜಾತಿಯ ಮನುಷ್ಯರು ಮುಟ್ಟಿಸಿಕೊಳ್ಳಲು ಅರ್ಹರಲ್ಲದವರಾದರೆ ವಿಷ್ಣು, ಶಿವ, ಇವರ ಕುಲಗಳ ಬಗ್ಗೆ ತಿಳಿದುಕೊಂಡಿರುವಿರಾ ಎಂಬ ಪ್ರಶ್ನೆಯನ್ನು ಎತ್ತುತ್ತಾರೆ. ಈ ಪ್ರಶ್ನೆಯೇ ಇಲ್ಲಿ ಮುಖ್ಯವಾದದ್ದು. ವಿಷ್ಣು ಮತ್ತು ಶಿವ ಪುರೋಹಿತಶಾಹಿಯ ಎರಡು ಕಣ್ಣುಗಳಿದ್ದಂತೆ. ಅಷ್ಟೇ ಏಕೆ ಪುರೋಹಿತಶಾಹಿಯ ಕಷ್ಟಕಾಲದಲ್ಲಿ ನೆರವಾಗುವ ಈ ದೇವರುಗಳು ಅವರ ಹೃದಯವಿದ್ದಂತೆ. ಕೆಳವರ್ಗದವರ ದೇವತೆಗಳು ಮತ್ತು ಎಲ್ಲಾ ದೇವರುಗಳನ್ನು ವಿಷ್ಣು ಮತ್ತು ಶಿವನೊಂದಿಗೆ ಸಮೀಕರಿಸಿ ಕೆಳಜಾತಿಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ವಿಷ್ಣು ಮತ್ತು ಶಿವ ಬೇಕೇ ಬೇಕು. ರಾಕ್ಷಸರು ಎಂದು ಕರೆಯಲ್ಪಡುವವರು ಸಾಮಾನ್ಯವಾಗಿ ಕೆಳಜಾತಿಯ ದೇವರುಗಳೇ. ಅವರನ್ನು ಕೊಲ್ಲಿಸುವ ಬಗೆಯನ್ನು ಕಂಡರೆ ಪುರೋಹಿತಶಾಹಿಯ ಹುನ್ನಾರಗಳೇನು ಎಂಬುದು ಮನವರಿಕೆಯಾಗುತ್ತದೆ. ಈ ಕೀರ್ತನೆಯಲ್ಲಿ ವಿಷ್ಣುವಿನ ಮತ್ತು ಶಿವನ ಕುಲವನ್ನೇ ಪ್ರಶ್ನಿಸಿ ಕೊನೆಗೆ ಆತ್ಮ ಜೀವ ತತ್ವೇಂದ್ರಿಯಗಳಿಗೆ ಹೇಗೆ ಜಾತಿ ಕುಲವಿಲ್ಲವೋ ಮನುಷ್ಯನಿಗೂ ಸಹಜಾತಿ ಕುಲವಿಲ್ಲವೆಂದು ಕನಕದಾಸರು ಖಚಿತವಾಗಿ ಸ್ಪಷ್ಟವಾಗಿ ಸಾರುತ್ತಾರೆ.

ಮೊದಲೇ ತಿಳಿಸಿದಂತೆ ಕನಕದಾಸರು ತಮ್ಮ ಪ್ರತಿಭೆ, ಜ್ಞಾನ ಪ್ರಖರ ವೈಚಾರಿಕ ಶಕ್ತಿಯಿಂದ ಪ್ರಖರವಾದ, ಕ್ರಿಯಾಶೀಲವಾದ ಸೃಜನಶೀಲ ಶಕ್ತಿಯಿಂದ ಕೀರ್ತನೆಗಳ ಮೂಲಕ ಜಾತಿ ವ್ಯವಸ್ಥೆಯನ್ನು ತಮ್ಮದೇ ಆದ ರೀತಿಯಲ್ಲಿ ಪ್ರತಿರೋಧಿಸಿದ್ದಾರೆ. ಈ ವಿರೋಧ ಅಷ್ಟೇನು ಸುಲಭವಲ್ಲ. ಭಕ್ತಿಪಂಥದ ಒಳಗಡೆಯೇ ಇದ್ದು ಪ್ರಧಾನ ನೆಲೆಯಲ್ಲಿದ್ದ ಅಥವಾ ಸ್ಥಾನದಲ್ಲಿದ್ದ ವಿಷ್ಣುವನ್ನೇ ಪ್ರಶ್ನಿಸುವುದು ಸಾಮಾನ್ಯರಿಂದ ಸಾಧ್ಯವಾಗುವುದಿಲ್ಲ. ಅಸಾಮಾನ್ಯವಾದ ಜ್ಞಾನ, ವೈಚಾರಿಕ ಪ್ರಖರತೆ ಇದ್ದುದರಿಂದಲೇ ಕನಕದಾಸರು ವಿಷ್ಣುವನ್ನೇ ಪ್ರಶ್ನಿಸುತ್ತಾರೆ. ಈ ಸಾಲುಗಳನ್ನು ಗಮನಿಸಿ.

ಆರು ಬದುಕಿದರಯ್ಯಾ ಹರಿ ನಿನ್ನ ನಂಬಿ
ತೋರು ಈ ಧರೆಯೊಳಗೆ ಒಬ್ಬರನೂ ಕಾಣೆ
ಕಲಹ ಬಾರದ ಮುನ್ನ ಕರ್ಣನೊಬ್ಬನ ಕೊಂದೆ
ಸುಲಭದಲ್ಲಿ ಕೌರವನ ಮನೆಯ ಮುರಿದೆ
ನೆಲನ ಬೇಡಲು ಹೋಗಿ ಬಲಿಯ ಭೂಮಿಗೆ ತುಳಿದೆ
ಮೊಲೆಯನುಣ್ಣಲು ಹೋಗಿ ಪೂತನಿಯ ಕೊಂದೆ.

ಇಲ್ಲಿ ಬಳಕೆಯಾಗಿರುವ ಅಲಂಕಾರಗಳು ವ್ಯಾಜ್ಯಸ್ತುತಿ ಅಲಂಕಾರ. ವ್ಯಾಜ್ಯಸ್ತುತಿ ಅಲಂಕಾರದಲ್ಲಿ ನಿಂದೆಯ ಮೂಲಕ ಸ್ತುತಿ, ಸ್ತುತಿಯ ಮೂಲಕ ನಿಂದೆಯನ್ನು ರವಾನಿಸಲಾಗುತ್ತದೆ. ಮೇಲಿನ ಕೀರ್ತನೆಯ ಸಾಲುಗಳು ಸ್ತುತಿಯ ಮೂಲಕ ನಿಂದೆ ಇದೆ. ಈ ನಿಂದೆ ಕನಕದಾಸರು ಮಾಡಿರುವುದು ಉಚಿತವಾಗಿಯೇ ಇದೆ. ಕರ್ಣ, ಕೌರವ, ಬಲಿ ಪೂತನಿ ಇವರ್‍ಯಾರೂ ವೈದಿಕರಲ್ಲ. ಇವರೆಲ್ಲ ಕೆಳಜಾತಿಗಳವರೇ ಆದುದರಿಂದ ಕೃಷ್ಣ ಇಲ್ಲವೇ ವಿಷ್ಣು ಅವರನ್ನು ರಕ್ಷಿಸಲಿಲ್ಲ. ಇವರನ್ನೆಲ್ಲಾ ಉಪಾಯವಾಗಿಯೇ ಕೊಲ್ಲುತ್ತಾನೆ. ಈ ಕಾರಣಕ್ಕಾಗಿ ಕನಕದಾಸರು ಹರಿಯನ್ನೆ ನಿಂದಿಸುವ ಮಟ್ಟಕ್ಕೆ ಹೋಗುತ್ತಾರೆ. ಜಾತಿ ವ್ಯವಸ್ಥೆಯನ್ನು ಈ ನೆಲೆಗಳಲ್ಲಿ ವಿರೋಧಿಸುವ ಕನಕದಾಸರು ವಿಶ್ವ ಮಾನವ ಪ್ರಜ್ಞೆಯುಳ್ಳವರು. ತಾವು ನಂಬಿದ ದೇವರನ್ನೇ ಜಾತಿ ವಿಚಾರದಲ್ಲಿ ಪ್ರಶ್ನಿಸುವ ಸಂತ ಇಲ್ಲವೇ ಕವಿಯನ್ನು ಬೇರೆ ಎಲ್ಲೂ ಕಾಣಲು ಸಾಧ್ಯವೇ ಇಲ್ಲ.

ಕನಕದಾಸರ ಕೀರ್ತನೆಗಳನ್ನು ಅಧ್ಯಯನ ಮಾಡುವಾಗ ಒಂದು ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅವರ ಅನುಭವದ ವಿಸ್ತಾರ, ವ್ಯಾಪ್ತಿ ಹಾಗೂ ಅಭಿವ್ಯಕ್ತಿಯ ಸ್ವರೂಪ ವಿಶಿಷ್ಟವಾದದ್ದು. ಇದಕ್ಕೆ ಕಾರಣ ವೈದಿಕ ಪರಂಪರೆಯ ಸಾಂಪ್ರದಾಯಿಕ ಧರ್ಮ ಮತ್ತು ಆಚರಣೆಗಳಿಂದ ಪಡೆದ ಸೀಮಿತ ಅನುಭವ ಕನಕದಾಸರದಲ್ಲ ಬದಲಿಗೆ ಅವೈದಿಕ ಪರಂಪರೆಯ ಅದರಲ್ಲೂ ಬೌದ್ಧ ಪರಂಪರೆಯ ಜ್ಞಾನದ ಪ್ರಭಾವ ಇವರ ಮೇಲಾಗಿದೆ. ಇದರ ಜೊತೆಗೆ ವೈಯಕ್ತಿಕವಾದ ಬದುಕಿನ ಬವಣೆ ಅವಮಾನದಂತಹ ಉತ್ಕಟ ಭಾವಾವೇಶಗಳು ಅವರಲ್ಲಿ ಒಂದುಗೂಡಿ ಅವರ ಸೃಜನಶೀಲ ಶಕ್ತಿಯನ್ನು ರೂಪಿಸಿವೆ. ಆದ್ದರಿಂದ ಕನಕದಾಸರು ಸಾಮಾಜಿಕ ವಿಸಂಗತಿಗಳ ಬಗ್ಗೆ ಬೂಟಾಟಿಕೆ, ಡಂಭಾಚಾರದ ಬದುಕು, ಜಾತಿ ಮತಗಳಿಂದ ಮಾನವನ ಹೃದಯದಲ್ಲಿ ಮೂಡಿದ ಬಿರುಕುಗಳ ಬಗ್ಗೆ ಉತ್ಕಟ ಪ್ರತಿರೋಧ ಅಸಹನೆಗಳು ಅವರ ಕೀರ್ತನೆಗಳಲ್ಲಿ ಅಭಿವ್ಯಕ್ತಗೊಂಡಿವೆ. ಭಕ್ತಿಯ ಉಲ್ಲಾಸಕ್ಕಿಂತ ಪ್ರತಿರೋಧವೇ ಹೆಚ್ಚಾಗಿದೆ. ಬೆಳ್ಳಕ್ಕಿಯ ಡಂಭತನ, ಗುಂಡು ಮುಳುಗನ ಹಕ್ಕಿಯ ಧ್ಯಾನ, ಮಂಡೂಕನ ಧ್ಯಾನ, ಗಾಣದೆತ್ತಿನ ಪ್ರದಕ್ಷಿಣೆ, ಮಾಣಿಕ್ಯದ ರಾಶಿಯಲ್ಲಿ ಅಣಿಮುತ್ತು ಹುಡುಕುವ ಐವರು ಅಂಧಕರು ಈ ಸಾಲುಗಳಲ್ಲಿ ವ್ಯಕ್ತವಾಗಿರುವ ವಿಚಾರ ಮೇಲು ನೋಟಕ್ಕೆ ಮೌಢ್ಯದ ಭಕ್ತಿಯ ಆಚರಣೆಗಳೆಂದು ತೋರಿದರೂ ವಾಸ್ತವವಾಗಿ ಸಾಮಾಜಿಕ ಅಸಮಾನತೆಯನ್ನುಂಟುಮಾಡಿರುವ ಮೇಲು ಜಾತಿ ಪುರೋಹಿತಶಾಹಿ ವರ್ಗದ ವಿರೋಧವೇ ಇದೆ. ತಾವು ಮಾಡುವ ಆಚರಣೆಗಳಿಂದಲೇ ತಾವು ಶ್ರೇಷ್ಠ, ಉಳಿದವರು ಕನಿಷ್ಠ ಎಂಬ ಭಾವನೆ ಅವರಲ್ಲಿ ಬೇರೂರಿದೆ. ಆದ್ದರಿಂದ ಕನಕದಾಸರು ಮೇಲೆ ಹೇಳಿದಂತೆ ಆಚರಿಸಿಬಿಟ್ಟರೆ ಶ್ರೇಷ್ಠರಾಗುವುದಿಲ್ಲ ಮಾನವೀಯತೆಯ ಹೃದಯವನ್ನು ಬೆಳೆಸಿಕೊಳ್ಳಬೇಕು, ಮನುಷ್ಯರನ್ನು ಮನುಷ್ಯರನ್ನಾಗಿ ನೋಡಬೇಕು. ಆಗ ನಿಮ್ಮ ಆಚರಣೆಗಳಿಗೆ ಬೆಲೆ ಬರುತ್ತದೆ ಆದ್ದರಿಂದ ಮೊದಲು ಜಾತಿ ವ್ಯವಸ್ಥೆಯನ್ನು ಬಿಡಿ ಎಂಬುದು ಅವರ

ತಾತ್ವಿಕ ದರ್ಶನವಾಗಿದೆ. "ದಾಸದಾಸರ ಮನೆಯ ದಾಸಿಯ ಮಗ ನಾನು" ಎಂದು ಪ್ರಾರಂಭವಾಗುವ ಕೀರ್ತನೆಯಲ್ಲಿ ಶಂಕುದಾಸ, ಮಂಕುದಾಸ, ಮರುಳದಾಸ, ಬಡದಾಸ, ಕುರುಬದಾಸ, ಮಾದಿಗದಾಸ, ಆಳಿನಾಳಿನ ದಾಸ ಎಂದು ತಮ್ಮನ್ನೇ ತಾವು ಕೀಳು ಜಾತಿಗಳಲ್ಲಿ ಗುರುತಿಸಿಕೊಂಡಿದ್ದಾರೆ. ಇಲ್ಲಿ ಬರುವ ಹೆಸರುಗಳೆಲ್ಲ ಸಾಮಾನ್ಯವಾಗಿ ಹಿಂದುಳಿದ ಅಸ್ಪೃಶ್ಯ ಜಾತಿಗಳಲ್ಲಿನ ಜನರ ಹೆಸರುಗಳು. ಕುರುಬದಾಸ ಅಷ್ಟೇ ಅಲ್ಲ ಎಲ್ಲಾ ಹಿಂದುಳಿದ ಅಸ್ಪೃಶ್ಯ ಜಾತಿಗಳ ದಾಸ ಎಂಬ ಅರ್ಥ ಇಲ್ಲಿ ಸೂಚನೆಯಾಗಿದೆ. ಈ ಮೂಲಕ ಜಾತಿಯ ತಾರತಮ್ಯವನ್ನು ಕನಕದಾಸರು ವಿರೋಧಿಸುತ್ತಿದ್ದಾರೆ. ತನ್ನನ್ನು ಕೆಳಜಾತಿಗಳಲ್ಲಿ ಅಸ್ಪೃಶ್ಯ ವರ್ಗಗಳಲ್ಲಿ ಗುರುತಿಸಿಕೊಳ್ಳುವುದು ಮಾನವತಾವಾದಿಯಾದವನ ಲಕ್ಷಣ. ಕನಕದಾಸರು ಈ ರೀತಿ ಅಸ್ಪೃಶ್ಯ ಜಾತಿಗಳಲ್ಲಿ ಗುರುತಿಸಿಕೊಂಡು ಆ ಮೂಲಕ ವಿಶ್ವ ಪ್ರಜ್ಞೆಯುಳ್ಳವರಾಗಿ ವಿಶ್ವಾತ್ಮಕ ತಾತ್ವಿಕ ದರ್ಶನವನ್ನು ತಮ್ಮ ಕೀರ್ತನೆಗಳ ಮೂಲಕ ಕಟ್ಟಿಕೊಟ್ಟಿದ್ದಾರೆ.

ಜಾತಿ ವ್ಯವಸ್ಥೆಯನ್ನು ಪೋಷಿಸುವ ಅದನ್ನು ಬದಲಾವಣೆಯಾಗದಂತೆ ಜಡಗೊಳಿಸಿ ಕ್ರಿಯಾಶೀಲ ಹೀನವಾಗಿಸುವ ಧಾರ್ಮಿಕ ಆಚರಣೆಗಳು ವಿಧಿವಿಧಾನಗಳನ್ನು ಕನಕದಾಸರು ಕಟುವಾಗಿ, ಅರ್ಥಹೀನವಾದವು ಡಾಂಭಿಕತನದಿಂದ ಕೂಡಿರುವಂತಹವುಗಳು. ಈ ಡಾಂಭಿಕತನ ಜಾತಿ ವ್ಯವಸ್ಥೆಯನ್ನು ಪೋಷಿಸುವ ಒಂದು ಹುನ್ನಾರವೇ ಆಗಿರುತ್ತದೆ. ಈ ಸಾಲುಗಳನ್ನು ಗಮನಿಸಿ

ಪಟ್ಟೆನಾಮವ ಬಳಿದು ಪಾತ್ರೆ ಕೈಯಲ್ಲಿ ಪಿಡಿದು<br>
ಗುಟ್ಟಿನಲಿ ರಹಸ್ಯವ ಗುರುತರಿಯದೆ<br>
ಕೆಟ್ಟ ಕೂಗನು ಕೂಗಿ ಬಗುಳಿ ಬಾಯಾರುವಂಥ<br>
ಹೊಟ್ಟೆಗೇಡ ಮೃಗಗಳೆಲ್ಲ ಶ್ರೀ ವೈಷ್ಣವರೇ ಕೃಷ್ಣ ॥

ಇಲ್ಲಿ ಪುರೋಹಿತಶಾಹಿಯ ವಿಡಂಬನೆಯ ಜೊತೆಗೆ ಅವರ ಆಚರಣೆಗಳನ್ನು ವಿರೋಧಿಸಲಾಗಿದೆ ಇಲ್ಲವೇ ವಿಡಂಬಿಸಲಾಗಿದೆ. ಇಲ್ಲಿ ಆಚರಣೆಗಳ ವಿರೋಧವೆಂದರೆ ಪುರೋಹಿತಶಾಹಿಯ ವಿರೋಧ ಈ ವಿರೋಧ ಜಾತಿಯ ನೆಲೆಗಳನ್ನು ವಿರೋಧಿಸುವುದೂ ಆಗಿದೆ. ಕೆಳಜಾತಿಗಳ ಮನಸ್ಸನ್ನು ಅಧೀರಗೊಳಿಸುವುದರ ಮೂಲಕ ಅವರ ಮೇಲೆ ಹಿಡಿತವನ್ನು ಸಾಧಿಸಬಹುದಾಗಿದೆ. ಈಗಲೂ ಸಹ ದಿನನಿತ್ಯದ ಬೆಳಗ್ಗೆ ಟಿ.ವಿ. ವಾಹಿನಿಗಳಲ್ಲಿ ಬರುವ ಪುರೋಹಿತರ ಕಾರ್ಯಕ್ರಮಗಳನ್ನು ವೀಕ್ಷಿಸಿದರೆ ಅಳ್ಳೆದೆಯವರು ಅಷ್ಟೇ ಏಕೆ ಧೈರ್ಯವಂತರೂ ಸಹ ಹೆದರಿಕೆಯಿಂದ ಅವರು ಹೇಳಿದಂತೆ ಕೇಳುವ ಮನಸ್ಸಾಗುತ್ತದೆ. ಕೆಳಜಾತಿಗಳು ಅವರು ಹೇಳಿದಂತೆ ಕೇಳುತ್ತಾರೆ. ಈ ಆಚರಣೆಗಳೂ ಸಹ ಜಾತಿಯನ್ನು ಪೋಷಿಸುವಂತಹವುಗಳೇ ಆಗಿವೆ.

'ನಾನು ನೀನು ಎನ್ನದಿರೋ ಮಾನವ ಜ್ಞಾನದಿಂದ ನಿನ್ನ ನೀನೇ ತಿಳಿದು ನೋಡೆಲೋ' ಎಂಬ ಕೀರ್ತನೆಯಲ್ಲಿ ಕಾಮ, ಕರ್ಮ, ಜಾತಿ ಕುಲಗಳ ಚಕ್ರದಲ್ಲಿ

ಸಿಲುಕಿ ಬದುಕನ್ನು ಆ ಮೂಲಕ ಸಮಾಜವನ್ನು ಜಡಗೊಳಿಸಿ ಕ್ರಿಯಾಶೀಲತೆಯಿಲ್ಲದಂತೆ ಮಾಡಿರುವ ಪುರೋಹಿತಶಾಹಿಯು ತಮ್ಮ ಅಜ್ಞಾನವನ್ನು ಬಿಟ್ಟು ಮಾನವರನ್ನು ಮಾನವರಾಗಿ ಕಾಣುವ ಆ ಮೂಲಕ ಭ್ರಾತೃತ್ವ ಸಹಬಾಳ್ವೆ ಸಮಾನತೆಯಿಂದ ಬದುಕುವುದನ್ನು ಕಲಿತುಕೊಳ್ಳಿ ಎಂದು ಕರೆಕೊಡುವ ಆಶಯವಿದೆ. ಈ ಕೀರ್ತನೆಯಲ್ಲಿ ಬರುವ ನಿದರ್ಶನಗಳೆಲ್ಲ ದೈಹಿಕ ಸ್ವರೂಪದವಾಗಿದ್ದು ದೇಹದ ಇತಿಮಿತಿ ಮತ್ತು ಮಾನವರಿಗಿರುವ ಏಕರೂಪದ ಮಾನಸಿಕ ಸ್ಥಿತಿಗಳನ್ನು ಹೇಳುತ್ತಾ ಮಡಿ ಮೈಲಿಗೆ ಎಂದು ಜಾತಿ ವ್ಯವಸ್ಥೆಯನ್ನು ಪೋಷಿಸುವುದನ್ನು ವಿರೋಧಿಸಲಾಗಿದೆ.

ಕನಕದಾಸರ ಕೀರ್ತನೆಗಳಲ್ಲಿ ಸಂವಾದ ರೂಪದ ಕೀರ್ತನೆಗಳಿವೆ. ಇದರಲ್ಲಿ ನೀನು ಎಂಬ ಪದ ಬಳಕೆಯಾಗುತ್ತದೆ. ಇದು ಹಲವಾರು ಅರ್ಥ ಸಾಧ್ಯತೆಗಳನ್ನು ಒಳಗೊಂಡಿದೆ. ಕೆಲವು ಕೀರ್ತನೆಗಳಲ್ಲಿ ನೀನು ಎಂಬ ಪದ ರಕ್ಷಿಸುವವನನ್ನು ಸೂಚಿಸಿದರೆ ಮತ್ತೆ ಕೆಲವು ಕೀರ್ತನೆಗಳಲ್ಲಿ ಭಕ್ತನ ಮೊರೆ ಹೋಗುವವನ ಪ್ರತಿ ವ್ಯಕ್ತಿತ್ವವನ್ನು ಸೂಚಿಸುತ್ತದೆ. ಇದು ಅಂದರೆ ಪ್ರತಿ ವ್ಯಕ್ತಿತ್ವ ಇಡಿಯಾಗಿ ಮನುಷ್ಯ ಕುಲವನ್ನು ಪ್ರತಿನಿಧಿಸುವ ಸಾಮರ್ಥ್ಯ ಪಡೆದಿದೆ. ಮನುಷ್ಯ ಕುಲದ ಲಕ್ಷಣಗಳನ್ನು ಅವನ ಸ್ವಾಭಿಮಾನವನ್ನು ಅವನ ಎಲ್ಲ ತವಕ ತಲ್ಲಣಗಳನ್ನು ಹೇಳುತ್ತದೆ. ಇದು ಬಹಳ ಮುಖ್ಯವಾದದ್ದು, ಏಕೆಂದರೆ ಭಕ್ತನಾದ ಕನಕದಾಸರು ಅಥವಾ ಭಕ್ತಿ ಪರಂಪರೆಯ ಕನಕದಾಸರು ಇಲ್ಲಿ ದೇವರಿಗಿಂತ ಅಂದರೆ ಕಾಯುವಾತನಿಗಿಂತ ಮನುಷ್ಯನೇ ಮುಖ್ಯನಾಗುತ್ತಾನೆ ಎಂದು ಹೇಳುತ್ತಾರೆ. ಭಾಷೆಯು ಇಂತಹ ಕಡೆಗಳಲ್ಲೆಲ್ಲಾ ಧಾರ್ಮಿಕ ಸಾಂಕೇತಿಕತೆಯ ಭಾಷೆಯಾಗಿರುತ್ತದೆ. ದೇವರನ್ನು ಆತ್ಮವಾಗಿ ಪ್ರಾರ್ಥಿಸುವ ಭಾಷೆಯು, ಪ್ರಶ್ನಿಸುವ ಭಾಷೆಯ ಸಾಂಕೇತಿಕೆಯನ್ನು ಪಡೆದುಕೊಳ್ಳುವುದು ಕನಕದಾಸರಲ್ಲಿ ಮಾತ್ರ. ಇದು ಕನಕದಾಸರ ಇತ್ಯಾತ್ಮಕವಾದ ವಿಚಾರ. ದೇವರು ಮತ್ತು ಮನುಷ್ಯರ ಸಂಬಂಧದ ನೆಲೆಗಳನ್ನು ಚರ್ಚಿಸುವಾಗ, ಪುರಾಣ ಪ್ರತೀಕಗಳನ್ನು ಬಳಸುವಾಗ ಹಳೆಯ ಅರ್ಥವಿಲ್ಲದ ಆಚರಣೆಗಳನ್ನು ಖಂಡಿಸುವಾಗ ಜಾತಿಯತೆಯನ್ನು ಪ್ರತಿರೋಧಿಸುವಾಗ ಭಾಷೆಯು ಧಾರ್ಮಿಕ ಸಾಂಕೇತಿಕತೆಯನ್ನು ಪಡೆದುಕೊಂಡ ಭಾಷೆಯಾಗುತ್ತದೆ. ಧಾರ್ಮಿಕ ಭಾಷೆಯಾದಾಗ ಸಾಂಕೇತಿಕತೆಯನ್ನು ಪಡೆದುಕೊಳ್ಳುವುದರಿಂದ ನಿಗೂಢತೆ ಅಮೂರ್ತತೆ ಕಾಣಿಸಿಕೊಳ್ಳುತ್ತದೆ. ಮೇಲು ನೋಟಕ್ಕೆ ಇಲ್ಲಿ ಬಳಸಿರುವ ಭಾಷೆ ದೈವತ್ವವನ್ನು ಕುರಿತು ಹೇಳುತ್ತದೆ ಎನ್ನಿಸಿದರೂ ಅದು ಮನುಷ್ಯನ ಏಳು ಬೀಳುಗಳನ್ನು ಅವನ ಬದುಕಿನ ಸ್ವರೂಪವನ್ನು ಆ ಮೂಲಕ ಅವನ ಸಮಾಜದ ಸ್ವರೂಪ ಸಮಾಜದ ಸ್ತರ ವಿನ್ಯಾಸ ಅಂದರೆ ಜಾತಿ ವ್ಯವಸ್ಥೆಯನ್ನು ಕುರಿತು ಹೇಳುತ್ತದೆ. ಧಾರ್ಮಿಕ ಭಾಷೆಯ ಸಾಂಕೇತಿಕತೆಯ ಸ್ವರೂಪವನ್ನು ನಾವು ಅರ್ಥ ಮಾಡಿಕೊಂಡರೆ ಕನಕನ ಕೀರ್ತನೆಗಳ ಸಾಂಸ್ಕೃತಿಕ ಮಹತ್ವ ಅರಿವಾಗುತ್ತದೆ. ಅದರಲ್ಲೂ ಇಂದಿನ ಕವಿಗಳು ಸರಳ ಭಾಷಾ ಬಳಕೆಯನ್ನು ಮಾಡಿ ಜೀವನದ ಗಹನವಾದ ವಿಚಾರಗಳನ್ನು ಹೇಳುತ್ತಿದ್ದೇವೆ ಎಂದು ಭ್ರಮೆಯಲ್ಲಿದ್ದಾರೆ. ಇಂತಹ ಕವಿಗಳು ಕನಕದಾಸರನ್ನು

ಓದಲೇಬೇಕು. ಆಗ ಇಂದಿನ ತವಕ ತಲ್ಲಣಗಳನ್ನು ಎದುರಿಸುವ ಉಪಾಯಗಳಿಗೆ ಮಾರ್ಗದರ್ಶನ ಕನಕದಾಸರಲ್ಲಿ ಸಿಗುತ್ತದೆ.

ಮಗುವಿನ ಮರುಳಿದು ಬಿಡದಲ್ಲ
ಈ ಜಗದೊಳು ಪಂಡಿತರಿಂದ ಬಿಡಿಸಿ
ನೀರನು ಕಂಡರೆ ಮುಳುಗುತಿದೆ
ಮೋರೆಯ ತೋರದೆ ಓಡುತಿದೆ
ಧಾರಿಣಿ ಅಲ್ಲಲ್ಲಿ ಅಳೆಯುತಿದೆ ದೊಡ್ಡ
ಭೈರವಾಕಾರದಿ ಕೂಗುತಿದೆ
ಪೊಡವಿಯ ಕೊಟ್ಟರೆ ಬಿಸುಡುತಿದೆ ತನ್ನ
ಕೊಡಲಿಯೊಳ್ ಭೂಪರ ಕಡಿಯುತಿದೆ
ಅಡವಿ ಕೋತಿಗಳ ಕೂಡುತಿದೆ
ಮಡದಿಯರನು ಹಿಡಿದೆಳೆವುತಿದೆ
ಉಟ್ಟಿದ್ದ ವಸ್ತ್ರವ ಬಿಸುಡುತಿದೆ ತನ್ನ
ದಿಟ್ಟ ತೇಜಿಯನೇರಿ ನಲಿಯುತಿದೆ
ಸೃಷ್ಟಿಯೊಳು ಭೂಸುರರು ಪೊರೆವ ಜಗ
ಜಟ್ಟಿಯಾದಿ ಕೇಳವರಾಯನಂತೆ

ಮೇಲ್ಕಂಡ ಕೀರ್ತನೆಯಲ್ಲಿ ಬರುವ ಪದಗುಚ್ಛಗಳಿಗೆ ಈ ರೀತಿ ಅರ್ಥವಿದೆ.

- ನೀರನು ಕಂಡರೆ ಮುಳುಗುತಿದೆ – ಮತ್ಸ್ಯಾವತಾರ.
- ಮೋರೆಯ ತೋರದೆ ಓಡುತಿದೆ – ವರಾಹಾವತಾರ
- ಧಾರಿಣಿ ಅಲ್ಲಲ್ಲಿ ಅಳೆಯುತಿದೆ – ವಾಮನಾವತಾರ
- ದೊಡ್ಡ ಭೈರವನಾಕಾರದಿ ಕೂಗುತಿದೆ – ನರಸಿಂಹಾವತಾರ
- ಪೊಡವಿಯ ಕೊಟ್ಟರೆ ಬಿಸುಡುತಿದೆ ತನ್ನ ಕೊಡಲಿಯೊಳ್ ಭೂಪರ ಕಡಿಯುತಿದೆ – ಪರಶುರಾಮಾವತಾರ
- ಅಡವಿ ಕೋತಿಗಳ ಕೂಡುತಿದೆ – ರಾಮಾವತಾರ
- ಮಡದಿಯರನು ಹಿಡಿದಳುವುತಿದೆ – ಕೃಷ್ಣಾವತಾರ
- ಉಟ್ಟಿದ್ದ ವಸ್ತ್ರವ ಬಿಸುಡುತಿದೆ – ಬೌದ್ಧಾವತಾರ
- ತನ್ನದಿಟ್ಟ ತೇಜಿಯನೇರಿ ನಲಿಯುತಿದೆ – ಕಲ್ಕ್ಯಾವತಾರ

ಹೀಗೆ ಒಂದೊಂದು ಅವತಾರದ ಮೂಲಕ ಹರಿಯ ಪಾರಮ್ಯವನ್ನು ಎತ್ತಿ ಹಿಡಿಯಲಾಗಿದೆ ಎಂದು ಮೇಲ್ನೋಟಕ್ಕೆ ಭಾಸವಾಗುತ್ತದೆ. ಮೊದಲ ಎರಡು ಸಾಲುಗಳು ಮತ್ತು ಕೊನೆಯ ಎರಡು ಸಾಲುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇಲ್ಲಿರುವ ಧ್ವನಿ ಗೊತ್ತಾಗುತ್ತದೆ.

– ಮಗುವಿನ ಮರುಳಿದು ಬಿಡದಲ್ಲ, ಈ ಜಗದೊಳು ಪಂಡಿತರಿಂದ ಬಿಡಿಸಿ.

– ಸೃಷ್ಟಿಯೊಳು ಭೂಸುರರು ಪೊರೆವ ಜಗಜಟ್ಟಿಯಾದಿ ಕೇಶವನಂತೆ

ಸೃಷ್ಟಿಯಲ್ಲಿ ಭೂಸುರರು ಜನರನ್ನು ರಕ್ಷಿಸುವ ಆದಿಕೇಶವನಂತೆ ಇದ್ದಾರೆ ಎಂಬ ವ್ಯಂಗ್ಯದ ಧ್ವನಿ ಇದೆ. ಭೂಸುರರು ಉಳಿದ ಎಲ್ಲರನ್ನೂ ಎಲ್ಲವನ್ನು ಅಂದರೆ ಇಡೀ ಸಮಾಜವನ್ನು ರಕ್ಷಿಸುವ ಹೊಣೇ ಹೊತ್ತಿದ್ದಾರೆ. ಅದು ಹೇಗೆಂದರೆ ಆದಿಕೇಶವನಂತೆ ಅಂದರೆ ದೇವರ ರೀತಿಯಲ್ಲಿ. ಈ ರೀತಿ ಇಡೀ ಸಮಾಜದ ಹೊಣೆಯನ್ನು ಹೊತ್ತಿರುವ ಈ ಭೂಸುರರು ಅವತಾರಗಳ ಕಲ್ಪನೆಯನ್ನೂ ತಂದಿದ್ದಾರೆ. ಮೇಲಿನ ಸಾಲುಗಳನ್ನು ಗಮನಿಸಿದಾಗ ಇದು ವ್ಯಾಜ್ಯ ಸ್ತುತಿ ಅಲಂಕಾರವಾಗುತ್ತದೆ. ಸ್ತುತಿಯ ಮೂಲಕ ನಿಂದರೆ ಇದರ ಗುಣ. ಈಗಿನ ಕಾವ್ಯ ಮೀಮಾಂಸೆಯಲ್ಲಿ ಇದನ್ನು ಧ್ವನಿ ಎಂಬ ಹೆಸರಿನಿಂದ ಕರೆಯಲಾಗುತ್ತಿದೆ.

ವಿಷ್ಣುವಿನ ಎಲ್ಲಾ ಅವತಾರಗಳು ಕೆಡುಕಿನ ವಿರುದ್ಧವೇ ಇರುವವಾದರೂ ಆ ಕೆಡಕು ಯಾರೆಂದರೆ ವೈದಿಕ ಧರ್ಮದ ವಿರೋಧಿಗಳು ಮತ್ತು ಕೆಳಜಾತಿಯವರು. ವೈದಿಕ ಧರ್ಮವನ್ನು ಯಾರು ವಿರೋಧಿಸಿದರೋ ಅವರನ್ನು ನಾಶ ಮಾಡಲಾಯಿತು. ಕನಕದಾಸರು ಇದನ್ನೇ ಹೇಳುತ್ತಾ ಸೃಷ್ಟಿಯ, ಸಮಾಜದ ರಕ್ಷಣೆ ಮಾಡುವವರು ಭೂಸುರರು ಎಂದು ವ್ಯಂಗ್ಯವಾಗಿ ಹೇಳುತ್ತಾರೆ. ಇಲ್ಲಿ ಬಳಕೆಯಾಗಿರುವ ಕಾಕು ಕೌಶಲ, ಹೇಳುವ ಚಾತುರ್ಯ ಭಾಷೆಯ ಧಾರ್ಮಿಕ ಸಾಂಕೇತಿಕತೆ, ಇತ್ಯಾದಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇಲ್ಲಿನ ಧ್ವನಿ ಜಾತಿ ವ್ಯವಸ್ಥೆಯ ವಿರೋಧಿ ನೆಲೆಗಳನ್ನು ಒಳಗೊಂಡಿರುವುದು ಸ್ಪಷ್ಟವಾಗುತ್ತದೆ. ಇಲ್ಲಿ ಜಾತೀಯತೆಯನ್ನು ಪೋಷಿಸುವ ಪುರಾಣ ಸ್ಮೃತಿ ಪುಣ್ಯಕತೆಗಳನ್ನು ಕನಕದಾಸರು ನಿರಾಕರಿಸುತ್ತಾರೆ. ಏಕೆಂದರೆ ಜಾತಿ ಪದ್ಧತಿಯನ್ನು ಮೊದಲಿಂದಲೂ ಸಮರ್ಥನೆ ಮಾಡಿರುವ ಪುರಾಣಗಳನ್ನು ಸೃಷ್ಟಿಸಿರುವ ಪುರೋಹಿತ ಶಾಹಿಯು (ಭೂಸುರರು)ಜಾತಿ/ವರ್ಣಗಳನ್ನು ಸೃಷ್ಟಿಸಿ ಸಮಾಜದಲ್ಲಿ ತಾರತಮ್ಯವುಂಟು ಮಾಡಿ ಮನುಷ್ಯ ಮತ್ತೊಬ್ಬ ಮನುಷ್ಯನನ್ನು ಗೌರವದಿಂದ ನಡೆಸಿಕೊಳ್ಳುವ ಪ್ರೀತಿ, ವಿಶ್ವಾಸಗಳನ್ನು ತೋರುವ ಮನೋಭಾವವನ್ನು ಬೆಳೆಸದೆ ಮನುಷ್ಯ ಸಂಬಂಧಗಳನ್ನು ಹಾಳು ಮಾಡುತ್ತಾ ಬಂದಿದ್ದಾರೆ. ಆದ್ದರಿಂದ ಈ ಭೂಸುರರನ್ನು ಕನಕದಾಸರು ತಮ್ಮ ಕೀರ್ತನೆಗಳಲ್ಲಿ ವಿರೋಧಿಸುತ್ತಾ ಬರುತ್ತಾರೆ. ಪುರೋಹಿತ ಶಾಹಿಯನ್ನು ಕನಕದಾಸರು ಭೂಸುರರೆಂದು ಹಲವಾರು ಬಾರಿ ಸಂಬೋಧಿಸಿದ್ದಾರೆ. ಈ ಭೂಸುರರು ಎಂಬ ಪದ ಹಲವಾರು ಕೀರ್ತನೆಗಳಲ್ಲಿ ಬಳಸಿದ್ದಾರೆ. ಅವರಿಗೆ ಬ್ರಾಹ್ಮಣ ಎಂದು ಕರೆಯುವ ಮನಸ್ಸಾಗುವುದೇ ಇಲ್ಲ. ಕುಲ ಕುಲವೆನ್ನುತಿಹರು ಎಂಬ ಕೀರ್ತನೆಯಲ್ಲಿ ಬರುವಂತಹ ಸಂದರ್ಭವಂತೂ ಔಚಿತ್ಯಪೂರ್ಣವಾಗಿದೆ. ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು ವಸುಧೆಯೊಳಗೆ ಭೂಸುರರುಣಲಿಲ್ಲವೇ? ಎಂಬ ವಾಕ್ಯದಲ್ಲಿ ಗೋವಿನ ಮಾಂಸವನ್ನು ತಿನ್ನುವ ಕೆಳಜಾತಿಗಳನ್ನು ಅಸ್ಪೃಶ್ಯರೆಂದು

ಕರೆದು ಕೀಳಾಗಿ ನಡೆಸಿಕೊಂಡು ಅಮಾನವೀಯವಾಗಿ ವರ್ತಿಸುತ್ತಾರೆ. ಆದರೆ ಅದೇ ಮಾಂಸದಲ್ಲಿ ಉತ್ಪತ್ತಿಯಾಗುವ ಹಾಲನ್ನು ಅಮೃತವೆಂದು ಕುಡಿಯುತ್ತಾರೆ. ಹಾಲು ಸ್ವೀಕಾರಾರ್ಹವಾದದು ಆದರೆ ಅದರ ಮೂಲವಾದ ಮಾಂಸ ತ್ಯಾಜ್ಯವಾದದ್ದು ಮಾಂಸ ಮತ್ತು ಹಾಲು ಎರಡೂ ಒಂದೇ ಎಂದು ಇದರ ಧ್ವನಿ. ಈ ಧ್ವನಿಯ ಮೂಲಕ ಮಾನವರೆಲ್ಲರೂ ಒಂದೇ ಅದು ಮಾನವ ಕುಲ ಎಂಬುದು ಕನಕದಾಸರ ಅಭಿಪ್ರಾಯವಾಗಿದೆ.

ಅವತಾರಗಳ ಕಲ್ಪನೆಯನ್ನು ಭೂಸುರರು (ಪುರೋಹಿತ ಶಾಹಿಯು) ತಂದಿದ್ದು ಕೆಳವರ್ಗ/ಜಾತಿಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವ ಉದ್ದೇಶ. ಅವತಾರಗಳ ಕಲ್ಪನೆ ಒಂದು ರೀತಿಯಲ್ಲಿ ಸಮೀಕರಣಗೊಳಿಸುವ ಕ್ರಿಯೆ. ಕೆಳಜಾತಿಗಳ ದೇವತೆಗಳನ್ನು ಹಾಗೂ ಅವರ ಕುಲ ಲಾಂಛನಗಳಾಗಿದ್ದ ಪ್ರಾಣಿ ಪಕ್ಷಿಗಳನ್ನು ಪುರೋಹಿತ ವರ್ಗ ಶಿಷ್ಟ ದೇವತೆಗಳೊಂದಿಗೆ ಸಮೀಕರಣಗೊಳಿಸಿದರು. ಸಮೀಕರಿಸಲು ಸಾಧ್ಯವಾಗದೆ ಇರುವ ದೇವತೆಗಳಿಗೆ ಒಂದು ಸ್ಥಾನಕೊಟ್ಟು ಇವುಗಳಿಗೆ ಒಂದೊಂದು ಕಥೆ ಬರೆದು ಗ್ರಂಥಗಳನ್ನು ರಚಿಸಿದರು. ಹೊಸ ಅವತಾರಗಳಿಗೆ ಅನುಗುಣವಾಗಿ ಹೊಸ ಆಚರಣೆಗಳು ಪ್ರಾರಂಭವಾದವು. ಬುದ್ಧ, ಮೀನು, ಆಮೆ, ಕರಡಿ ಸೇರಿದಂತೆ ಕುಲ ಲಾಂಛನದ ದೇವತೆಗಳೆಲ್ಲರೂ ವಿಷ್ಣುವಿನ ಅವತಾರದ ಭಾಗವಾದರು. ಮೇಲೆ ಉಲ್ಲೇಖಿಸಲಾದ ಅವತಾರದ ವ್ಯಕ್ತಿಗಳು ಅವೈದಿಕತೆಯನ್ನು ಪ್ರತಿಪಾದಿಸುತ್ತಿದ್ದವರನ್ನು ರಾಕ್ಷಸರೆಂದು ಕರೆದರು, ಅವರ ಕುಲ ಲಾಂಛನಗಳಿಂದಲೇ ಅವರನ್ನು ಕೊಲ್ಲುವ ಹುನ್ನಾರಗಳನ್ನು ಹೆಣೆದಿದ್ದರಿಂದ ಅವೈದಿಕ ಚಳುವಳಿ ಬೆಳೆಯದಂತೆ ನೋಡಿಕೊಳ್ಳಲು ಸಾಧ್ಯವಾಯಿತು. ಮೀನು, ಹಂದಿ, ಹುಲಿ, ಸಿಂಹ, ಪರಶುರಾಮ, ಆಂಜನೇಯ, ಬುದ್ಧ ಇವರೆಲ್ಲಾ ಅವೈದಿಕರೆಂಬುದು ಸರ್ವವಿಧಿತ. ರೈತರಿಗೆ ಜನಪ್ರಿಯವಾಗಿದ್ದ ಹನುಮಂತನಿಗೆ ಸ್ವತಂತ್ರವಾದ ಒಂದು ಪಂಥವೇ ಇತ್ತು. ಇವನು ಕೊನೆಗೆ ರಾಮನ ಭಂಟನಾಗಿಬಿಟ್ಟ.

ಆದಿಶೇಷನ ವಿಷಯ, ವಿಷ್ಣು ಮಲಗಲು ಆದಿಶೇಷನನ್ನು ಬಳಸಿಕೊಳ್ಳುತ್ತಾನೆ. ಇದೇ ಹಾವು ಶಿವನಿಗೆ ಕಂಠದ ಹಾರ. ಗಣೇಶನಿಗೆ ಆಯುಧ, ಆನೆ ತಲೆ ಇರುವ ಗಣೇಶ ಶಿವ ಪಾರ್ವತಿಯರ ಮಗ. ಗ್ರಾಮೀಣರು ಪೂಜಿಸುವ ಎಷ್ಟೋ ದೇವತೆಗಳು ಶಿವನ ರಕ್ಷಣೆಯಲ್ಲಿವೆ ಎಂದು ಹೇಳಲಾಗುತ್ತದೆ. ಶಿವನ ನಂದಿಯನ್ನು ಈಗಲೂ ಪೂಜಿಸಲಾಗುತ್ತಿದೆ. ಇವುಗಳಿಗೆ ಸಂಬಂಧಿಸಿದ ಕತೆಗಳಿಗೆ ಸಂಬಂಧ ಕಲ್ಪಿಸಲು ಹೊರಟರೆ ಗೊಂದಲವುಂಟಾಗುತ್ತದೆ. ಅಷ್ಟರಮಟ್ಟಿಗೆ ಸಮೀಕರಣವಾಗಿದೆ. ಈ ಸಮೀಕರಣ ಮಾಡಿದ್ದು ಪುರೋಹಿತಶಾಹಿಯು ಎಲ್ಲಾ ಕೆಳಜಾತಿಗಳನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುವ ಮಹೋದ್ದೇಶದಿಂದ. ಅದಕ್ಕಾಗಿಯೇ ಅವರು ಬುದ್ಧ ಮತ್ತು ಅಶೋಕ ನಾಗರಿಕಗೊಳಿಸುವ ಹಾಗೂ ಜಾತಿ ಜಾತಿಗಳ ನಡುವೆ ಇದ್ದ ಅಂತರವನ್ನು ಹೋಗಲಾಡಿಸುವ ಪ್ರಯತ್ನ ಮಾಡಿದರೆ ಪುರೋಹಿತಶಾಹಿ ಅದಕ್ಕೆ ತಣ್ಣೀರೆರೆಚಿತು ಜಾತಿಯ ಬಂಧವನ್ನು ಅವತಾರಗಳ ಕಲ್ಪನೆ ಮೂಲಕ ಪುರಾಣಗಳನ್ನು ಸೃಷ್ಟಿಸುವ

ಮೂಲಕ ಅಸಮಾನತೆ ಮತ್ತು ಜಾತಿಯ ನೆಲೆಗಳನ್ನು ಹಾಗೆಯೇ ಉಳಿಸಿಕೊಂಡರು. ಇದರಿಂದಾಗಿ ವರ್ಗ/ವೃತ್ತಿ, ಜಾತಿ, ಪಂಗಡ ಇವುಗಳನ್ನು ಮೀರಿದ ಸಮಾನತೆ ಮತ್ತು ನ್ಯಾಯವನ್ನು ಆಧರಿಸಿದ, ಎಲ್ಲರಿಗೂ ಸಮಾನವಾಗಿ ಅನ್ವಯಿಸುವ ಸಾಮಾನ್ಯ ವಿಚಾರಗಳನ್ನು ಹುಡುಕುವುದಕ್ಕೆ ಸದಾ ಅಡ್ಡಗಾಲು ಹಾಕುತ್ತಲೇ ಬಂದರು. ಇಂತಹ ಹುನ್ನಾರಗಳನ್ನು ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಬಯಲು ಮಾಡಿದ್ದಾರೆ. ಮತ್ತೆ ನಾನು ಎರಡು ಕೀರ್ತನೆಯ ಭಾಗಗಳನ್ನು ಉದ್ಧರಿಸುವ ಮೂಲಕ ನನ್ನ ಭಾಷಣವನ್ನು ಮುಗಿಸಬಯಸುತ್ತೇನೆ.

ತೊಲಗುವರು ಕಡೆ ಕಡೆಗೆ ತಾ ಹೊಲೆ
ಹೊಲೆಯೆನುತ ಕಳುವಳಿಸಿ ಮೂತ್ರದ
ಬಿಲದೊಳಗೆ ಮುಳುಗಿದರೆ ತೊಲಗದು
ಹೊಲಗೆಲಸವೀ ದೇಹದೊಳು ನೀ
ನೆಲೆಸಲು ಹೊಲೆಯುಂಟೇ ರಕ್ಷಿಸು ನಮ್ಮನನವರತ ।

ಬೀಜ ವೃಕ್ಷದೊಳಾಯ್ತು ವೃಕ್ಷಕ್ಕೆ
ಬೀಜವಾರಿಂದಾಯ್ತು? ಲೋಕದಿ
ಬೀಜ ವೃಕ್ಷ ನ್ಯಾಯವಿದ ಭೇದಿಸುವರಾರಿನ್ನು
ಸೋಜಿಗವ ನೀ ಬಲ್ಲೆ!

ಕೆಳಜಾತಿ ಸಂಸ್ಕೃತಿಗಳು ಅನಧಿಕೃತ ಎನ್ನಬಹುದಾದ ಭಾಷೆ ಸಾಹಿತ್ಯ ರೂಪಗಳನ್ನು ಬಳಸಿಕೊಳ್ಳುತ್ತವೆ. ಈ ರೂಪಗಳು ಸಾಮಾನ್ಯವಾಗಿ ಕೇಳುಗರನ್ನು ಪ್ರೇಕ್ಷಕರನ್ನು ಆಧರಿಸಿಕೊಂಡಿರುತ್ತವೆ. ಕನಕದಾಸರು ಶ್ರೇಷ್ಠ ಕುಲದವರಲ್ಲ. ಆದ್ದರಿಂದ ಕೇಳು ಇಲ್ಲವೇ ಪ್ರೇಕ್ಷಕ ಸಮುದಾಯದವರನ್ನು ಉದ್ದೇಶಿಸುವಾಗ ಕೆಲವು ಕೀರ್ತನೆಗಳಲ್ಲಿ ಜಾತಿ ಮತಕುಲವನ್ನು ವಿರೋಧಿಸುವಾಗ ಭಾಷೆಯು ಸ್ವಲ್ಪ ಸರಳವಾಗುತ್ತದೆ. ಸರಳತೆ ಮತ್ತು ಪಾರದರ್ಶಕತೆ ಇದ್ದು ಅಲಂಕಾರಿಕವಾಗಿದ್ದರೂ ಜನಸಾಮಾನ್ಯರಿಗೆ ತಟ್ಟುವಂತಿರುತ್ತದೆ. ಜಾತಿ, ಕುಲ, ಮತಗಳ ಬಗ್ಗೆ ಪಂಡಿತರಿಗೆ ತಲುಪಿಸಬೇಕೆನಿಸಿದಾಗ ಆಧ್ಯಾತ್ಮಕವಾದ ಶಿಷ್ಟ ಪರಿಭಾಷೆಯನ್ನೇ ಉಪಯೋಗಿಸುತ್ತಾರೆ. ಇದು ಬಹಳ ಮುಖ್ಯವಾದದ್ದು. ಕೆಳಜಾತಿ, ಅಸ್ಪೃಶ್ಯ ಜನರಿಗೆ ಪಾರದರ್ಶಕ ಸರಳವಾದ ಭಾಷೆಯನ್ನು ಬಳಸಿ ಅವರ ಸ್ಥಿತಿಗತಿಗಳ ಬಗ್ಗೆ ಜಾತಿ ವ್ಯವಸ್ಥೆಯ ಬಗ್ಗೆ ವಿರೋಧಿಸಬೇಕಾದ ಅವಶ್ಯಕತೆ ಇತ್ಯಾದಿಗಳನ್ನು ಹೇಳಿದರೆ ಪುರೋಹಿತ ಶಾಹಿಗೆ ಧಾರ್ಮಿಕ ಪರಿಭಾಷೆಯನ್ನು ಸಾಂಕೇತಿಕ ಭಾಷೆಯನ್ನು ಬಳಸಿ, ಕೆಳಜಾತಿ/ಅಸ್ಪೃಶ್ಯ ಜಾತಿಗಳನ್ನು ಹೇಗೆ ನಡೆಸಿಕೊಳ್ಳಲಾಗುತ್ತಿದೆ ಎಂಬುದನ್ನು ವಿಷದಪಡಿಸುತ್ತಾರೆ. ಮಧ್ಯಕಾಲೀನ ಕನ್ನಡ ಸಾಹಿತ್ಯದ ಅಭಿವ್ಯಕ್ತಿ ವಿಧಾನ ದೇಸಿ ಇಲ್ಲಿ ದೇಸಿಯೇ ಮುಖ್ಯ. ಆದರೂ ಕನಕ ಮಾರ್ಗ ಅಂದರೆ ಶಿಷ್ಟ ಭಾಷೆ,

ಅಲಂಕಾರಿಕ ಭಾಷೆಯನ್ನೇ ಬಳಸುತ್ತಾರೆ. ಈ ಎರಡೂ ಭಾಷೆಯನ್ನು ಬಳಸುವ ಜ್ಞಾನ ಮತ್ತು ಸೃಜನಶೀಲ ಕ್ರಿಯಾಶಕ್ತಿ ಕನಕದಾಸರಿಗಿತ್ತು.

ಕನಕದಾಸರ ಮನಸ್ಸು ಸಂದೇಹ ಪೂರ್ಣ ಮನಸ್ಸು, ಅನ್ವೇಷಕ ಮನಸ್ಸು ಮತ್ತು ಅನೌಪಚಾರಿಕ ಮನಸ್ಸು, ಸಮಗ್ರ ವಿಶ್ವದ ಅಖಂಡ ಸತ್ಯವಾಗಿದೆ ಮತ್ತು ಏಕಕಾಲದಲ್ಲಿ ಚಲನಶೀಲವೂ, ಕ್ರಿಯಾಶೀಲವೂ, ಜೀವಂತವೂ, ಜೈವಿಕವೂ, ಆಧ್ಯಾತ್ಮಿಕವೂ ಆಗಿದೆ ಎಂದು ಭಾವಿಸಿದ್ದರು. ಆದ್ದರಿಂದಲೇ ಅವರು ಅನುಭಾವಿಯಂತೆ ಸತತವಾಗಿ ಪ್ರಶ್ನಿಸುತ್ತಾ ಅನುಮಾನಿಸುತ್ತಾ ಸಂವಾದದಲ್ಲೇ ತಮ್ಮ ಪ್ರಶ್ನೆಗಳನ್ನು ಎತ್ತುತ್ತಾರೆ. ತಮ್ಮ ಎದುರಾಳಿಗಳನ್ನು ವಿರೋಧಿಸಿ ತಮ್ಮ ವಿಚಾರಗಳನ್ನು ಮಂಡಿಸುತ್ತಾರೆ. ಆದ್ದರಿಂದಲೇ ನಾನು ಅನುಭಾವಿ ಪರಂಪರೆಯಲ್ಲಿ ಅರಳಿದ ಅತ್ಯಂತ ಸುಂದರ ಹೂ ಎಂದು ಹೇಳಿದ್ದು. ಶೂದ್ರರ, ದಲಿತರ ಚೇತನಗಳನ್ನು ಹುರುಪುಗೊಳಿಸಿ ಅವರಲ್ಲಿ ಉತ್ಸಾಹವನ್ನು ತುಂಬುವ ಆ ಮೂಲಕ ಅವರಲ್ಲಿ ಕ್ರಿಯಾಶೀಲ ಮನೋಭಾವವನ್ನು ಅವರ ಬದುಕು ಸುಂದರವಾಗಬೇಕೆಂದು ಬಯಸಿದ ಕೀರ್ತನೆಗಳು ಸಾಕಷ್ಟಿವೆ. ಅಷ್ಟೇ ಅಲ್ಲದೆ ವೈದಿಕ ಪರಂಪರೆಯ ಒಳ್ಳೆಯ ಅಂಶಗಳೊಂದಿಗೆ ಶೂದ್ರ, ಹಿಂದುಳಿದ ದಲಿತ ಜಾತಿಗಳ ದಿವ್ಯ ಶಕ್ತಿಯನ್ನು ಬೆಸೆಯುವ ಕೆಲಸವಾದಾಗ ಮಾತ್ರ ಸಮಾನತಾ ಸಮಾಜ ಬೆಳೆಯಲು ಸಾಧ್ಯವೆಂಬ ಆಶಯ ಕನಕದಾಸರ ಕೀರ್ತನೆಗಳಲ್ಲಿದೆ.

## ಸಾಂಸ್ಕೃತಿಕ ರಾಜಕಾಣವನ್ನು ನಿರಚನಗೊಳಿಸುವ ಗುರಿ ಹಾಗೂ ದಾರಿಗಳು

ಡಾ. ಮಲ್ಲಿಕಾರ್ಜುನ ಮೇಟಿ

"ನೀ ಮಾಯಯೊಳಗೋ, ನಿನ್ನೊಳು ಮಾಯೆಯೋ,
ನೀ ದೇಹದೊಳಗೋ ನಿನ್ನೊಳು ದೇಹವೋ ಹರಿಯೆ" – ಕನಕ

ಮುನ್ನೋಟ:

ಚಾರಿತ್ರಿಕ ಆಕರವಾಗಿ ಕನಕನನ್ನು ಓದುವಾಗ ನಾವು ಕೇವಲ ನುಡಿಯ ವಿವರಗಳನ್ನು ಮಾತ್ರ ಪರಿಗಣಿಸುವಂತಿಲ್ಲ. ಬದಲಾಗಿ ಆ ನುಡಿಯೊಳಗೆಯೇ ಅವತರಿಸುವ ಅರಿಮೆ ಪದಗಳನ್ನು, ಪರಿಭಾಷೆಗಳನ್ನು ನಮ್ಮ ಸಾಂಸ್ಕೃತಿಕ ವಿನ್ಯಾಸದೊಳಗೆ ಹೇಗೆ ನೆಲೆಗೊಳಿಸಲಾಗುತ್ತದೆ ಎಂಬ ಸಂಗತಿಯನ್ನು ಅರಿಯುವ ಹಾಗೂ ಅಂತಹ ಸಂಗತಿಗಳು ಹೇಗೆ ಮಹತ್ವವನ್ನು ಪಡೆಯುತ್ತವೆ. ಅಷ್ಟೆಯಲ್ಲದೇ ಸಂಸ್ಕೃತಿ ಓದಿನಲ್ಲಿ ಇವುಗಳು ಹೇಗೆ ಅತ್ಯಂತ ಮಹತ್ವದ ವಿಶ್ಲೇಷಣೆಯ ಪರಿಕರಗಳಾಗುತ್ತವೆ ಎಂಬುದನ್ನು ಅರಿಯಬೇಕಾಗುತ್ತದೆ. ಪಠ್ಯದೊಳಗಿನ ನಿಲುವುಗಳು ಪ್ರಕಟಗೊಳ್ಳುವುದೇ ಇಂತಹ ಪರಿಕರಗಳ ಮೂಲಕ ಹಾಗಾಗಿ ಇವುಗಳನ್ನು ಕುರಿತು ಚಿಂತಿಸುವುದು ತೀರಾ ಜರೂರಿನ ಕೆಲಸ. ಎತ್ತುಗೆಗಾಗಿ ಪರಿಭಾಷೆಗಳು ನೆಲೆಗೊಳ್ಳುವ ಬಗೆಗಳನ್ನು ಕುರಿತು ಚರ್ಚಿಸಬೇಕೆಂದರೆ, ಅವುಗಳನ್ನು ಕೇವಲ ಸೂಚಕಗಳನ್ನಾಗಿ ಮಾತ್ರ ನೋಡುವ ಪರಿಪಾಠವನ್ನು ಮೊದಲು ಒಡೆಯಬೇಕು. ಸೂಚಕಗಳು ಸೂಚಿತವಾಗುವ ಪ್ರಕ್ರಿಯೆಯನ್ನು ನಾವು ಗಮನಿಸದೇ ಕೇವಲ ಸಾಹಿತ್ಯಕ ನಿರ್ವಚನಗಳನ್ನು ಬೆಳೆಸುವುದು ತಕ್ಕುದಾದ ಓದಾಗಲಾರದು. ಹಾಗಾದರೆ ಏನೂ ಮಾಡಬೇಕು ಅಂದರೆ ನಮ್ಮ ಸಮೂಹಗಳ

ಬಗೆಗಿನ ವಿದ್ಯಮಾನಗಳನ್ನು ಸಮಕಾಲೀನ ಚರಿತ್ರೆಯ ಮುನ್ನೋಟಗಳನ್ನಾಗಿ ಗುರುತಿಸಬೇಕು. ಈ ಪ್ರಕ್ರಿಯೆ ನಮಗೆ ಬೇಕಾದ ಓದಿನ ದಾರಿಗಳನ್ನು ಕಂಡುಕೊಳ್ಳುವುದಕ್ಕೆ ಒತ್ತಾಸೆಯಾಗುತ್ತದೆ.ಉಳಿಗಮಾನ್ಯ ಹಾಗೂ ಸಾಮ್ರಾಜ್ಯಶಾಹಿ ವ್ಯವಸ್ಥೆಯನ್ನು ಎದುರಿಸಲು ಇಲ್ಲವೇ ಪ್ರತಿರೋಧಿಸಲು ಬೇಕಾಗುವ ವಿನ್ಯಾಸಗಳನ್ನು ಭಾಷಿಕ ಪರಿಕರಗಳಕಿಂತ ಬೇರೊಂದು ಪರಿಣಾಮಕಾರಿ ಮಾಧ್ಯಮ ಸಿಗಲಾರದು. ಇಪ್ಪತ್ತನೇ ಶತಮಾನದ ಬೌದ್ಧಿಕತೆಯ ಅತ್ಯಂತ ಮಹತ್ವದ ಬೆಳವಣಿಗೆಯೇ ನುಡಿ ಮೂಲಕ ಈ ಲೋಕದ ಎಲ್ಲ ವ್ಯವಹಾರಗಳನ್ನು ಅರಿಯುವುದಾಗಿದೆ. ರಚನೆಯನ್ನೇ ನೆಲೆಯಾಗಿಸಿಕೊಂಡು ಈ ಎಲ್ಲ ತಾತ್ವಿಕ ಗ್ರಹಿಕೆಗಳು ಮುಂಚೂಣಿಗೆ ಬಂದಿವೆ ಸರಿ. ಆದರೆ ರಚನೆಯನ್ನು ಬಿಡಿಸಿ ನೋಡಲು ನಮಗೆ ಸಾಧ್ಯವಾಗುವುದು ಕೂಡ ನುಡಿಯ ಪರಿಕರಗಳ ಮೂಲಕವೇ. ಪರಿಭಾಷೆ ಈ ಪರಿಕರಗಳಲ್ಲಿಯೇ ಅತ್ಯಂತ ಮಹತ್ವದ ಬಗೆಯಾಗಿರುತ್ತದೆ. ಒಂದೊಂದು ಪರಿಭಾಷೆಗೂ ತನ್ನದೆಯಾದ ಚರಿತ್ರೆ, ಪರಂಪರೆ, ಗುರುತು ಹಾಗೂ ಸಂವೇದನೆಯ ನೆಲೆಗಳು ಇರುತ್ತವೆ. ಪರಿಭಾಷೆ ಹಲವು ಆಯಾಮಗಳನ್ನು ಒಂದೇ ಕಾಲಕ್ಕೆ ಒಳಗೊಳ್ಳುವ ಗುಣವನ್ನು ಹೊಂದಿರುತ್ತದೆ. ಎತ್ತುಗೆಗಾಗಿ ಕನಕನು ಕುಲವನ್ನೇ ಅಸ್ತ್ರವನ್ನಾಗಿ ಬಳಸಿಕೊಂಡು ಕುಲ/ಜಾತಿಯ ಬಗೆಗಿನ ಗ್ರಹಿಕೆಗಳನ್ನು ಒಡೆಯುವ ವಿನ್ಯಾಸವನ್ನು ಇಲ್ಲಿ ನೋಡುತ್ತೇವೆ. ಯಾವುದು ಸಾಮಾಜಿಕ ನಿರಾಕರಣೆಯ ನೆಲೆಯಾಗಿರುತ್ತದೆಯೋ, ಅದುವೇ ಮರು ಪ್ರತಿಪಾದನೆಯ ವಿನ್ಯಾಸವೂ ಆಗುತ್ತದೆ. ಕನಕನ ಈ ಮುಂದಿನ ಹಾಡಿನಿಂದ ಈ ಮಾತನ್ನು ಇನ್ನಷ್ಟು ನಿಚ್ಚಳಪಡಿಸಬಹುದು:

"ನಾವು ಕುರುಬರು ನಮ್ಮ ದೇವರು ಬೀರಯ್ಯ
ಕಾವ ನಮ್ಮಜ್ಜ ನರಕುರಿಯ ಹಿಂಡುಗಳ ಪ
ಕಲಿಯುಗಕೆ ಗೌಡನಿವ ಸಂಗಾತಿ ಮಂತ್ರಿಸುತ
ಕಲಿಯುಗಂಗಳನ್ನೆಲ್ಲ ಪೊರೆವಾತ ನೀತ
ಜಲಜಾಕ್ಷ ಕಾಗಿನೆಲೆಯಾದಿಕೇಶವನ ಮನ
ವೋಲಿಸಿ ಭಜಿಸದ ಮನುಜ ಹುಚ್ಚು ಕುರುಬ"

ಈ ಮರು ಪ್ರತಿಪಾದನೆಯ ವಿನ್ಯಾಸಗಳು ತಲೆಯೆತ್ತುವುದಕ್ಕೆ ಕಾರಣವೇ ನಮ್ಮೀ ಸಾಮಾಜಿಕ ವಿನ್ಯಾಸಗಳು ಎಂಬುದು ಈ ಹಾಡಿನಿಂದ ತಿಳಿಯುತ್ತದೆ. ಪ್ರತಿಭಟನೆ ಹಾಗೂ ಪ್ರತಿರೋಧದ ಇಂತಹ ಚೌಕಟ್ಟುಗಳನ್ನು ಕಟ್ಟಿಕೊಳ್ಳುವುದಕ್ಕೆ ಕನಕನಿಗೆ ಎರಡು ಮುಖ್ಯ ಕಾರಣಗಳಿದ್ದವು. ಅವುಗಳನ್ನು ಉಳಿಗಮಾನ್ಯ ಹಾಗೂ ಸಾಮ್ರಾಜ್ಯಶಾಹಿ ಎಂದು ಸರಳವಾಗಿ ಹೇಳಬಹುದು. ಆದರೆ ಮಧ್ಯಕಾಲಿನ ಸಾಮಾಜಿಕ, ಧಾರ್ಮಿಕ, ರಾಜಕೀಯ ಸನ್ನಿವೇಶವು ಅಷ್ಟೊಂದು ಸುಳುವಾಗಿರಲಿಲ್ಲ. ದಿಟ ಈ ಸನ್ನಿವೇಶಗಳು ಇವತ್ತಿಗೂ ಕೂಡ ಬಿಕ್ಕಟ್ಟನ್ನು ತಂದೊಡ್ಡುವ ಬಗೆಗಳೇ ಆಗಿರುತ್ತವೆ. ಆದರೆ ಇವತ್ತು ಪ್ರಜಾಸತ್ತಾತ್ಮಕ ನೆರವುಗಳು ನಮಗಿರುವುದರಿಂದ ಈ ಬಿಕ್ಕಟ್ಟುಗಳ ಪರಿಹಾರಕ್ಕೆ ದಾರಿಗಳನ್ನು ಕಂಡುಕೊಳ್ಳಬಹುದು. ಆವತ್ತು ಕನಕನ

ಬದುಕಿನ ಸಂದರ್ಭದಲ್ಲಿ ಪ್ರಜಾಸತ್ತಾತ್ಮಕ ಗುರಿಗಳನ್ನು ಹಾಗೂ ದಾರಿಗಳನ್ನು ಕಂಡುಕೊಳ್ಳುವುದು ಸವಾಲೇ ಆಗಿತ್ತು. ಹಾಗಾಗಿ ಇಂತಹ ಸಾಮಾಜಿಕ ಹೊಣೆಗಾರಿಕೆಯನ್ನು ಸಂತರು, ಭಕ್ತಿ ಚಳುವಳಿಗಳು ಹೊರಬೇಕಾದ ಅನಿವಾರ್ಯತೆ ಇತ್ತು. ಈ ಹಿನ್ನಲೆಯಲ್ಲಿ ಕನಕನ ವ್ಯಕ್ತಿತ್ವ, ಅಭಿವ್ಯಕ್ತಿ ಹಾಗೂ ಆಶಯಗಳು ಮಹತ್ವವನ್ನು ಪಡೆದುಕೊಂಡಿವೆ. ಕನಕನ ಸಾಹಿತ್ಯಕ ಸಂವೇದನೆಗಳನ್ನು ಬೆನ್ನಿಗಿಟ್ಟುಕೊಂಡು ಪರಿಭಾಷೆಗಳ ರಾಜಕಾರಣವನ್ನು ಬಿಡಿಸಿ ನೋಡುವ ಜರೂರಿದೆ. ಹಾಗೂ ಪರಿಭಾಷೆಯ ತಾತ್ವಿಕ ಸ್ವರೂಪ, ವಿನ್ಯಾಸ ಹಾಗೂ ಬೆಳವಣಿಗೆಯನ್ನು ಕುರಿತು ಇಲ್ಲಿ ಚರ್ಚಿಸುವುದು ಕೂಡ ಅತ್ಯಂತ ಅಗತ್ಯವಾಗಿದೆ. ಪರಿಭಾಷೆಗಳ ತಾತ್ವಿಕತೆಯನ್ನು ಅರಿಯದೇ, ಅವುಗಳು ಹುಟ್ಟಿಸುವ ಸಾಂಸ್ಕೃತಿಕ ರಾಜಕಾರಣವನ್ನು ಅರಿಯಲು ಸಾಧ್ಯವಿಲ್ಲ.

**ಪರಿಭಾಷೆಗಳ ಚಹರೆ ಮತ್ತು ರಚನೆ:**

ಎರಡು ವಿನ್ಯಾಸಗಳ ಮೂಲಕ ಪರಿಭಾಷೆಗಳ ಬಗೆಗಿನ ತಾತ್ವಿಕತೆಯನ್ನು ಕುರಿತು ಚರ್ಚಿಸುವುದೇ ಅತ್ಯಂತ ತಕ್ಕುದಾದ ನಿಲುವು. ಆ ಎರಡೂ ವಿನ್ಯಾಸಗಳನ್ನು ಕಲೆಬಗೆ ಹಾಗೂ ಪತ್ಯಬಗೆ ಎಂದು ಗುರುತಿಸಬಹುದು. ಮೊದಲನೆಯದು ನುಡಿಯೇತರ ಸಂಗತಿಗಳನ್ನು ನೆಮ್ಮಿಕೊಂಡು ಮೈದಾಳುತ್ತದೆ. ಆದರೆ ಎರಡನೆಯದು ನುಡಿ ಸಂಗತಿಗಳನ್ನೇ ನೆಲೆಯಾಗಿಸಿಕೊಂಡು ಹೊರಹೊಮ್ಮುತ್ತದೆ. ಮುಖ್ಯವಾಗಿ ಪರಿಭಾಷೆಗಳು ಮೈಪಡೆಯುವುದೇ ಈ ಎರಡನೇ ಸಂಗತಿಯಾದ ಪತ್ಯಬಗೆಯದೊಳಗೆ. ಅಂದರೆ ಪದ, ಪದಕೋಶ, ಸೊಲ್ಲರಿಮೆ ಮುಂತಾದವುಗಳು ನುಡಿಯ ಒಳಹಂದರಕೆ ಸಂಬಂಧಿಸಿದ ಸಂಗತಿಗಳಾಗಿವೆ. ಆದರೆ ಕಲೆಬಗೆಯೆಂಬುದು ನುಡಿಯೇತರ ನೆಲೆಯಾದರೂ ಅದು ಕೂಡ ನುಡಿಯ ಮೂಲಕವೇ ಪ್ರಕಟಗೊಳ್ಳುತ್ತದೆ. ಒಟ್ಟಾರೆಯಾಗಿ ಪರಿಭಾಷೆಯೆಂಬುದು ಸಂಕಥನ ಕ್ರಿಯೆ, ಗ್ರಹಿಕೆಯ ವಿಧಾನ-ಸ್ವರೂಪವನ್ನು ಅಡಕಗೊಳಿಸಿ ತಿರುಳುಗಳನ್ನು ಮಂಡಿಸುವ ಕ್ರಮವಾಗಿದೆ. ನುಡಿಬಗೆಗಳು ಸಾಮಾಜಿಕ ಬಳಕೆಯ ಸನ್ನಿವೇಶಗಳನ್ನು ಖಚಿತವಾಗಿ ನಿರೂಪಿಸುತ್ತವೆ. ಅಂದರೆ ನಿರ್ಧಿಷ್ಟ ಸಾಮಾಜಿಕ ಸನ್ನಿವೇಶಕ್ಕೆ ಅನುಗುಣವಾಗಿ ಬಳಕೆಯಾಗುವ ನುಡಿಬಗೆಗಳನ್ನು ಪರಿಭಾಷೆಗಳನ್ನಾಗಿ ತಿಳಿಯಬಹುದು. ಹಾಗಾಗಿ ಕ್ಷೇತ್ರ ಆಶಯ ಹಾಗೂ ವಿಧಾನಗಳ ರೂಪುರೇಶಗಳನ್ನು ಆಧರಿಸಿ ಪರಿಭಾಷೆಗಳನ್ನು ವಿಶ್ಲೇಷಿಸುವ ಜರೂರಿದೆ. ಯಾಕೆಂದರೆ, ಸಾಮಾಜಿಕ ಸನ್ನಿವೇಶ, ಸಾಮಾಜಿಕ ಸಂಬಂಧ ಮತ್ತು ರಚನೆ ಹಾಗೂ ಅಧಿಕಾರ ಸಂಭಂಧಗಳು ಮುಖ್ಯವಾಗಿ ನುಡಿಯ ಮೂಲಕವೇ ಸಾಕರಗೊಳ್ಳುತ್ತವೆ. ಕ್ಷೇತ್ರ, ಆಶಯ ಹಾಗೂ ವಿಧಾನ ಈ ಮೂರು ನೆಲೆಗಳು ತಿಳಿವಿನ ಒಂದೊಂದು ಸಂಕಥನವು ನೆಲೆಪಡೆಯಲು ಒತ್ತಾಸೆಯಾಗಿರುತ್ತವೆ. ಆಯಾ ತಿಳಿವಿನ ಪರಿಭಾಷೆಗೆ ಬೇಕಾದ ಪರಿಣಿತ ಭಾಷೆಯ ಬಳಕೆಯನ್ನು ಈ ಕ್ಷೇತ್ರವು ತೀರ್ಮಾನಿಸುತ್ತದೆ. ಪ್ರಸಂಗ ಹಾಗೂ ಸಂವಾದಕರು ಈ ಎರಡೂ ನೆಲೆಗಳನ್ನು ಕ್ಷೇತ್ರವು ಒಳ್ಗೊಳ್ಳಲೇಬೇಕು. ಆದರೆ ಆಯಾ ಕ್ಷೇತ್ರದ ಪರಿಣಿತ ಹಾಗೂ ಸಾಮಾನ್ಯ

ತಿಳಿವನ್ನು ಈ ಸಂವಾದಕರು ಹೊಂದಿರಬೇಕಾಗುತ್ತದೆ. ಎತ್ತುಗೆಗಾಗಿ ವಿಜ್ಞಾನ, ಸಾಹಿತ್ಯ ಹಾಗೂ ಮಾಧ್ಯಮ ವಲಯಗಳಲ್ಲಿ ಬಳಕೆಯಾಗುವ ಯಾವುದೇ ನಿರ್ದಿಷ್ಟ ಪರಿಭಾಷೆಯನ್ನು ಇಲ್ಲಿ ಗಮನಿಸಬಹುದು. ಆಯಾ ವಲಯಗಳಲ್ಲಿ ಪಾಲ್ಗೊಳ್ಳುವ ಸಂವಾದಕರ ನಡುವಣ ಸಂಬಂಧವನ್ನು ಸಂಕಥನದ ಆಶಯವು ನಿರೂಪಿಸುತ್ತದೆ. ಅಂದರೆ ಸಂವಾದಕರು ಸಾಮಾಜಿಕ, ರಾಜಕೀಯ ಹಾಗೂ ಅಧಿಕಾರ ಕೇಂದ್ರಗಳ ಜೊತೆಗೆ ಹೊಂದಿರುವ ಸಂಬಂಧ ಮತ್ತು ಅಂತಸ್ತುಗಳನ್ನು ಹಾಗೂ ಅವರುಗಳ ನಡುವಣ ಸಾಮಾಜಿಕ ಸಂಬಂಧವನ್ನೂ ಈ ಸಂಕಥನದ ಆಶಯವು ನಿರ್ದೇಶಿಸುತ್ತದೆ. ಆಯಾ ವಲಯದ ಸಂಕಥನ ಕ್ರಿಯೆಯಲ್ಲಿ ನುಡಿಯು ವಹಿಸುವ ಪಾತ್ರವನ್ನು ಸಂಕಥನದ ವಿಧಾನವು ನೆಲೆಗೊಳಿಸುತ್ತದೆ. ಈ ಪ್ರಕ್ರಿಯೆಯಲ್ಲಿ ನುಡಿ ಸಹಜವಾಗಿಯೇ ಯಾವುದೇ ಸಾಮಾಜಿಕ ಕ್ರಿಯೆಯನ್ನು ಅಡರ್ಪಾಡುಗೊಳಿಸುವ ಇಲ್ಲವೇ ಈಗಾಗಲೇ ನೆಲೆಗೊಂಡಿರುವ ಸಮೂಹಗಳ ಅನುಭವವನ್ನು ಬಣ್ಣಿಸುತ್ತದೆ. ಆದರೆ ಇದು ನೇರ ಮತ್ತು ಸುಳುವಾದ ಪ್ರಕ್ರಿಯೆಯಾಗಿರುವುದಿಲ್ಲ ಬದಲಾಗಿ ಅತ್ಯಂತ ಸಂಕೀರ್ಣವೂ, ಅಸಮಾನವೂ ಹಾಗೂ ಅಧಿಕಾರಯುತ ಕ್ರಿಯೆಯಾಗಿರುತ್ತದೆ. ಇಂತಹ ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಅರಿಯುವಲ್ಲಿ ಪರಿಭಾಷೆಗಳು ರೂಪುಗೊಳ್ಳುವ ಈ ವಿನ್ಯಾಸಗಳು ಒತ್ತಾಸೆಯಾಗುತ್ತವೆ. ಅಷ್ಟೆಯಲ್ಲದೇ ಪರಿಭಾಷೆಗಳು ಸಂಸ್ಕೃತಿ ಓದಿನ ವಿಶ್ಲೇಷಣೆಯ ಪರಿಕರಗಳಾಗಿ, ಮಾನದಂಡಗಳಾಗಿ ಹಾಗೂ ಆಲೋಚನೆಯ ಸೂಚಕಗಳಾಗಿ ನೆರವಿಗೆ ಬರುತ್ತವೆ.

ಯಾವುದೇ ಬಗೆಯ ತಿಳಿವು, ವಿಚಾರ, ಸಾಮಾಜಿಕ ನಡತೆ ಇಲ್ಲವೇ ಕಸುಬನ್ನು ಕುರಿತಾದ ಪದಗಳು ಇಲ್ಲವೇ ಪರಿಭಾಷೆಗಳು ಮೈದಾಳುವುದು ಎರಡು ನೆಲೆಗಳಲ್ಲಿ; ಒಂದು ಆಯಾ ತಿಳಿವು, ವಿಚಾರ, ಕಸುಬಿನ ಸ್ವರೂಪವನ್ನು ಅಡಕಗೊಳಿಸಿ ಮಂಡಿಸುವುದು. ಹಾಗೂ ಆಯಾ ತಿಳಿವು, ವಿಚಾರ ಇಲ್ಲವೇ ಕಸುಬಿನೊಂದಿಗೆ ಏರ್ಪಡುವ ಸಾಮಾಜಿಕ ನಂಟಿನ ವಿನ್ಯಾಸವನ್ನು ಅಡರ್ಪಾಡುಗೊಳಿಸುವುದು. ಒಂದೊಂದು ಪರಿಭಾಷೆಯ ಗುರಿಯಾಗಿರುತ್ತದೆ. ಈ ತಾತ್ವಿಕ ಆಯಾಮವನ್ನು ಗಮನದಲ್ಲಿಟ್ಟುಕೊಂಡು, ಕನಕನು ತನ್ನ ಅಭಿವ್ಯಕ್ತಿಗಳಲ್ಲಿ ಬಳಸಿರುವ ಪರಿಭಾಷೆಗಳ ಸ್ವರೂಪ ಎಂತಹದು? ಈ ಪರಿಭಾಷೆಗಳನ್ನು ನಾವು ಎಷ್ಟರಮಟ್ಟಿಗೆ ಸಾಮಾಜಿಕ-ಸಾಂಸ್ಕೃತಿಕ ಓದಿನ ಪರಿಕರಗಳನ್ನಾಗಿ ಬಳಸಬಹುದು? ಅರುಹು ಹಾಗೂ ಕುರುಹುಗಳ ರಾಚನಿಕ ವಿನ್ಯಾಸಗಳನ್ನು ಈ ಪರಿಭಾಷೆಗಳು ಹೇಗೆ ತಿರುಗು ಮುರುಗಾಗಿಸುತ್ತವೆ? ಇಂತಹ ಪರಿಭಾಷೆಗಳ ಸಾಮಾಜಿಕ ವಿನ್ಯಾಸಗಳು ನೆಲೆಗೊಳ್ಳುವ ಬಗೆಗಳು ಯಾವವು? ಅಧಿಕಾರ ಕೇಂದ್ರಗಳನ್ನು ನಿರಚನಗೊಳಿಸುವಲ್ಲಿ ಇವುಗಳ ಪಾತ್ರವೇನು? ಎಂಬಿತ್ಯಾದಿ ಕೇಳ್ವಿಗಳನ್ನು ಇಲ್ಲಿ ಅಗತ್ಯವಾಗಿ ಕೇಳುವ ಜರೂರಿದೆ.

**ಪರಿಭಾಷೆಗಳ ಅಡರ್ಪಾಡು: ಯಜಮಾನ್ಯ ವರ್ಸಸ್ ಅಧೀನ ಸಂಸ್ಕೃತಿಗಳು**

ಚರಿತ್ರೆಯನ್ನು ಇಲ್ಲವೇ ಚಾರಿತ್ರಿಕ ಪ್ರಕ್ರಿಯೆಯನ್ನು ಕುರಿತು ಮಾತ್ನಾಡುವುದು ಎಂದರೆ ವಾಸ್ತವಗಳನ್ನು ಗುರುತಿಸುವ ಹಾಗೂ ಅಂತಹ ವಾಸ್ತವಗಳ ನಡುವಣ

ಗಡಿಗೆರೆಗಳನ್ನು ಕಾಲ-ದೇಶಗಳಿಗೆ ಅನುಗುಣವಾಗಿ ಗುರುತಿಸಬೇಕಾಗುತ್ತದೆ. ಹಾಗಾಗಿ ಕನಕನ ಹಾಡುಗಳಲ್ಲಿ ಚರಿತ್ರೆಯನ್ನು ಹುಡುಕುವ ಬದಲಾಗಿ ಚಾರಿತ್ರಿಕ ಸನ್ನಿವೇಶದಲ್ಲಿ ಕನಕನನ್ನು ಇರಿಸಿ ನೋಡುವ ಅಗತ್ಯವಿರುತ್ತದೆ. ಏಕೆಂದರೆ ಸಾಮಾಜಿಕ ವಾಸ್ತವಗಳೇ ಹೇಗೆ ಚರಿತ್ರೆಯ ವಾಸ್ತವಗಳಾಗುತ್ತವೆ ಎಂಬುದನ್ನು ಅರಿಯುವ ಕ್ರಮವೇ ಇದಾಗಿರುತ್ತದೆ. ಇದೊಂದು ರೀತಿಯಲ್ಲಿ ಸೂಚಿತದ [ಸಿಗ್ನಿಫೈಡ್] ಮೂಲಕ ಸೂಚಕವನ್ನು [ಸಿಗ್ನಿಫೈರ್] ಅರಿಯುವ ಬಗೆಯಾಗಿರುತ್ತದೆ. ಎತ್ತುಗೆಗಾಗಿ ಹೊಗೆಯ ಮೂಲಕ ಬೆಂಕಿಯ ಸುಳಿವನ್ನು ತಿಳಿಯುವಂತೆ. ಹಾಗೂ ನುಡಿ ಬದಲಾವಣೆಯ ಸ್ವರೂಪಗಳ ಮೂಲಕ ಕಾಲದ ಗಡಿಗಳನ್ನು ಅರಿಯುವಂತೆ. ಕನಕನು ಬಳಸಿರುವ ಪರಿಭಾಷೆಗಳನ್ನು ಸೂಚಿತಗಳನ್ನಾಗಿ ಬಳಸಿಕೊಂಡು, ಚರಿತ್ರೆಯ ಸೂಚಕಗಳನ್ನು ಕಂಡುಕೊಳ್ಳಬಹುದು. ಈ ಚಾರಿತ್ರಿಕ ಸಂಗತಿಗಳು ಸಮೂಹಗಳ ಒಡಲಲ್ಲಿ ಹುದುಗಿರುವ ಯಜಮಾನಿಕೆ ಇಲ್ಲವೇ ಅಧಿಕಾರ ರಚನೆಗಳನ್ನು ಅರಿವುದಕ್ಕೆ ಮಾನದಂಡಗಳಾಗಿಯೂ ನಮ್ಮ ನೆರವಿಗೆ ಬರುತ್ತವೆ.

ವ್ರೀಹಿನರೆದಲಗರ ನಡುವೆ ನಡೆಯುವ ಮಾತುಕತೆಯ ವಿವರಗಳನ್ನು ಗಮನಿಸಿದರೆ, ಸಾಮಾಜಿಕ ತಾರತಮ್ಯಗಳ ಮೂಲನೆಲೆಗಳು ಎಂತಹವು ಎಂಬುದು ಗೋಚರವಾಗುತ್ತವೆ. ಈ ಮಾತುಕತೆಯು ಕೇವಲ ಒಂದು ವಾದವನ್ನು ಬೆಳಸುವುದಕ್ಕೆ ಮಾತ್ರ ಸೀಮಿತವಾಗದೇ, ಆಯಾ ಕಾಲದ ಸಾಮಾಜಿಕ ವಿನ್ಯಾಸಗಳನ್ನು ಬಿಡಿಸಿ ನೋಡುವುದಕ್ಕೆ ಅಸ್ತ್ರಗಳಾಗುತ್ತವೆ. ಅಂದರೆ ಯಜಮಾನ್ಯ ಸಂಸ್ಕೃತಿ ಮತ್ತು ಅಧೀನ ಸಂಸ್ಕೃತಿಗಳನ್ನು ಸಾಂಕೇತಿಕಗೊಳಿಸುವ ಪರಿಭಾಷೆಗಳ ರಾಜಕಾರಣವನ್ನು ಈ ವಿನ್ಯಾಸಗಳು ಎತ್ತಿತೋರಿಸುತ್ತದೆ. ಎತ್ತುಗೆಗಾಗಿ ಸಮಾಜದ ಮೇಲು-ಕೀಳುಗಳನ್ನು ವಿಶ್ಲೇಷಿಸುವುದಕ್ಕೆ ಕನಕನು ಬಳಸಿಕೊಂಡಿರುವ ಸಾಂಕೇತಿಕ ಪರಿಕರಗಳನ್ನು ನೋಡಬಹುದು. ತಲೆತಲೆಮಾರುಗಳಿಂದ ನಮ್ಮ ಸಮೂಹಗಳನ್ನು ನಿಯಂತ್ರಿಸುತ್ತ, ಯಜಮಾನಿಕೆಯ ನೆಲೆಗಳನ್ನು ಗಟ್ಟಿಗೊಳಿಸುತ್ತ ಬಂದಿರುವ ಈ ಸಾಂಕೇತಿಕ ಪರಿಕರಗಳು ಅತ್ಯಂತ ಏಕಶ್ಚಿತ ಸಂಗತಿಗಳಾಗಿ ತೋರುತ್ತವೆ. ಆದರೆ ಇಂತಹ ಯಕಶ್ಚಿತ ಸಂಗತಿಗಳೇ ಜಾತೀಯತೆ, ಸಾಮಾಜಿಕ ಅಸಮಾನತೆ, ಪವಿತ್ರ-ಅಪವಿತ್ರದಂತಹ ನಿಲುವುಗಳನ್ನು ಹುಟ್ಟು ಹಾಕುವುದಕ್ಕೆ ಹೇಗೆ ಮೂಲತತ್ವಗಳಾಗಿ ಕೆಲಸ ಮಾಡುತ್ತವೆ ಎಂಬುದು ಗಮನಾರ್ಹ. "ಬುಧರು ಜರೆದು ನಿರಾಕರಿಸಿ ಬಿಡಲಂತು ನೀ ಶೂದ್ರಾನ್ನ ವಾದೆಯಲ", "ಕ್ಷಿತಿಯಮರರುಪನಯನದಲಿ ಸುವ್ರತ ಸುಭೋಜನ ಪರಮ ಮಂತ್ರಾಕ್ಷತೆಗಳಲಿ.... ದೇವರಿಗತಿಶಯದ ನೈವೇದ್ಯ ತಾನಹೆ" ಎಂದು ನೆಲ್ಲು [ವ್ರೀಹಿ] ಹೇಳುತ್ತ, ಹೊಸಮನೆಯ ಪುಣ್ಯಾರ್ಚನೆಗೆ, ಮದುಮಕ್ಕಳಿಗೆ, ಸೇಸೆಗೆ, ಗಂಧಾಕ್ಷತೆಗೆ ತನ್ನನ್ನು ಬಿಟ್ಟರೆ ಇದ್ಯಾವುದು ನೆರವೇರಲಾರದು ಎನ್ನುವುದಷ್ಟೇ ಅಲ್ಲ, "ಗೋವದು ಕರೆದ ಹಾಲಿಗೆ ಕುರಿಯ ಲಾಂತರವೆ" ಎಂಬ ದುರಹಂಕಾರದ ಮಾತುಗಳನ್ನೂ ಹೇಳುತ್ತದೆ. ದಿಟ, ಇದಕ್ಕೆ ಎದುರಾಗಿ ರಾಗಿಯೂ [ನರೆದಲೆಗೆ] ಸವಾಲನ್ನು ಎಸೆಯುತ್ತದೆ. ಆದರೆ ಈ ಮಾತುಗಳು ಕೇವಲ ಸವಾಲನ್ನು

ಈಡೇರಿಸಿಕೊಳ್ಳದ ತುಡಿತವಷ್ಟೆಯಲ್ಲ ಬದಲಾಗಿ ತನ್ನನಂಬಿಕೆಯ ಮಾತುಗಳಾಗಿವೆ. "ಸತ್ಯಹೀನನು ಬಡವರನು ಕಣ್ಣೆತ್ತಿನೋಡೆ", "ಹೆತ್ತಬಾಣಂತಿಯರು ರೋಗಿಗೆ ಪಥ್ಯ ನೀನಹೆ; ಹೆಣದ ಬಾಯಿಗೆ ತುತ್ತುನೀನಹೆ; ಎಳ್ಳು ದರ್ಭೆಗೆ ತೆತ್ತಿಗನು ನೀನಾದೆ" ಎಂಬೀ ಹೀಂಯಾಳಿಕೆಯ ಮಾತುಗಳು ಪ್ರತಿರೋಧದ ನೆಲೆಯನ್ನು ಪಡೆದುಕೊಂಡಿರುತ್ತವೆ. ಈ ಸಿಮಿಯಾಟಿಕ್ ನಿಲುವುಗಳನ್ನು ನಿಗಾಯಿಟ್ಟು ನೋಡಿದರೆ, ರಾಗಿಯು ಈ ಬಹುಜನರ ಅಸ್ಮಿತೆಯ ರೂಪಕವಾಗಿ, ನೆಲ್ಲು ಅಲ್ಪಸಂಖ್ಯಾತ ಮೇಲ್ವರ್ಗ/ಮೇಲ್ಜಾತಿಯ ಸೂಚಕವಾಗಿ ಅಡರ್‍ಪಾಡುಗೊಳ್ಳುತ್ತದೆ. ಯಾವುದು ಸಮೂಹಗಳ ಅಸ್ತಿತ್ವದ ಚಹರೆಯಾಗಿ ನೆಲೆಗೊಳ್ಳಬೇಕಿತ್ತೋ, ಅದು ಸಾಮಾಜಿಕ ಹೊರಗುಳಿವಿಕೆಗೆ ಕಾರಣವಾಗಿದೆ. ಇಂತಹ ಅಸಮಾನ ನಿಲುವುಗಳು ಎಲ್ಲ ಕಾಲದಲ್ಲಿಯೂ ತಮ್ಮ ಪ್ರಾಬಲ್ಯವನ್ನು ಮೆರೆದಿರುವುದಕ್ಕೆ ಕನಕನ ಈ ಪರಿಭಾಷೆಗಳೇ ಇಲ್ಲಿ ಸಾಕ್ಷಿಯಾಗಿವೆ. ಯಜಮಾನಿಕೆಯನ್ನು ನೆಲೆಗೊಳಿಸುವುದಕ್ಕೆ ಏನೆಲ್ಲ ತಂತ್ರಗಳನ್ನು ಬಳಸಿಕೊಳ್ಳಲಾಗುತ್ತದೆ ಎನ್ನುವುದಕ್ಕೆ ಯಾವುದೇ ನಿರ್ಧಿಷ್ಟವಾದ ರೂಪುರೇಶಗಳಿರುವುದಿಲ್ಲ. ಎತ್ತುಗೆಗಾಗಿ ನೆಲ್ಲು, ಗೋವು, ಗೋಮಾಂಸ, ಗೋಮೂತ್ರ, ಯೋಗ ಇತ್ಯಾದಿ ಯಕಶ್ಚಿತ ಸಂಗತಿಗಳನ್ನು ನೋಡಿದರೆ, ಕುವೆಂಪು ಹೇಳುವ ಇಲ್ಲಿ ಯಾವುದು ಯಕಶ್ಚಿತವಲ್ಲ ಎಂಬ ಮಾತಿನ ಮಹತ್ವ ಗೊತ್ತಾಗುತ್ತದೆ. ಅಂದರೆ ಪರಿಭಾಷೆಯ ರಾಜಕಾರಣ ಮುಖ್ಯವೇ ಹೊರತು ಆ ರಾಜಕಾರಣಕ್ಕೆ ಬಳಸಿಕೊಳ್ಳುವ ಪರಿಕರಗಳಲ್ಲ. ಈ ಪರಿಭಾಷೆ ರಾಜಕಾರಣದ ಮೂಲತತ್ವಗಳನ್ನು ಗುರುತಿಸುವಲ್ಲಿ ಕನಕನ ನಿಶಿತಮತಿ ಇಲ್ಲಿ ಎಷ್ಟಡಗಿದೆ ಎಂಬುದನ್ನು ಕಾಣಬಹುದು. ಏಕೆಂದರೆ ಕನಕನು ಶ್ರೀರಾಮನ ಮೂಲಕ ರಾಗಿಗೆ ಒಂದು ಸಾಂಸ್ಕೃತಿಕ ಮಾನ್ಯತೆಯನ್ನು ಕೊಡುಸುತ್ತಾನಷ್ಟೆಯಲ್ಲದೇ, ಇಂತಹವೊಂದು ತಿಳಿವು ನಮ್ಮ ಸಮೂಹಗಳ ಏಳ್ಗೆಗೆ ಹೇಗೆ ಒತ್ತಾಸೆಯಾಗಬಲ್ಲದು ಎಂಬುದನ್ನು ಮನಗಾಣಿಸುತ್ತಾನೆ. ಇಂತಹದೇ ಸಾಂಸ್ಕೃತಿಕ ನಿಲುವನ್ನು ಕುವೆಂಪು ಅವರ ಶೂದ್ರತಪಸ್ವಿ ನಾಟಕದಲ್ಲಿ ಕಾಣುತ್ತೇವೆ. ಅಂದರೆ ಶ್ರೀರಾಮನು ಶಂಬುಕನ ತಪಸ್ಸನ್ನು ಮಾನ್ಯ ಮಾಡುವ ಬಗೆಯನ್ನು ಇಲ್ಲಿ ನೋಡುತ್ತೇವೆ.

ಸಾಂಸ್ಕೃತಿಕ ಮಾನ್ಯತೆಗಾಗಿ ಶ್ರೀರಾಮನನ್ನು ಇಲ್ಲಿ ಒಂದು ಪ್ಯಾರಮಿಟರನ್ನಾಗಿ ಬಳಸುವುದರಿಂದ ಏನು ಅಪಾಯ ಎದುರಾಗಬಹುದು ಎಂಬ ಅರಿವು ನನಗಿದೆ. ಆದರೆ ಕುವೆಂಪು ಹಾಗೂ ಕನಕ ಇವರು ಶ್ರೀರಾಮನನ್ನು ಕೋಮುವಾದವನ್ನು ನೆಲೆಗೊಳಿಸುವುದಕ್ಕೆ ರೂಪಕವನ್ನಾಗಿ ಬಳಸದೇ, ಬಹುಜನರ ಬದುಕಿನ ಆಶೋತ್ತರಗಳನ್ನು ಮಾನ್ಯ ಮಾಡುವ ಹಾಗೂ ಅವರುಗಳ ಅಸ್ತಿತ್ವದ ಚಹರೆಗಳನ್ನು ಮರು ವಿನ್ಯಾಸಗೊಳಿಸುವುದರ ಸಾಂಕೇತಿಕ ಪ್ರತಿನಿಧಿತ್ವದ ರೂಪಕವನ್ನಾಗಿ ಶ್ರೀರಾಮನನ್ನು ಇವರು ಆಯ್ಕೆ ಮಾಡಿಕೊಂಡಿರುತ್ತಾರೆ. ಶ್ರೀರಾಮ, ವ್ರೀಹಿ, ನರೆದಲಗ, ಶಂಬುಕ, ಗೋವು, ಕುರಿ ಮುಂತಾದ ಹೆಸರುಗಳು ಸಾಂಸ್ಕೃತಿಕ ರಾಜಕಾರಣದ ಪರಿಭಾಷೆಗಳೇ ದಿಟ. ಆದರೆ ಈ ಸಾಂಕೇತಿಕ ಹೆಸರುಗಳ ಅಡರ್‍ಪಾಡುವಿಕೆ ಹೇಗೆ

ನೆಲೆಗೊಳ್ಳುತ್ತದೆಯೋ ಅವುಗಳನ್ನು ನೆಲೆಯಾಗಿಸಿಕೊಂಡು ಸಾಂಸ್ಕೃತಿಕ ರಾಜಕಾರಣದ ನಿಲುವುಗಳು ತೀರ್ಮಾನಗೊಳ್ಳುತ್ತವೆ. ಸಮುದಾಯ ಪರವಾದ ತೀರ್ಮಾನಗಳನ್ನು ಕನಕನಂತಹ ಸಂತರು ಹಾಗೂ ಕುವೆಂಪು ಅವರಂತಹ ದಾರ್ಶನಿಕರಲ್ಲಿ ಕಾಣುತ್ತೇವೆ.

**ಪರಿಭಾಷೆಗಳು ಸಾಂಸ್ಥಿಕಗೊಳ್ಳುವ ಬಗೆಗಳು**

ಎಲ್ಲ ಪರಿಭಾಷೆಗಳು ಕೂಡ ಆಯಾ ನುಡಿಯ ಪದಕೋಶದ ಭಾಗವೇ ಆಗಿರುತ್ತವೆ. ಆದರೆ ಅವುಗಳು ಕೇವಲ ಪದಗಳಾಗಿ ಬಳಕೆಯಾಗದೇ, ಸಾಮಾಜಿಕ, ರಾಜಕೀಯ ಸೂಚಕಗಳಾಗಿರುತ್ತವೆ. ಈ ಸೂಕಗಳು ಸಾಮಾಜಿಕ ವಾಸ್ತವವನ್ನು ಪ್ರತಿನಿಧಿಸುತ್ತವೆ, ನಿರ್ದೇಶಿಸುತ್ತವೆ, ನಿಯಂತ್ರಿಸುತ್ತವೆ ಹಾಗೂ ಸಮಾಜವನ್ನು ವಿಂಗಡಿಸುತ್ತವೆ. ಹಾಗಾಗಿ ಪರಿಭಾಷೆಗಳನ್ನು ಸಾಮಾಜಿಕ ವಾಸ್ತವದ ಸೂಚಕಗಳನ್ನಾಗಿ ಅರಿಯುವುದು ಕನಕನ ಹಾಡುಗಳಷ್ಟೆ ಸಂಕೀರ್ಣವಾಗಿರುತ್ತದೆ. ಈ ಸಂಕೀರ್ಣತೆಗೆ ಕಾರಣವೇ ಈ ಪರಿಭಾಷೆಗಳು ಎಂಬುದು ಯಾರಲ್ಲಿಯಾದರೂ ಅಚ್ಚರಿಯನ್ನು ಮೂಡಿಸಬಲ್ಲು. ಇಲ್ಲಿ ಎರಡು ತೊಡಕುಗಳು ಎದುರಾಗುತ್ತವೆ, ಒಂದು ಪರಿಭಾಷೆಗೆ ಸಂಬಂಧಿಸಿದ್ದಾರೆ, ಮತ್ತೊಂದು ಮತ್ತೊಂದು ಸಾಮಾಜಿಕ ವಾಸ್ತವಕ್ಕೆ ಸಂಬಂಧಿಸಿದೆ. ಈಗಾಗಲೇ ಪರಿಭಾಷೆಗಳ ಚಹರೆ ಮತ್ತು ರಚನೆಯನ್ನು ಕುರಿತು ಚರ್ಚಿಸಿಯಾಗಿದೆ. ಈಗ ಸಾಮಾಜಿಕ ವಾಸ್ತವವನ್ನು ಕುರಿತು ಚರ್ಚಿಸಬೇಕಿದೆ. ಕಾರಣ ಸಾಮಾಜಿಕ ವಾಸ್ತವ ಹಾಗೂ ಪರಿಭಾಷೆಗಳ ಸ್ವರೂಪವನ್ನು ಅರಿಯುವ ಮೂಲಕ ಸಂಸ್ಕೃತಿಯ ಒಂದೊಂದು ವಿನ್ಯಾಸವೂ ಹೇಗೆ ಸಾಂಸ್ಥಿಕ ನೆಲೆಯನ್ನು ಪಡೆಯುತ್ತವೆ ಎಂಬುದನ್ನು ತಿಳಿಯಲು ಅನುವಾಗುತ್ತದೆ. ಸಮುದಾಯದ ಯಾವುದೇ ವಿನ್ಯಾಸವನ್ನು ವಿಶ್ಲೇಷಿಸಲು ಈ ಎರಡೂ ಬಗೆಗಳು ಅಗತ್ಯವಾಗಿ ಬೇಕಾಗುತ್ತವೆ. ಕರ್ನಾಟಕದಲ್ಲಿ ಸಂಸ್ಕೃತಿ ಕುರಿತ ಓದುಗಳು ಈಗಾಗಲೇ ಸಾಕಷ್ಟು ಬೆಳೆದು ಬಂದಿರುತ್ತವೆ. ಆದರೆ ಈ ಎಲ್ಲ ಓದುಗಳು ಕೂಡ ಇದುವರೆಗೆ ತಮ್ಮ ವಿಶ್ಲೇಷಣೆಗೆ ನೆಲೆಯಾಗಿಸಿಕೊಂಡಿರುವುದು ಕೇವಲ ಸಾಹಿತ್ಯ ಹಾಗೂ ಸಾಮಾಜಿಕ ವಿವರಗಳನ್ನು ಮಾತ್ರ. ಅಂದರೆ ಪರಿಭಾಷೆಗಳ ರಾಜಕಾರಣ ಮೂಲಕ ಸಾಮಾಜಿಕ ವಾಸ್ತವವನ್ನು ಅರಿಯುವ ಪ್ರಯತ್ನಗಳು ಈ ಓದುಗಳಲ್ಲಿ ತೀರಾನೇ ಕಮ್ಮಿಯೆಂದು ಹೇಳಬೇಕು.

ಸಾಮಾಜಿಕ ವಾಸ್ತವವನ್ನು ಬಿಡಿಸಿ ನೋಡುವುದು ಕೂಡ ಅತ್ಯಂತ ಸವಾಲಿನ ಸಂಗತಿಯೇ ಸರಿ. ಏಕೆಂದರೆ ವಾಸ್ತವ ಅನ್ನುವುದು ಕೇವಲ ಗ್ರಹಿಕೆಗೆ ಮಾತ್ರ ಸೀಮಿತವಾದ ಸಂಗತಿಯಲ್ಲ, ಅದು ಸಾಮಾಜಿಕ ನಂಬಿಕೆಯನ್ನೂ ನೆಮ್ಮಿಕೊಂಡಿರುತ್ತದೆ. ಹಾಗಾಗಿ ಸಾಮಾಜಿಕ ವಾಸ್ತವವನ್ನು ಕೇವಲ ಮೆಟಾಫಿಸಿಕಲ್ ನೆಲೆಯಿಂದ ನಿರ್ವಚಿಸುವುದು ತಕ್ಕುದಾದ ಮಾದರಿಯಲ್ಲ. ಆದರೆ ಈ ಮೆಟಾಫಿಸಿಕಲ್ ನೆಲೆಯ ಮೂಲಕ ಸಾಹಿತ್ಯವನ್ನು ರಚಿಸುವ ಅಭ್ಯಾಸವನ್ನು ಕನಕನಲ್ಲಿ ಮಾತ್ರ ಕಾಣಲಕ್ಕೆ ಆಗುವುದಿಲ್ಲ. ಈ ದಿಟವನ್ನು ಮೇಲೆ ಈಗಾಗಲೇ ಉಲ್ಲೇಖಿಸಿರುವ ಸಾಹಿತ್ಯ ಮತ್ತು ಹಾಡಿನಲ್ಲಿ ಅಂತರ್ನಿಹಿತವಾಗಿರುವ ತಿರುಳಿನ ಮೂಲಕವೇ ಅರಿಯಬಹುದಾಗಿದೆ. ಕನಕನ ಗುರಿ ಸಾಮಾಜಿಕ ಮಾನಸಿಕ ನಿಲುಗಳ

ಸಹಯೋಗದಿಂದ ಒಂದ ವಾಸ್ತವವನ್ನು ನೆಲೆಗೊಳಿಸುವ ಬಗೆಯನ್ನು ನಾವು ಇಲ್ಲಿ ಕಾಣಬಹುದು. ಇದಕ್ಕೆ ಪೂರಕವಾದ ಪರಿಭಾಷೆಗಳ ಆಯ್ಕೆಯನ್ನೂ ಇಲ್ಲಿ ನೋಡುತ್ತೇವೆ. ಈ ಆಯ್ಕೆಗಳು ಒಣ ಸಿದ್ಧಾಂತದ ಮಾದರಿಗಳಲ್ಲ. ಹೊರತಾಗಿ ಬದುಕಿನ ವಿನ್ಯಾಸದೊಳಗಿನಿಂದ ಅವು ರೂಪುಗೊಂಡಿರುತ್ತವೆ. ಹಾಗಾಗಿ ಸತ್ಯ ಹಾಗೂ ವಾಸ್ತವದ ವಿನ್ಯಸಗಳೇ ಬೇರೆಯಾಗಿರುತ್ತವೆ. ನಿಶೆ ಮುಂತಾದ ತಿಳಿವಿಗರು ಸತ್ಯವೆಂಬುದು ಭ್ರಮೆ ಎಂದು ಯಾವುದನ್ನು ಕುರಿತು ಹೇಳಿದರೋ, ಅಂತಹ ಸಂಗತಿಯನ್ನು ಇಲ್ಲಿ ಕನಕನು ಹೇಳಲಿಲ್ಲ. ಆದರೆ ವಾಸ್ತವ ಎಂಬುದು ಅದು ಕೇವಲ ದಿಟ ಮತ್ತು ಸಟೆಗಳ ನಡುವಣ ತಿಕ್ಕಾಟದ ಸಂಗತಿಯನ್ನಾಗಿ ನೋಡದೆ, ಅದೊಂದು ಆಯಾ ಸಾಮಾಜಿಕ ಸನ್ನಿವೇಶದಲ್ಲಿ ಅವತರಿಸುವ ಬಗೆಯಾಗಿರುತ್ತದೆ ಎಂಬುದನ್ನು ಕನಕನು ಮನಗಂಡಿರುತ್ತಾನೆ. ಅಂದರೆ ಇಂತಹ ಅವತಾರಗಳು ಆಯಾ ಸಮೂಹದ 'ನಂಬಿಕೆಯ ಕ್ರಿಯೆಗಳನ್ನು' ರೂಪಿಸುವ ಮಾದರಿಗಳಾಗಿರುತ್ತವೆ. ಆದರೆ ನಿಶೆಯಂತಹವರು ಹೇಳುವುದು, ದಿಟ ಹಾಗೂ ಸಟೆಗಳ ನಡುವೆ ಏರ್ಪಡುಬಹುದಾದ ನಂಬಿಕೆಯ ಕ್ರಿಯೆಗಳನ್ನು ಅಳಿಸುವ ಇಲ್ಲವೇ ಸಾಮಾಜಿಕ–ಮಾನಸಿಕ ನಿಲುವುಗಳನ್ನು ಕದಲಿಸುವ ಬಗೆಯಾಗಿರುತ್ತದೆ. ಇಲ್ಲಿ ಕನಕನು ಮಂಡಿಸುವ ವಾಸ್ತವ ಹಾಗೂ ಸತ್ಯದ ನಿಲುವುಗಳಿಗೂ ನಿಶೆ ಮಂಡಿಸುತ್ತಿರುವ ನಿಲುವುಗಳಿಗೂ ಅಂತರವಿರುವುದು ಅವರುಗಳು ಬಳಸಿಕೊಳ್ಳುವ ವಿವರಗಳಲ್ಲಿ ಅಲ್ಲ ಬದಲಾಗಿ ಅವರುಗಳು ರೂಪಿಸಿಕೊಂಡಿರುವ ತಾತ್ವಿಕ ವಿನ್ಯಾಸಗಳಲ್ಲಿ ಎಂಬುದು ವಿಶೇಷ. ಈಗಾಗಲೇ ಸಾಂಸ್ಥಿಕಗೊಂಡಿರುವ ಸಾಮಾಜಿಕ ನೆಲೆಗಳು ಉಂಟುಮಾಡುತ್ತಿರುವ ಅಪಾಯಗಳ ಬಗೆಗೆ ಕನಕನಿಗೆ ಎಚ್ಚರ ಇರುವುದರಿಂದ, ಆ ಬಗೆಯ ತಾತ್ವಿಕತೆಯನ್ನು ನೆಲೆಗೊಳಿಸಲು ಒತ್ತಾಸೆಯಾಗಿರುವ ಪರಿಭಾಷೆಗಳನ್ನು ಕುರಿತು ಕನಕನು ಹೆಚ್ಚು ಚಿಂತಿಸುವುದನ್ನು ನೋಡುತ್ತೇವೆ.

ನಮ್ಮ ಸಮೂಹಗಳನ್ನು ನಿರಂತರವಾಗಿ ಕಾಡುತ್ತಿರುವ ಮೂರು ಸಂಕಥನಗಳಿವೆ. ಅವುಗಳನ್ನು ಜಾತೀಯತೆ, ಲೈಂಗಿಕತೆ ಹಾಗೂ ಧರ್ಮ ಎಂದು ಮೂರು ಬೇರೆ ಬೇರೆ ಸಂಕಥನಗಳನ್ನಾಗಿ ಗುರುತಿಸಬಹುದು. ಕನಕ ತನ್ನೆಲ್ಲ ಸಾಹಿತ್ಯಕ ಅಭಿವ್ಯಕ್ತಿಗಳಾದ ರಾಮಧಾನ್ಯ ಚರಿತ್ರೆ, ಮೋಹನತರಂಗಿಣಿ, ನಳಚರಿತ್ರೆ ಹಾಗೂ ಹಡುಗಳಲ್ಲಿ ಬಹುತೇಕವಾಗಿ ಚರ್ಚಿಸಿರುವುದು ಈ ಮೂರು ಸಂಕಥನಗಳನ್ನೇ. ಹಾಗೂ ಈ ಸಂಕಥನಗಳನ್ನು ಬಿಡಿಸಿ ನೋಡಲು ಬೇಕಾದ ತಾತ್ವಿಕ ವಿನ್ಯಾಸಗಳನ್ನೂ ಕನಕ ತನ್ನೀ ಸಾಹಿತ್ಯದಲ್ಲಿ ಅಡಕಗೊಳಿಸಿರುತ್ತಾನೆ. ಕನಕನ ಈ ಎಲ್ಲ ಆಯಾಮಗಳನ್ನು ವಿಶ್ಲೇಷಿಸಿ ನೋಡಲು ಪರಿಭಾಷೆಗಳ ಅಗತ್ಯ ಎಷ್ಟೆಂಬುದನ್ನು ನಾವು ಮನಗಾಣಬೇಕಿದೆ. ಏಕೆಂದರೆ ಜಾತಿ, ಲಿಂಗ, ಧರ್ಮ, ದೇವರು, ಮೇಲು, ಕೀಳು, ಸತ್ಯ, ವಾಸ್ತವ, ನಂಬಿಕೆ, ಅಪನಂಬಿಕೆ ಮುಂತಾದ ಸಂಗತಿಗಳನ್ನು ಕುರಿತ ಪರಿಭಾಷೆಗಳು ಹೇಗೆ ನಮ್ಮನ್ನು ನಿಯಂತ್ರಿಸುತ್ತವೆ ಅನ್ನುವ ಸಂಗತಿ ಕನಕನಿಗೆ ಅತ್ಯಂತ ಸ್ಪಷ್ಟವಾಗಿತ್ತು. ಆದ್ದರಿಂದಲೇ ಕನಕನು ಅದೇ ಪರಿಭಾಷೆಗಳನ್ನೇ

ಪರಿಕರಗಳನ್ನಾಗಿ ಬಳಸಿಕೊಂಡು, ಈ ಮೇಲೆ ಸೂಚಿಸಿದ ಸಂಕಥನಗಳನ್ನು ನಿರಚನಗೊಳಿಸುವ ಹಾಗೂ ಅವುಗಳ ಸಾಂಸ್ಥಿಕ ಸ್ವರೂಪವನ್ನು ಬದಲಾಯಿಸುವ ಇರಾದೆಯನ್ನು ಹೊಂದಿದ್ದನು. ಕಾಮ ಪ್ರೇಮಗಳ ನಡುವಣ ವ್ಯತ್ಯಾಸಗಳು ಹೆಚ್ಚು ಮುಂಚೂಣೆಗೆ ಬಂದಿರುವುದು ಕೂಡ ಇದೇ ಕಾಲದಲ್ಲಿ. ಹಾಗಾಗಿ ನಳಚರಿತ್ರೆ ಮತ್ತು ಮೋಹನತರಂಗಣಿ ಎಂಬಂತಹ ಕಾಮ ಪ್ರೇಮಗಳಿಗೆ ಸಂಬಂಧಿಸಿದ ಸಂವೇದನೆಗಳನ್ನು ಕನಕನು ವಿಶ್ಲೇಷಿಸಿರುತ್ತಾನೆ. ಬದುಕಿನ ಯಾವ ಯಾವ ನಿಲುಗಳನ್ನು ಸಾಂಸ್ಥಿಕಗೊಳಿಸಲಾಗುತ್ತದೆ ಎನ್ನುವುದನ್ನು ಕನಕನ ಈ ಎಲ್ಲ ಅಭಿವ್ಯಕ್ತಿಗಳು ನಿರೂಪಿಸುತ್ತವೆ. ಕೇವಲ ಸಂಕಥನಗಳು ಮಾತ್ರ ಇಂತಹ ಸಾಂಸ್ಥಿಕ ಪ್ರಕ್ರಿಯೆಗೆ ಒಳಗಾಗುವುದಿಲ್ಲ. ಬದಲಾಗಿ ಈ ಸಂಕಥನಗಳನ್ನು ನೆಲೆಗೊಳಿಸುವುದಕ್ಕೆ ಒತ್ತಾಸೆಯಾಗಿರುವ ಪರಿಭಾಷೆಗಳು ಕೂಡ ಈ ಪ್ರಕ್ರಿಯೆಗೆ ಒಳಗಾಗುತ್ತವೆ. ಮತ, ಜಾತಿ, ಕುಲ, ಪ್ರದೇಶ, ಕಸುಬು, ಲಿಂಗ, ಧರ್ಮ ಮೊದಲಾದವುಗಳನ್ನು ಕುರಿತ ಸಂಕಥನ ಹಾಗೂ ಪರಿಭಾಷೆಗಳು ಸಾಂಸ್ಥಿಕ ಪ್ರಕ್ರಿಯೆಗೆ ಒಳಗಾಗಿರುವುದರಿಂದ, ಸಾಂಸ್ಕೃತಿಕ, ರಾಜಕೀಯ ಹಾಗೂ ಧಾರ್ಮಿಕ ದ್ವೈಕಾಟಮಿಗಳು ಏರ್ಪಟ್ಟಿವೆ. ಅಷ್ಟೆಯಲ್ಲದೇ ಸಮುದಾಯಗಳ ಬದುಕಿನ ನೆಮ್ಮದಿಯನ್ನು ಮತ್ತು ನಂಬಿಕೆಯ ಕ್ರಿಯೆಗಳನ್ನು ಕದಲಿಸಿವೆ. ಇಂತಹ ಸಾಂಸ್ಕೃತಿಕ ಪಲ್ಲಟದಲ್ಲಿಯೇ ಕನಕನಂತಹ ಸಂತ ಪರಂಪರೆಗಳು ತಲೆಯೆತ್ತಿರುತ್ತವೆ.

### ನಿರಚನಾ ಪ್ರಕ್ರಿಯೆ ಹಾಗೂ ಸಂತ ಪರಂಪರೆ

ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯನ್ನು ನಿಗಾಯಿಟ್ಟು ನೋಡಿದರೆ, ಹಲವಾರು ಪರಂಪರೆಗಳು ಈ ನಾಡಿನಲ್ಲಿ ಮೈದಾಳಿರುವುದು ನಮ್ಮರಿವಿಗೆ ಬರುತ್ತದೆ. ಆದರೆ ಈ ನಾಡಿನ ಸಾಂಸ್ಕೃತಿಕ, ಚಾರಿತ್ರಿಕ ಬೆಳವಣಿಗೆಗಳನ್ನು ಬಿಡಿಸಿ ನೋಡಲು ಈ ಎಲ್ಲ ಪರಂಪರೆಗಳನ್ನು ಆಕರಗಳನ್ನಾಗಿ ಬಳಸಿಕೊಂಡಿರುವುದು ಅತ್ಯಂತ ವಿರಳವೇ ಸರಿ. ಇವುಗಳು ಕೇವಲ ಪರಂಪರೆಗಳು ಮಾತ್ರವಲ್ಲ ಆಲೋಚನೆಯ ಕ್ರಮಗಳೂ ಆಗಿರುತ್ತವೆ. ಒಂದೊಂದು ಇತಿಹಾಸ ಕಥನವು ಕೂಡ ಆಕರ ಸಾಮಾಗ್ರಿ ಮತ್ತು ಸಾಕ್ಷಿಗಳನ್ನು ಬಯಸುತ್ತದೆ. ಹಾಗಾಗಿ ಚರಿತ್ರೆಯನ್ನು ಕಟ್ಟುವುದೆಂದರೆ ಅದೊಂದು ಸಂಕಥನ ಕ್ರಿಯೆಯಾಗಿರುತ್ತದೆ. ಏಕೆಂದರೆ ಮೀನುಗಳು ನೀರಿನಲ್ಲಿ ಬದುಕುವಂತೆ ಮನುಷ್ಯರು ಸಂಕಥನಗಳಲ್ಲಿ ಬದುಕುತ್ತಾರೆ. ಈ ಸಂಕಥನ ಕ್ರಿಯೆಗಳನ್ನು ಕೈಬಿಟ್ಟು ಇಲ್ಲವೇ ಇವುಗಳ ತಾತ್ವಿಕತೆಯನ್ನು ಪರಿಗಣಿಸದೇ, ಯಾವುದೇ ಸಮೂಹಗಳ ಬದುಕಿನ ವಿನ್ಯಾಸವನ್ನು ಅರಿಯಲು ಸಾಧ್ಯವಿಲ್ಲ. ಅದು ವಿಶೇಷವಾಗಿ ಭಕ್ತಿ ಚಳುವಳಿ, ತತ್ವಪದಕಾರರು ಹಾಗೂ ಸಂತರು ತಮ್ಮ ತಾತ್ವಿಕತೆಯ ಪರಂಪರೆಯನ್ನು ಕಟ್ಟಿರುವುದೇ, ತಮ್ಮೆದುರಿಗಿರುವ ಸಮೂಹ ವಿರೋಧಿ ಸಂಕಥನಗಳನ್ನು ಒಡೆಯುವುದಕ್ಕೆ. ತಮ್ಮೀ ನಿರಚನಾ ಪ್ರಕ್ರಿಯೆಯನ್ನು ನೆಲೆಗೊಳಿಸಲು ಇವರು ಅತ್ಯಂತ ವ್ಯಾಪಕವಾಗಿ ರೂಪಕಗಳನ್ನು ಬಳಸಿಕೊಂಡರು. ಈ ರೂಪಕ ರಾಜಕಾರಣವನ್ನು ಬಳಸುವುದಕ್ಕೆ ಮುಖ್ಯ ಕಾರಣವೇ ಮಾನವರ ಗ್ರಹಿಕೆಯ

ಮಾದರಿಗಳು. ಅಂದರೆ ನುಡಿಯಾಗಲಿ, ಯಾವುದೇ ಅನುಭವವಾಗಲಿ ಇಲ್ಲವೇ ಇನ್ನಾವುದೇ ಗ್ರಹಿಕೆಯಾಗಲಿ ಇವುಗಳನ್ನು ಪಡೆಯುವಲ್ಲಿ ಮಾನವರು ಮೊದಲು ಬಳಸಿಕೊಳ್ಳುವ ವಿಧಾನವೇ ರೂಪಕಗಳು ಹಾಗೂ ಉಪಮೆಗಳು. ಬದುಕಿನ ಈ ಮೂಲತತ್ವಗಳನ್ನೇ ನೆಲೆಯಾಗಿಸಿಕೊಂಡು ಸಮೂಹಗಳ ವಿವೇಕವನ್ನು ಅರಿಯುವ, ರೂಪಿಸುವ, ತಿದ್ದುವ ಕಾಯಕಕ್ಕೆ ಸಂತ ಪರಂಪರೆಯು ಮುಂದಾಗಿರುತ್ತದೆ. ಪ್ರಭುತ್ವದ ನಿಲುವುಗಳನ್ನು ವಿರೋಧಿಸಲು, ಉಳಿಗಮಾನ್ಯ ನಡೆಗಳನ್ನು ಖಂಡಿಸಲು, ಲಿಂಗೀಯ ಅಸಮಾನ ರಚನೆಗಳನ್ನು ನಿರಚನಗೊಳಿಸಲು ವಚನಕಾರರು, ದಾಸರು ಹಾಗೂ ತತ್ವಪದಕಾರರು ರೂಪಕ ಪರಿಭಾಷೆಗಳನ್ನು ಬಳಸಿರುವರು. ಎತ್ತುಗೆಗಾಗಿ ಕೃಷ್ಣನು ಬಾಣಾಸುರನ ಶೋಣಿತಪುರದ ಮೇಲೆ ದಂಡೆತ್ತಿ ಹೋಗುವಾಗ ಕನಕದಾಸರು ಈ ರೂಪಕದ ಮೂಲಕ ಬಣ್ಣಿಸುತ್ತಾರೆ;

"ಮುತ್ತಿನ ಗದ್ದುಗೆ ಗರುಡನ ಹೆಗಲಿನೊ
ಳೆತ್ತಿಸಿ ಬಿಗಿದು ಹಲ್ಲಣಿಸೆ
ಅತ್ಯಂತ ಸೌಖ್ಯವ ಮಾಡಿ ಸಂತಸದಿಂದೆ
ಹತ್ತಿದ ಶ್ರೀಕೃಷ್ಣರಾಯ"

ಹಾಗೂ ಕುರುಪಿಯಾದ ನಳಮಹಾರಾಜನ ಬಣ್ಣನೆ ಈ ರೀತಿಯಿದೆ, ದಿಟದಲ್ಲಿ ಇದನ್ನು ರೂಪಕವನ್ನಾಗಿ ಪರಿಗಣಿಸದೇ ಇರಬಹುದು ಆದರೆ ಈ ವಿನ್ಯಾಸವು ಮತ್ತೊಂದು ಬಗೆಯ ಅನುಭವನ್ನು ಬಣ್ಣಿಸಲು ಮಾತ್ರ ರೂಪಕವಾಗುತ್ತದೆ. ಯಶೋಧರ ಚರಿತ್ರೆಯಲ್ಲಿ ಅಷ್ಟಾವಂಕನ ಚಹರೆಯನ್ನು ಬಣ್ಣಿಸುವ ಬಗೆಯೂ ಇದೆಯಾಗಿರುತ್ತದೆ. ವಾಸ್ತವದಲ್ಲಿ ಅಷ್ಟಾವಂಕನ ಚಹರೆಯೇ ಒಂದು ರೂಪಕ. ಹಾಗೆಯೇ ಕನಕನ ಈ ಬಣ್ಣನೆಯೂ ಕೂಡ ಒಂದು ರೂಪಕವೇ ಸರಿ.

"ಅಡ್ಡಮೋರೆಯ ಗಂಟುಮೂಗಿನ
ದೊಡ್ಡಹೊಟ್ಟೆಯ ಗೂನು ಬೆನ್ನಿನ
ಗಿಡ್ಡ ಕೈಕಾಲುಗಳ ಉದುರಿದ ರೋಮಮೀಸೆಗಳ
ಜಡ್ಡು ದೇಹದ ಗುಜ್ಜುಗೊರಲಿನ
ಗಿಡ್ಡ ರೂಪಿನ ಹರಕುಗಡ್ಡದ
ಹೆಡ್ಡನಾದ ಕುರೂಪಿತನದಲ್ಲಿ ನೃಪತಿ ವಿಷಯದಿಂದ"

ರೂಪಕ ಪರಿಭಾಷೆಯನ್ನು ಯಾಕೆ ಬಳಸಬೇಕು? ಇದರ ಹಿಂದಿನ ತಾತ್ವಿಕತೆ ಏನು? ಇಂತಹ ತಾತ್ವಿಕತೆಗೆ ಯಾಕೆ ಸಾಂಸ್ಕೃತಿಕ ಅನುವು ಸಿಗುತ್ತದೆ? ಇತ್ಯಾದಿ ಕೇಳ್ವಿಗಳು ಇಲ್ಲಿ ನಿರುಪಯುಕ್ತವೆಂದು ತೋರಬಹುದು. ಆದರೆ ಸಮೂಹಗಳು ಯಾವಾಗಲೂ ಚಲನಶೀಲವಾಗಿರುತ್ತವೆ. ಈ ಚಲನೆ ಸಮೂಹಗಳ ಒಟ್ಟು ಗ್ರಹಿಕೆ, ಅನುಭವ, ಅಭಿವ್ಯಕ್ತಿ, ಸಾಮಾಜಿಕ ವ್ಯವಹಾರ ಹಾಗೂ ಬದುಕಿನ ಎಲ್ಲ ವಲಯಗಳಿಗೂ ಇದು ಸಂಬಂಧಿಸಿದ ಸಂಗತಿಯಾಗಿದೆ. ಇಂತಹ ವಿದ್ಯಮಾನಗಳನ್ನು

ನಿಚ್ಚಳಗೊಳಿಸಲು ಈ ರೂಪಕ ರಾಜಕಾರಣ ಅತ್ಯಂತ ಪರಿಣಾಮಕಾರಿ ಪರಿಕರವಾಗಿದೆ. ಹಾಗೂ ಆಯಾ ಕಾಲದ ಅನುಭವದ ವಿನ್ಯಾಸವನ್ನು ಈ ರೂಪಕ ಪರಿಭಾಷೆ ರಾಜಕಾರಣವು ನಿರಚನಗೊಳಿಸುತ್ತದೆ. ಸಂತ ಪರಂಪರೆಗೂ ಹಾಗೂ ರೂಪಕ ಪರಂಪರೆಗೂ ಸಾಂಸ್ಕೃತಿಕ ವಿವೇಕದಲ್ಲಿ ಜಾಗವಿರುವುದಕ್ಕೆ ಈ ನಿರಚನಾ ಪ್ರಕ್ರಿಯೆಯೇ ಕಾರಣವಾಗಿದೆ. ಹೆಚ್ಚಾಗಿ ಈ ಪ್ರಕ್ರಿಯೆಯೂ ಸಾಮಾಜಿಕ ನ್ಯಾಯದ ನಿಲುವುಗಳನ್ನು ನೆಲೆಗೊಳಿಸುವಲ್ಲಿ ಮಹತ್ವವನ್ನು ಪಡೆದಿದೆ.

**ಸಾಮಾಜಿಕ ನ್ಯಾಯದ ಕಲ್ಪನೆ ತಲೆಯೆತ್ತಿದ ಬಗೆಗಳು**

ಸಾಮಾಜಿಕ ನ್ಯಾಯದ ಪರವಾಗಿ ಮಾತ್ನಾಡುವುದು ಅಂದರೆ ಸಾಮಾಜಿಕವಾಗಿ ವಂಚಿತರಾಗಿರುವ ಸಮೂಹಗಳನ್ನು ಮುನ್ನೆಲೆಗೆ ತರುವುದಷ್ಟೆಯಲ್ಲದೇ, ಅಂತಹ ಸಮೂಹಗಳಿಗೆ ಸುಸ್ಥಿರ ಬದುಕಿನ ನೆಲೆಗಳನ್ನು ಒದಗಿಸುವ ಬಗೆಯೂ ಆಗಿರುತ್ತದೆ. ಈ ಪ್ರಕ್ರಿಯೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಬಲೀಕರಣದ ಬಗೆಯಾಗಿರುತ್ತದೆ. ಸಾಮಾಜಿಕ, ಲಿಂಗೀಯ ಹಾಗೂ ಧಾರ್ಮಿಕ ಅಸಮಾನತೆಗಳನ್ನು ತೊಡೆಯುವ ಇರಾದೆಯನ್ನು ನೆಲೆಯಾಗಿಸಿಕೊಂಡು ಕನಕನು ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಕೈಗೆತ್ತಿಕೊಂಡಿರುವನು. ರಾಮಧಾನ್ಯ ಚರಿತೆಯನ್ನು ಈ ನಿಲುವಿಗೆ ಅತ್ಯಂತ ತಕ್ಕುದಾದ ಎತ್ತುಗೆಯನ್ನಾಗಿ ಇಲ್ಲಿ ನೋಡಬಹುದು. ಕನಕನ ಸಂದರ್ಭದಲ್ಲಿ ಸಾಮಾಜಿಕ ನ್ಯಾಯದ ಕಲ್ಪನೆ ಈ ಪರಿಭಾಷೆಯ ಹಣೆಪಟ್ಟಿಯನ್ನು ಲಗತ್ತಿಸಿಕೊಂಡು ಬಳಕೆಗೆ ಬಂದಿರಲಿಲ್ಲ. ಆದರೆ ವಿಚಾರದಲ್ಲಿ ಈ ನಿಲುವು ಅಂತಸ್ಥವಾಗಿತ್ತು ಎನ್ನುವುದರಲ್ಲಿ ನನಗೆ ಯಾವುದೇ ಅನುಮಾನವಿಲ್ಲ. ಈಗಾಲೇ ಈ ಹಿಂದೆ ಹೇಳಿದಂತೆ, ಸೂಚಿತಗಳ ಮೂಲಕ ಸೂಚಕವನ್ನು ಅರಿಯುವುದಾಗಿದೆ. ಹಾಗಾಗಿ ಸಾಮಾಜಿಕ ನ್ಯಾಯದ ಕಲ್ಪನೆ ಕೇವಲ ಕಾನೂನಿನ ಪರಿಭಾಷೆಯನ್ನಾಗಿ ಇಲ್ಲಿ ಚರ್ಚಿಸುತ್ತಿಲ್ಲ ಬದಲಾಗಿ ಸಾಂಸ್ಕೃತಿಕ ಲೋಪಗಳನ್ನು ಸರಿಪಡಿಸುವ ನೆಲೆಯನ್ನಾಗಿ ಚರ್ಚಿಸಲಾಗುತ್ತದೆ. ಸಾಂಸ್ಕೃತಿಕ ಲೋಪಗಳು ಬಹುತೇಕವಾಗಿ ಎರಡು ರೀತಿಯಲ್ಲಿ ಏರ್ಪಡುತ್ತವೆ. ಅವಗಳನ್ನು ಒಂದು ಆರೋಪಿತ ಲೋಪ ಹಾಗೂ ಮತ್ತೊಂದನ್ನು ಒಪ್ಪಿತ ಲೋಪವೆಂದು ಗುರುತಿಸಬಹುದು. ಕೆಲವೊಂದು ಸಲ ಈ ಎರಡೂ ಲೋಪಗಳು ಪರಸ್ಪರವಾಗಿ ವರ್ತಿಸುತ್ತವೆ. ಈ ಪರಸ್ಪರ ಹೊಂದಾಣಿಕೆಯ ಬಗೆಗೆ ಯಾವುದೇ ಅನುಮಾನ ಮೂಡದಿದ್ದರೆ, ಅದೊಂದು ಆರೋಪಿತ ಲೋಪವಾಗಿದ್ದರೂ ಅದು ಒಪ್ಪಿತ ಲೋಪವಾಗಿಯೇ ನೆಲೆನಿಲ್ಲುತ್ತದೆ. ಎತ್ತುಗೆಗಾಗಿ ಅಸ್ಪ್ರಶ್ಯತೆ ವಾಸ್ತವದಲ್ಲಿ ಆರೋಪಿತ ಲೋಪವೇ ಆಗಿದ್ದರೂ, ಅದು ಬಹುತೇಕವಾಗಿ ಒಪ್ಪಿತ ಲೋಪವಾಗಿಯೇ ಇದುವರೆಗೂ ಬಿಂಬಿತವಾಗಿದೆ. ಲಿಂಗೀಯ ತಾರತಮ್ಯತೆಗಳನ್ನೂ ಕೂಡ ಹೀಗೆ ಒಪ್ಪಿತ ಲೋಪಗಳನ್ನಾಗಿ ನಿರೂಪಿಸಲಾಗಿದೆ. ಯಾವುದನ್ನು ಒಪ್ಪಿತ ಲೋಪವನ್ನಾಗಿ ಬಿಂಬಿಸಲಾಗಿದೆಯೋ, ಅದು ವಾಸ್ತವದಲ್ಲಿ ಆರೋಪಿತ ಲೋಪವಾಗಿರುತ್ತದೆ. ಇಂತಹ ಹುನ್ನಾರಗಳನ್ನು ಗುರುತಿಸಿ, ಅವುಗಳನ್ನು ಸರಿಪಡಿಸುವ ಹೊಣೆಗಾರಿಕೆಯನ್ನು ಹೊರುವ ಬಗೆಯೇ ಸಾಮಾಜಿಕ ನ್ಯಾಯದ

ನಿಲುವುಗಳನ್ನು ಸೂಚಿಸುತ್ತದೆ. ಹಾಗಾಗಿ ಸಮುದಾಯಗಳ ಮೇಲೆ ಹೇರಿರುವ ಇಂತಹ ಆರೋಪಿತ ಅಸ್ಮಿತೆಗಳನ್ನು ಒಡೆಯುವ ಮತ್ತು ಅವರ ಅಸಲೀ ಅಸ್ಮಿತೆಗಳನ್ನು ಮರುಸಂಪಾದಿಸುವ ದಾರಿ ಹಾಗೂ ಗುರಿಗಳನ್ನು ಕಾಣಿಸುವ ಬಗೆಯೇ ಸಾಮಾಜಿಕ ನ್ಯಾಯ.

ದಿಟ, ಇವತ್ತಿನ ಸನ್ನಿವೇಶದಲ್ಲಿ ಸಾಮಾಜಿಕ ನ್ಯಾಯದ ಪ್ರಶ್ನೆಗಳು ಮಾನವ ಹಕ್ಕು, ಉದಾರವಾದ, ಸಾಮಾಜಿಕ ಒಳಗೊಳ್ಳುವಿಕೆ ಹಾಗೂ ಕೋಮುಸಾಮರಸ್ಯಗಳ ಮೂಲಕ ಈಡೇರುತ್ತವೆ ಎಂಬ ನಂಬಿಕೆ ಮಹತ್ವದ್ದಾಗಿದೆ. ಆದರೆ ಈ ಎಲ್ಲ ಮೌಲ್ಯಗಳು ಕೇವಲ ರಾಜಕೀಯ ಪ್ರಾಮುಖ್ಯತೆಯನ್ನು ಪಡೆದುಕೊಂಡು, ಸಂವಿಧಾನದ ಮಾನ್ಯತೆಯನ್ನೂ ಪಡೆಯುತ್ತವೆ. ಆದರೆ ಸಾಂಸ್ಕೃತಿಕ ಹೆಚ್ಚುಗಾರಿಕೆಗೆ ಇವುಗಳು ಕಾರಣವಾಗುತ್ತಿಲ್ಲ. ಹಾಗಾಗಿ ಕನಕ, ಪುರಂದರ ತತ್ವಪದಕಾರರು, ವಚನಕಾರರು ಇತ್ಯಾದಿ ದಾರ್ಶನಿಕ–ಸಂತರು ರೂಪಿಸಿರುವ ಸಾಮಾಜಿಕ ನ್ಯಾಯದ ಕಲ್ಪನೆ ಇವತ್ತಿನ ಸಾಮಾಜಿಕ ನ್ಯಾಯದ ಕಲ್ಪನೆಗಿಂತ ಅತ್ಯಂತ ಭಿನ್ನವಾಗಿದೆ. ಆದರೆ ಈ ಭಿನ್ನತೆ ಕೇವಲ ತಾತ್ವಿಕ ವಿನ್ಯಾಸಗಳನ್ನು ರೂಪಿಸಿಕೊಳ್ಳುವ ಬಗೆಗಳಲ್ಲಿ ಮಾತ್ರ ಹುದುಗಿರುತ್ತದೆ. ಹೊರತು ವೈಚಾರಿಕ ಗ್ರಹಿಕೆಯಲ್ಲಿ ಇಂತಹ ಯಾವುದೇ ಭಿನ್ನತೆಗಳನ್ನು ಪತ್ತೆಹಚ್ಚಿ ನೋಡಲು ಈಗಲೂ ಸಾಧ್ಯವಿಲ್ಲ. ಎಲ್ಲ ಕಾಲದ ಸಂತರು, ದಾರ್ಶನಿಕರು ಅಚಲವಾಗಿ ನಂಬಿಕೊಂಡಿದ್ದ ಮೌಲ್ಯವೆಂದರೆ "ಜೀವ ಪವಿತ್ರವೆಂಬ ಗ್ರಹಿಕೆ" ಈ ಗ್ರಹಿಕೆಯೇ ಸಾವಾಜಿಕ ನ್ಯಾಯುವನ್ನು ನೆಲೆಗೊಳಿಸುವ ಬಗೆಯಾಗಿರುತ್ತದೆ. ಸಾಮಾಜಿಕ ಒಗ್ಗಟ್ಟು, ಜಾತಿಗಳ ನಡುವೆ ಸಮಾನತೆ, ಲಿಂಗ ವಿರೋಧಿ ಧೋರಣೆಗಳು ಜೀವ ವಿರೋಧಿ ಧೋರಣೆಗಳು, ಅಭೇದ ಆಹಾರ ಪದ್ಧತಿ, ಲೈಂಗಿಕತೆಯ ವಿನ್ಯಾಸಗಳು ಎಂಬಿತ್ಯಾದಿ ನೆಲೆಗಳಲ್ಲಿ ಹಾಗೂ ವಲಯಗಳಲ್ಲಿ ಪರಿಭಾಷೆಯನ್ನು ಕನಕನು ರೂಪಿಸಿಕೊಂಡಿದ್ದನು. ಇಂತಹ ಪರಿಭಾಷೆಗಳನ್ನು ಸಜ್ಜುಗೊಳಿಸುವ ಪ್ರಕ್ರಿಯೆಯೇ, ಸಾಮಾಜಿಕ ನ್ಯಾಯವೆಂಬದು ಸಾಂಸ್ಕೃತಿಕ, ರಜಕೀಯ, ಧಾರ್ಮಿಕ ಹಾಗೂ ಆರ್ಥಿಕ ರಚನೆಗಳಲ್ಲಿ ಹುದುಗಿರುವ ಅಸಮಾನತೆಯನ್ನು ನಿವಾರಿಸುವ ಇರಾದೆಯನ್ನು ಹೊಂದಿರುವಂತಹದು. ಕೆಲಸ ಮತ್ತು ಶ್ರಮಗಳ ನಡುವೇ ಉಂಟಾಗಿರುವ ಕಂದಕವನ್ನು ಅಳಿಸಿ ಹಾಕುವ ಪ್ರಯತ್ನಗಳೂ ಕನಕನಂತಹ ಸಂತರ ಬಹುಮುಖ್ಯ ಗುರಿಯಾಗಿತ್ತು. ಅನಾದಿ ಕಾಲದಿಂದಲೂ ಈ ಕಂದಕವನ್ನು ಹೋಗಲಾಡಿಸುವ ಹೋರಾಟಗಳು ನಡೆದಿವೆ. ಆದಾಗ್ಯೂ ಇಂತಹ ಅಸಮಾನ ರಚನೆಗಳು ನಿರಂತರವಾಗಿ ಮುಂದುವರೆದಿವೆ. ಇವುಗಳನ್ನು ಅಳಿಸಿ ಹಾಕುವ ಪ್ರಕ್ರಿಯೆಗಳು ಎಲ್ಲ ನೆಲೆಯಿಂದಲೂ ನಡೆದಿವೆ. ಆದರೂ ಈ ಕಂದಕಗಳು ಕೇವಲ ಕಂದಕವಾಗಿ ಮಾತ್ರ ಉಳದಿವೆ. ಏಕೆಂದರೆ ಆರ್ಥಿಕ ರಚನೆಗಳು ಇವುಗಳನ್ನು ಮರೆಮಾಚಿ ಮುಂದೆ ಸಾಗಿವೆ.

ದಿಟ, ಒಂದು ಬಗೆಯಲ್ಲಿ ಬದಲಾಗುತ್ತಿರುವ ಇವತ್ತಿನ ಸಾಮಾಜಿಕ ವಿನ್ಯಾಸಗಳ ಪರಿಣಾಮಗಳನ್ನು ಪರಿಗಣಿಸದೆ ಈ ಹೊತ್ತು ನೆಲೆನಿಂತಿರುವ ಜಾತಿ ಸಂಬಂಧಿತ ಕೆಲಸಗಳ ಸ್ವರೂಪವನ್ನು ಕುರಿತು ಚರ್ಚಿಸುವುದು ದುಸ್ತರವೇ ಸರಿ. ಏಕೆಂದರೆ ಸ್ವಾತಂತ್ರೋತ್ತರ ಸನ್ನಿವೇಶದಲ್ಲಿ ಕೆಳಜಾತಿ, ಹಿಂದುಳಿದ ಸಮುದಾಯಗಳ ಹಿತಾಸಕ್ತಿಯನ್ನು ಕಾಪಾಡುವ ಸಂವಿಧಾನಾತ್ಮಕ ಸವಲತ್ತುಗಳು ಜಾರಿಗೊಂಡಿವೆ. ಆದರೂ ಈ ಯಾವ ಶಾಸನವು ಇವತ್ತಿಗೂ ಕೂಡ ಯಾವುದೇ ಆರ್ಥಿಕ, ಸಾಮಾಜಿಕ ಮಟ್ಟವನ್ನು ಪರಿಣಾಮಕಾರಿಯಾಗಿ ಪರಿವರ್ತಿಸುಲು ಬಳಕೆಯಾಗಿಲ್ಲ. ಹಾಗಾಗಿ ಆರು ದಶಕಗಳ ಹಿಂದೆಯೇ ಡಾ. ಅಂಬೇಡ್ಕರ್ ಅವರು ಸಂವಿಧಾನದ ಶಾಸನ ಸಭೆಯಲ್ಲಿ ಹೇಳಿರುವ ಮಾತುಗಳು ಇಂದಿಗೂ ಅತ್ಯಂತ ಪ್ರಸ್ತುತವಾಗಿವೆ. "ಸಾಮಾಜಿಕ ಮಟ್ಟದಲ್ಲಿಯೇ ಹೇಳುವುದಾದರೆ, ಭಾರತದಲ್ಲಿ ಸಮಾಜಗಳು ಶ್ರೇಣೀಕ್ರುತ ತತ್ವಗಳ ಆಧಾರದ ಮೇಲೆ ನಿಂತಿವೆ. ಅಂದರೆ ಕೆಲವರು ಸಾಮಾಜಿಕ ಉನ್ನತಿಯನ್ನು ಹೊಂದಿದರೆ, ಮತ್ತೆ ಕೆಲ ಸಮೂಹಗಳು ಸಾಮಾಜಿಕ ಕೆಳಮಟ್ಟಕ್ಕೆಯೇ ಸೀಮಿತಗೊಂಡಿವೆ. ಆರ್ಥಿಕವಾಗಿ ಹೇಳುವುದಾದರೆ, ನಮ್ಮ ಸಮಾಜಗಳಲ್ಲಿ ಕೆಲವೇ ಕೆಲವು ಜನರು ಅಪಾರವಾದ ಸಂಪತ್ತನ್ನು ಪಡೆದುಕೊಂಡರೆ, ಬಹುಸಂಖ್ಯಾತರು ಕಡುಬಡತನದಲ್ಲಿಯೇ ಇವತ್ತಿಗೂ ಉಳಿದುಕೊಂಡಿರುತ್ತಾರೆ. ಜನವರಿ 26 1950ರಂದು ನಾವು ಮತ್ತೊಂದು ಬಗೆಯ ವಿರೋಧಭಾಸಗಳ ಬದುಕನ್ನು ಪ್ರವೇಶಿಸುತ್ತೇವೆ. ಅಂದರೆ ರಾಜಕಾರಣ ಇಲ್ಲವೇ ರಾಜಕೀಯದಲ್ಲಿ ಸಮಾನತೆಯನ್ನು ಪಡೆಯಲು ಸಾಧ್ಯವಾದರೆ, ಆರ್ಥಿಕ ಹಾಗೂ ಸಾಮಾಜಿಕ ವಲಯಗಳಲ್ಲಿ ಇವತ್ತಿಗೂ ನಾವು ಅಸಮಾನತೆಯಿಂದ ಬಳಲುತ್ತಿದ್ದೇವೆ. ಹಾಗೂ ರಾಜಕೀಯದಲ್ಲಿ ಒಬ್ಬನಿಗೆ ಒಂದು ಮತ ಮತ್ತು ಆ ಒಂದು ಮತಕ್ಕೆ ಒಂದು ಮೌಲ್ಯವಿರುತ್ತದೆ ಎಂಬ ತತ್ವಕ್ಕೆ ಅನುಗುಣವಾಗಿ ಸಾಮಾಜಿಕರನ್ನು ಗುರುತಿಸಿದರೆ, ಸಾಮಾಜಿಕ, ಆರ್ಥಿಕ ರಚನೆಗಳ ಕಾರಣವಾಗಿ ಒಬ್ಬ ಒಂದು ಮೌಲ್ಯ ಎಂಬ ತಾತ್ವಿಕತೆಯನ್ನೇ ಇವತ್ತಿಗೂ ನಿರಾಕರಿಸಲಾಗಿದೆ. ಸಾಮಾಜಿಕ ಆರ್ಥಿಕ ವಲಯಗಳಲ್ಲಿ ಇನ್ನು ಎಷ್ಟು ಕಾಲ ನಾವು ಈ ನಿರಾಕರಣೆಗೆ ಒಳಗಾಗಬೇಕು? ಇದು ಇನ್ನಷ್ಟು ಕಾಲ ಹೀಗೇ ಮುಂದುವರೆದರೆ ನಮ್ಮ ರಾಜಕೀಯ ಪ್ರಜಾಪ್ರಭುತ್ವವೂ ಕೂಡ ಗಂಡಾಂತರಕ್ಕೆ ಒಳಗಾಗುತ್ತದೆ ಎಂಬುದರಲ್ಲಿ ಅನುಮಾನವೇ ಇಲ್ಲ. ಸಾಧ್ಯವಾದಷ್ಟು ಬೇಗ ಈ ವಿರೋಧಭಾಸಗಳನ್ನು ನಾವು ನಿರ್ನಾಮಗೊಳಿಸಬೇಕು ಇಲ್ಲವಾದಲ್ಲಿ ಈ ಅಸಮಾನತೆಗಳಿಂದ ಬಳಲುವವರು ಒಂದಿಲ್ಲ ಒಂದು ದಿನ ರಾಜಕೀಯ ಪ್ರಜಾಪ್ರಭುತ್ವವನ್ನು ಸ್ಫೋಟಗೊಳಿಸುತ್ತಾರೆ". ದುರದ್ರುಷ್ಟವಶಾತ್, ಅಂಬೇಡ್ಕರ್ ಅವರ ಕಳಕಳಿಯ ಈ ಮಾತುಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸದ ಕಾರಣ, ಸಾಮಾಜಿಕ–ಆರ್ಥಿಕ ಅಸಮಾನತೆಗಳು ಭಾರತದಲ್ಲಿ ಇವತ್ತಿಗೂ ಮುಂದುವರೆದಿವೆ. ಅಷ್ಟೆಯಲ್ಲದೇ ಶ್ರಮ ಸಂಸ್ಕ್ರುತಿಯ ಕುರಿತ ವಿರೋಧಭಾಸಗಳು ಮುಂದುವರೆದಿವೆ.

ಭಾರತದ ಸಾಮಾಜಿಕ ಮೂಲ ಸ್ವರೂಪದಲ್ಲಿಯೇ ಊಳಿಗಮಾನ್ಯ ನಿಲುವುಗಳು ಅಂತರ್ಗತವಾಗಿವೆ. ಸಾಮಾಜಿಕ–ಸಾಂಸ್ಕೃತಿಕ, ರಾಜಕೀಯ ಎಲ್ಲ ಬಗೆಯ ಆಗು–ಹೋಗುಗಳೆಲ್ಲವೂ ಕೂಡ ಈ ಊಳಿಗಮಾನ್ಯ ವ್ಯವಸ್ಥೆಯನ್ನೇ ಅನುಸರಿಸಿಕೊಂಡು ನಡೆಯುತ್ತವೆ. ಈ ಸಾಮಾಜಿಕ ಪ್ರಕ್ರಿಯೆಯು ಕಸುಬುಗಳನ್ನು ಕೇವಲ ಸಾಂಸ್ಕೃತಿಕ ಸೂಚಕಗಳನ್ನಾಗಿ ಬಳಸಲಾಯಿತು. ಯಾವುದೇ ಒಂದು ಕಸುಬಿಗೆ ಸಾಮಾಜಿಕ ಮಾನ್ಯತೆ ದೊರೆಯುವುದು ಕೇವಲ ಸಾಮಾಜಿಕ ಅಂತಸ್ತನ್ನು ನೆಲೆಯಾಗಿಸಿಕೊಂಡು ಮಾತ್ರ. ಹಾಗಾಗಿ ಶ್ರಮದ ಬೆಲೆಯೂ ಕೂಡ ರಾಜಕೀಯ ಪ್ರೇರಿತ ನೆಲೆಯನ್ನು ಪಡೆದುಕೊಂಡಿರುವುದನ್ನು ಇಲ್ಲಿ ಕಾಣಬಹುದು. ಶ್ರಮ ಸಂಸ್ಕೃತಿಯನ್ನು ಸೇವೆಯ [ಚಾಕರಿ] ಆಯಾಮದಿಂದ ಗುರುತಿಸುವ ಹುನ್ನಾರವು ಶುರುಗೊಂಡವು. ಕೆಲಸ ಹಾಗೂ ಶ್ರಮಸಂಸ್ಕೃತಿಗಳ ನಡುವಣ ನಂಟಸ್ತಿಕೆ ಕೂಡ ಇಂತಹ ಸಾಮಾಜಿಕ ಒಣತರ್ಕಗಳನ್ನು ನೆಲೆಯಾಗಿಸಿಕೊಂಡೇ ನಿರ್ಣಯಗೊಂಡಿರುತ್ತವೆ. ಒಂದೊಂದು ಶ್ರಮಕ್ಕೆ ಸೀಗಬೇಕಾದ ಘನತೆಯು ಕೇವಲ ಸಾಮಾಜಿಕ ಏಣಿಶ್ರೇಣಿಗಳನ್ನು ಮಾತ್ರ ನೆಮ್ಮಿಕೊಂಡು ಮೈದಾಳಿದ್ದರಿಂದ, ಅವುಗಳು ಯಾವ ಕಾಲಕ್ಕೂ ಸಮಾನತೆಯ ವಿನ್ಯಾಸದೊಳಗೆ ಸೇರಲೇ ಇಲ್ಲ. ಪರಿಣಾಮವಾಗಿ ಈ ವಿನ್ಯಾಸಗಳನ್ನು ಅಧೀನ–ಪ್ರಧಾನ, ಕೀಳು–ಮೇಲೆ, ಮೈಲಿಗೆ–ಮಡಿ ಹಾಗೂ ಮುಟ್ಟಕೂಡದ–ಮುಟ್ಟಬಲ್ಲ ಎಂಬಿತ್ಯಾದಿಯಾಗಿ ಒಡೆಯಲಾಗಿದೆ. ಶ್ರಮಕ್ಕೆ ಬೆಲೆ ಕಟ್ಟುವ ಇಲ್ಲವೇ ಶ್ರಮದ ಘನತೆಯನ್ನು ಗುರುತಿಸುವ ಬಗೆಗಳು ಇಂತಹ ಯಜಮಾನ್ಯ ನೆಲೆಗೆ ಮಾತ್ರ ಸೀಮಿತಗೊಂಡ ಕಾರಣ ಶ್ರಮವನ್ನು ಅಡಿಯಾಳು ಕಣ್ಣೋಟದಿಂದ ಮಾತ್ರ ನೋಡಲಾಗಿದೆ. ಇಂತಹ ಬಿಕ್ಕಟ್ಟುಗಳ ನಿವಾರಣೆಗಾಗಿಯೇ ಭಕ್ತಿಪಂಥ, ತತ್ವಪದಕಾರರು, ಹರಿದಾಸರು ಹಾಗೂ ಸಂತರು ತಲೆಯೆತ್ತಿರುವುದನ್ನು ಕಾಣುತ್ತೇವೆ.

ಸಾಮಾಜಿಕ ನ್ಯಾಯದ ಪ್ರಶ್ನೆ, ಸಾಂಸ್ಕೃತಿಕ ಸರಿತನದ ಪ್ರಶ್ನೆ, ರಾಜಕೀಯ ಸರಿತನ ಹಾಗೂ ಪಾಲ್ಗೊಳ್ಳುವಿಕೆಗೆ ದಿಟವಾಗಿಯೂ ಅವಕಾಶಗಳು [ಸ್ಪೇಸ್] ಸಿಕ್ಕಿರುವುದನ್ನು ಇಲ್ಲಿ ನೋಡುತ್ತೇವೆ. ಆಯಾ ಕೆಲಸ–ಕಸುಬುಗಳಿಗೆ ಅನುಗುಣವಾಗಿ ಶ್ರಮವನ್ನು ನೋಡದೇ ಕೇವಲ ಶ್ರಮದ ಘನತೆಯ ಆಧಾರದ ಮೇಲೆ ಎಲ್ಲ ಬಗೆಯ ಕಸುಬುದಾರರನ್ನು ಸಾಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಗಳನ್ನು ಕಿತ್ತಿಡುವುದಕ್ಕೆ ಸಾಧ್ಯವಾದುದು ಕನಕರಂತಹ ಸಂತರಿಂದ ಮಾತ್ರವೆಂಬುದು ಗಮನಾರ್ಹ. ಶ್ರಮಕ್ಕೆ ಅಂಟಿದ ಕಳಂಕವನ್ನು ತೊಲಗಿಸುವ ಹೋರಾಟವು ಶುರುವಾದದ್ದು ಕೂಡ ಇಂತಹ ಪರಂಪರೆಗಳ ಮೂಲಕವೇ. ಕೆಲಸಗಳನ್ನು ನಿರ್ವಹಿಸುವುದು ಒಂದು ಬಗೆಯಾದರೆ, ಆಯಾ ಕೆಲಸಗಳಲ್ಲಿ ವಿನಿಯೋಗವಾಗುವ ಶ್ರಮ ಮಾತ್ರ ಹೆಮ್ಮೆ ಮತ್ತು ನಾಚಿಕೆಗಳಿಂದ ಕೂಡಿದ್ದವು. ಮೇಲ್ಜಾತಿಗಳ ಕೆಲಸಗಳು ಹೆಮ್ಮೆಯ ಸೂಚಕಗಳಾದರೆ, ಕೆಳ್ಜಾತಿಗಳು ಕೈಗೊಳ್ಳುವ ಕೆಲಸಗಳು ನಾಚಿಕೆಪಡುವ ಆಯಾಮವನ್ನು ಪಡೆದುಕೊಂಡಿದ್ದವು. ಸಾಮಾಜಿಕವಾಗಿ ಯಾವುದೇ ಗುರುತನ್ನು ಲಗತ್ತಿಸಿಕೊಂಡಿದ್ದರೂ, ಆ ಗುರುತುಗಳಿಂದಲೇ ಶ್ರಮವನ್ನು

ಮೌಲ್ಯಗೊಳಿಸುವ ಇಲ್ಲವೇ ಅಪಮೌಲ್ಯಗೊಳಿಸುವ ನಿಲುವುಗಳು ತಕ್ಕುದಾದವುಗಳಲ್ಲ ಎಂಬುದನ್ನು ಕನಕ ಹಾಗೂ ಇಂತಹ ಸಂತ ಪರಂಪರೆಗಳು ನಿಚ್ಚಳಗೊಳಿಸಿದವು.

ಸಂಸ್ಕೃತೀಕರಣದ [ಇದು ಎಮ್‌ಎನ್ ಶ್ರೀನಿವಾಸ್ ಅವರ ತಾತ್ವಿಕತೆಗೆ ಸಂಬಂಧಿಸಿದ ಪರಿಕಲ್ಪನೆಯಲ್ಲ] ನೆಲೆಗಳು ಕೇವಲ ಬ್ರಾಹ್ಮಣ್ಯದ ನೆಲೆಪಡೆಯುವ ಗುರಿಗಳನ್ನು ಹೊಂದಿರದೇ, ಈಗಾಗಲೇ ಸಮುದಾಯಗಳು ತಾವು ಒಳಗಾಗಿರುವ ಪ್ರಾಬಲ್ಯದ ಎಲ್ಲೆಗಳನ್ನು ಮೀರುವ ತುಡಿತವನ್ನು ಹೇಗೆ ಹೊಂದಿರುತ್ತವೆ ಹಾಗೂ ಅವುಗಳ ಮೂಲಕ ತಮ್ಮ ಸಾಮಾಜಿಕ ಚಹರೆಗಳನ್ನು ಹೇಗೆ ಮಾನ್ಯಗೊಳಿಸುತ್ತವೆ ಎಂಬುದನ್ನು ಕುರಿತಾಗಿ ಈ ಸಂಸ್ಕೃತೀಕರಣದ ಪರಿಕಲ್ಪನೆಯನ್ನು ಇಲ್ಲಿ ಬಳಸಲಾಗಿದೆ. ಆದರೆ ಈ ಮಾತನ್ನು ಸಾರ್ವತ್ರಿಕವಾಗಿ ಅನ್ವಯಿಸಿ ಹೇಳಲು ಸಾಧ್ಯವಿಲ್ಲ ಎಂಬುದು ಮಾತ್ರ ದಿಟ. ಆದರೆ ಕನಕನು ತನ್ನ ಆಲೋಚನೆಯ ವಿನ್ಯಾಸದಲ್ಲಿ ಅಡಕಗೊಳಿಸಿದ ಈ ಸಂಸ್ಕೃತೀಕರಣದ ನಿಲುವುಗಳನ್ನು ನಿರಾಕರಿಸಲು ಆಗುವುದಿಲ್ಲ. ಏಕೆಂದರೆ ಕನಕನು ಮಂಡಿಸುವ ಸಂಸ್ಕೃತೀಕರಣದ ನಿರೂಪಣೆಗಳು ಅಧಿಕಾರ ಹಾಗೂ ಯಜಮಾನ್ಯ ರಚನೆಗಳನ್ನು ನಿರಚನಗೊಳಿಸುವ ಇರಾದೆಯನ್ನು ಹೊಂದಿರುತ್ತವೆ. ಎತ್ತುಗೆಗಾಗಿ ರಾಗಿ ಮತ್ತು ಬತ್ತದ ನಡುವಣ ಸಂವಾದವನ್ನು ನಿಗಾಯಿಟ್ಟು ನೋಡಿದರೆ, ಅಧಿಕಾರ ಕೇಂದ್ರಿತ ಸಂಕಥನಗಳನ್ನು ಹೇಗೆಲ್ಲ ತಲೆಕೆಳಗಾಗುವ [ಇನ್‌ವರ್ಟ್ ಸ್ಟ್ರಕ್ಚರ್] ಕ್ರಿಯೆಗಳನ್ನಾಗಿ ಮುಂಚೂಣೆಗೆ ತರಲಾಗುತ್ತದೆ ಎಂಬುದನ್ನು ಇಲ್ಲಿ ನಾವು ಕನಕನ ನಿರೂಪಣೆಗಳಲ್ಲಿ ನೋಡುತ್ತೇವೆ.

ಸಮುದಾಯಗಳ ಬದುಕಿನ ವಿನ್ಯಾಸದಲ್ಲಿ ನೆಲೆನಿಂತಿದ್ದ ಶ್ರಮ ವಿಭಜನೆಯ ಬಗೆಗಳನ್ನು ಹೆಮ್ಮೆಪಡುವ ಹಾಗೂ ನಾಚಿಕೆಪಡುವ ಸಂಗತಿಗಳನ್ನಾಗಿ ವಿಂಗಡಿಸಲಾಗಿತ್ತು. ಈ ವಿಂಗಡನೆಗಳು ಸಾಂಸ್ಕೃತಿಕ ರಾಜಕಾರಣದ ಪರಿಣಾಮಗಳು ಎಂಬುದನ್ನು ಕನಕನು ಕಂಡುಕೊಂಡಿದ್ದನು. ಹಾಗಾಗಿ ಈ ದೈಕಾಟಮಿಗಳನ್ನು ಒಡೆಯುವ ಹಾಗೂ ಅವುಗಳ ನಡುವೆ ಸಮಾನ ನಂಬಿಕೆ ಮತ್ತು ಸಮಾನ ಘನತೆಯನ್ನು ನೆಲೆಗೊಳಿಸುವ ಗುರಿಯನ್ನು ಹೊಂದಿದ್ದನು. ರಾಮಧಾನ್ಯ ಚರಿತ್ರೆಯಲ್ಲಿ ಬರುವ ಈ ಸನ್ನಿವೇಶವು ಮೇಲಿನ ನಿಲುವನ್ನು ಸಾಬೀತುಪಡಿಸುತ್ತದೆ. ಅಂದರೆ ಭತ್ತ ರಾಗಿಯನ್ನು ಹಲವು ರೀತಿಯಿಂದ ಹೀಯಾಳಿಸುತ್ತದೆ. ಪರಿಣಾಮವಾಗಿ ರಾಗಿ ಹೀಗೆ ಪ್ರತಿಕ್ರಿಯಿಸುತ್ತದೆ:

"ಬಲ್ಲಿದರು ಬರೆ ಬಡವರಲಿ ನಿ
ನ್ನಲ್ಲಿ ಯುಂಟು ಉಪೇಕ್ಷೆ ನಮ್ಮಲಿ
ಸಲ್ಲದೀ ಪರಿಪಕ್ಷಪಾತವದಿಲ್ಲ ಭಾವಿಸಲು
ಬಲ್ಲಿದರು ಬಡವರುಗಳೆನ್ನದೆ
ಎಲ್ಲರನು ರಕ್ಷಿಸುವೇ ನಿರ್ದಯ
ನಲ್ಲ ತಾ ನಿನ್ನಂತೆ ಎಲ ಕುಟಿಲಾತ್ಮ ಹೋಗೆಂದು"

ಈಗಾಗಲೇ ಹೇಳಿದಂತೆ, ಹುಸಿನಂಬಿಕೆಗಳನ್ನು ಒಡೆಯುವ ಹಾಗೂ ಸಮಾನತೆಯ ವಿನ್ಯಾಸಗಳನ್ನು ಮರುರೂಪಿಸುವ ಸಾಂಸ್ಕೃತಿಕ ನಿಲುವುಗಳನ್ನು ಇಲ್ಲಿ ಕಾಣಬಹುದು. ಆದರೆ ಕೆಲವೊಮ್ಮೆ ಕನಕನ ಮಾತು ಇಲ್ಲವೇ ನಿರೂಪಣೆಗಳು ಮೇಲ್ನೋಟದಲ್ಲಿಯೇ, ಸಮೂಹಗಳ ಮಾನಸಿಕ ರಚನೆಗಳಲ್ಲಿ ಈಗಾಗಲೇ ಅಡಕಗೊಂಡಿರುವ ನಂಬಿಕೆಗಳನ್ನು ದೃಢೀಕರಿಸುವ ನಿರ್ಣಯಗಳಾಗಿ ತೋರುತ್ತವೆ. ಎತ್ತುಗೆಗಾಗಿ

"ದುರ್ಜನರ ಮನೆಯ ಪಾಯಸಾನ್ನಕಿಂತ
ಸಜ್ಜನರ ಮನೆಯ ರಬ್ಬಳಿಗೆ ಲೇಸು
ಹೆಜ್ಜೆಗೆ ಸಾವಿರ ಹೊನ್ನವಿತ್ತರೂ ಬೇಡ-ಬಲು
ದುರ್ಜನರ ಸಂಗ ಬಲು ಭಂಗ ಹರಿಯೆ"

ಇದು ಕೇವಲ ದೃಢೀಕರಣ ಮಾದರಿಯಲ್ಲ ಬದಲಾಗಿ ಹೋಲಿಕೆಯ ಈ ವಿನ್ಯಾಸಗಳು ಮಾತ್ರ ಇಲ್ಲಿ ದ್ವೈಕಾಟಮಿಯ ನೆಲೆಯನ್ನು ಪಡೆದಿವೆ ಆದರೆ ಈ ಹೋಲಿಕೆಗಳು ಕೇವಲ ಸೂಚಕಗಳಾಗಿ ನಿರೂಪಿತವಗಿವೆ. ಇವುಗಳ ಮೂಲಕ ಮಂಡಿತವಾಗುವ ವಿವೇಕ ಮಾತ್ರ ಕೇಡಿನ ಸ್ವರೂಪವನ್ನು ನಿಚ್ಚಳವಾಗಿ ಕಂಡರಿಸುತ್ತವೆ. ಹಾಗಾಗಿ ಮೇಲ್ನೋಟಕ್ಕೆ ಕಾಣುವ ಈ ಒಡಕುಗಳನ್ನು ನಿರ್ವಚಿಸಲು ಕೇವಲ ರಾಜಕೀಯ ಪ್ರೇರಿತ ಓದಿನ ಮಾದರಿಗಳನ್ನು ಬಳಸುವುದು ಅಗತ್ಯವಿಲ್ಲ.

ಸಂತ, ವಚನಕಾರ, ತತ್ವಪದಕಾರ ಎಂಬಂತಹ ಪರಂಪರೆಗಳಿಗೆ ನಾವು ಮತ್ತೆ ಮತ್ತೆ ಹೊರಳುವುದರಿಂದ ಈ ಹೊತ್ತು ನಮಗೆ ಬೇಕಾದ ಸಂಸ್ಕೃತಿ ಓದಿನ ವಿನ್ಯಾಸಗಳನ್ನು ರೂಪಿಸಿಕೊಳ್ಳಲು ಅವಕಾಶವು ಸಿಗುತ್ತದೆ. ಇಂತಹ ಅವಕಾಶಗಳನ್ನು ತಪ್ಪಿಸುವ ಹುನ್ನಾರಗಳು ನಡೆಯುತ್ತಲೇ ಇರುತ್ತವೆ. ಅಚ್ಚರಿಯ ಸಂಗತಿ ಏನೆಂದರೆ, ನಮಗೆ ಬೇಕಾದ ಓದುಗಳನ್ನು ರೂಪಿಸಿಕೊಳ್ಳುವ ಪ್ರಕ್ರಿಯೆಗೆ ಅಡ್ಡಿಪಡಿಸುವ ಹೊರಗಿನ ಓದುಗಳು ಕೂಡ ಇಂತಹದೇ ಪರಿಭಾಷೆಗಳ ರಾಜಕಾರಣವನ್ನು ಮಾಡುತ್ತವೆ.

*** ** ***

ಪ್ರತಿಕ್ರಿಯೆ:

1. 'ವಿಷಯ ಸ್ಪಷ್ಟತೆಯನ್ನು ಅಪೇಕ್ಷಿಸುವ ಲೇಖನ'

– ಶ್ರೀ ಹೊರೆಯಾಲ ದೊರೆಸ್ವಾಮಿ

ಶ್ರೀಹರಿಯ ಕಥಾವಸ್ತುವನ್ನು ಕೇಂದ್ರವಾಗಿರಿಸಿಕೊಂಡು ಕೀರ್ತನೆಗಳನ್ನು ರಚಿಸಿರುವ ಹರಿದಾಸರಿಗಿಂತ ಭಿನ್ನ ನಿಲುವಿನಲ್ಲಿ ಕೀರ್ತನೆಗಳನ್ನೂ ಸಾಹಿತ್ಯ ಕೃತಿಗಳನ್ನು ರಚಿಸಿರುವ ಕನಕದಾಸರು ಸಹಜವಾಗಿಯೆ ಕುತೂಹಲದ ಕೇಂದ್ರವಾಗುತ್ತಾರೆ. ದಾಸರ ಈ ಬಗೆಯ ಬೆಳವಣಿಗೆಗೆ, ಅವರ ಜೀವನದ ಎರಡು ಪ್ರಮುಖ ಘಟ್ಟಗಳು ಸಮಗ್ರ ವ್ಯಕ್ತಿತ್ವವನ್ನು ದಾಖಲಿಸುವಲ್ಲಿ ನೆರವಾಗುತ್ತವೆ. ವಿಜಯನಗರದ ಮಾಂಡಲಿಕರಾಗಿ ಆಳುವ ವರ್ಗದ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸಿದ್ದು ಒಂದು ಘಟ್ಟವಾದರೆ, ಆನಂತರದ ಹರಿದಾಸರಾಗಿ ಪರವರ್ತನೆ ಹೊಂದಿ ಸಾಹಿತ್ಯ–ಸಾಂಸ್ಕೃತಿಕ ಕ್ಷೇತ್ರದಲ್ಲಿ ತಮ್ಮನ್ನು ಸ್ಥಾಪಿಸಿಕೊಂಡಿದ್ದು ಎರಡನೆಯ ಘಟ್ಟವಾಗುತ್ತದೆ. ಕನಕದಾಸರ ಮಹತ್ವವಿರುವುದೇ ಈ ಎರಡನೆಯ ಘಟ್ಟದಲ್ಲಿ.

ಸಾಮಾಜಿಕವಾಗಿ ಕೆಳಸ್ತರದಿಂದ ಬಂದ ಕನಕದಾಸರು ಮೇಲ್ವರ್ಗದ ಜನರೊಂದಿಗೆ ಸಮಾನತೆಯನ್ನು ಸಾಧಿಸಲು ಹೆಜ್ಜೆ ಹಜ್ಜೆಗೂ ಸಂಘರ್ಷದ ಹಾದಿಯನ್ನು ಅನುಸರಿಸಬೇಕಾದುದು ಅನಿವಾರ್ಯವೇ ಆಗಿತ್ತು. ಎದುರಾದ ಅನೇಕ ಪ್ರತಿರೋಧಗಳ ನಡುವೆಯೂ ತಮ್ಮ ವ್ಯಕ್ತಿತ್ವವನ್ನು ಭಕ್ತಿಮಾರ್ಗದ ನೆಲೆಯಲ್ಲಿಯೇ ಬೆಳೆಸಿಕೊಳ್ಳುತ್ತ, ಆತ್ಮವಿಶ್ವಾಸದ ಆಂತರಿಕ ಶಕ್ತಿಯನ್ನು ಪ್ರದರ್ಶಿಸಿದುದು ಅವರ ಹೆಚ್ಚುಗಾರಿಕೆಯೇ ಆಗಿದೆ. ಭಾಗವತ ಪರಂಪರೆಯಲ್ಲಿ ಚಿಕ್ಕಂದಿನಿಂದ ಬೆಳೆದು ಬಂದ ದಾಸರು ಶ್ರೀ ವೈಷ್ಣವ ತತ್ವ ಪ್ರತಿಪಾದಕರಾದ ರಾಮಾನುಜಾಚಾಯರ ಪರಂಪರೆಯ ತಾತಾಚಾರ್ಯರ ಪ್ರಭಾವಕ್ಕೆ ಒಳಗಾದಂತೆಯೇ ಮಧ್ವಮತ ಪರಂಪರೆಯ ಯತಿ ವ್ಯಾಸರಾಯರ ಶಿಷ್ಯರಾಗಿ ಕೀರ್ತನೆ – ಸಾಹಿತ್ಯ ಕೃತಿಗಳನ್ನು ರಚಿಸುತ್ತ ದಾಸ ಪಂಥದಲ್ಲಿ ಇಮ್ಮಡಿಯ ವರ್ಚಸ್ಸಿನಿಂದ ಭಿನ್ನವಾಗಿ ನಿಲ್ಲುತ್ತಾರೆ. ಈ ಹಿನ್ನೆಲೆಯಲ್ಲೇ ಮೇಟಿ ಮಲ್ಲಿಕಾರ್ಜುನ ಅವರ ಪ್ರಸ್ತುತ ಲೇಖನಕ್ಕೆ ಪ್ರತಿಕ್ರಿಯೆ ನೀಡಲಾಗಿದೆ. (ಲೇಖನ: ಸಾಂಸ್ಕೃತಿಕ ರಾಜಕಾರಣವನ್ನು ನಿರಚನಗೊಳಿಸುವ ಗುರಿ ಹಾಗೂ ದಾರಿಗಳು). ಯಾವುದೇ ಒಂದು ಸಾಹಿತ್ಯಿಕ ಪ್ರಕಾರವನ್ನು ಕೇವಲ ಒಂದು ಓದನ್ನಾಗಿ ಪರಿಗಣಿಸದೆ ಅದರ ಧ್ವನಿತಾರ್ಥವನ್ನು ಗ್ರಹಿಸುವುದು ಒಂದು ಪರಿ ಆದರೆ, ಅದು ರಚಿತವಾಗಿರುವ ಕಾಲಘಟ್ಟದ ಸಾಮಾಜಿಕ–ಸಾಂಸ್ಕೃತಿಕ ಪರಿಸರವನ್ನು ಚಿಕಿತ್ಸಿಕ ಮನಸ್ಥಿತಿಯಿಂದ ನೋಡುವುದು ಅಥವಾ ಗ್ರಹಿಸುವುದು. ಇನ್ನೊಂದು ಆಯಾಮವಾಗುತ್ತದೆ. ಅದಲ್ಲದೆ ಸಾಹಿತ್ಯ ಕೃತಿಯೊಂದರ ಇತರ ಓದಿನ ಸಾಧ್ಯತೆಗಳೂ ಇಲ್ಲವೆಂದಲ್ಲ. ಇರಲಿ ಪ್ರಸ್ತುತ, ಕನಕರ ರಚನೆಗಳ ಓದಿನ ಮೂಲಕ ಅವರು ಅಂದಿನ ಸಾಂಸ್ಕೃತಿಕ ರಾಜಕಾರಣವನ್ನು ಅರ್ಥಾತ್ ಹುನ್ನಾರವನ್ನು

ಮಸಲತ್ತನ್ನು ಹೇಗೆ ನಿರಚನಗೊಳಿಸಲು ಸಾಧ್ಯವಾಯಿತು ಎಂಬುದನ್ನು ಮನವರಿಕೆ ಮಾಡಿಕೊಡುವ ಪ್ರಯತ್ನವಾಗಿ ಈ ಲೇಖನ ಮೂಡಿಬಂದಿದೆ ಅನ್ನಬಹುದು. ಜಾತಿ, ಮತ, ಧರ್ಮ, ಮೇಲು-ಕೀಳು, ಶ್ರೇಷ್ಠತೆ ಈ ಮುಂತಾದ ಸಾಮಾಜಿಕ-ಸಾಂಸ್ಕೃತಿಕ ನೆಲೆಗಟ್ಟುಗಳನ್ನು ಕನಕರು ತಮ್ಮದೇ ಆದ ಪರಿಭಾಷೆಗಳ ದೃಷ್ಟಿಕೋನದಲ್ಲಿ ನೋಡುತ್ತ ಹೊಸತೊಂದನ್ನು ಹುಟ್ಟು ಹಾಕುವ ದಾರಿಯಲ್ಲಿ ಸಾಗುವುದು ಅವರ ವ್ಯಕ್ತಿ ವೈಶಿಷ್ಟವೇ ಆಗಿದೆ. ಅಡ್ಡ ಬಂದ ಅಲ್ಪತನಗಳನ್ನು ಪಕ್ಕಕ್ಕೆ ಸರಿಸಿ ಇಲ್ಲವೆ ವ್ರೀಹಿ-ವರೆ-ದೆಲಗರಂತೆ ಮುಖಾಮುಖಿಯಾಗಿ ಸಾಗುವುದು ಅವರ ದೊಡ್ಡತನವೇ ಹೌದೆಂಬುದರ ಬಗ್ಗೆ ಎರಡು ಮಾತಿಲ್ಲ.

ಭಕ್ತಿಪಂಥದ ಹೆದ್ದಾರಿಯಲ್ಲಿ ನಡೆಯುವವರು ಸಾಮಾನ್ಯವಾಗಿ ವ್ಯವಸ್ಥೆಯ ನಂಬಿಕೆ, ನಡಾವಳಿ, ತತ್ವ-ಸತ್ವಗಳಿಗನುಣವಾಗಿಯೇ ಸಾಹಿತ್ಯ-ಸಂಸ್ಕೃತಿಯನ್ನು ರೂಪಿಸುವುದು ಸಹಜವೆಂಬಂತೆ ಕಂಡುಬರುತ್ತದೆ. ಅದು ಅಂದಿನ ಕಾಲದ ಊಳಿಗಮಾನ್ಯ ಆಗಿರಬಹುದು ಅಥವಾ ಸಾಮ್ರಾಜ್ಯಶಾಹಿ ವ್ಯವಸ್ಥೆಯಾಗಿರಬಹುದು. ಅಲ್ಲಿ ವ್ಯವಸ್ಥೆಯನ್ನು ಪ್ರಶ್ನಿಸುವ ಮನೋಧರ್ಮಕ್ಕಿಂತ ಅದನ್ನ ಇನ್ನಷ್ಟು ಮತ್ತಷ್ಟು ಬಲಗೊಳಿಸುವ ದಿಕ್ಕಿನಲ್ಲಿ ಭಕ್ತಿಪಂಥದ ಪ್ರವಾಹಕರು ಮುನ್ನಡೆಯುವುದು ಸಾಮಾನ್ಯ. ಆದರೂ ಆ ದಿಕ್ಕಿನಲ್ಲಿ ಹೊಸ ಚಿಂತನೆ, ಹೊಸ ಮುನ್ನೋಟ, ಹೊಸ ಸಾಧ್ಯತೆಗಳನ್ನು ಹುಟ್ಟುಹಾಕಿದ ಮಂದಿ ಅಲ್ಲಲ್ಲಿ ಒಬ್ಬಿಬ್ಬರು ಇಲ್ಲದೆ ಇಲ್ಲ. ಆ ದಾರಿಯಲ್ಲಿ ಕನಕದಾಸರು ಒಬ್ಬರಾಗಿದ್ದಾರೆ. ಕನಕರು ತಮ್ಮ ತನವನ್ನು ನಿರೂಪಿಸುವಲ್ಲಿ ಪ್ರಧಾನವಾಗಿ ಕುಲವನ್ನು ಮೇಲ್ವರ್ಗದ ಮೇಲರಿಮೆಗೆ ಪ್ರತ್ಯಸ್ತ್ರವಾಗಿ ಬಳಸಿರುವುದು ಅವರ ವಾಸ್ತವ ನೆಲೆಗಟ್ಟಿನ ಪ್ರಬಲ ಶಕ್ತಿಯಾಗಿದೆ ಎಂಬುದನ್ನು ಲೇಖಕರು ಸಾದರ ಪಡಿಸಲು ಪ್ರಯತ್ನಿಸಿದ್ದಾರೆ ಮತ್ತು ಅದರಲ್ಲಿ ಸಫಲರಾಗಿದ್ದಾರೆ. ಇಲ್ಲಿ ಮಧ್ಯಕಾಲೀನ ರಾಜಕೀಯ, ಸಾಮಾಜಿಕ, ಧಾರ್ಮಿಕ ವಾತಾವರಣದ ನಡುವೆ ಇಂದಿನ ಪ್ರಜಾಸತ್ತಾತ್ಮಕ ಗುರಿ ಮತ್ತು ದಾರಿಗಳನ್ನು ಕಂಡುಕೊಳ್ಳುವ 'ಸಾಮಾಜಿಕ, ಹೊಣೆಗಾರಿಕೆಯನ್ನು ಸಂತರು, ಭಕ್ತಿ ಚಳುವಳಿಗಳು ಹೊರಬೇಕಾದ ಅನಿವಾರ್ಯತೆ ಇತ್ತು. ಎಂಬ ಮಾತು ಮುಖ್ಯವಾಗುತ್ತದೆ. ಅಂದಿನ ಕಾಲದಲ್ಲಿ ದೇಶದ ಮೇಲೆ ಅನ್ಯರ ಆಕ್ರಮಣ ನಡೆಯುತ್ತಿತ್ತು. ಅದಕ್ಕೇ ಪ್ರತಿರೋಧವಾಗಿ ತಮ್ಮ ಸಂಸ್ಕೃತಿ, ಧರ್ಮ ಮುಂತಾದವುಗಳನ್ನು ಕಾಪಾಡುವುದಕ್ಕಾಗಿ ಭಕ್ತಿಪಂಥಗಳು ಸಲ್ಲಿಸಿದವನು? ಎದುರಿಸಲಾರದೆ ಭಕ್ತಿಪಂಥದ ಮಾರ್ಗದಲ್ಲಿ ಈ ನೆಲದ ತನಗಳನ್ನು ಉಳಿಸಿಕೊಳ್ಳಲು ಈ ರೀತಿ ಪ್ರಯತ್ನಿಸಿದರೆ- ಎಂಬಂಥ ಪ್ರಶ್ನೆಗಳು ನಮ್ಮಲ್ಲಿ ಹುಟ್ಟಿಕೊಳ್ಳುತ್ತವೆ.

ಪರಿಭಾಷೆಗಳ ಚಹರೆ ಮತ್ತು ರಚನೆಯ ಬಗ್ಗೆ ಕೊಂಚ ವಿವರವಾಗಿ ತಿಳಿಸುವ ಲೇಖಕರು ಪತ್ಯ ಬಗೆಗೆ ವಿಶೇಷ ಒತ್ತು ನೀಡುತ್ತ ಅದರ ನುಡಿ ಬಗೆಗಳು ಹೇಗೆ ಅರ್ಥ ಗ್ರಹಿಕೆಗೆ ಅನುವು ಮಾಡಿಕೊಡುತ್ತವೆ ಎಂಬುದನ್ನು ವಿಶ್ಲೇಷಿಸಿದ್ದಾರೆ. ಆದರೆ, ಈ ಭಾಗವನ್ನು ಗ್ರಹಿಸಿಕೊಳ್ಳುವುದಕ್ಕೆ ಓದುಗರು ಮತ್ತೆ ಮತ್ತೆ ಪುಟಗಳನ್ನು

ಹಿಂದೆ ಮುಂದೆ ತಿರುವಿ ಹಾಕಬೇಕಾಗುತ್ತದೆ. ಯಾವುದೇ ಓದನ್ನು ಅರ್ಥೈಸಿಕೊಳ್ಳಲು ಸಹಜ ಬರವಣಿಗೆ ಆಪೇಕ್ಷಣೀಯವಾದುದು.

ಪರಿಭಾಷೆಗಳ ಮೂಲಕ ಒಂದು ಸಂಸ್ಕೃತಿಯ ವೈವಿಧ್ಯತೆಗಳನ್ನು ಅರಿಯಲು ಆ ಮೂಲಕ ಆ ಕಾಲಘಟ್ಟದ ಚರಿತ್ರೆಯನ್ನು ಪರಿವೀಕ್ಷಿಸಲು ಸಾಧ್ಯವಾಗುವುದು ಅವುಗಳ ಪೂರ್ಣ ಗ್ರಹಿಕೆಯಿಂದ ಮಾತ್ರ ಎಂಬ ಲೇಖಕರ ನಿಲುವು ಸಮರ್ಪಕವಾದುದು. ಆದರೆ ಯಜಮಾನ ಮತ್ತು ಅದೀನ ಸಂಸ್ಕೃತಿ ಎಂಬ ವಿಭಜನೆ ಚರ್ಚಾಸ್ಪದವಾದುದು. ವ್ರೀಹಿ ಮತ್ತು ನರದೆಲಗರ ನಡುವಿನ ಮೇಲ್ಮೆಗಾಗಿ ನಡೆಯುವ ಕಲಹ ವಾಸ್ತವವಾಗಿ ಬ್ರಾಹ್ಮಣ-ಅಬ್ರಾಹ್ಮಣ್ಯದ ನಡುವಿನದೇ ಆಗಿದೆ. ಇಲ್ಲಿ ಕನಕದಾಸರ ಶೂದ್ರಪರ ನಿಲುವನ್ನು ಮತ್ತಷ್ಟು ಗಟ್ಟಿಗೊಳಿಸುವುದಕ್ಕಾಗಿ ಕುವೆಂಪು ಅವರ 'ಶೂದ್ರ ತಪಸ್ವಿ' ನಾಟಕವನ್ನು ಪೂರಕವಾಗಿ ತೆಗೆದುಕೊಂಡಿದ್ದಾರೆ. ಮೇಟಿ ಅವರು ಕುವೆಂಪು ಅವರ ಬೆಂಬಲ ಇಲ್ಲದೆಯೂ ದಾಸರು ಸ್ವಯಂ ಬಲಯುತವಾಗಿ ನಿಲ್ಲಬಲ್ಲರು ಎಂಬ ತಿಳಿವಳಿಕೆ ನಮಗಿದ್ದರಷ್ಟೇ ಸಾಕು. ವಾಸ್ತವವಾಗಿ, ಶೂದ್ರತ್ವ ದುಡಿಮೆಯ ಅರ್ಥಾತ್ ಉತ್ಪಾದನೆಯ ಸಂಕೇತ. ಬ್ರಾಹ್ಮಣ್ಯ ಬೌದ್ಧಿಕ ವ್ಯವಹಾರದ ಸಂಕೇತ.

ಒಂದೆಡೆ ಮೇಟಿ ಅವರು ಬರೆಯುತ್ತಾರೆ 'ನಮ್ಮ ಸಮೂಹಗಳನ್ನು ನಿರಂತರವಾಗಿ ಕಾಡುತ್ತಿರುವ ಮೂರು ಸಂಕಥನಗಳಿವೆ-(Discousses)-ಅವುಗಳನ್ನು ಜಾತೀಯತೆ, ಲೈಂಗಿಕತೆಗೂ ಧರ್ಮ ಎಂದು ಬೇರೆ ಬೇರೆ ಸಂಕಥನಗಳನ್ನಾಗಿ ಗುರುತಿಸಬಹುದು, ಅಂತ. ನಾನು ಅರ್ಥಮಾಡಿಕೊಂಡ ಹಾಗೆ ಜಾತಿ ಹಾಗೂ ಧರ್ಮ ಎರಡು ಸಾಮಾಜಿಕ ಅವಸ್ಥೆಗಳು ಲೈಂಗಿಕತೆ ಯಾವ ಅರ್ಥದಲ್ಲಿ ತೆಗೆದುಕೊಂಡರೂ ವ್ಯಕ್ತಿಗತವಾದುದು ಇವುಗಳನ್ನು ಕನಕರ ಕೃತಿಗಳ ಮೂಲಕ ಲೇಖಕರು ಪ್ರಯತ್ನಿಸಿರುವುದನ್ನು ಅರ್ಥಮಾಡಿಕೊಳ್ಳಲು ಬಹಳಷ್ಟು ತಿಣುಕಾಡಬೇಕಾಗುತ್ತದೆ. ಅರ್ಥವಾಗುವುದೆ? ತಿಳಿಯದು.

ಲೇಖನದ ಅಂತ್ಯದಲ್ಲಿ ಇಂದಿನ ಸಾಮಾಜಿಕ ಪರಿಕಲ್ಪನೆಯನ್ನೂ ಕುರಿತು ಹೆಚ್ಚಿನ ಜಿಜ್ಞಾಸೆಯನ್ನು ಈ ಲೇಖನ ಒಳಗೊಂಡಿದೆ. ಸಾಮಾಜಿಕ ನ್ಯಾಯ, ಪರಿಕಲ್ಪನೆ ಬಹಳಷ್ಟು ಇಂದಿನ ಕಾಲಕ್ಕೆ ಸಂಬಂಧಿಸಿದ್ದು ಅಂದರೆ ತಾತ್ವಿಕ ರೂಪದಲ್ಲಿ. ಅಂದೆಲ್ಲ ಇದ್ದದ್ದು ಒಪ್ಪಿತ ಮೌಲ್ಯಗಳು; ಪ್ರಶ್ನಾತೀತ ಮೌಲ್ಯಗಳು ವಿಜೃಂಭಿಸುತ್ತಿದ್ದವು ಅಥವಾ ಆ ದೃಷ್ಟಿಕೋನ ಸಮಾಜವನ್ನು ನಿಯಂತ್ರಣದಲ್ಲಿರಿಸಿತ್ತು 'ಜೀವ ಪವಿತ್ರವೆಂಬ ಗ್ರಹಿಕೆ'ಯನ್ನು ಮಾನ್ಯ ಮಾಡುವ ಕನಕದಾಸರು ಮತ್ತು ಇಂದಿನ ದಾರ್ಶನಿಕರು ತಳೆದಿರುವ ಧೋರಣೆ ಎಂದಿಗೂ ಸ್ವೀಕಾರಾರ್ಹವಾದುದೇ. ಹಾಗೆಯೇ ಸಮಾಜದಲ್ಲಿ ಏರ್ಪಟ್ಟಿರುವ ನಾನಾ ಬಗೆಯ ಕಂದಕಗಳನ್ನು ತೊಡೆದು ಹಾಕಲು ಇಂದಿನ ಆರ್ಥಿಕ ರಚನೆ ದೊಡ್ಡ ತೊಡರ್ಗಾಲಾಗಿದೆ ಎಂಬ ಲೇಖಕರ ಅಭಿಪ್ರಾಯವನ್ನು ನಾವೂ ಸಮ್ಮತಿಸಬಹುದು.

ಇಡಿಯಾಗಿ ಹೇಳುವುದಾದರೆ ಪ್ರಸ್ತುತ ಲೇಖನ-ಕನಕರ ಕಾಲದಲ್ಲಿ ತಳವೂರಿದ್ದ ಸಾಮಾಜಿಕ-ಸಾಂಸ್ಕೃತಿಕ ಹುನ್ನಾರಗಳನ್ನು ನಿರಚನಗೊಳಿಸುವಲ್ಲಿ ಅವರ ಆತ್ಮ ಸ್ಥೈರ್ಯದ ಪ್ರಯತ್ನಗಳನ್ನು ಸೂಕ್ಷ್ಮವಾಗಿ ಅರಿಕೆ ಮಾಡಿಕೊಡುವ ದಿಕ್ಕಿನಲ್ಲಿದೆ. ಹೊಸ ಬಗೆಯ ವಿಮರ್ಶಾ, ಪಾರಿಭಾಷಿಕ ಶಬ್ಧಗಳನ್ನೊಳಗೊಂಡಂತೆ ಲೇಖನದ ಬಂಧ ಸಾಕಷ್ಟು ಬಿಗುವಾಗಿದೆ. ವಿಷಯ ಪ್ರತಿಪಾದನೆ, ಬರವಣಿಗೆಯ ಧಾಟಿಯಲ್ಲಿ ಸಹಜತೆಯೂ ಬೇಕು, ಸರಳತೆಯೂ ಬೇಕು ಮತ್ತು ಸುಲಭತೆಯೂ ಬೇಕು.

### 2. ಕನಕ ಪರಿಭಾಷೆ: ನಿರ್ಮಲ ಇಲ್ಲದ ಮನಸು ಅದು ಕಜ್ಜಿ ತಿನಿಸು

– ಡಾ. ಹೆಚ್.ಟಿ.ಕೃಷ್ಣಮೂರ್ತಿ

ಕನಕದಾಸರು ಹರಿದಾಸರಲ್ಲಿಯೇ ಅತ್ಯಂತ ಮೇಧಾವಿಯು, ವೈವಿಧ್ಯ ಜೀವನವನ್ನು ಕಳೆದವರು ಹಾಗೂ ನಿರಂತರ ಸಂಚಾರಿಯಾದವರು. ಕರ್ನಾಟಕದ ಆಚೆಗೂ ಪ್ರಭಾವ ಬೀರಿದವರು. ಅವರ ಸಮಕಾಲೀನ ರಾಜಸ್ಥಾನದ ರಾಜನೂ ಕನಕರ ಪ್ರಭಾವಕ್ಕೆ ಒಳಗಾಗಿದ್ದನು. ತಿರುಪತಿ ಬೆಟ್ಟಕ್ಕೆ ನಿರಂತರ ಭೇಟಿ ಇಡುತ್ತಿದ್ದರು, ಇದರ ಕಾರಣವಾಗಿ ಅವರ ವ್ಯಕ್ತಿತ್ವಕ್ಕೊಂದು ಸಂಕಿರ್ಣತೆ ಬಂದಿದೆ. ಬೇರೆ ಬೇರೆ ಅಂಕಿತ ಪ್ರಕಾರಗಳಲ್ಲಿ ಅವರ ಬರವಣಿಗೆ ನೆಡೆದಿದೆ. "ನೀ ಮಾಯೆಯೊಳಗೊ ನಿನ್ನೊಳಗೆ ಮಾಯೆಯೋ?" ಎಂಬ ಮಾತಿನಲ್ಲಿ ದೃಷ್ಟಿ ಬದಲಿಸುವ ದಿಕ್ಸೂಚಿ ಪರಿಭಾಷೆಯ ಚೌಕಟ್ಟಿದೆ. ಕನಕದಾಸರ ಸಾಮಾಜಿಕ ಆಯಾಮ ಪ್ರಾಚೀನ ಸಾಹಿತ್ಯದಲ್ಲಿ ವಿಶಿಷ್ಟವಾದ ಪ್ರತಿರೋದದ ನೆಲೆಯನ್ನು ಒದಗಿಸಿದೆ.

"ಕುಲ ಕುಲವೆನ್ನುತಿಹರೋ ಕುಲವಾವುದು ಸತ್ಯ ಸುಜನರಿಗೆ"
"ಮಡದಿ ಮಕ್ಕಳ ಮೋಹದಲ್ ಮನಸಿಲುಕಿ ಅಡಿಗಡಿಗೆ
ಮಡದೀಯಾರೀ ಮಕ್ಕಳ್ಯಾರಿ
ಒಡಲಿಗೊಡೆಯನು ನೀನು"

ಮುಂತಾದ ಮಾತುಗಳಲ್ಲಿ ಇದು ವ್ಯಕ್ತವಾಗಿದೆ. ಇದರೊಂದಿಗೆ 'ಎಲ್ಲರೂ ಮಾಡುವುದು ಹೊಟ್ಟೆಗಾಗಿ, ನಾವು ಕುರುಬರು...' ರಾಜಕೀಯದ ತೀವ್ರ ವಿಡಂಬನೆಯ 'ಡೊಂಕು ಬಾಲದ ನಾಯಕರೆ' ಮುಂತಾದ ಸಾಮಾಜವಾದಿ ಪರಿಭಾಷೆಯ ಕವಿತೆಗಳನ್ನು ಬರೆದರು. ಅಂತೆಯೇ ನಳಚರಿತ್ರೆಯನ್ನು, ಹರಿಭಕ್ತಿಸಾರವನ್ನು ಬರೆದರು. ಉಡುಪಿಗೆ ಬೇಟಿ ಇತ್ತು ವೈದಿಕರ ಡಾಂಬಿಕತೆಯನ್ನು ತೋರಿಸಿಕೊಟ್ಟರು. ದಲಿತ-ಶೂದ್ರರ ಸಾಂಸ್ಕೃತಿಕ ಗುರುತಿಗೆ ಪ್ರೇರಕರಾದರು. ಅಂಬೇಡ್ಕರ್‌ರ ದೇವಾಲಯ ಪ್ರವೇಶ ಚಳವಳಿಯನ್ನು ಇದರೊಂದಿಗೆ ಇಟ್ಟು ನೋಡಬೇಕು. ವ್ಯಾಸರಾಯ ಮಠದಲ್ಲಿದ್ದ ಸಂಸ್ಕೃತ – ಜಾತಿಕೊಂಡಾಟದ ಎದುರಿಗೆ ರಾಮಧಾನ್ಯ ಚರಿತೆ ಬರೆದರು. ಈ ವೈರುದ್ಯಗಳ ಮಧ್ಯೆಯೇ ಕನಕರ ತಾತ್ವಿಕತೆಯ ಒಳಹರಿವು ಹುದುಗಿದೆ. ಕನಕನ ಪರಿಭಾಷೆಯ ತಾತ್ವಿಕತೆಯನ್ನು ಕುರಿತು ಕೆಲ ಟಿಪ್ಪಣಿ ಮಾತುಗಳು ಇಂತಿವೆ:

ಯಾವುದೆ ಪರಿಭಾಷೆಗಳ ಹಿಂದೆ ಒಂದು ತೀವ್ರವಾದ ಉದ್ದೇಶವಿರುತ್ತದೆ. ಅಧಿಕಾರದ ಪರಿಭಾಷೆಯಲ್ಲಿ ಅಮೂರ್ತವಾದ, ನಮ್ಮೆಲ್ಲರ ಬದುಕನ್ನು ಪ್ರಭಾವಿಸುವ ಪರಿಕಲ್ಪನೆಯಾಗಿರುತ್ತದೆ. ಹಾಗಾಗಿಯೇ ರಾಗಿ–ಭತ್ತದ ಜಗಳದ ತೀರ್ಮಾನವನ್ನು ರಾಮನೆ ನಿರ್ಧರಿಸಬೇಕಾಗುತ್ತದೆ. 'ಯಾವುದೇ ಕೆಲಸ ಕಾರ್ಯಗಳು ನಡೆಯುವಂತೆ ಮಾಡುವ ಸಮಾಜದ ಶಕ್ತಿಯೇ ಅಧಿಕಾರ. ಅಧಿಕಾರದ ಬಗ್ಗೆ ತಿಳಿಯುವುದರಿಂದ ಯಾರ ಮೇಲೆ ಯಾರಿಗೆ ನಿಯಂತ್ರಣವಿದೆ. ಅದನ್ನು ಯಾರ ಉಪಯೋಗಕ್ಕೆ ಬಳಸುತ್ತಾರೆ ಅನ್ನುವುದು ಅರಿವಿಗೆ ಬರುತ್ತದೆ' . ಪ್ರಭುತ್ವ– ದರ್ಮ–ಜಾತಿ–ಪಿತೃ ವ್ಯವಸ್ಥೆಗಳೆ ಅಧಿಕಾರ ಕೇಂದ್ರಗಳು ಇದರ ಅಂಚಿನಲ್ಲಿ ಇರುವವರು ಬಡವರು, ಅಸ್ಪ್ರಶ್ಯರು, ಹೆಂಗಸರು, ಹಿಂದುಳಿದ ವರ್ಗ/ಜಾತಿಗೆ ಸೇರಿದವರು.

ಕನಕದಾಸರ ಸಾಹಿತ್ಯ ವಿಚಾರ– ಜೀವನ ಧ್ಯೇಯ ಅಧಿಕಾರ ರಹಿತರ ಪರವಾಗಿದೆ. ಅಧಿಕಾರ ಕೇಂದ್ರಗಳು ಪರಸ್ಪರ ಪೂರಕವಾಗಿ ಪೋಷಣೆಗೊಳ್ಳುತ್ತಲೆ ಇರುತ್ತದೆ. ಕನಕನ ಸಾಹಿತ್ಯ ಪರಿಭಾಷೆಗಳ–ಪರಿಕಲ್ಪನೆ ಚರಿತ್ರೆಯ ಪ್ರಕ್ರಿಯೆಗಳ ಕತೆಯನ್ನು ಹೇಳುತ್ತದೆ. ಅಂದರೆ ಅದರ ಸಾಂಸ್ಕೃತಿಕ ರಾಜಕಾರಣವನ್ನು ಅನಾವರಣಗೊಳಿಸುತ್ತದೆ. ಅದರೊಂದಿಗೆ, ಅಪರಿಚಿತ ಆಯಾಮಗಳನ್ನು ಕುರಿತಂತೆ ಅಸಧಾರಣವಾದ ಒಳನೋಟಗಳನ್ನು ನೀಡಬಹುದಾಗಿದೆ. ಅಧಿಕಾರ ಪರಿಭಾಷೆಗಳು ಪ್ರಬಲರ ಪರವಾದ ಸತ್ಯವನ್ನು ಬಿಚ್ಚಿಡುವ, ದುರ್ಬಲರ ಸತ್ಯವನ್ನು ಬಚ್ಚಿಡುವ ಕೆಲಸವನ್ನು ಮಾಡುತ್ತದೆ. ಈ ನೆಲೆಯಲ್ಲಿ ಕನಕರ ಹಂಬಲದ ಮಾತು, ಆರ್ತತೆಗಳು, ವ್ಯಂಗ್ಯ, ಕೋಪದ ನುಡಿಗಳನ್ನು ನೋಡಬಹುರಾಗಿದೆ. ಕನಕರಿಗೆ 'ಜ್ಞಾನವಳಿದು ವಿಕಾರದಲಿ ಮತಿಹೀನರಾದವರ' ಡದುರು ಮಾತನಾಡಬೇಕಾಗಿದೆ. ಅದಕ್ಕೆ ಪೂರಕವಾದ ಪರಿ–ಭಾಷೆಗಳ ಸವಾಲುಗಳಿದ್ದವು. ರಾಮಧಾನ್ಯದಲ್ಲಿ ಭತ್ತ–ರಾಗಿಯನ್ನು 'ಕುಲಹೀನ' ಎಂದು ಮೊದಲಿಸುತ್ತದೆ. ಹಾಗಾಗಿ ರಾಗಿ ಭತ್ತವನ್ನು 'ಸತ್ಯಹೀನ' ಎಂದು ಜರಿಯುತ್ತದೆ. ರಾಮನಿಂದ ಭತ್ತವು 'ದೇವರಿಗೆ ಪರಮಾನ್ನ ದೇವರಿಗೆ ಅತಿಶಯದ ನೈವೇದ್ಯ', ಎಂದು ಹೊಗಳಿಸಿಕೊಂಡರೆ, ರಾಗಿಯನ್ನು 'ಮನುಜಾವಳಿಗೆ ಪಕ್ವಾನ್ನ' ಎನ್ನುವುದು ಅಧಿಕಾರದ ನೆಲೆಯಲ್ಲಿವೆ. ಭತ್ತಕ್ಕೆ 'ಅಧಿಕಾರ' (ರಾಮ) ಅಧಿಕಾರ ಪೂಜಿತ ನೆಲೆಯನ್ನೇ ಕೊಡುತ್ತದೆ.

ವಚನ ಚಳವಳಿಯು ಶಕ್ತಿ ಕೇಂದ್ರವಾದ ದೇವಾಲಯಗಳನ್ನು ನಿರಚನಗೊಳಿಸಿ ಬಯಲಾಗಿಸುವ ಪ್ರಯತ್ನ ಮಾಡಿತು. ಆದರೆ ಕನಕದಾಸರ ಸಮಯದಲ್ಲಿ ದೇವಾಲಯಗಳು, ಧರ್ಮನಾಯಕತ್ವ ಇನ್ನಷ್ಟು ಬಲವಾದವು. ಜನಸಾಮಾನ್ಯರಿಗೆ ಶ್ರದ್ಧಾ ಕೇಂದ್ರಗಳಾದವು, ತಳಸಮುದಾಯಗಳಿಗೆ ಇಂತಹ ಶ್ರದ್ಧಾ ಕೇಂದ್ರಗಳು ಸಮೂಹತೆಯ, ಸಾಂಸ್ಕೃತಿಕ ಗುರುತಿನ ಭಾಗವಾಗ ತೊಡಗಿತು.

ಹಾಗಾಗಿ ಇದನ್ನು ಸರಳವಾಗಿ 'ಪ್ರಗತಿ=ಇಂಗ್ಲೀಷ್ ಶಿಕ್ಷಣ=ವಸಾಹತುಶಾಹಿ ಕೊಡುಗೆ ಈ ನೆಲೆಯಲ್ಲಿ ನೋಡಲಾಗದು. ಅಂತೆಯೇ ದೇಸಿ ವಸಾಹತು

ಪ್ರತಿಪಾದಿಸುವ ಸಮೀಕರಣಗಳು ಸಾಲವು. ಉದಾಹರಣೆಗಾಗಿ ರಾಮಾನುಜಾಚಾರ್ಯರು ತಮ್ಮ 'ಶ್ರೀಭಾಷ್ಯ'ದಲ್ಲಿ 'ಕಲ್ಯಾಣ' ಎಂದರೆ ಯೋಚನೆ, ಮಾತು, ಮತ್ತು ಕ್ರಿಯೆ ಈ ಮೂರರಲ್ಲಿಯೂ ಪರಿಶುದ್ಧವಾಗಿರುವುದು ಎಂದೆನ್ನುತ್ತದೆ. ಆದರೆ ಧರ್ಮಕಾರಣ ಇದು ಎಂತಹ ವಿರೂಪಕ್ಕೆ ಒಳಗಾಗಿವೆ ಎಂದು ಹೇಳಬೇಕಾಗಿಲ್ಲ.

ಕಾಲ ಕರ್ಮದೊಳುಪೇಕ್ಷೆಯ ಮಾಡಿ ಹರಿಭಕುತಿ
ಶೀಲ ರಹಿತ ಬ್ರಾಹ್ಮಣನಾಗಲೊಲ್ಲೆ
ನರಿತು ಹರಿಭಕುತಿ ಮಾಳ್ಪರ ಚಾಂ
ಡಾಲನ ಮನೆಬಾಗಿಲ ಕಾಯಿಸೆನ್ನ'

ಎಂಬಲ್ಲಿ ಕನಕರ ಭಕ್ತಿಮುಖ ಮಾತ್ರವಲ್ಲ, ಸಾಮಾಜಿಕ, ರಾಜಕೀಯ ಮುಖವು ಇದೆ. ಅಂತೆಯೆ ಶ್ರೀರಂಗಪಟ್ಟಣದ ರಂಗನಾಥನನ್ನು ಕುರಿತು 'ಯಾಕೆ ನಿನಿಲ್ಲಿ ಪವಡಿಸಿದೆ ಹಿರಿಯ ಜಗರೇಖ ವಿಖ್ಯಾತ ಪಶ್ಚಿಮ ರಂಗಧಾಮ' ಎಂಬ ಕೀರ್ತನೆಯಲ್ಲಿ ಇನ್ನಷ್ಟು ಕಾಲ ನೀನಿಲ್ಲಿ ಮಲಗಿದ್ದರೂ, ನಿನ್ನನ್ನೆಬ್ಬಿಸುವವರನೊಬ್ಬರನೂ ಕಾಣೆ" ಎನ್ನುವ ಮಾತು ರಾಗಿ ಭತ್ತಕ್ಕೆ ಹೇಳುವ 'ಕಡುಜಡ'ತೆನ್ನು ಬಿಂಬಿಸುತ್ತದೆ. ನಿಜವಾದ ಧಾರ್ಮಿಕಕ್ರಿಯೆ ಇಲ್ಲ. ಪ್ರಸ್ತುತವಂತೂ 'ಧಾರ್ಮಿಕಕಲ್ಯಾಣ'ಗಳೂ ಎಷ್ಟು ಜನವಿರೋಧಿಯಾಗಿವೆ ಎಂಬುದನ್ನು ಯೋಚಿಸಬೇಕಾಗಿದೆ.

ದಿನ, ವಾರ, ತಿಂಗಳು, ವರ್ಷ, ಶತಮಾನಗಳಿಂದ ಪ್ರಭುತ್ವ ಧರ್ಮಕಾರಣಗಳು ಏಕಶ್ರೇಷ್ಠತೆಯನನ್ನು, ಜಾತಿ ಮೇಲು-ಕೀಳುಗಳನ್ನು ಮಾನಸಿಕ ಲೋಕದಲ್ಲಿ ತುಂಬುತ್ತಲೆ ಬಂದಿವೆ. ಅದನ್ನೆ 'ನೀಮಾಯೆಯೊಳಗು....' ಎಂಬ ಪ್ರಶ್ನೆ ಇರುವುದು. ಪ್ರಜ್ಞೆ ನಿನ್ನೊಳಗೊ, ನೀ ಪ್ರಜ್ಞೆಯೊಳಗೊ ಎಂಬ ಅರಿವಾಗಬೇಕಾಗಿದೆ. ಇದಕ್ಕೆ ಮನಸ್ಸು ನಿರ್ಮಲವಾಗಬೇಕಿದೆ.

### 3. ಕಾವ್ಯದೊಳೆ ಮೈದುಂಬುವ ಇತಿಹಾಸ

**–ಡಾ. ರಾಜಶೇಖರ ಮಠಪತಿ**

'ಇತಿಹಾಸಕ್ಕಿಂತಲೂ ಕಾವ್ಯ ಹೆಚ್ಚು ಆಧ್ಯಾತ್ಮಿಕವಾದುದು ಮತ್ತು ಗಂಭೀರವಾದುದು' ಎನ್ನುತ್ತಾನೆ ಅರಿಸ್ಟಾಟಲ್. ಮುಂದುವರೆದು 'ಕಾವ್ಯ ಯಾವಾಗಲೂ ಜಾಗತಿಕವಾದುದನ್ನು ಕುರಿತು ಮಾತನಾಡುತ್ತದೆ, ಅದರೊಳಗೇ ಒಂದು ನಿರ್ದಿಷ್ಟ ಇತಿಹಾಸವನ್ನೂ ಹೇಳುತ್ತದೆ' ಎಂದು ಆತ ಹೇಳಿದ್ದಾನೆ. ಇಂಥ ಒಂದು ಆಲೋಚನೆಯನ್ನು ಮುಂದಿರಿಸಿಕೊಂಡು ಕನ್ನಡ ಕಾವ್ಯವನ್ನು ಗಮನಿಸುತ್ತಿದ್ದರೆ, ಇಲ್ಲಿಯ ಭಕ್ತಿ-ಸಾಹಿತ್ಯದ ಬರಹಗಾರರು, ಸಂತ, ವಚನಕಾರ, ದಾಸ, ತತ್ವಪದಕಾರರ ಕಾವ್ಯಗಳು ಈ ನೆಲೆಯದ್ದವು ಎನ್ನುವುದು ಸ್ಪಷ್ಟವಾಗುತ್ತದೆ.

ಇಡೀ ಕನ್ನಡ ಸಾಹಿತ್ಯ, ಜಾತಿ, ಧರ್ಮ ಆಯಾ ಕಾಲದ ರಾಜಕಾರಣಗಳ ಪ್ರಭಾವದಿಂದ ಅಭಿವ್ಯಕ್ತಿಗೊಂಡ ರೀತಿಯಲ್ಲಿಯೇ ಅನಾವರಣಗೊಳ್ಳುತ್ತದೆ. ಕೆಲವು

ಬಾರಿ ಅದು ಆ ಘಟ್ಟವನ್ನು ಪ್ರತಿನಿಧಿಸುವ ಸಮರ್ಥ ಕವಿಯೊಬ್ಬನಲ್ಲಿ ಕೆನೆಗಟ್ಟಿ ಸ್ಪಷ್ಟವಾಗಿ ಕಾಣಿಸಿಕೊಂಡರೆ, ಮತ್ತೆ ಕೆಲವು ಬಾರಿ ಅದು ಅಂಥ ಪ್ರಾತಿನಿಧಿತ್ವದ ಕೊರತೆಯಿಂದಾಗಿ ಒಂದು ತೆಳುವಾದ ಸ್ಥಾಯಿಭಾವವಾಗಿ ಉಳಿದುಕೊಂಡು ಬಿಡುತ್ತದೆ. ಕಾಲಾಂತರದಲ್ಲಿ ಈ ತೆಳು ಪರದೆಯನ್ನು ಸರಿಸಿಯೂ ಇತಿಹಾಸವನ್ನು ಕೆದಕಿನೋಡುವ ಪ್ರಯತ್ನಗಳೇ ಸಂಶೋಧನೆಯ ಹೊಸ ಮಾರ್ಗಗಳಿಗೆ, ಸಾಹಸಗಳಿಗೆ, ಸಾಧನೆಗಳಿಗೆ ಮತ್ತು ಮಹತ್ವದ ಚರ್ಚೆಗಳಿಗೆ ಪೀಠಿಕೆಯಾಗುತ್ತವೆ. ಆದರೆ, ಸಂಶೋಧಕ ಮೇಟಿ ಮಲ್ಲಿಕಾರ್ಜುನ ಹೇಳುವಂತೆ "ಇಂತಹ ಅವಕಾಶಗಳನ್ನು ತಪ್ಪಿಸುವ ಹುನ್ನಾರಗಳು ನಡೆಯುತ್ತಲೇ ಇರುತ್ತವೆ. ಅಚ್ಚರಿಯ ಸಂಗತಿ ಏನೆಂದರೆ, ನಮಗೆ ಬೇಕಾದ ಓದುಗಳನ್ನು ರೂಪಿಸಿಕೊಳ್ಳುವ ಪ್ರಕ್ರಿಯೆಗೆ ಅಡ್ಡಿಪಡಿಸುವ ಹೊರಗಿನ ಓದುಗಳೂ ಕೂಡ ಇಂತಹದೇ ಪರಿಭಾಷೆಗಳ ರಾಜಕಾರಣವನ್ನು ಮಾಡುತ್ತವೆ."

ಕಾವ್ಯ ಹೇಳುವ ಇತಿಹಾಸಕ್ಕೆ ವಾಸ್ತವವಾದ ಇತಿಹಾಸದ ಕಾಲಗಣನೆಯ ಸೂಚಕಗಳಿಲ್ಲ. ಆದರೆ ಕಾವ್ಯದೊಳಗೆ ಮೈದುಂಬುವ ಇತಿಹಾಸಕ್ಕಿರುವ ರೂಪಕಶಕ್ತಿ, ಸಂಜ್ಞಾಪ್ರಜ್ಞೆ, ವಿಚಾರ ವಿಸ್ತಾರ, ಆಧ್ಯಾತ್ಮಿಕ ಆಳ, ವಾಸ್ತವ ಪ್ರಣೀತ ಇತಿಹಾಸಕ್ಕಿಲ್ಲ. ಕರ್ನಾಟಕದ ಒಂದು ಕಾಲಘಟ್ಟದ ಇತಿಹಾಸವನ್ನು ಜಾತಿ ಮತ್ತು ಮೌಢ್ಯ ಸಂಘರ್ಷದ ಅನಾಹುತಗಳ ತಿಳುವಳಿಕೆಗಳೊಂದಿಗೆ ಕಟ್ಟಿಕೊಟ್ಟವರು ನಮ್ಮ ದಾಸ ಪರಂಪರೆಯ ಕವಿಗಳು. ಅದರಲ್ಲೂ ಮಧ್ಯಕಾಲೀನ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಸನ್ನಿವೇಶಗಳನ್ನು ಕಾಲ ಜಾತಿಯ ಸಾಮಾಜಿಕ ವಿನ್ಯಾಸವನ್ನು ಪ್ರತಿರೋಧಿಸಿದ ಕನಕದಾಸರಂತೂ ಈ ಘಟ್ಟದ ಅತ್ಯಂತ ಮಹತ್ವದ ಪ್ರಾತಿನಿಧಿಕ ಕವಿ.

"ನಾವು ಕುರುಬರು, ನಮ್ಮ ದೇವರು ಬೀರಯ್ಯ" ಎಂದು ಸಾರಿದ ಕನಕದಾಸರು ಜಾತೀಯತೆ, ಲೈಂಗಿಕತೆ ಮತ್ತು ಧರ್ಮ ಎಂಬ ಮೂರು ನಮ್ಮನ್ನು ನಿತ್ಯ ಕಾಡುವ ಸಂಕಥನಗಳ ಮೂಲಕ ಪ್ರಚುರಪಡಿಸುವುದರೊಂದಿಗೆ, ಪರಿಭಾಷೆಗಳು ನಮ್ಮನ್ನು ಹಾಗೂ ನಮ್ಮ ಸಮಾಜವನ್ನು ಹೇಗೆ ನಿಯಂತ್ರಿಸಿದ್ದವು ಎನ್ನುವುದನ್ನು ಮೇಟಿ ಮಲ್ಲಿಕಾರ್ಜುನ ಸಾಂಸ್ಕೃತಿಕ ರಾಜಕಾರಣದ ಹಿನ್ನೆಲೆಯಲ್ಲಿ ಹೀಗೆ ದಾಖಲಿಸಿದ್ದಾರೆ. 'ಕನಕ, ತನ್ನೆಲ್ಲಾ ಸಾಹಿತ್ಯದ ಅಭಿವ್ಯಕ್ತಿಗಳಾದ ರಾಮಧಾನ್ಯ ಚರಿತೆ, ಮೋಹನ ತರಂಗಿಣಿ, ನಳ ಚರಿತ್ರೆ ಹಾಗೂ ಹಾಡುಗಳಲ್ಲಿ ಬಹುತೇಕವಾಗಿ ಚರ್ಚಿಸುವುದು ಈ ಮೂರು ಸಂಕಥನಗಳನ್ನೇ ಹಾಗೂ ಈ ಸಂಕಥನಗಳನ್ನು ಬಿಡಿಸಿ ನೋಡಲು ಬೇಕಾದ ತಾತ್ವಿಕ ವಿನ್ಯಾಸಗಳನ್ನೂ ಕನಕ ತನ್ನೀ ಸಾಹಿತ್ಯದಲ್ಲಿ ಅಡಕಗೊಳಿಸಿದ್ದಾನೆ. ಕನಕನ ಎಲ್ಲಾ ಆಯಾಮಗಳನ್ನೂ ವಿಶ್ಲೇಶಿಸಿ ನೋಡಲು ಪರಿಭಾಷೆಗಳ ಅಗತ್ಯ ಎಷ್ಟೆಂಬುದನ್ನು ನಾವು ಮನಗಾಣಬೇಕಿದೆ. ಏಕೆಂದರೆ ಜಾತಿ, ಲಿಂಗ, ಧರ್ಮ, ದೇವರು, ಮೇಲು-ಕೀಳು, ಸತ್ಯ, ವಾತ್ಸವ, ನಂಬಿಕೆ-ಅಪನಂಬಿಕೆ ಮುಂತಾದ ಸಂಗತಿಗಳನ್ನು ಕುರಿತ ಪರಿಭಾಷೆಗಳು ಹೇಗೆ ನಮ್ಮನ್ನು ನಿಯಂತ್ರಿಸುತ್ತವೆ ಎಂಬ ಸಂಗತಿ ಕನಕನಿಗೆ ಅತ್ಯಂತ ಸ್ಪಷ್ಟವಾಗಿತ್ತು. ಆದ್ದರಿಂದಲೇ ಕನಕನು ಅದೇ

ಪರಿಭಾಷೆಗಳನ್ನೇ ಪರಿಕರಗಳನ್ನಾಗಿ ಬಳಸಿಕೊಂಡು, ಈ ಮೇಲೆ ಸೂಚಿಸಿದ ಸಂಕಥನಗಳನ್ನು ನಿರಚನಗೊಳಿಸುವ ಹಾಗೂ ಅವುಗಳ ಸಾಂಸ್ಥಿಕ ಸ್ವರೂಪಗಳನ್ನು ಬದಲಾಯಿಸುವ ಇರಾದೆಯನ್ನು ಹೊಂದಿದ್ದನು."

'ಯಾವುದೇ ಕಲೆ ಅಥವಾ ಸಾಹಿತ್ಯವು ಪರಂಪರೆಯಿಂದ ಸಂಪೂರ್ಣ ಪ್ರತ್ಯೇಕವಾಗಿ ರೂಪಗೊಳ್ಳಲು ಸಾಧ್ಯವಿಲ್ಲ.' ಇದನ್ನೇ ಸ್ವಲ್ಪ ಮಿತಗೊಳಿಸಿಯೋ ಅಥವಾ ವಿಸ್ತಾರಗೊಳಿಸಿಯೋ ಅದಿನ್ನೂ ನಿರ್ಧಾರವಾಗಬೇಕಾದ ಅಂಶ. ಪಶ್ಚಿಮದ ಬಹುದೊಡ್ಡ ಕಾವ್ಯಾರ್ಥ ಚಿಂತಕ ಟಿ.ಎಸ್.ಇಲಿಯಟ್ ಇದನ್ನೇ 'ಟ್ರೆಡಿಷನ್ ಆಂಡ್ ಇಂಡಿವಿಜುವಲ್ ಟ್ಯಾಲೆಂಟ್' ಎಂದು ಕರೆದ. ಕನಕ ಅಂಥ ಓರ್ವ ಪ್ರತಿಭಾನ್ವಿತ ಇಂಡಿವಿಜುವಲ್ ಟ್ಯಾಲೆಂಟ್.

ಸನಾತನ ಕಾವ್ಯ ಪರಂಪರೆಯ ಬೆಳಕಿನಲ್ಲಿ ಸಮಕಾಲೀನ ವಾಸ್ತವಗಳಿಗೆ ಕನ್ನಡಿ ಹಿಡಿದ ಸಂತಕವಿ. ಈತ ತನ್ನ ಕಾಲಘಟ್ಟದ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ವಿಷಮ ಸಂದರ್ಭದಲ್ಲಿ 'ಶ್ರೀ ರಾಮನ ಮೂಲಕ ರಾಗಿಗೆ ಒಂದು ಸಾಂಸ್ಕೃತಿಕ ಮಾನ್ಯತೆಯನ್ನು ಕೊಡಿಸುವುದರೊಂದಿಗೆ' ಕುವೆಂಪು ಹಾಗೂ ಅವರಿಗೂ ಮುಂದುವರೆದ ಕನ್ನಡದ ಒಂದು ಆಲೋಚನಾ ಕ್ರಮಕ್ಕೆ ನಾಂದಿ ಹಾಡುತ್ತಾರೆ. ಕನಕ ಸಮಕಾಲೀನಗೊಳ್ಳುವುದು ಸಮಸ್ಯೆಗಳಿಗೆ ದಾರಿ ಎನ್ನಿಸುವುದು ಸಾಮಾಜಿಕ ವಾಸ್ತವಗಳನ್ನು ಬರೀ ಆಧ್ಯಾತ್ಮೀಕರಣಗೊಳಿಸದೇ ಇರುವ ಕಾರಣಕ್ಕಾಗಿ.

ವಾಸ್ತವದಲ್ಲಿ 'ಜಾತಿ, ಲಿಂದ, ಧರ್ಮ, ದೇವರು, ಮೇಲು-ಕೀಳುಗಳ ಮೇಲಾಟ ನಂಬಿಕೆ-ಅಪನಂಬಿಕೆಗಳ ತಾಕಲಾಟ ಒಳ-ಹೊರಗಣಗಳ ಹೊಯ್ದಾಟ, ಜಂಗಮ-ಆಲಯಗಳ ಮಧ್ಯದ ಸಂಘರ್ಷಗಳೆಂಬ ಪರಿಭಾಷೆಗಳು ಹೇಗೆ ನಮ್ಮನ್ನು ನಿಯಂತ್ರಿಸಿ ನಿರ್ವೀರ್ಯಗೊಳಿಸುತ್ತವೆ ಎಂಬುವದನ್ನು ದಿಟವಾಗಿ ಹೇಳಿದ ಮಹತ್ವದ ಸಾಮಾಜಿಕ ಚಿಂತಕ ನಮ್ಮ ಕನಕದಾಸ. ಇವರು ಕಟ್ಟಿಕೊಟ್ಟ ಸಂಕಥನಗಳನ್ನು ಪುನರ್ ಗ್ರಹಿಸುವುದು ಯಾಕೆ ಒಂದು ಮುಖ್ಯವಾದ ಕ್ರಿಯೆ ಎನ್ನುವುದನ್ನು ಸಂಶೋಧಕ ಮೇಟಿ ಮಲ್ಲಿಕಾರ್ಜುನ ಬಹಳ ಸಮರ್ಥವಾಗಿ ವಿವರಿಸುತ್ತಾರೆ. 'ಚರಿತೆಯನ್ನು ಕಟ್ಟುವುದೆಂದರೆ ಅದೊಂದು ಸಂಕಥನ ಕ್ರಿಯೆಯಾಗಿರುತ್ತದೆ. ಯಾಕೆಂದರೆ ಮೀನುಗಳು ನೀರಿನಲ್ಲಿ ಬದುಕುವಂತೆ ಮನುಷ್ಯರು ಸಂಕಥನಗಳಲ್ಲಿ ಬದುಕುತ್ತಾರೆ. ಈ ಸಂಕಥನ ಕ್ರಿಯೆಗಳನ್ನು ಕೈಬಿಟ್ಟು ಇಲ್ಲವೆ ಇವುಗಳ ತಾತ್ವಿಕತೆಯನ್ನು ಪರಿಗಣಿಸದೇ, ಯಾವುದೇ ಸಮೂಹಗಳ ಬದುಕಿನ ವಿನ್ಯಾಸವನ್ನು ಅರಿಯಲು ಸಾಧ್ಯವಿಲ್ಲ. ಅದು ವಿಶೇಷವಾಗಿ ಭಕ್ತಿ ಚಳುವಳಿ, ತತ್ವಪದಕಾರರು ಹಾಗೂ ಸಂಕರು ತಮ್ಮ ತಾತ್ವಿಕತೆಯ ಪರಂಪರೆಯನ್ನು ಕಟ್ಟಿರುವುದೇ ತಮ್ಮೆದುರಿಗಿರುವ ಸಮೂಹ ವಿರೋಧಿ ಸಂಕಥನಗಳನ್ನು ಒಡೆಯುವುದಕ್ಕೆ."

ಸಂಪ್ರದಾಯ ವಿರೋಧಿ ನೆಲೆಯಲ್ಲಿ ಕನಕದಾಸರಂಥ ಸಮರ್ಥ ಸಂತಕವಿ ಮತ್ತೊಬ್ಬನಿಲ್ಲ ಎನ್ನುವ ನನ್ನ ಹೇಳಿಕೆ ಅಚ್ಚರಿಯದ್ದಾಗಬೇಕಿಲ್ಲ. ಸುಸಂಸ್ಕೃತನೊಬ್ಬ

ಮತ್ತು ಸಾಂಪ್ರದಾಯಿಕತೆಯ ಸಕಾರಾತ್ಮಕ ಅಂಶಗಳನ್ನೂ ಗೌರವಿಸಬಲ್ಲ ಚಿಂತಕನಿಗೆ ಈ ಹೇಳಿಕೆಯ ಆಳಗಲ ಅರ್ಥವಾಗುತ್ತದೆ. 'ಸತ್ತಂತಿಹರನು ಬಡಿದೆಚ್ಚರಿಸು' ಕವಿವಾಣಿಗೂ ಪೂರ್ವದಲ್ಲಿ ಒಂದು ಯುಗದ ಆಶೆಯವನ್ನು ರೂಪಿಸುವ ಆಲೋಚನೆಗಳಿಗೆ ಅಡಿಪಾಯ ಹಾಕಿದವರು ಕನಕದಾಸ. ಪ್ರಪಂಚದ ಯಾವುದೇ ವೈಚಾರಿಕನಿಗೂ ಕಡಿಮೆಯಲ್ಲ ಎನ್ನುವ ರೀತಿಯಲ್ಲಿ ತಮ್ಮ ಪ್ರಖರ ಚಿಂತನೆಗಳನ್ನು, ಅನುಭವಗಳನ್ನು ಅನುಭಾವದ ಹಿನ್ನೆಲೆಯಲ್ಲಿ ಕಟ್ಟಿಕೊಟ್ಟ ಕನಕದಾಸರ ಕುರಿತ ಮಲ್ಲಿಕಾರ್ಜುನ ಮೇಟಿ ಅವರ 'ಕನಕನ ಪರಿಭಾಷೆ: ಸಾಂಸ್ಕೃತಿಕ ರಾಜಕಾರಣವನ್ನು ನಿರಚನಗೊಳಿಸುವ ಗುರಿ ಹಾಗೂ ದಾರಿಗಳು' ಸಂಶೋಧನಾ ಪ್ರಬಂಧ ಅನಂತ ಆಲೋಚನೆಗಳಿಗೆ ತೆರೆದುಕೊಳ್ಳುವ ಮತ್ತು ತೆರೆಯಿಸುವ ರೀತಿ ಅನನ್ಯವಾದುದು.

ಇಂಥ ಓದು ಈ ಸಂದರ್ಭದ ಅವಶ್ಯವೂ ಆಗಿತ್ತು, ಅನಿವಾರ್ಯವಾಗಿತ್ತು ಎಂದು ಹೇಳದೇ ಇರಲಾಗುವುದಿಲ್ಲ.

### 4. ಚಿಕಿತ್ಸಕ ಬುದ್ಧಿಯ ಬರಹಗಾರರಿಗೆ ದಕ್ಕದ ಅನುಭಾವಿಯ ನುಡಿಗಳು

– ಬಸವರಾಜ ಸ್ವಾಮಿ ರಾಯಚೂರು

ಜ್ಞಾನದ ಬಯಕೆ ಹೊಂದಿದವರಿಗೆ ಮಾತ್ರ ದಾಸರನ್ನು ಶರಣರನ್ನು ನೋಡಲು ಬರುತ್ತದೆ. ಅವರ ಸ್ವಸ್ವರೂಪ ಜ್ಞಾನದ ಸಾಹಿತ್ಯವನ್ನು ಸವಿಯಲು ಬರುತ್ತದೆ. ಉಳಿದವರಿಗೆ ಅದು ಸಾಧ್ಯವಾಗುವುದಿಲ್ಲ.

ಡಾ.ಎಚ್.ಎಸ್.ಅನುಪಮಾ ಅವರ 'ನೋಯುವ ಹಲ್ಲಿಗೆ ಹೊರಳುವ ನಾಲಿಗೆ' ಲೇಖನದಲ್ಲಿ ಮಹಾಜ್ಞಾನಿ ಕನಕದಾಸರ ಕೆಲ ಪದ್ಯಗಳನ್ನು ಉದಾಹರಿಸಿ, 'ವೈಷ್ಣವ ಪಂಥದ ವೈದಿಕ ಸನಾತನ ಮೌಲ್ಯಗಳಿಗೆ ಕಟ್ಟುಬಿದ್ದ ಕಾರಣಕ್ಕೆ ಕನಕರು ಹೆಣ್ಣಿನ ವಿಷಯದಲ್ಲಿ ಜನಪದ ಸ್ಮೃತಿ, ವಿವೇಚನೆಗಳನ್ನು ಕಡಿಮೆ ಬಳಸಿದಂತೆನಿಸುತ್ತದೆ.

* ಶಿವ ಶರಣರ ಚಿಂತನೆಯ ಪ್ರಭಾವ ಕನಕರ ಮೇಲೆ ಆದಂತಿಲ್ಲ.

* ವೈಷ್ಣವ ಪಂಥಗಳ ತಿಕ್ಕಾಟ ಕನಕರನ್ನು ಚಿಂತನೆಗಳಿಂದ ದೂರವಿರಿಸಿತೆ?

* ಪರ ಪುರುಷನಲ್ಲಿ ಅನುರಕ್ತಳಾದ 'ಪರಸ್ತ್ರೀ' ಕುರಿತೇ ಹೇಳಲಾಗಿದೆ. ಇದು ವಚನಗಳಲ್ಲಿ, ಬುದ್ಧನ ಬೋಧನೆಗಳಲ್ಲಿ ಕಂಡುಬರುತ್ತದೆ.

* ಎಂದಿನಂತೆ ಹೆಣ್ಣಿನ ಕುರಿತು ಗಂಡಿಗಿರುವ ಕಾಮಾಸಕ್ತಿ ಭೋಗಾಸಕ್ತಿಯ ನಿಲುವೇ ಕನಕರದೂ. ಅವರು ರಸಿಕ ಮತ್ತು ಸೌಂದರ್ಯಗ್ರಾಹಿ ಕವಿ.

* ಹೆಣ್ಣಿನ ದೇಹ ಕಾಮದಾಹ ತಣಿಸುವತ್ತಲೇ ಕೇಂದ್ರಿತವಾಗಿದೆ ಎನ್ನುವುದು ಕವಿ ಕನಕರ ಕಲ್ಪನೆ.

ಕನಕರ ಹೆಣ್ಣು ಪಾತ್ರಗಳು ದಾಸಿ, ಸಖಿ, ಪತಿವ್ರತೆಯ ಚೌಕಟ್ಟಿನಾಚೆ ಬೆಳೆಯದೇ ಪಾರಂಪರಿಕ ಮೌಲ್ಯಗಳನ್ನು ಗಟ್ಟಿಗೊಳಿಸುವುದರಲ್ಲಿಯೇ ಮಗ್ನವಾಗಿಬಿಡುತ್ತವೆ. ತಳಸಮುದಾಯದ ಕವಿ ಕನಕ ತಳಸಮುದಾಯದ ಹೆಣ್ಣುಗಳನ್ನು ಗ್ರಹಿಸಬೇಕಾಗಿತ್ತು ಎಂದು ಡಾ. ಅನುಪಮಾ ಅವರು ಅಭಿಪ್ರಾಯಪಟ್ಟಿದ್ದಾರೆ.

ಡಾ.ಅನುಪಮಾ ಅವರ ಲೇಖನ ವೈಚಾರಿಕವಾಗಿ ಹೆಣೆದುಕೊಂಡು ಓದುಗರನ್ನು ಎಲ್ಲಿಯೂ ತಡೆಯದೇ ಓದಿಸಿಕೊಂಡು ಹೋಗುತ್ತದೆ. ಸಾಹಿತ್ಯ ಎನ್ನುವುದು ದೇಹಕ್ಕೆ ಸಂಬಂಧಿಸಿದ್ದು, ಆದರೆ ಪುರುಷ ಮತ್ತು ಸ್ತ್ರೀ ಎಂದು ಸೀಳಿ ನೋಡುವ ಸ್ವಭಾವ ಈಗಾಗಲೇ ಸೃಷ್ಟಿಯಾಗಿಬಿಟ್ಟಿದೆ. ಅದನ್ನು ನಿಲ್ಲಿಸಲು ಯಾರಿಂದಲೂ ಸಾಧ್ಯವಾಗುವುದಿಲ್ಲ. ಆ ವಾತಾವರಣವೂ ಇಲ್ಲ.

ಕನಕರು ಸಾಹಿತಿಗಳೂ ಅಲ್ಲ, ಕವಿಗಳೂ ಅಲ್ಲ. ಅವರು ಶ್ರೇಷ್ಠ ಜ್ಞಾನಿಗಳು; ಅನುಭಾವಿಗಳು. ಅವರು ರಚಿಸಿದ ಕೀರ್ತನೆಗಳು ಮುಂಡಿಗೆಗಳು ಓದುಗನ ಅನುಭವದ ಆಳಕ್ಕೆ ಕರೆದು ಕೊಂಡುಹೋಗುವ ಸೂತ್ರಗಳು. ಶರಣರ, ದಾಸರ, ತತ್ವಪದಕಾರರ ಭಾಷೆಯೇ ಬೇರೆ. ಅದು ಸಾಹಿತಿಗೆ, ಸಂಶೋಧಕನಿಗೆ, ಚಿಕಿತ್ಸಕ ಬುದ್ಧಿಯ ಬರಹಗಾರನಿಗೆ ಅರ್ಥವಾಗುವುದಿಲ್ಲ. ಅವರ ಸೂತ್ರಗಳನ್ನು ತನ್ನ ಮೂಗಿನ ನೇರಕ್ಕೆ ಓದಿ ವಿಮರ್ಶಿಸುವ ಸಾಹಿತಿಗೆ ಮತ್ತು ಓದಿ ಹೌದ್‌ಹೌದೆಂದು ಗೋಣು ಹಾಕುವ ಓದುಗನಿಗೆ ನಷ್ಟವೇ ಹೊರತು ಅದನ್ನು ರುಚಿಸಿದವರಿಗಲ್ಲ. ಅವುಗಳನ್ನು ಓದಿ ಆನಂದಪಡುವ ಅನುಭಾವಿಗಳಿಗೂ ಅಲ್ಲ.

ಶರಣರು, ದಾಸರು, ತತ್ವಪದಕಾರರು ಅಥವಾ ಈ ದೇಶದ ಅನುಭಾವಿಗಳು ದೇಹವನ್ನು ಮೂರು ಕೋನಗಳಿಂದ ನೋಡಿದ್ದಾರೆ. ಸ್ಥೂಲ, ಸೂಕ್ಷ್ಮ, ಕಾರಣ ಶರೀರವೆಂದು ದೇಹಕ್ಕೆ ಹೆಸರಿಟ್ಟು ಕರೆದಿದ್ದಾರೆ. ಸ್ಥೂಲ ಶರೀರ ಕಾಣುತ್ತದೆ. ಸೂಕ್ಷ್ಮ ಮತ್ತು ಕಾರಣ ಶರೀರಗಳು ಕಾಣುವುದಿಲ್ಲ. ಸ್ಥೂಲ ಶರೀರವೆಂದರೆ ಕಂಡು ಬರುವ ದೇಹ. ಸೂಕ್ಷ್ಮ ಶರೀರವೆಂದರೆ ಮನಸ್ಸು. ಕಾರಣ ಶರೀರವೆಂದರೆ ಸ್ಥೂಲ ಮತ್ತು ಸೂಕ್ಷ್ಮ ಶರೀರಗಳಿಗೆ ಜನ್ಮ ನೀಡಿದ ಅರಿವು. ಈ ಅರಿವಿಗೆ ಕನಕರು 'ಆದಿಕೇಶವ' ಎಂದು ಹೆಸರಿಟ್ಟು ಕರೆದರು. ಹರಿದಾಡುವ ಮನವನ್ನು ಆದಿಕೇಶವನ ಸತಿಯಾಗಿಸಿ ದೇಹದಲ್ಲಿಯೇ ಸಂಸಾರ ಹೂಡಿದರು. ಅರಿವೆಂಬ ಆದಿಕೇಶವ ಗಂಡನಾದರೆ ಮನ ಹೆಂಡತಿಯಾಯಿತು. ಆದಿಕೇಶವ ಅರಸನಾದರೆ ಮನ ದಾಸಿಯಾಯಿತು. ಅರಿವು ಸಖನಾದರೆ ಮನ ಸಖಿಯಾಯಿತು. ಸೋತು ಹೆಣ್ಣಿಗೆ ಹೆದರಿ ನಾಚುವ ಪುರಷನ್ಯಾತಕೆ, ಸನ್ನೆಯನರಿತು ನಡೆಯದಿರುವ ಸತಿಯು ಯಾತಕೆ?

ಇವೆರಡೂ ಸಾಲುಗಳು ಗಂಡು ಮತ್ತು ಹೆಣ್ಣಿಗೆ ಸಂಬಂಧಿಸಿದ್ದಲ್ಲ, ದೇಹದಲ್ಲಿ ಅರಿವಿದೆ. ಅದನ್ನು ತಿಳಿದು ನಡೆಯುವ ಮನವೂ ಇದೆ. ಹೀಗಿದ್ದೂ ದೇಹಕ್ಕೆ ಆಪತ್ಕಾಲ ಬಂದೆರಗುತ್ತದೆ. ಉದಾಃ ಕಣ್ಣು ಒಂದು ದೇಹವನ್ನು ಹೆಣ್ಣೆಂದು ಭಾವಿಸಿ ತನ್ನನ್ನು ಗಂಡೆಂದು ಭಾವಿಸಿಕೊಂಡು ದೇಹದಲ್ಲಿ ಭೋಗದ ರಸಾಯನಿಕ

ಕ್ರಿಯೆ ಸೃಷ್ಟಿಸಿಕೊಳ್ಳುತ್ತದೆ. ಭೋಗಿಸಲು ಅಣಿಯಾದರೆ ದೇಹಕ್ಕೆ ಆಪತ್ಕಾಲ. ಅಣಿಯಾಗದಿದ್ದರೆ ದೇಹದಲ್ಲಿ ಹಾದರ! ಅರಿವಿನಿಂದ ನೋಡಿದರೆ ಚರ್ಮ ಹೆಣ್ಣಲ್ಲ ಗಂಡೂ ಅಲ್ಲ. ನೋಡಿದ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ ಕೂಡಾ ಹೆಣ್ಣಲ್ಲ ಗಂಡಲ್ಲ. ತನುವನ್ನು ತಾಗುವ ಮುನ್ನ ತನುವಿನಲ್ಲಿರುವ ಸುಖದ ದ್ರವ್ಯ ಹೊರಬಂದ ಮೇಲೆ ತನುವಿಗೆ ಮತ್ತೆ ಭೋಗಿಸುವ ಆಸೆಯಿಲ್ಲ. ಸುಖ ತನ್ನ ತನುವಿನಲ್ಲಿತ್ತೋ ಅನ್ಯ ತನುವಿನಲ್ಲಿತ್ತೋ ಎನ್ನುವ ಅರಿವು ಕೂಡಾ ತನುವಿನಲ್ಲಿ ಸುಳಿಯುವುದೇ ಇಲ್ಲ. ಜೀವನ ಪರ್ಯಂತ ತನು ಹೀಗೆ ಅಜ್ಞಾನದಲ್ಲಿಯೇ ಕಾಲ ಕಳೆಯುತ್ತದೆ.

ಒಪ್ಪಂದ ಮಾಡಿಕೊಂಡ ತನುಗಳ ಭೋಗಕ್ಕೆ ಸಾಮಾಜಿಕ ಮನ್ನಣೆಯಿದೆ. ಆದರೆ ಅರಿವಿನಿಂದ ಯೋಚಿಸಿ ನೋಡಿದರೆ, ಮಗು ಬೇಕೆಂದು ನಿರ್ಧರಿಸಿ ಎರಡು ತನುಗಳು ಕೂಡುವ ಕೂಟಕ್ಕೆ ಮಾತ್ರ ಅರ್ಥವಿದೆ. ಭೋಗದ ಸುಖವನ್ನು ಬಯಸಿ ಮತ್ತೆ ಮತ್ತೆ ಭೋಗಿಸುವ ಹಾದರಕ್ಕೆಳೆಸುವ ಮನಕ್ಕೆ ಯಾವ ಅರ್ಥವಿದೆ. ಅರಿವಿನ ಸನ್ನೆಯನರಿತು ನಡೆಯದಿರುವ ಮನವೆಂಬ ಸತಿ ಯಾತಕೆ? ಅರಿವಿದ್ದೂ ಅರಿತು ಮನವೆಂಬ ಹೆಣ್ಣಿಗೆ ಹೆದರಿ ನಾಚುವ ಪರಮ ಪುರುಷನ್ಯಾತಕೆ? ಹೀಗೆ ಯೋಚಿಸಿ ಅರಿವಿನಿಂದ, ಸ್ವಾನುಭವದಿಂದ ನಡೆಯುವ ಪಾತಿವ್ರತೆಯರೆಂಬುದು ಶತ ಸಹಸ್ರಕ್ಕೊಬ್ಬರು ಸಿಕ್ಕುತ್ತಾರೆ. ಮಿತಿ ಮೀರಿ ಇಹರಯ್ಯಾ ಇತರ ಜನರು. ಮತಿಗೆಟ್ಟು ಮನ ಸೋತು ಅನ್ಯ ಪುರುಷರ ಕೂಡಿ ಗತಿಗೆಟ್ಟು ಹೋಗುವರು ಮೂರು ತೊರೆದು.

ಕಣ್ಣಿನಲ್ಲಿ ಮನ ಆವರಿಸಿದೆ, ಅರಿವು ತನ್ಮಯವಾಗಿದೆ. ಮನದಿಂದ ನೋಡಿದರೆ ತನು ತನ್ನಂತೆಯೇ ಇರುವ ತನುವಾಗಿ ಕಾಣುತ್ತದೆ. "ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಸರ್ವಜ್ಞ" ಈ ಸಾಲು ಚಿಕ್ಕದಾದರೂ ಇದರ ಆಶಯ ದೊಡ್ಡದು. ತನು ಅರಿವಿನ ಸುಖ ಉಣ್ಣಬೇಕಾದರೆ ಅರಿವಿನ ಕೆಲಸ ಮಾಡಲೇಬೇಕು. ಗಂಡು ಗಂಡೂ ಅಲ್ಲ; ಹೆಣ್ಣು ಹೆಣ್ಣೂ ಅಲ್ಲ ಅದು ಕೇವಲ ತನು ಮಾತ್ರ. ತನುವನ್ನು ಆವರಿಸಿದ ಮನವೇ ಹೆಣ್ಣು; ತನುವಿನಲ್ಲಿ ತನ್ಮಯವಾದ ಅರಿವೇ ಗಂಡು. ಮನವೆಂಬ ಹೆಣ್ಣು ಹಾದರೆ ಮಾಡದೆ ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ನಲ್ಲನೊಂದಿಗೆ ವಿರಮಿಸಿದ ಕಾಯವೇ ಕೈಲಾಸ.

"ಎಮ್ಮ ಗಂಡನು ಏಕಾಂತಂಬೊಕ್ಕನು, ಬೇಗ ಬೇಗ ಹೊರನಡಿಯಿರಣ್ಣಗಳಿರಾ, ಒಬ್ಬನಿದ್ದರೂ ಸೈರಿಸನು ಕಪಿಲಸಿದ್ಧ ಮಲ್ಲಿಕಾರ್ಜುನ" ಎಂದು ಸಿದ್ಧರಾಮ ಶಿವಯೋಗಿ ಹಾಡಿದ್ದಾರೆ.

ಕನಕರ ನಿಗೂಢ ಮುಂಡಿಗೆಗಳಲ್ಲಿ "ನಾಮ ಮುಂದೊ ಸ್ವಾಮಿ ವಿಭೂತಿ ಮುಂದೊ ಎಂದು ಪಲ್ಲವಿಯೊಂದಿಗೆ ಪ್ರಾರಂಭಿಸಿ ಭೂಮಿ ಆಕಾಶ ಪೊತ್ತೋ ಆಕಾಶ ಭೂಮಿಯ ಪೊತ್ತೋ, ಭೂಮಿ ಮುಂದೊ ಆಕಾಶ ಮುಂದೊ ಸ್ವಾಮಿ||...

ಗಂಡ ಹೆಂಡಿರ ಪೊತ್ತೊ ಹೆಂಡಿರು ಗಂಡನ ಪೊತ್ತೊ। ಗಂಡನು ಮುಂದೊ ಹೆಂಡಿರು ಮುಂದೊ ಸ್ವಾಮಿ। ಕನಕನು ಹೇಳಿದ ಬೆಡಗಿದು ಕಂಡವರೆಲ್ಲರು ಮನದಲಿ ಚಿಂತಿಸಿ ಮಥಿಸಿ ನವನೀತ ಕಾಣಿರಿ॥ ಎಂದು ಹಾಡುತ್ತಾರೆ.

ನಾಮ ಮುಂದೋ ಸ್ವಾಮಿ ವಿಭೂತಿ ಮುಂದೋ ಎನ್ನುವ ಬೆಡಗಿನ ಸಾಲಿನ ಸೂತ್ರವನ್ನು ಅನುಭಾವಿ ಮಾತ್ರ ಆನಂದದಿಂದ ಅನುಭವಿಸಬಲ್ಲ. ಉಳಿದವರು ನಾಮದ ವೈಷ್ಣವರು ಶ್ರೇಷ್ಠವೋ ವಿಭೂತಿಯ ಶಿವರಾಧಕರು ಶ್ರೇಷ್ಠವೊ ಎನ್ನುವ ಕಲಹದಲ್ಲಿ ನಿರತರಾಗಿ ಪ್ರಾಣ ಕಳೆದುಕೊಳ್ಳುತ್ತಾರೆ.

ವಿಭೂತಿ ಶ್ರೇಷ್ಠ! ಆದರೆ ಅದರ ಹಿಂದಿನ ನಾಮ ಸೆಗಣಿಯಿತ್ತು ಒಣಗಿ ಕುರುಳಾಗಿ, ಅಗ್ನಿ ತಾಗಿ ಬೂದಿಯಾದಾಗ ವಿಭೂತಿಯಾಯಿತು.

"ನೋಡೂದ ನೋಡಲರಿಯದೆ ಕೆಟ್ಟಿತ್ತೀ ಜಗವೆಲ್ಲ. ನೋಡೂದ ನೋಡುವಡೆ ಕೂಡಲಿಲ್ಲ ಅಗಲಲಿಲ್ಲ. ಕೂಡದ ಅಗಲದ ಕೂಟದ ಸುಖವನು ಗುಹೇಶ್ವರ ನಿಮ್ಮ ಶರಣ ಮಾತ್ರ ಬಲ್ಲ" ಎಂದು ಪ್ರಭುಗಳು ಹೇಳಿದಂತೆ ವಸ್ತುವಿನ ಸತ್ಯ ನೋಡುವ ಕಣ್ಣು, ಕಣ್ಣಿನಲ್ಲಿಯೇ ಇದೆ.

ವಸ್ತುವನ್ನೇ ಸತ್ಯವೆಂದು ತಿಳಿದು ಆಲಂಗಿಸುವ ಅಜ್ಞಾನವೂ ಕಣ್ಣಿನಲ್ಲಿಯೇ ಇದೆ. ಆದಯ್ಯ ಶರಣರ ಸೂತ್ರವೊಂದು ಹೀಗಿದೆ. "ತನ್ನ ತಾನರಿಯದ ಮುನ್ನ ತನ್ಮಯವಾದ ಅರಿವು. ತನ್ನ ತಾನರಿಯದ ಬಳಿಕ ಅರಿವು ತನ್ಮಯವೆಂದು ಅರಿತ ಅರಿವು ತನ್ನಲ್ಲಿರುವ ಆ ಅರಿವೆ ಕರಿಗೊಂಡ ಬಳಿಕ ತಾನೇ ಸೌರಾಷ್ಟ್ರ ಸೋಮೇಶ್ವರಾ" ತನುವಿನಲ್ಲಿಯೇ ತನ್ಮಯವಾದ ಅರಿವನ್ನು ತನುವನ್ನು ಆವರಿಸಿದ ಮನದ ಸಹಾಯದಿಂದ ಹೇಗೆ ಪಡೆಯಬೇಕೆಂಬ ಸೂತ್ರಗಳನ್ನು ಬುದ್ಧ, ಮಹಾವೀರ, ಕೃಷ್ಣ, ಪೈಗಂಬರರು, ಬಸವಾದಿ ಶರಣರು, ದಾಸರು, ತತ್ವಪದಕಾರರು ಹೇಳಿ ಬರೆದಿಟ್ಟು ಹೋಗಿದ್ದಾರೆ. ಅವರಿಗೆ ಫ್ಯಾನ್ ಆಗುತ್ತಾರೆಯೇ ವಿನಹ ಅವರ ಸೂತ್ರಗಳನ್ನು ಬಳಸಿಕೊಂಡು ಜ್ಞಾನಿಗಳಾಗುವ ಬಯಕೆ ವ್ಯಕ್ತಪಡಿಸುತ್ತಿಲ್ಲ. ಶಿಕ್ಷಣ ಸಂಸ್ಥೆಗಳು, ಸರಕಾರ, ಅಧ್ಯಾಪಕ ವರ್ಗ ಈ ಬಗ್ಗೆ ಸ್ಪಂದಿಸುತ್ತಿಲ್ಲ.

ತನುವಿನಲ್ಲಿ ತನ್ಮಯವಾದ ಜ್ಞಾನವನ್ನು ತನುವೇ ಹೇಗೆ ಪಡೆದುಕೊಳ್ಳಬಹುದು ಎನ್ನುವ ಶಿಕ್ಷಣ ಭಾರತಲ್ಲಿ ಮಾತ್ರ ಇದೆ. ಇದು ಸಂಪೂರ್ಣ ಬೆಡಗಿನ ಭಾಷೆಯಲ್ಲಿರುವುದರಿಂದ ಈ ಜ್ಞಾನ ಬಯಕೆಯಾದ ಕೆಲವರಿಗೆ ಮಾತ್ರ ಎಟಕುವುದರಿಂದ ಸಕಲರಿಗೂ ಸಾಧ್ಯವಾಗುತ್ತಿಲ್ಲ. ಬಯಸಿದರೆ ಸಕಲರಿಗೂ ಸಾಧ್ಯವಾಗುತ್ತದೆ. ಇದನ್ನು ಬ್ರಹ್ಮಜ್ಞಾನ, ಸ್ವರೂಪಜ್ಞಾನ, ಸ್ವಾನುಭವ ಜ್ಞಾನ, ಎನ್‌ಲೈಟೆನ್‌ಮೆಂಟ್ ಎಂದು ಕರೆಯುತ್ತಾರೆ.

ಡಾ.ಎಚ್.ಎಸ್.ಅನುಪಮಾ ಅವರ ಲೇಖನಕ್ಕೆ ಈ ಬರಹ ಉತ್ತರವಲ್ಲ. ದಾಸರು, ಶರಣರು ಬಳಸಿದುದು ಕನ್ನಡವಾದರೂ ಆ ಭಾಷೆಯೇ ಬೇರೆ. ಸಾಹಿತಿಗಳು,

ಲೇಖಕರು ಅದನ್ನು ತಮ್ಮ ಮೂಗಿನ ನೇರಕ್ಕೆ ಕನ್ನಡೀಕರಿಸುವಂತಿಲ್ಲ. ಇವರೇನಿದ್ದರೂ ಇಪ್ಪತ್ತೈದು ವರ್ಷಗಳ ಪರ್ಯಂತರ ಶಾಲಾ ಕಾಲೇಜು ವಿ.ವಿ.ಗಳಲ್ಲಿ ಅಕ್ಷರಗಳೊಂದಿಗೆ ಸೆಣಸಾಡಿ ಸಾಹಿತ್ಯ ರಚಿಸಿದವರು. ಶರಣರು, ದಾಸರು, ತತ್ವಪದಕಾರರು ಹಾಗಲ್ಲ. ಅವರು ತನುವಿನಲ್ಲಿಯೇ ತನ್ಮಯವಾದ ಅಕ್ಷರೋತ್ತಮನೊಂದಿಗೆ ಸೆಣಸಾಡಿದವರು.

ಉದಾಃ ಒಬ್ಬ ತತ್ವಪದಕಾರ ಹೀಗೆ ಹೇಳುತ್ತಾನೆ: ಗಂಡಗಂಜಿ ಬದುಕು ಮಾಡು। ಕಂಡ ಪುರುಷರ ಸಂಗ ಬಿಡು.... ಎನ್ನುವ ಸಾಲುಗಳನ್ನು ಪುರುಷ ಸ್ತ್ರೀಗೆ ಮಾಡುವ ಉಪದೇಶ ಎಂದು ತಿಳಿದರೆ ತಪ್ಪಾಗುತ್ತದೆ. ಇಲ್ಲಿ ಗುರುದೇವ ತನ್ನ ಶಿಷ್ಯನನ್ನು ಹತ್ತಿರ ಕೂಡಿಸಿಕೊಂಡು: ನಿನ್ನ ದೇಹವೇ ಒಂದು ಮನೆ. ಈ ಮನೆಯಲ್ಲಿ ಅರಿವೆಂಬ ಪರಮ ಪುರುಷನಿದ್ದಾನೆ; ಮನವೆಂಬ ಮಹಾ ಸತಿಯಿದ್ದಾಳೆ. ಈ ಸತಿ ಅರಿವೆಂಬ ಪರಮ ಪುರುಷರನ್ನು ಕೂಡಿಸಿಕೊಂಡರೆ ಸಾಧ್ವಿಯಾಗುತ್ತಾಳೆ; ಮಹಾ ಪತಿವ್ರತೆಯಾಗುತ್ತಾಳೆ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ಕಂಡ ಪುರುಷನನ್ನು ಕೂಡಿಸಿಕೊಂಡರೆ ಹಾದರಗಿತ್ತಿಯಾಗುತ್ತಾಳೆ.

ದೇಹ ಹಾದರದ ಮನೆಯಾಗುತ್ತದೆ. ಈ ದೇಹವನ್ನು ಸಂತನ ಮನೆಯೆಂದು ಗೌರವಿಸಬೇಕೋ ಹಾದರದ ಮನೆಯೆಂದು ದ್ವೇಷಿಸಬೇಕೋ ಇದನ್ನು ನೀನೇ ತಿಳಿ ಎಂದು ಗುರುದೇವ ತನು ಮುಟ್ಟಿ ಉಪದೇಶಿಸುತ್ತಾನೆ; ಆದೇಶಿಸುವುದಿಲ್ಲ. ಇದು ದಾಸರ ಭಾಷೆ!

# ಬಯಲು ಆಲಯದೊಳಗೊ....

## ಎರಡು ದಿನಗಳ ಸಂವಾದ–ಸಂಕಿರಣ, ವಿವರ (13–14 ಆಗಸ್ಟ್ 2015)

## ಮೊದಲ ದಿನದ ಗೋಷ್ಠಿ – 13.08.2015

### I. ಕನಕನ ನಿರೂಪಣೆಗಳಲ್ಲಿ ಜನಪದ ಲೋಕದೃಷ್ಟಿ

ಪ್ರ:– ಕುರುಬ ಸಮುದಾಯದಿಂದ ಬಂದ 'ಕನಕ' ವೈದಿಕ ಹಾದಿಯನ್ನು ತುಳಿದಿದ್ದೇಕೆ?

ಉ:– ಇದೇ ಪ್ರಶ್ನೆಯನ್ನು ಕುವೆಂಪು ಅವರಿಗೂ ಆರೋಪಿಸಲಾಗಿದೆ. ಅವನ ಕಾಲಮಾನದ ಹಿನ್ನಲೆಯಲ್ಲಿ ನೋಡುವುದಾದರೆ ಆಗ ರಾಜಪ್ರಭುತ್ವಗಳು ಶೈವಪಂಥದಿಂದ ದೂರವಾಗಿ ವೈದಿಕ ಪಂಥದ ಪುನರುತ್ಥಾನದಲ್ಲಿ ತೊಡಗಿಕೊಂಡಿದ್ದವು. ವೈದಿಕ ಪಂಥದ ಸ್ವತಂತ್ರ ಮನೋಭಾವಕ್ಕೆ ಆಕರ್ಷಿತನಾದ ಕನಕ ಆ ಪಂಥದ ಮೂಲಕ ಸಮಾಜ ಶೋಷಣೆಯ ನಿರ್ಮೂಲನೆಯ ದಾರಿಯನ್ನು ಕಂಡುಕೊಂಡ.

ಪ್ರ:– ಈ ಬದಲಾವಣೆಯ ಅಪೇಕ್ಷೆಯೇ ಅವನನ್ನು ಹೊಂದಾಣಿಕೆಗೆ (ಧಾರ್ಮಿಕ) ಎಡೆಮಾಡಿಕೊಟ್ಟಿತೇ?

ಉ:– ಶೈವ ಮತ್ತು ವೈದಿಕ ಪಂಥಗಳ ಐಕ್ಯತೆ ಕನಕನ ಸಾಹಿತ್ಯದಲ್ಲಿದೆ. ಅವನ ದ್ವಂದ್ವವೇ ಅವನನ್ನು ಸಮಾವಿಷ್ಟಗೊಳಿಸಿದೆ. ತನ್ಮೂಲಕ ಸಮಾಜವನ್ನು ಇಡಿಯಾಗಿ ಕನಕ ಪ್ರತಿನಿಧಿಸಿದ್ದಾನೆ. ವೈಯಕ್ತಿಕ ಹುಡುಕಾಟದ ಅವನ ದಾರಿ ಕಾಲಾನಂತರ ಸಾಮೂಹಿಕ ಹೆದ್ದಾರಿಯಾಗಿದೆ.

ಪ್ರ:– ಮಧ್ಯಕಾಲೀನ ಕರ್ನಾಟಕದ ತಳಸಮುದಾಯವನ್ನು ಭಕ್ತಿಯ ಮೂಲಕ ಒಗ್ಗೂಡಿಸುವ ಪ್ರಯತ್ನ ಮಾಡಿದ್ದೇಕೆ?

ಉ:– ಓದಿಕೊಂಡ ತಿಳುವಳಿಕೆ ಮತ್ತು ಓದಬೇಕಾದ ತಿಳುವಳಿಕೆಯ ನಡುವಿನ ಕಂದರವನ್ನು ಜೋಡಿಸುವಲ್ಲಿ 'ಕನಕ ಸಾಹಿತ್ಯ'ದ ಪಾತ್ರ ಅಪಾರ. ಜಾತಿ–ಕುಲ–ಗೋತ್ರಗಳ ಮೂಲಕ ಸಮಾಜ ಒಡೆಯಲ್ಪಟ್ಟಿದ್ದು ಧಾರ್ಮಿಕ ಹಿನ್ನೆಲೆಯಲ್ಲಿಯೇ. ಮತ್ತೆ ಅದರ ಮರು ಜೋಡಣೆಗೆ 'ಭಕ್ತಿ'ಯ ದಾರಿಯನ್ನು ಕನಕ ಆಯ್ದುಕೊಂಡ ಮತ್ತು ಆ ಭಕ್ತಿಯ ಭಾವವನ್ನು ತನ್ನ ರಚನೆಗಳ ಮೂಲಕ ಪ್ರಚುರ ಪಡಿಸಿದ.

II. ಕೇಶವಾಂಕಿತ ರಚನೆಗಳು –ತತ್ವ ರಾಜಕಾರಣ [ತಳ ಸಮುದಾಯದ ಅನನ್ಯತೆಯ ಪ್ರತಿಪಾದನೆ]

ಪ್ರ:– 'ಕೇಶವ' ನಾಮಾಂಕಿತದ ಮೂಲಕ 500–600 ವರ್ಷಗಳ ವ್ಯಾಪ್ತಿಯಲ್ಲಿ ಬೇರೆ–ಬೇರೆ ಅನಾಮಿಕರು ಬರೆದಿದ್ದನ್ನು 'ಕನಕ ಸಾಹಿತ್ಯ' ಎಂದೇ ಪರಿಗಣಿಸಲಾಗಿದೆಯೆ?

ಉ:– ಈ ಸಾಧ್ಯತೆಗಳಿವೆ. ಇದೊಂದು 'ತಿರು ನಾಮ ಪ್ರಕ್ರಿಯೆ' ಸರ್ವಜ್ಞನ 'ತ್ರಿಪದಿ'ಗಳ ವಿಷಯದಲ್ಲಿಯೂ ಹೀಗೆಯೇ ಆಗಿದೆ. ಬೇರೆ–ಬೇರೆ ಕಾಲಘಟ್ಟದಲ್ಲಿ ರಚಿತವಾದ ತ್ರಿಪದಿಗಳ ಕೊನೆಯಲ್ಲಿ ಸರ್ವಜ್ಞನಾಮವನ್ನು ಸೇರಿಸಲಾಗಿದೆ. ಹೀಗಾಗಿ ಯಾವುದು ಅಧಿಕೃತ ಮತ್ತು ಯಾವುದು ಅನಧಿಕೃತ ಎನ್ನುವ ದ್ವಂದ್ವ ಇದ್ದೇ ಇದೆ. ಕನಕರ ವಿಷಯದಲ್ಲಿ ಸಂಪೂರ್ಣವಾಗಿ ಒಪ್ಪಿಕೊಳ್ಳಲಾಗದೇ ಹೋದರೂ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

ಪ್ರ:– ದಾಸರಿಗೂ ಮತ್ತು ಸಮನ್ವಯ ಸಾಹಿತ್ಯಕ್ಕೂ ಇರುವ ಸಂಬಂಧವೇನು?

ಉ:– ಶೈವ–ವೈಷ್ಣವ ಕಾಳಗದ ಪರಂಪರೆಗೆ 1000 ವರ್ಷಗಳ ಇತಿಹಾಸವಿದೆ. ಈ ಕಾಳಗವನ್ನು ಕೊನೆಗಾಣಿಸುವ ಇಚ್ಛೆ ಸಂತರಿಗೆ, ದಾಸರಿಗೆ ಇದ್ದುದರಿಂದಲೇ ಸಮನ್ವಯ ಸಾಹಿತ್ಯ ರಚನೆಯಾಗಿದೆ.

ಪ್ರ:– ಬಸವಣ್ಣನ ಸಾಹಿತ್ಯ ಸೃಷ್ಟಿ ಮತ್ತು ಕನಕನ ಸಾಹಿತ್ಯ ಸೃಷ್ಟಿಯ ಮಧ್ಯದ ವ್ಯತ್ಯಾಸವೇನು?

ಉ:– ಮೇಲ್ವರ್ಗದ ದೌರ್ಜನ್ಯಗಳಿಂದ ಸಿಡಿದ ಬಸವಣ್ಣನಿಗೆ ತನ್ನ ವೈಚಾರಿಕತೆಯನ್ನು ಬೆಂಬಲಿಸುವ ತಳಸಮುದಾಯದ ದೊಡ್ಡ ಪಡೆ ನಿರ್ಮಾಣವಾಯಿತು. ಅವನಿಗೆ ಸಾಹಿತ್ಯ ಸೃಷ್ಟಿಯೂ ಸಮಾಜದ ಬದಲಾವಣೆಯ ಒಂದು ಮಾರ್ಗವಾಗಿತ್ತು. ಆದರೆ ತಳಸಮುದಾಯದಿಂದ ಬಂದ ಕನಕ ದಾಸಕೂಟ, ವ್ಯಾಸಕೂಟದ ಪ್ರಭಾವಕ್ಕೊಳಗಾದ. ಅವನಿಗೆ ಸಾಹಿತ್ಯ ಆತ್ಮಶೋಧನೆಯ ದಾರಿಯಾಗಿತ್ತೇ ವಿನಃ ಮೂಲಭೂತ ಸಮಾಜದ ಸುಧಾರಣೆ ಅವನ ಪ್ರಾಥಮಿಕ ಉದ್ದೇಶವಾಗಿರಲಿಲ್ಲ.

ಪ್ರ:– ತಳ ಸಮುದಾಯದ ಅನನ್ಯತೆ ಕನಕನ ರಚನೆಯಲ್ಲಿ ಹೇಗೆ ವ್ಯಕ್ತವಾಗಿದೆ?

ಉ:– 'ಮೋಹನ ತರಂಗಿಣಿ'ಯಲ್ಲಿನ ಕೆಲ ಸಂದರ್ಭಗಳನ್ನು ನೋಡುವುದಾದರೆ ಅಲ್ಲಿ ಕನಕ ಬಳಸುವ ಉದಾಹರಣೆ, ಹೋಲಿಕೆ ಮತ್ತು ಆಚಾರ–ವಿಚಾರಗಳು ತಳ ಸಮುದಾಯದ ಜೀವನ ಶೈಲಿಯ ಚಿತ್ರಣವಾಗಿವೆ. ರುಕ್ಮಿಣಿಯ ಗರ್ಭಾವಸ್ಥೆಯ ಬಯಕೆಯ ರೀತಿ ಇರಬಹುದು, ರೈತ ಬಳಸುವ ಎರೆ ಎಣ್ಣೆ ಸೂರ್ಯನ ರಥದ ಕೀಲೆಣ್ಣೆಯಾಗುವ ರೀತಿ ಇರಬಹುದು. ಹೀಗೆ ಅರಮನೆಯನ್ನು ಗುಡಿಸಲಿನ ಜನ–ಜೀವನಕ್ಕೆ ತಂದ ಹಿರಿಮೆ ಕನಕನದು.

# ಬಯಲು ಆಲಯದೊಳಗೊ....

## (ಎರಡು ದಿನಗಳ ಸಂವಾದ-ಸಂಕಿರಣ, ವಿವರ) 13 ಮತ್ತು 14 ಆಗಸ್ಟ್ 2015

### ಪ್ರಶ್ನೋತ್ತರ -ಚರ್ಚೆಗಳು

ಬಾಗಿಲನು ತೆರೆದು
ಸೇವೆಯನು ಕೊಡು ಹರಿಯೇ
ಕೂಗಿದರೂ ದನಿ ಕೇಳಲಿಲ್ಲವೇ
ನರಹರಿಯೇ....

'ಪ್ರಾರ್ಥನೆ'ಯ ಮೂಲಕ ಸಂವಾದ ಸಂಕಿರಣ ಪ್ರಾರಂಭವಾಯಿತು. ಪ್ರಾರ್ಥನೆಗೆ ದನಿಯಾದವರು ಶುಭಾ ಮರವಂತೆ; ನಂತರ ಮಲ್ಲಿಕಾರ್ಜುನ ಮೇಟಿಯವರಿಂದ 'ಸ್ವಾಗತ ಭಾಷಣ',. 'ಪ್ರಾಸ್ತಾವಿಕ'ದಲ್ಲಿ ಮಾತನಾಡಿದ ಕಾ.ತ.ಚಿಕ್ಕಣ್ಣ (ಅಧ್ಯಕ್ಷರು, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ) ಸಂತ ಕನಕದಾಸರ ಅಧ್ಯಯನ ಕೇಂದ್ರದ ಕುರಿತು ಕಿರು ಮಾಹಿತಿ ನೀಡಿದರು -

- "ಅಧ್ಯಯನ ಕೇಂದ್ರ ಸ್ಥಾಪಿತವಾಗಿ ಮೂರು ವರ್ಷವಾಗಿದ್ದು, 134 ಕಾಲೇಜುಗಳಲ್ಲಿ ಕನಕದಾಸರ ಕುರಿತ ಕಾರ್ಯಕ್ರಮಗಳಾಗಿವೆ."
- 'ಮುತ್ತು ಬಂದಿದೆ ಕೇರಿಗೆ' – ಒಂದು ದಿನದ ಕನಕ ಸಂಸ್ಕೃತಿ ಕಮ್ಮಟ ನಡೆದಿದೆ.
- ಇಡೀ ಕನಕ ಸಾಹಿತ್ಯವನ್ನು 15 ಭಾಷೆಗಳಲ್ಲಿ ಭಾಷಾಂತರಿಸುವ ಪ್ರಕ್ರಿಯೆಗೆ ಚಾಲನೆ ದೊರೆತಿದ್ದು ಶೇಕಡಾ 60ರಷ್ಟು ಕೆಲಸ ಪೂರ್ಣವಾಗಿದೆ.
- ತತ್ವಪದಕಾರರ ಸಮಗ್ರ ಸಾಹಿತ್ಯ ಸಂಪುಟಗಳನ್ನು ತರುವ ಗುರಿ ಇದೆ. ಈಗಾಗಲೇ 25 ಸಂಪುಟಗಳು ಹೊರಬಂದಿದೆ. 120 ಸಂಪುಟಗಳ ಯೋಜನೆ ಇದೆ.
- ಸಮೂಹ ಆಧಾರಿತ 'ವಿಚಾರ ಸಂಕಿರಣ'ಗಳ ಪ್ರಸ್ತಾಪವಿದೆ

ಪ್ರಸ್ತುತ ಕಾರ್ಯಕ್ರಮದ ಕುರಿತು ಮಾತನಾಡಿದ ಅವರು ಭಾರತೀಯ ಸಂತ ಪರಂಪರೆಯ ಸಮಷ್ಟಿಯ ಧ್ಯೇಯವನ್ನು ಹೇಳುತ್ತಾ 'ರಾಗಂ'ರ 'ಗಾಂಧಿ: ಮುಗಿಯದ ಅಧ್ಯಾಯ'ದ – "ಜಗತ್ತಿನಲ್ಲಿ ಯಾವ ಬದಲಾವಣೆಯನ್ನು ನಾವು ನೋಡಬಯಸುತ್ತೇವೆಯೋ, ಅದು ನಾವೇ ಆಗಿ ಬಿಡಬೇಕು ಎಂದುಕೊಂಡು

ವಯಸ್ಸಿನ 35ಕ್ಕೆ ಸತ್ಯಶೋಧಕನಾಗಿ, 53ಕ್ಕೆ ಅರೆಬೆತ್ತಲೆ ಫಕೀರನಾಗಿ ಹೊರಟ ಗಾಂಧಿಯ ಜಾತ್ಯಾತೀತ, ಸೀಮಾತೀತ, ಧರ್ಮಾತೀತ ರಾಷ್ಟ್ರದ ಕಲ್ಪನೆಯನ್ನು ನೀವು ಖಂಡಿಸುವುದಾದರೆ ಮೊದಲು ಕಬೀರನನ್ನು ಧಿಕ್ಕರಿಸಬೇಕು, ಟ್ಯಾಗೋರರ ಕವಿತೆಗಳನ್ನು ಮರೆಯಬೇಕು. ಈ ದೇಶದ ಮಹಾನ್ ಸಾಧು-ಸಂತರ ಪರಂಪರೆ ಹೇಳಿದನ್ನೇ ಗಾಂಧಿ ಪುನರುಚ್ಚರಿಸಿದ್ದಾರೆ" ಎನ್ನುವ ಸಾಲುಗಳನ್ನು ಉದ್ಧರಿಸಿದರು.

'ಬಯಲು ಆಲಯದೊಳಗೊ' ಎನ್ನುವ ಈ ಸಂವಾದ ಸಂಕಿರಣ ಕವಿಯೊಬ್ಬನ ಕಾವ್ಯ ಕಾಣ್ಕೆಯ ಪರಿಗಣನೆ ಮತ್ತು ಆತನನ್ನು ಪ್ರಭಾವಿಸಿದ ಕ್ಷೇತ್ರಗಳು ಹಾಗೂ ಆತ ಪ್ರಭಾವಿಸಿದ ಕ್ಷೇತ್ರಗಳ ಕುರಿತ ಚರ್ಚೆಯಾಗಬೇಕು ಎನ್ನುವುದು ಸಂಕಿರಣದ ಮೂಲ ಆಶಯ ಎಂದರು.

ಭಕ್ತಿ ಸಾಂಗತ್ಯದ ಮೂಲಕ ಬಯಲು ಜಂಗಮನಾಗುವ ಬಗೆ, ಸೌಂದರ್ಯ ಮೀಮಾಂಸೆ-ಸಾಹಿತ್ಯ ಮೀಮಾಂಸೆಗಳಂತೆ 'ಜೀವನ ಮೀಮಾಂಸೆ' ಅಧ್ಯಯನದ ವಿಷಯವಸ್ತು ಆಗಬೇಕು ಮತ್ತು ಕನಕನ ಕೃತಿಗಳಲ್ಲಿ ಈ ಜೀವನ ಮೀಮಾಂಸೆಯನ್ನು ಹುಡುಕುವುದು ಈ ಕಾರ್ಯಕ್ರಮದ ಉದ್ದೇಶ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮಲ್ಲಿಕಾ ಘಂಟಿ (ಕುಲಸಚಿವರು, ಕುವೆಂಪು ವಿಶ್ವವಿದ್ಯಾನಿಲಯ) ಈ ಕಾರ್ಯಕ್ರಮದ ಹಿಂದೆ 8 ತಿಂಗಳ ಪರಿಶ್ರಮವಿದೆ. ಹೊಸ ತಲೆಮಾರಿನ ತಲ್ಲಣಗಳಿಗೆ 'ಕನಕ' ವಿಚಾರಧಾರೆಗಳ ಮೂಲಕ ಸಮಾಧಾನ ದೊರಕಿಸಿಕೊಡುವ ಉದ್ದೇಶ ಈ ಸಂಕಿರಣದ್ದಾಗಿದೆ ಎಂದು ಹೇಳಿ ಕನಕದಾಸರ ತಲ್ಲಣಿಸದಿರು ಕಂಡ್ಯ ತಾಳು ಮನವೆ – ಕೀರ್ತನೆಯನ್ನು ಇಡೀಯಾಗಿ ವಾಚಿಸಿದರು. ಆ ಮೂಲಕ ಸಂಶಯ ಮತ್ತು ಸಮಾಧಾನದ ಪ್ರಸ್ತುತ ಸಂಕೀರ್ಣತೆಗೆ ಉತ್ತರ ದೊರೆಯುತ್ತದೆ ಎಂದರು.

ಅಧ್ಯಕ್ಷೀಯ ಭಾಷಣ ಮಾಡಿದ ಡಾ. ಎಂ.ಬಿ.ಮಹಾವರ್ಕರ್ Thomas Hobs£À 'Knowledge is truth' ಎನ್ನುವ ಸೂಕ್ತಿಯನ್ನು ಉದ್ಧರಿಸಿ, 'ಪ್ರತಿ ರಚನೆಕಾರ, ಬರಹಗಾರನ ಮೂಲ ಉದ್ದೇಶ ಆತ್ಮ ಸಂಶೋಧನೆಯ ದಾರಿ ಮತ್ತು ಜ್ಞಾನ ಸಂಪಾದನೆಯ ಮಾರ್ಗವಾಗಿರುತ್ತದೆ. ಆ ಮೂಲಕ ಜಗದ ಸತ್ಯವನ್ನು ಕಾಣುವ ಪ್ರಯತ್ನ ಆತ ಮಾಡುತ್ತಾನೆ' ಎಂದರು. ಕನಕನದು ರಚನೆಗಳ ಮೂಲಕ ಸತ್ಯವನ್ನರಸುವ, ಜ್ಞಾನವನ್ನು ಬಿತ್ತುವ ಪ್ರಯತ್ನ ಎಂದು ಹೇಳಿ ಗೋಷ್ಠಿಗಳಿಗೆ ಅವಕಾಶ ಮಾಡಿಕೊಟ್ಟರು.

ಸರಿಯೇ?

## VIII. ಸಾಂಸ್ಕೃತಿಕ ರಾಜಕಾರಣವನ್ನು ನಿರಚನಗೊಳಿಸುವ ಗುರಿ ಮತ್ತು ದಾರಿಗಳು

ಪ್ರ:- ಭಕ್ತಿ 'ಖಾಸಗಿಯೋ' ಅಥವಾ 'ಸಾರ್ವಜನಿಕವೋ'?

ಉ:- ಎರಡೂ ಮುಖಗಳು ಭಕ್ತಿಗಿವೆ. ದೇವಾಲಯಗಳಿಂದ ಭಕ್ತರನ್ನು ಹೊರತಂದು ಅಂಗೈಯಲ್ಲಿಯೇ ಇಷ್ಟಲಿಂಗ ಸೃಷ್ಟಿಸಿದ ಬಸವಣ್ಣನ ಭಕ್ತಿ ಸಾರ್ವಜನಿಕ ಸತ್ಯವಾದರೆ ಎಲ್ಲರ ಬಂಧವನ್ನು ಕಳಚಿಕೊಂಡು ತನ್ನ ಮತ್ತು ಭಗವಂತನ ಅಪೂರ್ವ ಮಿಲನಕ್ಕೆ ಹಾತೊರೆಯುವ ದಾಸರ ಭಕ್ತಿ ಖಾಸಗಿ ಸತ್ಯ.

## VI. ಆತ್ಮ ಸಾಂಗತ್ಯವೆಂಬ ಅನುಭಾವದಿಂದ ಸಮುದಾಯದತ್ತ

ಪ್ರ:- ಎಲ್ಲವನ್ನು ತ್ಯಜಿಸಿ, ಭಕ್ತಿಯನ್ನಾಚರಿಸಿ ಮುಕ್ತಿ ಪಡೆಯಬೇಕು ಎಂಬ ಅಭಿಪ್ರಾಯಗಳ ನಡುವೆ ಪುರುಷಾರ್ಥ ಮೂಲಕ ಮುಕ್ತಿ ಸಾಧಿಸಿದ ಋಷಿಮುನಿಗಳ ಕುರಿತು ಏನು ಹೇಳುತ್ತೀರಿ?

ಉ:- 'ನೆಚ್ಚದಿರು ಸಂಸಾರವ' ಎಂದು ಹೇಳುವಲ್ಲಿ ಸಾಂಸಾರಿಕತೆಯತೆಯನ್ನು ಸಂಪೂರ್ಣವಾಗಿ ತ್ಯಜಿಸುವುದೆಂದಲ್ಲ, ಅದು ಸಂಪೂರ್ಣ ನಿರಾಕರಣೆಯಲ್ಲ. ಅದರಿಂದ ದೊರೆಯುವ ಅಧಿಕಾರವನ್ನು ತ್ಯಜಿಸಬೇಕೆ ವಿನಃ ಪುರುಷಾರ್ಥಗಳನ್ನಲ್ಲ. ಎಲ್ಲವನ್ನು ಕರ್ತವ್ಯದಂತೆ ನಿಭಾಯಿಸಬೇಕೆ ಹೊರತು ಅದರಿಂದ ಹುಟ್ಟುವ ಅಧಿಕಾರವನ್ನು ಚಲಾಯಿಸಬಾರದು.

## ಎರಡನೇ ದಿನದ ಗೋಷ್ಠಿ –

## V. ಭಕ್ತಿಯೆಂಬ ಲೋಕದೃಷ್ಟಿಯಾಗಿ ಕನಕರ ಚಿಂತನೆಗಳು – ಸಾಮಾಜಿಕ ರಾಜಕೀಯ ಯಜಮಾನಿಕೆ ನಿರಸನ ಸಾಧನವಾಗಿ ಭಕ್ತಿ

ಪ್ರ:- ಬೃಹತ್ ಮೂರ್ತಿಗಳ ನಿರ್ಮಾಣದ ಮೂಲಕ ಭಕ್ತಿಯು ನಿವೇದನೆಯಾಗುತ್ತದೆಯೇ? ಇದು ಇನ್ನೊಂದು ಬಗೆಯ ಮೌಢ್ಯವಲ್ಲವೇ?

ಉ:- ವೈಚಾರಿಕ ಮನೋಭಾವನೆಯನ್ನು ತನ್ನ ಕೀರ್ತನೆ, ಕೃತಿಗಳ ಮೂಲಕ ಬೆಳೆಸಲೆತ್ನಿಸಿದ ಕನಕನನ್ನೇ; ದೇವರಿಂದ, ಮೌಢ್ಯದಿಂದ ಬಿಡಿಸಿಕೊಳ್ಳಲು ಹೇಳಿದ ಕನಕನನ್ನೇ ದೇವರನ್ನಾಗಿಸಲಾಗಿದೆ, ಇದು ದುರಂತ. ಭಕ್ತಿ ನಿವೇದನೆಗೆ ಆಕಾರ-ನಿರಾಕಾರಗಳ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಭಯದ ಮೂಲಕ ಹುಟ್ಟಿದ ಭಕ್ತಿ ಮೂರ್ತಿಗಳಲ್ಲಿ ಭಗವಂತನನ್ನು ಅರಸಲು ಹೋಗಿ ಭ್ರಮನಿರಸನಗೊಳ್ಳುತ್ತದೆ. ಖಂಡಿತವಾಗಿಯೂ ಇದು ಒಂದು ಬಗೆಯ ಮೌಢ್ಯವೇ ಸರಿ.

ಪ್ರ:- ಭಕ್ತಿಯನ್ನುವುದು ಯಜಮಾನಿಕೆಯ ಲಕ್ಷಣವೇ?

ಉ:- ಭಕ್ತಿಯೆನ್ನುವುದು ಯಜಮಾನಿಕೆ ಅಲ್ಲ ಶರಣಾಗತಿ. ಸೂಫಿಗಳು ಭಕ್ತಿಯನ್ನು ಪ್ರೀತಿಯ ಮೂಲಕ ತೋರಿಸಿದರು, ಶರಣರು ಭಕ್ತಿಯನ್ನು ಕಾಯಕದ

ಮೂಲಕ ತೋರಿಸಿದರು. ಅಂತೆಯೇ ದಾಸರ ಭಕ್ತಿ ಆತ್ಮಶೋಧನೆಯ ಮಾರ್ಗವಾಗಿತ್ತು.

## IV. ರಾಮಧಾನ್ಯ ಮಾರುಕಟ್ಟೆ ಮತ್ತು ಆಹಾರ ರಾಜಕಾರಣದ ಹೊಸ ಸವಾಲು [ರಾಮಧಾನ್ಯ ಚರಿತ್ರೆ: ಸಂಸ್ಕೃತಿಯ ಪುನರ್ ರಚನೆ]

ಪ್ರ:- ಆಹಾರವನ್ನು ಆಚಾರದ ಭಾಗವಾಗಿಸುವ ಪ್ರಕ್ರಿಯೆ ನಡೆಯುತ್ತಿದೆಯೆ?

ಉ:- ಹೌದು, ಮೂಲಭೂತ ಅವಶ್ಯಕತೆಯಾದ ಆಹಾರವೂ ಆಚಾರದ ಭಾಗವಾಗಿರುವುದು ದುರಂತ. 'ರಾಮಧಾನ್ಯ ಚರಿತೆ'ಯಲ್ಲಿ 'ಅಕ್ಕಿ' ಮೇಲ್ವರ್ಗದ ಪ್ರತಿನಿಧಿಯಾದರೆ 'ರಾಗಿ' ತಳಸಮುದಾಯದ ಪ್ರತಿನಿಧಿಯಾಗಿದೆ. ರಾಮ ನೀಡುವ ತೀರ್ಪು 'ಅಸಮಾನತೆಗಳು ಸಹಜ, ಜಗಳ ಪರಿಹಾರವಲ್ಲ, ಸಹಬಾಳ್ವೆಯೇ ಬಾಳುವ ರೀತಿ' ಎನ್ನುವ ತತ್ವದ ಪ್ರತಿಪಾದನೆಯಾಗಿದೆ.

ಈಗಿನ ಸಂದರ್ಭಕ್ಕೆ ಬಂದರೆ ಜಾಹಿರಾತುಗಳ ಮೂಲಕ ಬಿಂಬಿಸಲ್ಪಡುವ ಆಹಾರ ಪದಾರ್ಥಗಳು ಉದಾಹರಣೆಗೆ ದುಬಾರಿ ಬೆಲೆಯ ಬಿಸ್ಕೆಟ್, ಚಾಕ್‌ಲೇಟ್‌ಗಳು ಉನ್ನತ ವರ್ಗದವರಿಗೆ ಮಾತ್ರ ಎಟಕುವಂತಿದ್ದರೂ ಸಾಮಾನ್ಯರು ಆ ಆಕರ್ಷಣೆಯಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ಯಾವುದೂ ಮೇಲ್ವರ್ಗದ ಆಹಾರದ ಆಚಾರವಾಗಿದೆಯೇ ಅದನ್ನೇ ಇನ್ನಿತರ ಸಮುದಾಯಗಳು ಆಚರಿಸುವುದರ ಮೂಲಕ ತಾವೂ ಉನ್ನತಿಯಾಗಿದ್ದೇವೆ ಎಂಬ ಭ್ರಮೆಯನ್ನು ಅಲ್ಲಿ ಸೃಷ್ಟಿಸಲಾಗುತ್ತದೆ.

ಪ್ರ:- ರಾಮಧಾನ್ಯ ಚರಿತೆಗೂ ಆಹಾರ ರಾಜಕಾರಣಕ್ಕೂ ಇರುವ ಸಂಬಂಧವೇನು?

ಉ:- ಕನಕರ 'ರಾಮಧಾನ್ಯ ಚರಿತ' ರಾಗಿ ಮತ್ತು ಭತ್ತದ ರೂಪಕಗಳ ಮೂಲಕ ಶೈವ ಮತ್ತು ವೈಷ್ಣವ ಪಂಥಗಳ ಸಮನ್ವಯ, ರಾಜಕೀಯ ಸಾಮರಸ್ಯವಾಗಿ ಕಾಣುತ್ತಿದೆ. ಕೃತಿಯ ಮೂಲಕ ಆಹಾರ ರಾಜಕಾರಣವನ್ನು ಚಿತ್ರಿಸುತ್ತಾ ಸಾಗುವ ಕನಕ, ಆಹಾರದ ಮೂಲಕ ಸಮಾಜವನ್ನು ಒಡೆದ ರೀತಿಯನ್ನು ತೋರಿಸುತ್ತಾನೆ. ರಾಗಿ–ಭತ್ತದ ಸಮನ್ವಯತೆ ಸಮಾಜದ ಸಮನ್ವಯತೆಯ ದಾರಿಯೂ ಹೌದು ಎನ್ನುವುದು ಕನಕನ ಅಭಿಮತ.

## III. ಕನಕ ಕೃತಿಗಳ ಸಾಂಸ್ಕೃತಿಕ ಅನುಸಂಧಾನ:– ನಳಚರಿತ್ರೆ: ಚರಿತ್ರೆಯ ಸ್ತ್ರೀ ವ್ಯಾಖ್ಯಾನ

ಪ್ರ:- 'ನಳ ಚರಿತ್ರೆ' ಎನ್ನುವ ಶೀರ್ಷಿಕೆಯ ಬದಲಾಗಿ 'ದಮಯಂತಿ ಚರಿತ್ರೆ' ಎನ್ನುವ ಶೀರ್ಷಿಕೆ ಆ ಕೃತಿಗೆ ಸೂಕ್ತವಾಗುತಿತ್ತೆ?

ಉ:- ನಿಜ, ಕೃತಿಯನ್ನು ಇಡಿಯಾಗಿ ಓದಿ ಮುಗಿಸಿದಾಗ ಅನ್ನಿಸುವ ಭಾವವಿದು. ವಾಸ್ತವವಾಗಿ ಅದು ನಳನ ಕಥೆಯಾಗಿರದೇ ದಮಯಂತಿಯ ಕಥೆಯಾಗಿದೆ.

ಕಥೆಯ ತುಂಬೆಲ್ಲಾ ನಳನ ಅಸಹಾಯಕತೆ, ಹಿಂಜರಿಕೆಗೆ ತೀರ ಭಿನ್ನವೆನ್ನಿಸುವ ಧಾರ್ಷ್ಟ್ಯ ವ್ಯಕ್ತಿತ್ವವನ್ನು ನಾವು ದಮಯಂತಿಯಲ್ಲಿ ಕಾಣುತ್ತೇವೆ. ಪರಿಸ್ಥಿತಿಗಳನ್ನೆದುರಿಸಲಾಗದೇ ಪಲಾಯನ ಮಾಡಿದ ನಳನಿಗಿಂತ ದಮಯಂತಿ ನಮಗೆ ಮುಖ್ಯವಾಗುತ್ತಾಳೆ. ಆಕೆಯ ವಿವೇಕ, ಗಟ್ಟಿತನಗಳು ಆದರ್ಶವೆನಿಸುತ್ತದೆ.

ಪ್ರ:– ಕನಕರು ರೂಢಿಗತ ಚೌಕಟ್ಟಿನಲ್ಲಿ ದಮಯಂತಿಯನ್ನು ಬಂಧಿಸುವ ಪ್ರಯತ್ನ ಮಾಡಿದ್ದಾರೆಯೇ?

ಉ:– ಕೃತಿಯಲ್ಲಿ ಕನಕರ ಅಂತರ್ ಪ್ರವೇಶ ಅಷ್ಟಾಗಿ ಕಾಣುವುದಿಲ್ಲ. ಅವರು ಆ ಕಾಲಮಾನದ ವಾಸ್ತವವನ್ನು ನಮ್ಮೆದುರಿಗೆ ತರುವ ಪ್ರಯತ್ನ ಮಾಡುತ್ತಾರಷ್ಟೇ. ಸ್ತ್ರೀ–ಪುರುಷರ ನಡುವಿನ ಆದರ್ಶಯುತ ಜೀವನ ಆ ಕಾಲದ ಮೌಲ್ಯವಾಗಿತ್ತು. ಅದನ್ನೇ ಅವರು ಚಿತ್ರಿಸಿದ್ದಾರೆ. ಈ ಕಾಲಕ್ಕೆ ಅದನ್ನು ಮರು ಸ್ಥಾಪಿಸಲೆತ್ನಿಸಿದಾಗ ಪಾತಿವ್ರತ್ಯದ ವೈಭವೀಕರಣ ಎನಿಸುತ್ತದೆ.

ಪ್ರ:– ಚೌಕಟ್ಟಿನೊಳಗಿರುವ ಮತ್ತು ಆ ಮೂಲಕ ಒಳ್ಳೆಯವಳೆನ್ನಿಸಿಕೊಳ್ಳುವ ಅನಿವಾರ್ಯತೆ ಹೆಣ್ಣಿಗೇ ಏಕೆ?

ಉ:– ಇದು ಅಸಂಬದ್ಧವಾದರೂ ಸತ್ಯ. ರೂಢಿಗತ ಚೌಕಟ್ಟಿನಲ್ಲಿ ಹೆಣ್ಣನ್ನು ಬಂಧಿಸಿಡುವ ಪ್ರಯತ್ನ ಎಲ್ಲ ಕಾಲಕ್ಕೂ ನಡೆದಿದೆ. ಮೊದಲು ಆದರ್ಶವೊಂದನ್ನು ಸೃಷ್ಟಿಸಿ ಅದರಂತೆ ನಡೆದುಕೊಂಡಾಗಲೇ ಸಮಾಜದ ಮಾನ್ಯತೆ ಸಿಗುವಂತೆ ಮಾಡಿ ಆ ಮೂಲಕ ಆಕೆ ಚೌಕಟ್ಟಿನ ಹೊರಗೆ ಅಡಿಯಿರಿಸಿದಂತೆ ತಡೆಯುವ ಮಾರ್ಗ ಅದಾಗಿದೆ.